ಡಿ . ವಿ . ಗುಂಡಪ್ಪ

32



ಜ್ಞಾಪಕಚಿತ್ರಶಾಲೆ – ೮

ಸಂಕೀರ್ಣ ಸ್ಮೃತಿ ಸಂಪುಟ

ಮುಖಪುಟ

ಜ್ಞಾಪಕಚಿತ್ರಶಾಲೆ

ಡಾ. ಡಿ.ವಿ. ಗುಂಡಪ್ಪ

Published by the **Gokhale Institute of Public Affairs** on the occasion of its Platinum Jubilee with the financial assistance from **The Director, Kannada and Culture Department, Government of Karnataka** and **The Mythic Society, Bengaluru.**

e-Book
032v1.0.0
Date: October 10, 2018
ISBN: 9788193777978
Created by: Sriranga Digital Software Technologies Private Limited
srirangadigital.com

ಅರ್ಪಣೆ

ನನ್ನನ್ನು ಮುದ್ದಿಸಿ ಬೆಳಸಿ
ಮಾತು-ಕಥೆ ತಿದ್ದಿದ ನನ್ನ
ತೀ ॥ ಸೋದರಮಾವ
ಶ್ರೀ ಗುಂಜೂರು ತಿಮ್ಮಪ್ಪನವರ ಪವಿತ್ರ ಸ್ಮೃತಿಗೆ

ಪ್ರಣವ ವಿಬೋಧಕ ವದನಂ
ಪ್ರಣತಶ್ರೇಯೋನಿಕೇತನಂ ಪ್ರಾಜ್ಞಧನಂ ।
ಗುಣನಾಥಂ ಕವಿಗೀತಂ
ಗುಣಸಂಪದವೀಗೆ ಕೃತಿಗೆ ಕರುಣೋಪೇತಂ ॥

ಅರಿಕೆ

ಇದು ‘ಜ್ಞಾಪಕ ಚಿತ್ರಶಾಲೆ’ ಯ ಎಂಟನೆಯ ಸಂಪುಟ. ಇದಕ್ಕೆ ವಿಷಯವಾಗಿರುವವರು ಐಶ್ವರ್ಯದಲ್ಲಾಗಲಿ ಪಾಂಡಿತ್ಯದಲ್ಲಾಗಲಿ ಉನ್ನತರಾದವರಲ್ಲ. ಬಹುಶಃ ಎಲ್ಲರೂ ಸಾಮಾನ್ಯ ವರ್ಗಕ್ಕೆ ಸೇರಿದವರು; ಆದರೆ ಸಮಾಜದಲ್ಲಿ ನೆಮ್ಮದಿಯನ್ನೂ ಒಳ್ಳೆಯತನವನ್ನೂ ಹರಡುತ್ತಿದ್ದವರು.

ನಮ್ಮಲ್ಲಿ ಒಳ್ಳೆಯವರೆಂಬವರು-ಸಾಧು ಸತ್ಪುರುಷರು-ಸಾಮಾನ್ಯವಾಗಿ ಆಡಂಬರದ ಜನವಲ್ಲ. ಎಲ್ಲರಂತೆಯೇ ಇರುತ್ತಾರೆ. ನೆಲದಲ್ಲಿ ಆಳವಾಗಿ ಊಟೆಗಳೂ ಚಿಲುಮೆಗಳೂ ಹರಿಯುತ್ತಿರುತ್ತವಷ್ಟೆ. ಸಾಧು ಸಜ್ಜನರು ಈ ಅಂತರಾಳದ ನಾಳಗಳಂತೆ. ಅವು ಕಣ್ಣಿಗೆ ಕಾಣಿಸುವುದಿಲ್ಲ; ಅವುಗಳ ಹರಿವಿನಲ್ಲಿ ಒಂದು ರಭಸವಿರುವುದಿಲ್ಲ. ಎಲ್ಲವೂ ಮಂದವಾಗಿ ಶಾಂತವಾಗಿರುತ್ತದೆ. ನೀರು ತೊಟ್ಟುತೊಟ್ಟಾಗಿ, ಕೊಂಚಕೊಂಚವಾಗಿ ಸ್ರವಿಸುತ್ತದೆ. ನೆಮ್ಮದಿ, ಒಳ್ಳೆಯತನ-ಇವೂ ಹಾಗೆ.

ಒಂದು ಮನೆಯಲ್ಲಿ ಮಾಡಿದ ಅಡಿಗೆ ಸಾಲದೆಹೋದಾಗ ಪಕ್ಕದ ಮನೆಯಿಂದ ಅನ್ನವೋ ಸಾರೋ ಪಲ್ಯವೋ ಹುಳಿಯೋ ಸಹಾಯವಾಗಿ ಬರುತ್ತದೆ. ಮನೆಯವರಿಗೆ ಕಷ್ಟಕಾಯಿಲೆ ಬಂದಾಗ ಪಕ್ಕದ ಮನೆಯವರು ಬಂದು ಸೇವೆ ಮಾಡುತ್ತಾರೆ. ಇದನ್ನು ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸುವುದಿಲ್ಲ. ಇಂಥ ಪರಸ್ಪರ ಆನುಕೂಲ್ಯದ ಸಂದರ್ಭದಲ್ಲಿ ಹೆಚ್ಚುಗಟ್ಟಲೆಯೇನೂ ಇಲ್ಲದೆ ಜನ ನಡೆದುಕೊಳ್ಳುತ್ತಾರೆ. ದೇಹಸಹಾಯವು ಆಶ್ಚರ್ಯಕರವಲ್ಲ. ಅದು ಒಂದು ಸ್ವಾಭಾವಿಕ ಸಂಘಟನೆ. ಗಾಳಿಗೆ ಬೀಸುತ್ತಿರುವುದು, ನೀರಿಗೆ ಹರಿಯುತ್ತಿರುವುದು, ಬಿಸಿಯನ್ನಾರಿಸುವುದು ನೈಜವಾಗಿರುವಂತೆ ಪರಸ್ಪರ ಸಹಾಯವೂ ಮನುಷ್ಯರಿಗೆ ನೈಜವಾಗಿರುವ ಒಂದು ಸಂಗತಿಯಾಗಿ ನಡೆಯುತ್ತದೆ. ಈ ಸಾಮಾನ್ಯ ಜನವರ್ಗ ಅಂಥದು. ನೆಲದ ಕೆಳಗಡೆಯ ಊಟೆ-ಚಿಲುಮೆಗಳು ಬತ್ತಿ ಹೋದಾಗ ಕೆರೆ ಬಾವಿಗಳು ಬರಿದಾಗುತ್ತವೆ. ಜೀವನವು ಕಷ್ಟವಾಗಿ ದುಸ್ತರವಾಗುತ್ತದೆ. ನೆಲದ ಅಂತರಾಳದ ಊಟೆ-ಚಿಲುಮೆಗಳು ಹೇಗೋ ಮನುಷ್ಯಸಮಾಜದಲ್ಲೂ ಸಾಮಾನ್ಯ ಜನವರ್ಗದವರ ಒಳ್ಳೆಯತನ, ಸ್ನೇಹ, ಸೌಹಾರ್ದಗಳು ಸಮಾಜಕ್ಕೆ ಹಾಗೆ. ಹೀಗೆ ಬಾಳಿದ ಕೆಲವರನ್ನು ಕುರಿತು ನೆನಪುಗಳನ್ನು ಈ ಮುಂದಿನ ಪುಟಗಳಲ್ಲಿ ಚಿತ್ರಿಸಿದೆ.

ಮಹಾಜನರು ಸಂತೋಷಿಸಿಯಾರೆಂಬುದು ನನ್ನ ನಿರೀಕ್ಷಣೆಯೆಂದು ಬಾಯಿ ಬಿಟ್ಟುಹೇಳಬೇಕಾದದ್ದಿಲ್ಲ. ಇದುವರೆಗೆ ಅವರು ತೋರಿಸಿರುವ ಆದರ ಅಭಿಮಾನಗಳಿಗಾಗಿ ಅವರು ನನ್ನ ಮನಃಪೂರ್ವಕವಾದ ವಂದನೆಗಳನ್ನು ಸ್ವೀಕರಿಸಬೇಕೆಂದು ಬೇಡುತ್ತೇನೆ.

ಈ ಪ್ರಬಂಧಗಳ ಲೇಖನಕಾರ್ಯದಲ್ಲಿಯೂ ಸಂಕಲನದಲ್ಲಿಯೂ, ಅದರ ಧಾರಾವಾಹಿ ಮತ್ತು ಗ್ರಂಥರೂಪದ ಪ್ರಕಟನೆಯಲ್ಲಿಯೂ ಚಿ ॥ ಎಸ್. ಆರ್. ರಾಮಸ್ವಾಮಿ ಎಂದಿನಂತೆ ಸಹಕರಿಸಿದ್ದಾನೆ. ಲೇಖನಗಳನ್ನು ಮೊದಲು ಪ್ರಕಟಪಡಿಸಿದ 'ಕನ್ನಡಪ್ರಭ', 'ಸುಧಾ' ಪತ್ರಿಕೆಗಳ ಸಂಪಾದಕರಿಗೆ ನಾನು ಕೃತಜ್ಞನಾಗಿದ್ದೇನೆ. ನನ್ನ ಮಿತ್ರರು ಕಾವ್ಯಾಲಯದ ಶ್ರೀ ಕೆ. ಚಿದಂಬರಂ ಅವರಿಗೂ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಜಿ. ಎಚ್. ರಾಮರಾವ್ ಅವರಿಗೂ ನಾನು ಋಣಿ. ಭಗವಂತನು ಈ ಎಲ್ಲ ಸ್ನೇಹಿತರಿಗೂ ಅನುಗ್ರಹ ತೋರಲಿ.

ಸರ್ವಂ ಶಿವಂ

ಬೆಂಗಳೂರು-೪
19-9-1975

ಡಿ. ವಿ. ಜಿ.

ಬಿನ್ನಹ

ಈ ಪುಸ್ತಕದ ಮೊದಲ ಆರು ಅಧ್ಯಾಯಗಳನ್ನು ನನ್ನ ಪೂಜ್ಯ ತಂದೆಯವರ ಆತ್ಮಕಥೆ ಎಂದಿಟ್ಟುಕೊಳ್ಳಬಹುದು. ಅವರು ಬಾಲ್ಯವನ್ನು ಕಳೆದ ಹಿನ್ನೆಲೆ, ವಾತಾವರಣಗಳನ್ನು ಕುರಿತ ಪ್ರಸಂಗಗಳು ಇವು. ವಯಸ್ಸಿಗೆ ಬಂದ ಮೇಲೆ ಹುಟ್ಟೂರಿನ ಸುತ್ತುಮುತ್ತಲಿನ ಪರಿಚಯ, ಆ ಎಲ್ಲೆಯಲ್ಲಿದ್ದ ವ್ಯಕ್ತಿಗಳು, ಮನೆಯ ಸ್ನೇಹಿತರು ಮೊದಲಾದವರು ನನ್ನ ತಂದೆಯ ಮೇಲೆ ಒಡ್ಡಿದ ಪರಿಣಾಮ ಮೊದಲಾದವುಗಳನ್ನು ಕುರಿತ ಸಂಗತಿಗಳು ಮುಂದಿನ ಅಧ್ಯಾಯಗಳಲ್ಲಿ ಮೂಡಿ ಬಂದಿವೆ.

ನನಗೆ ತಿಳಿದಿರುವಂತೆ ಈ ಕಥನವು ಅವಿಚ್ಛಿನ್ನವಾಗಿ ಒಂದೇ ಕಾಲಪರ್ವದಲ್ಲಿ ಬರೆದದ್ದಲ್ಲ. ಏಳೆಂಟು ವರ್ಷಗಳ ಅವಧಿಯಲ್ಲಿ ತಂದೆಯವರಿಗೆ ಬಿಡುವು ದೊರೆತಾಗ, ಬಾಯಲ್ಲಿ ಹೇಳಿದ್ದನ್ನು ಬರೆದುಕೊಳ್ಳುವವರು ಸಿಕ್ಕಿದಾಗ, ಹರುಕಲು ಮುರುಕಲಾಗಿ ತಯಾರಾದದ್ದು. ಹೀಗಾಗಿ ಪುನರುಕ್ತಿಗಳು ಅಲ್ಲಲ್ಲಿ ಎದ್ದು ಕಾಣುತ್ತವೆ. ವಾಚಕರು ಈ ಹಿನ್ನೆಲೆಯನ್ನು ಜ್ಞಾಪಕದಲ್ಲಿಟ್ಟುಕೊಂಡು ಮನ್ನಿಸುವರೆಂದು ನಂಬಿದ್ದೇನೆ.

೧೭೩ನೆ ಪುಟದಲ್ಲಿ ಮಂಜಾ ಪುತ್ತೂರಿನ ವಿಷಯ ಬಂದಿದೆ. ಒಂದು ಗ್ರಾಮದ ಹೆಸರಾದ ಮಾಂಜಿ ಪುದೂರು - 'ಮಂಜ ಪುತ್ತೂರು' ಎಂದು ಅಪಭ್ರಂಶವಾಗಿರುವಂತೆ ತೋರುತ್ತದೆ. ಮಾಂಜಿಪುದೂರು (ನಮ್ಮ ಪೂರ್ವಿಕರ ಸ್ಥಳ) ಇರುವುದು ತಂಜಾವೂರು ಜಿಲ್ಲೆಯಲ್ಲಿ, ತಂಜಾವೂರು - ನಾಗಪಟ್ಟಣ ಮಾರ್ಗದಲ್ಲಿರುವ ಸಣ್ಣ ಗ್ರಾಮ. ಈ ಗ್ರಾಮಕ್ಕೆ ಸೇರಿದ ಬೃಹಚ್ಚರಣ ಪಂಗಡವೇ ಇಂದಿನ ಕರ್ನಾಟಕದ 'ಮಂಜ ಪುತ್ತೂರು' ಶಾಖೆಯವರು. 'ಪುದೂರು' ಎಂದರೆ ಹೊಸದಾಗಿ ನಿರ್ಮಿಸಲಾದ ಊರು. ಹಿಂದಿನ ಕಾಲದ ತಮಿಳು ನಾಡಿನಲ್ಲಿ ಚೋಳ ಪಾಂಡ್ಯ ಅರಸರು ಸಾವಿರಾರು 'ಚತುರ್ವೇದಿ ಮಂಗಲ' ಗಳನ್ನು ಕಟ್ಟಿ ಬ್ರಾಹ್ಮಣರಿಗೆ ದಾನ ಮಾಡಿದರು. ಜನದ ಬಾಯಲ್ಲಿ ಇಂಥ ಗ್ರಾಮ 'ಪುದೂರು' ಎಂದು ನುಡಿಯಿತು. ಮಾಂಜಿ ಪುದೂರು ಹೀಗೆ ನಮ್ಮ ಪೂರ್ವಿಕರ ವಶಕ್ಕೆ ಬಂದಿರಬೇಕು.

ನನ್ನ ತಂದೆಯವರ ಮತ್ತು ಶ್ರೀಮಾನ್ ಕೂಡಲಿ ಚಿದಂಬರಂ ಅವರ ನಂಟು ಬರಿಯ 'ಗ್ರಂಥಕರ್ತ-ಪ್ರಕಟನಕಾರ' ಬಗೆಯದ್ದಲ್ಲ. ಅದು ಪರಸ್ಪರವಾಗಿ ಆತ್ಮೀಯವಾದದ್ದು, ಆಳವಾದದ್ದು, ವಿಶಾಲವಾದದ್ದು, ಪ್ರೀತಿ ಗೌರವಗಳಿಂದ ತುಂಬಿದ್ದು; ಅನೇಕ

ವರ್ಷಗಳಿಂದ ಮೈ ತುಂಬಿ ಪಳಗಿ ಮಾಗಿದ್ದು. ಈ ನಂಟಿನ ಕೊಡುಗೆಯೇ ಈ ಪುಸ್ತಕದ ಪ್ರಕಟನೆ. ಶ್ರೀಮಾನ್ ಚಿದಂಬರಂ ಅವರಿಗೆ ನನ್ನ ವಂದನೆಗಳು.

ಮದರಾಸು
10-11-76

ಬಿ. ಜಿ. ಎಲ್. ಸ್ವಾಮಿ

ಪ್ರಕಾಶಕರ ಮಾತು

ಸಂಕೀರ್ಣ ಸ್ಮೃತಿಸಂಪುಟ - ಇದು ಜ್ಞಾಪಕಚಿತ್ರಶಾಲೆಯ ಎಂಟನೆಯ ಮತ್ತು ಕೊನೆಯ ಸಂಪುಟ. ಸ್ವಾರಸ್ಯದಲ್ಲಾಗಲೀ ಪ್ರಯೋಜನದಲ್ಲಾಗಲೀ ಇತರ ಸಂಪುಟಗಳಿಗೆ ಇದು ಯಾವ ವಿಧದಲ್ಲೂ ಕಡಮೆಯಾದದ್ದಲ್ಲ. ಅಥವಾ ಈ ಎಲ್ಲ ಸಂಪುಟಗಳಿಗೆ ಮುಕುಟಪ್ರಾಯವಾದದ್ದು ಎನ್ನಲು ಅಡ್ಡಿ ಇಲ್ಲ.

ಈ ಸಂಪುಟ ಹೊರಬರುವುದು ತೀರ ವಿಳಂಬವಾಯಿತು. ಕಾರಣ, ಲೇಖಕರ ಪೂರ್ವಜರ ಭಾವಚಿತ್ರಗಳನ್ನು ಇದರಲ್ಲಿ ಸೇರಿಸಬೇಕೆಂಬ ಇಚ್ಛೆ. ಆದರೆ ಪ್ರಯತ್ನಗಳು ಸಫಲವಾಗಲಿಲ್ಲ. ಕಾಲಹರಣವಾಯಿತು ಅಷ್ಟೆ. ಲೇಖಕರ ಚಿಕ್ಕತಾತನವರ ಚಿತ್ರವೊಂದು ಮಾತ್ರ ದೊರೆಯಿತು. ಅದೊಂದನ್ನೇ ಇಲ್ಲಿ ಸೇರಿಸಿ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಈ ಸಂಪುಟಕ್ಕೆ ಸೇರಿರುವ ವಿಷಯಗಳೆಲ್ಲ ಲೇಖಕರು ಜೀವಂತರಾಗಿರುವಾಗಲೇ ಶೇಖರವಾದದ್ದಾದರೂ ಪುಸ್ತಕ ಪ್ರಕಟವಾಗುವುದು ಹಲವು ಕಾರಣಗಳಿಂದ ತಡವಾಯಿತು. ಈ ವಿಷಯದಲ್ಲಿ ವಾಚಕರ ಕ್ಷಮೆಯನ್ನು ಬೇಡುತ್ತೇವೆ.

ಈ ನಡುವೆ ಲೇಖಕರು ನಮ್ಮನ್ನಗಲಿ ಹೋದರು. ಇದಂತು ಈ ಪ್ರಕಾಶಕನಿಗೆ ತೀರದುರ್ಭರ ಪ್ರಸಂಗವಾಗಿದೆ. ಶ್ರೀ ಡಿ.ವಿ.ಜಿ.ಯವರು ನನ್ನಲ್ಲಿ ಇಟ್ಟಿದ್ದ ಪ್ರೀತಿ ವಿಶ್ವಾಸಗಳಿಗೂ ಸ್ನೇಹಾಭಿಮಾನಗಳಿಗೂ ಕೊನೆ ಇರಲಿಲ್ಲ. ಇದನ್ನು ನೆನೆಸಿಕೊಂಡಾಗಲೆಲ್ಲಾ ಶ್ರೀ ವಿ.ಸೀ. ಯವರ ಸ್ನೇಹ - ಕವಿತೆಯ ಸಾಲುಗಳು ಮನಸ್ಸಿಗೆ ಬರುತ್ತವೆ:

> ಸ್ವರ್ಗದೊಳಗೀ ಸ್ನೇಹ ದೊರೆವುದೇನು?
> ಈ ಪರಿಯ ಸೌಹಾರ್ದ ಕೆಳೆಯ ವೈಭವವು?
> ಇಲ್ಲದಿರೆ ಎನಗಿಲ್ಲೆ ನೂರು ಜನ್ಮಗಳಿರಲಿ
> ಎಲ್ಲ ಪರಿ ಮಮತೆಗಳ ಸತ್ಯಜೀವನವು !

ಒಂದು ಮಾತಿನಲ್ಲಿ ಹೇಳುವುದಾದರೆ ನಾನು ದಿನವೂ ತೆಗೆದುಕೊಳ್ಳುವ ಆಹಾರಕ್ಕಿಂತಲೂ ಅವರು ನನ್ನಲ್ಲಿ ತೋರುತ್ತಿದ್ದ ಸ್ನೇಹ ವಿಶ್ವಾಸಗಳು ಹೆಚ್ಚು ಪೋಷಕವಾಗಿದ್ದುವೇನೊ. ಅವರ ಮಕ್ಕಳು ಡಾ ॥ ಬಿ. ಜಿ. ಎಲ್. ಸ್ವಾಮಿಯವರು ಇದೇ ಬಗೆಯ ಸ್ನೇಹ ಸೌಹಾರ್ದಗಳನ್ನು

ನನ್ನಲ್ಲಿ ತೋರಿ ಸಹಕರಿಸುತ್ತಿರುವುದು ನನ್ನ ಒಂದು ಸುಕೃತ ವಿಶೇಷ. ಅವರ ಸಹಕಾರದಿಂದಲೂ ಸಾರ್ವಜನಿಕರ ಪ್ರೋತ್ಸಾಹದಿಂದಲೂ ಶ್ರೀ ಡಿ.ವಿ.ಜಿ. ಅವರ ಇತರ ಕೃತಿಗಳನ್ನೂ ಬೇಗ ಹೊರತರುವ ಪ್ರಯತ್ನ ನಡೆಸಲಾಗುತ್ತದೆ.

ಮೈಸೂರು
9-7-1977

ಕೂಡಲಿ ಚಿದಂಬರಂ
ಕಾವ್ಯಾಲಯ

೧

ಶೇಕ್‌ದಾರ್ ಗುಂಡಪ್ಪನವರು

ವಂಶವೃತ್ತಾಂತವನ್ನೂ, ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೂ ಬೇರೆ ದಾಖಲೆ ರುಜುವಾತುಗಳನ್ನೂ ಬರೆದಿಡುವ ವಾಡಿಕೆ ನಮ್ಮ ಜನದಲ್ಲಿಲ್ಲ. ಯುರೋಪಿಯನ್ನರಲ್ಲಿ ಈ ವಾಡಿಕೆ ಕೊಂಚಮಟ್ಟಿಗಾದರು ಉಂಟೆಂದು ತೋರುತ್ತದೆ. ಅವರಲ್ಲಿ ಎಳೆ ಮಗುವಿನ ಬ್ಯಾಪ್ಟಿಸ್ಮ್ ಎಂದರೆ ಜ್ಞಾನದೀಕ್ಷೆಯ ಸಂಸ್ಕಾರ ನಡೆದದ್ದಕ್ಕೆ ಮಗು ಹುಟ್ಟಿದ ಪ್ರದೇಶದ ಗೊತ್ತಾದ ಚರ್ಚಿನಲ್ಲಿ ದಾಖಲೆ ಇರುತ್ತದೆ. ಅದರಿಂದ ಹುಟ್ಟಿದ ದಿನ, ತಂದೆತಾಯಿ ಮೊದಲಾದ ವಿವರಗಳನ್ನು ಗುರುತು ಮಾಡಲಾಗುತ್ತದೆ. ವಯಸ್ಕರಾದವರು ಡಯರಿ ಅಥವಾ ದಿನಚರಿಯ ಪುಸ್ತಕ ಬರೆದಿಡುವ ಪದ್ಧತಿಯಿದೆ. ಇದರಿಂದ ಹೆಚ್ಚು ಸಂಗತಿಗಳು ತಿಳಿದುಬರುತ್ತವೆ. ಇದಕ್ಕಿಂತ ಹೆಚ್ಚಾಗಿ, ಒಬ್ಬರೊಬ್ಬರಿಗೆ ಬರೆದ ಕಾಗದಗಳನ್ನು ಜೋಪಾನವಾಗಿ ಜೋಡಿಸಿಡುವ ಅಭ್ಯಾಸವುಂಟು. ಹೀಗೆ ನಾಲ್ಕಾರು ಬಗೆಯ ದಾಖಲೆಗಳಿಂದ ಒಂದು ಮನೆತನದ ಚರಿತ್ರೆಯನ್ನು ಕೊಂಚಮಟ್ಟಿಗೆ ನಿಷ್ಕರ್ಷೆಮಾಡಿ ತಿಳಿಯಲಾಗುತ್ತದೆ. ಈ ಸಣ್ಣ ಸಾಮಾಗ್ರಿ ದೇಶಚರಿತ್ರೆಗೆ ಕೊಂಚಮಟ್ಟಿಗೆ ಮೂಲಸಾಮಗ್ರಿಯಾಗುತ್ತದೆ. ನಮ್ಮ ಜನ ಈ ಸಂದರ್ಭವನ್ನು ಗ್ರಹಿಸಿ ತಮ್ಮ ತಮ್ಮ ಮನೆತನಗಳಿಗೆ ಸಂಬಂಧಪಟ್ಟ ಮುಖ್ಯ ಮುಖ್ಯ ಸಂಗತಿಗಳನ್ನು ಬರಹದಲ್ಲಿ ಗುರುತಿಸಿಡುವುದು ಮುಂದಿನ ಪೀಳಿಗೆಗೆ ಉಪಯುಕ್ತವಾದೀತು.

ಆಹನ್ಯಹನಿ

ನನ್ನ ವಂಶದ ಚರಿತ್ರೆಗೆ ನಾನು ಹಿರಿಯರಿಂದ ಆಗಾಗ ಕೇಳಿದ ಸಂಗತಿಗಳ ವಿನಾ ಹೆಚ್ಚು ತಿಳಿದುಕೊಳ್ಳಲು ನನಗೆ ಯಾವ ಮೂಲಸಾಮಾಗ್ರಿಯೂ ಇಲ್ಲ. ನನಗೆ ತಿಳಿದುಬಂದಿರುವುದರಿಂದ ಇಷ್ಟು ಹೇಳಬಹುದು.

ನನ್ನ ಪೂರ್ವಿಕರಲ್ಲಿ ಮಹತ್ತ್ವಕ್ಕೇರಿದವರು ಯಾರೂ ಕಾಣುವುದಿಲ್ಲ. ಪಂಡಿತರು ಯಾರೂ ಇದ್ದಂತೆ ತೋರುವುದಿಲ್ಲ; ಅಧಿಕಾರಸ್ಥರಿರಲಿಲ್ಲ; ಮಂತ್ರಿತ್ವ ಸೇನಾಪತಿತ್ವ ಮೊದಲಾದ ಭಾರಿ ಹುದ್ದೆಗಳಿಗೆ ಹತ್ತಿದವರಿರಲಿಲ್ಲ. ಶೂರರೂ ಸಾಹಸಿಗಳೂ ಇರಲಿಲ್ಲ. ಐಶ್ವರ್ಯವಂತೂ

ಅವರಲ್ಲಿ ಯಾರಿಗೂ ತಿಳಿದದ್ದಿಲ್ಲ. ಅವರಲ್ಲಿ ದಾನಧರ್ಮಗಳನ್ನು ಮಾಡಿದವರೂ ಲೋಕೋಪಕಾರಿಗಳೂ ತಪಸ್ವಿಗಳೂ ಇದ್ದಂತೆ ನನಗೆ ತೋರುವುದಿಲ್ಲ. ನನ್ನ ಪೂರ್ವಿಕರೆಲ್ಲ ಸಾಮಾನ್ಯರು; ಸಾಮಾನ್ಯ ಜನರಲ್ಲಿ ಅತಿಸಾಮಾನ್ಯರು; ಎಲ್ಲರಂತೆ ಹೊಟ್ಟೆಹೊರೆದುಕೊಂಡು ಜೀವನ ನಡಸಿದವರು. ಅವರಿಗೆ ಅಂದಂದಿನ ಜೀವನ ನಡಸುತ್ತಿದ್ದದ್ದೇ ಮಹಾಸಾಧನೆಯಾಗಿದ್ದಿರಬೇಕು. ಉಂಡರು, ಕೈಗೆ ಬಂದದ್ದನ್ನು; ಅದರಲ್ಲಿ ಅಂಥಾದ್ದು ಬೇಕು, ಇಂಥಾದ್ದು ಬೇಕು ಎಂಬ ಮೇಲ್ಮೇಲಿನ ಕೋರಿಕೆಗಳಿಗೆ ಅವರಿಗೆ ಪುರಸತ್ತಿರಲಿಲ್ಲವೆನಿಸುತ್ತದೆ. ಅವರ ಮನಸ್ಸು ಮೇಲ್ಮಟ್ಟಕ್ಕೆ ಹತ್ತಲೇ ಇಲ್ಲ. ದೇಹಧಾರಣೆ ಮಾಡಿದರು; ಅಷ್ಟರಲ್ಲಿ ಅವರಿಗೆ ತೃಪ್ತಿ. ವಂಶ ಬೆಳಸಿದರು. ಆ ಕಾಲದಲ್ಲಿ ರೂಢಿಯಾಗಿದ್ದ ಮದುವೆ ಮುಂಜಿಗಳನ್ನೂ ಹಬ್ಬ ಹರಿದಿನಗಳನ್ನೂ ಆಯಾ ಸಂದರ್ಭದಲ್ಲಿ ಅನುಕೂಲಿಸಿದಂತೆ ನಡಸಿದರು. ಕಾಲ ಬಂದಾಗ ಕಣ್ಣು ಮುಚ್ಚಿದರು. ಇದೇ ಅವರ ಬಾಳು. ನನ್ನ ವಂಶವನ್ನು ಕುರಿತು ನಾನು ಹೆಮ್ಮೆಯಾದದ್ದನ್ನೇನೂ ಹೇಳಿಕೊಳ್ಳುವಂತಿಲ್ಲ.

ನಮ್ರತೆ

ಅವರಲ್ಲಿತ್ತೆಂದು ನಾನು ತಿಳಿದುಕೊಂಡಿರುವ ಒಂದು ಗುಣವೇನೆಂದರೆ ನಮ್ರತೆ. ಅವರು ತಮಗಿದ್ದ ಮಿತಿಗಳನ್ನು ಕಂಡುಕೊಂಡಿದ್ದರು. ಹೆಚ್ಚು ತಲೆಹರಟೆಗೆ ಹೋಗಲಿಲ್ಲ. “ಬಡವ, ನೀ ಮಡಗಿದ ಹಾಗಿರು” –ಇದನ್ನು ಅವರು ಗ್ರಹಿಸಿದ್ದರು.

ಅವರು ವಂಶಕಥೆಯನ್ನು ಬರೆದಿಡದೆ ಹೋದದ್ದಕ್ಕೆ ಈ ನೈಜವಾದ ನಮ್ರತೆ ಒಂದು ಕಾರಣವಿರಬಹುದು. “ನಾವೇನು ಮಹಾ? ನಮ್ಮದೇನು ಮಹಾ?” ಎಂಬುದು ಅವರ ಭಾವನೆ.

ಇದರ ಜೊತೆಗೆ ಇನ್ನೊಂದು ಕಾರಣ ಸೇರಿರಬಹುದು. ನನ್ನ ಪೂರ್ವಿಕರು ಜೀವನಕ್ಕಾಗಿ ಪರದಾಡಬೇಕಾಗಿದ್ದವರು. ಅಂದಂದಿನ ಊಟಕ್ಕಾಗಿ ದುಡಿಯುವುದೇ ಅವರಿಗೆ ಸಾಕಾಗಿತ್ತು. ಒಂದು ಕಡೆ ಸಾವಧಾನವಾಗಿ ಕುಳಿತು ತಮ್ಮ ಜ್ಞಾಪಕಗಳನ್ನು ಮೇಲಕ್ಕೆತ್ತಿಕೊಂಡು ಬರೆಯುವಷ್ಟು ವಿಶ್ರಾಂತಿ ಅವರಿಗೆ ಇರಲಿಲ್ಲ. ಬರವಣಿಗೆಯ ಕೆಲಸ ಸಾಮಾನ್ಯ ಮನುಷ್ಯನಿಗೆ ಭಾರಿಯ ಕೆಲಸ, ಪ್ರಯಾಸದ್ದೆನಿಸುತ್ತದೆ. ಆ ಕೆಲಸಕ್ಕೆ ಪುರಸತ್ತೂ ನೆಮ್ಮದಿಯೂ ಬೇಕು. ಊಟದ ಅಲೆದಾಟದಲ್ಲಿರುವವರಿಗೆ ಲೇಖನಕಾರ್ಯಕ್ಕೆ ಅವಶ್ಯವಾದ ವಿರಾಮ ಹೇಗೆ ದೊರೆಯಬೇಕು? ಹೀಗೆ ನನ್ನ ಪೂರ್ವಿಕರಿಗೆ ಸ್ವಂತ ಚರಿತ್ರೆಯನ್ನು ಬರೆಯುವ ಉತ್ಸಾಹವಿಲ್ಲದೆಹೋಯಿತು.

ಸರ್ವಸಾಮಾನ್ಯ

ಆಲೋಚನೆ ಮಾಡಿದರೆ, ಅವರ ಲೇಖನನ್ಯೂನತೆಯಿಂದ ಯಾರಿಗೂ ನಷ್ಟವೇನೂ ಆಗಿಲ್ಲವೆಂದು ನನ್ನ ಮನಸ್ಸಿಗೆ ತೋರುತ್ತದೆ. ದೇಶಚರಿತ್ರೆ ದೊಡ್ಡ ವಸ್ತುವೆಂಬುದೇನೋ ನಿಜ. ವಂಶಚರಿತ್ರೆಗಳು ಅದಕ್ಕೆ ಅವಶ್ಯವಾದ ಮೂಲಸಾಮಾಗ್ರಿ ಎಂಬುದೂ ನಿಜ. ಆದರೆ ಈ ವಿಷಯವನ್ನು ಮತ್ತೊಂದು ಪಕ್ಕದಿಂದ ನೋಡೋಣ. ದೇಶದಲ್ಲಿ ಹುಟ್ಟಿದ ಪ್ರತಿಯೊಬ್ಬ ಮನುಷ್ಯನೂ ತನ್ನ ತನ್ನ ಕುಲಾನುಪೂರ್ವಿಯನ್ನು ಬರೆದಿಡುತ್ತಹೋದರೆ ಅದನ್ನೆಲ್ಲ ಓದುವವರಾರು? ಸಂಗ್ರಹ ಮಾಡುವವರಾರು? ವಿಶೇಷಾಂಶವಿರುವುದು ದೇಶದ ಸಾವಿರ ಮನೆತನಗಳ ಪೈಕಿ ಒಂದರ ಚರಿತ್ರೆಯಲ್ಲಿ, ಅಥವಾ ಎರಡರ ಚರಿತ್ರೆಯಲ್ಲಿ. ಮಿಕ್ಕ ಒಂಭೈನೂರ ತೊಂಭತ್ತೆಂಟು ಮನೆಗಳ ಕಥೆ ಒಟ್ಟಿನ ಮೇಲೆ ಒಂದರಂತೆ ಇನ್ನೊಂದಿರುತ್ತದೆ. ರಾಮಣ್ಣನ ಮನೆಯಲ್ಲಿ ಹಿಟ್ಟು, ಸಾರು. ಭೀಮಣ್ಣನ ಮನೆಯಲ್ಲಿಯೂ ಅದೇ, ಶಾಮಣ್ಣನ ಮನೆಯಲ್ಲಿಯೂ ಅದೇ; ಸಾರಿಗೆ ಬದಲು ಹುಳಿಯಿರಬಹುದು, ಇನ್ನೊಬ್ಬನ ಮನೆಯಲ್ಲಿ ಗೊಜ್ಜಿರಬಹುದು. ಹೀಗೆ ಸಣ್ಣ ಬದಲಾವಣೆಗಳಿರಬಹುದೇ ಹೊರತು ಹಿಟ್ಟಿನ ಮುದ್ದೆ ಸರ್ವಸಾಮಾನ್ಯ. ಈ ಸರ್ವಸಾಮಾನ್ಯ ದರ್ಜೆಗೆ ಸೇರಿದ್ದವರು ನನ್ನ ಪೂರ್ವಿಕರು.

ಈಗ ಆ ಪೂರ್ವಿಕರ ಕಥೆಗೆ ಹೊರಡುತ್ತೇನೆ.

ನನಗೆ ತಿಳಿದಿರುವುದು ನನ್ನ ಮುತ್ತಜ್ಜಂದಿರು ಶೇಕ್‌ದಾರ್ ಗುಂಡಪ್ಪನವರ ಕಾಲದಿಂದ ಈಚಿನ ಸಂಗತಿ. ಅವರಿಗೆ ಹಿಂದಿನ ಸಂಗತಿ ನನಗೆ ತಿಳಿಯದು. ಅದನ್ನು ತಿಳಿಯಪಡಿಸಬಲ್ಲ ಹಿರಿಯರು ಈಗ ಯಾರೂ ಬದುಕಿರುವಂತಿಲ್ಲ.

ದ್ರಾವಿಡ ಜನಾಂಗ

ದ್ರಾವಿಡ ಬ್ರಾಹ್ಮಣ ವರ್ಗದಲ್ಲಿ ಅನೇಕ ಪಂಗಡಗಳುಂಟು: ವಡಮ, ವಾದ್ಯಮ, ಅಷ್ಟಸಹಸ್ರ, ಬೃಹಚ್ಚರಣ, ಇತ್ಯಾದಿ. ಬೃಹಚ್ಚರಣ ಎಂಬುದರಲ್ಲಿ ಒಳಪಂಗಡಗಳುಂಟು: ಕಂಡ್ರಮಾಣಿಕ್ಯ, ಪಳಮಾನೂರು, ಅರವದಳ, ಮೊಳನಾಡು, ಮಂಜಾಪುತ್ತೂರು, ತಿರುವಣ್ಣಾಮಲ್ಯೆ ಬೃಹಚ್ಚರಣರು ಇತ್ಯಾದಿ. ಸರ್ ಕೆ. ಶೇಷಾದ್ರಿ ಅಯ್ಯರ್‌ರವರು ಕಂಡ್ರಮಾಣಿಕ್ಯ. ಕಂಡ್ರಮಾಣಿಕ್ಯ ಎಂಬುದು ಒಂದು ಅಗ್ರಹಾರ. 'ವೇದಾಂತ ಪರಿಭಾಷಾ' ಎಂಬ ಪ್ರಸಿದ್ಧ ಗ್ರಂಥವನ್ನು ಬರೆದ ಧರ್ಮರಾಜಾಧ್ವರಿ ಎಂಬ ಮಹಾವಿದ್ವಾಂಸನು ಕಂಡ್ರಮಾಣಿಕ್ಯದವನು. ಮೈಸೂರಿನ ಚೀಫ್ ಜಸ್ಟಿಸ್ ಆಗಿದ್ದ ಚಂದ್ರಶೇಖರ ಅಯ್ಯರ್‌ರವರು ಪಳಮಾನೂರು ಬೃಹಚ್ಚರಣರು. ಸರ್. ಪಿ. ಎಸ್. ಶಿವಸ್ವಾಮಯ್ಯರು ಮೊಳನಾಡು. ನಾವು ಮಂಜಾಪುತ್ತೂರು ಬೃಹಚ್ಚರಣರು.

ಮಂಜಾಪುತ್ತೂರು

“ಮಂಜಾ” ಎಂಬ ಪದ “ಮುಂಜಾ” ಎಂಬ ಸಂಸ್ಕೃತ ಮಾತಿಗೆ ಸಂಬಂಧಪಟ್ಟದ್ದಂತೆ. ಅದರಿಂದಲೇ ಕನ್ನಡದ “ಮುಂಜಿ” ಬಂದಿರುವುದು. “ಮುಂಜಾ" ಎಂಬುದು ಒಂದು ಬಗೆಯ ದರ್ಭೆಹುಲ್ಲು. ಅದರಿಂದಲೇ “ಮೌಂಜೀ.” ಇದು ಉಪನಯನದ ಕಾಲದಲ್ಲಿ ವಟುವಿಗೆ ಸುತ್ತಿಸುವ ಉಡುದಾರ-ಮೇಖಲಾ. ಅತಿ ಪುರಾತನ ಕಾಲದಲ್ಲಿ ಈ ಮೌಂಜೀ ಸಂಸ್ಕಾರವು ಹೆಣ್ಣು ಮಕ್ಕಳಿಗೆ ಕೂಡ ವಿಹಿತವಾಗಿತ್ತಂತೆ. ಏಚಂಚ, ಮಂಜಾಪುತ್ತೂರು ವೈದಿಕ ಕರ್ಮಗಳಿಗೆ, ವಿಶೇಷವಾಗಿ ದರ್ಭೆಗೆ ಸಂಬಂಧಪಟ್ಟಿದ್ದವರ ಗ್ರಾಮ. ಯಾವ ಊರಿನಲ್ಲಿ “ಮುಂಜಾ” ಹುಲ್ಲೂ “ಪುತ್ತೂ” ಎಂದರೆ ಹುತ್ತಗಳೂ ಇದ್ದವೋ ಅದು ಮಂಜಾಪುತ್ತೂರು. ಮಂಜಾಪುತ್ತೂರು ಗ್ರಾಮ ಈಗಲೂ ಇದೆ-ತಿರುಚಿನಾಪಲ್ಲಿಯಿಂದ ಆಚೆಗೆ: ತಿರುಚಿನಾಪಲ್ಲಿಗೂ ಸಿದ್ಧರ್ಕ್ಕೋಯಿಲ್ ಎಂಬ ಊರಿಗೂ ನಡುವೆ. ಪೂರ್ವ ಕಾಲದಲ್ಲಿ ಅದು ವೈದಿಕ ಬ್ರಾಹ್ಮಣರ ಅಗ್ರಹಾರ. ಈಗ ಸುಮಾರು ನಲವತ್ತೈದು ಮನೆಗಳಿರುವ ಹಳ್ಳಿ.

ಅಲ್ಲಿದ್ದ ವೈದಿಕ ಬ್ರಾಹ್ಮಣರು ಜೀವನೋಪಾಯ ಹುಡುಕುವುದರಲ್ಲಿ ಊರು ಬಿಟ್ಟರು.

ಬಹ್ವೃಚ್ಚರಣದವರನ್ನು “ಬೃಹದಾಚರಣರು” ಎಂದು ಕರೆಯುತ್ತಿದ್ದರಂತೆ. ಬೃಹದಾಚರಣ ಎಂದರೆ ದೊಡ್ಡ ದೊಡ್ಡ ಆಚಾರಗಳುಳ್ಳವರು ಎಂದರ್ಥ: ಕರ್ಮನಿಷ್ಠರು, ಯಜ್ಞಯಾಗಾದಿ ಕರ್ಮಶ್ರದ್ಧೆಯುಳ್ಳವರು. ಅವರಲ್ಲಿ ಕೆಲವರು ವೇದದಲ್ಲಿಯೂ ಮೀಮಾಂಸಾದಿ ಶಾಸ್ತ್ರಗಳಲ್ಲಿಯೂ ಪಾರಂಗತರಾಗಿದ್ದವರು; ಗ್ರಂಥಗಳನ್ನು ಬರೆದವರು.

ಜೀವನಾರ್ಥ

ಸುಮಾರು ಆರುನೂರು ವರ್ಷಗಳ ಹಿಂದೆ, ಬಹುಶಃ ಕ್ರಿ.ಶ. ಹದಿನಾಲ್ಕನೆಯ ಶತಮಾನದ ಸುಮಾರಿನಲ್ಲಿ-ನನ್ನ ಪೂರ್ವಿಕರು ಮೈಸೂರು ಸೀಮೆಗೆ ಬಂದಿರಬೇಕು. ಅವರು ಜೀವನಾರ್ಥಿಗಳಾಗಿಯೇ ಬಂದರೆಂದು ನನ್ನ ಊಹೆ. ಅದು ವಿಜಯನಗರ ಸ್ಥಾಪನೆಯಾದ ತರುವಾಯದ ಕಾಲ. ಆ ಕಾಲದಲ್ಲಿ ಭೂಸ್ವತ್ತಿಲ್ಲದ ಬ್ರಾಹ್ಮಣಜನ ಇಲ್ಲಿಗಲ್ಲಿಗೆ ಅಲೆದಾಡುತ್ತಿದ್ದರೆಂದು ತೋರುತ್ತದೆ. ಹಾಗೆ ಒಂದು ಗೊತ್ತಾದ ನೆಲೆಮನೆಯಿಲ್ಲದೆ ಜೀವನೋಪಾಯಕ್ಕಾಗಿ ಅಲೆದಾಡಿದರು. ಅಂಥ ಅಲೆದಾಟಿಗರ ಪಂಗಡಗಳಲ್ಲಿ ಮಂಜಾಪುತ್ತೂರಿನದು ಒಂದು.

ಅವರು ಕೊಯಮತ್ತೂರು ಶಾಲ್ಯದ ಜಿಲ್ಲೆಗಳ ಮಾರ್ಗವಾಗಿ ಮೈಸೂರು ಸೀಮೆಗೆ ಬಂದವರು. ಅವರಲ್ಲಿ ಕೆಲವರು ಬೆಂಗಳೂರು ಜಿಲ್ಲೆಯ ಆನೆಕಲ್ ಸರ್ಜಾಪುರ ಮಾರ್ಗದಲ್ಲಿ ಬಂದವರು. ಕೆಲವರು ಮಾರ್ಗದಲ್ಲಿ ಅಲ್ಲಲ್ಲೇ ನೆಲಸಿದರು. ಆನೆಕಲ್ಲಿನ ಸಮೀಪದಲ್ಲಿರುವ ಗುಮ್ಮಳಾಪುರವೆಂಬ ಹಳ್ಳಿ ಅವರು ನೆಲಸಿದ ಸ್ಥಳಗಳಲ್ಲಿ ಒಂದು. ಆ ಕಾಲದಲ್ಲಿ ಗುಮ್ಮಳಾಪುರ ಕನ್ನಡ ವಿದ್ವಾಂಸರಿಗೂ ವೀರಶೈವ ಮತಸ್ಥರಿಗೂ ಒಂದು ಕೇಂದ್ರಸ್ಥಾನವಾಗಿತ್ತೆಂದು ತೋರುತ್ತದೆ. ಆ ಊರಿನ ಸುತ್ತಮುತ್ತ ಅನೇಕ ಪ್ರಾಚೀನ ಶಿವಾಲಯಗಳ ಮತ್ತು ಮಠಗಳ ಅವಶೇಷಗಳು ಉಳಿದುಕೊಂಡಿವೆ. ಈ ಸ್ಥಳದಲ್ಲಿ ಬಾಳಿದ ನನ್ನ ಜಾತಿಯ ಮನುಷ್ಯ ಒಬ್ಬಾತ ವೆಂಕಟಶರ್ಮ ಎಂಬುವನು. ಈತ ಕನ್ನಡ ಕವಿ ರುದ್ರಭಟ್ಟನ ಜಗನ್ನಾಥವಿಜಯ ಕಾವ್ಯಕ್ಕೆ ವ್ಯಾಖ್ಯಾನ ಬರೆದಿದ್ದಾನೆಂದು ಪ್ರಾಕ್ತನ ವಿಮರ್ಶ ವಿಚಕ್ಷಣ ಮಹಾಮಹೋಪಾಧ್ಯಾಯ ರಾ. ನರಸಿಂಹಾಚಾರ್ಯರು ಒಂದು ಕಡೆ ಹೇಳಿದ್ದಾರೆ.

‘ರುಮಾಲೆ ಶಾಮಭಟ್ಟ’

ಈ ವೆಂಕಟಶರ್ಮನು ನನ್ನ ವಂಶದ ಪೂರ್ವಿಕನಲ್ಲ. ನನ್ನ ಪೂರ್ವಿಕ ಶಾಮಭಟ್ಟ ಎಂಬಾತ. ಈತ ಜನ್ಮತಃ ವೈದಿಕವೃತ್ತಿಯವನು. ಆದರೆ ಜೀವಿಕೆ ನಡಸಲು ಆತ ಒಂದು ಶಾನುಭೋಗಿಕೆಯನ್ನು ಸಂಪಾದಿಸಿ ಲೌಕಿಕನಾಗಿ ಕಛೇರಿಯ ನಿಮಿತ್ತದಿಂದ ರುಮಾಲೆ ಧರಿಸಬೇಕಾಗಿ ಬಂತು. ಅಂದಿನಿಂದ ಆತನನ್ನು ಆತನ ಜನ “ರುಮಾಲೆ ಶಾಮಭಟ್ಟ” ಎಂದು ಕರೆದರು. ಕೆಲಮಂದಿ ಹಾಸ್ಯಕ್ಕಾಗಿ ಆತನನ್ನು ಹಾಗೆ ಕರೆದಿರಬಹುದು. ಬೇರೆ ಕಡೆ ನಾನು ಹೇಳಿದ್ದೇನೆ: ಪ್ರಾತಃಸ್ಮರಣೀಯರಾದ ನಮ್ಮ ಛಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳನ್ನು,

ಶಾಸ್ತ್ರಿಭಾವಮಪಾಕೃತ್ಯ
ಮೇಸ್ತ್ರಿಭಾವಮುಪಾಗತಃ ॥

ಎಂದು ಲಘುಹಾಸ್ಯ ಮಾಡಿದರೆಂದು. ಹಾಗಾಯಿತು ನನ್ನ ಪೂರ್ವಿಕ ರುಮಾಲೆ ಶಾಮಭಟ್ಟರ ಪಾಡು.

ಶಾಮಭಟ್ಟರ ತರುವಾಯ ಎಷ್ಟೋ ತಲೆಮಾರು ಕಳೆದ ಮೇಲೆ ಹುಟ್ಟಿದವರು ಗುಂಡಪ್ಪನವರು. ಅವರ ತಂದೆಯ ಹೆಸರು ವೆಂಕಟಗಿರಿಯಪ್ಪ (ಅಥವಾ ವೆಂಕಟರಮಣಯ್ಯ) ಎಂದು. ಆ ಮಹಾನುಭಾವನಿಗೆ ಅಣ್ಣತಮ್ಮಂದಿರಿದ್ದಿರಬೇಕು. ಅವರ ವಂಶ ಈಗಲೂ ಪ್ರವರ್ಧಮಾನವಾಗಿದೆ.

ಗುಂಡಪ್ಪನವರು ಯಾವ ಊರಿನಲ್ಲಿ ಹುಟ್ಟಿದರೋ ನನಗೆ ಗೊತ್ತಿಲ್ಲ. ಅವರ ಜ್ಞಾತಿ ಸಹೋದರರು ಮೂರು ನಾಲ್ಕು ಹಳ್ಳಿಗಳಲ್ಲಿದ್ದರು; ತಟ್ಟನಹಳ್ಳಿ, ಮೊಟ್ಟನಹಳ್ಳಿ, ಸೋಮತ್ತನಹಳ್ಳಿ-ಇವು ನಾನು ಕೇಳಿರುವ ಹಳ್ಳಿಗಳು. ಗುಂಡಪ್ಪನವರು ಬಹುಶಃ ಸೋಮತ್ತನಹಳ್ಳಿಯವರು.

ಕಾಮಾಕ್ಷಮ್ಮನವರು

ಗುಂಡಪ್ಪನವರ ಹೆಂಡತಿ ಸರ್ಜಾಪುರದ ಕಡೆಯವರು. ಆಕೆಯ ಹೆಸರು ಕಾಮಾಕ್ಷಮ್ಮ. ಕಾಮಾಕ್ಷಮ್ಮನ ತಂದೆ ಅನುಕೂಲಸ್ಥರಾಗಿದ್ದಿರಬೇಕು. ಆತ ತಮ್ಮ ಮಗಳ ಅರಿಶಿನ ಕುಂಕುಮದ ಖರ್ಚಿಗೆಂದು ಮುತ್ತಾನಲ್ಲೂರು ಎಂಬ ಕಡೆ ಎರಡು ಎಕರೆ ಗದ್ದೆಯನ್ನು ಬಳುವಳಿಯಾಗಿ ಕೊಟ್ಟಿದ್ದದ್ದಲ್ಲದೆ, ಆಕೆಯ ನಿತ್ಯದ ಗೌರೀಪೂಜೆಗಾಗಿ ಒಂದು ಚಿನ್ನದ ಶ್ರೀಚಕ್ರ ಮತ್ತು ಲಕ್ಷ್ಮೀವಿಗ್ರಹಗಳನ್ನೂ ಒಂದು ಜೊತೆ ದೀಪಸ್ತಂಭಗಳನ್ನೂ ಕೊಟ್ಟಿದ್ದರು; ಅವು ನಮ್ಮ ಮನೆಯಲ್ಲಿ ವಂಶಪಾರಂಪರ್ಯವಾಗಿ ನಾವು ಅವತರಿಸಿದ ಕಾಲದವರೆಗೂ ಕಾಣಬರುತ್ತಿದ್ದವು. ಆ ಶ್ರೀಚಕ್ರ ಸುಮಾರು ಎರಡಂಗುಲ ಅಗಲ, ಮೂರಂಗುಲ ಉದ್ದ ಇತ್ತು. ಅದರ ಒಂದರ್ಧದಲ್ಲಿ ಮಹಾಲಕ್ಷ್ಮಿಯ ಪ್ರತಿಮೆ, ಮಿಕ್ಕರ್ಧದಲ್ಲಿ ಶ್ರೀಚಕ್ರದ ರೇಖೆ ಇದ್ದದ್ದನ್ನು ನಾನು ನೋಡಿದ್ದೇನೆ. ಪ್ರತಿದಿನ ದೇವತಾರ್ಚನೆಯಾಗುತ್ತಿತ್ತು. ಅದರ ಅಂಗವಾಗಿ ನನ್ನ ತಾಯಿ ಶುಕ್ರವಾರ ಶುಕ್ರವಾರ ಅದಕ್ಕೆ ಕುಂಕುಮಾರ್ಚನೆ ಮಾಡುತ್ತಿದ್ದರು. ಕಾಲಕ್ರಮದಲ್ಲಿ ಅದು ಸವೆದು ಮುಟ್ಟಲು ಅಸಾಧ್ಯವೆಂದು ತೋರಿದಾಗ, ಅದಕ್ಕೆ ಇನ್ನಷ್ಟು ಚಿನ್ನ ಹಾಕಿ ಹೊಸ ವಿಗ್ರಹವನ್ನು ತಯಾರು ಮಾಡಿಸಿದರು. ಆಮೇಲೆ ಎಷ್ಟೋ ದಿವಸ ಅದು ಇತ್ತು. ನನ್ನ ತಂದೆ ತೀರಿಕೊಂಡ ಬಳಿಕ ದೇವರ ಪೂಜೆಗಾಗಿ ಒಬ್ಬ ಬ್ರಾಹ್ಮಣನನ್ನು ಗೊತ್ತುಮಾಡಿದ್ದೆವು. ನನ್ನ ತಾಯಿಯ ಗಮನವೆಲ್ಲ ಅಡಿಗೆಮನೆಯ ಮೇಲಿದ್ದದ್ದರಿಂದ ದೇವರ ಸಾಮಾನನ್ನು ಅವರು ಉಸ್ತುವಾರಿ ನೋಡಲಾಗಲಿಲ್ಲ. ವಿಗ್ರಹ ಎಲ್ಲಿ ಹೋಯಿತೋ!

ಆ ದೀಪಸ್ತಂಭಗಳು ಮೂರುನಾಲ್ಕಡಿ ಎತ್ತರ ಇದ್ದವು. ಹಿತ್ತಾಳೆಯ ಕಂಭಗಳು ಮಜಬೂತಾಗಿದ್ದವು. ಎಣ್ಣೆ ಹಾಕುವ ತಟ್ಟೆಗೆ ಎಂಟು ಮುಖವಾಗಿ ಬತ್ತಿಹಾಕಬಹುದಾಗಿತ್ತು. ನಮ್ಮ ಊರಿನಲ್ಲಿ ಯಾರ ಮನೆಯಲ್ಲಿ ಮದುವೆ ಮುಂಜಿ ನಡೆದರೂ ಹಸೆಯ ಮುಂದೆ ಇರಿಸಲು ಈ ದೀಪಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಹಾಗೆ ತೆಗೆದು ಕೊಂಡು ಹೋದವರ ಪೈಕಿ ಯಾರೋ ಒಬ್ಬರು ಹಿಂತಿರುಗಿಸಲು ಮರೆತರು.

ಇನ್ನು ಉಳಿದದ್ದು ಜಮೀನು. ಅದರ ಫಸಲನ್ನು ಕಾಲಕಾಲಕ್ಕೆ ವಸೂಲು ಮಾಡುವವರು ಯಾರೂ ಗೊತ್ತಾಗಿರಲಿಲ್ಲ. ಕಾಮಾಕ್ಷಮ್ಮನವರ ಮೂರನೆಯ ಮಗ ನನ್ನ ಚಿಕ್ಕ ತಾತ ಶೀನಪ್ಪನವರು ವರ್ಷಕ್ಕೆ ಎರಡು ಮೂರು ಸಾರಿ ಸರ್ಜಾಪುರ ಪ್ರಾಂತಕ್ಕೆ ಬಂದು ಹೋಗುತ್ತಿದ್ದರು. ಅವರಿಗೆ ಜ್ಞಾಪಕ ಬಂದಾಗ ಅವರು ಹೋಗಿ ವಸೂಲು ಮಾಡುವರು.

ನನ್ನ ತಂದೆ ಮೂರು ವರ್ಷಕ್ಕೋ ನಾಲ್ಕು ವರ್ಷಕ್ಕೋ ಒಂದು ಸಾರಿ ಆ ಪ್ರಾಂತ ತಿರುಗಾಡಿದಾಗ ಅವರು ಗುತ್ತಿಗೆ ಕೇಳುವರು. ರೈತರು "ಅವರ ಕೈಗೆ ಕೊಟ್ಟುಬಿಟ್ಟೆ" ಎಂದು ಜವಾಬು ಹೇಳುವರು. ಇವರ ಕೈಗೆ ಬಂದದ್ದೂ ಖಂಡಿತವಿಲ್ಲ, ಅವರ ಕೈಗೆ ಬಂದದ್ದೂ ಖಂಡಿತವಿಲ್ಲ. ಹೀಗೆ ಕೆಲವು ಕಾಲ ನಡೆದು ಕಡೆಗೆ ಮುತ್ತಾನಲ್ಲೂರು ಗದ್ದೆಯನ್ನು ಮಾರಿ ಬಿಟ್ಟಿದ್ದು ನನಗೆ ಮಸುಕುಮಸಕಾಗಿ ಜ್ಞಾಪಕವಿದೆ.

ಶೇಕ್‌ದಾರ್ ಗುಂಡಪ್ಪನವರು

ಈಗ ಗುಂಡಪ್ಪನವರ ಕಥೆಗೆ ಹೋಗೋಣ. ಅವರು ದೇವನಹಳ್ಳಿ ತಾಲ್ಲೂಕಿನ ಸೋಮತ್ತನಹಳ್ಳಿ ಮೊದಲಾದ ಹಳ್ಳಿಗಳಲ್ಲಿದ್ದವರು. ಅವರು ಎಷ್ಟುಮಟ್ಟಿನ ವಿದ್ಯಾವಂತರೋ ನನಗೆ ತಿಳಿಯದು. ನಾನು ಕೇಳಿರುವ ಸಂಗತಿಯಿಂದ ಅವರಲ್ಲಿ ಪಾಂಡಿತ್ಯಕ್ಕಿಂತ ಕಾರ್ಯಸಾಮರ್ಥ್ಯ ಮುಖ್ಯವಾಗಿತ್ತೆಂದು ತೋರುತ್ತದೆ. ಅವರು ಮೊದಮೊದಲು ಯಾವುದೋ ತಾಲ್ಲೂಕು ಕಛೇರಿಯ ಸಣ್ಣ ಸಣ್ಣ ಉದ್ಯೋಗಗಳಲ್ಲಿದ್ದಿರಬೇಕು. ಅವರಿಗೆ ಮಹೋದ್ಯೋಗ ಬಂದದ್ದು ಬ್ರಿಟಿಷ್ ಕಮಿಷನರುಗಳ ಕಾಲದ ಆದಿಭಾಗದಲ್ಲಿ.

ಟಿಪ್ಪುಸುಲ್ತಾನ್ ನವಾಬ ಹತನಾದದ್ದು ೧೭೯೯ರಲ್ಲಿ ಅಲ್ಲವೆ? ಅದಾದ ಮೇಲೆ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ ೧೮೩೧ರವರೆಗೆ. ಅನಂತರ ಬ್ರಿಟಿಷ್ ಕಮಿಷನ್ನಿನ ಆಡಳಿತ. ಬಹುಶಃ ಸರ್ ಮಾರ್ಕ್ ಕಬ್ಬನ್ ಅವರ ಕಾಲ. ಆಗ ಗುಂಡಪ್ಪನವರನ್ನು ಮುಳುಬಾಗಲಿಗೆ ಶೇಕ್‌ದಾರ್ ಹುದ್ದೆಗೆ ಕರಸಿಕೊಂಡರು. ಅದು ಬಹುಶಃ ಇಂದಿಗೆ ನೂರಿಪ್ಪತ್ತು ವರ್ಷ ಹಿಂದಿನ ಮಾತು: ೧೮೪೦ರ ಸುಮಾರಿನಲ್ಲಿರಬಹುದು. ಇದು ನನ್ನ ಅಂದಾಜು.

ಸೈನ್ಯಸಂಚಾರ

ಆ ಕಾಲದಲ್ಲಿ ಬ್ರಿಟಿಷರು ಬಹು ಜಾಗರೂಕರಾಗಿದ್ದದ್ದು ಸ್ವಾಭಾವಿಕ. ಈ ದೇಶ ಅವರಿಗೆ ಪರಿಚಿತವಾದದ್ದಲ್ಲ. ಜನ ಯಾವ ಹೊತ್ತಿನಲ್ಲಿ ಹೇಗೆ ನಡೆದುಕೊಂಡಾರೋ, ತಮ್ಮ ಶತ್ರುಗಳಾದ ಮರಾಠರೂ ನೈಜಾಮನ ಕಡೆಯವರೂ ಏನು ಸಂಚು ನಡಸಿಯಾರೋ, ಜನ ಎಲ್ಲಿ ದಂಗೆಯೆದ್ದು ತಮ್ಮ ಮೇಲೆ ತಿರುಗಿಬಿದ್ದಾರೋ! ಈ ವಿಧವಾದ ಭೀತಿ ಬ್ರಿಟಿಷರಿಗೆ ಸಹಜವಾಗಿತ್ತು. ಆದದ್ದರಿಂದ ದೇಶದ ಸಂರಕ್ಷಣೆಗೂ ಶಾಂತಿಸ್ಥಿತಿಗೂ ಅವರು ಹೆಚ್ಚು ಗಮನ ಕೊಡುತ್ತಿದ್ದರು. ಈ ಆಲೋಚನೆಯ ಒಂದು ರೂಪ ಸೈನ್ಯ ಸಂಚಾರ. ಬ್ರಿಟಿಷರ ದಂಡು ಬೆಂಗಳೂರಿನಲ್ಲಿ ನೆಲಸಿತ್ತು. ತಿಂಗಳಿಗೊಂದು ಸಾರಿ ಈ ದಂಡು ಮದರಾಸಿಗೆ ಹೋಗತಕ್ಕದ್ದು. ಪ್ರತಿಯಾಗಿ ಮದರಾಸಿನಿಂದ ಒಂದು ದಂಡು ಬೆಂಗಳೂರಿಗೆ ಬರತಕ್ಕದ್ದು. ದಂಡಿನ ಸಂಚಾರ ಕಾಲುನಡಿಗೆಯಿಂದ. ಹೀಗೆ ಸೈನ್ಯ ಪದೇ ಪದೇ ನೆಲತುಳಿದು ಹೋಗುತ್ತಿದ್ದದ್ದನ್ನು ಜನ ನೋಡಿದರೆ ಅವರಿಗೆ ಬ್ರಿಟಿಷ್ ಸರ್ಕಾರದ ದರ್ಪದ ಮತ್ತು ಶಕ್ತಿಯ ಕಲ್ಪನೆಯುಂಟಾಗುತ್ತಿತ್ತು, ಮತ್ತು ಸೈನಿಕರಿಗೂ ಬೇಸರವಾಗದೆ ಅಂಗಾಂಗ ವ್ಯಾಯಾಮವಾಗಿ ಒಂದು ಶಿಸ್ತು ಉಂಟಾಗುತ್ತಿತ್ತು. ಈ ತಾತ್ಪರ್ಯದಿಂದ ಬೆಂಗಳೂರು ಮದರಾಸುಗಳ ನಡುವೆ ಸೈನ್ಯ ಒಂದೆರಡು ದಿನ ತಂಗುವುದಕ್ಕಾಗಿ ಎರಡು ಮೂರು ಕಡೆ ಏರ್ಪಾಟಿತ್ತು. ಅಂಥ ಸೈನ್ಯದ ಮೊಕ್ಕಾಂ ಜಾಗಗಳಲ್ಲಿ ಮುಳಬಾಗಲೂ ಒಂದು. ಇದು ಬೆಂಗಳೂರಿನಿಂದ ಸರಿಯಾಗಿ ಅರವತ್ತನೆಯ ಮೈಲಿಯಲ್ಲಿದೆ. ಅಲ್ಲಿ ಸೈನ್ಯ ಎರಡು ಮೂರು ದಿನ ಮೊಕ್ಕಾಂ ಮಾಡುವುದು ವಾಡಿಕೆ.

ಸೈನ್ಯದ ಮೊಕ್ಕಾಂ ಎಂದರೆ ತೀನಿಯ ಏರ್ಪಾಟು ಮುಖ್ಯವಾದದ್ದು. ಮೊದಲು ಡೇರಾಗಳನ್ನು ಹಾಕುವ ಜನ (ಕಲಾಸಿಗಳು) ಬರುವರು. ಅವರು ಗುಡಾರಗಳನ್ನು ಅಣಿಮಾಡಿದ ಬಳಿಕ ಸೈನ್ಯ, ಅದರೊಡನೆ ಆಫೀಸರುಗಳು. ಮುಳುಬಾಗಲಿನ ಪೂರ್ವದಿಕ್ಕಿನಲ್ಲಿ ಊರಿನಿಂದ ಎರಡು ಮೈಲಿ ದೂರದ ಮೈದಾನದಲ್ಲಿ ಸೈನ್ಯದ ಬಿಡಾರ. ಆ ಬಿಡಾರಕ್ಕೆ ತೀನಿ ಪಾನಕಗಳನ್ನು ಒದಗಿಸುವುದು ಕಮಿಸೇರಿಯಟ್ ಇಲಾಖೆಯ ಕೆಲಸ. ಇದು ಶೇಕ್‌ದಾರ್ ಗುಂಡಪ್ಪನವರ ಪಾಲಿಗೆ ಬಂದಿತು. ಎಂದರೆ, ಕುರಿ ಕೋಳಿ ಹಾಲು ಮೊಸರು ರವೆ ಸಕ್ಕರೆ ಅಕ್ಕಿ ಬೆಲ್ಲ ಇವುಗಳನ್ನು ಸರಬರಾಜು ಮಾಡಲು ಕಂಟ್ರಾಕ್ಟುದಾರರನ್ನು ನಿಯಮಿಸಿ ಅವರಿಂದ ಸರಬರಾಜು ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ

ಗುಂಡಪ್ಪನವರಿಗೆ ಬಂದಿತು. ಈ ದೊಡ್ಡ ಜವಾಬ್ದಾರಿಯನ್ನು ಅವರು ಬಹು ಚೆನ್ನಾಗಿ ನಿರ್ವಾಹಮಾಡಿರಬೇಕೆಂದು ಆಗಿನ ಕಥೆಗಳಿಂದ ತೋರುತ್ತದೆ.

ತೀನಿ ಏರ್ಪಾಟು

ನನಗೆ ಶೇಕ್‌ದಾರ್ ಗುಂಡಪ್ಪನವರ ವಿಷಯ ತಿಳಿದು ಬಂದಿರುವುದು, ಆ ಕಾಲದ ಒಬ್ಬ ಹಿರಿಯರಿಂದ. ಆ ಹಿರಿಯರ ಹೆಸರು ಕೋಗಿಲೇರಿ ಶೀನಪ್ಪನವರೆಂದು. ಅವರ ಮನೆ ನಮ್ಮ ಮನೆಗೆ ಸಮೀಪವಾಗಿ ಅದೇ ಸಾಲಿನಲ್ಲಿತ್ತು. ಶೀನಪ್ಪನವರು ಭೂಸ್ವತ್ತುಂಟಾದವರು, ಮತ್ತು ಶಾನುಭೋಗರು. ಈ ಶೀನಪ್ಪನವರಿಗೆ ತುಂಬ ಪ್ರೀತಿ. ಹತ್ತಿರ ಕೂಡಿಸಿಕೊಂಡು ನನ್ನ ಮುತ್ತಜ್ಜನ ಗುಣಾತಿಶಯಗಳನ್ನು ವರ್ಣಿಸುವರು.

ಗುಂಡಪ್ಪನವರು ಆಕಾರದಲ್ಲಿ ಸಾಮಾನ್ಯ. ಎತ್ತರವಲ್ಲ, ಗಿಡ್ಡೂ ಅಲ್ಲ. ದೇಹ ಕೊಂಚ ಸ್ಥೂಲವಾದದ್ದು, ಬಣ್ಣ ಎಣ್ಣೆಗೆಂಪು. ಅವರ ಮುಖಭಾವ ಜನಕ್ಕೆ ತಿಳಿದಮಟ್ಟಿಗೆ ಕೊಂಚ ಭಯವುಂಟುಮಾಡತಕ್ಕದ್ದು. ಯಾವಾಗಲೂ ಹುಮ್ಮಸ್ಸು. ನಗು ಅಪರೂಪ. ಇದು ಅಧಿಕಾರದ ಹುದ್ದೆಯನ್ನು ಚಲಾಯಿಸುತ್ತಿದ್ದಾಗ. ಬೇರೆ ಸಮಯದಲ್ಲಿ ವಿಹಿತರಾಗಿದ್ದದ್ದು ಮಾತ್ರವೇ ಅಲ್ಲದೆ ಸಹಾನುಭೂತಿ ವಾತ್ಸಲ್ಯಗಳೂ ಇದ್ದವು.

ದಿನಚರಿ

ಗುಂಡಪ್ಪನವರು ಬೆಳಗ್ಗೆ ಬಿಸಿಲು ಹುಟ್ಟುವುದಕ್ಕೆ ಮುಂಚೆ ಊರ ಮಧ್ಯದ ದೊಡ್ಡಕುಂಟೆಯೆಂಬ ವಿಸ್ತಾರವಾದ ನಾಲ್ಕು ಕಡೆ ಸೋಪಾನ ಕಟ್ಟಿದ ಪುಷ್ಕರಣಿಯಲ್ಲಿ ಸ್ನಾನ ಮಾಡುವರು. ಆಹ್ನಿಕ ಮಾಡಿಕೊಳ್ಳುವರು. ಹಣೆಯ ತುಂಬ ವಿಭೂತಿ ಹಚ್ಚುತ್ತಿದ್ದರು. ಆಹ್ನಿಕ ಮುಗಿದ ಕೂಡಲೆ ಒಂದು ಜುಬ್ಬಾ ಧರಿಸಿ ಅದರ ಮೇಲೆ ಅಂಗರೇಖೆ ತೊಟ್ಟು, ಒಂದು ಅಂಗವಸ್ತ್ರವನ್ನು ಕೊರಳ ಸುತ್ತ ಹಾಕಿಕೊಂಡು ಪೇಟೆಗೆ ಬರುವರು. ನಡುಪೇಟೆಯಲ್ಲಿ ನಿಂತು ಅಲ್ಲಿಯ ವರ್ತಕರನ್ನು ಹೆಸರು ಹಿಡಿದು ಗಟ್ಟಿಯಾಗಿ ಕೂಗುವರು–ಏಕ ವಚನದಲ್ಲಿ, ತೆಲುಗಿನಲ್ಲಿ.

ಗುಂ: “ಸಂಜೀವಾ–”

(ಇದು ನಂಬೂರಿ ಸಂಜೀವಶೆಟ್ಟಿಯ ಹೆಸರು.)

ಸಂ: “ಸ್ವಾಮಿ?”

ಗುಂ: “ನಯ್ಯುಂದೇಮಿರಾ?” (ತುಪ್ಪ ಇದೆಯೇನೋ?)

ಸಂ: “ಉಂದಿ ಸ್ವಾಮಿ” (ಇದೆ ಸ್ವಾಮಿ.)

ಗುಂ: “ತೀಸಿಕೋನಿರಾ-ಎನ್ನಾಳ್ಳಿದೋ ಕಂಪು ಪಟ್ಟಿಪಯ್ಯಿಂಡೇದಿ-ನೀಕಂಪುಕು ಅಗ್ಗಿ ಪೆಟ್ಟಿರಿ!” (ತೆಗೆದುಕೊಂಡು ಬಾ-ಎಷ್ಟು ದಿವಸದ್ದೋ, ವಾಸನೆ ಹಿಡಿದುಬಿಟ್ಟಿರುತ್ತದೆ. ನಿನ್ನ ವಾಸನೆಗೆ ಬೆಂಕಿಯಿಟ್ಟರು).

ಸಂ: “ಲೇದಂಡಿ, ಕೊತ್ತದಿ” (ಇಲ್ಲ ಸ್ವಾಮಿ-ಹೊಸದು.)

(ಒಂದು ಮಡಕೆಯಲ್ಲಿ ತಂದಿರಿಸುವನು.)

ಗುಂ: “ಬೆಲ್ಲಂ ಮುದ್ದ ಎಕ್ಕಡ?” (ಬೆಲ್ಲದ ಮುದ್ದೆ ಎಲ್ಲಿ?)

ಹೊಸ ಬೆಲ್ಲದ ಮುದ್ದೆಯೊಂದು ಹಾಜರಾಗುವುದು. ಆ ಸೀಮೆಯಲ್ಲಿ ಬೆಲ್ಲದ ಅಚ್ಚುಗಳಿಲ್ಲ. ಆ ಕಾಲಕ್ಕೆ ಕಬ್ಬಿಣದ ಗಾಣ ಬಂದಿರಲಿಲ್ಲ; ಮರದ ಗಾಣಗಳೇ ಉಪಯೋಗದಲ್ಲಿದ್ದವು.

ಅದರಿಂದ ಬಂದ ಬೆಲ್ಲ ಸೊಗಸಾದದ್ದು. ಕೊಳೆಯಿಲ್ಲದೆ ಎಷ್ಟು ದಿನವಾದರೂ ಹುಳಿಹಿಡಿಯದೆ ನಾಲಗೆಗೆ ಚೊಕ್ಕಟವೆನಿಸುವಂತೆ ಇರುತ್ತಿತ್ತು. ಇಂಥ ಬೆಲ್ಲದ ಮುದ್ದೆಯೊಂದನ್ನು ಸಂಜೀವಶೆಟ್ಟಿ ತಂದಿರಿಸುವನು.

ಗುಂಡಪ್ಪನವರು ತಮ್ಮ ಕೈಮುಷ್ಠಿಯನ್ನು ಮೇಲೆಕ್ಕೆತ್ತಿ ಮುದ್ದೆಯ ಮೇಲೆ ಬಡಿಯುವರು. ಅದು ನಾಲ್ಕೈದು ಹೋಳಾಗುವುದು. ಒಂದು ಹೋಳನ್ನು ಎರಡು ಬೆಟ್ಟಿನಿಂದ ಮೇಲಕ್ಕೆತ್ತಿ ತುಪ್ಪದ ಗಡಿಗೆಯಲ್ಲದ್ದಿ, ಅನಾಮತ್ತಾಗಿ ತಮ್ಮ ಬಾಯೊಳಕ್ಕೆ ಇಳಿಬಿಡುವರು. ಅದು ಚೆನ್ನಾಗಿತ್ತೆಂದರೆ ಅವನಿಗೆ ಕಂಟ್ರಾಕ್ಟ್.

ಇನ್ನೊಂದಂಗಡಿಗೆ ಹೋಗುವರು.

ಗುಂ: “ವರೇ ರಂಗಡು! ರವ ಉಂದೇಮಿರಾ?” (ಎಲಾ ರಂಗ, ರವೆ ಇದೆಯೇನೊ?)

ರಂ: “ಉಂದಿ ಸ್ವಾಮಿ” (ಇದೆ ಸ್ವಾಮಿ.)

ರಾಕ್ಷಸ ವಿದ್ಯೆ

ಗುಂ: “ತೇ ಚೂತಾಮು” (ತೆಗೆದುಕೊಂಡು ಬಾ, ನೋಡೋಣ.)

ಆತ ಒಂದು ತವಾ ಬಾಂಡ್ಲಿಯಲ್ಲಿ ರವೆ ಒಂದು ಅಚ್ಚೇರಿನಷ್ಟು ಹಾಕಿ ಅವರ ಮುಂದೆ ಇರಿಸುವನು. ಅವರು ರವೆಯನ್ನು ಕೈಯಿಂದೆತ್ತಿ ಹೀಗೂ ಹಾಗೂ ತಿರುಗಿಸಿ ನೋಡಿ ಕೇಳುವರು:

ಗುಂ: “ನಯ್ಯುಂದೋ?” (ತುಪ್ಪ ಇದೆಯೋ?)

ರಂಗಯ್ಯಶೆಟ್ಟಿ ಒಂದು ತುಪ್ಪದ ಗಡಿಗೆಯನ್ನು ತಂದಿಡುವನು. ಗುಂಡಪ್ಪನವರು ಗಡಿಗೆಯೊಳಕ್ಕೆ ಕೈಹಾಕಿ ಒಂದು ದೊಡ್ಡ ಬೊಗಸೆ ತುಪ್ಪವನ್ನೆತ್ತಿ ರವೆಯೊಳಕ್ಕೆ ಹಾಕಿ ಕಲಸಿ ಆ ಹಸಿರವೆಯನ್ನು ಉಂಡೆಮಾಡಿ ಬಾಯೊಳಕ್ಕೆ ಬಿಟ್ಟುಕೊಳ್ಳುವರು.

***

ನಾನು “ಹಸಿ ರವೆ ತಿನ್ನುತ್ತಾರೆಯೆ ಎಲ್ಲಾದರೂ?” ಎಂದು ಕೇಳಿದ್ದಕ್ಕೆ ಶೀನಪ್ಪನವರು “ನಾನು ಸುಳ್ಳು ಹೇಳುತ್ತೇನೆಯೇ? ಹೇಗಿದ್ದ ನಿಮ್ಮ ಮುತ್ತಾತ! ಭೀಮಸೇನನ ಹೊಟ್ಟೆಯಲ್ಲಿ ಎಲ್ಲ ಅರಗಿಹೋಗುತ್ತದೆ” ಎಂದರು.

ಗುಂಡಪ್ಪನವರು ಇನ್ನೆರಡು ಹೆಜ್ಜೆ ಮುಂದೆ ಹೋಗುವರು. ಪೇಟೆಯ ಚೌಕ. ಸುತ್ತ ಮುತ್ತಲ ಹಳ್ಳಿಗಳಿಂದ ಹೈನು ಮಾಡುವ ಜನ ಮೊಸರು, ತುಪ್ಪ ಹೊತ್ತು ಅಲ್ಲಿಗೆ ಬರುವರು. ಗುಂಡಪ್ಪನವರು ಅದರಲ್ಲಿ ಒಂದು ಮಡಕೆಯನ್ನು ಕೈಗೆ ತೆಗೆದುಕೊಂಡು ಮೇಲಕ್ಕೆತ್ತಿ ಗಟಗಟ ಕುಡಿಯುವರು. ಒಪ್ಪಿತವಾದರೆ ಐವತ್ತು ಮಡಕೆ ಮೊಸರಿಗೆ ಗಿರಾಕಿ.

ಜಬರ್ದಾರಿ

ಇಂಥಾ ರಾವಣ; ಬಕಾಸುರ ಕಥೆಗಳನ್ನು ನನ್ನ ಮುತ್ತಜ್ಜನ ವಿಷಯದಲ್ಲಿ ಹೇಳುತ್ತಿದ್ದರು. ಕ್ಷಾಮದೇವತೆಯ ಪ್ರಜೆಯಾದ ನನಗೆ ಈ ಕಥೆಗಳನ್ನು ಕೇಳಿ ಹೆಮ್ಮೆಯುಂಟಾಗುತ್ತದೆ. ನನ್ನ ಮುತ್ತಜ್ಜನಾದರೂ ಚೆನ್ನಾಗಿ ಊಟ ಮಾಡಿದ್ದನಲ್ಲ.

ಮೇಲಣ ಮಾತಿನ ಜಬರ್ದಾರಿಯಿಂದ ಗುಂಡಪ್ಪನವರು ದರ್ಪದಿಂದ ಅಧಿಕಾರ ನಡಸಿದರೆಂದು ಊಹಿಸಬಹುದು.

ಅವರಿಗೆ ಒಳ್ಳೆಯವರೆಂದೂ, ಸಮರ್ಥರೆಂದೂ ಹೆಸರು ಬಂದಿತ್ತು. ಅವರೇ ಮುಳುಬಾಗಲಿನಲ್ಲಿ ನಮ್ಮ ಮನೆಯನ್ನು ಸ್ಥಾಪಿಸಿದವರು. ಆ ಮನೆಯಲ್ಲಿ ವಿಶೇಷವಾಗಿ ಅನ್ನ ಸಂತರ್ಪಣೆ ನಡೆಯುತ್ತಿತ್ತಂತೆ. ಬ್ರಾಹ್ಮಣರಿಗೆ ಮಾತ್ರವಲ್ಲದೆ ಇತರ ವರ್ಣಗಳವರಿಗೂ ಅಲ್ಲಿ ಭೋಜನವಾಗುತ್ತಿತ್ತಂತೆ. ಅದು ಅನ್ನದಾನದ ಮನೆಯೆಂದು ಹೆಸರಾಗಿತ್ತು. ನನ್ನ ಪೂರ್ವಿಕರ ಮನೆಯನ್ನು ನಾನು ಕಳೆದುಕೊಳ್ಳುವವರೆಗೂ ಆ ಮನೆ “ಶೇಕ್‌ದಾರ್ ಗುಂಡುಪ್ಪಗಾರಿಲ್ಲು” ಎಂದು ಪ್ರಸಿದ್ಧವಾಗಿತ್ತು.

***

ಶೇಕದಾರ್ ಗುಂಡಪ್ಪನವರಿಗೆ ನಾಲ್ವರು ಗಂಡುಮಕ್ಕಳೂ, ಇಬ್ಬರು ಹೆಣ್ಣುಮಕ್ಕಳೂ ಇದ್ದರು. ಗಂಡುಮಕ್ಕಳಲ್ಲಿ ನಾಲ್ಕನೆಯಾತ ವೆಂಕಟರಮಣಯ್ಯ ಬಾಲ್ಯದಲ್ಲಿಯೇ ತೀರಿಕೊಂಡನಂತೆ. ಸ್ಫುರದ್ರೂಪಿಯೆಂದೂ, ಬುದ್ಧಿವಂತನೆಂದೂ ಜನ ಹೇಳುತ್ತಿದ್ದರಂತೆ. ಈ ಅಭಿಮಾನವನ್ನಿಟ್ಟುಕೊಂಡೇ ನನ್ನ ಅಜ್ಜ, ನನ್ನ ತಂದೆಗೆ ವೆಂಕಟರಮಣಯ್ಯ ಎಂಬ ಹೆಸರು ಕೊಟ್ಟದ್ದು-ಎಂದು ನನ್ನ ಕುಟುಂಬದಲ್ಲಿ ಹೇಳುತ್ತಿದ್ದರು.

ಹೆಣ್ಣುಮಕ್ಕಳಲ್ಲಿ ಒಬ್ಬಾಕೆಯನ್ನು ಮಾಲೂರಿನ ಸಂಪಂಗಿರಾಮಯ್ಯ ಎಂಬವರಿಗೆ ಲಗ್ನ ಮಾಡಿಕೊಟ್ಟಿದ್ದರು. ಆಕೆ ಕೊಂಚ ಕಾಲದ ಮೇಲೆ ತೀರಿಕೊಂಡಿದ್ದರು. ಎರಡನೆಯಾಕೆಯ ಹೆಸರಾಗಲಿ ಬೇರೆ ಸಂಗತಿಯಾಗಲಿ ನನಗೆ ತಿಳಿಯದು.

ಉಳಿದ ಗಂಡುಮಕ್ಕಳು ಮೂವರು:

1. ಶೇಷಗಿರಯ್ಯ.
2. ರಾಮಣ್ಣ.
3. ಶೀನಣ್ಣ (ಶೀನಪ್ಪ).

ಇವರ ಪ್ರಸ್ತಾವಕ್ಕೆ ಹೋಗುವ ಮುನ್ನ ಗುಂಡಪ್ಪನವರನ್ನು ಕುರಿತು ಹೇಳಬೇಕಾದ ಮಾತು ಇನ್ನೊಂದಿದೆ. ಅವರ ಪತ್ನಿ ಕಾಮಾಕ್ಷಮ್ಮನವರು ತಮ್ಮ ಕಡೆಯ ಮಗ ವೆಂಕಟರಮಣಯ್ಯ ತೀರಿಕೊಂಡ ಒಂದೆರಡು ತಿಂಗಳೊಳಗಾಗಿ ಇಹಲೋಕವನ್ನು ಬಿಟ್ಟರು. ಆ ಪುತ್ರವಿಯೋಗ ದುಃಖದಿಂದ ಎಂದು ಅವರಿವರು ಹೇಳಿದ್ದನ್ನು ನಾನು ಕೇಳಿದ್ದೇನೆ.

ಆಕೆ ಹೋದಮೇಲೆ ಆಕೆಯ ಮೂವರು ಸೊಸೆಯರೂ ಒಂದೆರಡು ವರ್ಷ ಬಾಳಿ ಕಾಲಾಧೀನರಾದರು. ಎರಡನೆಯ ಮಗ ರಾಮಣ್ಣನವರ ಪತ್ನಿ ಲಕ್ಷ್ಮಿದೇವಮ್ಮ ಎಂಬಾಕೆ. ಆಕೆ ಬೆಟ್ಟಹಲಸೂರಿನ ಸುಬ್ಬಯ್ಯ ಎಂಬುವರ ಮಗಳು. ಆಕೆ ಒಂದು ಮಗುವಾಗಿ ಒಂದೆರಡು ವರ್ಷ ಕಳೆದ ಬಳಿಕ ತೀರಿಕೊಂಡಳು; ಆ ಮಗುವೂ ಹೋಯಿತು.

ರಾಮಣ್ಣನವರ ಕೋಪ

ಈ ದುಃಖವನ್ನು ಗುಂಡಪ್ಪನವರು ತಡೆಯಲಾರದೆ ಮಕ್ಕಳಿಗೆ ಮತ್ತೆ ಮದುವೆ ಮಾಡಿಕೊಳ್ಳಬೇಕೆಂದು ಆಗಾಗ ಒತ್ತಾಯಪಡಿಸುತ್ತಿದ್ದರು. ರಾಮಣ್ಣನವರಿಗೆ ಈ ಹಿತೋಪದೇಶ ಹಿತವೆನಿಸಲಿಲ್ಲ. ತಂದೆಯ ಮೇಲೆ ಕೋಪ.

ಹೀಗಿದ್ದಾಗ ಒಂದು ದಿನ ಗುಂಡಪ್ಪನವರು ಆಯುಷ್ಕರ್ಮ ಮಾಡಿಸಿಕೊಂಡು ಸ್ನಾನದ ಮನೆಗೆ ಬಂದು ಒಂದೆರಡು ತಂಬಿಗೆ ನೀರು ತಲೆಯ ಮೇಲೆ ಹಾಕಬೇಕೆಂದು ರಾಮಣ್ಣನವರನ್ನು ಕೇಳಿದರು. ರಾಮಣ್ಣನವರು ಮುನಿಸಿನಲ್ಲಿದ್ದರು-ತಂದೆ ಪದೇ ಪದೇ ವಿವಾಹದ ಮಾತೆತ್ತುತ್ತಾರೆಂದು. ಆ ಮುನಿಸಿನಿಂದ ಬೇಹುಷಾರಿ ಬಂತು. ತಂದೆ “ನೀರು ಹಾಕು” ಎಂದು ಹೇಳಿದಾಗ ತಂಬಿಗೆಯನ್ನು ಹಂಡೆಯೊಳಗೆ ಅದ್ದಿ ನೀರನ್ನು ಹಾಗೆಯೇ ತಗೆದು ತಂದೆಯ ಮೇಲೆ ಸುರಿದರು. ನೀರು ಹಂಡೆಯಲ್ಲಿ ತಳಮಳಗುಟ್ಟುತ್ತಿತ್ತು. ಈ ನೀರು ಬೋಳು ತಲೆಯ ಮೇಲೆ ಬಿದ್ದರೆ ಏನಾಗಬೇಕು? ಮುದುಕ ಕಿರಿಚಿಕೊಂಡ. ಇತರ ಜನ ಓಡಿಬಂದು ಉಪಚಾರ ಮಾಡಿದರು. ಎಲ್ಲ ಸರಿಯಾಯಿತು-ಒಂದು ಸಂಗತಿಯ ವಿನಾ. ರಾಮಣ್ಣನವರು ತಮ್ಮ ಮುನಿಸಿನಿಂದ ಎಂಥ ಪ್ರಮಾದವಾಯಿತೆಂದು ಕಂಡುಕೊಂಡರು. ಅದರ ಫಲಿತಾಂಶ ಇನ್ನೂ ದೊಡ್ಡ ಪ್ರಮಾದ. ಅವರು ಮನೆ ಬಿಟ್ಟು ಬೆಟ್ಟದಲ್ಲಿ ನಾಚಾರಮ್ಮನ ಗುಡಿಯ ಗವಿಯನ್ನು ಸೇರಿದರು. ಅಲ್ಲಿ ಸುತ್ತಮುತ್ತಲ ಗ್ರಾಮಗಳವರು ತಂದುಕೊಟ್ಟ ಅಕ್ಕಿ, ಬೇಳೆ, ಹಾಲು, ಮೊಸರು-ಈ ಪದಾರ್ಥಗಳಿಂದ ತಾವೇ ಅಡಿಗೆ ಮಾಡಿಕೊಂಡು ಊಟ ಮಾಡುತ್ತ ಅಲ್ಲಿಯೇ ಇದ್ದುಬಿಟ್ಟರು.

ಗುಂಡಪ್ಪನವರಿಗೆ ತುಂಬಾ ಕಾಯಿಲೆಯಾಯಿತು. ಹಣ್ಣುಹಣ್ಣು ಮುದುಕರಾದರು. ಹತ್ತಿರ ಇದ್ದ ಯಾರನ್ನೋ ಕರೆದು “ಅವಸಾನ ಬಂದಹಾಗೆ ತೋರುತ್ತದೆ. ಈಗಲಾದರೂ ಅವನು ಮನೆಗೆ ಬಂದಾನೇನೋ ಹೇಳಿ ನೋಡಿ” –ಎಂದರಂತೆ. ಸ್ನೇಹಿತರು ಆ ಮಾತಿನಂತೆ ಬೆಟ್ಟಕ್ಕೆ ಹೋಗಿ ರಾಮಣ್ಣನವರನ್ನು ಕರೆದು ಸಂಗತಿ ತಿಳಿಸಿದರೆಂತೆ. ಅವರು “ಈಗ ಆ ಪ್ರಸ್ತಾಪ ಎತ್ತುವುದಿಲ್ಲವೊ? ಎತ್ತುವುದಿಲ್ಲವೆಂದು ನೀವು ಹೇಳಿದರೆ ಬಂದೇನು. ಆ ಪ್ರಸ್ತಾಪಮಾಡಿಯಾರೆಂದು ನಿಮಗೆ ತೋರಿದರೆ ಬಂದದಾರಿ ಹಿಡಿಯಿರಿ. ಶವ ಸಾಗಿಹೋದ ಮೇಲೆ ನನಗೆ ಹೇಳಿ” –ಎಂದರಂತೆ.

ಅವರು ವಾಸ್ತವವಾಗಿ ಹೀಗೆ ಹೇಳಿದರೋ ಅಥವಾ ಅವರ ಮಾತಿನ ತಾತ್ಪರ್ಯವನ್ನು ಅವರ ಧ್ವನಿಯಿಂದ ಕೇಳಿದವರು ಹೀಗೆ ಗ್ರಹಿಸಿದರೋ ಗೊತ್ತುಮಾಡಲು ನನಗೆ ಸಾಧ್ಯವಿಲ್ಲ.

ವಾತ್ಸಲ್ಯ

ನನಗೆ ತಿಳಿದಮಟ್ಟಿಗೆ ರಾಮಣ್ಣನವರು ಮೃದುಸ್ವಭಾವದವರು. ಧರ್ಮಿಷ್ಠರು, ದಯಾವಂತರು. ಅವರು ಒಂದು ವೇಳೆ ಹಾಗೆ ಕಟುವಾಗಿ ತಂದೆಯ ವಿಷಯದಲ್ಲಿ ಮಾತು ಆಡಿದ್ದಿದ್ದರೆ ಅದೊಂದು ಅಸಾಮಾನ್ಯವಾದ ಉದ್ವೇಗದ ಮಾತೆಂದು ನನಗನ್ನಿಸುತ್ತದೆ. ಆ ಉದ್ವೇಗ ತನ್ನ ತಂದೆಯನ್ನು ಕುರಿತದ್ದಲ್ಲ; ತನಗಾಗಿದ್ದ ಪತ್ನೀವಿಯೋಗವನ್ನು ಕುರಿತದ್ದು. ಈ ಪ್ರಸ್ತಾವಕ್ಕೆ ಮುಂದೆ ಹಿಂತಿರುಗಬೇಕಾದೀತು. ಇದನ್ನು ಇಲ್ಲಿ ಹೇಳಿದ್ದರ ಕಾರಣ ಗುಂಡಪ್ಪನವರ ಸ್ವಭಾವವನ್ನು ಸೂಚಿಸುವುದಕ್ಕಾಗಿ. ಮಗನ ವಿಷಯದಲ್ಲಿ ಅವರಿಗೆ ಅತ್ಯಂತ ವಾತ್ಸಲ್ಯ.

***

ಮಕ್ಕಳಿಗೆ ತಂದೆಯಿಂದ ಭಯ, ತಾಯಲ್ಲಿ ಸಲುಗೆ. ಇದಕ್ಕೆ ನಿದರ್ಶನವಾಗಿ ಒಂದೆರಡು ಕಥೆ ನನ್ನ ಚಿಕ್ಕತಾತಂದಿರು ಹೇಳಿದ್ದನ್ನು ಇಲ್ಲಿ ಅನುವಾದ ಮಾಡಬಹುದು.

ಗುಂಡಪ್ಪನವರ ಮನೆಯ ಪಕ್ಕದಲ್ಲಿ ಮೂರು ದೊಡ್ಡ ದೊಡ್ಡ ಹುಣಿಸೆಮರಗಳು ಬೆಳೆದು ಹಬ್ಬಿಕೊಂಡಿದ್ದವು. ಹುಡುಗರಿಗೆ ಅಭ್ಯಂಜನ ಮಾಡಿಸಬೇಕೆಂದು ಕಾಮಾಕ್ಷಮ್ಮನವರು ಹಂಡೆಯಲ್ಲಿ ನೀರು ಕಾಯಿಸಿ ಎಣ್ಣೆ ಹಿಡಿದು ಮಕ್ಕಳನ್ನು ಕೂಗಿ ಕರೆಯುತ್ತಿದ್ದರು. ಇದರ ಸುಳಿವನ್ನು ತಿಳಿದಕೂಡಲೆ ನಾಲ್ವರು ಮಕ್ಕಳೂ ಒಬ್ಬೊಬ್ಬರು ಒಂದೊಂದು ಹುಣಿಸೆಮರವನ್ನು ಹಿಡಿದು ಹತ್ತುತ್ತಿದ್ದರು. ತಾಯಿ ಇವರನ್ನು ಕಾಣದೆ ಮನೆಯ ಹೊರಕ್ಕೆ ಬಂದು ಕೂಗುವರು. ಇವರು ಎಲೆಗಳ ಮರೆಯಲ್ಲಿ ಬಚ್ಚಿಟ್ಟುಕೊಂಡಿರುವರು. ಬೀದಿಯಲ್ಲಿ ಹೋಗುತ್ತಿದ್ದವರು ಆಕೆಯ ಅಂಗಲಾಚಿಕೆಯನ್ನು ನೋಡಿ ಸಹಿಸಲಾರದೆ, ಮಕ್ಕಳು ಮರದ ಮೇಲಿರುವುದನ್ನು ತೋರಿಸಿಕೊಡುವರು. ಆಕೆ ಎಷ್ಟು ಪರಿಯಾಗಿ ಬೇಡಿಕೊಂಡರೂ ಅವರು ಇಳಿದು ಬಾರರು.

ಕಡೆಗೆ ಆಕೆ ಆಳುಗಳನ್ನು ಕರೆದು ಮರ ಹತ್ತಿ ಮಕ್ಕಳನ್ನು ಕರೆತರಹೇಳುವರು. ಆ ಆಳುಗಳು ಮರಹತ್ತಿ ಬಂದರೆಂದರೆ ಆ ಅಣ್ಣತಮ್ಮಂದಿರ ಆಟ ಮತ್ತಷ್ಟು ಚೆನ್ನಾಗುವುದು. ಕೊಂಬೆಯಿಂದ ಕೊಂಬೆಗೆ, ಮರದಿಂದ ಮರಕ್ಕೆ, ಮುಂಡದಿಂದ ತುದಿಗೆ, ತುದಿಯಿಂದ ಬುಡಕ್ಕೆ ಹಾರಿ, ನೆಗೆದು, ಎಗರಿ ಆಳುಗಳನ್ನು ಆಟವಾಡಿಸಿ ಕಾಡಿಸುವರು. ಈ ಆಟ

ನೋಡಲು ಜನ ನೆರೆಯುವುದು. ಕಾಮಾಕ್ಷಮ್ಮನವರು ಸೋತು ಬೇಸತ್ತು ಅಡುಗೆಗೆ ಹೊತ್ತಾಯಿತೆಂದು ಮನೆಯೊಳಗೆ ಹೋಗುವರು. ಆಕೆ ಸ್ನಾನ ಮಾಡಿದಮೇಲೆ ಈ ಹುಡುಗರು ನೆಲದ ಮೇಲಕ್ಕಿಳಿಯುವರು. ಇದು ಪದೇ ಪದೇ ಆಗುತ್ತಿದ್ದ ವಿನೋದ.

ಕಾಮಾಕ್ಷಮ್ಮನವರು ಮಕ್ಕಳ ಮೇಲೆ ಗಂಡನಿಗೆ ದೂರು ಹೇಳರು. ಗುಂಡಪ್ಪನವರದು ಕಠಿನ ಸ್ವಭಾವ. ಮಕ್ಕಳು ತುಂಟರಾದರೆಂದು ತಿಳಿದರೆ ಅವರು ಆಳುಗಳಿಂದ ಮಕ್ಕಳನ್ನು ಒಬ್ಬೊಬ್ಬರನ್ನಾಗಿ ಹಿಡಿದು ತರಿಸಿ ಚಾಟಿಯಿಂದಲೋ ದೊಣ್ಣೆಯಿಂದಲೋ ಮುಖವೆನ್ನದೆ ಮೈಯೆನ್ನದೆ ಬಿಗಿದುಬಿಡುತ್ತಿದ್ದರು. ಈ ಅಪಾಯವನ್ನು ಆಕೆ ಬಲ್ಲರು. ಹಾಗೆ ಆಕೆ ಮೃದುವಾಗಿದ್ದ ಕಾರಣದಿಂದಲೇ ಆಕೆಯ ಮಕ್ಕಳಿಗೆ ತಾಯಿಯೆಂದರೆ ಮೈ ಮರೆಯಿಸುವಷ್ಟು ಪ್ರೀತಿಯ ಆವೇಶ ಬರುತ್ತಿತ್ತು.

ಪಂತೋಜಿ

ಇನ್ನೊಂದು ದೃಶ್ಯ: ಈ ದಿವ್ಯ ಮಕ್ಕಳಿಗೆ ವಿದ್ಯೆ ಕಲಿಸಲು ಗುಂಡಪ್ಪನವರು ಒಬ್ಬ ಮಹಾರಾಷ್ಟ್ರ ಮನುಷ್ಯನನ್ನು ಗೊತ್ತುಮಾಡಿದ್ದರು. ಆ ಕಾಲದಲ್ಲಿ ಮರಾಠಿ, ಪಾರ್ಸಿ ಭಾಷೆಗಳು ಸರಕಾರದ ಕಚೇರಿಗಳಲ್ಲಿ ಕೊಂಚಮಟ್ಟಿಗೆ ರೂಢಿಯಾಗಿದ್ದವು. ಅವರು ನಿಯಮಿಸಿದ್ದ ಉಪಾಧ್ಯಾಯನ ಹೆಸರು ಯಾವುದೋ, ಅವನನ್ನು ಎಲ್ಲರೂ ಪಂತೋಜಿ ಎಂದು ಕರೆಯುತ್ತಿದ್ದರು. ಆತ ಕನ್ನಡ, ಮರಾಠಿ, ಪಾರ್ಸಿ–ಈ ಮೂರು ಭಾಷೆಗಳನ್ನೂ, ಕೊಂಚಮಟ್ಟಿಗೆ ಲೆಕ್ಕಾಚಾರವನ್ನೂ, ಕಲಿಸಬಲ್ಲವನಾಗಿದ್ದ. ಕೊಂಚ ಮುದುಕ. ಯಾವುದೋ ಒಂದು ಸಣ್ಣ ಉದ್ಯೋಗದಲ್ಲಿದ್ದು ನಿವೃತ್ತಿಯಾಗಿದ್ದವನು. ಆತ ಸಂಪ್ರದಾಯಸ್ಥನಾದ ಬ್ರಾಹ್ಮಣ. ಆಕಾರದಲ್ಲಿ ತುಂಬಾ ತೆಳುವು ಮತ್ತು ಕೊಂಚ ಮೈ ಬಾಗುಬಂದಿತ್ತು. ತಲೆಯಲ್ಲಿ ಶಾಸ್ತ್ರಕ್ಕೋಸ್ಕರ ಗಂಟು ಹಾಕಿಕೊಳ್ಳಲಾಗುವಷ್ಟು ಮಾತ್ರ ಒಂದೆರಡು ಬೆರಳು ಗಾತ್ರದ ಶಿಖೆಯನ್ನಿರಿಸಿಕೊಂಡಿದ್ದ. ಆತ ಕೊಂಚ ಕೋಪಿಷ್ಠನೆಂದು ತೋರುತ್ತದೆ. ಈ ತುಂಟುಹುಡುಗರಂತೂ ಆತನ ಪಾಠದಲ್ಲಿ ಹೆಚ್ಚು ಸ್ವಾರಸ್ಯ ಕಂಡಿರಲಿಲ್ಲ. ತಂದೆಯ ಹೆದರಿಕೆಯಿಂದ ಆತನ ಮುಂದೆ ಕೂಡುತ್ತಿದ್ದರೇ ಹೊರತು, ತಮ್ಮ ವಿದ್ಯಾಕುತೂಹಲದಿಂದ ಅಲ್ಲ.

ಹೀಗಿರಲಾಗಿ ಒಂದು ದಿನ ಪಂತೋಜಿ ಪಾಠ ಹೇಳುವುದಕ್ಕಾಗಿ ಬಂದಿದ್ದಾನೆ. ಆ ಹೊತ್ತು ದ್ವಾದಶಿ; ಆತ ಬೇಗ ಊಟ ಮುಗಿಸಿಕೊಂಡು ಬಂದಿದ್ದ. ಮರದ ನೆರಳು ಚೆನ್ನಾಗಿರುತ್ತದೆಂದು ಹೇಳಿ ಹುಣಿಸೆಮರಗಳ ಕೆಳಗೆ ಚಾಪೆ ಹಾಸಿಸಿ ಕುಳಿತುಕೊಂಡಿದ್ದಾನೆ. ಮೂವರು ಹುಡುಗರಿಗೂ ಬರಹವನ್ನೂ, ಲೆಕ್ಕವನ್ನೂ ನಿಯಮಿಸಿದ್ದಾನೆ. ಅವರ ಕಣ್ಣು ಹಲಗೆ ಪುಸ್ತಕಗಳ ಮೇಲಿಲ್ಲದೆ ಪಂತೋಜಿಯ ಮೇಲೆಯೇ ಇದೆ. ಕೆಲವು ನಿಮಿಷಗಳಾದ ಮೇಲೆ ಪಂತೋಜಿ ತೂಕಡಿಸುತ್ತಿದ್ದ ಹಾಗೆ ಅವರಿಗೆ ತೋರಿತು. ಅವರು ಗುರುಪ್ರೇಮದಿಂದ ಪಂತೋಜಿಯವರನ್ನು ಹಾಗೆಯೇ ಮಲಗ ಹೇಳಿದರು. "ನಮ್ಮ ಲೆಕ್ಕ ಬರವಣಿಗೆ ಮುಗಿಯುವವರೆಗೂ ನೀವು ಮಲಗಿಕೊಂಡಿರಿ, ನಾವು ಇದನ್ನು ಬೇಗ ಬೇಗ ಮಾಡಿ ತೋರಿಸುತ್ತೇವೆ" ಎಂದು ಭರವಸೆ ಹೇಳಿದರು. ಪಂತೋಜಿಯ ಕಿವಿಗೆ ಅದು ಹಿತವೆನಿಸಿತು. ಮುದುಕ, ಅಲ್ಲಿಯೇ ಮಲಗಿದ. ಬೇಗ ನಿದ್ದೆ ಆವರಿಸಿತು. ಗೊರಕೆ ಹೊಡೆಯಲು ಷುರುವಾಯಿತು.

ಆಗ ಶೇಷಗಿರಿ ಮೊದಲು ಎದ್ದು ಮರದ ಮೇಲೆ ಹತ್ತಿದ. ಹತ್ತಿ ಒಂದು ಕೊಂಬೆಯನ್ನು ಹಿಡಿದ. ರಾಮಣ್ಣ ಅವನ ಹಿಂದೆ, ಶೀನಣ್ಣ ಅವನ ಹಿಂದೆ–ಹೀಗೆ ಈ ಮೂವರ ಭಾರದಿಂದ

ಕೊಂಬೆ ನೆಲಕ್ಕೆ ಬಗ್ಗಿತು. ಶೇಷಣ್ಣ ಕೊಂಬೆಯ ಕೊನೆಗೆ ಒಂದು ಹುರಿಯನ್ನು ಕಟ್ಟಿ ಹುರಿಯ ಇನ್ನೊಂದು ಕೊನೆಯನ್ನು ಪಂತೋಜಿಯ ಶಿಖೆಗೆ ಚೆನ್ನಾಗಿ ಬಿಗಿದ. ಮೆಲ್ಲಮೆಲ್ಲನೆ ಮೂವರೂ ಹಿಂದಕ್ಕೆ ಸರಿದರು. ಕೊಂಬೆ ಛಂಗನೆ ಮೇಲಕ್ಕೆಗರಿತು. ಪಂತೋಜಿಯು ಅದರೊಡನೆ ಮೇಲಕ್ಕೊಯ್ಯಲ್ಪಟ್ಟು, ಅಲ್ಲಿಂದ ನೇತಾಡುತ್ತ, ನೋವಿನಿಂದಲೂ ಭಯದಿಂದಲೂ ಅರಚಿಕೊಂಡು ಬಾಯಿ ಬಾಯಿ ಬಡಿದುಕೊಂಡ. ಬೀದಿಯಲ್ಲಿ ಹೋಗುತ್ತಿದ್ದ ಜನ ಅವನನ್ನು ಆ ಆಪತ್ತಿನಿಂದ ಪಾರುಮಾಡಿದರು. ಕಾಮಾಕ್ಷಮ್ಮನವರು ಇದನ್ನು ಕಂಡಿದ್ದರು.

ಮಕ್ಕಳ ಅದೃಷ್ಟ ಚೆನ್ನಾಗಿದ್ದುದರಿಂದ ಆ ದಿವಸ ಗುಂಡಪ್ಪನವರು ಊರಿನಲ್ಲಿರಲಿಲ್ಲ. ಅವರು ಸರ್ಕೀಟು ಮುಗಿಸಿಕೊಂಡು ಬರುವ ವೇಳೆಗೆ ನಾಲ್ಕೈದು ದಿನ ಕಳೆದಿತ್ತು. ಕಾಮಾಕ್ಷಮ್ಮನವರು ಪಂತೋಜಿಯ ಮನೆಗೆ ಹೋಗಿ ತಮ್ಮ ವಿಷಾದವನ್ನೂ, ನಾಚಿಕೆಯನ್ನೂ ಹೇಳಿಕೊಂಡು ಆತನಿಗೆ ಒಂದಿಷ್ಟು ಹಣ್ಣು ಹಂಪಲು ಮೊದಲಾದ ಮರ್ಯಾದೆಗಳನ್ನು ಸಮರ್ಪಿಸಿ ಕ್ಷಮೆ ಪಡೆದು ಬಂದಿದ್ದರು. ಆದರೂ ಗುಂಡಪ್ಪನವರಿಗೆ ವರ್ತಮಾನ ತಿಳಿಯದೆ ಇರಲಿಲ್ಲ. ಅವರು ಅದನ್ನು ಯಾರ ಬಾಯಿಂದಲೋ ಕೇಳಿ ಮನೆಗೆ ಬಂದು ಹೆಂಡಿರು ಮಕ್ಕಳನ್ನು ಹುಚ್ಚು ಹುಚ್ಚಾಗಿ ದಂಡಿಸಿದರು. ಆದರೆ ದಂಡಿಸಿದವರು, ದಂಡಿಸಿಕೊಂಡವರು ಎಲ್ಲರೂ ತಮ್ಮ ತಮ್ಮೊಳಗೇ ನಗದೆ ಇರಲಿಲ್ಲ.

ಸಂತೆಯ ವ್ಯಾಪಾರ

ಇನ್ನೊಂದು ಕಥೆ. ಇದು ನಮ್ಮ ಅಜ್ಜಿ ಸಾಕಮ್ಮನವರು ಹೇಳುತ್ತಿದ್ದದ್ದು: ಮುಳುಬಾಗಲಿನಲ್ಲಿ ಮಂಗಳವಾರ ಸಂತೆಯ ದಿವಸ. ಅದು ಭಾರಿ ಸಂತೆ. ಹತ್ತಾರು ಗ್ರಾಮಗಳಿಂದ ಜನ ಬರುತ್ತಿದ್ದರು. ಸಂತೆಯ ಮಾಳ ಶೇಕ್‌ದಾರರ ಮನೆಗೆ ಸುಮಾರು ೨೦೦-೨೫೦ ಗಜ ದೂರ. ಶೇಕ್‌ದಾರರ ಮೂರನೆಯ ಮಗ ಶೀನಪ್ಪ ಸಂತೆಗೆ ಹೋದ. ಸೌತೇಕಾಯಿ ವ್ಯಾಪಾರ ಮಾಡಿದ. ಆಗ ಆಣೆಗೆ ಆರು ಸೌತೇಕಾಯಿ ಬರುತ್ತಿದ್ದ ಕಾಲ. ಅಂಥಾದ್ದರಲ್ಲಿ ಶೀನಪ್ಪನು ಎರಡು ದುಡ್ಡು ಕೊಟ್ಟು ನಾಲ್ಕು ಕಾಯಿ ತೆಗೆದುಕೊಂಡು ಒಂದು ಕಾಯನ್ನೋ ಇನ್ನೊಂದು ಕಾಯನ್ನೋ ಕೊಸರು ಕೊಡೆಂದು ಕೇಳಿದ. ಹಳ್ಳಿಯವನು ಕೊಂಚ ತಕರಾರು ಮಾಡಿದ. ಒಂದು ಕಾಸನ್ನು ಕೊಟ್ಟಿದ್ದಿದ್ದರೆ ಅವನು ಬಹುಶಃ ಇನ್ನೊಂದು ಕಾಯನ್ನು ಕೊಟ್ಟಿರುತ್ತಿದ್ದ.

ಶೀನಪ್ಪನವರು ಕಾಸು ಕೊಡುವ ಮನಸ್ಸಿಲ್ಲದೆ ತಾವೇ ಒಂದು ಕಾಯನ್ನು ಸಾಧಿಸಿಕೊಳ್ಳಬೇಕೆಂದು ಅವನ ಸೌತೇಕಾಯಿ ರಾಶಿಗೆ ಕೈ ಚಾಚಿದರು. ಅವನು "ಏನು ಸ್ವಾಮಿ, ಹೀಗುಂಟೆ?" ಎನ್ನುತ್ತ ಅವರ ಕೈಗೆ ಅಡ್ಡವಾಗಿ ತನ್ನ ಕೈಯನ್ನೆತ್ತಿದ. ಶೀನಪ್ಪನು ಆ ಕೂಡಲೆ "ರಾಮಣ್ಣಾ! ರಾಮಣ್ಣಾ!" ಎಂದು ಕೂಗು ಹಾಕಿದ. ಆ ಕೂಗು ಮನೆಗೆ ತಲುಪಿತು. ಮನೆಯಲ್ಲಿದ್ದ ರಾಮಣ್ಣನೂ ಶೇಷಣ್ಣನೂ ತಮ್ಮನಿಗೆ ಏನೋ ಆಪತ್ತು ಬಂದಿರಬೇಕೆಂದು ಸಂತೆಯ ಮಾಳಕ್ಕೆ ಓಡಿ ಅಲ್ಲಿಯ ಸಂದರ್ಭವೇನೆಂದು ವಿಚಾರ ಮಾಡಲು ನಿಲ್ಲದೆ ಶೀನಣ್ಣ ನಿಂತಿದ್ದ ಕಡೆಯ ಸೌತೇಕಾಯಿ ರಾಶಿಯ ಮೇಲೆ ನುಗ್ಗಿ ಆ ಕಾಯಿಗಳಷ್ಟನ್ನೂ ತಪತಪನೆ ತುಳಿದುಬಿಟ್ಟರು.

ಅಲ್ಲಿದ್ದ ಜನರಾದರೋ ಇವರನ್ನು ಮಾತನಾಡಿಸದೆ ಆ ಹಳ್ಳಿಯವನ ಕಡೆ ತಿರುಗಿ "ಏನು ಹೋಗುತ್ತಿತ್ತಯ್ಯ ನಿನಗೆ ಇನ್ನೊಂದು ಕಾಯಿ ಕೊಟ್ಟಿದ್ದಿದ್ದರೆ? ಅವರು ಕೇಳೋದು ಹೆಚ್ಚೋ ನೀನು ಕೊಡೋದು ಹೆಚ್ಚೋ?" ಎಂದು ಅವನಿಗೇ ಮುಖ ಭಂಗ ಮಾಡಿದರು. ಸಾಕಮ್ಮನವರು ಮೊಮ್ಮಗನಿಗೆ ಈ ಕಥೆಯನ್ನು ಹೇಳಿ "ಇಂಥ ರಾಕ್ಷಸರಯ್ಯ, ನಿಮ್ಮ ತಾತಂದಿರು. ನೀನು ಅವರನ್ನೆಲ್ಲಿಯಾದರೂ ಹೋತೀಯ!" ಎನ್ನುತ್ತಿದ್ದರು.

ಮೇಲಿನ ಕತೆಗಳು ನನ್ನ ತಾತಂದಿರ ಹುಡುಗುತನದ್ದು. ನಾನು ನೋಡುವ ವೇಳೆಗೆ ಅವರು ಮುಪ್ಪಿನ ಹತ್ತಿರಹತ್ತಿರಕ್ಕೆ ಬಂದಿದ್ದರು. ಊರಿನಲ್ಲಿ ಗಣ್ಯರಾಗಿದ್ದರು. ಶೇಕ್‌ದಾರ ಗುಂಡಪ್ಪನವರ ಮನೆ ಮಾನ ಮರ್ಯಾದೆಗಳಿಗೂ ದಾನಧರ್ಮಗಳಿಗೂ

ಹೆಸರುವಾಸಿಯಾಗಿತ್ತು. ಆ ಮೂವರ ಜೀವಿತಕಥೆಗಳನ್ನು ಬೇರೆ ಬೇರೆಯಾಗಿ ನೋಡಬಹುದು.

೨

ಲಾಯರ್ ಶೇಷಗಿರಯ್ಯನವರು

ಶೇಷಗಿರಯ್ಯನವರು ನನ್ನ ಅಜ್ಜಂದಿರು–ನನ್ನ ತಂದೆಯ ತಂದೆ. ಅವರ ಬಾಲ್ಯವಿದ್ಯಾಭ್ಯಾಸ ಅಂದಿಗೆ ರೂಢಿಯಲ್ಲಿದ್ದ ಪಂತೋಜಿಗಳ ಶುಶ್ರೂಷೆಯಿಂದ ಆದದ್ದು-ಹಳ್ಳಿ ಮಟ್ಟಗಳಲ್ಲಿ ನಡೆದದ್ದು.

ಮೊದಮೊದಲು ಶೇಷಗಿರಯ್ಯನವರು ಯಾವುದೋ ಸರಕಾರದ ಹುದ್ದೆಯಲ್ಲಿದ್ದರಂತೆ-ಬಹುಶಃ ಆಕ್ಟ್ರಾಯ್ ಇಲಾಖೆಯಲ್ಲಿ. ಇದು ಅವರ ಮನಸ್ಸಿಗೆ ಒಪ್ಪಿದ್ದಿರಲಾರದು. ಅವರು ಹೇಗೋ ನಾಲ್ಕು ಇಂಗ್ಲಿಷ್ ಅಕ್ಷರ ಕಲಿತರು-ಗುಮಾಸ್ತೆ ಕೆಲಸದಲ್ಲಿದ್ದಾಗಲೇ. ಆ ವೇಳೆಗೆ ಸರಕಾರದವರು ಕನ್ನಡ ಪ್ಲೀಡರ್ ಪರೀಕ್ಷೆಯನ್ನು ಏರ್ಪಡಿಸಿದರು. ಆ ಪರೀಕ್ಷೆಗಾಗಿ ಪೀನಲ್ ಕೋಡ್, ಸಿವಿಲ್ ಪ್ರೊಸೀಜರ್ ಕೋಡ್, ಕ್ರಿಮಿನಲ್ ಪ್ರೊಸೀಜರ್ ಕೋಡ್ ಮೊದಲಾದ ಲಾ ಗ್ರಂಥಗಳು ಕನ್ನಡಕ್ಕೆ ತರ್ಜುಮೆಯಾಗಿ ಪ್ರಕಟಗೊಂಡಿದ್ದವು. ನನ್ನ ತಾತಂದಿರು ಆ ಪರೀಕ್ಷೆಗೆ ಕಟ್ಟಿ ತೇರ್ಗಡೆ ಪಡೆದು ಪ್ಲೀಡರ್ ವೃತ್ತಿಯನ್ನು ಹಿಡಿದರು. ಅದು ಕೋಲಾರದಲ್ಲಿ. ಹೀಗೆ ಅವರಿಗೆ "ಲಾಯರ್ ಶೇಷಗಿರಪ್ಪಗಾರು" ಎಂದು ಹೆಸರಾಯಿತು. ಅವರ ಬಳಿಯಿದ್ದ ಕನ್ನಡ ಲಾ ಗ್ರಂಥಗಳನ್ನು ನಾನು ನೋಡಿದ್ದೇನೆ. ಆಗ್ಗೆ ಅವುಗಳನ್ನು ಓದುವ ವಯಸ್ಸು ನನಗೆ ಆಗಿರಲಿಲ್ಲ. ಆದರೆ ಹೆಸರುಗಳನ್ನೋದುವಷ್ಟು ವಿದ್ಯೆ ನನಗೆ ಬಂದಿತ್ತು. ನನ್ನ ಅಜ್ಜಂದಿರು ಇಂಗ್ಲಿಷ್ ಪತ್ರಿಕೆಗಳನ್ನು ಓದುತ್ತಿದ್ದರೆಂದು ತೋರುತ್ತದೆ. ಅವರು ಕೋರ್ಟಿನಲ್ಲಿ ವಾದ ಮಾಡುತ್ತಿದ್ದದ್ದು ಬಹುಮಟ್ಟಿಗೆ ಕನ್ನಡದಲ್ಲೇ ಆದರೂ, ವಾದದ ನಡುನಡುವೆ ಇಂಗ್ಲಿಷ್ ಪದಗಳನ್ನು ಧಾರಾಳವಾಗಿ ಬಳಸುತ್ತಿದ್ದರು.

ಶೇಷಗಿರಿಯಪ್ಪನವರ ರೂಪ ಮೆಚ್ಚಿಕೆ ಪಡೆಯುವಂಥಾದ್ದೆನಿಸುತ್ತದೆ. ಆಳು ಎತ್ತರ, ತೆಳುವೆಂದೇ ಹೇಳಬೇಕು. ಮೈಬಣ್ಣ ದಂತದ ಬಿಳುಪು. ಬಾಯಲ್ಲಿ ಮೇಲ್ಸಾಲಿನ ಹಲ್ಲಿನ ನಡುವೆ ಕೊಂಚ-ಬಹುಕೊಂಚ-ಉಬ್ಬು. ಅವರು ಯಾವಾಗಲೂ ಶುಭ್ರವಸ್ತ್ರದಲ್ಲಿ ಆಶೆಯುಳ್ಳವರು. ಬಿಳಿಯ ಧೋತ್ರ, ಬಿಳಿಯ ಜುಬ್ಬ, ಬಿಳಿಯ ನಿಲುವಂಗಿ, ಬಿಳಿಯ ಉತ್ತರೀಯ, ಬಿಳಿಯ ರುಮಾಲು. ಪಂಚೆಯಲ್ಲಿಯೂ ರುಮಾಲಿನಲ್ಲಿಯೂ ಸರಿಗೆಯಿರುತ್ತಿರಲಿಲ್ಲ. ಆದರೆ ಎಲ್ಲ ಚೊಕ್ಕಟವಾಗಿ ಮಡಿಮಾಡಿದ್ದಾಗಿರಬೇಕು.

ಅವರ ಮಾತು ಗಂಭೀರ. ಅವರು ಯಾರನ್ನಾದರೂ ಬೈದದ್ದನ್ನು ನಾನು ಕೇಳಿಯೇ ಇಲ್ಲ. ಯಾರನ್ನೂ ಅವರು ಬೈದವರಲ್ಲವೆಂದು ಜನ ಹೇಳುತ್ತಿದ್ದದ್ದುಂಟು.

ಅವರಿದ್ದದ್ದು "ದರ್ಭಲವಾಳ್ಲವೀದಿ" ಎಂಬ ಬ್ರಾಹ್ಮಣರ ಬೀದಿಯಲ್ಲಿ. ಅವರಿಗೆ ಪತ್ನೀವಿಯೋಗವಾಗಿತ್ತೆಂದು ಹಿಂದೆ ಹೇಳಿದೆ. ಆದದ್ದರಿಂದ ಕೋಲಾರದಲ್ಲಿ ಅವರ ಕುಟುಂಬದಲ್ಲಿದ್ದವರು ಇಬ್ಬರು: ದಾಸಂಭಟ್ಟರೆಂಬ ದೇವತಾರ್ಚನೆ-ಕಂ-ಅಡಿಗೆಯ ಬ್ರಾಹ್ಮಣ. ಇನ್ನೊಬ್ಬರು ನರಸಾಪುರದ ರಾಮಕ್ಕನೆಂಬ ಉಪಪತ್ನಿ. ನಾನು ಇಬ್ಬರನ್ನೂ ನೋಡಿದ್ದೇನೆ.

ದಾಸಂಭಟ್ಟರು ಹುದುಕೊಳ (ಅಥವಾ ಹೊಳಲಿ) ಎಂಬ ಗ್ರಾಮದವರು: ಮುಲಕನಾಡು. ಅವರು ಅಧ್ಯಯನ ಮಾಡಿದ್ದವರು. ಪ್ರಾಮಾಣಿಕರು, ಪರಿಶುದ್ಧರು. ಅವರಲ್ಲಿದ್ದ ಲೋಪಗಳೆಂದರೆ ಎರಡು: (೧) ಕೊಂಚ ನೆತ್ತಿ ಉಗ್ಗು: (೨) ನಿದ್ರೆ ಮಾಡುವಾಗ ಗೊರಕೆ. ಸ್ವಭಾವದಲ್ಲಿ ದಾಸಂಭಟ್ಟರು ಋಷಿಪ್ರಾಯರು. ಅವರು ದೇವತಾರ್ಚನೆಗೆ ಕುಳಿತರೆ ಯಥಾವಿಧಿಯಾಗಿ ಪೂಜೆ ಮಾಡುವರು. ಪ್ರತಿದಿನ ರುದ್ರಾಭಿಷೇಕ, ವಿಷ್ಣುಸಹಸ್ರನಾಮ ಪೂಜೆ, ಸೂರ್ಯ ನಮಸ್ಕಾರ. ಆ ಕಾರ್ಯಗಳ ನಡುನಡುವೆ ಅಡುಗೆಯ ಕಡೆ ಗಮನ. ಬೆಳಿಗ್ಗೆ ೯ ಘಂಟೆಗೆ ಸರಿಯಾಗಿ ಅಡಿಗೆ ಸಿದ್ಧವಾಗಿರುತ್ತಿತ್ತು.

ಅಡಿಗೆ ಮಾಡುವುದು ಹತ್ತು ಘಂಟೆಯೊಳಗಾಗಿ. ಯಜಮಾನರು ಸ್ನಾನಮಾಡಿ ಬಂದು ಮಣೆಯ ಮೇಲೆ ಕುಳಿತು ಸಂಧ್ಯಾವಂದನೆ ಮಾಡುವರು. ಆದಿತ್ಯಹೃದಯ ಹೇಳುವರು. ಆ ಹೊತ್ತನ್ನು ಕಾದು ನೋಡಿ ದಾಸಂಭಟ್ಟರು ಅವರ ಕೈಗೆ ದೇವರ ತೀರ್ಥ ಹಾಕಿ ಒಂದು ತುಳಸೀದಳವನ್ನು ಕೊಡುವರು. ಅದನ್ನು ಸ್ವೀಕರಿಸಿದ ನಂತರ ಊಟ.

ಅವಸರ

ಶೇಷಗಿರಿಯಪ್ಪನವರು ಕುಕ್ಕರಗಾಲು ಕುಳಿತೇ ಊಟ ಮಾಡುತ್ತಿದ್ದರು. ಅವಸರದ ಊಟವೇ. ಅವರು ಪದ್ಮಾಸನ ಹಾಕಿ ಕುಳಿತು ಪರಿಶವಣೆಯಿಂದ ಊಟ ಮಾಡಿದ್ದನ್ನು ಯಾರೂ ಕಂಡಿರಲಿಲ್ಲ. ಊಟವಾದ ಬಳಿಕ ಶುದ್ಧಾಚಮನವಾದ ಮೇಲೆ ಕೋಟು ರುಮಾಲುಗಳನ್ನು ಧರಿಸಿ ಕೋರ್ಟಿಗೆ ಹೊರಡುತ್ತಿದ್ದರು. ಭಾನುವಾರ ಮೊದಲಾದ ರಜ ದಿವಸಗಳಲ್ಲಿ ಕೊಂಚ ಸಾವಕಾಶವಾಗಿರುತ್ತಿದ್ದರು. ಅಂಥ ದಿವಸ ಯಾರಾದರೂ ಸಹಪಂಕ್ತಿಗೆ ಇರಲೇಬೇಕು. ಅಂದು ಮಧ್ಯಾಹ್ನ ಕೊಂಚ ವಿಶ್ರಮಿಸಿಕೊಂಡು

ಸಂಜೆಯವರೆಗೂ ಕಾಗದ ಪತ್ರಗಳನ್ನು ಸರಿಜೋಡಿಸಿಟ್ಟುಕೊಳ್ಳುತ್ತಿದ್ದರು. ಐದು ಘಂಟೆಯ ಮೇಲೆ ಸ್ನೇಹಿತರ ಮನೆಗಳಿಗೆ ಹೋಗುವುದುಂಟು.

ಔಚಿತ್ಯಜ್ಞಾನ

ದಾಸಂಭಟ್ಟರನ್ನು ಕಂಡರೆ ಎಲ್ಲರಿಗೂ ಗೌರವ. ಆತನಿಗೆ ಸುಳ್ಳು ತಟವಟಬಾರದೆಂದೇ ಜನದ ನಂಬಿಕೆ. ಆತ ಮಡಿಮೈಲಿಗೆಗಳಲ್ಲಿ ಬೆರಕೆ ಮಾಡುತ್ತಿದ್ದವನಲ್ಲ. ಮತ್ತೊಬ್ಬರ ಮಾತಿಗೆ ಬರುತ್ತಿರಲಿಲ್ಲ. ತುಂಬ ಶುಚಿಯಾದ ಮನುಷ್ಯ. ಯಜಮಾನರು ಮನೆಯಲ್ಲಿದ್ದರೂ ಸರಿ, ಇಲ್ಲದಿದ್ದರೂ ಸರಿ; ಎಲ್ಲರಿಗೂ ಆದರಣೆ. ಅವರವರಿಗೆ ತಕ್ಕ ಮರ್ಯಾದೆ ಇದು ಆತನ ನಡವಳಿಕೆಯ ಲಕ್ಷಣ.

ಒಂದು ಘಟನೆ

ಒಂದಾನೊಂದು ದಿನ ಶೇಷಗಿರಿಯಪ್ಪನವರ ಮಗ (ನಮ್ಮ ತಂದೆ) ವೆಂಕಟರಮಣಯ್ಯನವರೂ ಅವರ ಸ್ನೇಹಿತ ತಿಪ್ಪದೊಡ್ಡಿ ವೆಂಕಟೇಶಯ್ಯನವರೂ ಬೆಂಗಳೂರು ಕಡೆ ಹೋಗಿದ್ದವರು ಅಲ್ಲಿಂದ ಹಿಂತಿರುಗಿ ಬರುತ್ತಾ ಕೋಲಾರದಲ್ಲಿ ಇಳಿದರು-ರಾತ್ರಿ ೧೦ ಘಂಟೆ ಸಮಯದಲ್ಲಿ. ಬಾಗಿಲು ತಟ್ಟಿದ ಕೂಡಲೆ ದಾಸಂಭಟ್ಟರು ಅವರನ್ನು ಭೋಜನಕ್ಕೆಬ್ಬಿಸಿ, ಅದಾದಮೇಲೆ ಮಲಗಲು ನಡುವೆಯಲ್ಲಿ ಸ್ಥಳ ತೋರಿಸಿ ತಾವು ಬಚ್ಚಲು ಮನೆಯ ಪಕ್ಕದ ಕೊಠಡಿಯಲ್ಲಿ ಪವಡಿಸಿದರು.

ಅರ್ಧ ಗಂಟೆಯಾದ ಬಳಿಕ ಮನೆಯ ಮುಂಭಾಗದ ನಡವಿಯಲ್ಲಿ ಮಲಗಿದ್ದವರಿಗೆ ಗೊರ್ ಗೊರ್ ಎಂಬ ಶಬ್ದ ಕಿವಿಗೆ ಬಡಿದಂತಾಗಿ ನಿದ್ದೆ ಹತ್ತಿರ ಸುಳಿಯದೆ ಇತ್ತು. ಅವರು ಮಾರ್ಗಾಯಾಸಪಟ್ಟಿದ್ದರು; ನಿದ್ರಾಭಂಗ ಮತ್ತಷ್ಟು ಕೋಪಕ್ಕೆ ಕಾರಣವಾಯಿತು. ಅವರಿಬ್ಬರೂ ಕತ್ತಲುಮನೆಯಲ್ಲಿ ನಡೆದು ಆ ಸದ್ದು ಬರುತ್ತಿದ್ದ ಕಡೆಗೆ ಹೋದರು. ದಾಸಂಭಟ್ಟರ ಗಾಢನಿದ್ರೆಯ ರಭಸ ಅದು ಎಂದು ಗೊತ್ತಾಯಿತು. ಏನು ಮಾಡಬಹುದು? ಒಂದು ಯೋಚನೆ ಹೊಳೆಯಿತು. ಹಿತ್ತಲುಬಾಗಿಲನ್ನು ತೆರೆದರು. ಇಬ್ಬರೂ ಮೆಲ್ಲಡಿಯಿಡುತ್ತ ದಾಸಂಭಟ್ಟರ ಕೋಣೆಗೆ ಬಂದು ಈಕಡೆ ಒಬ್ಬ ಆಕಡೆ ಒಬ್ಬ ನಿಂತು ಹಾಸಿಗೆಯ ಕೊನೆಮೂಲೆಗಳನ್ನು ಹಿಡಿದು ಮೇಲಕ್ಕೆತ್ತಿ ಅದನ್ನು ಮೆಲ್ಲಗೆ ಹೊರಕ್ಕೆ ಸಾಗಿಸಿಕೊಂಡು ಹೋಗಿ ಅಲ್ಲಿ ಮನೆಯ ಕೈಸಾಲೆಯ ಜಗಲಿಯ ಮೇಲೆ ಇರಿಸಲು ಹೊತ್ತುಕೊಂಡು ಹೋದರು. ಕಡೆಯ ಕ್ಷಣದಲ್ಲಿ ಅವರ ನಗುವೇ ಅವರ ಆಲೋಚನೆಗೆ ಅಡ್ಡವಾಯಿತು. ಆ ನಗುವಿನಲ್ಲಿ ಅವರು ಹಾಸುಗೆಯ ಒಂದು ಭಾಗವನ್ನು ಒಂದು ಕಂಭಕ್ಕೆ ತಗುಲಿಸುವಂತಾಯಿತು. ಅದು ತಗುಲಿದೊಡನೆಯೇ ದಾಸಂಭಟ್ಟರು ಎಚ್ಚೆತ್ತು ಎದ್ದು "ಯ್ಯಯ್ಯಯ್ಯಮ್ಮಮ್ಮಮ್ಮ" ಎನ್ನುವಷ್ಟರೊಳಗಾಗಿ ಇಬ್ಬರೂ ಪರಾರಿಯಾಗಿ ತಾವು ಮಲಗಿದ್ದ ಜಾಗಗಳಲ್ಲಿ ಮಸುಕು ಹಾಕಿ ಮಲಗಿಕೊಂಡರು. ದಾಸಂಭಟ್ಟರು ಅವರು ಯಾರಿರಬಹುದು ಎಂಬುದನ್ನು ಊಹಿಸಿಕೊಂಡು ದೀಪ ಹಚ್ಚಿಸಿಕೊಂಡು ಅಲ್ಲಿಗೆ ಬಂದು, "ಏನಪ್ಪ, ನಿಮಗೆ ನಿದ್ದೆ ಬರಲಿಲ್ಲವೇನೋ. ನಾನೇನು ಮಾಡಲಿ, ನನ್ನ ಪ್ರಾರಬ್ಧ. ನೀವು ನನ್ನನ್ನೆಬ್ಬಿಸಿ ಒಂದು ಮಾತು ಹೇಳಬಾರದಾಗಿತ್ತೆ? ನಾನೇ ಎದ್ದು ಕೋಲಾರಮ್ಮನ ಗುಡಿಗೆ ಹೋಗಿ ಮಲಗಿಕೊಳ್ಳುತ್ತಿದ್ದೆ. ಅಲ್ಲಿಂದ ಯಾರಿಗೂ ತೊಂದರೆಯಾಗುವಂತಿರಲಿಲ್ಲ" ಎಂದು ಮೊದಲಾಗಿ ಪೇಚಾಡಿಕೊಂಡರು.

ಬೆಳಗ್ಗೆ ಈ ಸಮಾಚಾರ ಶೇಷಗಿರಯ್ಯನವರಿಗೆ ತಿಳಿಯಿತು. ಅವರು ಇಬ್ಬರು ಚಿರಂಜೀವಿಗಳಿಗೂ ಮುಸಿನಗೆ ನಗುತ್ತ ಚೀಮಾರಿ ಹಾಕಿದರು. ಅವರಿಗೆಲ್ಲ ದಾಸಂಭಟ್ಟರ ವಿಷಯದಲ್ಲಿದ್ದ ಭಕ್ತಿಗೌರವಗಳು ಮತ್ತಷ್ಟು ಬೆಳೆದವು.

ಶೇಷಗಿರಯ್ಯನವರು ಮೃತ್ಯುಶಯ್ಯೆ ಹಿಡಿಯುವವರೆಗೂ ದಾಸಂಭಟ್ಟರು ಅವರ ಆಶ್ರಯದಲ್ಲಿದ್ದರು. ತಮ್ಮ ಕೋಲಾರದ ಬಾಳ್ವೆ ಮುಗಿದುಕೊಂಡು ಬಂತೆಂದು ಶೇಷಗಿರಿಯಪ್ಪನವರಿಗೆ ತೋರಿದ ಕೂಡಲೆ ಅವರು ದಾಸಂಭಟ್ಟರಿಗೆ ಔತಣಮಾಡಿಸಿ ಒಂದು ಜತೆ ಧೋತ್ರ, ಒಂದುನೂರು ರೂಪಾಯಿ ನಗದು ಇದನ್ನು ತಾಂಬೂಲದಲ್ಲಿಟ್ಟು ದಾಸಂಭಟ್ಟರಿಗೆ ಕಾಲುಮುಟ್ಟಿ ನಮಸ್ಕಾರ ಮಾಡಿ ಬೀಳ್ಕೊಟ್ಟರು.

ಶೇಷಣ್ಣನವರ ದಿನಚರಿ

ಶೇಷಗಿರಿಯಪ್ಪನವರು ೭ ಘಂಟೆಯ ಸುಮಾರಿಗೆ ಹಜಾರದಲ್ಲಿ ಕುಳಿತ ಕಕ್ಷಿಗಾರರೊಡನೆ ಮಾತುಕಥೆ ಮುಗಿಸಿ ೯ ಘಂಟೆಗೆ ಸ್ನಾನಕ್ಕೆ ಹೋಗುವರು. ವಿಭೂತಿ ಧರಿಸಿ ಸಂಧ್ಯಾವಂದನೆ ಮಾಡುವರು. ಅಷ್ಟು ಹೊತ್ತಿಗೆ ದಾಸಂಭಟ್ಟರು ತೀರ್ಥ ತಂದುಕೊಡುವುದು ರೂಢಿ. ದೇವರ ತೀರ್ಥ ತೆಗೆದುಕೊಂಡು ಹೂ ತುಳಸಿ ಪ್ರಸಾದವನ್ನು ಕಣ್ಣಿಗೊತ್ತಿಕೊಂಡು ಊಟಕ್ಕೆ ಕೂಡುವರು. ಕುಕ್ಕರುಗಾಲಿನಲ್ಲಿ ಕುಳಿತು ಊಟ: ಪದ್ಮಾಸನ ಹಾಕದೆ ಮೊಣಕಾಲ ಮೇಲೆ ಕೂಡುವುದು. ಇದಕ್ಕಾಗಿ ಮನೆಯಲ್ಲಿ ಹಾಸ್ಯ ವ್ಯಾಖ್ಯಾನವಾಗುತ್ತಿತ್ತು. “ಚೊಕ್ಕಂಬಟ್ಲು ಹಾಕಿ ಕುಳಿತರೆ ಏನಾಗುತ್ತೆ ಚೇಚಣ್ಣಾ?” ಎಂದು ಅವರ ತಮ್ಮಂದಿರ ಹೆಣ್ಣುಮಕ್ಕಳು ಕೇಳುವರು. ಈ ಸಲಿಗೆ ಇತರರಿಗೆ ಇರಲಿಲ್ಲ. ಶೇಷಗಿರಿಯಪ್ಪನವರಿಗೆ ಹೊತ್ತಿನ ಚಿಂತೆ ಬಹಳವಾಗಿತ್ತು. ಯಾವುದೂ ಕಾಲಕ್ಕೆ ಸರಿಯಾಗಿ ಆಗಬೇಕು. ತಡವಾಗಬಾರದು. ಕುಕ್ಕರು ಕೂಡುವುದು ಕಾಲದ ಮಿತವ್ಯಯಕ್ಕಾಗಿ! ಊಟವಾಗಿ ಕೋರ್ಟು: ಮಧ್ಯಾಹ್ನ ಮೂರು ನಾಲ್ಕು ಘಂಟೆಯವರೆಗೆ. ಒಂದೊಂದು ದಿನ ಇನ್ನೂ ಹೊತ್ತಾಗುವುದು. ಬೇಗ ಮನೆಗೆ ಬಂದ ದಿನ ಕೊಂಚ ಉಪಾಹಾರ ಮಾಡುವರು. ಅವರ ಮನೆಯಲ್ಲಿ ಯಾವಾಗಲೂ ರವೆಯುಂಡೆ ಅಥವಾ ಚುರಮಾಲಾಡು, ಹುರಿಗಾಳು, ಕೋಡುಬಳೆ–ಇವು ಸಿದ್ಧವಾಗಿರುತ್ತಿದ್ದವು. ಇದನ್ನು ಕೊಂಚ ಕೊಂಚ ತೆಗೆದುಕೊಂಡು ಒಂದು ಲೋಟ ನೀರು ಕುಡಿಯುವರು. ಅವರು ಕಾಫಿಯನ್ನು ಕಾಣರು. ಹೀಗೆ ಬೇಗ ಬಂದ ದಿವಸ ಸಂಜೆ ಸ್ನೇಹಿತರ ಮನೆಗೆ ಹೋಗುವರು. ಕವೀಶ್ವರ ವೆಂಕಟರಾಮಭಟ್ಟರು. ಬಿ. ಅಹೋಬಲಾಚಾರ್ಯರು, ನಂಜಪ್ಪನವರು, ವೊಕ್ಕಲೇರಿ ಭೀಮರಾಯರು, ಎಂ. ಎಸ್. ರಾಮಾಚಾರ್ಯರು ಮೊದಲಾದವರು ಅವರ ಸ್ನೇಹಿತರಲ್ಲಿ ಮುಖ್ಯರು. ಒಂದೊಂದು ಸಾರಿ ಇವರ ಮನೆಗೇ ಆ ಸ್ನೇಹಿತರು ಬರುವರು. ಸಂಜೆ ೬ ಘಂಟೆಯಾದ ಮೇಲೆ ೮ ಘಂಟೆವರೆಗೂ ಕಕ್ಷಿಗಾರರೊಡನೆ ಮಾತು ಕಥೆ. ಇದು ಅವರ ದಿನಚರಿ.

ಶೇಷಗಿರಿಯಪ್ಪನವರಿಗೆ ತಿಂಗಳಿಗೊಂದೆರಡು ಸಾರಿ ಪರಸ್ಥಳ ಸಂಚಾರವೂ ಇರುತ್ತಿತ್ತು. ಚಿಂತಾಮಣಿ, ಬೌರಿಂಗ್‌ಪೇಟೆ, ಮಾಲೂರು ಈ ಸ್ಥಳಗಳಲ್ಲಿ ಅವರ ಕಕ್ಷಿಗಾರರು ಇರುತ್ತಿದ್ದರು.

ಹೀಗೆ ಅವರ ಜೀವನ ಸದ್ದುಗದ್ದಲವಿಲ್ಲದೆ ಶಾಂತವಾಗಿ, ಒಟ್ಟಿನ ಮೇಲೆ ಸುಖಮಯವಾಗಿ ಸಾಗಿತ್ತು. ಅವರು ಊರಿನಲ್ಲಿ ಇರಲಿ ಇಲ್ಲದಿರಲಿ, ಮನೆಗೆ ಬಂದ ಜನವನ್ನು ಆದರಿಸಿ

ಊಟಕ್ಕೆ ಎಬ್ಬಿಸಬೇಕು. ಇದು ದಾಸಂಭಟ್ಟರಿಗೂ ರಾಮಾಸಾನಿಗೂ ಗೊತ್ತಾಗಿದ್ದ ವಿಧಿ. ಆಕೆ ಉಗ್ರಾಣದಿಂದ ಧಾರಾಳವಾಗಿ ಸಾಮಾನು ಕೊಡತಕ್ಕದ್ದು. ದಾಸಂಭಟ್ಟರು ಅಡಿಗೆ ಮಾಡಿ ಬಡಿಸತಕ್ಕದ್ದು. ಪ್ರತಿದಿನವೂ ಹೀಗೆ ಅತಿಥಿಗಳಿರುತ್ತಿದ್ದರು-ಬ್ರಾಹ್ಮಣರೂ ಇತರ ಜನರೂ.

ಒಂದು ಅಪಘಾತ

ನಮ್ಮ ತಾತ ತೀರಿಕೊಂಡ ಮೇಲೆ ಕೋಲಾರದ ಸ್ನೇಹಿತರೊಬ್ಬರು (ಬಹುಶಃ ಎಸ್. ನಂಜಪ್ಪನವರು) ಒಂದು ಸಂಗತಿ ಹೇಳಿದರು. ಕೋಲಾರದಿಂದ ಶೇಷಗಿರಿಯಪ್ಪನವರೂ ಆ ಸ್ನೇಹಿತರೂ ಒಂದು ದಿನ ಜಟಕದಲ್ಲಿ ಕುಳಿತು ಮುಳಬಾಗಲಿಗೆ ಪ್ರಯಾಣ ಮಾಡುತ್ತಿದ್ದರು. ಬೆಳಿಗ್ಗೆ ೯-೧೦ ಘಂಟೆ. ವಡಗೂರು ಎಂಬ ಗ್ರಾಮದ ಸಮೀಪಕ್ಕೆ ಬರುತ್ತಿದ್ದಾಗ ಕುದುರೆ ಬಹು ವೇಗವಾಗಿ ಓಡುತ್ತಿತ್ತು. ಆ ಸಮಯಕ್ಕೆ ಸರಿಯಾಗಿ ಯಾವುದೋ ಹಳ್ಳಿಯಿಂದ ಒಬ್ಬ ಹೆಂಗಸು ತಲೆಯ ಮೇಲೆ ದೊಡ್ಡ ಮಂಕರಿ ಹೊತ್ತು ರಸ್ತೆಯ ಒಂದು ಪಕ್ಕಕ್ಕೆ ಹೋಗುತ್ತಿದ್ದವಳು ಕುದುರೆಯ ರಭಸವನ್ನು ನೋಡಿ ಹೆದರಿ ಓಡಿದಳು. ಆ ಆತುರದಲ್ಲಿ ಎಡವಿಬಿದ್ದಳು. ಗೂಡೆಯಲ್ಲಿದ್ದ ಮೊಸರು ಚೆಲ್ಲಿ ಅವಳಿಗೆ ಗಾಯವೂ ಆಯಿತು. ಆಕೆ ಅಳತೊಡಗಿದಳು. ಗಾಡಿಯವನು ನಿಲ್ಲಿಸಿ ವಿಚಾರಿಸಿದ. ಆಕೆ ಅಳುವಿನ ನಡುವೆ “ಗಾಯವಾದರೆ ಆಗಲಿ; ನನ್ನ ಅತ್ತೆ ಮಡಕೆ ಕೇಳುತ್ತಾಳಲ್ಲ ನಾನು ಏನು ಹೇಳಲಿ?” ಎಂದು ಗೋಳಿಟ್ಟಳು. ಶೇಷಗಿರಿಯಪ್ಪನವರು ಆಕೆಯ ಕೈಗೆ ಎರಡು ರೂಪಾಯಿ ಕೊಟ್ಟು ಹೇಳಿದರು; “ಒಂದು ರೂಪಾಯಿ ಮಡಕೆಗೆ; ಇನ್ನೊಂದು ರೂಪಾಯಿ ಗಾಯ ವಾಸಿ ಮಾಡಿಕೊಳ್ಳುವುದಕ್ಕೆ.” ಗಾಡಿ ಮುಂದಕ್ಕೆ ಹೋಯಿತು.

ನಂಜಪ್ಪನವರು

ನಂಜಪ್ಪನವರು ಒಳ್ಳೆಯ ಲಾಯರು. ಅವರೂ ಶೇಷಗಿರಿಯಪ್ಪನವರೂ ಕೋರ್ಟಿನಲ್ಲಿ ಎದುರುಬದುರಾಗಿ ನಿಲ್ಲುತ್ತಿದ್ದದ್ದುಂಟು. ಕೋರ್ಟಿನ ಹೊರಗಡೆ ತುಂಬ ಸ್ನೇಹ. ಇಬ್ಬರೂ ಒಂದೇ ಗಾಡಿಯಲ್ಲಿ ಬರುವರು. ಅವರೂ ನಮ್ಮ ಮನೆಯಲ್ಲಿಯೇ ಇಳಿಯುವರು. ಬರುವಾಗ ಒಂದು ಟಿನ್ ಗುಂಡು ಡಬ್ಬ ಜೊತೆಯಲ್ಲಿ ತರುತ್ತಿದ್ದರು. ಡಬ್ಬದ ತಳದಲ್ಲಿ ಬಾಳೆಯೆಲೆ. ಅದರ ಮೇಲೆ ಸಕ್ಕರೆ; ಅದರ ಮೇಲೆ ಹುಯ್ಗಡುಬು, ಸುಮಾರು ಎಂಟಂಗುಲ ಅಗಲ. ಅದರ ಮೇಲೆ ತುಪ್ಪ, ಮತ್ತೆ ಸಕ್ಕರೆ, ಮತ್ತೆ ಹುಯ್ಗಡುಬು–ಹೀಗೆ ನಾಲ್ಕೈದು ಪದರ ಇರುತ್ತಿತ್ತು. ಗಾಡಿ ನಮ್ಮ ಮನೆಯ ಮುಂದೆ ನಿಲ್ಲುತ್ತಲೇ ನಂಜಪ್ಪನವರು ಕೂಗುವರು: “ಅವನೆಲ್ಲಿ-ಅದರ ಮೇಲೇ ಕೈಯವನು?” ಡಬ್ಬವನ್ನು ನನ್ನ ಕೈಗೆ ಕೊಡುತ್ತಿದ್ದರು. ಮಾವಿನಹಣ್ಣಿನ ಕಾಲದಲ್ಲಿಯೂ ಹೀಗೆಯೇ. ನನ್ನ ಈ ಮುಪ್ಪಿನಲ್ಲಿ ಚಿಕ್ಕಂದಿನಲ್ಲಿ ನಾನು ಕಂಡವರ ಒಳ್ಳೆಯತನವನ್ನೂ ಪ್ರೀತಿ ವಿಶ್ವಾಸಗಳನ್ನೂ ನೆನಸಿಕೊಳ್ಳುವುದು ಈ ಜೀವನದಲ್ಲಿರುವ ಒಂದು ಸುಖ.

ಪುರಾಣ ಪ್ರವಚನ

ಶೇಷಗಿರಿಯಪ್ಪನವರು ಹಬ್ಬ ಹರಿದಿನಗಳಲ್ಲಿ ತಪ್ಪದೆ ಮುಳುಬಾಗಲಿಗೆ ಬರುವರು. ಅವರು ಬಂದ ದಿನ ನಮ್ಮ ನೆರೆಹೊರೆಗೆಲ್ಲ ಸಂಭ್ರಮ. ನಮ್ಮ ಮನೆಯ ನಡುವೆ ವಿಶಾಲವಾದ ದೊಡ್ಡ ಜಮಖಾನ ಹಾಕುವರು. ನಾಲ್ಕು ಒರಗುದಿಂಬುಗಳನ್ನಿಡುವರು. ಅಲ್ಲಿ ನನ್ನ ತಾತನ ಬೈಠಕ್‌ಖಾನೆ: ಅಮಲ್ದಾರರು ಶಿರಸ್ತೇದಾರರು, ಪೋಲೀಸ್ ಇನ್‌ಸ್ಪೆಕ್ಟರು, ಡಾಕ್ಟರು, ಹೆಡ್‌ಮಾಸ್ಟರುಗಳು, ಸಾಹುಕಾರರು, ಜಮೀನ್ದಾರರು–ಇಂಥವರೆಲ್ಲ ಬರುವರು. ಅರ್ಧ ಘಂಟೆ ಒಂದು ಘಂಟೆ ಮಾತನಾಡಿ ಹೋಗುವರು. ಹಬ್ಬದ ದಿನವಾದರೆ ಭೋಜನಾನಂತರ ೩-೪ ಘಂಟೆಯ ಹೊತ್ತಿಗೆ ಒಂದು ಸಣ್ಣ ಗೋಷ್ಠಿ ಸೇರಿ ಯಾವುದೋ ಪುರಾಣ ಪ್ರವಚನ ನಡೆಯುವುದು. ನನಗೆ ಬಹು ಚೆನ್ನಾಗಿ ಜ್ಞಾಪಕವಿರುವ ಒಂದು ಸಂದರ್ಭವನ್ನು ಹೇಳುತ್ತೇನೆ.

ಆ ದಿನ ಬಹುಶಃ ಅನಂತನ ಹಬ್ಬ. ಜನ ಸೇರಿದೆ. ನನ್ನ ತಾತಂದಿರು ನನ್ನ ತಂದೆಯನ್ನು ಹರಿಶ್ಚಂದ್ರ ಕಥೆ ಓದುವಂತೆ ಹೇಳಿದರು. ಅದು ಯಾವುದೋ ಚಂಪೂಕಾವ್ಯ. ನನ್ನ ತಂದೆ ಓದುತ್ತಿದ್ದರು. ಜನ ಸಂತೋಷದಿಂದ ಕೇಳುತ್ತಿದ್ದರು. ರೋಹಿತಾಶ್ವನ ಪ್ರಕರಣ ಬಂತು. ಅದರಲ್ಲಿ ಚಂದ್ರಮತಿಯ ವಿಲಾಪ ಪ್ರಕರಣ–ನಕ್ಷತ್ರಿಕನು ಹರಿಶ್ಚಂದ್ರನಿಗೆ ಕಾಟ ಕೊಡುತ್ತಿದ್ದ ಪ್ರಕರಣ–ಇವು ಬಂದಾಗ ನನಗೆ ದುಃಖವಾಗಿ ಬಿಕ್ಕಿ ಬಿಕ್ಕಿ ಅತ್ತೆ.

ನನ್ನ ಚಿಕ್ಕತಾತಂದಿರು ನನಗೆ ಕಲ್ಲುಸಕ್ಕರೆ ಕೊಟ್ಟು ಸಮಾಧಾನ ಹೇಳುತ್ತಿದ್ದರು. ಅಲ್ಲಿದ್ದ ಕಾಷ್ಠಿ ಹೈದರ್ ಸಾಹೇಬರು "ಇದೇನು ಸಮಾಧಾನ! ನನಗೇ ಅಳು ಬರುತ್ತದೆ. ಇನ್ನು ಮಗುವಿನ ಮಾತೇನು!" ಎಂದು ಹೇಳಿ ನನ್ನನ್ನೆತ್ತಿಕೊಂಡು ಬೀದಿಯಲ್ಲಿ ಕೊಂಚ ದೂರ ಕರೆದುಕೊಂಡು ಹೋದರು.

ವೇಗಮಡುಗು ಶೀನಪ್ಪ ಎಂಬವರು ನಮ್ಮ ತಂದೆಗಿಂತ ಎರಡು ಮೂರು ವರ್ಷ ದೊಡ್ಡವರು. ಅವರಿಗೆ ಓದುವುದಕ್ಕಿಂತ ಅರ್ಥವಿವರಣೆಯಲ್ಲಿ ಹೆಚ್ಚು ಉತ್ಸಾಹ. ಶ್ಲೇಷ, ಪ್ರಾಸ–ಇಂಥ ಶಬ್ದಾಲಂಕಾರಗಳು ಬಂದ ಕಡೆ ತರ್ಕದ ಬೆಟ್ಟುಗಳನ್ನು ತಿರುಗಿಸುತ್ತ ಪದಗಳನ್ನು ಬಿಡಿಸುತ್ತ ಎರಡು ಮೂರು ಅರ್ಥಗಳನ್ನು ತೋರಿಸುತ್ತ ತಮ್ಮ ಪಾಂಡಿತ್ಯದಿಂದ ತಾವೇ ಹಿಗ್ಗಿ ಇತರರನ್ನು ಸಂತೋಷಪಡಿಸುತ್ತಿದ್ದರು. "ಪಾವನತುಲಾಭರಣಮಂ ಮಾಡಿಕೊಂಡೆಸೆವ ಪಾವನತರಸ್ವರೂಪಂ ನಾರದಾದಿಮುನಿ ಪಾವನಾನತ

ಪಾದಪಂಕೇರುಹದ್ವಂದ್ವನ್" ಇಂಥಾದ್ದು ಅವರಿಗೆ ಬಹುರುಚಿ. ಅಥವಾ "ಕೆತ್ತಬಲ್ಗತ್ತಲೆಗೆ ತರಣಿ ಮುಂಗಾಣದಿರೆ ಪೊತ್ತುವೆಳಗಂ ತೋರ್ಪರಾರ್" ಇತ್ಯಾದಿ.

ರಸಿಕತೆ

ಇಂಥಾದ್ದು ನಮ್ಮ ತಂದೆಗೂ ಇಷ್ಟವೇ.

ಕಲಕೀರವಾಣಿಯರ್
ಕಾಳಾಹಿವೇಣಿಯರ್
ಕಲಭ ಮದಯಾನೆಯರ್
ಕಾಯದೆ ನಿದಾನೆಯರ್
ಕಲದೂತಗಾತ್ರೆಯರ್
ಕಂಜದಳನೇತ್ರೆಯರ್
ಕಾಸಾರಕೈತಂದರು

“ಆರುಕಾಸಿಗೆ ಎಂಥೆಂಥ ಸರಕು ಸಿಕ್ಕುತ್ತಿತ್ತು!” ಎಂದು ಇದಕ್ಕೆ ಅರ್ಥ ಹೇಳುತ್ತಿದ್ದರು. ಹೀಗೆಯೇ ರಾಜಶೇಖರ ವಿಲಾಸದಲ್ಲಿ “ಎಮಿಯಂತಂಬರದಂತೆ ಹಂಸನಿಲಯಂ” – ಇಂಥ ಪದ್ಯಗಳ ಶಬ್ದಾಲಂಕಾರ ಸ್ವಾರಸ್ಯಗಳಿಂದ ಸಂತೋಷಿಸುತ್ತಿದ್ದರು. ಒಟ್ಟಿನ ಮೇಲೆ ಅದು ವಿದ್ವದ್‌ರಸಿಕತೆ. ಈ ಲಕ್ಷಣ ಆಗಿನ ಸುಸಂಸ್ಕೃತ ವರ್ಗದಲ್ಲಿ ಸಾಮಾನ್ಯವಾಗಿದ್ದದ್ದು. ಇದು ನಮ್ಮ ಮನೆಯ ವಿಶೇಷವೇನೂ ಅಲ್ಲ. ಆ ಕಾಲದಲ್ಲಿ ನಮ್ಮ ದೇಶದಲ್ಲಿ ಎಲ್ಲ ದೊಡ್ಡ ಊರುಗಳಲ್ಲಿಯೂ ಮೇಲ್ದರ್ಜೆಯ ಜನದಲ್ಲಿ ಇಂಥ ರಸಾಭಿರುಚಿ ಸರ್ವ ಸಾಮಾನ್ಯವಾಗಿತ್ತು.

ಶೇಷಗಿರಿಯಪ್ಪನವರು ಬರಿಯ ಲಾಯರು. ಕಾನೂನುಗಂಟುಗಳನ್ನು ಹಾಕಿ ಅದರಿಂದ ಕಾಸುಗಿಟ್ಟಿಸುತ್ತಿದ್ದದ್ದಷ್ಟೇ ಅವರ ದೊಡ್ಡತನ ಅಲ್ಲ ಎಂಬುದನ್ನು ತೋರಿಸುವುದಕ್ಕಾಗಿ ಮೇಲಿನ ಸಂಗತಿಗಳನ್ನು ಉದಾಹರಿಸಿದೆ.

ಇಂಡೆಕ್ಸ್

ಒಂದಾನೊಂದು ಋಷಿಪಂಚಮಿ ಪೂಜೆಯ ಕಾಲದಲ್ಲಿ ವ್ರತಕಥೆಯನ್ನು ಓದುವ ವೇಳೆ ಬಂದಾಗ 'ವ್ರತಕಲ್ಪವಲ್ಲಿ' ಪುಸ್ತಕದಿಂದ ಆ ಕಥೆಯನ್ನೋದತಕ್ಕದ್ದೆಂದು ವೆಂಕಟರಾಮಭಟ್ಟರು ಅವರ ಶಿಷ್ಯ ಸೂರಪ್ಪ ಎಂಬಾತನಿಗೆ ಹೇಳಿ ಹತ್ತು ನಿಮಿಷ ಬೇರೆ ಕೆಲಸಕ್ಕಾಗಿ ಹೋದರು. ಸೂರಪಂಡಿತನಿಗೆ ಅದು ಹೊಸ ಸಂಗತಿ. ವ್ರತವಿಧಾನವೆಲ್ಲಿ, ಕಥೆಯಲ್ಲಿ ಎಂದು ಆತನಿಗೆ ತಿಳಿಯಲಿಲ್ಲ. ಪಕ್ಕದಲ್ಲಿದ್ದವರನ್ನು ಕೇಳಿ ತಿಣುಕಾಡುತ್ತಿದ್ದ. ಶೇಷಗಿರಿಯಪ್ಪನವರು "ಇಂಡೆಕ್ಸ್ ನೋಡಿ" ಎಂದರು. ಇಂಡೆಕ್ಸ್ ಎಂಬುದು ಇಂಗ್ಲಿಷ್ ಮಾತು: ಅಲ್ಲಿದ್ದವರಾರಿಗೂ ತಿಳಿದದ್ದಲ್ಲ. ಇಷ್ಟು ಹೊತ್ತಿಗೆ ವೆಂಕಟರಾಮಭಟ್ಟರು ಬಂದರು. ಅವರು ಕೇಳಿದರು: (ತೆಲುಗಿನಲ್ಲಿ) "ಅದೇನು ಚೇಚಣ್ಣಾ ಹಾಗಂದರೆ?"

ಶೇ: "ಇಂಡೆಕ್ಸ್ ಅಂದರೆ ಯಾವ ಯಾವ ವಿಷಯ ಎಲ್ಲೆಲ್ಲಿವೆ ಎಂಬ ಪಟ್ಟಿ. ನಾವು ಕೇಸುಗಳನ್ನು ಹುಡುಕುವುದು ಹಾಗೆ."

ಎಲ್ಲರೂ ನಕ್ಕರು– "ನಮ್ಮ ವ್ರತ ಏನು ಮೊಕದ್ದಮೆಯಾಯಿತೆ!" –ಎಂದು.

***

ಶೇಷಗಿರಿಯಪ್ಪನವರಿಗೆ ಒಟ್ಟಿನ ಮೇಲೆ ಕಷ್ಟ ಸಹಿಸುವ ಶಕ್ತಿ ಬಹಳ ಕೊಂಚವಾಗಿತ್ತೆನಿಸುತ್ತದೆ. ಕಷ್ಟವನ್ನು ನೋಡಿ ತಡೆಯಲಾರರು. ಅವರಿಗೆ ಸಂಗೀತಸಾಹಿತ್ಯಗಳಲ್ಲಿ ತುಂಬ ಅಭಿರುಚಿ. ಅವರು ಕುಳಿತಿದ್ದ ಕಡೆ ಹೂ ಗಂಧ ಊದುಬತ್ತಿ ಯಥೇಚ್ಛವಾಗಿರಬೇಕು. ಎಲ್ಲರೂ ಹಸನ್ಮುಖದಿಂದಿರಬೇಕು.

ಅವರಿಗೆ ಖರ್ಚಿನ ಲೆಕ್ಕ ಇರಲಿಲ್ಲ. ಇದೇ ಅವರ ದೌರ್ಬಲ್ಯ.

ಮುಳುಬಾಗಲಿನಲ್ಲಿದ್ದ ಸಂಸಾರ-ಎಂದರೆ ತಮ್ಮ ತಮ್ಮಂದಿರ ಮಕ್ಕಳು, ಅಳಿಯಂದಿರು, ಬಂಧುಗಳು–ಹೀಗೆ ಕುಟುಂಬ ವಿಸ್ತಾರವಾಗಿತ್ತು. ಇಷ್ಟೆಲ್ಲಕ್ಕೂ ಅವರು ಬಟ್ಟೆ ಬರೆಗಳನ್ನೊದಗಿಸುತ್ತಿದ್ದರು. ಮನೆಯಲ್ಲಿ ಆಗಾಗ ನಡೆಯುತ್ತಿದ್ದ ಹೆರಿಗೆ ಬಾಣಂತನಗಳಿಗೂ ಮದುವೆ ಮುಂಜಿಗಳಿಗೂ ಉಡುಗೊರೆ ಮೊದಲಾದ ಬಂಧುಮರ್ಯಾದೆಗಳಿಗೂ ಕೋಲಾರದಿಂದಲೇ ಸರಬರಾಜು ಬರುತ್ತಿತ್ತು.

ರಾಮಾಸಾನಿ

ಈಗ ರಾಮಾಸಾನಿಯನ್ನು ಕುರಿತು ಒಂದು ಮಾತನ್ನು ಹೇಳುವುದು ಉಚಿತವೂ ಹೌದು, ಆವಶ್ಯಕವೂ ಹೌದು. ಹಿಂದೆ ಆಕೆಯನ್ನು ಸ್ಮರಿಸುವಾಗ "ಉಪಪತ್ನಿ" ಎಂದೆ. ಅದು ಉದ್ದೇಶಪೂರ್ವಕವಾಗಿ ನಾನು ಆಡಿದ ಮಾತು. ಪತ್ನಿ ಯಾವ ನಿಯಮನಿಷ್ಠೆಗಳಿಂದ ಇರಬೇಕಾದದ್ದೋ ಅಂಥ ನಿಯಮನಿಷ್ಠೆ ಇದ್ದಾಕೆ ರಾಮಾಸಾನಿ.

ನಮ್ಮ ಮನೆಯ ಜನ-ನನ್ನ ಚಿಕ್ಕತಾತ ಶೀನಣ್ಣನವರ ಹೊರತು-ಆಕೆಯನ್ನು ಆ ಮನೆಯವಳೇ ಎಂದು ಅಂಗೀಕರಿಸಿದ್ದರು.

ಒಂದು ಸಾರಿ ಕೋಲಾರದಿಂದ ಒಬ್ಬ ಸ್ನೇಹಿತರು ನನ್ನ ಮನೆಗೆ ಬಂದಿದ್ದಾಗ ನನ್ನ ಕೋಣೆಯೊಳಕ್ಕೆ ಬಂದು,

"ಏಮಯ್ಯಾ, ಮೀ ಮ್ಯಾನತ್ತನು ಚೂಶೇ ದಾನಿಕಿ ವಚ್ಚೇಲೇದಾ?" (ನಿನ್ನ ಅತ್ತೆಯನ್ನು ನೋಡಲು ಬರುವುದಿಲ್ಲವೇ?)

–ಎಂದರು. ಆ ವೇಳೆಯಲ್ಲಿ ನನ್ನ ಕೋಣೆಯ ಮುಂದುಗಡೆ ಕುಳಿತಿದ್ದ ನನ್ನ ತಂದೆಗೆ ಈ ಮಾತು ಕೇಳಿಸಿತು. ಮನೆಗೆ ಬಂದಿದ್ದವರು. "ಓಹೋ, ವೆಂಕಟರಮಣಪ್ಪ–ನೀಕು ತೆಲೀದೇಮೊ!"

–ಎಂದು ಹಾಸ್ಯಮಾಡಿದರು. ನಮ್ಮ ತಂದೆಗೆ ಖಾಸಾ ಅಕ್ಕನಾಗಲಿ, ತಂಗಿಯಾಗಲಿ ಇರಲಿಲ್ಲ. ಆದದ್ದರಿಂದ ನನಗೆ ಯಾರು ಸೋದರತ್ತೆ ಕೋಲಾರದಲ್ಲಿ?

ಇದಾದ ಐದಾರು ದಿವಸಗಳ ಮೇಲೆ ಒಂದು ದಿನ ರಾತ್ರಿ, ಸುಮಾರು ೮ ಘಂಟೆ. ನನ್ನ ತಂದೆ ಹಾಸಿಗೆಯ ಮೇಲೆ ಮಲಗಿದ್ದರು. ಸಾಮಾನ್ಯವಾಗಿ ಅವರು ಮಲಗುವ ಹೊತ್ತಲ್ಲ. ೧೦ ಘಂಟೆಗೆ ಮುಂಚೆ ಅವರು ಮಲಗುತ್ತಿರಲಿಲ್ಲ. ಆ ದಿನ ಮೈಗೆ ಏನೋ ಆಲಸ್ಯವಾಗಿದ್ದದ್ದರಿಂದ ಮಲಗಿಕೊಂಡಿರಬೇಕು–ಎಂದು ನಾನು ಊಹಿಸಿ ವಿಚಾರಿಸಲು ಹತ್ತಿರ ಕುಳಿತೆ. ಆಗ ಅವರು ಹೇಳಿದರು:

“ಮೊನ್ನೆ ಕೋಲಾರದಿಂದ ಬಂದಿದ್ದರಲ್ಲ–ಆತ ಎತ್ತಿದ ಪ್ರಸ್ತಾವವನ್ನು ನೀನು ಹೆಚ್ಚಿಗೆ ಮನಸ್ಸಿಗೆ ತೆಗೆದುಕೊಳ್ಳಬಾರದು. ಆತ ತಮಾಷೆಗೆ ಹಾಗೆಂದ. ಆತ ಒಳ್ಳೆಯವನು. ಅವರ ತಂದೆ ತುಂಬ ಒಳ್ಳೆಯವರು, ನಮ್ಮ ಮನೆಗೆ ಬೇಕಾದವರು. ಯಜಮಾನರು ತಮ್ಮ ಯೋಗಕ್ಷೇಮ ನೋಡಿಕೊಳ್ಳುವುದಕ್ಕೆ ಆಕೆಯನ್ನು ಇರಿಸಿಕೊಂಡಿದ್ದರು. ಆಕೆ ಇಲ್ಲದಿದ್ದರೆ ಅವರ ದೇಹವನ್ನು ನೋಡುವವರಾರು? ಆಕೆ ಭಕ್ತಿ ಶ್ರದ್ಧೆಗಳಿಂದ ಯಜಮಾನರನ್ನು ನೋಡಿಕೊಂಡಳು. ಅವರಿಂದ ನಮ್ಮ ಸಂಸಾರ ಬೆಳೆಯಿತು. ಹೀಗೆ ಆಕೆ ನಮ್ಮ ಗೌರವಕ್ಕೆ ಅರ್ಹರಾದಳು. ಮಿಕ್ಕದ್ದು ಅಲ್ಪ ವಿಚಾರ; ಅದಕ್ಕೆ ನಾವು ಮನಸ್ಸು ಕೊಡತಕ್ಕದ್ದಲ್ಲ.”

ನನ್ನ ಚೌಲಕರ್ಮ

ನಾವು ತಿರುಪತಿಯ ಒಕ್ಕಲು. ನನಗೆ ಹುಟ್ಟುಕೂದಲನ್ನು ತಿರುಪತಿಯಲ್ಲಿ ತೆಗೆಯಿಸಿ ಸ್ವಾಮಿಗೆ ಅರ್ಪಿಸುವುದಾಗಿ ಹರಕೆಮಾಡಿಕೊಂಡಿದ್ದರು. ಆ ಹರಕೆಯಂತೆ ನನ್ನ ಮನೆಯಲ್ಲಿ ಎಲ್ಲರೂ ಯಾತ್ರೆ ಬೆಳಸಿದರು–ನನ್ನ ತಾತಂದಿರು ಶೇಷಗಿರಿಯಪ್ಪನವರ ಮತ್ತು ರಾಮಣ್ಣನವರ ವಿನಾ. ಅವರಿಬ್ಬರು ಮನೆಯ ಕಾವಲಿಗೆ ಉಳಿದುಕೊಂಡಿದ್ದರು. ಇನ್ನೊಬ್ಬ ಚಿಕ್ಕತಾತ ಶೀನಪ್ಪನವರು ಜೊತೆಯಲ್ಲಿ ಬಂದಿದ್ದರು. ಆಗ ಒಂದು ಪ್ರಸಂಗ ನಡೆಯಿತು. ನನ್ನನ್ನು ಬೆಟ್ಟದ ಮೇಲಕ್ಕೆ ಹೊತ್ತವರು ಅಡಿಯಿಂದ ಗುಡಿಯವರೆಗೂ ರಾಮಾಸಾನಿ. ಆಕೆ ಈ ಭಾರವನ್ನು ಇನ್ನು ಯಾರ ಕೈಗೂ ಕೊಡಲು ಒಪ್ಪಲಿಲ್ಲ. ಹೀಗೆ ಆಕೆ ಬೆಟ್ಟಹತ್ತುತ್ತಿದ್ದಾಗ ನನ್ನ ಕೈಯಿಂದ ಏನೋ ಚೇಷ್ಟೆ ನಡೆಯಿತು. ನಾನು ಕೈಯಲ್ಲಿ ಹಿಡಿದಿದ್ದ ಕಟ್ಟಿಗೆಯಿಂದ ಮರವನ್ನೋ ಗುಡ್ಡವನ್ನೋ ಹೊಡೆಯಬೇಕೆಂದು ಕಟ್ಟಿಗೆ ಬೀಸಿದಾಗ ಅದು ರಾಮಕ್ಕನ ಕೈ ಬಳೆಯ ಮೇಲೆ ಬಿತ್ತು. ಬಳೆ ಚೂರುಚೂರಾಯಿತು. ಆಕೆ ಬಹು ದುಃಖ. ನನ್ನ ಜೊತೆಯಲ್ಲಿದ್ದ ಶೀನಣ್ಣನವರಿಗೆ ಬಹು ಸಮಾಧಾನ. 'ಇವಳೇಕೆ ಬೆಟ್ಟಕ್ಕೆ?' ಎಂದು ಮೊದಲಾಗಿ ಆಡುತ್ತಿದ್ದರು. ಶೀನಪ್ಪನು ನನಗೆ ಹೇಳಿ ಕೈಯಿಂದ ತನ್ನ ಬಳೆ ಒಡೆಯಿಸಿರಬೇಕೆಂದು ರಾಮಕ್ಕನ ಕಲ್ಪನೆ.

ಹೀಗೆ ಯಾತ್ರಿಕ ಸಮೂಹದಲ್ಲಿ ಎರಡು ಕಕ್ಷಿಯಾಯಿತು. ಈ ಎರಡಕ್ಕೂ ನಡುವೆ ನನ್ನ ತಂದೆ ಮಾತನಾಡುವ ಹಾಗಿಲ್ಲ. ಒಂದು ಕಡೆ ತಂದೆಯ ಚಿಲ್ಲರೆ ಕುಟುಂಬ. ಇನ್ನೊಂದು ಕಡೆ ಸಾಕ್ಷಾತ್ ಚಿಕ್ಕಪ್ಪ. ನನ್ನ ತಾಯಿಯಂತೂ ಇಂಥ ವಿಚಾರದಲ್ಲಿ ಲೆಕ್ಕಕ್ಕೇ ಇಲ್ಲ. ಆಕೆಯ ಅಣ್ಣ ನನ್ನ ಸೋದರಮಾವನೂ ಅಷ್ಟೇ. ಇನ್ನು ಮಿಕ್ಕಾಕೆ ನನ್ನ ತಾಯಿಯ ತಾಯಿ ಮುದುಕಿ; ಜೀವನದಲ್ಲಿ ಅತಿ ದುಸ್ಸಹವಾದ ಕಷ್ಟಗಳನ್ನು ಅನುಭವಿಸಿ, ಮಗಳ ಮೂಲಕವಾದರೂ ಸಂತೋಷ ಕಂಡೇನೆ–ಎಂದು ಹಂಬಲಿಸುತ್ತಿದ್ದವಳು. ಆಕೆಯ ಹತ್ತಿರ ರಾಮಕ್ಕ ತನ್ನ ಅಂತರಂಗವನ್ನು ತೋಡಿಕೊಂಡಳು. ಮುದುಕಿ ತಾಳ್ಮೆಯುಂಟಾದವಳು. ಭಗವದ್ಭಕ್ತಿಯೊಂದೇ ಜೀವನವಾಗಿದ್ದವಳು; ಆಕೆ ಒಳ್ಳೆಯ ಮಾತನಾಡಿ ಸಮಜಾಯಿಷಿ ಮಾಡಿದಳು.

ಒಂದು ಅಸಮಾಧಾನ

ಶೇಷಗಿರಿಯಪ್ಪನವರು ಕಡೆಯ ಸಾರಿ ಮುಳುಬಾಗಲಿಗೆ ಬರುವುದಕ್ಕೆ ಮುಂಚೆ, ಅವರ ಕಸಬು ಚೆನ್ನಾಗಿ ನಡೆಯುತ್ತಿದ್ದ ಕಾಲದಲ್ಲಿ ತಾವು ವಾಸವಾಗಿದ್ದ ಮನೆಯ ಹಿಂದಿನ ಬೀದಿಯಲ್ಲಿ ಸೊಗಸಾಗಿ ಕಟ್ಟಿದ್ದ ಒಂದು ದೊಡ್ಡ ಗಾರೆಮನೆಯನ್ನು ಕೊಂಡು, ಅದನ್ನು ರಾಮಾಸಾನಿಯ ಹೆಸರಿಗೆ ಮಾಡಿಸಿದರು. ಅಷ್ಟೇ ಅಲ್ಲದೆ ಬೇರೊಂದು ಕಡೆ ತಾವೇ ಖುದ್ದು ನಿಂತು ಆಕೆಗಾಗಿಯೇ ಇನ್ನೊಂದು ಮನೆಯನ್ನು ಕಟ್ಟಿಸಿದರು. ಈ ಮನೆಯು ವಾಸಕ್ಕೆ; ಇನ್ನೊಂದು ಮನೆ ಜೀವನಕ್ಕೆ, ಬಾಡಿಗೆಗಾಗಿ.

ಈ ಮನೆಗಳ ವ್ಯಾಪಾರದ ವರ್ತಮಾನ ಹೇಗೋ ಮುಳುಬಾಗಲಿಗೆ ಪ್ರಯಾಣ ಮಾಡಿ ಬಂತು. ಆ ಸಮಯದಲ್ಲಿ ಶೀನಪ್ಪನವರು ಮನೆಯಲ್ಲಿದ್ದರು. ಆಗ ಎದ್ದ ಹಾಹಾಕಾರವನ್ನು ನೋಡಿಯೇ ತಿಳಿಯಬೇಕು! ಎಲ್ಲರ ಮುಖಗಳೂ ಬಾಂಡಲಿಯಲ್ಲಿ ಸೀದಬೋಂಡಗಳಂತೆ ಆಗಿತ್ತು. ಯಾರನ್ನು ಮಾತನಾಡಿಸಿದರೂ ಬಿಗುವು, ನಮ್ಮ ಅಜ್ಜಿಯ ವಿನಾ. ಮಿಕ್ಕ ಹೆಂಗಸರಲ್ಲಿ ಗೊಳಗೊಳ, ಬುಸಬುಸ. “ಊರಿನಲ್ಲಿ ಎಲ್ಲರಿಗೂ ಆಗುತ್ತದೆ. ಮನೆಗೆ ಆಗುವುದಿಲ್ಲ ಉಪಕಾರ” –ಇದು ಆ ಗದ್ದಲದ ಸಂಗ್ರಹ.

ಸಮಾಧಾನ

ಶೇಷಗಿರಿಯಪ್ಪನವರು ಮನುಷ್ಯಸ್ವಭಾವವನ್ನು ಕಾಣದವರಲ್ಲ. ತಮ್ಮ ಮನೆಯಲ್ಲಿ ಹೀಗೆ ಹಾಹಾಕಾರ ಎದ್ದಿದೆಯೆಂಬುದನ್ನು ಊಹಿಸಿಕೊಂಡಿದ್ದರು. ಆ ತರುಣದಲ್ಲಿಯೇ ಅವರು ಎರಡು ಚಿನ್ನದ ಒಡವೆಗಳನ್ನು ಮಾಡಿಸಿ (ಅಥವಾ ಕೊಂಡುಕೊಂಡು) ಮುಳುಬಾಗಲಿಗೆ ಕಳಿಸಿದರು. ಒಂದು “ಜೋಮಾಲೆ” ಎಂಬ ಚಿನ್ನದ ಸರ–ತಮ್ಮ ಸೊಸೆಗಾಗಿ. ಇನ್ನೊಂದು “ಹನುಮಂತ ತಾಳೀಸರ” –ಅವರ ಮೊಮ್ಮಗನಾದ ನನಗಾಗಿ. ಇದು ಈಗ ತೀರಾ ಅಪರೂಪದ ವಸ್ತು. ಈ ಸಣ್ಣ ಸರದಲ್ಲಿ ಗೋಲಿಯಂಥ ಚಿನ್ನದ ಗುಂಡುಗಳು, ನಡುನಡುವೆ ದಪ್ಪ ಹವಳ. ಅದಾದ ಮೇಲೆ ಸುಮಾರು ಎರಡಂಗುಲ ಉದ್ದದ ಒಂದು ಚಿನ್ನದ ಕಾಯಿ. ಅದರ ಮೇಲೆ ಕೆತ್ತನೆ ಕೆಲಸ. ಇಂಥವು ಒಂದೊಂದು ಪಕ್ಕಕ್ಕೆ ಎರಡೆರಡು. ಇದಾದ ಮೇಲೆ ಪದಕವಾಗಿ ಸುಮಾರು ಒಂದೂವರೆ ಅಂಗುಲ ಚದರದ ಚಿನ್ನದ ತಗಡು. ಅದರ ಮೇಲೆ ಶ್ರೀಮದಾಂಜನೇಯ ಮೂರ್ತಿಯ ವಿಗ್ರಹ. ಅದರಲ್ಲಿ ಶ್ರೀಮದಾಂಜನೇಯಸ್ವಾಮಿಯು ದುಷ್ಟದಂಡನೆಗಾಗಿ ಬಾಹುವನ್ನೆತ್ತಿ ನಿಂತಿದ್ದಾನೆ–ಮುಳುಬಾಗಲು ಆಂಜನೇಯನಂತೆ.

ಈ ಎರಡು ಒಡವೆಗಳನ್ನು ನೋಡಿದ ಮೇಲೆ ಹಾಹಾಕಾರ ಅಣಗಿತು. ಎಲ್ಲರ ಮುಖಗಳೂ ಗುಲಾಬಿಯೋಪಾದಿಯಲ್ಲಿ ಅರಳಿದವು. ನಾನು ಆ ಹನುಮಂತತಾಳಿಯನ್ನು ಧರಿಸಿ ಹಿಗ್ಗುತ್ತಿದ್ದೆ–ಕೆಲವು ವರ್ಷ.

ನನ್ನ ಮಾತಾಮಹಿ

ನನ್ನ ತಾತಂದಿರ ಗುಣಗಳಲ್ಲಿ ಅತ್ಯಂತ ಘನವಾದದ್ದೆಂದರೆ ಅವರು ನನ್ನ ಮಾತಾಮಹಿಗೆ ತೋರುತ್ತಿದ್ದ ಭಕ್ತಿಗೌರವಗಳು. ಆಕೆಯನ್ನು ಶೇಷಗಿರಿಯಪ್ಪನವರು ಸ್ವಂತ ಅಕ್ಕನೆಂದು ಭಾವಿಸಿದ್ದರು. ನನ್ನ ಜೀವಮಾನದಲ್ಲಿ ನಾನು ಕಂಡಿರುವ ಮನುಷ್ಯವ್ಯಕ್ತಿಗಳಲ್ಲಿ ಮಹರ್ಷಿಪ್ರಾಯಳಾದವಳು ನನ್ನ ತಾಯಿಯ ತಾಯಿ ಸಾಕಮ್ಮನವರು. ಆಕೆಗೆ ರಾಮಾಯಣ, ಭಾರತಾದಿ ಸಮಸ್ತ ಪುರಾಣಗಳೂ ಹೃದಯಸ್ಥವಾಗಿದ್ದವು. ಆಕೆ ಹೇಳುತ್ತಿದ್ದ ದೇವರನಾಮಗಳೂ ನೂರಿನ್ನೂರಿರಬಹುದು. ಪದ್ಯಗಳು ನೂರಿನ್ನೂರು. ಆಕೆ ಸಹಿಸಿದ ಕಷ್ಟಗಳನ್ನಂತೂ ಕಣ್ಣು ಒದ್ದೆಯಾಗದೆ ವರ್ಣಿಸಲಾಗದು. ಎಲ್ಲ ಕಷ್ಟಗಳನ್ನೂ ಸಹಿಸಿ ಭಗವದ್ಗೀತೆ ಎಲ್ಲಕ್ಕಿಂತ ಮೇಲಿನದೆಂದು ನಂಬಿ ಪರೋಪಕಾರ, ಸಾಧು ಸಜ್ಜನಸೇವಾನಿರತಳಾಗಿ ಆಯುಷ್ಯವನ್ನು ಮುಗಿಸಿಕೊಂಡಾಕೆ ನನ್ನ ಅಜ್ಜಿ. ಶೇಷಗಿರಿಯಪ್ಪನವರು ಆಕೆಗೆ ಕಾಲುಮುಟ್ಟಿ ನಮಸ್ಕಾರ ಮಾಡುವರು. ತಮ್ಮ ಕಷ್ಟನಿಷ್ಠುರಗಳನ್ನು ಆಕೆಯಲ್ಲಿ ಹೇಳಿಕೊಳ್ಳುವರು. ಆಕೆಯನ್ನು ನೋಡುವುದಕ್ಕಾಗಿಯೇ ತಾವು ಮುಳುಬಾಗಲಿಗೆ ಬರುತ್ತಿರುವಂತೆ ಸ್ನೇಹಿತರಿಗೆ ಹೇಳುತ್ತಿದ್ದರು.

ಶೇಷಗಿರಿಯಪ್ಪನವರು ಹಬ್ಬ ಹರಿದಿನಗಳಿಗೆ ಬರುತ್ತಿದ್ದರೆಂದು ಮೇಲೆ ಹೇಳಿದೆ. ಈ ಸಾಮಾನ್ಯ ನಿಯಮ ಒಂದೊಂದು ಸಾರಿ ತಪ್ಪಿಹೋದರೂ ಒಂದು ವಿಶೇಷ ಸಂದರ್ಭಕ್ಕಾಗಿ ಅವರು ಬರುತ್ತಿದ್ದದ್ದು ಎಂದೂ ತಪ್ಪಲಿಲ್ಲ. ಆ ವಿಶೇಷ ಸಂದರ್ಭವೇನೆಂದರೆ ಋಷಿಪಂಚಮಿ. ಸಾಕಮ್ಮನವರು ಈ ವ್ರತವನ್ನು ಅನೇಕ ವರ್ಷ ಸಾಂಗವಾಗಿ ನಡಸಿದರು. ಆ ರಾತ್ರಿ ಹಬ್ಬದ ಸಂಭ್ರಮ. ಮನೆಯಲ್ಲಿ ಎಲ್ಲ ಕೋಣೆಗಳಲ್ಲಿಯೂ ದೀಪ; ಎಲ್ಲ ಕಡೆಯೂ ಜನ. ಬ್ರಾಹ್ಮಣರು, ಮುತ್ತೈದೆಯರು, ಮಕ್ಕಳು, ಮಡಿಹೆಂಗಸರು–ಎಲ್ಲ ಸೇರಿರುತ್ತಿದ್ದರು. ನಮ್ಮ ಗುರು ಪುರೋಹಿತರು ಎಲ್ಲಿ ಯಾವ ಕೆಲಸವಿದ್ದರೂ ಬಿಟ್ಟು ಈ ವ್ರತಕ್ಕಾಗಿ ಬರುತ್ತಿದ್ದರು. ಸುಬ್ಬಾಭಟ್ಟರು, ವೆಂಕಟನಾರಣಭಟ್ಟರು ಮೊದಲಾದವರೆಲ್ಲ ಬರುವರು. ನಾಲ್ಕು ಯಾಮದ ಪೂಜೆ ಚಾಚೂ ತಪ್ಪದೆ ನಡೆಯುವುದು. ಸೌತೇಕಾಯಿ, ಚೇಪೆಕಾಯಿ, ತೆಂಗಿನಕಾಯಿ, ಬಾಳೆಹಣ್ಣು, ಹೆಸರುಬೇಳೆ ಕೋಸಂಬರಿ–ಇವು ನೈವೇದ್ಯವಾದ ಮೇಲೆ ಬಂದಿದ್ದವರಿಗೆಲ್ಲ ವಿನಿಯೋಗ, ನಡುನಡುವೆ ಮಾತು. ಲಘುಹಾಸ್ಯ. ಅನಂತರ ವ್ರತಕಥೆ– ಈ ಸಂಭ್ರಮದಲ್ಲಿ ನಾನು ರಾತ್ರಿ ನಾಲ್ಕು ಯಾಮವೂ ಜಾಗರಣೆ ಮಾಡಿ ಸಂತೋಷಪಟ್ಟದ್ದು ಚೆನ್ನಾಗಿ ನೆನಪಿದೆ. ಷಷ್ಠಿಯ ದಿನ ಬೆಳಗ್ಗೆ ಪಾರಣೆ ಮುಗಿಸಿಕೊಂಡ ಬಳಿಕ ಶೇಷಣ್ಣನವರು

ಕೋಲಾರಕ್ಕೆ ಹಿಂತಿರುಗುವರು. ಸಾಕಮ್ಮನವರಿಗೆ ಮನಸ್ಸಮಾಧಾನ. ಆಕೆ ಹೇಳುತ್ತಿದ್ದರು: “ನನ್ನ ಅಣ್ಣ ತಮ್ಮ ಎಲ್ಲೋ ಇದ್ದಾರೆ–ದೂರದಲ್ಲಿ, ದಾರಿದ್ರ್ಯದಲ್ಲಿ. ಆದರೆ ಈ ತಮ್ಮ ನನ್ನನ್ನು ಕಾಪಾಡಿಕೊಂಡಿದ್ದಾನೆ. ಇದೇ ದೇವರು ನನಗೆ ಕೊಟ್ಟಿರುವ ಭಾಗ್ಯ” –ಎಂದು.

ಇಟ್ಟಿಲಾಪುರದ ಎಂಗಟಿಗ

ಸುಸಂಸ್ಕೃತ ಭಾಷೆಯಲ್ಲಿ ಆತ “ವಿಠಲಾಪುರದ ವೆಂಕಟಪ್ಪ”. ಕಾಪು ಜಾತಿಗೆ ಸೇರಿದವನು. ಇವನಿಗೆ ಘಾತಕ ಮನುಷ್ಯನೆಂದು ಅಪಕೀರ್ತಿ ಬಂದಿತ್ತು. ಅವನು ಎತ್ತರವಾದ ಆಳು. ಎಡಕಿವಿಯ ಮೇಲ್ಭಾಗದಲ್ಲಿ ಚಿನ್ನದ ಮುರುವನ್ನು ಧರಿಸಿದ್ದ. ಕೈಯಲ್ಲಿ ಚಿನ್ನದ ಕಪ್ಪ. ನಡುವಿನಲ್ಲಿ ಯಾವಾಗಲೂ ಒಂದು ಕತ್ತಿಯ ಹಿಡಿಕೆ ಸಿಕ್ಕಿಸಿಕೊಂಡಿದ್ದದ್ದು ಎದ್ದು ಕಾಣುತ್ತಿತ್ತು. ಉದ್ದನೆಯ ಬತಾಯಿ ಚಾಕು ಒಂದು ಆಗಾಗ ಸಾಣೆ ಹಿಡಿದು ಶುಭ್ರವಾಗಿದ್ದದ್ದನ್ನು ತೊಗಲಿನ ಅರೆಯಲ್ಲಿರಿಸಿ ಆ ಆಯುಧವನ್ನು ಸಿಕ್ಕಿಸಿಕೊಂಡಿರುತ್ತಿದ್ದ. ಅದರ ಹಿಡಿ ದಂತದ್ದು ಅಥವಾ ಕೊಂಬಿನದು. ಅದಕ್ಕೆ ಬೆಳ್ಳಿಯ ಕಟ್ಟು ಅಲಂಕಾರ ಮಾಡಿತ್ತು. ಅಂಥಾ ಚಾಕುವನ್ನು ಬಾಕು ಎಂದು ಕರೆಯುವುದೂ ಉಂಟು. ವೆಂಕಟಪ್ಪನು ಈ ಆಯುಧವನ್ನು ಯಾರ ಮೇಲೆ ಪ್ರಯೋಗಿಸಿದ್ದನ್ನೂ ಯಾರೂ ಕಂಡವರಲ್ಲ. ಅದು ಆತನಲ್ಲಿ ಇದ್ದ ಮಾತ್ರದಿಂದಲೇ ಅವನು ಎಲ್ಲರ ಕಣ್ಣಿಗೂ ಭಯಂಕರನಾಗಿಬಿಟ್ಟ.

‘ರಾಬಿನ್ ಹುಡ್’

ಇಂಗ್ಲಿಷಿನಲ್ಲಿ ರಾಬಿನ್ ಹುಡ್ ಎಂಬ ದರೋಡೆಕಾರನು ಪುರಾಣಪ್ರಸಿದ್ಧನಾಗಿದ್ದಾನೆ. ಅವನ ಪುಂಡು ಗುಂಪು ಊರೂರು ಅಲೆದಾಡಿ ಧನಿಕರ ಹಣವನ್ನು ದೋಚಿ ದರಿದ್ರರಿಗೆ ಹಂಚುತ್ತಿತ್ತಂತೆ. ನಮ್ಮ ವೆಂಕಟಪ್ಪನ ಚರ್ಯೆ ಅಂಥಾದ್ದು. ಈಗ್ಗೆ ಎಂಬತ್ತು ಎಂಬತ್ತೈದು ವರ್ಷಗಳಿಗೆ ಹಿಂದಿನ ಧಾತು–ಈಶ್ವರ ಸಂವತ್ಸರಗಳು ಆ ಸೀಮೆಯಲ್ಲಿ ತೀರ ಬರಗಾಲದ್ದು. ಜನಕ್ಕೆ ಅಕ್ಕಿ ರಾಗಿ ದೊರೆಯುವುದು ಬಹು ಕಷ್ಟವಾಗಿತ್ತು. ಬಹುಮಂದಿ ಕತ್ತಾಳೆಗಡ್ಡೆ (ಬೇಯಿಸಿದ್ದು), ಹುರಿದ ಹುಣಿಸೆಬೀಜ, ಇಂಥಾದ್ದನ್ನು ತಿಂದು ಬದುಕಿಕೊಂಡಿದ್ದರು. ಇಷ್ಟು ಮಾತ್ರವೂ ಹೊಟ್ಟೆಗಿಲ್ಲದೆ ಎಷ್ಟೋ ಮಂದಿ ಸತ್ತರು. ಆ ಕಾಲದಲ್ಲಿ ಬಂತು ವೆಂಕಟಪ್ಪನಿಗೆ ಅಪಕೀರ್ತಿ. ಭಾರಿ ಭಾರಿ ರೈತರು ಯಾರು ಯಾರು ದವಸಗಳನ್ನು ನೆಲ ಹಗೇವುಗಳಲ್ಲಿ ಬಚ್ಚಿಟ್ಟುಕೊಂಡಿದ್ದರೋ ಅಂಥವರ ಮನೆಗೆ ವೆಂಕಟಪ್ಪ ಜನರನ್ನು ಕರೆದುಕೊಂಡು ಹೋಗಿ “ಕೊಡು ಇವನಿಗೆ ಎರಡು ಕೊಳಗ ರಾಗಿ”, “ಕೊಡು ಅವನಿಗೆ ಒಂದು ಕೊಳಗ ಅಕ್ಕಿ” ಎಂದು ಹುಕುಂ ಮಾಡುತ್ತಿದ್ದ. ಮಾಲೀಕನು ಅಷ್ಟು ಕೊಡುವುದಕ್ಕಾಗುವುದಿಲ್ಲ ಎಂದರೆ, “ಹಗೇವನ್ನು ತೆಗೆಸಿ ನೋಡುತ್ತೇನೆ” ಎಂದು ಜವಾಬು ಹೇಳುತ್ತಿದ್ದ. ಮಾಲೀಕನು ಅದಕ್ಕೂ ಸಗ್ಗದೆ ತಕರಾರು ಮಾಡುತ್ತಿದ್ದರೆ ವೆಂಕಟಪ್ಪ ನಡುವಿನಲ್ಲಿದ್ದ ಬಾಕುವಿನ ಕಡೆ ತನ್ನ ಕಣ್ಣು ತಿರುಗಿಸುತ್ತಿದ್ದ. ಒಂದೊಂದು ವೇಳೆ ಬಾಕುವಿನ ಹಿಡಿಕೆಯ ಕಡೆಗೆ ಕೈ ಹೋದದ್ದೂ ಉಂಟು. ಆದರೆ ಆಯುಧವನ್ನು ಹೊರಕ್ಕೆ ಎಳೆದದ್ದಿಲ್ಲ. ಅಷ್ಟಕ್ಕೆ ಮುಂಚೆಯೇ ಬಡವನಿಗೆ ಧಾನ್ಯ ಸಿಕ್ಕುತ್ತಿತ್ತು. ಬಡವರೇನೋ ಕೃತಜ್ಞರಾಗಿದ್ದರು; ನಿರ್ಬಂಧ ಭಿಕ್ಷೆ ಕೊಟ್ಟ ದಾತೃಗಳು ಅಷ್ಟು ದೊಡ್ಡತನ ತೋರಲಿಲ್ಲ.

ಒಂದು ಸಂದರ್ಭದಲ್ಲಿ ಆ ಸುತ್ತುಮುತ್ತಣ ಗ್ರಾಮಗಳಲ್ಲಿ ಯಾವುದೋ ಖೂನಿ ಆಯಿತು. ಇಟ್ಟೆಲಾಪುರದ ಎಂಗಟಿಗನು ಅದಕ್ಕೆ ಕಾರಣವೆಂದು ದೂರು ಹೊತ್ತಿತು. ಪೊಲೀಸಿನವರು ಅವನನ್ನು ಹಿಡಿದುಕೊಂಡು ಹೋದರು. ಮೊಕದ್ದಮೆ ಆಯಿತು. ಲಾಯರು ಶೇಷಗಿರಿಯಪ್ಪನವರು ಎಂಗಟಿಗನ ಪರವಾಗಿ ನಿಲ್ಲಲು ಒಪ್ಪಿಕೊಂಡರು. ವಿಚಾರಣೆಯ ದಿವಸ ಕೋರ್ಟು ಭರ್ತಿ. ಸರ್ಕಾರದ ಪಕ್ಷದ ಪೋಲೀಸ್ ಲಾಯರು ಖೂನಿ ಸಂಗತಿಯ ವಿವರಗಳನ್ನು ಹೇಳಿ, ಎಂಗಟಿಗನ ಹೊರತು ಇನ್ನಾರೂ ಅದನ್ನು ಮಾಡಿರಲಾರರು ಎಂದು ಸಿದ್ಧಾಂತಪಡಿಸಿ ಅವನು ಬಾಕು ಧರಿಸಿರುವುದೇ ಅದಕ್ಕೆ ರುಜುವಾತು ಎಂದರು. ಶೇಷಗಿರಿಯಪ್ಪನವರು ಎದ್ದು ನಿಂತು ಸವಾಲು ಹಾಕಿದರು, ಎಂಗಟಿಗನಿಗೆ.

ಸವಾಲು–ಜವಾಬು

ಪ್ರ– “ನೀನು ಈ ಖೂನಿ ಮಾಡಿದ್ದು ಉಂಟೋ?”

ಉ– “ನನಗೂ ಅದಕ್ಕೂ ಸಂಬಂಧವೇ ಇಲ್ಲ ಸ್ವಾಮಿ.”

ಪ್ರ– “ನೀನು ಯಾರಿಂದಲಾದರೂ ಮಾಡಿಸಿದ್ದು ಉಂಟೋ?”

ಉ– “ಯಾರು ಮಾಡಿದರೋ ನನಗೆ ತಿಳಿಯದು ಸ್ವಾಮಿ.”

ಪ್ರ– “ಆ ಖೂನಿ ನಡೆದ ದಿವಸ ನೀನು ಅಲ್ಲಿ ಇದ್ದೆಯಾ?”

ಉ– “ನಾನು ಆ ಹೊತ್ತು ಆ ಊರಿನಲ್ಲಿಯೇ ಇರಲಿಲ್ಲ ಸ್ವಾಮಿ, ಕೊಕ್ಕನೂರತಾವ ಹೋಗಿದ್ದೆ, ನೆಂಟರ ಮನೆಗೆ. ಬೇಕಾದರೆ ವಿಚಾರಿಸಿಕೊಳ್ಳಿ.”

ಪ್ರ– “ಒಳ್ಳೆಯದು. ಆ ಕೊಲೆಯಾದ ಮನುಷ್ಯ ನಿನಗೆ ತಿಳಿಯೋದೋ?”

ಉ– “ಚೆನ್ನಾಗಿ ಬಲ್ಲೆ ಸ್ವಾಮಿ, ಗಿಡ್ಡಪ್ಪನನ್ನ ನಾನು ಕಾಣೆನಾ?”

ಪ್ರ– “ಅವನಿಗೂ ನಿನಗೂ ಏನಾದರೂ ಜಿದ್ದಿತ್ತೋ?”

ಉ– “ನನಗ್ಯಾಕೆ ಸ್ವಾಮಿ ಅವರ ಮೇಲೆ ಜಿದ್ದು? ಕಾರಣಾನೇ ಇಲ್ಲ.”

ಪ್ರ– “ನಿನ್ನ ಗುಮಾನಿ ಯಾರ ಮೇಲಾದರೂ ಉಂಟೋ?”

ಉ– “ಅವನ ವ್ಯವಹಾರ ತುಂಬಾ ಇತ್ತು. ನಾನು ಯಾರ ಮೇಲೆ ಗುಮಾನಿ ಹೇಳಲಿ?”

ವಿಚಾರಣೆ ಮುಗಿದ ಮೇಲೆ ಶೇಷಗಿರಿಯಪ್ಪನವರು ಕೋರ್ಟನ್ನು ಕುರಿತು ಹೀಗೆ ಅರಿಕೆ ಮಾಡಿದರು-

“ಸ್ವಾಮಿ, ಈ ಅಪರಾಧಿಗೆ ಆಗದವರು ಈ ಪ್ರಾಂತದಲ್ಲಿ ಕೆಲಮಂದಿ ಇದ್ದಾರೆ. ಅವರು ಅನುಕೂಲಸ್ಥರು, ಅವರವರ ಗ್ರಾಮಗಳಲ್ಲಿ ಪ್ರಬಲರು. ಈ ಅಪರಾಧಿಸ್ಥಾನದಲ್ಲಿರುವ ವೆಂಕಟನು ಕ್ಷಾಮಕಾಲದಲ್ಲಿ ಹೊಟ್ಟೆಗಿಲ್ಲದ ಬಡಜನರಿಗೆ ಧಾನ್ಯ ಸಹಾಯ

ಮಾಡಬೇಕೆಂದು ಹೊರಟು ಅದಕ್ಕಾಗಿ ದವಸ ಧಾನ್ಯ ಕೊಡಬೇಕೆಂದು ಅನುಕೂಲಸ್ಥರನ್ನು ಒತ್ತಯಪಡಿಸಿದ್ದುಂಟು. ಅವನ ಒತ್ತಾಯಕ್ಕೆ ಹೆದರಿಯೋ, ಇಲ್ಲ ದಾಕ್ಷಿಣ್ಯಕ್ಕೋ, ಇಲ್ಲ ಭೂತ ದಯೆಯಿಂದಲೋ ಕೆಲವರು ದವಸ ಧಾನ್ಯ ಕೊಟ್ಟಿದ್ದುಂಟು. ಆದರೆ ಅವರಲ್ಲಿ ಕೆಲವರು ವೆಂಕಟಪ್ಪನು ಹೆದರಿಸುವ ಮಾತಾಡಿದ್ದನ್ನು ಮರೆತಿಲ್ಲ. ಇಂಥಾ ದಿಟ್ಟ ಮನುಷ್ಯನಿಂದ ತಮಗೆ ಎಂದಾದರೂ ಅಪಾಯವಾದೀತೆಂದು ಭಾವಿಸಿ ಇವನನ್ನು ಬಂದೀಖಾನೆಗೆ ಸಾಗಿಸತಕ್ಕದೆಂದು ಯೋಚನೆ ಮಾಡಿಕೊಂಡಿರುವಂತೆ ಕಾಣುತ್ತದೆ. ಅಂಥವರ ಮಾತನ್ನು ಕೇಳಿ ಪೋಲೀಸಿನವರು ಇವನನ್ನು ಹಿಡಿದು ತಂದಿದ್ದಾರೆ. ಅವನು ಬಾಕು ಧರಿಸಿರುವ ಕಾರಣದಿಂದ ಕೊಲೆ ಮಾಡಿದನೆಂದು ನಿಶ್ಚಯ ಮಾಡುವ ಹಾಗಾದರೆ ಪೊಲೀಸ್ ಅಧಿಕಾರಿಗೆ ಬಾಯಲ್ಲಿ ಹಲ್ಲಿರುವ ಕಾರಣದಿಂದ ಆತ ಎಲ್ಲರನ್ನೂ ಕಚ್ಚಿ ಕಚ್ಚಿ ತಿಂದು ಹಾಕುತ್ತಿರುವನೆಂದು ಹೇಳುವುದೂ ಯುಕ್ತವೆನ್ನಿಸಬೇಕು! ಇದೆಲ್ಲ ಅತಿವಾದ. ವೆಂಕಟಪ್ಪ ಏನೋ ಒಂದು ಷೋಕಿಗೆ ಒಂದು ಶೂರತನದ ಲಾಂಛನವಾಗಿ ಬಾಕು ಧರಿಸಿದ್ದಾನೆಯೇ ಹೊರತು, ಅವನು ಆ ಬಾಕುವನ್ನು ಜನರ ಮೇಲೆ ಉಪಯೋಗಿಸಿದ್ದಕ್ಕೆ ಯಾವ ರುಜುವಾತೂ ಇಲ್ಲ."

ಹೀಗೆ ಹೇಳಿ, "ವೆಂಕಟಪ್ಪ, ನಿನ್ನ ಬಾಕುವನ್ನು ಹೊರಕ್ಕೆ ತೆಗೆದು ಕೋರ್ಟಿಗೆ ತೋರಿಸು" ಎಂದರು. ಆ ಬಾಕು, ಪೋಲೀಸಿನವರ ಮೂಲಕ ಕೋರ್ಟಿಗೆ ಬಂದಿತ್ತು. ಕೋರ್ಟಿನ ಅಪ್ಪಣೆಯಂತೆ, ವೆಂಗಟಿಗನು ಬಾಕುವನ್ನು ಒರೆಯಿಂದ ಹೊರಕ್ಕೆಳೆದ. ಎರಡು, ಮೂರು ತಿಂಗಳು ಅದು ಮಸೆಯದೆ ಒರೆಯಲ್ಲಿದ್ದುದರಿಂದ ಅದರ ಹೊಳಪು ಹೋಗಿತ್ತು, "ಅದರ ಮೇಲೆ ಏನಾದರೂ ರಕ್ತದ ಕಲೆಯಿದೆಯೇ ಕೋರ್ಟು ನೋಡೋಣವಾಗಲಿ" ಎಂದರು ಲಾಯರು. ಮ್ಯಾಜಿಸ್ಟ್ರೇಟರು ಬಾಕುವನ್ನು ಸವರಿ ನೋಡಿ "ಮೊಂಡು ಕತ್ತಿ ಇದು" ಎಂದು ಹೇಳಿ ಅದನ್ನು ಒರೆಯಲ್ಲಿಟ್ಟುಬಿಟ್ಟರು. ಕಡೆಗೆ ತೀರ್ಮಾನ ವೆಂಕಟಪ್ಪನ ಖುಲಾಸೆ.

ಹೆಸರು ಕೆಟ್ಟದ್ದಾದರೂ, ಮನುಷ್ಯ ಕೆಟ್ಟವನಲ್ಲ. ಉದ್ದೇಶ ಒಳ್ಳೆಯದಾದರೂ, ರೀವಿ ಅದಕ್ಕೆ ಅನುಕೂಲವಾದದ್ದಲ್ಲ. ಈ ಅಭಿಪ್ರಾಯಗಳನ್ನು ಮ್ಯಾಜಿಸ್ಟ್ರೇಟರು ವ್ಯಕ್ತ ಪಡಿಸಿದ್ದರು. ವೆಂಕಟಪ್ಪ ಜಯಭೇರಿ ಹೊಡೆದುಕೊಂಡು ಹಿಂತಿರುಗಿದ.

ವೆಂಕಟಪ್ಪನ ಫೀಜು

ವೆಂಕಟಪ್ಪ ಲಾಯರುಫೀಸನ್ನು ಹಣದಲ್ಲಿ ಕೊಟ್ಟಿದ್ದನೋ ಇಲ್ಲವೋ ನನಗೆ ಗೊತ್ತಿಲ್ಲ. ಅವನು ತನ್ನ ಕೃತಜ್ಞತೆಯನ್ನು ತನ್ನ ಲಾಯರಿಗೆ ಹೇಳಲು ಬಂದಾಗ ಶೇಷಗಿರಿಯಪ್ಪನವರು ತಮ್ಮ ಮನೆಯಲ್ಲಿ ತಾಯಂದಿರಿಲ್ಲದ ಎಳೆಯ ಮಕ್ಕಳು ಇದ್ದಾರೆಂದೂ, ಅವರಿಗೆ ಹಾಲಿಗಾಗಿ ಒಂದು ಆಕಳನ್ನು ಕೊಟ್ಟರೆ ತಾವು ಸ್ವೀಕರಿಸಲಾಗುವುದೆಂದೂ ಹೇಳಿದರಂತೆ. ಅದರಂತೆ ವೆಂಕಟಪ್ಪನು ಒಂದು ಆಕಳನ್ನು ಕೊಟ್ಟ. ಅದಕ್ಕೆ ಶೇಷಗಿರಿಯಪ್ಪನವರು ತಮ್ಮ ತಾಯಿ ಕಾಮಾಕ್ಷಮ್ಮನ ಹೆಸರನ್ನಿಟ್ಟರು. ಆ ಆಕಳು ನಾಲ್ಕಾರು ಕರುಗಳನ್ನು ಕೊಟ್ಟಿತು. ಅಮೃತಪ್ರಾಯವಾದ ಹಾಲನ್ನೂ ಕೊಡುತ್ತಿತ್ತು. ಅವರ ಮನೆಯಲ್ಲಿ ಆಗಾಗ ಗೋದಾನದ ಪ್ರಕರಣ ಬಂದಾಗ ದಾನ ತೆಗೆದುಕೊಳ್ಳುವವರು ಕಾಮಾಕ್ಷಮ್ಮನ ಸಂತತಿಯ ಆಕಳನ್ನು ಕೊಟ್ಟರೆ ತಾವು ದಾನ ಹಿಡಿಯುವುದಾಗಿ ಹೇಳುತ್ತಿದ್ದರಂತೆ. ಕಾಮಾಕ್ಷಮ್ಮನ ಹೆಣ್ಣು ಕರುಗಳಿಗೆ ವೆಂಕಟಸುಬ್ಬಮ್ಮ, ಲಕ್ಷಮ್ಮ, ಭಾಗೀರಥಮ್ಮ ಎಂದು ಮೊದಲಾಗಿ ಹೆಸರುಗಳನ್ನಿಟ್ಟಿದ್ದರು. ಈ ಮೂರು ಹೆಸರುಗಳೂ ಶೇಷಗಿರಿಯಪ್ಪ, ಆತನ ತಮ್ಮ ರಾಮಣ್ಣ, ಆತನ ತಮ್ಮ ಶೀನಪ್ಪ–ಇವರ ಭಾರ್ಯೆಯರ ಹೆಸರುಗಳು.

ಕಡೆಯ ದೃಶ್ಯ ಹೇಳತಕ್ಕದಾಗಿದೆ. ಕಾಮಾಕ್ಷಮ್ಮನಿಗೆ ಮುಪ್ಪು ಬಂತು, ಹಲ್ಲು ಸವೆದುಹೋಗಿತ್ತು, ಹುಲ್ಲು ತಿನ್ನಲಿಕ್ಕಾಗುತ್ತಿರಲಿಲ್ಲ. ಆಗ ಮೆತ್ತಗೆ ಹಿಟ್ಟು ಮಾಡಿ ತಿನ್ನಿಸುತ್ತಿದ್ದರು. ಆ ಸ್ಥಿತಿಯೂ ಕಷ್ಟವಾಯಿತು. ಅವಸಾನಕಾಲ ಬಂತು. ಆಗ ಕೋಲಾರದಲ್ಲಿದ್ದ ಶೇಷಗಿರಿಯಪ್ಪನವರಿಗೆ ತಮ್ಮ ರಾಮಣ್ಣನವರು ಕಾಗದ ಬರೆದು, ಸಂಗತಿ ತಿಳಿಸಿದರು. ಶೇಷಗಿರಿಯಪ್ಪನವರು ಬಿಡುವು ಮಾಡಿಕೊಂಡು ಮುಳುಬಾಗಿಲಿಗೆ ಬಂದರು. ಮನೆಯ ಅಂಗಳ ವಿಸ್ತಾರವಾಗಿತ್ತು. ಅಲ್ಲಿ ಒಂದು ಸಣ್ಣ ಚಪ್ಪರ ಹಾಕಿ, ಅದರಲ್ಲಿ ಹುಲ್ಲು ಹಾಸಿ, ಅದರ ಮೇಲೆ ಕಾಮಾಕ್ಷಮ್ಮನನ್ನು ಮಲಗಿಸಿದರು.

ಮೂರು ಮಂದಿ ಅಣ್ಣ ತಮ್ಮಂದಿರೂ ಒಬ್ಬರು ತಪ್ಪ ಒಬ್ಬರು ಅದರ ಪಕ್ಕದಲ್ಲಿಯೇ ಮೈಸವರುತ್ತಾ ಇರುತ್ತಿದ್ದರು. ರಾಗಿಯ ಗಂಜಿ ಮಾಡಿ ಒಂದು ಬಿದಿರಿನ ಗೊಟ್ಟದಲ್ಲಿ ಹಾಕಿ ಅದನ್ನು ಕಾಮಾಕ್ಷಮ್ಮನಿಗೆ ಕುಡಿಸುತ್ತಿದ್ದರು. ಹೀಗೆ ಎರಡು ದಿನ ಕಳೆಯಿತು, ಮೂರನೆಯ ದಿನ ಕಾಮಾಕ್ಷಮ್ಮನು ಪಂಚತ್ವವನ್ನೈದಿದಳು. ಆಗ ಅಣ್ಣ ತಮ್ಮಂದಿರು ಮೂವರೂ, ತಮ್ಮ ಹೆತ್ತ ತಾಯಿ ಹೋದಾಗ ಅತ್ತಂತೆ ಅತ್ತರು. ತಾವೇ ಆ ಕಳೇಬರವನ್ನು ಅಂಗಳದಿಂದ ಮನೆಯ ಮುಂದಕ್ಕೆ ಸಾಗಿಸಿದರು. ಅನಂತರ ಅದನ್ನು ಹೊತ್ತುಕೊಂಡು

ಹೋಗಬೇಕಾದವರು ಹೊತ್ತುಕೊಂಡು ಹೋಗಿ, ರುದ್ರಭೂಮಿಯಲ್ಲಿ ಮಣ್ಣು ಮಾಡಿಸಿದರು. ಅಣ್ಣತಮ್ಮಂದಿರು ಸೂತಕಸ್ನಾನ ಮಾಡಿದಂತೆ ಸ್ನಾನ ಮಾಡಿದರು.

ಅಲ್ಲಿಂದ ಮೂರನೆಯ ದಿನ ಅಣ್ಣ ತಮ್ಮಂದಿರು ಮೂವರೂ ನಿಧನಸ್ಥಾನಕ್ಕೆ ಹೋಗಿ ಹಾಲೆರೆದು ಬಂದರು. ಆಮೇಲೆ ಎರಡು ಭಂಡಿ ಹುಲ್ಲು ತರಿಸಿ, ಗೋವುಗಳಿದ್ದ ಮನೆಗಳಿಗೆಲ್ಲಾ ಹಂಚಿಸಿದರು. ಮನೆಯಲ್ಲಿ ಬ್ರಾಹ್ಮಣ ಮುತ್ತೈದೆಯರಿಗೆ ಭೋಜನ ಮಾಡಿಸಿದರು. ಆಮೇಲೆ ಬಹುವರ್ಷ ಕಾಮಾಕ್ಷಮ್ಮ ಹೋದ ದಿವಸ, ಇಬ್ಬರು ಮೂವರು ಮುತ್ತೈದೆಯರಿಗೆ ಅರಿಶಿನ ಕುಂಕುಮ ಕುಪ್ಪಸದ ಕಣ ದಾನ ಕೊಡುತ್ತಿದ್ದುದು ನನಗೆ ಜ್ಞಾಪಕವಿದೆ.

ಹೊಸ ಮನೆ

ನನ್ನ ತಾತ ಕುಟುಂಬಕ್ಕಾಗಿ ಸಾಧಿಸಿದ ಬಹು ದೊಡ್ಡ ಕೆಲಸವೇನೆಂದರೆ ಮುಳುಬಾಗಿಲಿನಲ್ಲಿ ತನ್ನ ತಂದೆ ಗುಂಡಪ್ಪನವರು ಕಟ್ಟಿಸಿದ್ದ ಮನೆಗೆ ಆನಿಕೊಂಡಂತೆ ಒಂದು ದೊಡ್ಡ ಮನೆಯನ್ನು ಕಟ್ಟಿಸಿದ್ದು. ಮನೆಯ ಪೂರ್ವ ಪಶ್ಚಿಮ ದಕ್ಷಿಣ ಪಾರ್ಶ್ವಗಳಲ್ಲಿ ರಸ್ತೆಗಳು, ಉತ್ತರದ ಕಡೆ ನಮ್ಮ ಹಳೆಯ ಮನೆ. ಶೇಷಗಿರಿಯಪ್ಪನವರು ಕಟ್ಟಿಸಿದ ಮನೆ ವಿಸ್ತಾರವಾಗಿತ್ತು. ತಮಗೆ ಜಾಗ ಸಾಲದೆಂದು ಯಾರೂ ಹೇಳುವಂತಿರಲಿಲ್ಲ. ಹದಿನೈದಿಪ್ಪತ್ತು ಮಂದಿ ವಾಸವಾಗಿರಬಹುದಾಗಿದ್ದದ್ದು. ಮನೆ ಪಶ್ಚಿಮಾಭಿಮುಖ. ಮೊದಲು ಕೈಸಾಲೆ. ಅದರಲ್ಲಿ ಎರಡು ವಿಸ್ತಾರವಾದ ಜಗಲಿಗಳು. ಒಂದೊಂದು ಜಗಲಿಯ ಕೊನೆಯಲ್ಲಿಯೂ ಒಂದೊಂದು ಕೋಣೆ. ಎರಡು ಜಗಲಿಗಳ ನಡುವೆ ಹೆಬ್ಬಾಗಿಲು. ಇದರ ವಿಷಯದಲ್ಲಿ ಒಂದು ಕಥೆ ಹೇಳುತ್ತಿದ್ದರು. ಶೇಷಗಿರಿಯಪ್ಪನವರಿಗೆ ತಮ್ಮನ ಮಗ ಶಾಮಣ್ಣ ಎಂಬಾತನ ಮೇಲೆ ತುಂಬಾ ಪ್ರೀತಿ. “ಇಷ್ಟು ದೊಡ್ಡ ಬಾಗಿಲು ಏಕೆ?” ಎಂದು ಯಾರಾದರೂ ಕೇಳಿದರೆ, “ನಮ್ಮ ಶಾಮೂ ದೊಡ್ಡವನಾಗಿ ದೊಡ್ಡ ಹುದ್ದೆ ನಡಸುತ್ತಾನೆ. ಅವನು ಕುದುರೆ ಸವಾರಿ ಮಾಡಿಕೊಂಡು ಬಂದಾಗ ಕುದುರೆಯ ಮೇಲೆ ಕುಳಿತೇ ಅಂಗಳಕ್ಕೆ ಬಂದು ಇಳಿಯುವ ಹಾಗಿರಬೇಕು, ಬಾಗಿಲು” –ಎಂದು ಜವಾಬು ಹೇಳುತ್ತಿದ್ದರಂತೆ.

ಹೆಬ್ಬಾಗಿಲು ದಾಟಿದರೆ ನಡುವೆ ಉತ್ತರ ಪಾರ್ಶ್ವದಲ್ಲಿ ಒಂದು ಸಣ್ಣ ಕೋಣೆ. ಇದು ನನ್ನ ಚಿಕ್ಕತಾತಂದಿರ ಖಜಾನೆ. ಉತ್ತರದ ಕಡೆ ಕಣಜ-ಭತ್ತ ಹಾಕುತ್ತಿದ್ದದ್ದು. ಇನ್ನೂ ಮುಂದಕ್ಕೆ ನಡೆದರೆ, ಬಲಗಡೆಗೆ ಪಡಸಾಲೆ, ಎಡಗಡೆಗೆ ಅಂಗಳ. ಈ ಅಂಗಳದ ಈಶಾನ್ಯ ಮೂಲೆಯಲ್ಲಿ ವೃಂದಾವನ ಕಟ್ಟೆ. ಅದರ ಪಕ್ಕದಲ್ಲಿ ಬಚ್ಚಲಮನೆಗೆ ಹೋಗುವ ದಾರಿ. ಅದರ ಪಕ್ಕದಲ್ಲಿ ಬಾವಿ. ಸೊಗಸಾದ ಕಲ್ಲುಕಟ್ಟಡದ ಬಾವಿ. ಪಡಸಾಲೆ ವಿಶಾಲವಾದದ್ದು. ಸಾಮಾನ್ಯವಾಗಿ ಹರಟೆಗೆ ಕೂಡುತ್ತಿದ್ದದ್ದು ಅಲ್ಲಿಯೇ. ಪಡಸಾಲೆಯ ಪೂರ್ವದ ಅಂಚಿನಲ್ಲಿ ದೊಡ್ಡ ಒರಲು. ನಮ್ಮ ಮನೆ ಸುಭಿಕ್ಷಕಂಡ ಕಾಲದಲ್ಲಿ ಆ ಪಡಸಾಲೆಯಲ್ಲಿ ನಾಲ್ಕು ಜನ ಭತ್ತ ಕುಟ್ಟಿ ಕೇರಿ ಕೆಲಸಮಾಡುತ್ತಿದ್ದರು. ಅಂಗಳವೂ ಪಡಸಾಲೆಯೂ ಸೇರುವ ಕಡೆ ನೆರಳಿನಲ್ಲಿ ಹುಣಿಸೆಕಾಯಿ, ಹೊಂಗೆಕಾಯಿಗಳನ್ನು ಒಣಗಹಾಕಿ ಆಮೇಲೆ ಕಾಯಿ ಬಿಡಿಸಿಕೊಳ್ಳುತ್ತಿದ್ದದ್ದೂ ಹುಣಸೆಹಣ್ಣನ್ನು ಕುಟ್ಟಿ ದಿಂಡುಗಳಾಗಿ ಮಾಡಿ ಉಗ್ರಾಣಕ್ಕೆ ಸಾಗಿಸುತ್ತಿದ್ದದ್ದೂ ನನಗೆ ಜ್ಞಾಪಕದಲ್ಲಿದೆ.

ಪಡಸಾಲೆಯ ದಕ್ಷಿಣದಲ್ಲಿ ನಡುಮನೆ: ೩೦-೪೦ ಮಂದಿ ಊಟಕ್ಕೆ ಕೂಡಬಹುದಾಗಿದ್ದದ್ದು. ಅದಕ್ಕೆ ಅಂಟಿಕೊಂಡಂತೆ ಪಶ್ಚಿಮ ದಿಕ್ಕಿನಲ್ಲಿ ಎರಡು ಕೋಣೆಗಳು, ಒಂದು ಉಗ್ರಾಣ; ಇನ್ನೊಂದು ನನ್ನ ಮಲಗುವ ಮನೆ. ಈ ನಡುಮನೆಯ ಪೂರ್ವಕ್ಕೆ ಉದ್ದಕ್ಕೂ ಆಗ್ನೇಯ ಮೂಲೆಯಲ್ಲಿ ಅಡಿಗೆಮನೆ. ಈಶಾನ್ಯ ಮೂಲೆಯಲ್ಲಿ ದೇವರ ಮನೆ. ದೊಡ್ಡ ಮಂಟಪ, ದೊಡ್ಡ ದೀಪಗಳು, ಸೊಗಸಾದ ನಾದವುಳ್ಳ ಘಂಟೆ, ಹೆಸರು ಹೇಳಬೇಕಾದಂಥ ಬೆಳ್ಳಿಯಕಟ್ಟು ಹಾಕಿದ ಶಂಖ, ಇತ್ಯಾದಿ. ನಡುಮನೆಯಿಂದ ಅಂಗಳಕ್ಕೆ ಬಂದು, ಪೂರ್ವಕ್ಕೆ ತಿರುಗಿದರೆ ಸ್ನಾನದ ಮನೆ, ಅದರಿಂದಾಚೆಗೆ ಹಿತ್ತಿಲು. ಅದರಲ್ಲಿ ಬೇರೆ ಬಾವಿ. ಹಿತ್ತಿಲಿನ ವಿಸ್ತಾರ ಕಟ್ಟಿದ ಮನೆಯ ವಿಸ್ತಾರಕ್ಕೆ ಸಮನಾದದ್ದು. ಇನ್ನೂ ಕೊಂಚ ಹೆಚ್ಚಿನದು. ಅದರಲ್ಲಿ ಬಾಳೆ, ಮಾವು, ತೆಂಗು, ಪರಂಗಿ ಮರಗಳು; ಮಲ್ಲಿಗೆ, ಇರುವಂತಿಗೆ, ಜಾಜಿ, ಮರುಗ ಮೊದಲಾದ ಸುಗಂಧ ಪುಷ್ಪಗಳ ಪಾತಿಗಳು ಇರುತ್ತಿದ್ದವು. ಈ ಹಿತ್ತಿಲುಕಡೆಯ ದಕ್ಷಿಣದ ಗೋಡೆಯಲ್ಲಿ ಇನ್ನೊಂದು ಹೆಬ್ಬಾಗಿಲು, ಅದರಲ್ಲಿ ತೋಟಕ್ಕಾಗಿ ನೀರು ತರುವ ಬಂಡಿಯ ಸಂಚಾರ. ಈ ಬಂಡಿಗಾಗಿ ಒಂದು ಎತ್ತಿನ ಬಂಡಿಯ ಮೇಲೆ ದೊಡ್ಡ ಟೀಪಾಯಿ, ಅದರಲ್ಲಿ ನೀರು ತುಂಬಲು ಆಳಿಕೆ, ಈ ಎಲ್ಲ ಪರಿಕರಗಳೂ ಅಲ್ಲಿದ್ದವು.

ಹೀಗೆ ಮನೆ ಎಲ್ಲ ದೃಷ್ಟಿಗಳಿಂದಲೂ ಅನುಕೂಲವಾಗಿತ್ತು.

‘ಸತ್ರ’

ನಮ್ಮ ಮುತ್ತಜ್ಜಂದಿರು ಕಟ್ಟಿಸಿದ ಮನೆಯಲ್ಲಿ ಒಂದು ಭಾಗದಲ್ಲಿ ದನದ ಕೊಟ್ಟಿಗೆ. ಒಂದು ಆಕಳು, ಒಂದು ಎಮ್ಮೆ ಯಾವಾಗಲೂ ಇರುತ್ತಿತ್ತು. ಇನ್ನೊಂದು ಆಕಳನ್ನೂ ಎಮ್ಮೆಯನ್ನೂ ಹಳ್ಳಿಗೆ ಕಳಿಸಿರುತ್ತಿದ್ದರು. ಎರಡೆರಡು ಆಕಳುಗಳು ಇರುತ್ತಿದ್ದದ್ದೂ ಉಂಟು. ಹಾಲು ಮೊಸರು ತುಪ್ಪಕ್ಕೆ ಎಂದೂ ಕೊರತೆಯಿರಲಿಲ್ಲ. ಹಳೆಯ ಮನೆಯ ಇನ್ನೊಂದು ಭಾಗವನ್ನು ಸತ್ರದಂತೆ ಉಪಯೋಗಿಸುತ್ತಿದ್ದರು. ಊರಿಗೆ ಹೊಸದಾಗಿ ಬಂದ ಯಾರಾದರೂ ಅಲ್ಲಿ ಉಳಿದುಕೊಂಡಿರುತ್ತಿದ್ದರು. ಬಾಡಿಗೆ ಇಲ್ಲ. ಅವರಿಗೆ ಬೇರೆ ಮನೆ ಸಿಕ್ಕಿದಾಗ ಅವರು ಅಲ್ಲಿಗೆ ಹೋಗಬಹುದು. ಆ ಮನೆಯಲ್ಲಿ ಯಾರಾದರೂ ದೀಪ ಹಚ್ಚಿ ದೇವರ ಪೂಜೆ ಮಾಡಿಕೊಂಡು ಸಂತೋಷಪಟ್ಟರೆ ಅದೇ ನಮಗೆ ಪ್ರತಿಫಲ, ಇನ್ನೇನೂ ಬೇಕಾಗಿಲ್ಲ– ಎಂಬುದು ನಮ್ಮ ತಾತನ ಭಾವನೆ.

ಒಂದು ಗಾದೆ

ನಮ್ಮ ತಾತ ತೀರಿಕೊಂಡ ಮೇಲೆ ಕೋಲಾರದಲ್ಲಿ ಅವರ ಮನೆಯಲ್ಲಿದ್ದ ಪದಾರ್ಥಗಳು, ಸಾಮಾನುಗಳು, ಪುಸ್ತಕಗಳು–ಇವನ್ನೆಲ್ಲ ಮುಳಬಾಗಿಲು ಮನೆಗೆ ತಂದರು. ಆ ಸಾಮಾನುಗಳ ಪೈಕಿ ಒಂದು ಮೇಜು, ಒಂದು ಆರಾಮ ಕುರ್ಚಿ, ಒಂದು ದೊಡ್ಡ ಜಮಖಾನ ಇವಿಷ್ಟೂ ಇದ್ದದ್ದು ನೆನಪಿದೆ. ಆ ಮೇಜನ್ನು ನಾನೇ ಉಪಯೋಗಿಸುತ್ತಿದ್ದೆ. ಆದರೆ ಮುಖ್ಯ ಸಂಗತಿ ಬೇರೆ ಉಂಟು. ಆ ಪುಸ್ತಕಗಳಲ್ಲಿ ಕೆಲವು ಇಂಗ್ಲಿಷಿನ ಲಾ ಜರ್ನಲ್ಲುಗಳಿದ್ದವು. ಅವುಗಳಲ್ಲೊಂದನ್ನು ನಾನು ತೆಗೆದು ಓದಲು ಪ್ರಯತ್ನಪಟ್ಟೆ. ಆ ಲೇಖನ ವಕೀಲಿ ವೃತ್ತಿಯ ನೀತಿಗೆ ಸಂಬಂಧಪಟ್ಟದ್ದು. ಅದರಲ್ಲಿ ಹೇಳಿತ್ತು: "ಒಳ್ಳೆಯ ವಕೀಲ ಕೆಟ್ಟ ನೆರೆಹೊರೆ (A good lawyer is a bad neighbour) ಎಂಬ ಗಾದೆಯುಂಟು. ಆದರೆ ಅದು ಅನ್ಯಾಯ. ಲಾಯರಾದ ಮಾತ್ರಕ್ಕೆ ಅವರು ನೆರೆಹೊರೆಯ ಸಂಸಾರಗಳಲ್ಲಿ ಜಗಳ ಪ್ರೋತ್ಸಾಹಿಸಿ ಮನೆಯೊಡೆಯುತ್ತಾನೆ–ಎಂದು ಆಪಾದನೆ, ಇದು ಸಲ್ಲತಕ್ಕದ್ದಲ್ಲ" –ಹೀಗೆಂಬುದು ಆ ಲೇಖನದ ತಾತ್ಪರ್ಯ. ಅದರ ಸಿದ್ಧಾಂತವೆಂತಾದರಿರಲಿ, ಆ ಗಾದೆ ನನ್ನ ಮನಸ್ಸನ್ನು ಹಿಡಿದು ಪರಿಣಾಮಮಾಡಿತು. ವಕೀಲಿ ವೃತ್ತಿ ನನಗೆ ಬೇಡ ಎಂದು ಆಗ ಮನಸ್ಸು ಮಾಡಿದೆ. ನನ್ನ ನಿಶ್ಚಯ ನನ್ನ ತಂದೆ ಇಟ್ಟುಕೊಂಡಿದ್ದ ಸಂಕಲ್ಪಕ್ಕೆ ನೇರವಾಗಿ ವಿರೋಧವಾದುದು. ತನ್ನ ತಂದೆಗಿದ್ದ ಪರಮಾಕಾಂಕ್ಷೆ ನಾನು ಲಾಯರಾಗಬೇಕೆಂಬುದು. ನಾನು ಲಾಯರಾದರೆ ನನ್ನ ಅಜ್ಜ ಮಾಡಿದ್ದಂತೆ ನನ್ನ ಮನೆಯ ದಾರಿದ್ರ್ಯ ಪರಿಹಾರವಾಗುತ್ತದೆಂದು ಅವರು ನಿರೀಕ್ಷಿಸಿಕೊಂಡಿದ್ದರು. ಅದು ಭ್ರಾಂತಿಯ ಮಾತೆಂದು ಆಗ ಅಂದುಕೊಂಡೆ; ಈಗಲೂ ಅದು ಭ್ರಾಂತಿಯೆಂದೇ ನನಗೆ ತೋರುತ್ತದೆ. ನನ್ನ ತಾತ ಅದೃಷ್ಟಶಾಲಿ. ತಾತನ ಅದೃಷ್ಟ ಮೊಮ್ಮಗನಿಗೆ ದಾಯವಾಗಿ ಬರುವುದಲ್ಲ. ನನ್ನ ಜಾತಕದಲ್ಲಿ ಫಕೀರತನ ಬರೆದಿದೆ.

ಶೇಷಣ್ಣನವರ ಉತ್ಕ್ರಮಣ

ಶೇಷಗಿರಿಯಪ್ಪನವರು ಹಾಸಿಗೆ ಹಿಡಿದರು. ಅವಸಾನ ಕಾಲ ಸಮೀಪಿಸಿದೆಯೆಂದು ಅವರಿಗೇ ತೋರಿರಬೇಕು. ಆಗ ಅವರು ಕಂದಾಚಾರದ ಶ್ರೀನಿವಾಸರಾಯರೆಂಬ ಆಪ್ತ ದೊಡ್ಡ ಮನುಷ್ಯರ ಮೂಲಕ ರಾಮಾಸಾನಿಗೆ ಹೇಳಿಕಳುಹಿಸಿ ತಮ್ಮ ತಮ್ಮನೂ ಮಗನೂ ಮನೆಯಲ್ಲಿ ಇಲ್ಲದಿದ್ದ ವೇಳೆಯಲ್ಲಿ ಗುಟ್ಟಾಗಿ ಆಕೆಯನ್ನು ಕರಸಿಕೊಂಡು ಮಾತನಾಡಿದರು. ಇದಾದ ಎಂಟು ಹತ್ತು ದಿನಗಳಲ್ಲಿ ಪರಂಧಾಮವನ್ನೈದಿದರು. ಮನೆಯ ಜನಕ್ಕೆ ದುಃಖವಾದದ್ದು ಸ್ವಾಭಾವಿಕ. ನಮ್ಮ ಗುರು ವೆಂಕಟರಾಮಭಟ್ಟರ ದುಃಖ ಹೇಳಲಾಗದ್ದು. “ಈ ಕರ್ಮಾಂತರಗಳನ್ನು ಮಾಡಿಸಲಿಕ್ಕೆ ನಾನಲ್ಲ, ಚೇಚಣ್ಣನ ಹೆಸರನ್ನು ಪದೇ ಪದೇ ಆ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದು ನನ್ನಿಂದಾಗದ ಕೆಲಸ” –ಎಂದು ಹೇಳಿ ಆ ದಿನದ ಕರ್ಮಾಂತರಗಳಿಗೆ ಶ್ರೋತ್ರಿಯವರ್ಯರಾದ ಶಾಮಭಟ್ಟರವರನ್ನೂ, ಏಳನೆಯ ದಿವಸದಿಂದ ಕಡೆಯವರೆಗೆ ಕರ್ಮಾಂತರಗಳನ್ನು ನಡೆಸಲು ಮಹಾನುಭಾವರಾದ ಹೆಬ್ಬಣಿಯ ಶ್ರೀಪತಿಭಟ್ಟರವರನ್ನೂ ಕರೆಯಿಸಿ ತಾವೇ ಖುದ್ದು ನಿಂತು ನಡೆಯಿಸಿದರು. ನನ್ನ ಚಿಕ್ಕ ತಾತ ರಾಮಣ್ಣನವರನ್ನು ಕುರಿತು,

“ರಾಮಣ್ಣಾ, ಚೇಚಣ್ಣನಿಗೆ ನಾನು ಮೊದಲ ತಮ್ಮ, ನೀನು ಎರಡನೆಯವನು” –ಎಂದು ವೆಂಕಟರಾಮಭಟ್ಟರು ಹೇಳುತ್ತಿದ್ದರು.

೭

ಲಾಯರ ಫೀಜು

ತಿಪ್ಪದೊಡ್ಡಿ ಮೈಸೂರು ಸಂಸ್ಥಾನದ ಆಗ್ನೇಯ ದಿಕ್ಕಿನ ಸರಹದ್ದಿನ ಹಳ್ಳಿ. ಅಲ್ಲಿಂದ ಪುಂಗನೂರು ಎಂಟೊಂಬತ್ತು ಮೈಲಿ. ಅದರಲ್ಲಿ ಇದ್ದ ಕುಟುಂಬಗಳು ಇಪ್ಪತ್ತಿಪ್ಪತ್ತೈದು. ಒಂದು ಶಾನುಭೋಗರದು, ಹತ್ತು ಹದಿನೈದು ಒಕ್ಕಲಿಗ ರೆಡ್ಡಿಗಳದು, ಐದಾರು ಈಗ ಹರಿಜನರೆಂದು ಹೇಳಿಸಿಕೊಳ್ಳುವ ಜಾತಿಯವರದು, ಮಿಕ್ಕವು ಇತರ ಕುಲಸ್ಥರದು. ಊರಿನ ಮನೆಗಳೆಲ್ಲ ಮಣ್ಣುಗೋಡೆಗಳವು. ಕೆಲವಕ್ಕೆ ಮಣ್ಣು ಮಾಳಿಗೆ; ಮಿಕ್ಕವು ನಾಡು ಹೆಂಚಿನ ಚಾವಣಿಯವು. ಯಾವ ಮನೆಗೂ ನೆಲಕ್ಕೆ ಗಾರೆಗಚ್ಚು ಆಗಿರಲಿಲ್ಲ. ಊರಿನ ಸುತ್ತ ನಾಗದಾಳಿ ಕಾಡು. ಊರಿಗೆ ಹೋಗುವ ದಾರಿ, ಊರಿನಲ್ಲಿ ಜನ ಓಡಾಡುವ ದಾರಿ, ಇದಿಷ್ಟನ್ನು ಜನ ಆಗಾಗ ನಾಗದಾಳಿಯ ಪ್ರಭುತ್ವದಿಂದ ಬಿಡಿಸಿಕೊಳ್ಳಬೇಕಾಗಿತ್ತು.

ಆ ಊರಿನ ಶಾನುಭೋಗರು ಸಂಜೀವಯ್ಯನವರು; ಆರುಮೇಲು. ಅವರ ಭಾರ್ಯೆ ಸಂಜೀವಮ್ಮ. ಅವರ ವಂಶಿಕರು ಈಗಲೂ ಇದ್ದಾರೆ.

ಈಗ ನಾನು ಹೇಳಹೊರಟಿರುವ ಸಂಗತಿ ಸುಮಾರು ಒಂದುನೂರು ವರ್ಷದ ಹಿಂದಿನದು. ನನ್ನ ತಾಯಿಯ ತಾಯಿಯಿಂದ ನಾನು ಕೇಳಿದ ಸಂಗತಿ ಅದು. ಆಗ ಬ್ರಿಟಿಷ್ “ಕುಂಫಣಿ” ಯವರು ಮೈಸೂರನ್ನಾಳುತ್ತಿದ್ದರು. ಟಿಪ್ಪುಸುಲ್ತಾನರ ಆಳಿಕೆ ಮುಗಿದು ಸುಮಾರು ಐವತ್ತು ವರ್ಷವಾಗಿತ್ತು. ಬ್ರಿಟಿಷರು ತಮ್ಮ ಹೊಸ ಹೊಸ ರಾಜಪದ್ಧತಿಯನ್ನು ಕಟ್ಟಲು ಆರಂಭಿಸಿದ್ದರು. ವ್ಯವಸಾಯದ ಜಮೀನುಗಳ ಸೊತ್ತುಗಾರಿಕೆಯನ್ನು ಒಂದು ವ್ಯವಸ್ಥೆಗೆ ತಂದು ಕಂದಾಯ ಕವಳಿಗೆಗಳನ್ನು ಗೊತ್ತು ಮಾಡಿ ರೈತರು ಅದನ್ನು ಸರಕಾರಕ್ಕೆ ಪಾವತಿ ಮಾಡಿ ರಸೀದಿ ಪಡೆಯುವ ಕ್ರಮವನ್ನು ಜಾರಿಗೆ ತರುತ್ತಿದ್ದರು. ತಿಪ್ಪದೊಡ್ಡಿಯನ್ನು ಒಳಕೊಂಡಿದ್ದ ಬೈರಕೂರು ಹೋಬಳಿಗೆ ಗುಂಜೂರು ನಾರಣಪ್ಪನವರು ಶೇಕ್‌ದಾರರಾಗಿದ್ದರು. ಅವರು ಕೆಲಸದಲ್ಲಿ ಸಮರ್ಥರೆಂದೂ ಕಾಸಿನ ವಿಷಯದಲ್ಲಿ ಕಟ್ಟುನಿಟ್ಟುಳ್ಳವರೆಂದೂ ಹೆಸರಿತ್ತು.

ಒಂದು ದೂರು

ಹೀಗಿರಲಾಗಿ ತಿಪ್ಪದೊಡ್ಡಿಯ ಶಾನುಭೋಗ ಸಂಜೀವಯ್ಯನವರ ಮೇಲೆ ಯಾರೋ ಆಗದವರು ಸರಕಾರಕ್ಕೆ ಒಂದು ದೂರು ಬರೆದುಕೊಂಡಿದ್ದರು; ಅವರು ರೈತರಿಂದ ಪಡೆದುಕೊಂಡ ಹಣದಲ್ಲಿ ಒಂದು ಭಾಗವನ್ನು ಸ್ವಂತಕ್ಕಿರಿಸಿಕೊಂಡು ಮಿಕ್ಕದ್ದನ್ನು ಸರಕಾರದ ಖಜಾನೆಗೆ ಕಟ್ಟುತ್ತಿದ್ದರೆಂದು.

ಸಂಜೀವಯ್ಯನವರು ಭಾರಿ ಸಂಸಾರಿ ಮತ್ತು ದರ್ಪಶಾಲಿ. ಆತನ ಮಾತಿಗೆ ಆ ಅಕ್ಕಪಕ್ಕದ ಹಳ್ಳಿಗಳಲ್ಲೆಲ್ಲ ತುಂಬ ಗೌರವವಿತ್ತು. ಪುಂಡಾಟವಾಡಿದವರನ್ನು ದಂಡಿಸಲು ಅವರು ಹೆದರುತ್ತಿರಲಿಲ್ಲ. ಅವರ ವಾಕ್ಕು ಕೊಂಚ ಜೋರಾದದ್ದೇ. ಜನ ಅವರನ್ನು ಶಾನುಭೋಗರೆಂದು ಗಣಿಸಿದ್ದುದಕ್ಕಿಂತ ಹೆಚ್ಚಾಗಿ ಅವರನ್ನು ಗ್ರಾಮದ ಯಜಮಾನರೆಂದು ಗೌರವಿಸಿತ್ತು. ಆ ಯಜಮಾನಿಕೆಯನ್ನು ನಿರ್ವಹಿಸುವ ರಭಸದಲ್ಲಿ ಅವರು ಇಲ್ಲೊಬ್ಬನಿಗೆ ಅಲ್ಲೊಬ್ಬನಿಗೆ ಚೀಮಾರಿಹಾಕಿ ಶಿಕ್ಷೆ ಮಾಡುವುದು ಅನಿವಾರ್ಯವಾಗಿತ್ತು. ಇಂಥವರು ಇಬ್ಬರು ಮೂವರು ಸೇರಿ ಬರೆದಿದ್ದದ್ದು ಆ ದೂರು.

ತಾಲ್ಲೂಕು ಕಚೇರಿಯಲ್ಲಿ ಯಾರ ಕೈವಾಡದಿಂದಲೋ ಆ ಅರ್ಜಿಗೆ ಗಮನ ದೊರೆಯಿತು. ಅಮಲ್ದಾರರು ವಿಚಾರಣೆ ನಡಸಿ ಸಂಜೀವಯ್ಯನವರ ಮೇಲೆ ಹೊತ್ತ ಆಪಾದನೆಯನ್ನು ಎತ್ತಿಹಿಡಿದರು. ಈ ಫಿರ್ಯಾದು ಬೆಳೆದು ಡೆಪ್ಯುಟಿ ಕಮಿಷನವರ ಮುಂದೆ ಬಂತು.

ಶೇಕದಾರ ನಾರಣಪ್ಪನವರು ಆ ಫಿರ್ಯಾದಿನ ಮರ್ಮವನ್ನು ತಿಳಿದಿದ್ದವರು. ಯಾರೂ ಮಾಡದೆ ಇದ್ದಂಥ ಅಪಕಾರ್ಯವನ್ನು ಸಂಜೀವಯ್ಯನವರೇನೂ ಮಾಡಿರಲಿಲ್ಲ. ಶಾನುಭೋಗರು ದರ್ಪದ ಮಾತನ್ನಾಡುವುದೂ ಜಬರದಸ್ತಿ ನಡೆಸುವುದೂ ಒಂದೆರಡು ಕಾಸು ಕಾಣಿಕೆ ತೆಗೆದುಕೊಳ್ಳುವುದೂ ಆ ಕಾಲದಲ್ಲಿ ಅಪರೂಪದ ಸಂಗತಿಯಲ್ಲ. ಅದು ಸರಕಾರದ ಮೇಲಧಿಕಾರಿಗಳಿಗೆ ತಿಳಿಯದೆ ಇದ್ದ ಸಂಗತಿಯೂ ಅಲ್ಲ. ಅವರು ಆ ಮಾಮೂಲು ಮರ್ಯಾದೆಗಳನ್ನು ಕಂಡೂ ಕಾಣದವರಂತೆ ನಡೆದುಕೊಳ್ಳುತ್ತಿದ್ದರು. ಅದು ಕಾನೂನು ಗ್ರಂಥದ ದೃಷ್ಟಿಯಿಂದ ದೋಷವೆನಿಸಿದರೂ ಜನದ ವಾಡಿಕೆಯ ದೃಷ್ಟಿಯಿಂದ ಗಣನೆಗೆ ಬರುತ್ತಿರಲಿಲ್ಲ. ತೊಂಬತ್ತೊಂಬತ್ತು ಮಂದಿ ಶಾನುಭೋಗರು ಮಾಡುತ್ತಿದ್ದ ಕೆಲಸವನ್ನು ಸಂಜೀವಯ್ಯನೂ ಮಾಡಿದ್ದರೆ ಇತರರಿಗೆ ಆಗದ ಶಿಕ್ಷೆ ಇವನೊಬ್ಬನಿಗೆ ಮಾತ್ರ ಏಕಾಗಬೇಕು?

ಸಂಜೀವಯ್ಯ ಶೇಕದಾರ ನಾರಣಪ್ಪನವರು ಕಾಲು ಹಿಡಿದ. ಶೇಕದಾರ ನಾರಣಪ್ಪನವರು ಆತನನ್ನು ಕರೆದುಕೊಂಡು ಕೋಲಾರಕ್ಕೆ ಹೋಗಿ ಲಾಯರ್ ಶೇಷಗಿರಿಯಪ್ಪನವರ ಕಾಲು ಹಿಡಿದರು. ಶೇಷಗಿರಿಯಪ್ಪನವರು ಪ್ರಭಾವಶಾಲಿಯಾದ ಲಾಯರೆಂದು ಹೆಸರಾಗಿತ್ತು. ಅದಲ್ಲದೆ ನಾರಣಪ್ಪ, ಶೇಷಗಿರಿಯಪ್ಪ ಇಬ್ಬರೂ ಒಂದೇ ಜಾತಿಪಂಗಡದವರು. ಬಾಂಧವ್ಯ ಬೆಳಸಬಹುದಾದವರು.

ವಿಚಾರಣೆ

ಡೆಪ್ಯುಟಿ ಕಮಿಷನರ ಕಚೇರಿಯಲ್ಲಿ ಫಿರ್ಯಾದು ವಿಚಾರಣೆಗಾಗಿ ಬಂತು. ಲಾಯರ್ ಶೇಷಗಿರಿಯಪ್ಪನವರು ಶಾನುಭೋಗ ಸಂಜೀವಯ್ಯ ನಿರ್ದೋಷಿಯೆಂದು ವಾದಿಸಿದರು. ಆತ ದೋಷಿ ಎಂದು ರುಜುವಾತು ಮಾಡಲು ಆತ ರೈತರಿಗೆ ಕೊಟ್ಟಿದ್ದ ಪಟ್ಟಿ (ರಶೀತಿ) ಗಳನ್ನು ತಾಲ್ಲೂಕು ಅಮಲ್ದಾರರು ಒದಗಿಸಿದ್ದರು. ಡೆಪ್ಯುಟಿ ಕಮಿಷನರು ಲಾಯರನ್ನು ಕುರಿತು ಕೇಳಿದರು:

“ಈ ಪಟ್ಟಿಪುಸ್ತಕಗಳಿಗೆ ಏನು ಹೇಳುತ್ತೀರಿ? ಇದಕ್ಕೆಲ್ಲ ನಿಮ್ಮ ಕಕ್ಷಿಗಾರನು ರುಜು ಮಾಡಿದ್ದಾನಲ್ಲಾ? ಇಂಥ ಸುಳ್ಳು ಬರವಣಿಗೆ ಕೊಡಬಹುದೋ?”

ಲಾಯರು– “ಇದರಲ್ಲಿ ಸುಳ್ಳೇನೂ ಇಲ್ಲ ಸ್ವಾಮಿ. ಈ ಪಟ್ಟಿಪುಸ್ತಕಗಳನ್ನು ಬರೆದವನು ತಾನೇ ಎಂದು ಸಂಜೀವಯ್ಯ ಒಪ್ಪಿಕೊಳ್ಳುತ್ತಾನೆ.”

ಡೆ.ಕ.– “ಈ ಪಟ್ಟಿನೋಡಿ. ಇದು ಸರಿಯಾದ ರಸೀತಿಯೊ? ಅದರಲ್ಲಿ ಹಣದ ಸೂಚನೆಯೇ ಇಲ್ಲವಲ್ಲಾ?”

ಲಾಯರು– “ಸ್ವಾಮಿ, ಈ ಪಟ್ಟಿಪುಸ್ತಕ ಪಾಶಂಪಲ್ಲಿ ಮುನಿರೆಡ್ಡಿಗೆ ಸೇರಿದ್ದು. ಆತನನ್ನೇ ಕೇಳೋಣವಾಗಲಿ. ಅವನು ಈಗ ಸನ್ನಿಧಾನದಲ್ಲಿ ಹಾಜರಿದ್ದಾನೆ.”

ಡೆ.ಕ.– “ಅವನನ್ನು ಕರೆಯಿರಿ.”

ಪಾಶಂಪಲ್ಲಿ ಮುನಿರೆಡ್ಡಿ ಬಂದು ಡೆಪ್ಯುಟಿ ಕಮಿಷನರಿಗೆ ಕೈ ಮುಗಿದು ನಿಂತ. ಡೆಪ್ಯುಟಿ ಕಮಿಷನರು ಅವನ ಹೆಸರು ಊರನ್ನು ಬರೆದುಕೊಳ್ಳುವಂತೆ ತಮ್ಮ ಗುಮಾಸ್ತನಿಗೆ ಹೇಳಿ, ಆಮೇಲೆ ಮುನಿರೆಡ್ಡಿಯ ಕಡೆ ತಿರುಗಿ,

ಡೆ.ಕ.– “ಈ ಪಟ್ಟಿಪುಸ್ತಕ ಯಾರದಯ್ಯ?”

ಮು.– “ನಂದೇ ಸ್ವಾಮಿ.”

ಡೆ.ಕ.– “ನೀನು ಕಂದಾಯದ ಹಣ ಕೊಟ್ಟೇನಯ್ಯ?”

ಮು.– "ಕೊಟ್ಟೆ ಸ್ವಾಮಿ."

ಡೆ.ಕ.– "ಅದನ್ನ ಇದರಲ್ಲಿ ಬರೆದಿದ್ದಾರೇನಯ್ಯ."

ಮು.– "ಅವರು ಬರೆದುಕೊಡುತ್ತೇನೆಂದು ಹೇಳಿದರು. ನಾನೇ ಹೇಳಿದೆ, ನಿಮ್ಮತ್ರ ನಾವು ಬರಸಿಕೋಬೇಕಾ? ಕಾಜಗ ಸಿಕ್ಕೋದೇ ಕಷ್ಟ. ಅದರ ಮೇಲೆ ಏನಾದರೂ ಒಂದು ಒಳ್ಳೆಪದ್ಯ ಬರಕೊಡಿ, ಮಕ್ಕಳು ಓದಿಕೊಂಬೋಕೆ–ಅಂತ ಕೇಳಿದೆ. ಅದರ ಮ್ಯಾಗೆ ಬರಕೊಟ್ಟವ್ರೆ."

ಡೆಪ್ಯುಟಿ ಕಮಿಷನರ ಗುಮಾಸ್ತರು ಆ ಬರವಣಿಗೆಯನ್ನು ಮೊದಲೇ ಓದಿದ್ದರು. ಹೀಗೆ

ಆವನೀ ಕೊಂಡ್ಯಾಡ
ಮಾಮಿಡೀ ತೋಪ್ಯಾಡ
ಲವಕುಮಾರಾ ।
ಸೀತಮ್ಮ ಇಲ್ಲ್ಯಾಡ
ಮೀತಲ್ಲಿ ಇಲ್ಲ್ಯಾಡ
ಲವಕುಮಾರಾ ॥
(ಆವನೀ ಮಲೆ ಎಲ್ಲಿ
ಮಾವಿನಾ ತೋಪೆಲ್ಲಿ
ಲವಕುಮಾರಾ
ಸೀತೆಯಾ ಮನೆ ಎಲ್ಲಿ
ಮಾತಾಯಿ ಮನೆ ಎಲ್ಲಿ
ಲವಕುಮಾರಾ)

ಇನ್ನೊಂದು ಸಾಕ್ಷ್ಯ

ಡೆಪ್ಯುಟಿ ಕಮಿಷನರು ಇದನ್ನು ಕೇಳಿ ಕೊಂಚ ನಕ್ಕಿದ್ದರು. ಆಮೇಲೆ ಇನ್ನೊಂದು ಪಟ್ಟೆ. ಅದು ಬೇರಿಕೆ ರಂಗಾರೆಡ್ಡಿಯದು. ಅವನ ಪಟ್ಟೆಪುಸ್ತಕದಲ್ಲಿ:

ಯಸ್ಯಜ್ಞಾನ ದಯಾ ಸಿಂಧೋ–
ರಗಾಧಸ್ಯಾನಘಾ ಗುಣಾಃ

–ಎಂದು ಬರೆದಿತ್ತು.

ರಂಗಾರೆಡ್ಡಿಯ ವಿವರಣೆಯೂ ಮೇಲಿನಂತೆಯೇ. ಮೂರನೆಯ ಪಟ್ಟೆಪುಸ್ತಕವನ್ನು ತೆರೆದರು. ಅದು ಚಿನ್ನರಾಮೇಗೌಡನದು. ಅದರಲ್ಲಿ:

ಏರಕುಮೀ ಕಸುಗಾಯಲ ।
ದೊರಕುಮೀ ಬಂಧುಜನಲ ದೋಸಮುಸುಮ್ಮೀ ॥
ಪಾರುಕುಮೀ ರಣಮಂದುನ ।
ಮೀರಕುಮೀ ಗುರುವುಲಾಜ್ಞ ಮೇದಿನಿ ಸುಮತೀ ॥

(ಕಸುಗಾಯಿಗಳನ್ನಾರಿಸಿಕೊಳ್ಳಬೇಡ, ನೆಂಟರ ದೋಷಗಳನ್ನು ಗಮನಿಸಬೇಡ. ಯುದ್ಧರಂಗದಿಂದ ಓಡಬೇಡ. ಗುರುಗಳ ಅಪ್ಪಣೆಯನ್ನು ಮೀರಬೇಡ.)

ಈ ಪದ್ಯಕ್ಕೂ ಅದು ರೈತನ ಬೇಡಿಕೆಯಂತೆ ಅವನ ಮಕ್ಕಳಿಗೋಸ್ಕರ ಬರೆದದ್ದು ಎಂದೇ ವಿವರಣೆ. ಹೀಗೆ ಇನ್ನೂ ಎರಡು ಪಟ್ಟೆಪುಸ್ತಕಗಳಲ್ಲಿ ಅಮರದ ಪದ್ಯಗಳೂ ನೀತಿಶತಕದ ಪದ್ಯಗಳೂ ಬರೆದಿದ್ದವು. ಅದಕ್ಕೆ ಆಯಾ ರೈತನು ಕೊಟ್ಟ ಕಾರಣ ಮೇಲಿನಂತೆಯೇ. ಯಾವ ರೈತನೂ ತನಗೆ ಶಾನುಭೋಗನು ರಶೀತಿ ಕೊಡಲು ನಿರಾಕರಿಸಿದನೆಂದಾಗಲೀ ಮೋಸ ಮಾಡಿದನೆಂದಾಗಲೀ ರುಜುವಾತು ಕೊಡಲಿಲ್ಲ. ಹಣ ಕೊಟ್ಟವರು ಫಿರ್ಯಾದು ಮಾಡದೆ ಇದ್ದಾಗ, ವಂಚನೆಯ ರುಜುವಾತು ಯಾವುದೂ ತಮ್ಮ ಮುಂದೆ ಬಾರದೆ ಇದ್ದಾಗ, ಡೆಪ್ಯುಟಿ ಕಮಿಷನರು ಮಾಡಬಹುದಾಗಿದ್ದದ್ದು ಆಪಾದಿತನ ಬಿಡುಗಡೆಯೊಂದೇ. ತಿಪ್ಪದೊಡ್ಡಿಯ ಸಂಜೀವಯ್ಯ ನಿರ್ದೋಷಿಯೆಂದು ತೀರ್ಮಾನವಾಗಬೇಕಾಯಿತು.

ಕೃತಜ್ಞತೆ

ಹಾಗೆ ಆದದ್ದರ ಸಂತೋಷದಿಂದ ನಾರಣಪ್ಪನವರೂ ಸಂಜೀವಯ್ಯನೂ ಲಾಯರ್ ಶೇಷಗಿರಯ್ಯನವರ ಬಳಿಗೆ ಬಂದು ಹೂವಿನ ಹಾರ ಹಣ್ಣು ತಾಂಬೂಲಗಳನ್ನು ಸಮರ್ಪಿಸಿ ಅದರ ನಡುವೆ ಒಂದುನೂರು ರೂಪಾಯಿಗಳನ್ನಿಟ್ಟರು. “ನಾವು ಬಡವರು. ನಿಮ್ಮ ಋಣವನ್ನು ತೀರಿಸುವ ಶಕ್ತಿ ನಮಗಿಲ್ಲ. ನಮ್ಮ ಈ ಸಣ್ಣ ಕಾಣಿಕೆಯನ್ನು ಸ್ವೀಕರಿಸಬೇಕು. ನಾವು ಮನೆಮಕ್ಕಳಾದಿಯಾಗಿ ಸರ್ವರೂ ಎಲ್ಲ ಕಾಲವೂ ನಿಮ್ಮ ಹೆಸರು ಹೇಳಿಕೊಂಡು ಬದುಕುತ್ತೇವೆ” ಎಂದು ಮೊದಲಾಗಿ ಕೃತಜ್ಞತೆಯನ್ನು ನುಡಿದರು.

ಶೇಷಗಿರಿಯಪ್ಪನವರು ಹೂವು ಹಣ್ಣು ತಾಂಬೂಲವನ್ನು ತೆಗೆದಿರಿಸಿಕೊಂಡು ರೂಪಾಯಿಗಳನ್ನು ಮಾತ್ರ ನಾರಣಪ್ಪನವರ ಮುಂದಿಟ್ಟು “ಇದನ್ನು ನಾನು ತೆಗೆದುಕೊಳ್ಳತಕ್ಕದ್ದಲ್ಲ. ನೀವು ಬಂಧುಗಳು. ಅವರು ಬಡವರೆಂದು ಹೇಳುತ್ತೀರಿ. ನಾನು ಪ್ರೀತಿಯಿಂದ ಕೆಲಸ ಮಾಡಿದೆನೇ ಹೊರತು ಸಂಪಾದನೆಗೋಸ್ಕರ ಅಲ್ಲ. ದಯವಿಟ್ಟು ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು” ಎಂದರು.

ನಾರಣಪ್ಪನವರೂ ಸಂಜೀವಯ್ಯನವರೂ ಲಾಯರನ್ನು ಬಹುವಾಗಿ ಒತ್ತಾಯಪಡಿಸಿದರು. ಶೇಷಗಿರಿಯಪ್ಪನವರು ಕೊಂಚ ಚುರುಕು ಸ್ವಭಾವದವರು, ಅವರಲ್ಲಿ ಮಾತು ಮಿತ. ಒಂದು ಸಲ ತೀರ್ಮಾನ ಕೊಟ್ಟ ಮೇಲೆ ಆ ಮಾತನ್ನು ಪುನಃ ಎತ್ತಗೊಡಿಸುತ್ತಿರಲಿಲ್ಲ. ನಾರಣಪ್ಪನವರಿಗೆ ಸ್ವಲ್ಪ ಕಟುವಾಗಿಯೇ ತಮ್ಮ ತೀರ್ಮಾನವನ್ನು ಹೇಳಿದರು. ಅವರ ಹಣದೊಡನೆ ಅವರನ್ನು ಹಿಂದಕ್ಕೆ ಕಳುಹಿಸಿದರು.

ನಾರಣಪ್ಪನವರ ಮನೆವಾರ್ತೆ

ಅಲ್ಲಿಂದ ಮೂರು ನಾಲ್ಕು ವರ್ಷ ಕಳೆಯಿತು. ಆ ಅಂತರದಲ್ಲಿ ನಾರಣಪ್ಪನವರಿಗೂ ಶೇಷಗಿರಿಯಪ್ಪನವರಿಗೂ ಒಬ್ಬರನ್ನೊಬ್ಬರು ನೋಡುವ ಕಾರಣ ಒದಗಿ ಬರಲಿಲ್ಲ. ಅವರವರ ದಾರಿಯಲ್ಲಿ ಅವರವರು ಹೋಗುತ್ತಿದ್ದರು. ಬಳಿಕ ಒಂದಾನೊಂದು ವರ್ಷ ಬೈರಕೂರು ಪ್ರಾಂತದಲ್ಲಿ ಕಾಲರಾ ವ್ಯಾಧಿ ತಲೆದೋರಿತು. ಮೊದಮೊದಲು ಅದಕ್ಕೆ ಬಲಿ ಬಿದ್ದವರಲ್ಲಿ ಶೇಕ್‌ದಾರ್ ನಾರಣಪ್ಪನವರ ಹಿರಿಯ ಮಗ ವೆಂಕಟರಮಣಯ್ಯ ಒಬ್ಬ. ಆತ ಹದಿನೈದು ಹದಿನಾರು ವಯಸ್ಸಿನವರು. ಆತನಿಗೆ ಮದುವೆಯಾಗಿತ್ತು. ಹೆಂಡತಿ ಮನೆಗೆ ಬಂದಿರಲಿಲ್ಲ. ವೆಂಕಟರಮಣಯ್ಯ ಶಕ್ತನೆಂದೂ ಗುಣವಂತನೆಂದೂ ಸುತ್ತು ಮುತ್ತಲ ಜನರಿಂದ ಮೆಚ್ಚಿಕೆ ಪಡೆದುಕೊಂಡಿದ್ದ. ಆತನ ಕೈಬರಹ ಚೆನ್ನಾಗಿತ್ತು. ಲೆಕ್ಕಾಚಾರ ಚೆನ್ನಾಗಿತ್ತು. ಮಾತುಕಥೆ ಚೆನ್ನಾಗಿತ್ತು. ಅಂಥ ಮಗನು ತೀರಿಕೊಂಡ ಮಾರನೆಯ ದಿವಸ ತಂದೆ ನಾರಣಪ್ಪನೂ ಆ ಮಗನ ದಾರಿಯನ್ನೇ ಹಿಡಿದ.

ನಾರಣಪ್ಪನವರ ಹೆಂಡತಿ ಸಾಕಮ್ಮ. ಅವರಿಗೆ ಇನ್ನು ಉಳಿದಿದ್ದವರು ಸುಮಾರು ಐದಾರು ವರ್ಷ ವಯಸ್ಸಿನ ಮಗ ತಿಮ್ಮಪ್ಪ, ಮೂರು ನಾಲ್ಕು ವರ್ಷದ ಮಗಳು ಅಲಮೇಲಮ್ಮ. ಬೈರಕೂರಿನಲ್ಲಿ ನಡೆದ ದುಃಖದ ಸಂಗತಿಯನ್ನು ಅಲ್ಲಿಯ ಪಟೇಲ ಅಪ್ಪೋಜು ಎಂಬಾತ ಮುಳುಬಾಗಿಲಿಗೆ, ಕೋಲಾರದ ಲಾಯರ್ ಶೇಷಗಿರಿಯಪ್ಪನವರ ತಮ್ಮ ರಾಮಣ್ಣನವರಿಗೆ, ಆಳಿನ ಮೂಲಕ ಕಳುಹಿಸಿದ್ದ. ರಾಮಣ್ಣನವರು ವರ್ತಮಾನ ಬಂದ ಕೂಡಲೆ ಬೈರಕೂರಿಗೆ ಹೋಗಿ ಅಲ್ಲಿ ಆಪತ್ತಿನಿಂದ ದಿಕ್ಕು ತೋರದೆ ಇದ್ದ ಕುಟುಂಬವನ್ನು ಮುಳುಬಾಗಿಲಿಗೆ ಕರೆದುಕೊಂಡು ಬಂದು ತಮ್ಮ ಮನೆಯಲ್ಲಿ ಉಳಿಸಿಕೊಂಡರು. ಅದು ಕೆಲವು ದಿನಗಳ ಮಟ್ಟಿನ ಏರ್ಪಾಟು. ಮೃತರ ಕರ್ಮಾಂತರಗಳು ಮುಗಿದ ಬಳಿಕ ಸಾಕಮ್ಮನವರನ್ನೂ ಆಕೆಯ ಮಕ್ಕಳನ್ನೂ ಗುಂಜೂರಿಗೋ ಆಕೆಯ ತೌರೂರಾದ ಸರ್ಜಾಪುರಕ್ಕೋ ಕಳುಹಿಸುವ ಯೋಚನೆ ಮಾಡಬಹುದೆಂದು ಉದ್ದೇಶಪಟ್ಟಿದ್ದರು.

ಮುಳುಬಾಗಿಲ ಸಂದರ್ಭ

ಈಗ ಮುಳುಬಾಗಿಲು ಕುಟುಂಬದ ಸಂದರ್ಭ ನೋಡೋಣ. ಆ ಕುಟುಂಬವನ್ನು ಮುಳುಬಾಗಿಲಿನಲ್ಲಿ ನೆಲೆಗೊಳಿಸಿದವರು ಶೇಕದಾರ್ ಗುಂಡಪ್ಪನವರು. ಅವರು ತೀರಿಕೊಂಡಿದ್ದರು. ಅದಕ್ಕೆ ಕೆಲವು ವರ್ಷ ಮುಂಚೆಯೇ ಅವರ ಹೆಂಡತಿ ಕಾಮಾಕ್ಷಮ್ಮನವರು ತೀರಿಕೊಂಡಿದ್ದರು. ಅವರಿಗೆ ಇದ್ದ ಮೂವರು ಗಂಡುಮಕ್ಕಳಲ್ಲಿ ಮೊದಲನೆಯವರು ಲಾಯರ್ ಶೇಷಗಿರಿಯಪ್ಪನವರು. ಅವರು ತಮ್ಮ ಕಸಬಿಗಾಗಿ ಕೋಲಾರದಲ್ಲಿಯೇ ಮುಖ್ಯ ವಸತಿ ಹೂಡಬೇಕಾಗಿತ್ತು. ಅವರಿಗೆ ಚಿಕ್ಕಂದಿನಲ್ಲಿಯೇ ಪತ್ನೀವಿಯೋಗವಾಗಿತ್ತು. ಆಗಿದ್ದ ಒಂದು ಗಂಡುಮಗು ಅದರ ಮಾತಾಮಹರ ಪೋಷಣೆಯಲ್ಲಿತ್ತು. ಆದದ್ದರಿಂದ ಶೇಷಗಿರಿಯಪ್ಪನವರು ಒಬ್ಬೊಂಟಿಯಾಗಿ ಬಾಳುತ್ತಿದ್ದರು. ಹಬ್ಬಗಳು, ತಿಥಿಗಳು, ದೊಡ್ಡ ರಜಕಾಲಗಳು–ಇಂಥ ಸಮಯಗಳಲ್ಲಿ ಶೇಷಗಿರಿಯಪ್ಪನವರು ಮುಳುಬಾಗಿಲು ಮನೆಗೆ ಬರುತ್ತಿದ್ದರು. ಮಿಕ್ಕ ಕಾಲ ಅವರ ಕಸಬು ಎಲ್ಲಿ ಉಂಟೋ ಅಲ್ಲಿ ಇರುತ್ತಿದ್ದರು.

ಗುಂಡಪ್ಪನವರ ಎರಡನೆಯ ಮಗ ರಾಮಣ್ಣ. ಇವರು ಚಿಕ್ಕಂದಿನಲ್ಲಿ ಸುಂಕದ ಇಲಾಖೆಯಲ್ಲಿ ಯಾವುದೋ ಸಣ್ಣ ಉದ್ಯೋಗದಲ್ಲಿದ್ದರು. ಅವರಿಗೂ ಮದುವೆಯಾಗಿತ್ತು. ಅವರ ಹೆಂಡತಿಯೂ ಒಂದು ಹೆಣ್ಣು ಮಗುವೂ ಚಿಕ್ಕಂದಿನಲ್ಲಿಯೇ ತೀರಿಕೊಂಡರು. ಹೀಗೆ ರಾಮಣ್ಣನವರೂ ಏಕಾಕಿ.

ಗುಂಡಪ್ಪನವರ ಮೂರನೆಯ ಮಗ ಶೀನಪ್ಪ (ಶೀನಣ್ಣ). ಈತ ಚಿಕ್ಕಂದಿನಲ್ಲಿ ಅಬ್ಕಾರಿ ಗುಮಾಸ್ತೆಯಾಗಿದ್ದರು. ಮದುವೆಯಾಗಿತ್ತು. ಮಗಳು, ಒಬ್ಬ ಮಗ, ಇನ್ನೊಬ್ಬ ಮಗಳು ಹುಟ್ಟಿದ ಮೇಲೆ ಅವರ ಹೆಂಡತಿಯೂ ತೀರಿಕೊಂಡಳು. ಬಳಿಕ ಶೀನಣ್ಣನವರು ತಮ್ಮ ಮಕ್ಕಳನ್ನು ಅಣ್ಣ ರಾಮಣ್ಣನವರ ಪೋಷಣೆಗೊಪ್ಪಿಸಿ ತಾವು ಕಾಶೀಯಾತ್ರೆ ಮೊದಲಾದ ನಿಶ್ಚಿಂತೆಯ ಕಾಲಕ್ಷೇಪದಲ್ಲಿ ಪ್ರವೃತ್ತರಾದರು.

ಹೀಗೆ ಮುಳುಬಾಗಿಲಿನ ಸಂಸಾರ ಒಂದು ಅವ್ಯವಸ್ಥೆಯಲ್ಲಿತ್ತು. ರಾಮಣ್ಣನವರು ಸ್ಥಿರವಾಗಿ ನಿಂತು ತಮ್ಮನ ಮಕ್ಕಳು ಮೂವರು, ಆಗಾಗ ಬಂದುಹೋಗುತ್ತಿದ್ದ ಅಣ್ಣ, ಇಷ್ಟವಾದಾಗ ಬಂದು ಇಷ್ಟವಾದಷ್ಟು ದಿನ ಇದ್ದು ಇಷ್ಟ ಬಂದಾಗ ನಡೆಯುತ್ತಿದ್ದ ತಮ್ಮ–ಇವರಿಗೆ ಆಧಾರವಾಗಿದ್ದುಕೊಂಡು ಮನೆಯ ಹೆಸರನ್ನುಳಿಸಿದ್ದರು. ಅಡುಗೆಯ ಕೆಲಸಕ್ಕೆ ಒಬ್ಬ

ಮುದುಕಿಯನ್ನು ಗೊತ್ತು ಮಾಡಿಕೊಂಡಿದ್ದರು. ಮನೆಯಲ್ಲಿ ಜಾಗ ವಿಶಾಲವಾಗಿತ್ತು. ದವಸ ಧಾನ್ಯಗಳ ಕೊರತೆಯೇನೂ ಇರಲಿಲ್ಲ. ಆಕಳು ಎಮ್ಮೆ ಯಾವಾಗಲೂ ಎರಡೆರಡಿರುತ್ತಿದ್ದವು. ಸಾಮಾನ್ಯವಾಗಿ ಪ್ರತಿದಿವಸವೂ ಭೋಜನಕ್ಕಾಗಿ ಇಬ್ಬರು ಮೂವರಾದರೂ ಅತಿಥಿಗಳಿರುತ್ತಿದ್ದರು–ಸುತ್ತಮುತ್ತಲ ಹಳ್ಳಿಗಳಿಂದ ಬಂದ ವೈದಿಕ ಬ್ರಾಹ್ಮಣರು, ಶಾನುಭೋಗರುಗಳು, ಉಪಾಧ್ಯಾಯರು, ಕಚೇರಿ ಗುಮಾಸ್ತರು, ಇಂಥವರು. ಹೀಗೆ ಗೃಹಿಣೀ ಸಂಪತ್ತೊಂದರ ಹೊರತು ತಕ್ಕಮಟ್ಟಿಗೆ ಅನುಕೂಲ ದಶೆಯಲ್ಲಿದ್ದ ಕುಟುಂಬ ರಾಮಣ್ಣನವರದು. ಸ್ವಲ್ಪ ಕಾಲದ ತರುವಾಯ ಶೇಷಗಿರಿಯಪ್ಪನವರ ಮಗನಾಗಿ ಬೆಂಗಳೂರು ಸರ್ಜಾಪುರಗಳಲ್ಲಿ ಬೆಳೆದುಕೊಂಡಿದ್ದ ಹತ್ತು ಹನ್ನೊಂದು ವರ್ಷದ ಹುಡುಗ (ನನ್ನ ತಂದೆ) ವೆಂಕಟರಮಣಯ್ಯನನ್ನೂ ರಾಮಣ್ಣನವರು ತಮ್ಮಲ್ಲಿಗೆ ಕರೆಸಿಕೊಂಡರು. ಈ ಸುಮಾರಿನಲ್ಲಿ ಬೈರಕೂರನಿಂದ ಸಾಕಮ್ಮನವರೂ ಅವರ ಮಕ್ಕಳೂ ಮುಳುಬಾಗಿಲಿಗೆ ಬಂದದ್ದು.

ಆಕೆ ಬಂದ ವರ್ತಮಾನ ತಮಗೆ ತಲಪಿದ ಕೂಡಲೆ ಶೇಷಗಿರಿಯಪ್ಪನವರು ಕೋಲಾರದಿಂದ ಮುಳುಬಾಗಿಲಿಗೆ ಬಂದರು. ಆಕೆಗೆ ಹೇಳಬಹುದಾದ ಧೈರ್ಯದ ಮಾತುಗಳನ್ನು ಹೇಳಿದರು. ಬಳಿಕ ಕೈ ಮುಗಿದು ನಮಸ್ಕಾರ ಮಾಡಿ ಆಕೆ ಮತ್ತೆಲ್ಲಿಗಾದರೂ ಹೋಗುವ ಯೋಚನೆಯನ್ನು ಮನಸ್ಸಿಗೆ ತಂದುಕೊಳ್ಳಬಾರದೆಂದೂ ಆಕೆಯೂ ಆಕೆಯ ಮಕ್ಕಳೂ ಆ ಮನೆಯನ್ನು ತಮ್ಮ ಮನೆಯೆಂದೇ ಭಾವಿಸಿ ಅಲ್ಲಿಯೇ ಸ್ಥಿರವಾಗಿ ನೆಲಸಬೇಕೆಂದೂ ಬಹುವಾಗಿ ಹೇಳಿಕೊಂಡರು. ರಾಮಣ್ಣನವರೂ ಅದೇ ಮಾತನ್ನೇ ಪರಿಪರಿಯಾಗಿ ಹೇಳಿದರು. ಶೀನಪ್ಪನವರು ಸಹ ತಮ್ಮ ಮಕ್ಕಳ ಗತಿಯನ್ನು ನೆನೆದು ಕಣ್ಣೀರಿಡುತ್ತ ಬೇಡಿಕೊಂಡರು. ಸಾಕಮ್ಮನವರು ಮನಸ್ಸಿನಲ್ಲಿ ಏನು ಆಲೋಚಿಸಿದರೋ; ಅವರ ಬಾಯಿಂದ ಯಾವ ಮಾತೂ ಬರಲಿಲ್ಲ. ಕಣ್ಣಿಂದ ನೀರು ಹರಿದು ಬರುತ್ತಿತ್ತು.

ಎರಡು ವರ್ಷ ಕಾಲ ಹಾಗೂ ಹೀಗೂ ಕಳೆಯಿತು.

ಅನ್ನಂಭಟ್ಟರ ಮನೆ

ಮುಳುಬಾಗಿಲಲ್ಲಿ ಶೇಕ್‌ದಾರ್ ಗುಂಡಪ್ಪನವರ ಮನೆಯ ಎದುರಿಗೆ ಇದ್ದದ್ದು ಪುರೋಹಿತ ಅನ್ನಂಭಟ್ಟರ ಮನೆ. ಅನ್ನಂಭಟ್ಟರದು ಪ್ರಸಿದ್ಧವಾದ ಹೆಸರು. ಅವರು ವೇದಾಧ್ಯಯನ ಸಂಪನ್ನರು ಮತ್ತು ಉದಾರಿಗಳು. ಹತ್ತಾರು ಜನ ವಿದ್ಯಾರ್ಥಿಗಳನ್ನು ಮನೆಯಲ್ಲಿರಿಸಿಕೊಂಡು ಅನ್ನವಸ್ತ್ರಗಳನ್ನು ಕೊಟ್ಟು ವೇದ, ಜ್ಯೋತಿಷ್ಯ, ಧರ್ಮಶಾಸ್ತ್ರ- ಇವುಗಳನ್ನು ಕಲಿಸುತ್ತಿದ್ದರು. ಅವರಿಗೆ ಮೂವರು ಮಕ್ಕಳು. ಮೊದಲನೆಯಾಕೆ ಅನ್ನಮ್ಮ, ಎರಡನೆಯಾಕೆ ಅಮ್ಮಣ್ಣಮ್ಮ, ಮೂರನೆಯಾತ ವೆಂಕಟರಾಮ ಭಟ್ಟರು. ಅನ್ನಂಭಟ್ಟರ ಮನೆಗೂ ಗುಂಡಪ್ಪನವರ ಮನೆಗೂ ಪ್ರೀತಿ ವಿಶ್ವಾಸಗಳು ಬೆಳೆದು ಎರಡೂ ಒಂದೇ ಕುಟುಂಬವೆಂಬಂತೆ ಇದ್ದವು. ಅನ್ನಮ್ಮನವರೂ ಆಕೆಯ ತಂಗಿ ತಮ್ಮಂದಿರೂ ಗುಂಡಪ್ಪನವರನ್ನು ಮಾಮಯ್ಯನೆಂದು ಕರೆಯುತ್ತಿದ್ದರು. ಕಾಲಾನುಕಾಲದಲ್ಲಿ ಅನ್ನಮ್ಮನವರೂ ಅಮ್ಮಣ್ಣಮ್ಮನವರೂ ವೈಧವ್ಯ ಕಾರಣದಿಂದ ತಮ್ಮನ ಪೋಷಣೆಯಲ್ಲಿ ಇದ್ದುಕೊಂಡಿದ್ದರು. ಅನ್ನಮ್ಮನವರು ಮನೆಯಲ್ಲಿ ನಡೆಯುತ್ತಿದ್ದ ವೇದಪಾಠವನ್ನೂ ಜ್ಯೋತಿಷ ಪಾಠವನ್ನೂ ಕೇಳಿ ಕೇಳಿ ಒಂದು ಸಂಸ್ಕಾರವನ್ನು ಪಡೆದುಕೊಂಡಿದ್ದರು. ವೆಂಕಟರಾಮಭಟ್ಟರು ಮನೆಯಲ್ಲಿಲ್ಲದ ಕಾಲದಲ್ಲಿ ವಿದ್ಯಾರ್ಥಿಗಳು ವೇದ ಹೇಳುವಾಗ ಸ್ವರ ತಪ್ಪಿದರೆ, ಆಕೆ ದೂರದಿಂದ ಕೂಗಿ ಅದನ್ನು ತಿದ್ದಿಸುತ್ತಿದ್ದಳು. ಮುಂಜಿ ಮದುವೆಗಳಿಗೆ ಲಗ್ನ ಕಟ್ಟಿಕೊಡಬೇಕೆಂದು ಜನ ಬಂದು ಕೇಳಿದಾಗ ಭಟ್ಟರು ಮನೆಯಲ್ಲಿಲ್ಲದಿದ್ದರೆ ಆಕೆ ವಿದ್ಯಾರ್ಥಿಗಳಿಂದ ಪಂಚಾಂಗವನ್ನೋದಿಸಿ ತಾನೇ ಲಗ್ನ ನಿಶ್ಚಯ ಮಾಡುತ್ತಿದ್ದರು.

ಈ ಅನ್ನಮ್ಮನವರಿಗೂ ಎದುರು ಮನೆಯ ಸಾಕಮ್ಮನವರಿಗೂ ಸ್ನೇಹ ಬೆಳೆಯಿತು.

ಒಂದು ನಿಶ್ಚಯ

ಒಂದಾನೊಂದು ದಿನ ಅವರಿಬ್ಬರೂ ವಿರಾಮವಾಗಿ ಕುಳಿತು ಮಾತನಾಡುತ್ತಿದ್ದಾಗ ಅನ್ನಮ್ಮನವರು ಹೀಗೆ ಹೇಳಿದ್ದರು:

"ಸಾಕಮ್ಮ, ಇವರ ಮನೆ ಸೇರಬೇಕಾದ ಗತಿ ಬಂತೆಂದು ನೀವು ಆಗಾಗ ಸಂಕಟಪಟ್ಟುಕೊಳ್ಳುತ್ತಿದ್ದೀರಿ. ಇದಕ್ಕೆ ಕಾರಣವಿಲ್ಲವೆಂದು ನನಗೆ ಅನ್ನಿಸುತ್ತದೆ. ನೀವು ಇಲ್ಲಿಗೆ ಬಂದದ್ದರಿಂದ ಈ ದಿಕ್ಕೆಟ್ಟ ಮನೆ ಉದ್ಧಾರವಾಗಬಹುದು. ಕಾಮಾಕ್ಷಮ್ಮನೂ ಆಕೆಯ ಮೂರು ಮಂದಿ ಸೊಸೆಯರೂ ಚಿಕ್ಕಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡದ್ದರಿಂದ ಈ ಮನೆಗೆ ನಿಮ್ಮ ಜನದಲ್ಲಿ ಒಂದು ಕೆಟ್ಟ ಹೆಸರು ಬಂದಿದೆ, ಇಲ್ಲಿಗೆ ಬಂದ ಹೆಣ್ಣು ಮಕ್ಕಳು ಬಾಳೋದಿಲ್ಲ ಅಂತ. ಆ ಅಪವಾದವನ್ನ ನೀವು ದೊಡ್ಡ ಮನಸ್ಸು ಮಾಡಿ ಹೋಗಲಾಡಿಸಬೇಕು. ನಿಮ್ಮ ಯಜಮಾನರು ಶೇಷಗಿರಿಯಪ್ಪನಿಗೆ ಫೀಜು ಕೊಡುವುದಕ್ಕೆ ಹೊರಟರು. ಶೇಷಗಿರಿಯಪ್ಪನಿಗೆ ಆ ಫೀಜು ಬೇಡ. ನಿಮ್ಮ ಮಗಳನ್ನು ಅವನ ಮಗ ವೆಂಕಟರಮಣನಿಗೆ ಕೊಟ್ಟುಬಿಡಿ. ಅದೇ ಶೇಷಗಿರಿಯಪ್ಪನಿಗೆ ಫೀಜು."

ಇಲ್ಲಿಂದ ಮುಂದೆ ನಡೆದದ್ದನ್ನು ಕುರಿತು ಹೆಚ್ಚಾಗಿ ಬರಯಬೇಕಾದ ಅವಶ್ಯಕತೆಯಿಲ್ಲ. ಅನ್ನಮ್ಮನವರ ಮಾತಿನಲ್ಲಿ ಎಲ್ಲರಿಗೂ ಅತ್ಯಂತ ಗೌರವ. ಆಕೆಯ ಹಿತೋಪದೇಶವನ್ನು ಎಲ್ಲರೂ ಸಂತೋಷದಿಂದ ನೆರವೇರಿಸಿದರು. ನನ್ನ ತಂದೆಯ ಮದುವೆ ಹೀಗೆ ಏರ್ಪಟ್ಟದ್ದು.

ವಿವಾಹ

ಮದುವೆಯಾದದ್ದು ಕಾರ್ವೇಟಿ ನಗರದಲ್ಲಿ ವೆಂಕಟರಮಣ ದೇವರ ಸನ್ನಿಧಾನದಲ್ಲಿ. ಗಂಡೂ ಹೆಣ್ಣೂ ದ್ರಾವಿಡ ಬ್ರಾಹ್ಮಣರು. ಗಂಡಿಗೆ ತಾಯಿ ಇಲ್ಲದ್ದರಿಂದ ಆ ಕಡೆ ನಾಂದಿಗಾಗಿ ಕೂತವರು ಮುಲಕನಾಡು ವೆಂಕಟರಾಮಭಟ್ಟರು, ಅಕ್ಕಯ್ಯಮ್ಮನವರು. ಹೆಣ್ಣಿಗೆ ತಂದೆ ಇಲ್ಲದ ಕಾರಣದಿಂದ ಆ ಕಡೆ ನಾಂದಿಗೆ ಕುಳಿತವರು ಬಡಗನಾಡು ಶಿನಿಗಪಲ್ಲಿ ನಂಜುಂಡಪ್ಪನವರು, ಭವಾನಮ್ಮನವರು. ವೆಂಕಟರಾಮಭಟ್ಟರು ಶೇಷಗಿರಿಯಪ್ಪನ ಸ್ನೇಹಿತರಾಗಿ ತಮ್ಮನಂತೆ ಇದ್ದವರು. ನಂಜುಂಡಪ್ಪನವರು ನಾರಣಪ್ಪನವರಿಗೆ ಸ್ನೇಹಿತರಾಗಿ ಸಾಕಮ್ಮನವರಿಗೆ ಅಣ್ಣನಂತೆ ಇದ್ದವರು.

ಹೆಣ್ಣಿಗೆ ವಯಸ್ಸು ಸುಮಾರು ಐದಾರು ವರ್ಷ. ಗಂಡಿಗೆ ಹನ್ನೆರಡು ಹದಿಮೂರು ವರ್ಷ. ಈ ದಾಂಪತ್ಯ ಎಪ್ಪತ್ತು ವರ್ಷಕಾಲ ಅವಿಚ್ಛಿನ್ನವಾಗಿ ನಿರ್ಮಲವಾಗಿ ಪರಸ್ಪರ ಸಂತೋಷಕರವಾಗಿ ಸಾಗಿತು.

ಮೂದಲಿಕೆ

ಅಲಮೇಲಮ್ಮನಿಗೂ ವೆಂಕಟರಮಣಯ್ಯನಿಗೂ ಆಗಾಗ ವಾಗ್ವಾದಗಳು ನಡೆಯುತ್ತಿದ್ದುದುಂಟು. ಆ ಪ್ರೇಮಕಲಹಗಳಲ್ಲಿ ಒಬ್ಬರನ್ನೊಬ್ಬರು ಮೂದಲಿಸುತ್ತಿದ್ದದ್ದು ಅಪರೂಪವಲ್ಲ. ಸಾರಿನಲ್ಲಿ ಖಾರ ಹೆಚ್ಚಿದಾಗ ವೆಂಕಟರಮಣಯ್ಯ ಹೆಂಡತಿಯನ್ನು ಕುರಿತು, "ನೀನು ಆ ಶಿನಿಗಪಲ್ಲಿ ನಂಜುಂಡಪ್ಪನ ಸಂಪ್ರದಾಯದೋಳಲ್ಲವೆ? ಆ ಸುಡು ಬೆಂಕಿ, ನಿನ್ನ ಅಡುಗೆ" ಎನ್ನುತ್ತಿದ್ದರು. ವೆಂಕಟರಣಯ್ಯ ಪಾಯಸಕ್ಕೆ ಇನ್ನಷ್ಟು ಬೆಲ್ಲಹಾಕು ಎಂದಾಗ ಅಲಮೇಲಮ್ಮನು, "ಮುಲಕನಾಡು ಪುರೋಹಿತರ ಶಿಷ್ಯರಲ್ಲವೆ ನೀವು! ನಿಮಗೆ ಕಬ್ಬಿನಲ್ಲಿಯೇ ಸಿಹಿ ಇಲ್ಲ" ಎನ್ನುತ್ತಿದ್ದರು.

ಈ ವಿನೋದ ಸ್ವಲ್ಪ ವಿರಸಕ್ಕೆ ತಿರುಗಿದಾಗ ಆಕೆ ಗಂಡನನ್ನು ಬಾಯಿ ಮುಚ್ಚಿಸಲು ಒಂದು ಅಸ್ತ್ರವನ್ನಿಟ್ಟುಕೊಂಡಿದ್ದಳು. "ನನ್ನದೇನು ನಿಮಗೆ ಲೆಕ್ಕ ನಿಮ್ಮಪ್ಪ ನಾಲ್ಕು ಮನೆ ತಿರುಗಿ ಗೋಗರೆದು ಬೇಡಿ ತಂದುಕೊಂಡ ಸೊಸೆಯೇ ನಾನು ಎಲ್ಲ ಸೊಸೆಯರಂತೆ? ಲಾಯರ್ ಫೀಜಾಗಿ ಬಂದವಳಲ್ಲವೆ? ಅದೇನು ಲಕ್ಷ್ಯ ನಿಮಗೆ?"

ಈ ಮೂದಲಿಕೆಯನ್ನು ಕೇಳಿದಾಗ ನಮ್ಮಪ್ಪನಿಗೆ ಒಂದು ಕಡೆ ಹಿಗ್ಗು, ಒಂದು ಕಡೆ ಸಿಗ್ಗು.

೪

ರಾಮಣ್ಣನವರ ಕಟ್ಟುನಿಟ್ಟು, ಸೌಹಾರ್ದ

ರಾಮಣ್ಣನವರು ನನ್ನ ಚಿಕ್ಕತಾತಂದಿರು. ಶೇಕ್‌ದಾರ್ ಗುಂಡಪ್ಪನವರ ಎರಡನೆಯ ಮಗ. ಇವರ ಪ್ರಸ್ತಾವವನ್ನು ಹಿಂದೆ ಕೊಂಚ ಮಾಡಿದೆ. ಇವರು ಮೊದಲು ಸರಕಾರದ ಸಾಯರ್ ಇಲಾಖೆಯಲ್ಲಿಯೋ ಮತ್ತೆಲ್ಲಿಯೋ ಕೆಲಸಮಾಡಿ ನಾಲ್ಕು ಕಾಸು ಗಂಟು ಕಟ್ಟಿದ್ದರೆಂದು ತೋರುತ್ತದೆ. ನಾನು ಹುಟ್ಟುವ ವೇಳೆಗೆ ಅವರಿಗೆ ಯಾವ ಚಾಕರಿಯೂ ಇರಲಿಲ್ಲ. ಅವರು ಸ್ವತಂತ್ರರಾಗಿದ್ದರು. ಕೊಂಚ ಲೇವಾದೇವಿ, ಅದರ ಜೊತೆಗೆ ಸ್ಟಾಂಪ್‌ವೆಂಡರ್ ಕೆಲಸ. ತಳಹದಿಯಾಗಿ ತಂದೆಯ ಕಾಲದಿಂದ ಬಂದಿದ್ದ ಜಮೀನು, ಹೆಚ್ಚುಗಟ್ಟಲೆ ಖರ್ಚಿಗೆ ಅಣ್ಣ ಶೇಷಣ್ಣನವರ ಸಹಾಯ–ಇಷ್ಟು ಮಾತ್ರದ ಸಂಪತ್ತಿನಿಂದ ಅವರು ಕುಟುಂಬ ನಿರ್ವಾಹ ಮಾಡಿದರು.

ಅವರಿಗೆ ಪತ್ನೀವಿಯೋಗವಾಗಿತ್ತೆಂದೂ ಮರುಮದುವೆ ಮಾಡಿಕೊಳ್ಳಲು ಅವರು ತಂದೆಯ ಮಾತನ್ನು ನಿರಾಕರಿಸಿದರೆಂದೂ ಹಿಂದೆ ಹೇಳಿದೆ. ಅಣ್ಣನ ಮತ್ತು ತಮ್ಮನ ಮಕ್ಕಳ ಸಂಸಾರವೇ ಅವರ ಸಂಸಾರ.

ರಾಮಣ್ಣನವರ ಜವಾಬ್ದಾರಿ

ನನ್ನ ತಾಯಿಯ ಮನೆತನದ ಸಮಾಚಾರವನ್ನು ಬೇರೆಯಾಗಿ ಹೇಳಬೇಕೆಂದಿದ್ದೇನೆ. ನನ್ನ ತಾಯಿಯ ಮೊದಲ ಅಣ್ಣ ವೆಂಕಟರಮಣಯ್ಯ ಎಂಬಾತ ಬುದ್ಧಿವಂತನೆನ್ನಿಸಿಕೊಂಡು ಲೆಕ್ಕಪತ್ರ ಬರೆಯುವುದರಲ್ಲಿ ಸಮರ್ಥನಾಗಿ ಅಚ್ಚುಮೆಚ್ಚಾಗಿದ್ದ. ಆತ ಇಪ್ಪತ್ತನೆಯ ವಯಸ್ಸಿನೊಳಗಾಗಿಯೇ ತೀರಿಕೊಂಡ. ಅದು ಕಾಲರಾ ವ್ಯಾಧಿಯಿಂದ ಎಂದು ಕೇಳಿದ್ದು ಜ್ಞಾಪಕ. ಆತನಿಗೆ ಮದುವೆಯಾಗಿತ್ತು. ಆತ ತೀರಿಹೋದ ಮರುದಿನವೇ ಆತನ ತಂದೆ ನನ್ನ ಮಾತಾಮಹ ನಾರಣಪ್ಪನವರೂ ಹೋದರು–ಪುತ್ರವಿಯೋಗ ದುಃಖದಿಂದ. ಈ ದೊಡ್ಡ ವಿಪತ್ತು ಬಂದ ಮರುದಿನವೇ ಬೈರಕೂರು ಪ್ರಾಂತದಿಂದ ಒಬ್ಬ ಆಳು ತಂದ ಸುದ್ದಿ ತನಗೆ ತಲಪಿದ ತತ್‌ಕ್ಷಣವೇ ರಾಮಣ್ಣನವರು ಬೈರಕೂರಿಗೆ ಹೋಗಿ ಅಲ್ಲಿ ನಡೆಯಬೇಕಾಗಿದ್ದ ಕೆಲಸಗಳನ್ನು ನಡೆಯಿಸಿ ನನ್ನ ಅಜ್ಜಿ ಸಾಕಮ್ಮನವರು ಅವರ ಎರಡನೆಯ ಮಗ, ಅವರ

ಮಗಳು (ನನ್ನ ತಾಯಿ) ನಾಲ್ಕೈದು ವರ್ಷದವಳು–ಇವರನ್ನು ಮುಳುಬಾಗಿಲಿಗೆ ಕರೆದುಕೊಂಡು ಬಂದು ಮನೆಯಲ್ಲುಳಿಸಿಕೊಂಡರು.

ಇದಕ್ಕೆ ಮೊದಲೇ ಇನ್ನೊಂದು ಸಂದರ್ಭ ನಡೆದಿತ್ತು. ರಾಮಣ್ಣನವರ ತಮ್ಮ ಶೀನಣ್ಣನವರ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಮಗ ಇವರೂ ಮುಳುಬಾಗಿಲಿನ ಮನೆಯಲ್ಲಿದ್ದರು. ಶೀನಣ್ಣನವರಿಗೂ ಪತ್ನೀವಿಯೋಗವಾಗಿತ್ತು. ಆ ಹೆಣ್ಣುಮಕ್ಕಳ ಪೋಷಣೆಗಾಗಿ ದೇವರಾಯಸಮುದ್ರದ ವೆಂಕಟಮ್ಮ ಎಂಬ ಮಡಿಹೆಂಗಸನ್ನು ಮನೆಯ ಕೆಲಸಕ್ಕಾಗಿ ನೇಮಕಮಾಡಿಕೊಂಡಿದ್ದರು. ಆಕೆಗೂ ನಮ್ಮ ಮನೆಯ ಕೆಲಮಂದಿಗೂ ಮನಸ್ಸು ಸರಿಯಾಗದೆ ಬೇರೆ ಏರ್ಪಾಟು ಮಾಡಬೇಕೆಂದಿದ್ದರು. ಆ ಹೊತ್ತಿಗೆ ಬಂದು ಸೇರಿದರು ಸಾಕಮ್ಮನವರು, ಅವರ ಮಕ್ಕಳು.

ಇನ್ನೊಂದು ಕಥೆ. ನನ್ನ ತಂದೆಗೆ ಹುಟ್ಟಿದ ಒಂದು ತಿಂಗಳ ಸುಮಾರಿನಲ್ಲಿ ಮಾತೃ ವಿಯೋಗವಾಯಿತು. ಆಗ ಮಗುವನ್ನು ಅವರ ದೊಡ್ಡಮ್ಮ ಜಾನಕಮ್ಮ ಎಂಬುವರು ಕರೆದುಕೊಂಡು ಹೋಗಿ ಸಾಕಿಕೊಂಡಿದ್ದರು. ಹೀಗೆ ಆರೇಳು ವರ್ಷ ಕಳೆಯಿತಂತೆ; ರಾಮಣ್ಣನವರಿಗೆ ಈ ಚಿಂತೆ. ಪದೇ ಪದೇ ಅಣ್ಣಂದಿರ ಜೊತೆಯಲ್ಲಿ ಪ್ರಸ್ತಾವ– “ನಮ್ಮ ಮಗುವನ್ನು ಎರಡನೆಯವರ ಮನೆಯಲ್ಲಿ ಎಷ್ಟು ದಿನ ಬಿಟ್ಟಿರುವುದು? ಜನ ಏನೆಂದುಕೊಂಡಾರು? ತುಂಬ ವಯಸ್ಸಾದ ಮೇಲೆ ಆ ಮಗು ಇಲ್ಲಿ ಬಂದು ಹೊಂದಿಕೊಂಡೀತೆ? ಅದರ ಯೋಗಕ್ಷೇಮ ನಮಗೆ ಸೇರಿದ್ದಲ್ಲವೆ? ಮಗುವನ್ನು ಬೇಗ ಕರೆದುಕೊಂಡು ಬರಬೇಕು.” ಹೀಗೆ ವಾದ ಕೆಲವು ದಿನ ನಡೆದ ಮೇಲೆ ಶೇಷಗಿರಿಯಪ್ಪನವರು ತಮ್ಮನ ಮಾತಿಗೆ ಒಪ್ಪಿಗೆ ಕೊಟ್ಟರು. ಅದರಂತೆ ನನ್ನ ತಂದೆ ಎಳೆಯ ಹುಡುಗನಾಗಿದ್ದಾಗ ಮುಳುಬಾಗಿಲಿಗೆ ಬಂದು ಸೇರಿದರು.

ಇದಿಷ್ಟು ರಾಮಣ್ಣನವರು ನಿರ್ವಹಿಸಬೇಕಾಗಿದ್ದ ಸಂಸಾರದ ಕಥೆ.

ಮೂರು ದೇವಸ್ಥಾನಗಳು

ರಾಮಣ್ಣನವರು ಸ್ವತಃ ಸಂಸಾರ ಬಿಟ್ಟವರು. ಆದರೂ ಅವರು ನಿರ್ವಹಿಸಿದಂಥ ಸಂಸಾರಭಾರವನ್ನು ಅಷ್ಟು ಭಕ್ತಿ, ಶ್ರದ್ಧೆಗಳಿಂದ ಯಾವ ಸಂಸಾರಿಯೂ ನಡಸಿರಲಾರ. ಅವರಿಗಿದ್ದ ಮೂರು ದೈವಸ್ಥಾನಗಳು (೧) ಅಣ್ಣತಮ್ಮಂದಿರ ಮಕ್ಕಳು, (೨) ಶ್ರೀಮದಾಂಜನೇಯ ಸ್ವಾಮಿ, ಶ್ರೀಸೋಮೇಶ್ವರ ಸ್ವಾಮಿಯ ಸನ್ನಿಧಾನಗಳು, (೩) ಗೋಶಾಲೆ. ಈ ಮೂರಕ್ಕಾಗಿ ಅವರು ಲೋಕದಲ್ಲಿ ಬಾಳಿ ಲೋಕವನ್ನು ನಡಸಿದರು.

ಅವರನ್ನು ಕೆಲಮಂದಿ ಲೋಭಿ ಎಂದು ಕರೆದದ್ದನ್ನು ನಾನು ಕೇಳಿದ್ದೇನೆ. ಈ ಲೋಭಿ ಎಂಬ ಮಾತನ್ನು ಅವರ ತಮ್ಮ ಶೀನಣ್ಣನವರೇ ಅವರ ವಿಷಯದಲ್ಲಿ ಬಳಸಿದ್ದರು. ಆದರೆ ಕೈಹಿಡಿತವಿದ್ದವರು ಎಂದು ಒಪ್ಪಿಕೊಳ್ಳುತ್ತೇನೆ. ಅವರು ಕೈಹಿಡಿತ ಮಾಡಿ ಕೂಡಿಟ್ಟದ್ದು ಕುಟುಂಬಕ್ಕೋಸ್ಕರ, ಸ್ವಂತ ಖರ್ಚಿಗಾಗಿ ಅಲ್ಲ. ಅವರಿಗೆ ಸ್ವಂತ ಖರ್ಚು ಏನೂ ಇರಲಿಲ್ಲ.

ದಿನಚರಿ

ಅವರ ದಿನಚರಿಯನ್ನು ಗೋಷ್ವಾರೆಯಾಗಿ ತಿಳಿಸಿದರೆ ಅವರ ಸ್ವಭಾವ ಗೊತ್ತಾಗಬಹುದು. ಅವರು ದಿನದಿನವೂ ಬೆಳಗ್ಗೆ ಕತ್ತಲುಕತ್ತಲಾಗಿರುವ ವೇಳೆಗೇ ಮುಖಪ್ರಕ್ಷಾಳನವಾಗಿ ವಿಭೂತಿ ಧರಿಸಿ ಸ್ತೋತ್ರಪಾಠ ಹೇಳಿಕೊಳ್ಳುತ್ತಿದ್ದರು. ಅದನ್ನು ನಾನು ಕೇಳಿದ್ದೇನೆ. ಆ ಸ್ತೋತ್ರಗಳ ಕೆಲವು ವಾಕ್ಯಗಳು ನನಗೆ ಕೊಂಚ ಪರಿಚಿತಗಳು. ಬಾಯಲ್ಲಿ ಸ್ತೋತ್ರ ಹೇಳುತ್ತಿದ್ದಾಗಲೇ ಒಂದು ಕೊಳಪಾತ್ರೆ ನೀರನ್ನು ಹೊತ್ತು ದನದ ಕೊಟ್ಟಿಗೆಗೆ ಹೋಗುವರು. ಹುಲ್ಲು ಹಾಕುವುದಕ್ಕಾಗಿ ಒಂದು ತೊಟ್ಟಿಯಿರುವುದು. ಅದರಿಂದ ಈಚೆ ಚೆಲ್ಲಿದ್ದ ಹುಲ್ಲನ್ನೆಲ್ಲ ಮೊದಲು ಎತ್ತಿ ತೊಟ್ಟಿಯೊಳಕ್ಕೆ ಹಾಕಬೇಕು. ಅನಂತರ ಆಕಳಿನ ಕಾಲು ಮುಟ್ಟಿ ಹಣೆಗೊತ್ತಿಕೊಳ್ಳಬೇಕು. ಬಳಿಕ ಎಮ್ಮೆಯನ್ನೂ, ಆಕಳನ್ನೂ ತೊಳೆದು ಚೊಕ್ಕಟಮಾಡುವುದು. ಎಮ್ಮೆಯ ಸೇವೆ ಹೆಚ್ಚು ಕಲಾಪದ್ದು. ಅದಕ್ಕೂ, ಮುಖ್ಯವಾಗಿ ಆಕಳಿಗೂ ಅರಿಶಿನ ಕುಂಕುಮ ಹಚ್ಚಿ ಮಂದೆಗೆ ಹೊಡೆದುಕೊಂಡು ಹೋಗುವುದು. ಈ ಮಂದೆಗೆ ಹೋಗುವ ಯೋಗ ನನ್ನ ಪಾಲಿಗೂ ಆಗಾಗ ಬರುತ್ತಿತ್ತು.

ಅಲ್ಲಿಂದ ಮನೆಗೆ ಬಂದ ಬಳಿಕ ನಡುವೆಯಲ್ಲಿ ತಮ್ಮ ಸಂದೂಕದ ಮುಂದೆ ಕೂಡುವರು. ಹೀಗೆ ೮ ರಿಂದ ೧೦ ಅಥವಾ ೧೧ರ ವರೆಗೆ ಛಾಪಾಕಾಗದದ ಬಿಕರಿ. ಊರಿನ ಲೇವಾದೇವಿಗಳ ಸಮಾಚಾರ, ಮನೆ ಜಮೀನುಗಳು ಮಾರಾಟವಾದದ್ದರ ವಿಚಾರ, ಊರಿನ ಸುದ್ದಿ-ಇದೆಲ್ಲ ನಡೆಯುವುದು. ೧೦-೧೧ರೊಳಗಾಗಿ ಸ್ನಾನ ಮಾಡಿ ದೇವತಾರ್ಚನೆ, ೧೨ ಘಂಟೆಯ ವರೆಗೆ. ಅವರು ಬ್ರಹ್ಮಯಜ್ಞವನ್ನು ನಿತ್ಯವಿಧಿಯಾಗಿರಿಸಿಕೊಂಡಿದ್ದರು. ಅವರಿಗೆ ಅನೇಕ ಮಂತ್ರಗಳೂ, ಸ್ತೋತ್ರಗಳೂ ಮುಖಸ್ಥವಾಗಿದ್ದವು. ದೇವರಿಗೆ ಮಂಗಳಾರತಿಯಾಗುವ ವೇಳೆಯಲ್ಲಿ ಮನೆಯಲ್ಲಿದ್ದ ಎಲ್ಲರೂ–ನನ್ನ ಅಜ್ಜಿ, ತಂದೆ, ತಾಯಿ, ಸೋದರತ್ತೆಯರು, ಅವರ ಗಂಡಂದಿರು, –ಎಲ್ಲರೂ ದೇವರ ಮನೆಯಲ್ಲಿ ವರಸೆಯಾಗಿ ನಿಂತುಕೊಳ್ಳತಕ್ಕದ್ದು, ಮಂತ್ರ ಹೇಳತಕ್ಕದ್ದು, ತೀರ್ಥಪ್ರಸಾದ ತೆಗೆದುಕೊಳ್ಳತಕ್ಕದ್ದು, ಇದೆಲ್ಲ ಕ್ರಮವಾಗಿ ನಡೆಯುತ್ತಿತ್ತು. ಈ ಕ್ರಮದಿಂದ ತಪ್ಪಿಸಿಕೊಳ್ಳಬೇಕೆಂದು ಯಾರಿಗೂ ಅನಿಸುತ್ತಿರಲಿಲ್ಲ. ಇದು ಆ ಕಾಲದ ವಿಶೇಷ. ಕ್ರಮವನ್ನು ಪಾಲಿಸುವುದು ಒಂದು ಸ್ವಾಭಾವಿಕ ಕ್ರಿಯೆಯಾಗಿತ್ತು.

ಅನಂತರ ಭೋಜನ. ಅತಿಥಿಗಳೂ, ಪರಸ್ಥಳದವರೂ ಒಬ್ಬಿಬ್ಬರಾದರೂ ಸಾಮಾನ್ಯವಾಗಿ ಪ್ರತಿ ದಿನವೂ ಇರುತ್ತಿದ್ದರು. ಭೋಜನಾನಂತರ ಅವರಿಗೆ ಮಲಗುವ ವಾಡಿಕೆಯಿರಲಿಲ್ಲ.

ನನ್ನ ತಾತಂದಿರಲ್ಲಿ ಹಗಲು ನಿದ್ರಿಸುವ ಅಭ್ಯಾಸ ಯಾರಿಗೂ ಬಂದಿರಲಿಲ್ಲ. ನನ್ನ ತಂದೆಗೂ ಇರಲಿಲ್ಲ. ನನಗೆ ಬಹು ವರ್ಷ ಇರಲಿಲ್ಲ. ಸುಮಾರು ೨-೩ ಘಂಟೆಯವರೆಗೆ ರಾಮಣ್ಣನವರು ಏನಾದರೂ ಮನೆಯ ಕೆಲಸ ಮಾಡುವರು; ಹುಣಸೆಕಾಯನ್ನು ಒಡೆದು ಬಿಡಿಸುವುದು, ಹೊಂಗೆಕಾಯಿ ಒಡೆದು ಬಿಡಿಸುವುದು, ಬತ್ತದ ಕಣಜವನ್ನು ಚೊಕ್ಕಟಪಡಿಸುವುದು, ಉಗ್ರಾಣದ ಮೇಲೆ ಉಸ್ತುವಾರಿ–ಈ ಚಿಲ್ಲರೆ ಕೆಲಸಗಳು, ಆಮೇಲೆ ನಡುವೆಗೆ ಬಂದು ಸಂದೂಕದ ಬಳಿ ಕೂಡುವರು–ಪಶ್ಚಿಮಾಭಿಮುಖವಾಗಿ. ನನ್ನನ್ನು ಎದುರುಗೋಡೆಗೆ ಒರಗಿಕೊಳ್ಳುವಂತೆ ಹೇಳಿ ಜಮಖಾನ ಹಾಕಿ ಅದರ ಮೇಲೆ ಒಂದು ಓದುವ ಇಳಿಮೇಜನ್ನಿರಿಸಿ, ನನ್ನಿಂದ ಓದಿಸುತ್ತಿದ್ದರು–ಕೃಷ್ಣರಾಜ ವಾಣೀವಿಲಾಸ ಭಾರತವನ್ನು, ಅವರಿಗಿಷ್ಟವಾದ ಇತರ ಗ್ರಂಥಗಳನ್ನು.

ಕಾವ್ಯವಾಚನ

ಈ ಓದಿನ ಕಾಲದಲ್ಲಿ ನೆರೆಹೊರೆಯ ಜನ ಬಂದು ಸೇರುತ್ತಿದ್ದರು. ಅತ್ತಿಕುಂಟೆ ಶ್ರೀಪತಿರಾಯರು, ಲಿಂಗಾಪುರದ ನರಸಪ್ಪನವರು, ಕೊಪ್ಪರದ ವರದಯ್ಯನವರು, ಕಂದಾಚಾರದ ರುಕ್ಮಿಣಮ್ಮನವರು. ಇತ್ಯಾದಿ. ನಾನು ಓದಿನಲ್ಲಿ ಯಾವ ಅಕ್ಷರವನ್ನಾದರೂ ತಪ್ಪಿದರೆ ಅದನ್ನು ತಿದ್ದುವರು. ಒಂದು ಸಾರಿ ಭಾರತದಲ್ಲಿ ಯಾವುದೋ ಪ್ರಕರಣ. ಋಷಿಗಳ ಸಭೆ ಸೇರಿತ್ತು. ಗ್ರಂಥ ವಾಕ್ಯದಲ್ಲಿ “ಕಶ್ಯಪ, ಜಾಬಾಲಿ ಮೊದಲಾದ ಮಹರ್ಷಿಗಳು ಅಂಗರಾಗದಿಂದ ವಿರಾಜಿಸುತ್ತಿದ್ದರು” ಎಂದಿತ್ತು. ರಂಗಾಚಾರ್ಯರೆಂಬವರು “ಅಂಗಾರದಿಂದ ವಿರಾಜಿಸುತ್ತಿದ್ದರು” ಎಂದು ತಿದ್ದಿದರು. ನಮ್ಮ ತಾತನಿಗೆ ಇದು ಹಾಸ್ಯಾವಕಾಶವಾಯಿತು. “ಜಾಬಾಲಿ ಮಾಧ್ವರೇನೊ? ನೀನು ಎಲ್ಲರಿಗೂ ಅಂಗಾರ ಹಚ್ಚಿಬಿಡುತ್ತಿ. ಆಗ ಮಧ್ವಾಚಾರ್ರು ಹುಟ್ಟಿರಲೇ ಇಲ್ಲ.” ಎಲ್ಲರೂ ನಕ್ಕರು. ರಂಗಾಚಾರ್ಯರೂ ನಕ್ಕರು.

ಈ ಓದಿನಲ್ಲಿ ಆಗಾಗ ಘಟ್ಟಗಳು ಬರುತ್ತಿದ್ದುವಷ್ಟೆ–ಕೀಚಕವಧೆ, ಕೃಷ್ಣನ ಆಗಮನ, ಇಂಥವು. ಈ ಘಟ್ಟಗಳು ಬಂದಾಗ ಪಾನಕ, ಪಣ್ಯಾರಗಳ ಸೇವೆ. ಹೀಗೆ ಅದೊಂದು ಸಂತೋಷವಾಗಿತ್ತು.

ಸಂಜೆ ಆರು ಘಂಟೆಗೆ ರಾಮಣ್ಣನವರು ಪೇಟೆಯ ಕಡೆ ಹೊರಡುವರು–ಗೋಗ್ರಾಸಕ್ಕಾಗಿ ಹೊಸ ಹುಲ್ಲಿನ ಮೂಟೆಗಳು: ರೈತ ಹೆಂಗಸರು ಹುಲ್ಲನ್ನು ಚಕ್ಕಿ ಚೊಕ್ಕಟ ಮಾಡಿ ತಾವು ಹೊರಲಾಗುವಷ್ಟು ಭಾರದ ಮೂಟೆಗಳನ್ನಾಗಿ ಕಟ್ಟಿ ಮಾರಾಟಕ್ಕೆ ತರುತ್ತಿದ್ದರು. ಒಂದು ಹೊರೆಗೆ ಎರಡಾಣೆ, ಎರಡೂಕಾಲಾಣೆ ಅಥವಾ ಎರಡೂವರಾಣೆ. ಈ ಬೆಲೆಯನ್ನು ತಗ್ಗಿಸಲು ರಾಮಣ್ಣನವರು ಕೋಷೀಸು ಮಾಡುತ್ತಿದ್ದರು. ಅವರಿಗೆ ಲೋಭಿ ಎಂದು ಹೆಸರು ಬರಲು ಇದು ಒಂದು ಕಾರಣ. ಅವರು ಹುಲ್ಲಿನ ಮೂಟೆಯನ್ನಿಳಿಸಿ ಅದರೊಳಕ್ಕೆ ಕೈಯಿಟ್ಟು, ಬಲಿತ ಹುಲ್ಲನ್ನೋ, ತೇವಮಾಡಿದ ಹುಲ್ಲನ್ನೋ ಇಟ್ಟಿದ್ದಾರೋ ಎಂದು ಪರೀಕ್ಷೆ ಮಾಡುವರು. ಇದು ಇನ್ನೊಂದು ಕಾರಣ. ಹುಲ್ಲಿಗೆ ಇಷ್ಟೆಲ್ಲ ಪರೀಕ್ಷೆಯೆ?

ಅವರು ಇಷ್ಟು ಕಟ್ಟುನಿಟ್ಟಾಗಿದ್ದರೂ ಅದರಿಂದ ಹೆದರಿದವರಾರನ್ನೂ ನಾನು ಕಾಣೆ. ಯಥೇಷ್ಟವಾಗಿ ಒಳ್ಳೆಯ ಹುಲ್ಲು ಮನೆಗೆ ಬರುತ್ತಿತ್ತು. ರಾಮಣ್ಣನವರು ಆ ಹುಲ್ಲಿನ ಮೂಟೆಗಳನ್ನು ಬಿಚ್ಚಿ ಹುಲ್ಲನ್ನು ಬಿಡಿಸಿ ಹಸು, ಎಮ್ಮೆಗಳ ಮುಂದೆ ಒಟ್ಟು ಹಾಕುವರು.

ಹಸು, ಎಮ್ಮೆಗಳನ್ನು ಮನೆಗೆ ಬರಮಾಡಿಕೊಂಡು ಅದರದರ ಗೊತ್ತಾದ ಜಾಗಗಳಲ್ಲಿ ಅದನ್ನು ಕಟ್ಟುವರು. ಒಂದು ವಿಶೇಷ, ಪ್ರತಿಯೊಂದು ದನ ಎಮ್ಮೆ ಕರುವಿನ ಮೈ ಮೇಲೂ ಕೈಯಿಂದ ಸವರುವರು, ಹಣೆಯ ಮೇಲೆ ಸವರುವರು. ಈ ಉಪಚಾರಗಳನ್ನು ದನಕರುಗಳು ಮೆಚ್ಚಿಕೊಂಡಿದ್ದವೆನಿಸುತ್ತದೆ. ಆದದ್ದರಿಂದಲೇ ಊರಿನ ಹಿರಿಯರು "ಆಕಳು ಎಮ್ಮೆ ಬೆಳೆಯುವುದೆಂದರೆ ರಾಮಣ್ಣನ ಕೈಯಲ್ಲಿ" ಎನ್ನುತ್ತಿದ್ದರು.

ದೇವರ 'ಪ್ರಸಾದ'

ದನಕರುಗಳ ಉಪಚಾರವಾದ ಮೇಲೆ ಆಂಜನೇಯಸ್ವಾಮಿ ಗುಡಿಗೆ ಪ್ರಯಾಣ. ಆ ಗುಡಿಗೆ ಹೋಗುವುದು ಒಂದು ದಿನವಾದರೂ ತಪ್ಪಲಿಲ್ಲ. ಗುಡಿಗೆ ಹೋಗಿ ಮಂಗಳಾರತಿ ಮಾಡಿಸಿ ದೇವರ ಪ್ರಸಾದವಾಗಿ ಒಂದು ತೆಂಗಿನಕಾಯಿ ಹೋಳನ್ನು ತರುವರು. ಅದರ ಜೊತೆಗೆ ದೇವರಿಗೆ ಧೂಪ ಹಾಕಿದ್ದದ್ದರ ಅಂಗಾರ ಮತ್ತು ಒಂದು ಕೇದಗೆಹೂ ಇರುತ್ತಿದ್ದವು. ಆ ಅಂಗಾರವನ್ನು ಮನೆಯ ಮಕ್ಕಳಿಗೆಲ್ಲ ಹಣೆಗೆ ಹಚ್ಚುವರು. ಮಗುವಿಗೆ ನೆಗಡಿ, ಜ್ವರ, ಹೊಟ್ಟೆಯ ನೋವು ಏನು ಬಂದರೂ ಅದಕ್ಕೆ ಆ ಅಂಗಾರವೇ ಮದ್ದು. ಆ ಕೇದಗೆಹೂವನ್ನು ನಮ್ಮ ತಾಯಿಯ ಕೈಯಲ್ಲಿಟ್ಟು ಮುಡಿದುಕೊಳ್ಳ ಹೇಳುವರು. ಇದು ನಿತ್ಯದ ಪದ್ಧತಿ. ಮುಳುಬಾಗಿಲು ಆಂಜನೇಯಸ್ವಾಮಿಯ ವಿಶೇಷ ಪ್ರಭಾವವೇನೆಂದರೆ–ಪ್ರತಿದಿನದ ಕೇತಕೀ ಸೇವೆ, ವರ್ಷದ ೩೬೫ ದಿನವೂ ಸ್ವಾಮಿಗೆ ಕೇದಗೆ ಹೂವಿನ ಅಲಂಕಾರ.

ನಮ್ಮ ತಾತ ಪ್ರತಿ ದಿನವೂ ತೆಂಗಿನಕಾಯಿ ಪ್ರಸಾದ ತರುತ್ತಿದ್ದದ್ದನ್ನು ಊರಿನ ಧರ್ಮಿಷ್ಠರು ಆಡಿಕೊಂಡು ನಗುತ್ತಿದ್ದ ಸಂಗತಿ ಏನೆಂದರೆ "ರಾಮಣ್ಣನವರಿಗೆ ಭಕ್ತಿಯೇನೋ ಉಂಟು. ಅದಕ್ಕಿಂತ ಹೆಚ್ಚಾಗಿ ತೆಂಗಿನ ಒಪ್ಪಿನ ಲಾಭ. ಅದು ಅವರಿಗೆ ಬಿಟ್ಟಿಯಾಗಿ ಬರುತ್ತದೆ–ಅವರು ಧರ್ಮದರ್ಶಿಯಾದದ್ದರಿಂದ. ತಮ್ಮ ಹಕ್ಕುದಾರಿ ಬಿಡಬಾರದೆಂದು ದಿನ ದಿನವೂ ದೇವರ ದರ್ಶನ ಮಾಡುತ್ತಾರೆ." ಈ ಕುಚೋದ್ಯದ ಮಾತು ರಾಮಣ್ಣನವರಿಗೂ ತಿಳಿದಿತ್ತು. ಅವರೂ ನಗುತ್ತಿದ್ದರು.

ಗುಡಿಯಿಂದ ತಂದ ತೆಂಗಿನ ಹೋಳನ್ನು ರಾತ್ರಿಯ ಫಲಾಹಾರಕ್ಕಾಗಿ ಬಳಸುತ್ತಿದ್ದರು. ರಾಮಣ್ಣನವರು ರಾತ್ರಿ ಊಟ ಬಿಟ್ಟು ಎಷ್ಟೋ ವರ್ಷವಾಗಿತ್ತು.

ಆ ಕಾಲದಲ್ಲಿ ಒಂದಾಣೆಗೆ ೬ ತೆಂಗಿನಕಾಯಿ, ೮ ತೆಂಗಿನಕಾಯಿ. ಹೀಗೆ ದಿನಕ್ಕೆ ಒಂದು ದಮ್ಮಡಿಯಷ್ಟು ಲೌಭ್ಯವನ್ನು ಆರೋಪಣೆ ಮಾಡಿದರೆ ಮಾಡಬಹುದು. ಇದರ ಜೊತೆಗೆ ಆಲೋಚಿಸಬೇಕಾದ ಸಂಗತಿ ಎರಡಿದೆ:

1. ರಾಮಣ್ಣನವರು ಆಂಜನೇಯ ಮೂರ್ತಿಗೆ ವಜ್ರಾಂಗಿಯನ್ನು ಹೊಲಿಸಿಕೊಟ್ಟಿದ್ದರು. ಅರ್ಚಕ ಸಂಜೀವಪ್ಪ, ಗೌರೀಶ ಶಾಸ್ತ್ರಿಗಳಿಗೂ ರಾಮಣ್ಣನವರಿಗೂ ತುಂಬ ಸ್ನೇಹ.

ಗೌರೀಶ ಶಾಸ್ತ್ರಿಗಳು ಬಯಸಿದಂಥ ಒಳ್ಳೆಯ ಬಣ್ಣಬಣ್ಣದ ಹೂವಿನ ಚಿತ್ರವುಳ್ಳ ಬಟ್ಟೆಯಲ್ಲಿ, ಗೌರೀಶ ಶಾಸ್ತ್ರಿಗಳು ಇಷ್ಟಪಟ್ಟಂತೆ ರಾಮಣ್ಣನವರು ಆ ವಜ್ರಾಂಗಿಯನ್ನು ಹೊಲಿಸಿದ್ದರು. ಅದು ಬಹು ಹಳೆಯದಾಗಿದ್ದಾಗ ನಾನು ಅದನ್ನು ನೋಡಿದ್ದೇನೆ.

2. ಇನ್ನೊಂದು ಸಂಗತಿ ಧನುರ್ಮಾಸದ ಒಂದೆರಡು ದಿನ ಸೇವೆಗಾಗಿ ರಾಮಣ್ಣನವರು ಒಂದು ದತ್ತಿಯನ್ನು ಏರ್ಪಡಿಸಿದ್ದರು. ನಮ್ಮ ಪೂಜೆಯಾದ ದಿನ ನಮ್ಮ ಮನೆಗೆ ಪ್ರಸಾದ ಬರುತ್ತಿದ್ದದ್ದು ನನಗೆ ಚೆನ್ನಾಗಿ ನೆನಪಿದೆ.

ಕಾರ್ತಿಕ ಮಾಸದಲ್ಲಿ ಒಂದು ಸೋಮವಾರ ಸೋಮೇಶ್ವರ ದೇವಾಲಯದಲ್ಲಿ ರಾಮಣ್ಣನವರ ಕೈಂಕರ್ಯ. ರುದ್ರಾಭಿಷೇಕ, ದೀಪಾರಾಧನೆ. ಶ್ರೀ ಪ್ರಸನ್ನ ಪಾರ್ವತೀದೇವಿಯ ಸನ್ನಿಧಿಯಲ್ಲಿ ಅಥವಾ ಚಾಮುಂಡೀ ಅಮ್ಮನವರಿಗೆ ಸಹಸ್ರನಾಮಾರ್ಚನೆ. ಇದರ ಜೊತೆಗೆ ಆ ದೇವಸ್ಥಾನದಲ್ಲಿದ್ದ ಮಹಿಷಾಸುರಮರ್ದಿನಿ ಅಮ್ಮನವರಿಗೆ ಒಂದು ಸೀರೆ ಕುಪ್ಪಸ. ಸೋಮವಾರ ಸೋಮವಾರ ಸೋಮೇಶ್ವರ ದೇವಲಯಕ್ಕೆ ಹೋಗುತ್ತಿದ್ದರು.

ಕಟ್ಟುನಿಟ್ಟು

ರಾಮಣ್ಣನವರು ಹಣಕಾಸಿನ ವಿಷಯದಲ್ಲಿ ಕಟ್ಟುನಿಟ್ಟಾದವರು. ಅವರದು ಎಲ್ಲ ಲೆಕ್ಕಾಚಾರ. ಅವರು ಒಂದಿಷ್ಟು ಲೇವಾದೇವಿ ವ್ಯಾಪಾರವನ್ನಿಟ್ಟುಕೊಂಡಿದ್ದರೆಂದು ಹೇಳಿದೆನಷ್ಟೆ. ಅವರು ತಮಗೆ ಬರಬೇಕಾಗಿದ್ದ ಅಸಲಿನ ವಿಚಾರವಾಗಿ ಮಾತ್ರವಲ್ಲದೆ ಬಡ್ಡಿಯ ವಿಚಾರದಲ್ಲೂ ಕಟ್ಟುನಿಟ್ಟಿನಿಂದ ಇದ್ದರು. ಅವರಿಗೆ "ಲೋಭಿ" ಎಂದು ಹೆಸರು ಬಂದದ್ದಕ್ಕೆ ಇದೇ ಮುಖ್ಯ ಕಾರಣವೆಂದು ನನ್ನ ಭಾವನೆ. "ಬಡ್ಡಿಯನ್ನು ಬಿಟ್ಟು ಕೊಡುವುದಾದರೆ ಈ ವ್ಯಾಪಾರವನ್ನು ಮಾಡುವುದು ಏತಕ್ಕೆ?" –ಎಂದು ಕೇಳುತ್ತಿದ್ದರು.

ಅವರಿಂದ ಸಾಲ ತೆಗೆದುಕೊಂಡವರಲ್ಲಿ ಸರಕಾರದ ಅಧಿಕಾರಿಗಳೂ ಇರುತ್ತಿದ್ದರು. ಅದನ್ನು ನಾನು ಬಲ್ಲೆ. ಆದರೆ ಯಾರೊಬ್ಬರ ಹೆಸರೂ ಬೀದಿಗೆ ಬಂದದ್ದಿಲ್ಲ. ರಾಮಣ್ಣನವರು ಕೋರ್ಟು ಕಚೇರಿಗಳಿಗೆ ಜನವನ್ನು ಸೆಳೆದವರಲ್ಲ. ಅವರು ವ್ಯಾಪಾರದಲ್ಲಿ ಒಂದುದೊಡ್ಡತನದ ಮರ್ಯಾದೆಯನ್ನಿಟ್ಟುಕೊಂಡಿದ್ದರು.

ಗ್ರಂಥಪರಿಚಯ

ರಾಮಣ್ಣನವರು ನನ್ನಿಂದ ಕನ್ನಡ ರಾಮಾಯಣ ಭಾರತಾದಿಗಳನ್ನು ಕ್ರಮವಾಗಿ ಓದಿಸುತ್ತಿದ್ದರೆಂದು ಮೇಲೆ ಹೇಳಿದೆ. ಅವರಿಗೆ ಭಾಗವತ, ರಂಗನಾಥ ರಾಮಾಯಣ-ಈ ಎರಡು ಗ್ರಂಥಗಳಲ್ಲಿಯೂ ತುಂಬ ಮೆಚ್ಚಿಕೆ. ಆಂಧ್ರ ಭಾಗವತದ ಅನೇಕ ಪದ್ಯಗಳು ಅವರಿಗೆ ಮುಖಸ್ಥವಾಗಿದ್ದವು. ಒಂದೊಂದು ಸಾರಿ ಮಾತುಕಥೆಯಲ್ಲಿ ಆ ಮಾತುಗಳನ್ನು ಉದಾಹರಿಸುವರು. ಒಂದು ಸಲ ಒಬ್ಬಾನೊಬ್ಬ ವೈಶ್ಯರು ಅವರನ್ನು ನೋಡಲು ಬಂದರು. ರಾಮಣ್ಣನವರು ಕೇಳಿದರು (ತೆಲುಗಿನಲ್ಲಿ):

"ಏನಯ್ಯಾ ಬಂದದ್ದು? ಬಹು ದಿನವಾಗಿತ್ತು ನಿನ್ನನ್ನು ನೋಡಿ."

ಆತ: "ಸುಮ್ಮನೆ ಸ್ವಾಮಿ."

ರಾಮಣ್ಣ: "ಊರುಕೆ ರಾರು ಮಹಾತ್ಮಲು ವಾರಧಮಲು..."

ಆತ: "ಏನು ಸ್ವಾಮಿ, ನನ್ನನ್ನು ಅಧಮನೆನ್ನುತ್ತೀರಲ್ಲ?"

ರಾಮಣ್ಣ: "ಮಹಾತ್ಮಡಯ್ಯ. ಅಧಮಡು ಕಾದು ನುವ್ವು. ಏನಾದರೂ ಉದ್ದೇಶವಿದ್ದೇ ಇರುತ್ತದೆ."

ಆತ ಯಾವುದೋ ಲೇವಾದೇವಿ ವ್ಯವಹಾರಕ್ಕೆ ಬಂದಿದ್ದ. ಅದಕ್ಕೆ ಪೀಠಿಕೆಯಾಗಿ ಈ ಹಾಸ್ಯದ ಮಾತು.

ಇನ್ನೊಂದು ಪ್ರಕರಣ. ರಾಮಣ್ಣನವರು ಪೇಟೆಯಲ್ಲಿ ಹೋಗುತ್ತಿದ್ದಾಗ ವೈಶ್ಯರಾರಾದರೂ ನಮಸ್ಕಾರ ಮಾಡುವರು. ರಾಮಣ್ಣನವರು ಹೀಗೆ ಆಶೀರ್ವದಿಸುವರು:

"ಮಹಾರಾಜುಗುಂಡಪ್ಪ."

"ಏನು ಸ್ವಾಮಿ, ನಿಮ್ಮ ತಂದೆಯ ಹೆಸರು ಹೇಳಿಕೊಳ್ಳುತ್ತೀರಿ! ನಮಗೇನಾಗುತ್ತದೆ?"

ಅದರಲ್ಲಿ ಒಂದು ಶ್ಲೇಷೆ: (೧) "ಮಹಾರಾಜುಗಾ ಉಂಡಪ್ಪ" (೨) "ಮಹಾರಾಜು ಗುಂಡಪ್ಪ."

ಕಡಗ

ರಾಮಣ್ಣನವರು ನನ್ನ ಎರಡು ಕೈಗಳಿಗೂ ಚಿನ್ನದ ಗಟ್ಟಿಯ ಗುಂಡು ಕಂಬಿಯ ಕಡಗಗಳನ್ನು ತೊಡಿಸಿದ್ದರು. ಮುಳುಬಾಗಿಲಿನ ವೈಶ್ಯರಲ್ಲಿ ಬಹುಮಂದಿ ಚಿನ್ನದ ಕಡಗಗಳನ್ನು ತೊಟ್ಟಿದ್ದರು. ಆದರೆ ಅದು ಚಿನ್ನದ ತಗಡು ಮಾತ್ರ. ಒಳಗೆ ತಾಮ್ರದ ದಪ್ಪರೇಕು. ಆದದ್ದರಿಂದ ಹೊರಕ್ಕೆ ಚಿನ್ನ ಥಳಥಳಿಸುತ್ತಿತ್ತು. ವೈಶ್ಯರನ್ನು ಕುರಿತು ಹೇಳುವರು:

“ಸಾಚಾವಾಗಿರಬೇಕೋ. ನನ್ನ ಮಗುವಿನ ಕೈ ನೋಡು–ಗಟ್ಟಿ ಬಂಗಾರ. ನಿಮ್ಮದು ಒಳಗೆ ಟೊಳ್ಳು, ಮೇಲೆ ಗಿಲೀಟು.”

ಗುರ್ರಾಲ ವೆಂಕಟಪ್ಪ

ರಾಮಣ್ಣನವರಿಗೆ ತೆಲುಗು ರಂಗನಾಥ ರಾಮಾಯಣದಲ್ಲಿ ವಿಶ್ವಾಸವೆಂದು ಹೇಳಿದೆನಷ್ಟೆ. ಈ ಗ್ರಂಥದ ಕಾರಣದಿಂದ ಅವರಿಗೆ ಶಿಷ್ಯನಾಗಿದ್ದಾತ ಅಕ್ಕಸಾಲೆ ಗುರ್ರಾಲ ವೆಂಕಟಪ್ಪ. ಈ ವೆಂಕಟಪ್ಪನವರಿಗೆ ರಾಮಣ್ಣನವರು ರಂಗನಾಥ ರಾಮಾಯಣ ಪಾಠ ಮಾಡಿಸಿ ಅರ್ಥ ವಿವರಣೆ ಹೇಳಿದ್ದರು. ಈ ಉಪಕಾರಕ್ಕಾಗಿ ತನ್ನ ಕೃತಜ್ಞತೆಯನ್ನು ಯಾವ ರೂಪದಲ್ಲಾದರೂ ತೋರಿಸಬೇಕೆಂದು ವೆಂಕಟಪ್ಪನವರಿಗೆ ತುಂಬ ಆಸೆ. ಆದರೆ ರಾಮಣ್ಣನವರು ಅದಕ್ಕೆ ಅವಕಾಶ ಕೊಡಲಿಲ್ಲ, "ನಿನ್ನಿಂದ ನಾನು ಏನನ್ನೂ ತೆಗೆದುಕೊಳ್ಳುವುದಿಲ್ಲ" ಎಂದು ಪದೇ ಪದೇ ಹೇಳಿದ್ದರು. ಕಡೆಗೆ ವೆಂಕಟಪ್ಪಾಚಾರ್ಯರು ಕಾಶೀಯಾತ್ರೆ ನಿಶ್ಚಯ ಮಾಡಿಕೊಂಡರು. ಅವರು ರಾಮಣ್ಣನವರಿಗೆ ಹೇಳಿದರು:

"ಸ್ವಾಮಿ, ನನ್ನಿಂದ ನೀವು ಏನನ್ನೂ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದಿರಿ. ಈಗ ನಾನು ಕಾಶೀಯಾತ್ರೆಗೆ ಹೊರಟಿದ್ದೇನೆ. ಅಲ್ಲಿಂದ ಬರುವಾಗ ವಿಶ್ವೇಶ್ವರ ಪ್ರಸಾದವನ್ನು ತರಬೇಕೆಂದಿದ್ದೇನೆ. ಅದನ್ನು ನೀವು ಬೇಡವೆನ್ನಕೂಡದು. ಅದು ಯಾವ ರೂಪದಲ್ಲಿರಬೇಕು? ಅಷ್ಟು ಹೇಳಿದರೆ ಸಾಕು."

ರಾಮಣ್ಣನವರು ಸಂತೋಷದಿಂದ ಒಪ್ಪಿ "ಒಂದು ಶಿವಲಿಂಗವನ್ನು ತರಬಹುದು" ಎಂದು ಹೇಳಿದರು. "ನಮ್ಮ ಮನೆಯಲ್ಲಿ ಪೂರ್ವಿಕರಿಂದ ಬಂದ ಸಾಲಿಗ್ರಾಮಗಳಿವೆ: ಒಂದು ಸಣ್ಣ ಸ್ಫಟಿಕಲಿಂಗವೂ ಇದೆ–ತುಂಬ ಸಣ್ಣದು. ಇನ್ನು ಕೊಂಚ ದೊಡ್ಡದಾಗಿರುವ ಬಾಣಲಿಂಗವಾದರೆ ಪೂಜೆಗೆ ಅನುಕೂಲ. ಮನೆಯಲ್ಲಿದ್ದದ್ದನ್ನು ನನ್ನ ತಮ್ಮ ತೆಗೆದುಕೊಂಡು ಹೋಗಿದ್ದಾನೆ."

ವೆಂಕಟಪ್ಪನವರು ಇದರಂತೆ ಕಾಶಿಯಿಂದ ಒಂದು ಶಿವಲಿಂಗವನ್ನು ತಂದು ರಾಮಣ್ಣನವರಿಗೆ ಕೊಟ್ಟದ್ದು ನನಗೆ ಜ್ಞಾಪಕವಿದೆ. ಕೊಟ್ಟದ್ದು ಹೇಗೆ? ಆ ಶಿವಲಿಂಗಕ್ಕೆ ಬೆಳ್ಳಿಯ ಪಾಣಿವಟ್ಟನ್ನು ಮಾಡಿದರು. ನಾಗಾಭರಣವನ್ನು ಮಾಡಿದರು. ನಮ್ಮ ತಾತನನ್ನು ತಮ್ಮ ಮನೆಗೆ ಕರೆದೊಯ್ದು ಒಂದು ಬಾಳೆ ಎಲೆಯ ಮೇಲೆ ಎರಡು ಸೇರು ಅಕ್ಕಿ ಹಾಕಿ ಅದರ ನಡುವೆ ಈ ಶಿವಲಿಂಗವನ್ನಿಟ್ಟು ಅದರ ಜೊತೆಗೆ ತಾಂಬೂಲ, ಐದು ರೂಪಾಯಿ ಇಟ್ಟು ಒಪ್ಪಿಸಿದರು. ಮತ್ತು ಆ ದಿನ ಐದು ಮಂದಿ ವೈದಿಕ ಬ್ರಾಹ್ಮಣರಿಗೆ ನಮ್ಮ ಮನೆಯಲ್ಲಿ ಸಂತರ್ಪಣೆಯನ್ನೇರ್ಪಡಿಸಿದ್ದರು. ರಾಮಣ್ಣನವರು ಅದನ್ನು ಮನೆಗೆ ತೆಗೆದುಕೊಂಡ ದಿನ

ಅದಕ್ಕೆ ಏಕಾದಶವಾರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆಗಳನ್ನು ಮಾಡಿಸಿದರು. ಇದರಂತೆ ೪೫ ದಿನವೋ, ೪೮ ದಿನವೋ ನಡೆಯಿತು. ಅನ್ನಸಂತರ್ಪಣೆ, ಸುವಾಸಿನಿಯರಿಗೆ ಹೂವೀಳ್ಯ–ಎಲ್ಲ ನಡೆಯಿತು. ಮನೆಯಲ್ಲಿ ಎಲ್ಲರಿಗೂ ಸಂಭ್ರಮ. ಕೋಲಾರದಿಂದ ನನ್ನ ತಾತಂದಿರು ಒಂದೆರಡು ದಿನದ ಮಟ್ಟಿಗೆಬಂದಿದ್ದರು.

ಸರ್ವಂ ಯಸ್ಯ ವಶಾದಪಿ ಸ್ಮೃತಿಪಥಂ
ಕಾಲಾಯ ತಸ್ಮೈ ನಮಃ ॥

ಮಠದ ಸಾಲ

ಮುಳುಬಾಗಿಲಿನ ಮಜ್ಜಿಗೆಹಳ್ಳಿಯ ಮಠದವರು ರಾಮಣ್ಣನವರಿಂದ ಹಣ ಸಾಲ ತೆಗೆದುಕೊಂಡಿದ್ದರು. ಈ ಸಾಲಕ್ಕೆ ಖಾತರಿಯಾಗಿ ಆ ಮಠದ ದೇವತಾ ವಿಗ್ರಹದ ಚಿನ್ನದ ಕವಚಗಳನ್ನು ಒತ್ತೆಯಿಟ್ಟಿದ್ದರು. ಈ ಸಾಲ ಕೊಟ್ಟಾಗ ಆ ಸಂಗತಿ ಶೇಷಣ್ಣನವರಿಗೆ ತಿಳಿದಿರಲಿಲ್ಲ. ಮಠದ ಕಾರ್ಯಕರ್ತರಾದ ಮಧ್ವರಾಯಾಚಾರ್ಯರವರು ಯಾವುದೋ ವ್ಯವಹಾರಕ್ಕಾಗಿ ಕೋಲಾರಕ್ಕೆ ಹೋಗಿ ಶೇಷಣ್ಣನವರೊಂದಿಗೆ ಮಾತನಾಡುತ್ತಿದ್ದಾಗ ಪ್ರಾಸಂಗಿಕವಾಗಿ ಆ ಸಾಲದ ವಿಚಾರ ಆಚಾರ್ಯರ ಬಾಯಿಂದ ಹೊರಬಿತ್ತು. ಆ ಕ್ಷಣದಲ್ಲಿ ಶೇಷಗಿರಿಯಪ್ಪನವರೂ ಆಚಾರ್ಯರಿಗೆ ಏನೂ ಹೇಳಲಿಲ್ಲ.

ಮೂರು ನಾಲ್ಕು ದಿನಗಳಾದ ಮೇಲೆ ಶೇಷಗಿರಿಯಪ್ಪನವರು ರಾಮಣ್ಣನವರಿಗೆ ನಾಲ್ಕು ಒಂದು ನೂರು ರೂಪಾಯಿ ನೋಟುಗಳನ್ನು ಕಳುಹಿಸಿ “ಇದನ್ನು ನೀನು ಮಠಕ್ಕೆ ಕೊಟ್ಟಿರುವ ಸಾಲಕ್ಕಾಗಿ ತೆಗೆದುಕೊಂಡು, ದೇವರ ಕವಚಗಳನ್ನು ಕೂಡಲೇ ಹಿಂತಿರುಗಿಸತಕ್ಕದ್ದು. ಮಠದ ಸ್ವತ್ತು ನಮ್ಮ ಮನೆಯಲ್ಲಿರಬಾರದು” –ಎಂದು ಕಾಗದ ಬರೆದರು. ರಾಮಣ್ಣನವರು ಆ ಮಾತಿನಂತೆ ನಡೆದರು. ಅದರಲ್ಲಿ ಒಂದು ವಿಶೇಷ. ಸ್ವಾಮಿಗಳನ್ನು ಮನೆಗೆ ಬರಮಾಡಿಕೊಂಡು ಪಾದಪೂಜೆ ನಡಸಿ ಅವರು ಹಿಂತಿರುಗುವಾಗ ಅವರ ಮೇನಾದಲ್ಲಿ ಆ ಚಿನ್ನದ ಕವಚಗಳನ್ನಿರಿಸಿದರು. ಆ ಬೆಲೆಬಾಳುವ ಸ್ವತ್ತುಗಳನ್ನು ಒಂದು ದೊಡ್ಡ ತಾಂಬಾಳೆಯಲ್ಲಿ ಅಕ್ಕಿ ತುಂಬಿ ಅದರ ನಡುವೆ ಇರಿಸಿ, ಹೂವು, ತಾಂಬೂಲ, ತೆಂಗಿನಕಾಯಿ ದಕ್ಷಿಣೆಗಳ ಸಮೇತ ಹಿಂತಿರುಗಿಸಿದರು. ಇದು ಒಂದು ದಿನ ಬೆಳಗ್ಗೆ ೧೦-೧೧ ಘಂಟೆಯ ವೇಳೆಯಲ್ಲಿ. ಅಂದು ರಾತ್ರಿ ಮಠದಲ್ಲಿ ವಿಜೃಂಭಣೆಯಿಂದ ದೀಪಾರಾಧನೆ. ಆಗಿನ ಪ್ರಸಾದ ಎರಡು ದೊಡ್ಡ ಅರಳು ಲಡ್ಡಿಗೆಗಳು ನನ್ನ ಕೈಗೆ ಬಂದದ್ದು ಜ್ಞಾಪಕವಿದೆ.

‘ಉರಸ್’

ಮುಳುಬಾಗಿಲಿನ ಆಗ್ನೇಯ ಮೂಲೆಯಲ್ಲಿ ಒಂದು ದರ್ಗಾ ಉಂಟು. ದರ್ಗಾ ಎಂಬುದು ಮುಸಲ್ಮಾನ ಸಾಧುಸಂತರ ಸಮಾಧಿ ಸ್ಥಳ. ಮುಳುಬಾಗಿಲು ಬೆಟ್ಟದ ಮೇಲೆ ಹೈದರ್ವಲ್ಲಿ ಎಂಬ ಭಕ್ತನು ತಪಸ್ಸುಮಾಡಿಕೊಂಡಿದ್ದನಂತೆ. ಆತನ ಸಮಾಧಿಯೇ ಆ ದರ್ಗಾ ಎಂದು ಹೇಳುತ್ತಾರೆ. ಆ ದರ್ಗಾದಲ್ಲಿ ಆರು ವರ್ಷಕ್ಕೋ ಎಂಟು ವರ್ಷಕ್ಕೋ ಒಮ್ಮೆ ಉರಸ್ ಎಂಬ ಉತ್ಸವ. ಆ ಉತ್ಸವಕ್ಕಾಗಿ ದೂರಸ್ಥಳಗಳಿಂದಲೂ ಹತ್ತಿರದಿಂದಲೂ ಭಕ್ತಾದಿಗಳು ಬಂದು ನೆರೆಯುತ್ತಾರೆ. ಅವರಲ್ಲನೇಕರು ಫಕೀರರೂ ಇರುತ್ತಾರೆ. ಆ ಫಕೀರರಲ್ಲಿ ಕೆಲವರು ಕೊರಾನಿನಿಂದ ಮಂತ್ರಗಳನ್ನೋ ಬೇರೆ ಹಾಡುಗಳನ್ನೋ ಹಾಡಿಕೊಂಡು ಕೈಯಲ್ಲಿ ಘಮಘಮಿಸುವ ಊದುಬತ್ತಿ ಹಿಡಿದು ದರ್ಗಾದಲ್ಲಿ ಒಂದು ಗೋರಿಯಿಂದ ಇನ್ನೊಂದಕ್ಕೆ ಪ್ರಯಾಣಮಾಡಿ ಸೇವೆ ಸಲ್ಲಿಸುತ್ತಾರೆ. ಈ ಉರಸ್‌ನ ಕೇಂದ್ರವೆಂದರೆ ಪಟ್ಟಕ್ಕೆ ಕುಳಿತ ಒಬ್ಬ ಫಕೀರರು. ಫಕೀರರಲ್ಲಿ ನಾಲ್ಕೈದು ಪಂಗಡಗಳುಂಟಂತೆ. ಅವರು ಪೆನುಗೊಂಡೆ ಮೊದಲಾದ ಬೇರೆ ಬೇರೆ ಸ್ಥಳಗಳವರು. ಅವರವರಲ್ಲಿ ಉರಸ್ ಅಧ್ಯಕ್ಷ ಪಟ್ಟಕ್ಕಾಗಿ ಪೋಟಾಪೋಟಿ. ಹೀಗೆ ಉರಸ್ ಅಧ್ಯಕ್ಷನಾದ ಫಕೀರನು ಆ ಉರಸ್ ನಡೆಯುವ ಒಂದು ವಾರವೂ ಉಪವಾಸಿಯಾಗಿರಬೇಕು. ಮತ್ತು ಒಂದೇ ಕಡೆ ನಿಶ್ಚಲವಾಗಿ ಕುಳಿತು ಧ್ಯಾನಾರೂಢನಾಗಿರಬೇಕು. ಬೇರೆ ನಿಯಮಗಳೂ ಉಂಟು. ಒಟ್ಟಿನ ಮೇಲೆ ಅದು ಪೂಜ್ಯಸ್ಥಾನ, ಮಹಾ ಮಹಿಮೆಯುಳ್ಳದ್ದು. ಈ ಕಾರಣದಿಂದ ಪೋಟಾಪೋಟಿ. ಪೋಟಾಪೋಟಿ ನಡಸುತ್ತಿದ್ದವರು ಫಕೀರರಿಗಿಂತ ಹೆಚ್ಚಾಗಿ ಅವರ ಹಿಂಬಾಲಕರು, ಶಿಷ್ಯರು. ಅವರಲ್ಲಿ ತಕರಾರೆದ್ದು, ಉರಸ್ ನಿಂತು ಹೋಗುವ ಸಂಭವವೂ ತೋರುತ್ತಿತ್ತು.

ರಾಮಣ್ಣನವರ ಅಧಿಕಾರ

ಈ ತಕರಾರನ್ನು ಯಾವುದೋ ದಾಖಲೆ ದೂಖಲೆಗಳಿಂದ ಪರಿಹಾರ ಮಾಡುವ ಅಧಿಕಾರ ಹೇಗೋ ನಮ್ಮ ಚಿಕ್ಕತಾತ ರಾಮಣ್ಣನವರ ಕೈಗೆ ಬಂದಿತ್ತು. ದರ್ಗಾ ಅಧಿಕಾರಿಗಳು ಅವರಲ್ಲಿ ಬಂದು ಮೊದಲು ಪ್ರಸ್ತಾಪ ಮಾಡುತ್ತಿದ್ದರು. ರಾಮಣ್ಣನವರು ದಾಖಲೆಗಳನ್ನು ತೋರಿಸಿ "ಇಂಥ ಫಕೀರರೇ ಈ ಸಾರಿ ಅಧ್ಯಕ್ಷರಾಗಿರತಕ್ಕದ್ದು ಯುಕ್ತ" -ಎಂದು ಸಲಹೆಕೊಡುತ್ತಿದ್ದರು. ಅದನ್ನು ದರ್ಗಾ ಅಧಿಕಾರಿಗಳು ಅಂಗೀಕರಿಸುತ್ತಿದ್ದರು. ಮತ್ತು ಸಲಹೆಗೆ ಪ್ರತಿಫಲವಾಗಿ ಗೌರವ ತೋರಿಸುತ್ತಿದ್ದರು.

ಉರಸ್ ಉತ್ಸವ ಐದಾರು ದಿನ ನಡೆಯುತ್ತಿತ್ತಷ್ಟೆ. ಕಡೆಯ ದಿನ ದರ್ಗಾದಿಂದ ಒಂದು ಮೆರವಣಿಗೆ ಹೊರಡುವುದು. ನಾಲ್ಕು ಮೂಲೆಗಳಲ್ಲಿ ನಾಲ್ವರು ಕೈಯಲ್ಲಿ ಹಿಡಿದ ಕೋಲುಗಳ ಮೇಲುಗಡೆ ಬಟ್ಟೆಯ ಕನಾತನ್ನು ಕಟ್ಟಿ ಚಪ್ಪರ ಮಾಡುವರು. ಆ ಚಪ್ಪರದ ಕೆಳಗಡೆ ಒಂದು ಸಿಂಗರಿಸಿದ ಕುದುರೆಯನ್ನು ನಡಸಿಕೊಂಡು ಬರುವರು. ಇದು ಅರಬ್ಬೀ ದೇಶದ ಒಂಟೆಗೆ ಪ್ರತ್ಯಾಮ್ನಾಯ. ಕುದುರೆಯ ಎರಡು ಪಕ್ಕಗಳಲ್ಲಿಯೂ ಹೂವು, ಗಂಧ ಹುಡಿ, ಪನ್ನೀರುದಾನಿಗಳನ್ನು ಹೊತ್ತ ಜನ ಬರುವರು. ಕುದುರೆಯ ಜೀನಿನ ಮೇಲೆ ಕೊರಾನ್ ಪುಸ್ತಕದ ಒಂದು ದಫ್ತರ ಬರುತ್ತಿತ್ತೆಂದು ಜ್ಞಾಪಕ.

ಈ ಮೆರವಣಿಗೆ ರಾತ್ರಿ ೮ ರಿಂದ ೮-೩೦ರ ಸುಮಾರಿಗೆ ನಮ್ಮ ಮನೆಯ ಮುಂದೆ ಬರುವುದು. ನನ್ನ ತಾತಂದಿರಿಗೆ ಪನ್ನೀರು, ಹೂವಿನ ಹಾರ, ಗಂಧದ ಹುಡಿ–ಇದನ್ನು ಉರಸ್‌ನ ಪ್ರಸಾದವಾಗಿ ಕೊಡುವರು. ಕುಶಲ ಸಂಭಾಷಣೆಯಾದ ಮೇಲೆ ಮೆರವಣಿಗೆ ಹಿಂದಕ್ಕೆ ಹೋಗುವುದು.

ಹಿಂದೂ ಮುಸಲ್ಮಾನರ ಪರಸ್ಪರ ಸ್ನೇಹ ಔದಾರ್ಯಗಳ ಗುರುತೆಂದು ಈ ಪ್ರಕರಣವನ್ನು ನಿರೂಪಿಸಿದೆ.

ಗೃಹಕೃತ್ಯ ನಿಷ್ಠೆ

ಈಗ ನನ್ನ ಚಿಕ್ಕತಾತ ರಾಮಣ್ಣನವರ ಗೃಹಕೃತ್ಯ ನಿಷ್ಠೆ. ನಮ್ಮ ಮನೆಯ ಆದಾಯವ್ಯಯದ ಯಾವದ್ವಿಶಿಷ್ಟವನ್ನೂ ರಾಮಣ್ಣನವರು ಕೈಯಲ್ಲಿರಿಸಿಕೊಂಡಿದ್ದರು. ಶೇಷಣ್ಣನವರು ಹಣಸಂಪಾದಿಸಿದರು. ತಮ್ಮಿಷ್ಟದಂತೆ ಖರ್ಚು ಮಾಡಿದರು. ಊರಿನ ಸಂಸಾರವನ್ನು ಅವರು ಮರೆತವರಲ್ಲ. ತಿಂಗಳು ತಿಂಗಳೂ ಒಂದಷ್ಟು ಹಣವನ್ನು ತಮ್ಮ ರಾಮಣ್ಣನ ಕೈಗೆ ಕೊಡುತ್ತಿದ್ದರು–ಮಗನ ಕೈಗಲ್ಲ. ಮದುವೆ ಮುಂಜಿ ಇಂಥ ವಿಶೇಷ ಸಂದರ್ಭಗಳಲ್ಲಿ ಹೆಚ್ಚು ಸಹಾಯ ಕೊಡುತ್ತಿದ್ದರು. ಸಾಮಾನ್ಯವಾಗಿ ಗಂಡುಹುಡುಗರಿಗೂ ಹೆಂಗಸರಿಗೂ ಬೇಕಾದ ಬಟ್ಟೆಬರೆಗಳನ್ನೂ ಜಮಖಾನ ಕಂಬಳಿಗಳನ್ನೂ ಅವರೇ ಕೋಲಾರದಿಂದ ಕಳುಹಿಸುತ್ತಿದ್ದರು. ಆದರೆ ನಿತ್ಯನಿತ್ಯದ ವ್ಯವಹಾರ ರಾಮಣ್ಣನವರ ಜವಾಬ್ದಾರಿ. ಅಣ್ಣಂದಿರು ಕೊಟ್ಟಿದ್ದನ್ನು ತಮ್ಮ ಕೈಯಲ್ಲಿರಿಸಿಕೊಂಡು ವಿವೇಚನೆಯಿಂದ ವಿನಿಯೋಗಿಸಿದವರು ರಾಮಣ್ಣನವರು. ಯಾವ ಮಾತು ಬಂದರೂ ದೊಡ್ಡವರು-

“ರಾಮಣ್ಣ, ಅದೇನೋ ನೋಡು” ಎನ್ನುವರು.

ಶೇಕದಾರ ಗುಂಡಪ್ಪನವರಿಂದ ಬಂದಿದ್ದ ಜಮೀನು ಕೊಂಚ ಇತ್ತು. ಶಿದ್ದಗಟ್ಟ ಎಂಬ ಹಳ್ಳಿಯ ಬಳಿ ಗದ್ದೆ. ಕೆಂಗುಂಟೆ ಎಂಬ ಕೆರೆಯ ಕೆಳಗೆ ಗದ್ದೆ. ಸೋಮೇಶ್ವರಪಾಳ್ಯದ ಬಳಿ ಹೊಲ ಗದ್ದೆ. ಇನ್ನೂ ಇಲ್ಲಿಷ್ಟು ಅಲ್ಲಷ್ಟು ಜಮೀನು ಇತ್ತು. ಎರಡು ಮೂರು ದೊಡ್ಡ ಹುಣಸೆ ತೋಪುಗಳಿದ್ದವು, ಕೋಲಾರ–ಬೆಂಗಳೂರು ರಸ್ತೆಯಲ್ಲಿ. ಸೋಮೇಶ್ವರಪಾಳ್ಯದ ಸಮೀಪದಲ್ಲಿ ಎರಡು ಪಕ್ಕಗಳ ಸಾಲುಮರಗಳ ಹಕ್ಕುದಾರಿಯೂ ಇತ್ತು. “ಇತ್ತು” ಎಂದೆ– ಭೂತಕಾಲ.

ಮೇಲಣ ಜಮೀನುಗಳಿಂದ ಬರುತ್ತಿದ್ದ ಧಾನ್ಯಸಾಮಾಗ್ರಿಯೇ ನಮ್ಮ ಕುಟುಂಬಕ್ಕೆ ಮುಖ್ಯಾಧಾರ. ರಾಮಣ್ಣನವರ ಲೇವಾದೇವಿ ವ್ಯಾಪಾರಕ್ಕೆ ಬಂಡವಾಳ ಬಂದದ್ದೂ ಅರ್ಧ ಪಾಲು ಈ ಜಮೀನಿನ ಫಸಲಿನಿಂದ. ಮೇಲ್ಖರ್ಚಿಗೆ ಶೇಷಗಿರಿಯಪ್ಪನವರ ಸಂಪಾದನೆ.

ಮನೆಯಲ್ಲಿದ್ದ ಜನ ಹತ್ತು ಮಂದಿ ಬೆಳೆದವರು. ನಾಲ್ಕೈದು ಮಕ್ಕಳು. ನನ್ನ ತಂದೆ ತಾಯಿ ಅಲ್ಲದೆ, ನಮ್ಮ ಮಾತಾಮಹಿ, ಆಕೆಯ ಮಗ. ಅಲ್ಲದೆ ನಮ್ಮ ಚಿಕ್ಕತಾತ ಶೀನಪ್ಪನವರ ಇಬ್ಬರು ಹೆಣ್ಣುಮಕ್ಕಳು, ಅಳಿಯಂದಿರು, ಅವರ ಮಕ್ಕಳು. ಆಗಾಗ ಬಾಣಂತನಗಳು,

ಪುಣ್ಯದಿನಗಳು, ತಿಥಿ ಹಬ್ಬಗಳು–ಇವೆಲ್ಲ ಸೇರಿ ಖರ್ಚು ಎಣಿಸಬಹುದಾದಷ್ಟೇ ಇತ್ತು. ಇದನ್ನೆಲ್ಲ ಮುಂದಾಲೋಚನೆಯಿಂದ ಲೆಕ್ಕ ಮಾಡಿಕೊಂಡು ಜಾಣತನದಿಂದ ನಡಸಿದವರು ರಾಮಣ್ಣನವರು.

ಹೊಂಗೆಕಾಯಿ ಮನೆಗೆ ಬರುವುದು; ಹಾಗೆಯೇ ಹುಣಸೆಕಾಯಿ. ಮನೆಯ ಮುದುಕರು–ಒಂದೊಂದು ಸಾರಿ ಹುಡುಗರೂ-ಹೊಂಗೆಕಾಯನ್ನು ಒಡೆದು ಬೀಜವನ್ನು ರಾಶಿ ಮಾಡುವರು. ರಾಮಣ್ಣನವರು ಈ ಬೀಜವನ್ನು ಗೊತ್ತಾದ ಗಾಣಿಗರಿಗೆ ಕೊಟ್ಟು ಅದಕ್ಕೆ ಪ್ರತಿಯಾಗಿ ಮನೆಗೆ ಬೇಕಾಗುವಷ್ಟು ಹೊಂಗೆ ಎಣ್ಣೆಯನ್ನೂ ಒಂದಷ್ಟು ಒಳ್ಳೆಣ್ಣೆಯನ್ನೂ ಬದಲಾಬದಲಿಯಾಗಿ ಕೊಡುವಂತೆ ಏರ್ಪಡಿಸಿದ್ದರು.

ನಮಗೆ ಹುಚ್ಚೆಳ್ಳಿನ ಬೆಳೆ ಕೊಂಚ ಬರುತ್ತಿತ್ತು. ಅದನ್ನೂ ಎಣ್ಣೆ ಮಾಡಿಸಿ ಉಪಯೋಗಕ್ಕೆ ತರಿಸುತ್ತಿದ್ದರು.

ನಮ್ಮ ಮನೆಯಲ್ಲಿ ಎಲ್ಲರಿಗೂ ಊಟಕ್ಕೆ ಒಳ್ಳೆಣ್ಣೆ ಹುಚ್ಚೆಳ್ಳೆಣ್ಣೆ ಹಾಕಿಸಿಕೊಳ್ಳುವುದು ಇಷ್ಟ. ಗೊಜ್ಜು ಚಿತ್ರಾನ್ನಗಳಿಗೆ ಹುಚ್ಚೆಳ್ಳೆಣ್ಣೆ ಬಹು ಸೊಗಸೆಂದು ಕೆಲವರ ರುಚಿ. ಮನೆಯಲ್ಲಿ ಹಾಲು ತುಪ್ಪಗಳು ದಂಡಿಯಾಗಿರುತ್ತಿದ್ದವೆಂದು ಹಿಂದೆ ಹೇಳಿದೆ. ಆದದ್ದರಿಂದ ಎಣ್ಣೆ ಬಡಿಸಿಕೊಳ್ಳುತ್ತಿದ್ದದ್ದು ರುಚಿಗಾಗಿ. ಒಳ್ಳೆಣ್ಣೆ ಮುಖ್ಯವಾಗಿ ದೇವರ ದೀಪಕ್ಕೆ.

ಕಾವಲು

ಮನೆಗೆ ಬೇಕಾದಷ್ಟು ರಾಗಿ ಬರುತ್ತಿತ್ತು. ಅದನ್ನು ಗಡಿಗೆಗಳಲ್ಲಿ-ದೊಡ್ಡ ಮಣ್ಣಿನ ಭಾಂಡಗಳಲ್ಲಿ-ಮೇಲುಬಾಯಿಂದ ಗಡಿಗೆಯೊಳಕ್ಕೆ ಧಾನ್ಯ ಸುರಿಯುವುದು: ಕೆಳಭಾಗದ ಒಂದು ಸಣ್ಣರಂಧ್ರದಿಂದ ರಾಗಿಯನ್ನು ಹೊರಕ್ಕೆ ತೆಗೆದುಕೊಳ್ಳುವುದು. ಈ ಗಡಿಗೆಗಳ ಮೇಲೆ ರಾಮಣ್ಣನವರ ಕಾವಲು.

ಅವರ ಕಾವಲಿಗೆ ಭಂಗ ಬಾರದಂತೆ ಗಡಿಗೆಗಳನ್ನು ಖಾಲಿ ಮಾಡುತ್ತಿದ್ದುದು ನನ್ನ ತಂದೆ. ನನ್ನ ತಂದೆಗೆ ತೋಟದ ಉದ್ಯಮದಲ್ಲಿ ತುಂಬ ಖಯಾಲಿ. ಈ ತೋಟದಲ್ಲಿ ಕಲ್ಲುಬೆಂಚುಗಳನ್ನು ಹಾಕಿಸುವುದಕ್ಕಾಗಿ, ಕಲ್ಲು ಕಂಬಳಿಗಳಿಗಾಗಿ, ಚಪ್ಪಡಿಗಳಿಗಾಗಿ ಆಗಾಗ ಕಲ್ಲೊಡ್ಡರ ಕೆಲಸ ಬೇಕಾಗುತ್ತಿತ್ತು. ಅವರಿಗೆ ಕೂಲಿಯನ್ನು ರಾಗಿಯ ರೂಪದಲ್ಲಿ ಕೊಡಬೇಕಾಗುತ್ತಿತ್ತು. ಸಂಜೆ ರಾಮಣ್ಣನವರು ಗೋಗ್ರಾಸಕ್ಕೆಂದೋ ಗುಡಿಗೆಂದೋ ಹೊರಗೆ ಹೋಗಿದ್ದಾಗ ನನ್ನ ತಂದೆ ಗಡಿಗೆಗಳಿಂದ ರಾಗಿ ತೆಗೆದು ಕೆಲಸಗಾರರಿಗೆ ಕೊಡುವರು. ರಾಮಣ್ಣನವರಿಗೆ ಇದು ಎಂದೋ ಗೊತ್ತಾದಾಗ ಕೊಂಚ ಗೊಣಗಾಡುವರು. ಕೊಂಚ ನಗುವರು. ನನ್ನ ತಂದೆಯ ತೋಟದಲ್ಲಿ ರಾಮಣ್ಣನವರಿಗೆ ಮೆಚ್ಚಿಕೆ. ರಾಗಿ ಖರ್ಚಾಯಿತೆಂದು ಅಸಮಾಧಾನ.

ಬತ್ತದ ಏರ್ಪಾಟೂ ಹೀಗೆಯೇ. ಅದರೆ ನಮ್ಮ ಜಮೀನಿನಿಂದ ಬರುತ್ತಿದ್ದ ಬತ್ತ ನಮ್ಮ ಮನೆಗೆ ಸಾಕಾಗುತ್ತಿರಲಿಲ್ಲ. ಆದದ್ದರಿಂದ ರಾಮಣ್ಣನವರು ಒಂದು ಹತ್ತು ಖಂಡುಗ ಕೆಂಪುಸಣ್ಣ ನೆಲ್ಲು ಬತ್ತಕ್ಕೆ ಒಟ್ಟು ಏರ್ಪಾಡು ಮಾಡುತ್ತಿದ್ದರು. ಅವರಿಂದ ಸಾಲ ತೆಗೆದುಕೊಂಡ ರೈತರು ಅವರು ಕೊಡಬೇಕಾದ ಬಡ್ಡಿ ಬಗೆಗೆ ನೆಲ್ಲು ತಂದುಕೊಡುತ್ತಿದ್ದರು. ಇಂಥ ಏರ್ಪಾಟು ಮಾಮೂಲಾಗಿ ನಡೆಯುತ್ತಿತ್ತು. ತಕರಾರೆದ್ದದ್ದು ಅಪರೂಪ.

ಬೆಲ್ಲ

ನಮ್ಮ ಮನೆಯ ದೊಡ್ಡ ಖರ್ಚಿನ ಬಾಬು ಎಂದರೆ ಬೆಲ್ಲ. ಬೆಲ್ಲಕ್ಕೆ ಮೇಲಿನಂತೆ ಏರ್ಪಾಟು. ಗೊತ್ತಾಗಿದ್ದ ರೈತರಿಗೆ ರಾಮಣ್ಣನವರು ಮುಂಗಡ ಕೊಡತಕ್ಕದ್ದು. ಇದಕ್ಕೆ ಬದಲಾಗಿ ರೈತ ನಾಲ್ಕಡಿಗೆ ಅಥವಾ ಐದಡಿಗೆ ಬೆಲ್ಲದ ಮುದ್ದೆಗಳನ್ನು ಕೊಡತಕ್ಕದ್ದು. ಒಂದು ಅಡಿಗೆ ಎಂದರೆ ಒಂದು ಸಲ ಆಲೆಮನೆಯ ದೊಡ್ಡ ಕೊಪ್ಪರಿಗೆಯಲ್ಲಿ ಕಾಯಿಸಲಾಗುವಷ್ಟು ಕಬ್ಬಿನ ರಸದಪಾಕ. ಇದರಲ್ಲಿ ಬಹುಶಃ ೪೦-೫೦ ಮುದ್ದೆಗಳಾಗುತ್ತಿದ್ದವೆಂದು ತೋರುತ್ತದೆ. ನನಗೆ ಹೆಚ್ಚಿನ ಜ್ಞಾನವಿಲ್ಲ. ಕೋಲಾರ ಮುಳುಬಾಗಿಲು ಸೀಮೆಯಲ್ಲಿ ಕಬ್ಬಿನ ರಸದಿಂದ ಪಾಕವನ್ನು ಅಚ್ಚಿಗೆ ಹಾಕುವ ವಾಡಿಕೆಯಿರಲಿಲ್ಲ. ದೊಡ್ಡ ತಂಬಿಗೆಯಂಥ ಉಂಡೆಗಳನ್ನಾಗಿ ಮಾಡುವುದು ರೂಢಿ. ನಮ್ಮ ಮನೆಗೆ ಇಂಥ ಮುದ್ದೆ ತಿಂಗಳಿಗೆ ೧೦-೧೫ ಬೇಕಾಗುತ್ತಿತ್ತು. ಮನೆಗೆ ಬೆಲ್ಲ ಬಂದ ಹೊಸದರಲ್ಲಿ ಅದನ್ನು ಹಾಗೆಯೇ ತಿಂದುಬಿಡುತ್ತಿದ್ದೆವು. ತಂಬಿಟ್ಟಿನಂತೆ ಅದು ಹಲ್ಲಿಗೆ ಸುಲಭವಾಗಿರುತ್ತಿತ್ತು. ಈ ಮುದ್ದೆಗಳನ್ನು ಐದಾರು ಗುಡಾಣಗಳಲ್ಲಿ ದಾಸ್ತಾನು ಮಾಡುತ್ತಿದ್ದರು. ಮೇಲೆ ಮಣ್ಣಿನ ಚಟ್ಟಿ. ಚಟ್ಟಿವನ್ನೋ ಗುಡಾಣದ ಬಾಯನ್ನೋ ಭದ್ರಪಡಿಸಲಿಕ್ಕಾಗಿ ಕೆಮ್ಮಣ್ಣಿನಲ್ಲಿ ನೆನೆಸಿದ ಬಟ್ಟೆಯ ಚಿಂದಿಯನ್ನು ಸುತ್ತೂರ ಕಟ್ಟಿರುತ್ತಿದ್ದರು. ಗುಡಾಣದ ಹೊಟ್ಟೆಯ ಮೇಲೆ ಸುಣ್ಣದಲ್ಲಿ ಗುರುತು ಮಾಡಿದ ಅಂಕಿ ೧, ೨, ೩ ಇತ್ಯಾದಿ. ಈ ಸಂಖ್ಯಾ ಕ್ರಮದಲ್ಲಿ ಗುಡಾಣಗಳನ್ನು ಖಾಲಿ ಮಾಡತಕ್ಕದ್ದು. ಇದು ರಾಮಣ್ಣನವರ ವ್ಯವಸ್ಥೆ.

ನಮ್ಮ ಮನೆಗೆ ಹುಣಸೆಹಣ್ಣು ಯಥೇಷ್ಟವಾಗಿ ಬರುತ್ತಿತ್ತು. ನಮಗಿದ್ದ ಹುಣಸೆ ತೋಪುಗಳ ವಿಷಯವನ್ನು ಹಿಂದೆ ಹೇಳಿದ್ದೇನೆ. ಗುಡಿಯ ಬಳಿಯಿದ್ದ ಇಪ್ಪತ್ತೈದು ಹಳೆಯ ಹುಣಸೆಮರಗಳ ತೋಪನ್ನು ರೂ. ೨೫ಕ್ಕೆ ಮಾರಿಬಿಟ್ಟೆವು. ಈಗ ಬೆಲೆ ಅದರ ಐವತ್ತರಷ್ಟಾದೀತು. ಇಂಥ ತೋಪುಗಳಿಂದ ಬಂದ ಹುಣಸೆಹಣ್ಣಿನ ಮೇಲಿನ ತೊಗಟೆನಾರನ್ನೂ ಒಳಗಿನ ಬೀಜವನ್ನೂ ತೆಗೆದು ಹಣ್ಣನ್ನು ಮಾತ್ರ ಪಿಂಡಿಗಳಾಗಿ ಮಾಡಿ ಈಚಲುಚಾಪೆಗಳಲ್ಲಿ ಸುತ್ತಿ ಹೊಲೆದು ದಾಸ್ತಾನು ಮಾಡಿರುತ್ತಿದ್ದರು. ಇದನ್ನು ಅವರಿವರಿಗೆ ದಾನವಾಗಿ ಕೊಡುವುದೂ ಉಂಟು.

ನಾರು ಮಾವಿನಕಾಯಿ (ದಾಡೀ ಪಸಂದ್) ಬರುತ್ತಿತ್ತು. ಅದನ್ನು ಒಣ ರಾಗಿ ಹುಲ್ಲಿನಲ್ಲಿ ಮುಚ್ಚಿಟ್ಟು ಮಾಗಹಾಕುತ್ತಿದ್ದರು.

ಸಾಸಿವೆ ಬರುತ್ತಿತ್ತು. ಅದೂ ದಾಸ್ತಾನು.

ಇದನ್ನೆಲ್ಲ ಹೇಳುವುದರ ತಾತ್ಪರ್ಯವೇನೆಂದರೆ ಅದು ೬೦-೭೦ ವರ್ಷಗಳ ಹಿಂದೆ ಇದ್ದ ಎಕಾನಮಿ-ಸಂಪದ್ವ್ಯವಸ್ಥೆ. ಅರ್ಥಶಾಸ್ತ್ರದಲ್ಲಿ ಎರಡು ಯುಗಗಳನ್ನು ಗುರುತಿಸಬಹುದು. (೧) ಭೂವ್ಯವಸಾಯದ್ದು, (೨) ಯಂತ್ರ ಕಾರ್ಖಾನೆಗಳದು. ಮೊದಲನೆಯದರ ಲಕ್ಷಣ ನೆಮ್ಮದಿಯ ಜೀವನ. ಎರಡನೆಯದರ ಲಕ್ಷಣ ಪೋಟಾಪೋಟಿ. ಈಗ ನಾವು ಎರಡನೆಯ ರೀತಿಯ ಸಂಪತ್ ಪ್ರಯತ್ನದಲ್ಲಿ ಮುನ್ನುಗ್ಗುತ್ತಿದ್ದೇವೆ. ಇಂಥ ಕಾಲದಲ್ಲಿ ನೆಮ್ಮದಿಯ ಸಂಪದ್ವ್ಯವಸ್ಥೆ ಹೇಗಿತ್ತೆಂಬುದನ್ನು ಕೊಂಚ ಕೊಂಚ ನೆನಪುಮಾಡಿಕೊಳ್ಳಬಹುದು.

ಸೌದೆ

ನಮ್ಮ ಮನೆಯಲ್ಲಿ ಸೌದೆಯ ಖರ್ಚು ಕೊಂಚ ಹೆಚ್ಚು. ವ್ರತಗಳೂ ತಿಥಿಗಳೂ ಆಗಾಗ ಬರುತ್ತಿದ್ದವು. ಆದುದರಿಂದ ಅಡಿಗೆಮನೆ ನೀರುಮನೆಗಳ ಒಲೆಗಳು ಹೆಚ್ಚಾಗಿ ಉರಿಯಬೇಕಾಗಿತ್ತು. ಇದಕ್ಕಾಗಿ ರಾಮಣ್ಣನವರು ಆಗಾಗ ಊರ ಸುತ್ತಲಿನ ತೋಪುಗಳಲ್ಲಿಯೂ ಸಾಲುಮರಗಳಲ್ಲಿಯೂ ಎಲ್ಲೆಲ್ಲಿ ಒಣ ಮರಗಳೂ ಮುದಿಮರಗಳೂ ಇವೆ ಎಂದು ನಿಗಾ ಇಟ್ಟಿರುತ್ತಿದ್ದರು. ಅಂಥ ಮರಗಳನ್ನು ಕೊಂಡುಕೊಂಡು ಕಡಿಸಿ ಆ ದಿಮ್ಮಿಗಳನ್ನು ನಮ್ಮ ಮನೆಯ ಮುಂದಿನ ಬಯಲಿನಲ್ಲಿ ಹಾಕಿಸಿರುವರು. ಪ್ರತಿ ದಿನವೂ ಛಾಪಾಕಾಗದಕ್ಕಾಗಿ ಬಂದವರಲ್ಲಿ ಮರವನ್ನು ಸೀಳಬಲ್ಲವರು ಒಬ್ಬರಿಬ್ಬರು ಇರುತ್ತಿದ್ದರು. ರಾಮಣ್ಣನವರು ಅವರಲ್ಲೊಬ್ಬರನ್ನು "ರೆಂಡು ಚೆಕ್ಕಲು ತೀಸಿವೇಸಿ ಪೋರಾ" (ಎರಡು ಚೆಕ್ಕೆ ಸೀಳಹಾಕಿ ಹೋಗೋ) ಎನ್ನುವರು. ಹಾಗೆ ಮಾಡಿದವರಿಗೆ ಮೂರು ಕಾಸೋ ಆರು ಕಾಸೋ ಕೊಡುವುದೂ ಉಂಟು, ಸಮಯೋಚಿತವಾಗಿ. ಇದರ ಜೊತೆಗೆ ಆಗಾಗ ಸೌದೆಯ ತಲೆಹೊರೆಗಳನ್ನು ಕೊಳ್ಳುತ್ತಿದ್ದದ್ದೂ ಉಂಟು. ಮನೆಯಲ್ಲಿ ಬತ್ತ ಕುಟ್ಟಿಸಿದಾಗ ಬಂದ ನೆಲ್ಲುಹೊಟ್ಟಿಗೆ ಮನೆಯ ದನಕರುಗಳ ಸಗಣಿ ಬೆರಸಿ ಬೆರಣಿ ಮಾಡಿಟ್ಟುಕೊಂಡು ಉಪಯೋಗಿಸುತ್ತಿದ್ದದ್ದೂ ಉಂಟು. ಇಂಥದು ಆ ಕಾಲದ "ಎಕಾನಮಿ" –ಅರ್ಥನಿರ್ವಾಹ.

ಈಗ ಧನದ ಐಶ್ವರ್ಯ ಹೆಚ್ಚಿತು. ಧಾನ್ಯದ ಐಶ್ವರ್ಯ ತಗ್ಗಿತು. ಸೋಪುಗಳೂ ಪೌಡರುಗಳೂ ಹೆಚ್ಚಿದವು; ಮನಸ್ಸಿನ ನಿರ್ಮಲತೆ ಇಳಿಯಿತು. ಭೋಗ ಹೆಚ್ಚಿತು; ನೆಮ್ಮದಿ ಕುಗ್ಗಿತು.

ವಾತ್ಸಲ್ಯ

ರಾಮಣ್ಣನವರು ಊಟದ ಹೊತ್ತಿನಲ್ಲಿ ನನ್ನನ್ನು ತಮ್ಮ ಪಕ್ಕದಲ್ಲಿ ಕೂಡ ಹೇಳುತ್ತಿದ್ದರು. ಇದು ಎಂದೂ ತಪ್ಪಿದ್ದಲ್ಲ. ಇದನ್ನು ಕುರಿತು ಶೀನಣ್ಣನವರು ಲಘುಹಾಸ್ಯ ಮಾಡುತ್ತಿದ್ದದ್ದುಂಟು. “ಸಾಕಮ್ಮನವರೆ, ಮಗುವಿಗೆ ಸ್ವಲ್ಪ ತುಪ್ಪ ನೋಡಿ” ಎನ್ನುವರು. ಮಗುವಿಗೆ ತುಪ್ಪ ಬಡಿಸಿದರೆ ಪಕ್ಕದಲ್ಲಿ ಕುಳಿತ್ತಿದ್ದ ತಮಗೂ ತುಪ್ಪ ಬರುತ್ತದೆಂದು ಮಗುವಿನಲ್ಲಿ ಆದರಣೆ. ಇದನ್ನು ಕೇಳಿದವರು ನಗುವರು. ರಾಮಣ್ಣನವರಿಗೆ ನನ್ನ ವಿಷಯದಲ್ಲಿ ಎಷ್ಟು ಪ್ರಿತಿಯೆಂದರೆ ಹಾಸಿಗೆಯಿಂದೆದ್ದ ಹೊತ್ತಿನಿಂದ ರಾತ್ರಿ ಮಲಗುವವರೆಗೂ ನಾನು ಅವರ ಪಕ್ಕದಲ್ಲೇ ಇರಬೇಕು; ಅಥವಾ ಅವರ ಕಣ್ಣೆದುರಿಗೇ ಓಡಾಡಿಕೊಂಡಿರಬೇಕು.

ಮಂಗಳವಾರ ಮುಳುಬಾಗಿಲಿನಲ್ಲಿ ಸಂತೆ. ಅಂದು ಮಧ್ಯಾಹ್ನ ೪ ಘಂಟೆಯ ವೇಳೆಗೆ ನಾನು ನನ್ನ ತಾತನ ಹೆಗಲಮೇಲೆ ಕೂಡಬೇಕು. ಬಲಗಡೆಯೂ ಎಡಗಡೆಯೂ ನನ್ನ ಕಾಲಿನ ಹಿಮ್ಮಡಿಯಿಂದ ಅವರನ್ನು ಒದೆಯಬೇಕು. ಅವರು ಹಾ! ಹಾ! ಎನ್ನುತ್ತ ಪೆಟ್ಟಿಗೆಯ ಬಾಗಿಲೆತ್ತಿ ಒಂದು ದಮ್ಮಡಿ ನನಗೆ ಕೊಡಬೇಕು. ಆಮೇಲೆ ನನ್ನ ಜೊತೆಯ ಇನ್ನೊಬ್ಬರಿಬ್ಬರು ತಲಾ ಒಂದೊಂದು ದಮ್ಮಡಿ ತರುವರು. ಅವರಲ್ಲೊಬ್ಬಾತ ನಮ್ಮೂರ ಡಾಕ್ಟರ ಸೋದರಳಿಯ ಶ್ರೀನಿವಾಸಯ್ಯಂಗಾರ್. ಇನ್ನೊಬ್ಬಾತ ಕಲ್ಲಾರಿ ನಾರಾಯಣ. ನಾವು ಮೂವರೂ ಸಂತೆಗೆ ಹೋಗಿ ಆ ಮೂರು ದಮ್ಮಡಿ ಕೊಟ್ಟರೆ ಕೈಗೆ ನಾಲ್ಕು ಎಳೆಯ ಸೌತೆಕಾಯಿಗಳು ಬರುತ್ತಿದ್ದವು. ಜೊತೆಗೆ ಒಂದಿಷ್ಟು ಹಸಿಮೆಣಸಿನಕಾಯಿ, ಉಪ್ಪು, ಕೊತ್ತಂಬರಿ ಬರುತ್ತಿತ್ತು. ಸಂತೆಮಾಳದ ಸಮೀಪದಲ್ಲಿ ಒಂದು ಚಿಕ್ಕ ಆಂಜನೇಯನ ಗುಡಿ. ಅದರ ಮುಂದೆ ಬಂಡೆಯ ಮೇಲೆ ನಾವು ಕುಳಿತು ಅಲ್ಲಿ ಚಟ್ನಿ ಅರೆದು ಅದನ್ನು ಸೌತೆಕಾಯಿಗೆ ಅನುಪಾನ ಮಾಡಿಕೊಂಡು ನಾಲ್ಕು ಕಾಯೂ ತಿನ್ನುತ್ತಿದ್ದೆವು. ಇದನ್ನು ನಮ್ಮ ತಾತನಿಗೆ ಹೇಳಿದಾಗ ಅವರು “ಭೇಷ್!” ಎನ್ನುವರು. ಹೀಗೆ ಕಳೆಯಿತು ನನ್ನ ಬಾಲ್ಯ.

ನನ್ನ ಮಶೀ ಕಸಬುದಾರಿಗೆ ಮೊದಲಾದದ್ದು ರಾಮಣ್ಣನವರ ಏರ್ಪಾಟಿನಿಂದ. ಸ್ಕೂಲಿಗೆ ಹೋದ ಹೊತ್ತಿನ ಹೊರತು ಯಾವಾಗಲೂ ನಾನು ಅವರ ಪಕ್ಕದಲ್ಲೇ ಇರುತ್ತಿದ್ದೆ. ಅವರು ಛಾಪಾ ಕಾಗದದ ಮಾರಾಟಗಾರರಾಗಿಯೂ ಇದ್ದರಷ್ಟೆ. ವರ್ಷದ ಕೆಲವು ತಿಂಗಳುಗಳಲ್ಲಿ ಆ ವ್ಯಾಪಾರ ಹೆಚ್ಚಾಗಿ ನಡೆಯುತ್ತಿತ್ತು. ಏಪ್ರಿಲ್ ಮೇ ಜೂನ್ ತಿಂಗಳುಗಳಲ್ಲಿ ರೈತ ಜನ ಬಂದೂಕು ಪರವಾನಗಿ (Gun licence) ಪಡೆದುಕೊಳ್ಳುವುದಕ್ಕಾಗಿ ಸರಕಾರಕ್ಕೆ ಅರ್ಜಿ ಬರೆದುಕೊಳ್ಳಬೇಕಾಗಿತ್ತು. ಅರ್ಜಿಯನ್ನು ನಾಲ್ಕಾಣೆಯ (ಅಥವಾ ಎಂಟಾಣೆಯ) ಛಾಪಾ

ಕಾಗದದ ಮೇಲೆ ಬರೆಯಬೇಕೆಂದು ವಿಧಿ. ಇದರಂತೆ ಛಾಪಾ ಕಾಗದ ಕೊಂಡು ಅರ್ಜಿ ಬರೆಯಿಸಿಕೊಳ್ಳುವುದಕ್ಕಾಗಿ ದಿನ ದಿನವೂ ೫-೬-೮ ಮಂದಿ ರೈತರು ರಾಮಣ್ಣನವರಲ್ಲಿಗೆ ಬರುತ್ತಿದ್ದರು. ರಾಮಣ್ಣನವರು ಛಾಪಾ ಕಾಗದವನ್ನು ಬಿಕರಿ ಮಾಡಿ ಆನಂತರ ಅರ್ಜಿಯನ್ನು ನನ್ನ ಕೈಯಿಂದ ಬರಸುತ್ತಿದ್ದರು. ಮಾತು ಅವರದು. ಅಕ್ಷರ ನನ್ನದು. ಬರೆದದ್ದಾದ ಮೇಲೆ ಮಶೀ ಕಾಣಿಕೆ: ಒಂದರ್ಜಿಗೆ ಎರಡಾಣೆ ಅಥವಾ ನಾಲ್ಕಾಣೆ, ಕೊಡುವವರ ಯೋಗ್ಯತಾನುಸಾರ. ಒಂದು ರೂಪಾಯಿ ಕೊಟ್ಟವರೂ ಉಂಟು. ಈ ಹಣವನ್ನೆಲ್ಲ ಸೇರಿಸಿ ರಾಮಣ್ಣನವರು ಬೇರೆಯಾಗಿರಿಸಿ ಅದು ನನ್ನದು ಎಂದು ಹೇಳುತ್ತಿದ್ದರು. ಆಗ ನಾನು ಕನ್ನಡ ನಾಲ್ಕನೆಯ ತರಗತಿಯಲ್ಲೋ ಐದನೆಯ ತರಗತಿಯಲ್ಲೋ ಇದ್ದೆ: ಲೋಯರ್ ಸೆಕಂಡರಿಗೆ ಒಂದು ತರಗತಿ ಕಡಮೆ. ಲೇಖನಿಯಿಂದ ನನಗೆ ಬಂದ ಮೊದಲ ಸಂಪಾದನೆ ಆ ಅರ್ಜಿ ಬರವಣಿಗೆಯದು. ನನ್ನ ಅಕ್ಷರ ಆಗ್ಗೆ ಇನ್ನೂ ಕುದುರಿರಲಿಲ್ಲ. ಸೊಟ್ಟು ಸೊಟ್ಟಾಗಿತ್ತು. ಪಂಕ್ತಿಗಳು ಅಡ್ಡಾದಿಡ್ಡಿ. ಆದರೂ ನನ್ನ ತಾತಂದಿರು "ಇದು ಸರಕಾರಕ್ಕೆ ಪರವಾಯಿಲ್ಲ. ರೈತರ ಅರ್ಜಿ ಇನ್ನು ಹೇಗಿರುತ್ತದೆ? ಸರಕಾರಕ್ಕೆ ಅಭಿಪ್ರಾಯ ತಿಳಿಯುತ್ತೋ ಇಲ್ಲವೋ? ಅಷ್ಟು ಸಾಕು" ಎನ್ನುತ್ತಿದ್ದರು.

***

ರಾಮಣ್ಣನವರು ಸಾಮಾನ್ಯವಾಗಿ ಮೈಮೇಲೆ ಬನಿಯನ್ನಾಗಲಿ ಕೋಟಾಗಲಿ ಹಾಕುತ್ತಿದ್ದವರಲ್ಲ. ಉಟ್ಟಿರುವ ಧೋತ್ರದ ವಿನಾ ಬೇರೆ ಬಟ್ಟೆಯನ್ನು ಹಾಕಿಕೊಳ್ಳುತ್ತಿರಲಿಲ್ಲ. ಮನೆಯ ಮುಂದೆ ಕೈಸಾಲೆಯಲ್ಲಿ ಕುಳಿತಿದ್ದಾಗ ದೊಡ್ಡ ಮನುಷ್ಯರು ಯಾರಾದರೂ ಬಂದರೆ ಎದ್ದು ನಿಲ್ಲುವರು. ಮಾತನಾಡುವರು. ಆ ಕಾಲದಲ್ಲಿ ಧೋತ್ರದ ಸೆರಗನ್ನು ಎದೆಯ ಮೇಲೆ ಹಾಕಿಕೊಳ್ಳುವರು. ಇದು ಮರ್ಯಾದೆಯ ಸಂಕೇತ. ಅವರು ತಿಂಗಳಿಗೋ ಎರಡು ತಿಂಗಳಿಗೋ ಒಂದಾವರ್ತಿ ಕಛೇರಿಗೆ ಹೋಗಬೇಕಾಗುವುದು. ಆಗ ತಲೆಯ ಮೇಲೆ ಭಾರೀ ರುಮಾಲು, ಮೈ ಮೇಲೆ ಕಶೆ ಅಂಗಿ; ಒಂದು ಮಡಿಸಿದ ಧೋತ್ರವೇ ಉತ್ತರೀಯ.

ರುಮಾಲು

ಆ ರುಮಾಲಿನ ಕಥೆ ಹೇಳುತ್ತೇನೆ. ಮುಳುಬಾಗಿಲ ಬಳಿಯ ಆವನಿ ಮಠದ ಆಶ್ರಯದಲ್ಲಿ ಒಬ್ಬ ಮುಸಲ್ಮಾನ ದೊಡ್ಡಮನುಷ್ಯ ಇದ್ದ. ಆತ ಚಿನ್ನ ತಯಾರು ಮಾಡುತ್ತಿದ್ದನಂತೆ. ಒಂದು ದಿನ ಆತ ಒಂದು ಜಟಕದ ತುಂಬ ಹೊಸ ಹೊಸ ಸರಿಗೆಯ ರುಮಾಲುಗಳನ್ನೂ ಶಲ್ಯಗಳನ್ನೂ ಪಂಚೆಗಳನ್ನೂ ತುಂಬಿಸಿಕೊಂಡು ಬೀದಿ ಬೀದಿಯಲ್ಲೂ ಮೆರವಣಿಗೆ ಮಾಡಿ, ನಮ್ಮ ಮನೆಯ ಮುಂದೆ ಬಂದಾಗ ರಾಮಣ್ಣನವರಿಗೂ ಒಂದು ರುಮಾಲನ್ನು ಕೊಟ್ಟು ಅವರು ಉಪಯೋಗಿಸಬೇಕೆಂದು ಹೇಳಿದ. ಅವರು ಬೆಲೆ ಏನೆಂದು ಕೇಳಿದರು. ಆತ “ನೀವೇನೂ ಕೊಡಬೇಕಾಗಿಲ್ಲ. ಇದು ಮುಫತ್” ಎಂದ. ಅವರು “ನನಗೆ ಮುಫತ್ತು ಬೇಡ, ನಾನು ಬೆಲೆ ಕೊಡುತ್ತೇನೆ. ಈ ರುಮಾಲು ನಮ್ಮ ಮಗುವಿಗೆ ಚೆನ್ನಾಗಿರುತ್ತದೆ” ಎಂದು ಹೇಳಿ ಅದಕ್ಕೆ ಐದೋ ಆರೋ ರೂಪಾಯಿ ಕೊಟ್ಟರಂತೆ. ಆಮೇಲೆ ಅದನ್ನು ಚಲುವೆ ಮಾಡಿಸಿ ತರಿಸಿದರು; ತಲೆಯ ಮೇಲೆ ಸುತ್ತಿಕೊಂಡು ಅಣಿ ಮಾಡಿ ತೆಗೆದು ನನ್ನ ತಲೆಯಮೇಲಿಟ್ಟರು. ಅದು ದೊಡ್ಡ ಮೂಟೆಯಂತಿತ್ತು. “ಇದು ಜಗದೇರಾಯನಬುಟ್ಟಿ” ಎಂದೆ ನಾನು. ಆಮೇಲೆ ನಾನದನ್ನು ಧರಿಸುವಂತೆ ಮಾಡಲು ಎಷ್ಟೆಷ್ಟೋ ಪ್ರಯತ್ನ ಮಾಡಿದರು. ನಾನು ಒಪ್ಪಲಿಲ್ಲ. ಕೊಂಚ ಅತ್ತು ರಗಳೆ ಮಾಡಿದೆನೆಂದು ತೋರುತ್ತದೆ. ಅವರು ಮುನಿಸಿಕೊಂಡು “ಹಾಗಾದರೆ ನಿನಗಿದು ಬೇಡವೇನಪ್ಪಾ?” ಎಂದು ಕೇಳಿದರು. ನಾನು ಬೇಡ ಎಂದ ಮೇಲೆ ತಾವೇ ಅದನ್ನು ಧರಿಸಿಕೊಳ್ಳುತ್ತಿದ್ದರು –ತಿಂಗಳಿಗೆ ಒಂದು ಸಲ, ಒಂದು ಘಂಟೆ ಹೊತ್ತು.

ಅವರು ಎಡಗಾಲಿನಲ್ಲಿ ಒಂದು ಬೆಳ್ಳಿಯ ಸರಿಗೆಯನ್ನು ಹಾಕಿಕೊಂಡಿರುತ್ತಿದ್ದರು. ಅದು ಏನೆಂದು ಕೇಳಿದಾಗ ಹೇಳಿದರು: “ನನಗೆ ಕಾಲಿನಲ್ಲಿ ತುಂಬ ನೋವು ಬರುತ್ತಿತ್ತು. ಆಗ ಯಾರೊ ಒಬ್ಬಾತ ಈ ಸರಿಗೆಯನ್ನು ಕೊಟ್ಟು ‘ಇದನ್ನು ಹಾಕಿಕೊಳ್ಳಿ’ ಎಂದ. ಆತ ಮಾಂತ್ರಿಕ. ಇದರಲ್ಲಿ ಏನೋ ಕರಾಮತ್ತು ಇಟ್ಟಿದಾನಂತೆ. ಇದನ್ನು ಹಾಕಿಕೊಂಡ ಮೇಲೆ ನನಗೆ ಕಾಲುನೋವು ಬಂದಿಲ್ಲ.”

‘ಆಪದ್ಧನ’

ಅವರ ಲಕ್ಷಣಗಳಲ್ಲಿ ಹೇಳಲೇಬೇಕಾದದ್ದು ಇನ್ನೊಂದುಂಟು. ಅವರ ನಡುವಿನಲ್ಲಿ ದಪ್ಪ ಉಡಿದಾರ ಇರುತ್ತಿತ್ತು: ಬಹುಮಟ್ಟಿಗೆ ಅನಂತನ ದಾರದಂಥಾದ್ದು. ಆ ಉಡಿದಾರಕ್ಕೆ ಎರಡು ಬೆಳ್ಳಿ ಡಬ್ಬಿಗಳು ಕಟ್ಟಿರುತ್ತಿದ್ದವು. ಒಂದೊಂದು ಡಬ್ಬಿ ಸುಮಾರು ಎರಡೂವರೆ ಮೂರಂಗುಲ ಉದ್ದವಾಗಿ ಬಾಳೆಯಕಾಯಂತೆ ಸ್ವಲ್ಪ ಬಾಗು ಬಂದಂತಿರುತ್ತಿತ್ತು. ಈ ಬಾಳೆಯಕಾಯಿನ ಒಳಗಡೆ ಖಾಲಿ ಕೊಳವೆ. ಡಬ್ಬಿಯ ಒಂದು ಕಡೆಯ ಮುಚ್ಚಳವನ್ನು ತೆಗೆದರೆ ಈ ಕೊಳವೆ ಕಾಣಿಸುತ್ತಿತ್ತು. ಒಂದೊಂದು ಕೊಳವೆಯಲ್ಲಿ ೨-೩ ರೂಪಾಯಿನಷ್ಟು ಬೆಳ್ಳಿಯ ಎರಡಾಣೆ ನಾಣ್ಯಗಳು ಭರ್ತಿ ಇರುತ್ತಿದ್ದವು. ಇದೇನೆಂದು ನಾನು ಕೇಳಿದ್ದಕ್ಕೆ ಅವರು “ಅದು ಆಪದ್ಧನ” ಎಂದರು. ಆ ಮಾತಿನ ಅರ್ಥ ನನಗೆ ಸ್ವಲ್ಪ ಕಾಲದ ಮೇಲೆ ಗೊತ್ತಾಯಿತು.

ಊರಿನಲ್ಲಿ ಯಾರ ಮನೆಯಲ್ಲಾದರೂ ಸಾವಾದರೆ ರಾಮಣ್ಣನವರು ಅಲ್ಲಿಗೆ ಹೋಗುವರು. ಅಂದಿನ ಖರ್ಚಿಗಾಗಿ ಆ ಮನೆಯವರಿಗೆ ತಕ್ಕಷ್ಟು ಉಪಪತ್ತಿ ಇಲ್ಲದಿದ್ದರೆ ರಾಮಣ್ಣನವರು ಅದನ್ನು ತಾವಾಗಿ ಕಂಡುಕೊಂಡು ತಮ್ಮ ಉಡಿದಾರದ ಡಬ್ಬಿಗಳಲ್ಲಿದ್ದ ಐದಾರು ರೂಪಾಯಿಗಳನ್ನು ವಿನಿಯೋಗಿಸುವರು. ಆ ಕಾಲದಲ್ಲಿ ಅಂತ್ಯಸಂಸ್ಕಾರಕ್ಕೆ ಐದಾರು ರೂಪಾಯಿಗಳು ಸಾಕಾಗುತ್ತಿತ್ತು. ಅವರು ರುದ್ರಭೂಮಿಗೆ ಹೋಗಿ ಕೆಲಸಗಳನ್ನು ಮುಗಿಸಿ ಸೋಮೇಶ್ವರ ದೇವಾಲಯಕ್ಕೆ ಬಂದು ಅಲ್ಲಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಬೇರೆ ಯಜ್ಞೋಪವೀತಧಾರಣೆ ಮಾಡಿ ಸ್ವಾಮಿಗೆ ಪೂಜೆ ಮಾಡಿಸಿ ಪ್ರಸಾದವನ್ನು ಕೈಯಲ್ಲಿ ಹಿಡಿದು ಮನೆಗೆ ಬರುವರು. ಎಷ್ಟೋ ಸಾರಿ ಸಂಜೆ ೫-೬ ಘಂಟೆಯಾದದ್ದುಂಟು. ಆಗ ಅವರು ಹೇಳುತ್ತಿದ್ದ ವಾಕ್ಯ ಇದು:

> ಅನಾಥಪ್ರೇತಸಂಸ್ಕಾರಾತ್
> ಕೋಟಿಯಜ್ಞಫಲಂ ಲಭೇತ್ ॥
> ಶಿವಶಿವ ಮಹಾದೇವ ॥

ಈಗ ಅಂಥ ಉಡಿದಾರದ ಡಬ್ಬಿಗಳು ಫ್ಯಾಶನ್ನಿನಲ್ಲಿಲ್ಲ. ಅಂಥ ದುಃಖಿತ ಸಹಾಯ ಪದ್ಧತಿಯೂ ಕಡಮೆಯಾಗುತ್ತಿದೆಯೆಂದು ನನ್ನ ಅನುಭವದಿಂದ ನನಗನ್ನಿಸುತ್ತಿದೆ.

ಕಸ್ತೂರಿ

ರಾಮಣ್ಣನವರು ಇರಿಸಿಕೊಂಡಿದ್ದ ಇನ್ನು ಒಂದು ಧರ್ಮಕಾರ್ಯವೆಂದರೆ ಕಸ್ತೂರಿ ಹಂಚುವುದು. ಆ ಕಾಲದಲ್ಲಿ ಬಾಣಂತಿಯರಿಗೆ ಪ್ರಸವವಾದ ಕೂಡಲೆ ಕೊಂಚ–ಬಹು ಕೊಂಚ–ಕಸ್ತೂರಿಯನ್ನು ತಿನ್ನಿಸುತ್ತಿದ್ದರು. ಇದು ಆ ಪ್ರಸವಕಾಲದಲ್ಲಿ ದೇಹ ಬಹು ಸೂಕ್ಷ್ಮ ಸ್ಥಿತಿಯಲ್ಲಿರುವುದರಿಂದ ಆಗ ಅದಕ್ಕೆ ತಟ್ಟಬಹುದಾದ ಎಲ್ಲ ರೋಗಗಳನ್ನೂ ದೂರವಿಡುವ ಔಷಧ. ಕಸ್ತೂರಿ ಉಷ್ಣದ ವಸ್ತು; ಬಹು ಬೆಲೆಯುಳ್ಳದ್ದು, ಬಡವರಿಗೆ ಸಾಧ್ಯವಲ್ಲದ್ದು. ಈ ಕಾರಣದಿಂದ ಈ ಕಸ್ತೂರಿ ವಿತರಣೆಯನ್ನು ರಾಮಣ್ಣನವರು ಧರ್ಮಕಾರ್ಯವಾಗಿ ಭಾವಿಸಿದ್ದರು. ಆ ಊರಿನಲ್ಲಿಯೂ ಸುತ್ತಮುತ್ತಲೂ ಯಾರ ಮನೆಯಲ್ಲಿ ಪ್ರಸವದ ಸಮಯವಾದಾಗಲೂ ಆ ಮನೆಯವರು ರಾಮಣ್ಣನವರಲ್ಲಿ ಬಂದು ಕೇಳುತ್ತಿದ್ದರು. ರಾಮಣ್ಣನವರು ಒಂದು ವೀಳ್ಯದೆಲೆಯಲ್ಲಿ ಒಂದಷ್ಟು ಕಣಗಳನ್ನಿಟ್ಟು ಮಡಿಸಿ ಅದನ್ನು ಧರ್ಮಾರ್ಥ ಕೊಡುತ್ತಿದ್ದರು.

ರಾಮಣ್ಣನವರ ವಿಷಯದಲ್ಲಿ ನನ್ನ ಅಜ್ಜಿ ಸಾಕಮ್ಮನವರಿಗೆ ತುಂಬ ಕೃತಜ್ಞತೆ: ಆಪತ್ಕಾಲದಲ್ಲಿ ಸಹಾಯ ಮಾಡಿದವರೆಂದು. ರಾಮಣ್ಣನವರಿಗೆ ಕೃತಜ್ಞತೆ–ಆಕೆ ತಮ್ಮ ಮನೆಗೆ ಹೆಣ್ಣು ಕೊಟ್ಟು ಮನೆ ಉದ್ಧಾರ ಮಾಡಿದರೆಂದು.

ಪ್ಲೇಗುಮಾರಿ

ಸಾಕಮ್ಮನವರೂ ರಾಮಣ್ಣನವರೂ ಕಾಲಾಧೀನರಾದ ದಿನಗಳಲ್ಲಿ ನಾನು ಊರಿನಲ್ಲಿರಲಿಲ್ಲ. ಮೈಸೂರಿನಲ್ಲಿದ್ದೆ–ವಿದ್ಯಾರ್ಜನೆಗಾಗಿ. ಒಂದು ದಿನ ಅಲ್ಲಿಯ ಹಾಸ್ಟಲಿನಲ್ಲಿ ನನ್ನ ರೂಮಿನಿಂದ ಸ್ನಾನದ ಮನೆಗೆ ಹೋಗುತ್ತಿದ್ದೆ- ಒಗೆದ ಬಟ್ಟೆ ತೆಗೆದುಕೊಂಡು; ಅಷ್ಟು ಹೊತ್ತಿಗೆ ಸರಿಯಾಗಿ ಅಂಚೆಯಾಳು ಕಾಗದಗಳನ್ನು ತಂದವನು ಒಂದು ಲಕೋಟೆಯನ್ನು ನನ್ನ ಕೈಗೆ ಕೊಟ್ಟ. ಅದರಲ್ಲಿತ್ತು ನನ್ನ ತಂದೆ ಬರೆದಿದ್ದ ಕಾಗದ– ನನ್ನ ಅಜ್ಜಿಯೂ ಚಿಕ್ಕ ಅಜ್ಜನೂ ತೀರಿಹೋದ ಸಮಾಚಾರ. ನನಗೆ ಸಿಡಿಲು ಬಡಿದಂತಾಯಿತು. ಕಣ್ಣಲ್ಲಿ ನೀರು ಬಂದಿತು. ಅದೇ ಕ್ಷಣ ಹಿರಿಯ ವಿದ್ಯಾರ್ಥಿಯಾಗಿದ್ದ ಎನ್. ಸುಬ್ಬರಾಯರು ನನ್ನ ಬಳಿ ಬಂದು ನಿಂತು “ಯಾಕಪ್ಪ ಮಗು? ಯಾಕೆ ಅಳುತ್ತೀ?” ಎಂದು ವಿಚಾರಿಸಿ ನನ್ನ ಕೈಯಲ್ಲಿದ್ದ ಕಾಗದವನ್ನು ತೆಗೆದುಕೊಂಡು ಓದಿ ನೋಡಿ ಅರ್ಥಮಾಡಿಕೊಂಡು ನನ್ನೊಡನೆ ಸ್ನಾನದ ಮನೆಗೆ ಬಂದು ಸ್ನಾನವಾದ ಮೇಲೆ ತಮ್ಮ ಪಕ್ಕದಲ್ಲಿ ನನ್ನನ್ನು ಊಟಕ್ಕೆ ಕೂಡಿಸಿಕೊಂಡು ಆ ರಾತ್ರಿ ತಮ್ಮ ಕೋಣೆಯಲ್ಲಿ ನನ್ನನ್ನು ಮಲಗಿಸಿಕೊಂಡು ಮಾರನೆಯ ದಿನ ಅಥವಾ ಮೂರನೆಯ ದಿನ ಅಪ್ಪಾಜಿರಾವ್ ಎಂಬ ಸ್ನೇಹಿತರನ್ನು ನನಗೆ ಜೊತೆ ಮಾಡಿಕೊಟ್ಟು ಅವರು ಬೌರಿಂಗ್‌ಪೇಟೆ ಅಥವಾ ಕೋಲಾರದಲ್ಲಿ ನನ್ನನ್ನು ಮುಳುಬಾಗಿಲು ಜಟಕಾ ಹತ್ತಿಸಿ ಬರುವಂತೆ ಏರ್ಪಾಟು ಮಾಡಿದರು. ಆ ಸುಬ್ಬರಾಯರೆಂಬ ಮಹಾನುಭಾವರು, ಭಗವತ್ಕೃಪೆಯಿಂದ ಈಗಲೂ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳನ್ನು ಸಲಹಿ ಆಶೀರ್ವದಿಸಿಕೊಂಡಿದ್ದಾರೆ. ವಯಸ್ಸು ೯೦ರ ಮೇಲಾಗಿದೆ. ಅವರು ಸೂಪರಿಂಟೆಂಡಿಂಗ್ ಇಂಜಿನಿಯರ್ ಪದವಿಗೆ ಹತ್ತಿ ಪ್ರಾಮಾಣಿಕರೆಂದೆನಿಸಿಕೊಂಡಿದ್ದಾರೆ. ನಿಃಸ್ಪೃಹರು, ಪರಿಶುದ್ಧರು.

ಆಮೇಲೆ ತಿಳಿಯಿತು ಸಂದರ್ಭ. ಮುಳುಬಾಗಿಲಿಗೆ ಪ್ಲೇಗುಮಾರಿ ಭೇಟಿ ಕೊಟ್ಟಿದ್ದಳು. ಅದು ಮೊದಲನೆಯ ಹೊಡೆತ ಅಥವಾ ಎರಡನೆಯದು. ಮೊದಲು ಸಾಕಮ್ಮನವರು ತೀರಿಕೊಂಡರು. ಇದಾದ ಎರಡು ದಿವಸಗಳೊಳಗಾಗಿ ರಾಮಣ್ಣನವರು ನನ್ನ ತಂದೆ ತಾಯಿಯನ್ನೂ ಮಕ್ಕಳನ್ನೂ ಅಲ್ಲಿಂದ ಹದಿನಾರು ಹದಿನೆಂಟು ಮೈಲಿ ದೂರದಲ್ಲಿದ್ದ ಎಲ್ದೂರಿಗೆ ಕಳುಹಿಸಿದರು. ತಾವು ಒಬ್ಬರೇ ಮನೆಯಲ್ಲಿ ನಿಂತು ಮನೆಗೆ ಕಾವಲಾಗಿರುವಂತೆ ನಿಶ್ಚಯ ಹೇಳಿದರು. ಅಲ್ಲಿಂದ ಮೂರು ನಾಲ್ಕು ದಿವಸಗಳೊಳಗಾಗಿ ಅವರಿಗೆ ಪ್ಲೇಗು ಬಡಿದು ಮೃತರಾದರು.

ಕಳುವು

ಈ ಸುದ್ದಿ ನನ್ನ ತಂದೆಗೆ ತಲಪಿದ್ದು ಕೂಡ ಮೂರು ನಾಲ್ಕು ದಿನಗಳಾದ ಮೇಲೆ. ನನ್ನ ತಂದೆ ಆಗ ಮುಳುಬಾಗಿಲಿಗೆ ಹೋಗಿ ನೋಡಿದಾಗ ಮನೆಯೊಳಗಿದ್ದ ಸಾಮಾನುಗಳು ಕಳುವಾಗಿದ್ದವು. ಇದೇ ನನ್ನ ಮನೆತನಕ್ಕೆ ಬಂದ ಬಹು ದೊಡ್ಡ ವಿಪತ್ತು. ರಾಮಣ್ಣನವರ ಪೆಟ್ಟಿಗೆಯಲ್ಲಿ ಸಾಲ ತೆಗೆದುಕೊಂಡವರು ಬರೆದುಕೊಟ್ಟ ಪತ್ರಗಳೆಷ್ಟೋ ಇದ್ದವು. ಅವರು ಒತ್ತೆಯಿಟ್ಟಿದ್ದ ಚಿನ್ನ, ಬೆಳ್ಳಿ ಒಡವೆಗಳೂ ಇದ್ದವು. ಸಾಮಾನ್ಯವಾಗಿ ರಾಮಣ್ಣನವರ ಪೆಟ್ಟಿಗೆಯಲ್ಲಿ ಯಾವಾಗಲೂ ನಗದು ಇನ್ನೂರು ಮುನ್ನೂರು ರೂಪಾಯಿ ಇರುತ್ತಿತ್ತು. ಇವೆಲ್ಲ ಮಾಯವಾಗಿದ್ದವು. ರೈತರುಗಳು ಬರೆದುಕೊಟ್ಟಿದ್ದ ಗುತ್ತಿಗೆಚೀಟಿಗಳೂ ಹೋಗಿದ್ದವು. ನಮಗಿದ್ದ ಆಸ್ತಿ ಸೊನ್ನೆಗಿಳಿಯಿತು. ಇನ್ನು ಹೇಳಬೇಕಾದದ್ದೇನು?

ಅತಿವೃಷ್ಟಿ

ಮಾರನೆಯ ವರ್ಷ–ಬಹುಶಃ ಆ ಪ್ರಾಂತದಲ್ಲಿ ಅತಿವೃಷ್ಟಿಯಾಗಿ ವಾಣಿಯಂಬಾಡಿಯವರೆಗೂ ಸುಮಾರು ಅರವತ್ತು ಭಾರಿ ಭಾರಿ ಕೆರೆಗಳು ಕಟ್ಟೆಯೊಡೆದು ಆ ಕೆರೆಗಳ ಅಚ್ಚುಕಟ್ಟಿನಲ್ಲಿದ್ದ ಜಮೀನುಗಳು ಹಾಳಾದವು. ನನ್ನ ಮನೆಗೆ ಸೇರಿದ್ದ ಗದ್ದೆಗಳಲ್ಲಿ ದೊಡ್ಡವಾದದ್ದು ಚಲುಮಕುಂಟೆ ಎಂಬ ಗ್ರಾಮದ ಬಳಿಯದು. ಕೆರೆಯ ಅಚ್ಚುಕಟ್ಟಿನ ಜಮೀನಿನಲ್ಲಿ ಮೂರರಲ್ಲೆರಡು ಭಾಗಕ್ಕಿಂತ ಹೆಚ್ಚಾಗಿ ನಮ್ಮದಾಗಿತ್ತು. ಕೆರೆಕಟ್ಟೆಯೊಡೆದು ನಮ್ಮ ಜಮೀನಿನ ಮೇಲೆಲ್ಲ ನೀರು ನುಗ್ಗಿ ಬೆಳೆ ಹಾಳಾದದ್ದಲ್ಲದೆ ಉಸುಬು ತುಂಬಿಕೊಂಡಿತು. ಅದನ್ನು ದುರಸ್ತು ಮಾಡಿಸಲು ನನ್ನ ತಂದೆ ಒಂದಿಷ್ಟು ಹೆಣಗಾಡಿದರು. ರೈತರು ಖರ್ಚಿನಲ್ಲಿ ಅರ್ಧ ಕೊಡಲು ಒಪ್ಪಿದರೆ ಮಿಕ್ಕರ್ಧವನ್ನು ಸರಕಾರ ಕೊಡಬೇಕೆಂಬ ನಿಯಮವಿತ್ತು. ನನ್ನ ತಂದೆಗೆ ರೈತರ ಪಾಲಿನ ಅರ್ಧವನ್ನು ಕೊಡಲು ತ್ರಾಣ ಸಾಲದು. ಮಿಕ್ಕ ರೈತರು ಅವರವರ ಪಾಲನ್ನು ಕೊಡಲು ಉದಾಸೀನರಾಗಿ ಹಿಂಜರಿದರು. ಏತನ್ಮಧ್ಯೆ ಕಂದಾಯದ ಬಾಕಿಗಾಗಿ ಸರಕಾರದಿಂದ ವರ್ಷೇ ವರ್ಷೇ ಬರಾತ ಬರುತ್ತಿತ್ತು. ನನ್ನ ತಂದೆಗೆ ತುಂಬ ಬೇಸರವಾಗಿ ಸರಕಾರಕ್ಕೆ ಬರೆದರು– “ಈ ಜಮೀನನ್ನು ನೀವೇ ಒಪ್ಪಿಸಿಕೊಂಡು ಹರಾಜು ಮಾಡಿ ಬಂದದ್ದನ್ನು ನಿಮ್ಮ ಕಂದಾಯದ ಬಾಕಿಗಾಗಿ ಪಾವತಿ ಮಾಡಿಕೊಳ್ಳಬಹುದು.”

ಸಾಕಮ್ಮನವರೂ ರಾಮಣ್ಣನವರೂ ನಾನು ಪರಸ್ಥಳ ಹೋಗಬಾರದೆಂದು ಹೇಳುತ್ತಿದ್ದ ನಿಷೇಧವಾಕ್ಯ ನನಗೆ ಈಗ ಅರ್ಥವಾಯಿತು. ಅರ್ಥವಾದರೆ ಏನು? ಭಗವಂತನ ಚಿತ್ತವಿದ್ದಂತೆ ಆಯಿತು.

೫

ಶೀನಣ್ಣನವರು

ನನ್ನ ತಾತಂದಿರಲ್ಲಿ ಮೂರನೆಯವರಾದ ಶೀನಣ್ಣನವರು ನನಗೆ ಪೂಜ್ಯರೆಂಬುದು ಸಿದ್ಧವಾಗಿದೆಯಷ್ಟೆ? ಆದರೆ ಅವರ ಪ್ರಸ್ತಾವ ಬಂದಾಗ ನಾನು ಅವರ ಸ್ವಭಾವದ ಎಲ್ಲ ಪಾರ್ಶ್ವಗಳನ್ನೂ ಕುರಿತು ಮುಚ್ಚುಮರೆಯಿಲ್ಲದೆ ಮಾತನಾಡಬಹುದೆ? ಅದು ಮರ್ಯಾದೆಯೆ? ಹಾಗಲ್ಲದೆ ಅವರ ಯಾವ ಭಾಗ ನಿರಾಕ್ಷೇಪಣೀಯವಾಗಿದೆಯೋ ಅಷ್ಟನ್ನು ಮಾತ್ರ ಹೇಳಿ ಮಿಕ್ಕದ್ದನ್ನು ಹೇಳದೆ ಬಿಟ್ಟರೆ ಯಥಾರ್ಥವಾದೀತೆ? ಯಥಾರ್ಥದ ಮಾತು ಹಾಗಿರಲಿ; ನನ್ನ ಬರವಣಿಗೆಯಿಂದ ವಾಚಕರಿಗೆ ಎಷ್ಟು ಪ್ರಯೋಜನವಾಗಬಹುದೋ ಅಷ್ಟು ಪ್ರಯೋಜನವಾದೀತೆ? ಇದು ನನಗಿರುವ ಶಂಕೆ.

ಮನುಷ್ಯಮಾತ್ರನಿಗೆ ಎಲ್ಲಿಯೋ ಸಣ್ಣದೋ ದೊಡ್ಡದೋ ಒಂದಷ್ಟು ಮಷ್ಟು ಅಂಟಿಕೊಂಡಿರುತ್ತದೆ.

> ದೃಷ್ಟಂ ಕಿಮಪಿ ಲೋಕೇಽಸ್ಮಿನ್
> ನ ನಿರ್ದೋಷಂ ನ ನಿರ್ಗುಣಮ್ ॥

ನಮಗೆ ಒಂದು ಜೀವನಚರಿತ್ರೆಯಿಂದ ಸಂಪೂರ್ಣ ಪ್ರಯೋಜನ ದೊರೆಯಬೇಕಾದರೆ ನಾವು ಆ ಜೀವಿತದ ಬೆಳಕಿನ ಭಾಗಗಳ ಜೊತೆಗೆ ನೆರಳಿನ ಭಾಗಗಳನ್ನೂ ನೋಡಬೇಕು. ಆ ಮನುಷ್ಯ ಯಾವ ದುರ್ಬಲತೆಯೂ ಇಲ್ಲದ ಸರ್ವಾಂಶಸುಂದರನೆಂದು ಅಭಿಪ್ರಾಯ ಕೊಟ್ಟಲ್ಲಿ ಅದರಿಂದ ಓದುಗನಿಗೆ ಏನು ಲಾಭ? ಓದುಗನು ಸಾಮಾನ್ಯ ಮನುಷ್ಯ. ಅವನು ಇತರ ಸಾಮಾನ್ಯ ಮನುಷ್ಯನೊಬ್ಬನನ್ನು ನೋಡುತ್ತಾನೆ. ತನ್ನಲ್ಲಿದ್ದಂತೆಯೇ ಆ ಇತರನಲ್ಲಿಯೂ ಗುಣಗಳೊಡನೆ ದೋಷಗಳು ಬೆರೆತುಕೊಂಡಿರುತ್ತವೆ. ಆ ಇತರನು ದೋಷವಿದ್ದರೂ ಗುಣಾತಿಶಯದಿಂದ ನಮಗಿಂತ ಉತ್ತಮನಾದ–ಇದು ಮುಖ್ಯಾಂಶ. ದೋಷವು ಮುಖ್ಯವಲ್ಲ; ಗುಣವೇ ಮುಖ್ಯ. ಮತ್ತು ಆ ಗುಣದೊಡನೆ ದೋಷವಿದ್ದರೂ ಗುಣವು ಕಲಂಕವನ್ನು ಮೀರಿತ್ತು–ಎಂಬುದು ಗ್ರಾಹ್ಯವಾದ ವಿಷಯ.

ಇಷ್ಟು ಹೇಳಿ ನನಗೆ ಪರಮ ಪೂಜ್ಯರಾದ ನಮ್ಮ ಚಿಕ್ಕತಾತ ಶೀನಣ್ಣನವರನ್ನು ಕುರಿತು ಒಂದೆರಡು ಮಾತನ್ನು ಹೇಳುತ್ತೇನೆ. ನನ್ನ ಮಾತಿನಲ್ಲಿ ಅವಿನಯವಾಗಲಿ ಅವ ಮರ್ಯಾದೆಯಾಗಲಿ ಇರಬಾರದೆಂದು ನನ್ನ ಸಂಕಲ್ಪ. ಅಂಥ ಸೂಚನೆಯುಳ್ಳ ಮಾತು ಏನಾದರೂ ಇದ್ದಲ್ಲಿ ದಿವ್ಯಲೋಕಗಳಲ್ಲೆಲ್ಲೋ ಇರುವ ಆ ಮಹನೀಯರು ಬದುಕಿದ್ದಾಗ ನನ್ನ ವಿಷಯದಲ್ಲಿ ಎಂಥ ವಾತ್ಸಲ್ಯವನ್ನು ತೋರುತ್ತಿದ್ದರೋ ಅದೇ ವಾತ್ಸಲ್ಯದಿಂದ ಕ್ಷಮೆ ನೀಡಬೇಕೆಂದು ಬೇಡುತ್ತೇನೆ.

ಶೀನಣ್ಣನವರ ಜೀವನದಲ್ಲಿ ಅವರ ಮನಸ್ಸನ್ನು ಚಂಚಲಪಡಿಸುವ ಸಂದರ್ಭಗಳು ಕೆಲವಿದ್ದವು. ಅವರಿಗೆ ಅವರ ಅಣ್ಣಂದಿರಿಗಾದಂತೆ ಪತ್ನೀವಿಯೋಗವಾಗಿತ್ತು. ಅವರ ಹೆಂಡತಿ ಬೆಂಗಳೂರು ಬಳಿಯ ದೊಮ್ಮಸಂದ್ರವೆಂಬ ಗ್ರಾಮದ ಹೆಣ್ಣುಮಗಳು. ಆಕೆ ಮೂರು ಮಂದಿ ಮಕ್ಕಳನ್ನು ಬಿಟ್ಟು ಸರ್ಗಸ್ಥಳಾದಳು. ಹಿರಿಯ ಮಗಳು ಅಮ್ಮಣ್ಣಮ್ಮ; ಎರಡನೆಯಾತ ಶಾಮಣ್ಣ; ಮೂರನೆಯಾಕೆ ಗೌರಮ್ಮ. ಈ ಎಳೆಯ ಮಕ್ಕಳನ್ನು ಶೀನಣ್ಣನವರು ಮುಳುಬಾಗಿಲಿನಲ್ಲಿ ಅಣ್ಣಂದಿರ ಪೋಷಣೆಯಲ್ಲಿ ಬಿಟ್ಟಿದ್ದರು.

ಹರಕು ಬಾಯಿ

ಶೀನಣ್ಣನವರು ಯಾವ ಉದ್ಯೋಗದಲ್ಲಿದ್ದರೋ ನನಗೆ ತಿಳಿಯದು. ಅವರ ಕಡೆಕಡೆಯ ಉದ್ಯೋಗ ಪಚ್ಚಿಯಪ್ಪ ಮೊದಲಿಯಾರ್ ಎಂಬ ಅಬ್ಕಾರಿ ಕಂಟ್ರಾಕ್ಟರ್ ಕೈಕೆಳಗೆ ಗುಮಾಸ್ತರಾಗಿ. ಇದನ್ನು ಬೇರೆ ಕಡೆ ಪ್ರಸ್ತಾಪಿಸಿದ್ದೇನೆ.

ಅಲ್ಲಿಯೂ ಜಗಳ. ನಮ್ಮ ಚಿಕ್ಕತಾತನ ಮುಖ್ಯ ಗುಣವೆಂದರೆ ಹರಕು ಬಾಯಿ. ಸೊಟ್ಟೆಯಿಲ್ಲದೆ ಮಾತೇ ಇಲ್ಲ. ಬಾಯಿ ಬಿಟ್ಟರೆ ಮುಳ್ಳು ಕಲ್ಲು. ಅದನ್ನು ಕೇಳುವವರಿಗೆ ಹಾಸ್ಯ. ಅವರು ನಗುತ್ತಿದ್ದರೆ ಶೀನಣ್ಣನವರಿಗೆ ಪ್ರೋತ್ಸಾಹ; ಇನ್ನೂ ಕೊಂಟೆ ಮಾತುಗಳು. ಮಾತಿನಲ್ಲಿ ದುರ್ಭಾಷೆಗಿಂತ ವಕ್ರ ಭಾಷೆಯೇ ಹೆಚ್ಚು. ಕನ್ನಡ ತೆಲುಗು ಸಾಮತಿಗಳ ಜೊತೆಗೆ ಉರ್ದು, ಹಿಂದಿ ಮರಾಠಿ ಭಾಷೆಗಳ ಕೆಟ್ಟ ಕೆಟ್ಟ ಸಾಮತಿಗಳನ್ನು ಬೆರಸಿಕೊಂಡು ಮಾತನಾಡುವರು. ಮಾತನಾಡಿದಂತೆ ಬರೆಯುವರು. ಈ ಅಪಶಬ್ದಗಳ ಪ್ರಯೋಗ ಅಣ್ಣಂದಿರಿಗೂ ಆಗುತ್ತಿತ್ತು. ಚಿಕ್ಕಚಿಕ್ಕವರು ಅದನ್ನು ಕೇಳಿ ನಗುವರು, ದೊಡ್ಡವರು ಮುಖ ಗಂಟಿಕ್ಕುವರು. ಅವರ ಸ್ವಭಾವ ಹೀಗಿದ್ದದ್ದರಿಂದ ಅವರು ಹೋದ ಕಡೆ ಜಗಳ ತಪ್ಪುತ್ತಿರಲಿಲ್ಲ. ಈ ಚಾಳಿ ಅವರ ಮಗನಿಗೂ ಬಂದಿತ್ತು.

ದೀಪಸ್ತಂಭ

ಒಂದು ಉದಾಹರಣೆ. ಒಂದು ದಿನ ರಾಮಣ್ಣನವರು ಯಥಾಪ್ರಕಾರ ದೇವರಪೂಜೆಗೆ ಕುಳಿತಿದ್ದರು. ಅದೇ ಅಡಿಗೆಮನೆಯ ಇನ್ನೊಂದು ಮೂಲೆಯಲ್ಲಿ ನನ್ನ ಅಜ್ಜಿ ಸಾಕಮ್ಮನವರು ಮಡಿಯುಟ್ಟು ಅಡಿಗೆಗೆ ಮೊದಲು ಮಾಡಿದ್ದರು.

ಅಷ್ಟು ಹೊತ್ತಿಗೆ ಸರಿಯಾಗಿ ಶೀನಣ್ಣನವರು ಬಂದು ಅಣ್ಣನನ್ನು ಕುರಿತು ಹೇಳಿದರು:

ಶೀ: “ರಾಮಣ್ಣ, ದೊಡ್ಡ ದೀಪಸ್ತಂಭಗಳನ್ನು ಹೊರಗಡೆ ಇಡು. ನಾನು ತೆಗೆದುಕೊಂಡು ಹೋಗಬೇಕು ನಿಟ್ಟೂರಿಗೆ.”

ಆ ಕಾಲದಲ್ಲಿ ಅವರ ಮಗ ಶಾಮಣ್ಣ ನಿಟ್ಟೂರಿನಲ್ಲಿ ರೈಲ್ವೆ ಸ್ಟೇಷನ್ ಮಾಸ್ಟರಾಗಿದ್ದ.

ರಾ: “ಅಲ್ಲಿಗೆ ಬೇಕಾದರೆ ಬೇರೆ ತೆಗೆದುಕೊಡುತ್ತೇನೆ. ಇಲ್ಲಿರುವ ದೀಪದ ಜೊತೆ ಹಿರಿಯರ ಕಾಲದಿಂದ ಬಂದದ್ದು: ಅವರ ಮನೆಯಲ್ಲಿಯೇ ಅದು ಇರಲಿ.”

ಶೀ: “ಹುಚ್ಚು ಮುಂಡೆ! ತೆಗೆದುಕೊಡು ಎಂದರೆ ಕೊಡಬೇಕು.”

ಸಾಕಮ್ಮನವರು ಇದನ್ನು ಕೇಳುತ್ತಿದ್ದವರು “ಶಿವಶಿವ! ಶಿವಶಿವ!” ಎಂದರು.

ಶೀ: “ಇವಳು ಬಹು ಶಿವನನ್ನು ಕಂಡವಳು”

ಈ ವೇಳೆಗೆ ರಾಮಣ್ಣನವರು ಎರಡು ದೀಪಸ್ತಂಭಗಳನ್ನೂ ಹೊರಗಡೆ ಇಟ್ಟರು.

ರಾ: “ತೆಗೆದುಕೋಪ್ಪಾ, ಇನ್ನು ಮಾತು ಬೇಡ. ಆಕೆಯ ಮೇಲೆ ತಿರುಗೀಯೆ, ಪಾಪ ಬಂದೀತು.”

ಅಲ್ಲಿಂದ ನಾಲ್ಕೈದು ದಿವಸಗಳಾದ ಮೇಲೆ ಕೋಲಾರದಿಂದ ಶೇಷಣ್ಣನವರು ಬಂದರು. ರಾಮಣ್ಣನವರು ನಡೆದ ಸಂಗತಿಯನ್ನು ಹೇಳಿದರು. ಶೇಷಣ್ಣನವರು ನಡೆದ ಸಂಗತಿಯನ್ನು ಕೇಳಿ ಕೊಂಚ ಹೊತ್ತು ಸುಮ್ಮನಿದ್ದು:

“ಸಹಿಸಿಕೊಳ್ಳಬೇಕಪ್ಪಾ-ಕೂಡ ಹುಟ್ಟಿದವನು. ನಾವು ಏನು ಮಾಡಲಿಕ್ಕಾಗುತ್ತದೆ? ಅವನು ಮರ್ಯಾದೆ ತಪ್ಪಿದ ಎಂದು ನಾವು ಮರ್ಯಾದೆ ತಪ್ಪುವುದಕ್ಕಾಗುತ್ತದೆಯೆ?”

ಎಂದು ಸಮಜಾಯಿಷಿ ಹೇಳಿದರು.

***

ನನ್ನ ಚಿಕ್ಕತಾತಂದಿರು ಶೀನಪ್ಪನವರು ದಾಯಭಾಗದ ಪ್ರಶ್ನೆಯನ್ನೆತ್ತುತ್ತಿದ್ದದ್ದುಂಟು. ಅದು ಅವರ ಹಿರಿಯಣ್ಣ ಶೇಷಗಿರಯ್ಯನವರು ತೀರಿಕೊಂಡಮೇಲೆ. ಆ ಮಾತನ್ನೆತ್ತಿದಾಗ ರಾಮಣ್ಣನವರು ಹೇಳುತ್ತಿದ್ದ ಉತ್ತರ ಇದು:

“ನಾವು ಗುಂಡಪ್ಪನವರ ಕಾಲದಿಂದ ಈವರೆಗೂ ಏಕ ಕುಟುಂಬವಾಗಿ ಬಂದಿದ್ದೇವೆ. ಒಬ್ಬರಿಗಿನ್ನೊಬ್ಬರು ಕಷ್ಟ ಸುಖಗಳಲ್ಲಿ ಆಸರೆಯಾಗಿ ನಿಂತುಕೊಂಡಿದ್ದೇವೆ. ನಾನು ಬದುಕಿರುವವರೆಗೂ ಮನೆ ಮುರಿಯುವ ಮಾತನ್ನೆತ್ತಬೇಡ. ನನ್ನ ತರುವಾಯ ಏನಾದರೂ ಮಾಡಿಕೊಳ್ಳಿ.”

ರಾಮಣ್ಣನವರ ಈ ಅಭಿಪ್ರಾಯ ದೃಢವಾಗಿತ್ತು. ಅವರು ಅದರಿಂದ ಒಂದು ಕ್ಷಣವೂ ಕದಲಿದವರಲ್ಲ. ಒಂದು ಸಾರಿ ನನ್ನ ತಂದೆ ಮನೆಯ ದುರಸ್ತಿಯ ವಿಚಾರವನ್ನೆತ್ತಿದರು: ಹಿತ್ತಲ ಕಡೆ ಆರೋಡಾಗಿದೆಯೆಂದು. ಆಗ ರಾಮಣ್ಣನವರು ಹೇಳಿದ್ದು ನನಗೆ ಚೆನ್ನಾಗಿ ಜ್ಞಾಪಕದಲ್ಲಿದೆ. “ಹಿಂದುಗಡೆ ಬಿದ್ದು ಹೋದರೆ ಮುಂದುಗಡೆ ಇದ್ದುಕೊಳ್ಳಲಿ. ಮನೆ ಮುರಿಯುವ ಮಾತನ್ನೂ ಸಾಲ ಮಾಡುವ ಮಾತನ್ನೂ ನನ್ನ ಕೂಡ ಎತ್ತಬೇಡ.”

ಶೀನಣ್ಣನವರು ಮುಳುಬಾಗಿಲಿನಲ್ಲಿ ಒಂದು ಸಾರಿ ೮-೧೦ ದಿವಸಕ್ಕೆ ಹೆಚ್ಚಾಗಿ ನಿಲ್ಲುತ್ತಿರಲಿಲ್ಲ. ಅವರು ಆ ಊರು ಈ ಊರು ಸುತ್ತುತ್ತಲೇ ಇದ್ದರು, ಏನೋ ಒಂದುನೆಪ ಮಾಡಿಕೊಂಡು. ಊರಿನಲ್ಲಿದ್ದಾಗಲಾದರೋ ಅವರು ಮನೆಗೆ ಬರುವಹೊತ್ತು ಗೊತ್ತು ನಿಯವಾಗಿರಲಿಲ್ಲ. ರಾತ್ರಿಯ ಹೊತ್ತಂತೂ ಅವರಿಗೆ ಹೊತ್ತಿನ ಮಿತಿ ಇರಲಿಲ್ಲ. ಎಷ್ಟೋ ದಿನ ರಾತ್ರಿ ೯ ಘಂಟೆಗೋ ೧೦ಕ್ಕೋ ಮನೆಗೆ ಬರುವರು. ರಾಮಣ್ಣನವರಿಗೆ ಇದು ಕೊಂಚವೂ ಸರಿಬೀಳದು. ಅವರಿಗೆ ೯ರ ಸುಮಾರಿಗೆ ತಲೆಬಾಗಲು ಮುಚ್ಚಿ ಅಗಳಿಹಾಕುವುದು ಪದ್ಧತಿ. ಈ ಕಾರಣದಿಂದ ಅಣ್ಣತಮ್ಮಂದಿರಿಗೆ ಆಗಾಗ ನಿಷ್ಠುರ.

ಒಂದು ದಿನ ರಾತ್ರಿ ಶೀನಣ್ಣನವರು ಬರುವ ವೇಳೆಗೆ ತಲೆಬಾಗಿಲು ಮುಚ್ಚಿತ್ತು. ಶೀನಣ್ಣನವರು ಹೊರಗಡೆಯಿಂದ ಕದವನ್ನು ಬಡಿದು ಅಬ್ಬರಿಸಿ ಕೂಗಿ ಗದ್ದಲ ಮಾಡಿದರು. ರಾಮಣ್ಣನವರು ಅಲ್ಲಿಯೇ ನಡುವೆಯಲ್ಲಿ ಮಲಗಿದ್ದರು. ಅವರು ಬಾಗಿಲು ತೆಗೆದು ಕೇಳಿದರು:

ರಾ: "ಏನಪ್ಪಾ–ಹೊತ್ತು ಗೊತ್ತು ಇಲ್ಲವೆ?"

ಶೀ: "ನೀನು ಎಲ್ಲೋ ಎರಡು ಪುಡಿಕಾಸು ಸೇರಿಸಿಕೊಂಡಿದ್ದೀ, ಆದದ್ದರಿಂದ ನಿನಗೆ ಭಯ ಬಾಗಿಲು ತೆಗೆದಿರುವುದಕ್ಕೆ."

ಹೀಗೆ ಮಾತಿಗೆ ಮಾತು ಬೆಳೆಯಿತು. ಶೀನಣ್ಣನವರು ಹೇಳಿದರು:

ಶೀ: "ಅವಳಿದ್ದಾಳಲ್ಲ-ಎದ್ದಿದ್ದು ಬಾಗಿಲು ತೆರೆಯುವುದಕ್ಕೇನು?" ("ಅವಳು" ಎಂದರೆ ಸಾಕಮ್ಮನವರು).

ಈ ಮಾತಿನಿಂದ ರಾಮಣ್ಣನವರಿಗೆ ಎಂದೂ ಬಾರದಷ್ಟು ಕೋಪ ಬಂದಿತು.

"ಏನೋ–ಮೈಮೇಲೆ ಸ್ಮೃತಿ ಇಲ್ಲವೆ? 'ಅವಳು' ಎನ್ನುತ್ತೀಯಲ್ಲ? ಸಾಕ್ಷಾತ್ ಕಾಮಾಕ್ಷಮ್ಮನಲ್ಲವೇ ಆಕೆ? ತಾಯಿಯಾಗಿದ್ದಾಳಲ್ಲೊ ನಮಗೆಲ್ಲ?"

ಕೊಂಕುತನ

ಈ ವಾಗ್ವಾದ ನನಗೆ ಕೊಂಚ ಕೊಂಚ ಜ್ಞಾಪಕವಿದೆ. ಶೀನಣ್ಣನವರ ಈ ವಿದ್ಯೆಗಳನ್ನು ನಾನು ನೆನಸಿಕೊಂಡಾಗಲೆಲ್ಲಾ ಅಸಮಾಧಾನವಾಗಿ ಚಿಂತೆಯಾಗುತ್ತದೆ. ಅವರು ಏಕೆ ಹಾಗಾಡಿದರು? ತಂದೆ ತಾಯಿಯರಲ್ಲಿಯೂ ಅಣ್ಣಂದಿರಲ್ಲಿಯೂ ಕಾಣಬಾರದಿದ್ದ ಕೊಂಕುತನ ಇವರಲ್ಲಿ ಹೇಗೆ ಬಂತು? ಅವರ ಜೀವನಸಂದರ್ಭಗಳು ಅವರ ಮನಸ್ಸನ್ನು ಕೆಡಿಸಿರಬಹುದೋ ಏನೋ.

ತಿರುಪತಿ ಯಾತ್ರೆಯ ಪ್ರಕರಣದಲ್ಲಿ ಅವರು ನಡೆದ ನಡವಳಿಕೆಯನ್ನು ಹಿಂದೆ ಸೂಚಿಸಿದ್ದೇನೆ. ಶೀನಣ್ಣನವರು ಉಪಪತ್ನಿಯಿಲ್ಲದವರಲ್ಲ. ಅವರಿಗೂ ಮೂರು ನಾಲ್ಕು ಇದ್ದವು.

ಕಾಶೀಯಾತ್ರೆ

ಒಂದು ಸಾರಿ ಒಂದು ಪ್ರಕರಣ ನಡೆಯಿತು. ಶೀನಣ್ಣನವರು ಕಾಶೀಯಾತ್ರೆ ಹೊರಟರು. ಅಣ್ಣಂದಿರು ಬೇಡ ಎಂದರು. ಶೀನಣ್ಣನವರು "ಇನ್ನೇನಿದೆ ನನಗೆ ಈ ಪ್ರಪಂಚದಲ್ಲಿ? ಹೀಗಾದರೂ ಜನ್ಮ ಸಫಲ ಮಾಡಿಕೊಳ್ಳೋಣ" ಎಂದು ಹೇಳಿ ಹೊರಟೇ ಬಿಟ್ಟರು. ಶೀನಣ್ಣನವರಿಗೆ ನೂರಾರು ಮಂತ್ರಗಳು ಬರುತ್ತಿದ್ದವು. ಸರ್ವದಾ ವಿಭೂತಿ ರುದ್ರಾಕ್ಷಿ. ನಾನು ನಾರಾಯಣಸೂಕ್ತವನ್ನು ಮೊದಲು ಕೇಳಿದ್ದು ಅವರ ಬಾಯಿಂದ. ಅವರಿಗೆ ಕಂಠಸ್ವರ ಚೆನ್ನಾಗಿತ್ತು, ಉಚ್ಚಾರಣೆ ಚೆನ್ನಾಗಿತು. ಮಡಿಯ ಹೊತ್ತಿನಲ್ಲಿ ಮನಸ್ಸೂ ಮಡಿಯಾಗಿರುತ್ತಿತ್ತೆಂದು ನಾನು ನಂಬಿದ್ದೇನೆ. ಆದರೆ ಮಡಿಯ ಹೊತ್ತು ಎಷ್ಟು? ಬೆಳಗಿನಿಂದ ಮಧ್ಯಾಹ್ನದವರೆಗೆ.

ಕಾಶಿಗೆ ಹೋದ ಪುಣ್ಯಾತ್ಮ ಊರಿಗೆ ಒಂದು ಪಂಕ್ತಿ ಕಾಗದ ಬರೆಯಲಿಲ್ಲ. ತಿಂಗಳಾಯಿತು, ಎರಡು ತಿಂಗಳಾಯಿತು. ಶೇಷಗಿರಯ್ಯನವರಿಗೆ ವ್ಯಸನ, ಚಿಂತೆ. ಅವರು ಅತ್ತೇ ಬಿಡುತ್ತಿದ್ದರೆಂದು ನೋಡಿದವರು ನನಗೆ ಹೇಳಿದ್ದಾರೆ. ಹೀಗೆ ಅವರು ತಮ್ಮನಿಗಾಗಿ ಹಂಬಲಿಸುತ್ತಿದ್ದಾಗ ಒಂದು ದಿನ ತಂತಿ ವರ್ತಮಾನ ಬಂತು, ಕಾಶಿಯಿಂದ– "ನಾನು ಇಲ್ಲಿ ನಿರ್ಗತಿಕನಾಗಿದ್ದೇನೆ. ೨೦೦ ರೂಪಾಯಿ ಈ ಕೂಡಲೆ ಕಳುಹಿಸತಕ್ಕದ್ದು–ನಾನು ವಾಪಸ್ಸು ಬರಬೇಕೆಂದು ನಿಮಗೆ ಮನಸ್ಸಿದ್ದರೆ."

ಪೀತಾಂಬರ

ಇದರಂತೆ ಶೇಷಗಿರಯ್ಯನವರು ಟೆಲಿಗ್ರಾಫಿಕ್ ಮನಿಯಾರ್ಡರ್ ಕಳಿಸಿದರು. ಶೀನಣ್ಣನವರು ಊರಿಗೆ ಬಂದರು ಎಲ್ಲರಿಗೂ ಸಂತೋಷವಾಯಿತು.

ಅಲ್ಲಿಂದ ಒಂದು ತಿಂಗಳಾದ ಮೇಲೆ ಒಂದು ಸಂಜೆ ವೆಂಕಟಾಸಾನಿ ಎಂಬ ದೇವದಾಸಿ ಕಾಶಿ ಪೀತಾಂಬರವನ್ನುಟ್ಟು ಗುಡಿಗೆ ತನ್ನ ಸರದಿಯ ಸೇವೆ ಸಲ್ಲಿಸಲು ಹೊರಟಳು. ಬಡ ಮುಳುಬಾಗಲಿಗೆ ಕಾಶಿ ಪೀತಾಂಬರ ಎಲ್ಲಿಂದ ಬರಬೇಕು? ಎಲ್ಲರೂ ಆಕೆಯನ್ನು ಕೇಳುವವರೇ. ಆಕೆ ಗೋಪ್ಯವಾಗಿ ಹೇಳಿದ್ದು ಹೀಗೆ:

“ನಮ್ಮ ಯಜಮಾನರು ಕಾಶಿಯಿಂದ ತಂದುಕೊಟ್ಟದ್ದು.”

ಇದು ವೆಂಕಟನಾರಣ ಭಟ್ಟರಿಗೆ ತಿಳಿಯಿತು. ಅನಂತರ ಶೀನಣ್ಣನವರ ಕಾಶೀಯಾತ್ರೆ ಎಲ್ಲರಿಗೂ ಅರ್ಥವಾಯಿತು.

ಬಹುಮಾನ

ಕಾಶಿಯಿಂದ ಬರುವಾಗ ಶೀನಣ್ಣನವರು ನನಗಾಗಿ ಕೆಲವು ಪುಸ್ತಕಗಳನ್ನು ತಂದುಕೊಟ್ಟರು. ಅವುಗಳಲ್ಲಿ ಒಂದು ದೇವನಾಗರಿಯಲ್ಲಿ ಅಚ್ಚಾಗಿದ್ದ ಸ್ತೋತ್ರ ಪುಸ್ತಕ. ನನಗೆ ಆ ವೇಳೆಗೆ ಬಾಲಬೋಧಾಕ್ಷರ ಪರಿಚಯವಾಗಿತ್ತು. ನಾನು ಆ ಪುಸ್ತಕದಲ್ಲಿಯ-

“ಗಂಗಾತರಂಗ ಕಮನೀಯ ಜಟಾಕಲಾಪಂ”

ಶ್ಲೋಕವನ್ನು ಅಭ್ಯಾಸಮಾಡುತ್ತಿದ್ದಾಗ, ನನ್ನ ತಾತನಿಗೆ ಬಹಳ ಹಿಗ್ಗು.

ಅವರು ಕೊಟ್ಟ ಇನ್ನೊಂದು ಪುಸ್ತಕ ಜಗನ್ನಾಥಪಂಡಿತನ ಗಂಗಾಲಹರಿ. ಇದು ನನಗೆ ಕಷ್ಟವಾಗಿತ್ತು. ನಾನು ಓದಲು ಪ್ರಯತ್ನಪಟ್ಟೆ. ಶೀನಣ್ಣನವರು ಒಂದೆರಡು ಪಂಕ್ತಿ ಹೇಳಿಕೊಟ್ಟು “ಇದನ್ನು ಒಂದೆರಡು ವರ್ಷ ಬಿಟ್ಟು ಆಮೇಲೆ ಓದುವೆಯಂತೆ” ಎಂದರು. ಅವರು ಕೊಟ್ಟ ಮತ್ತೊಂದು ಪುಸ್ತಕ ಭಗವದ್ಗೀತೆ–ಕನ್ನಡ ಕೈಬರಹದ್ದು. ಅಂಗೈಯಷ್ಟೇ ಅಗಲವಿದ್ದ ಹಳೆಯ ಕಾಲದ ಒರಟು ನಯ ಕಾಗದ. ಅದು ಪುಟ್ಟದಾದದ್ದರಿಂದಲೂ ಅದರ ಅಕ್ಷರ ಸಾಲುಗಳು ಕಣ್ಣಿಗೆ ತುಂಬ ಅಂದವಾಗಿದ್ದದ್ದರಿಂದಲೂ ನನಗೆ ಅದು ಪ್ರಿಯವಾಗಿತ್ತು. ನಾನು ಅದನ್ನು ಬೇರೆಯವರಿಂದ ಮುಟ್ಟಿಸುತ್ತಿರಲಿಲ್ಲ. ರಾಮಣ್ಣನವರು ತಮ್ಮನನ್ನು ಕೇಳಿದರು:

ರಾ: “ಏನೋ ಅದು ಶೀನಾ, ಮಗುವಿಗೆ ಕೊಟ್ಟಿರುವುದು?”

ಶೀ: “ಭಗವದ್ಗೀತೆ.”

ರಾ: “ಅದು ನಿನಗೆ ಬೇಡವಾದದ್ದು! ನಿನಗೇ ಅದು ಮೀರಿದ್ದರೆ ಮಗುವಿಗೆ ಅದರಿಂದ ಏನು ಪ್ರಯೋಜನ?”

ರಾಮಣ್ಣನವರು “ಈ ವಯಸ್ಸಿನಲ್ಲಿ ಭಗವದ್ಗೀತೆಯಾದರೆ ಅದು ಬೇಕಾಗುವ ವಯಸ್ಸಿಗೆ ಬೇಡದೆ ಹೋಗುತ್ತದೆ” ಎಂದು ಹೇಳಿ ಆ ಸಣ್ಣ ಪುಸ್ತಕವನ್ನು ತೆಗೆದಿರಿಸಿದರು. ಆಮೇಲೆ ನಾನು ಅದನ್ನು ಪುನಃ ಅವರಿಂದ ಈಸಿಕೊಂಡು ಇಟ್ಟುಕೊಂಡಿದ್ದೆ.

ಶೀನಣ್ಣನವರು ಕಾಶಿಯಿಂದ ತಂದ ವಸ್ತುಗಳಲ್ಲಿ ಹೇಳಬೇಕಾದ ಇನ್ನೊಂದು, ದೊಡ್ಡ ವಿಷ್ಣುಪಾದ. ಅದು ತಾಮ್ರದ್ದು. ನಮ್ಮಲ್ಲಿ ಶ್ರಾದ್ಧದ ದಿವಸ ಆ ವಿಷ್ಣುಪಾದದ ಮೇಲೆ ಪಿಂಡಗಳನ್ನಿರಿಸಿ ಪೂಜಿಸುವುದು ಪದ್ಧತಿ. ಅದೇ ಗಯೆಯ ವಿಷ್ಣುಪಾದ.

ವಾತ್ಸಲ್ಯ

ಶೀನಣ್ಣನವರಿಗೆ ನನ್ನಲ್ಲಿ ತುಂಬಾ ವಾತ್ಸಲ್ಯ. ಅವರು ಊರೂರು ಸುತ್ತುತ್ತಿದ್ದವರು, ಆದರೂ ವಿಜಯದಶಮಿಯ ವೇಳೆಗೆ ಊರಿಗೆ ಬರುವರು. ನಮ್ಮ ಊರಿನಲ್ಲಿ ಜಂಬೂ ಸವಾರಿಯ ಸಂಭ್ರಮ ವಿಶೇಷ. ಊರಿನ ಹತ್ತು ದೇವಸ್ಥಾನಗಳಿಂದಲೂ ಮೆರವಣಿಗೆ ಹೊರಟು ಊರಿನ ಈಶಾನ್ಯ ದಿಕ್ಕಿನ ಎಳ್ಳು ಬಂಡೆ ಎಂಬ ಪ್ರದೇಶಕ್ಕೆ ಬರುವುದು. ಎಳ್ಳು ಬಂಡೆ ಎಂಬುದು ವಿಶಾಲವಾದ ಬಂಡೆಗಳಿದ್ದ ಜಾಗ. ಎಳ್ಳಿನ ಬೆಳೆ ಆ ಸುತ್ತ ಮುತ್ತಲಿನ ಜಮೀನುಗಳಲ್ಲಿ ಒಂದಾನೊಂದು ಕಾಲದಲ್ಲಿ ಹುಲುಸಾಗಿರುತ್ತಿತ್ತು. ಬೆಳೆಯಾದುದನ್ನು ಆ ಬಂಡೆಗಳ ಮೇಲೆ ಉಜ್ಜಿ ಚೊಕ್ಕಟ ಮಾಡುತ್ತಿದ್ದರು. ಮಿಕ್ಕ ಕಾಲದಲ್ಲಿ ಅದೆಲ್ಲ ದೊಡ್ಡ ಬಯಲು. ಅಲ್ಲಿ ವಿಜಯದಶಮಿ ದಿನ ಸಂಜೆ ದೇವರುಗಳೆಲ್ಲ ಬಂದು ಸೇರಿದ ಮೇಲೆ ಶಮೀಪೂಜೆ ನಡೆಯುವುದು. ಅನಂತರ ಊರಿನ ಅಮಲ್ದಾರರು ಬಾಳೆ ಕಂಬವನ್ನು ಕತ್ತಿಯಿಂದ ಕಡಿಯುವರು. ಇದು ರಾಮಾರ್ಜುನರು ಮಾಡಿದ ದುಷ್ಟ ಸಂಹಾರಕಾರ್ಯದ ಪ್ರತೀಕ. ಇದಾದ ಮೇಲೆ ಅಮಲ್ದಾರರು ತಾಲ್ಲೂಕು ಕಛೇರಿ (ಟ್ರೆಜರಿ) ಖಜಾನೆಯಲ್ಲಿ ಲಕ್ಷ್ಮೀಪೂಜೆ ಮಾಡುವರು. ಇದಕ್ಕೆಲ್ಲ ಆಗಿನ ಸರಕಾರದಲ್ಲಿ ಗೊತ್ತಾದ ಕಟ್ಟಳೆಯಿತ್ತು.

ಈ ಪೂಜಾಸಂಭ್ರಮಗಳಿಗೆ ಜನ ತಂಡೋಪತಂಡವಾಗಿ ಬರುವರು. ಇದೇ ಜಂಬೂ ಸವಾರಿ. ಈ ಉತ್ಸವಕ್ಕೆ ನನ್ನನ್ನು ಕರೆದುಕೊಂಡು ಹೋಗುವ ಕರ್ತವ್ಯವನ್ನು ಶೀನಣ್ಣನವರು ಇಟ್ಟುಕೊಂಡಿದ್ದರು. ಅದಕ್ಕಾಗಿ ಒಂದು ಕುದುರೆ. ಆ ಕುದುರೆಯ ಬೆನ್ನ ಮೇಲೆ ಸೊಗಸಾದ ರೇಷ್ಮೆಯ ಬಟ್ಟೆ, ಜರತಾರಿ ಬಟ್ಟೆ, ಶಾಲು ಹೊದಿಸುತ್ತಿದ್ದರು.

ಕುದುರೆಗೆ ಅರಿಶಿನ ಕುಂಕುಮ ಪುಷ್ಪಹಾರಗಳ ಅಲಂಕಾರ. ಈ ಸಿಂಗರಿಸಿದ ಕುದುರೆಯ ಮೇಲೆ ಶೀನಣ್ಣನವರು ನನ್ನನ್ನು ಕೂಡಿಸಿ ತಾವು ಲಗಾಮು ಹಿಡಿದು ಒಂದು ಕೈಯಿಂದ ನನ್ನನ್ನು ಹಿಡಿದುಕೊಂಡು ಉತ್ಸವಕ್ಕೆ ಬರುವರು.

ರಾಮಣ್ಣನವರಿಗೆ ಗೋವಿನ ವಿಷಯದಲ್ಲಿ ಹೇಗೋ ಶೀನಣ್ಣನವರಿಗೆ ಕುದುರೆಯ ವಿಷಯದಲ್ಲಿ ಹಾಗೆ ಆದರಣೆ. ಅವರು ಚೆನ್ನಾಗಿ ಸವಾರಿ ಮಾಡುತ್ತಿದ್ದರಂತೆ. ಅವರ ದಾರಿಗಳೆಲ್ಲ ಹಾಗೆ ಜರ್ಬುದಾರಿಯವು. ವಿಧಿ ಅವರ ಪಾಲಿಗೆ ವಿಕಟವಾಗಿತ್ತು. ಪಚ್ಚಿಯಪ್ಪ ಮೊದಲಿಯಾರರ ಗುಮಾಸ್ತಗಿರಿ ಬಿಟ್ಟ ಬಳಿಕ ಶೀನಣ್ಣನವರು ಯಾವ ಉದ್ಯೋಗವನ್ನೂ ನಿಯತವಾಗಿಟ್ಟುಕೊಂಡಿರಲಿಲ್ಲ. ಅವರ ಖರ್ಚಿಗೆ ಪಿತ್ರಾರ್ಜಿತವಾದ ಆಸ್ತಿಯಿಂದ ಬಂದ

ಆದಾಯ, ಅದರ ಜೊತೆಗೆ ದೊಡ್ಡಣ್ಣಂದಿರು ಕೊಡುತ್ತಿದ್ದ ಸಹಾಯ. ಇಷ್ಟನ್ನು ಅವರು ಕೈಯಲ್ಲಿರಿಸಿಕೊಂಡು ವರ್ಷಕ್ಕೆ ಆರು ತಿಂಗಳ ಕಾಲ ಊರೂರು ಸುತ್ತುತ್ತಿದ್ದರು. ಅವರ ಹಿರಿಯ ಮಗಳು ಅಮ್ಮಣ್ಣಮ್ಮ. ಆಕೆಯ ಯಜಮಾನರು ನಡವತ್ತಿ ವೆಂಕಟರಮಣಯ್ಯ. ಈತ ಕೋಲಾರಕ್ಕೂ ಮುಳುಬಾಗಿಲಿಗೂ ನಡುವೆ ವಡಗೂರು ಎಂಬ ಹಳ್ಳಿಯಲ್ಲಿ ಸ್ಕೂಲುಮಾಸ್ಟರು. ವಡಗೂರು ಹಳ್ಳಿಯು ಸಂಪದ್ವಿಚಾರದಿಂದ (ಇಕನಾಮಿಕ್ಸ್) ಆಗ ಬಹು ಮುಖ್ಯವಾಗಿತ್ತು. ಅಲ್ಲಿ ಮಗ್ಗಗಳಲ್ಲಿ ಚಕ್ಕು ಬಟ್ಟೆ ನೇಯುತ್ತಿದ್ದರು. "ವಡಗೂರು ಚಕ್ಕು" ಎಂದೇ ಹೆಸರು. ಅದು ಬನಿಯನ್ ಷರ್ಟುಗಳಿಗೂ ಕೋಟುಗಳಿಗೂ ಒದಗುತ್ತಿತ್ತು. ಬಹು ಮೇಲ್ದರ್ಜೆಯ ಚಕ್ಕಿಗೆ ಬೆಲೆ ಗಜಕ್ಕೆ ಎರಡೂವರಾಣೆ. ನಾನು ಆ ಬಟ್ಟೆಯನ್ನು ಧರಿಸುತ್ತಿದ್ದೆ.

ವಕ್ರದೃಷ್ಟಿ

ನನ್ನ ಚಿಕ್ಕತಾತ ಶೀನಣ್ಣನವರದು ಬಿರುಸುಬಾಯಿ ಎಂದು ಹೇಳಿದೆ. ಅವರ ದೃಷ್ಟಿಯೂ ವಕ್ರದ್ದೇ. ಒಂದೊಂದು ಸಾರಿ ಅವರಿಗೆ ಮಹಾನುಭಾವಿತಿ (ನನ್ನ ಮಾತಾಮಹಿ) ಸಾಕಮ್ಮನವರ ವಿಷಯದಲ್ಲಿ ಅಸಮಾಧಾನದ ಮಾತು ಬರುತ್ತಿತ್ತು. ಆಕೆ ಮನೆಯಲ್ಲಿರುವುದರಿಂದ ಒಂದು ಆಚಾರ, ಒಂದು ನಿಯಮ, ಒಂದು ಕಟ್ಟುನಿಟ್ಟು ಬಂದಿತ್ತು. ನಮ್ಮ ಶೀನಣ್ಣನವರಿಗೆ ಕಟ್ಟುನಿಟ್ಟು ಎಂದರೆ ಆಗದು, “ಇವಳು ಯಾರು ಈ ಮನೆಗೆ?” ಎಂಬಂತೆ ಅವರ ಭಾವನೆ. ಈ ಭಾವನೆ ಬಂದಾಗ ಅಪಶಬ್ದಗಳೂ ಬಂದುಬಿಡುತ್ತಿದ್ದವು.

ಹೀಗೆ ಒಂದು ಸಾರಿ ಆದಾಗ ಸಾಕಮ್ಮನವರು ತುಂಬ ನೊಂದುಕೊಂಡು, ತಾವೂ ಮಗನೂ ಬೇರೆ ಹೋಗಬೇಕೆಂದು ಆಲೋಚಿಸಿ ಕೊಂಚ ದೂರದಲ್ಲಿ ಒಂದು ಮನೆಯ ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡರು. ಬಾಡಿಗೆ ನಾಲ್ಕಾಣೆಯೋ, ಎಂಟಾಣೆಯೋ. ಅಲ್ಲಿಗೆ ನನ್ನನ್ನು ಮಧ್ಯಾಹ್ನ ಊಟಕ್ಕೆ ಕರೆದುಕೊಂಡು ಹೋಗಿದ್ದರು.

ಆ ಹೊತ್ತಿನಲ್ಲಿ ನಡೆದ ಮಾತುಕಥೆಗಳನ್ನು ನೆನೆದುಕೊಂಡರೆ ಈಗಲೂ ಅದು ಮನಸ್ಸನ್ನು ಒತ್ತುತ್ತದೆ. ಆಕೆಯೂ ನನ್ನ ಸೋದರಮಾವನೂ ಒಂದು ಕ್ಷಣವೂ ನನ್ನನ್ನಗಲಿ ಇರಲಾರರು. ನನ್ನ ಚಿಕ್ಕತಾತ ರಾಮಣ್ಣನವರೂ ಹಾಗೆಯೇ. ಆ ಸಂಜೆ ನನ್ನ ಅಜ್ಜಿ ನನ್ನನ್ನೆತ್ತಿಕೊಂಡು ಮನೆಗೆ ಬಂದಾಗ ಶೀನಣ್ಣನವರು ಮನೆಯಲ್ಲಿರಲಿಲ್ಲ. ರಾಮಣ್ಣನವರು ನನ್ನನ್ನು ನೋಡಿದೊಡನೆಯೇ ಗದ್ಗದ ಸ್ವರದಿಂದ “ಬಂದೆಯಾ!” ಎಂದು ಎತ್ತಿಕೊಂಡರು. ಆಮೇಲೆ ಸಾಕಮ್ಮನವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ,

“ಏನಮ್ಮ, ನೀವು ಇಲ್ಲದ ಮನೆಯಲ್ಲಿ–ಮಗು ಇಲ್ಲದ ಮನೆಯಲ್ಲಿ ನಾನು ಹೇಗೆ ಸಹಿಸಿಕೊಂಡಿರಲಿ? ಶೀನನದು ಕೆಟ್ಟ ಬಾಯಿ. ನಿಮಗೆ ತಿಳಿದೇ ಇದೆ. ಅವನ ಬಾಯನ್ನು ನೀವು ದೊಡ್ಡದಾಗಿ ಎಣಿಸಬಾರದೆಂದು ನಾನು ಬೇಡಿಕೊಳ್ಳುತ್ತೇನೆ. ಈ ಮನೆ ನಿಮ್ಮದು. ನೀವು ನಮ್ಮನ್ನು ಎಂದಿಗೂ ಕೈಬಿಡದೆ ಕಾಪಾಡಿಕೊಂಡಿದ್ದರೆ ನಾವು ಬದುಕಿಯೇವು.”

–ಎಂದು ಅಂಗಲಾಚಿದರು. ಮಾರನೆಯ ದಿನದಿಂದ ಎಲ್ಲ ಹಿಂದಿನಂತೆ ನೆಮ್ಮದಿಯಾಯಿತು.

ಹಕೀಂ ಸಾಹೇಬರು

ಶೀನಣ್ಣನವರಿಗೆ ದೈವಶ್ರದ್ಧೆ, ಆಚಾರಶ್ರದ್ಧೆಗಳು ಅತಿಶಯವಾಗಿದ್ದವು. ಅಷ್ಟಿದ್ದರೂ ಅವರಲ್ಲಿ ಪಾಷಂಡಿತನಕ್ಕೆಡೆಯಿರಲಿಲ್ಲ. ಅನ್ಯಮತಗಳನ್ನು ಅವರು ದ್ವೇಷಿಸಿದವರಲ್ಲ. ಅವರ ಸ್ನೇಹಿತರಲ್ಲಿ ಬಹು ಮುಖ್ಯರು ಒಬ್ಬ ಮಹಮ್ಮದೀಯರು. ಅವರನ್ನು ಬಂಡೆ ಹಕೀಂ ಸಾಹೇಬರು ಎಂದು ಕರೆಯುತ್ತಿದ್ದರು. ಹಕೀಂ ಸಾಹೇಬರು ಶೀನಣ್ಣನವರಿಗಿಂತ ಮುದುಕರು. ಅವರು (ಹಾಜ್) ಮಕ್ಕಾಯಾತ್ರೆ ಮಾಡಿದ್ದವರು; ವೃತ್ತಿಯಲ್ಲಿ ವೈದ್ಯರು. ಹತ್ತಾರು ಜನ ಅವರಲ್ಲಿಗೆ ಹೋಗಿ ಚಿಕಿತ್ಸೆ ಪಡೆಯುತ್ತಿದ್ದರು. ಅವರ ವಾಸಗೃಹ ದರ್ಗಾಕ್ಕೆ ಸಮೀಪವಾಗಿತ್ತು–ಒಂದು ಬಂಡೆಯ ಮೇಲೆ. ಈ ಕಾರಣದಿಂದಲೇ ಅವರಿಗೆ ಬಂಡೆ ಹಕೀಂ ಎಂಬ ಹೆಸರು.

ಸಾಹೇಬರು ಪ್ರತಿ ದಿನವೂ ಮಧ್ಯಾಹ್ನ ಸುಮಾರು ೩ ಘಂಟೆಯ ವೇಳೆಗೆ ನಮ್ಮ ಮನೆಗೆ ಬರುವರು. ಅಲ್ಲಿಯ ಹೊರಕೋಣೆಯಲ್ಲಿ ಅವರೂ ಶೀನಣ್ಣನವರೂ ಎದುರೆದುರಾಗಿ ಕೂಡುವರು. ಅವರಿಬ್ಬರ ನಡುವೆ ಒಂದು ಸಣ್ಣ ಕೈ ಮೇಜು. ಅದರ ಮೇಲೆ ಚದುರಂಗದ ಮನೆಸಾಲು ಮತ್ತು ಆಟದ ಕಾಯಿಗಳು.

ಹೀಗೆ ೩ ರಿಂದ ೬ ಘಂಟೆಯವರೆಗೂ–ಕಣ್ಣಿಗೆ ಕತ್ತಲೆಯಾಗುವವರೆಗೂ ಇಬ್ಬರೂ ಚದುರಂಗವಾಡುವರು. ನಡುನಡುವೆ ಮಾತು ಕಥೆ, ಮತ ತತ್ತ್ವದ ಜಿಜ್ಞಾಸೆ, ನೀತಿ ಜಿಜ್ಞಾಸೆ. ಒಂದು ದಿನದ ವಿಷಯ ನನಗೆ ಕೊಂಚ ಜ್ಞಾಪಕವಿದೆ.

ಪಾನೀ ತೇರಾ ರಂಗ್
ತುಂ ಜಿಸ್‌ಮೇ ಮಿಲೇ ಹೋ ಬೈಸಾ ॥

ಇದು ವಾಕ್ಯಾರ್ಥದ ವಸ್ತು. ಇದಕ್ಕೆ ಎರಡರ್ಥ. (೧) "ತೇರಾ" ಎಂದರೆ "ನಿನ್ನ." (೨) ಹದಿಮೂರು ಎಂದು ಇನ್ನೊಂದರ್ಥ. ತರ್ಕದ ಫಲಿತಾರ್ಥವೇನೆಂದರೆ "ಎಲೆ ನೀರೆ, ನಿನ್ನ ಬಣ್ಣ ನೀನು ಯಾವುದರಲ್ಲಿ ಸೇರಿರುತ್ತೀಯೋ ಅದರಂತೆ. ನೀನು ಬಣ್ಣವಿಲ್ಲದ ವಸ್ತು. ಇಂಥ ಬಣ್ಣವಿಲ್ಲದ ವಸ್ತುವಿನಲ್ಲಿ 'ನೀನು ಹದಿಮೂರು ಬಣ್ಣ' ಎಂಬ ಅರ್ಥ ಸಂಗತವಾಗುವುದಿಲ್ಲ"... ಈ ಸಿದ್ಧಾಂತ ಮಾಡಲು ಹಕೀಂ ಸಾಹೇಬರು ಎಂಟು ಹತ್ತು ಪ್ರಮಾಣ ವಾಕ್ಯಗಳನ್ನು ಉದಾಹರಿಸಿದರು. ಶೀನಣ್ಣನವರು ಸಂವಾದಿ ವಾಕ್ಯಗಳನ್ನು ಹೇಳಿ

ಪುಷ್ಟಿಕೊಟ್ಟರು. ನನಗೆ ಆ ವಾದವನ್ನು ಕೇಳಿ ಮನಸ್ಸಿನಲ್ಲಿ ಅದ್ಭುತದ ಅನುಭವ. ಎಂಥ ದೊಡ್ಡವರು, ಎಂಥ ಪಾಂಡಿತ್ಯ–ಎಂದು.

ಬಂಡೆ ಹಕೀಮರು ವಿರಕ್ತರು, ತತ್ತ್ವನಿಷ್ಠರು, ದಯಾಳು ಮತ್ತು ನಿರ್ಮಲರು. ಅವರ ಜ್ಞಾಪಕಕ್ಕೆ ಸಾವಿರ ಸಲಾಂ.

ಸಂಗೀತ ರಸಿಕತೆ

ಶೀನಣ್ಣನವರಿಗೆ ಸಂಗೀತ ಸಾಹಿತ್ಯಗಳಲ್ಲಿ ತುಂಬ ಅಭಿರುಚಿ. ಒಂದು ಪ್ರಸಂಗ ಜ್ಞಾಪಕಕ್ಕೆ ಬರುತ್ತದೆ. ನನ್ನ ಮದುವೆಯ ಐದು ದಿವಸದ ಉತ್ಸವದಲ್ಲಿ ಒಂದು ದಿವಸ ಸಂಗೀತ ಕಛೇರಿ, ವಿಜಯನಗರದ ವೆಂಕಟರಮಣದಾಸರೆಂಬ ಆಂಧ್ರ ವೈಣಿಕರಿಂದ ನಡೆಯಿತು. ಅವರು ಪ್ರಸಿದ್ಧರಾಗಿದ್ದವರು. ಆಗ ಶೀನಣ್ಣನವರು ನನಗೆ ಹತ್ತಿರವಾಗಿ ಕುಳಿತಿದ್ದರು. ಆ ವೈಣಿಕರು ನಾಲ್ಕೈದು ಕೃತಿಗಳನ್ನು ನುಡಿಸಿದ್ದಾದ ಮೇಲೆ ಸಭಿಕರ ಕಡೆ ನೋಡಿ "ಏನಾದರೂ ಬೇಕೆಂದು ತಮ್ಮಲ್ಲಿ ಯಾರಾದರೂ ಅಪ್ಪಣೆ ಮಾಡುವುದಾದರೆ ನನಗೆ ತಿಳಿದ ಮಟ್ಟಿಗೆ ಸಂತೋಷದಿಂದ ನುಡಿಸಿಯೇನು" ಎಂದರು. ಸಭಿಕರು ಆನಂದಪರವಶರಾಗಿದ್ದರು. ನಮ್ಮ ಶೀನಣ್ಣನವರು "ಗೋವಿಂದಸ್ವಾಮಿ ವರ್ಣಗಳ ವಾಡಿಕೆಯುಂಟೆ?" –ಎಂದು ಕೇಳಿದರು. ವೈಣಿಕರು "ಆ ಐದು ವರ್ಣಗಳಲ್ಲಿ ಯಾವುದು ಬೇಕು?" ಎಂದರು. ಶೀನಣ್ಣನವರು "ಶಂಕರಾಭರಣವಾದರೆ ಸಂತೋಷ–" ಎಂದರು. ವೆಂಕಟರಮಣದಾಸರು ಶಂಕರಾಭರಣ ವರ್ಣವನ್ನು ಬಾಜಿಸಿದರು. ಮುಕ್ತಾಯಕ್ಕೆ ಬರುತ್ತಿದ್ದಂತೆ ಶೀನಣ್ಣನವರು ಆ ಮಂಟಪದಲ್ಲಿದ್ದ ಒಬ್ಬ ಯುವಕನಿಗೆ ಹೇಳಿ ಒಂದು ಹೂವಿನಹಾರವನ್ನು ತರಿಸಿಕೊಂಡು, ವರ್ಣ ಮುಗಿದ ಕೂಡಲೆ ಅದನ್ನು ವೈಣಿಕರ ಕೊರಳಿಗೆ ಸಮರ್ಪಿಸಿ ಕೈ ಮುಗಿದು "ಪರಮಾನಂದವಾಯಿತು" ಎಂದರು. ಸಭಿಕರು ಅನುಮೋದಿಸಿದರು.

ಶೀನಣ್ಣನವರ ಗೌರಮ್ಮ ಎಂಬ ಮಗಳನ್ನು ಆನೆಕಲ್ ಸಮೀಪದ ಒಂದು ಮನೆಗೆ ಕೊಟ್ಟಿತ್ತು. ಬೆಂಗಳೂರು ಸಮೀಪದ ದೊಮ್ಮಸಂದ್ರ ಶೀನಣ್ಣನವರ ಅತ್ತೆಮನೆ. ಎಲಹಂಕ ಹಿರಿಯ ಮಗಳ ಮನೆ. ಹೀಗೆ ಬಂಧು ಸಂಬಂಧಗಳು ಬೇರೆ ಬೇರೆ ಊರುಗಳಲ್ಲಿದ್ದವು. ಈ ಊರುಗಳನ್ನು ಸುತ್ತಾಡಿಕೊಂಡು ಬಂಧುಬಳಗದ ನಡುವೆ ಶೀನಣ್ಣನವರು ಕಾಲ ಕಳೆಯುತ್ತಿದ್ದರು. ಈ ಸಂಚಾರಗಳಿಗೆಲ್ಲ ವಾಹನ ಕುದುರೆ.

ಶಾಮಣ್ಣ

ಶೀನಣ್ಣನವರಿಗೆ ಒಬ್ಬ ಮಗ ಇದ್ದ, ಶಾಮಣ್ಣ ಅಥವಾ ಶಾಮರಾವ್ ಎಂದು. ಈತ ಬಾಲ್ಯದಲ್ಲಿ ಮುಳುಬಾಗಲಿನಲ್ಲಿಯೂ ಅನಂತರ ಕೋಲಾರದಲ್ಲಿ ದೊಡ್ಡ ತಂದೆಯ ಬಳಿಯೂ ಇದ್ದ. ಆತ ಒಳ್ಳೆಯ ವಿದ್ಯಾರ್ಥಿಯಾಗಿದ್ದಿರಬೇಕು. ಆತ ಆತನಿಗೆ ಬಂದ ಬಹುಮಾನ (ಪ್ರೈಜ್ ಬುಕ್) ಶಬ್ದಮಣಿದರ್ಪಣ–ಜೆ. ಗ್ಯಾರೆಟ್‌ರವರು ಸಂಪಾದಿಸಿದ್ದದ್ದು. ಆತ ವಿದ್ಯೆಗೆ ಮನಸ್ಸು ಕೊಟ್ಟಿದ್ದಿದ್ದರೆ ವಿದ್ವಾಂಸನಾಗುತ್ತಿದ್ದನೆಂದು ನನಗೆ ಅನ್ನಿಸುತ್ತದೆ. ಆತನಿಗೆ ಪದ್ಯಕಾವ್ಯದಲ್ಲಿ ತುಂಬ ಆಸಕ್ತಿ. ಮಾತುಕತೆಯಲ್ಲಿ ಲವಲವಿಕೆ. ಆತ ಹೈಸ್ಕೂಲಿನಲ್ಲಿದ್ದಾಗ ಸರಕಾರದವರು ರೈಲ್ವೆ ಸರ್ವಿಸಿಗಾಗಿ ಯುವಕ ಜನರನ್ನು ತಯಾರು ಮಾಡಿಸಿಕೊಳ್ಳುವ ಒಂದು ಯೋಜನೆಯನ್ನು ಹೊರಡಿಸಿದರು. ಆಗ ಮೈಸೂರಿನಲ್ಲಿ ರೈಲ್ವೆಯ ಪ್ರಾರಂಭದ ಕಾಲ–ಸುಮಾರು ೧೮೮೦-೮೨ ಇರಬಹುದು. ಸ್ಟೇಷನ್ ಮಾಸ್ಟರ್ ಮೊದಲಾದ ಕೆಲಸಗಳಿಗಾಗಿ ಒಂದು ಟೆಲಿಗ್ರಾಫ್ ಸ್ಕೂಲ್ ಏರ್ಪಟ್ಟಿತ್ತು. ಅದಕ್ಕೆ ಸೇರಬೇಕೆನ್ನುವವರು ಹುಟ್ಟು ಮೈಸೂರಿಗರಾಗಿ ಹೈಸ್ಕೂಲು ಮೇಲ್ಮಟ್ಟದ ವಿದ್ಯಾರ್ಥಿಗಳಾಗಿರಬೇಕು. ಈ ಯೋಜನೆಯ ಮೇರೆಗೆ ಶಾಮಣ್ಣನವರು ಉಮೇದುವಾರರಾಗಿ ಸೇರಿದರು. ಆ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಳಿಕ ಅವರಿಗೆ ಸ್ಟೇಷನ್ ಮಾಸ್ಟರ್ ಹುದ್ದೆ ದೊರೆಯಿತು. ನಿಟ್ಟೂರು, ಗುಬ್ಬಿ ಮೊದಲಾದ ಕಡೆಗಳಲ್ಲಿಯೂ ತೆಲುಗು ಸೀಮೆಯಲ್ಲಿ ಕರ್ನೂಲು, ನಂದ್ಯಾಲ, ಕಂಬಂ ಮೊದಲಾದ ಕಡೆಗಳಲ್ಲಿಯೂ ಉದ್ಯೋಗ ಮಾಡಿದರು.

ಅವರ ವಿಷಯವಾಗಿ ನನ್ನ ತಾತಂದಿರಿಗೆ ಎರಡು ಕೊರತೆ. (೧) ಆತ ದೂರದೇಶದಲ್ಲಿದ್ದಾನೆಂದು. (೨) ಆತನಿಗೆ ಮಕ್ಕಳಾಗಿರಲಿಲ್ಲವೆಂಬುದು.

ಶೇಷಣ್ಣನವರಿಗೆ ತಮ್ಮನ ಮಗನ ವಿಷಯದಲ್ಲಿ ಅತಿಶಯವಾದ ಅಭಿಮಾನವೆಂದು ಹಿಂದೆ ಹೇಳಿದ್ದೇನೆ. ಶಾಮಣ್ಣನಿಗೆ ಕಂಬಂ, ಕರ್ನೂಲು ಮೊದಲಾದ ಸ್ಥಳಗಳಿಗೆ ವರ್ಗವಾದದ್ದನ್ನು ಕೇಳಿ ಅವರಿಗೆ ಅಳುವೇ ಬಂತಂತೆ. ಅವರು ಆ ಕಾಲದಲ್ಲಿ ಕೋಲಾರದ ಡೆಪ್ಯುಟಿ ಕಮಿಷನರಾಗಿದ್ದ ರಾಮಾನುಜಯ್ಯಂಗಾರ್ಯರಲ್ಲಿ ತಮ್ಮ ದುಃಖವನ್ನು ತೋಡಿಕೊಂಡರು. ಅಯ್ಯಂಗಾರ್ಯರು ಪ್ರಸನ್ನರಾಗಿ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಒಂದು ಚಾಕರಿ ಸ್ಥಳ ಬಿಡುವಾದಾಗ ಅದಕ್ಕೆ ಶಾಮಣ್ಣನವರನ್ನು ನಿಯಮಿಸುವುದಾಗಿ ಭರವಸೆ ಕೊಟ್ಟರಂತೆ. ಹಾಗೆ ಶಾಮಣ್ಣನವರಿಗೆ ಬಹುಶಃ ೧೯೦೦-೧೯೦೧ರ ಸುಮಾರಿನಲ್ಲಿ ಕೋಲಾರ ಜಿಲ್ಲೆಯ

ಶ್ರೀನಿವಾಸಪುರ ತಾಲ್ಲೂಕಿನ ಎಲ್ದೂರು ಎಂಬ ಗ್ರಾಮದಲ್ಲಿ ಆ ಹೋಬಳಿಯ ಶೇಕದಾರಿ ಹುದ್ದೆ ನೇಮಕವಾಯಿತು. ಈ ವಿಷಯವಾಗಿ ಮನೆಯಲ್ಲಿ ಕೊಂಚ ಮುಜುಗರವಾದದ್ದೂ ಉಂಟು. ಕಾರಣವೇನೆಂದರೆ ಶೇಷಗಿರಿಯಪ್ಪನವರು ತಮ್ಮ ಮಗನ ಚಾಕರಿಗಾಗಿ ಯಾವ ತರದೂದನ್ನೂ ಮಾಡದವರು ತಮ್ಮನ ಮಗನ ಚಾಕರಿಗಾಗಿ ತರದೂದು ಮಾಡಿದರೆಂದು. ಅದನ್ನಲ್ಲಿಗೆ ಬಿಡೋಣ.

ಶಾಮಣ್ಣನವರು ಎಲ್ದೂರಿನಲ್ಲಿದ್ದಾಗ ಮುಳುಬಾಗಲಿನಲ್ಲಿ ಪ್ಲೇಗು ಹರಡಿ ಆ ಕಾರಣದಿಂದ ನನ್ನ ಮನೆಗಾದ ಆಪತ್ತನ್ನು ಕುರಿತು ಹಿಂದೆ ಹೇಳಿದ್ದೇನೆ. ಆ ಕಷ್ಟಕಾಲದಲ್ಲಿ ನನ್ನ ತಂದೆತಾಯಿಗಳು ಮಕ್ಕಳೊಡನೆ ಎಲ್ದೂರಿಗೆ ಬಂದು ಅಲ್ಲಿ ವೆಂಕಟೇಶಶಾಸ್ತ್ರಿಗಳೆಂಬ ಶ್ರೋತ್ರಿಯ ಮಹನೀಯರ ಮನೆಯ ಒಂದು ಭಾಗದಲ್ಲಿ ವಾಸವಾಗಿದ್ದರು. ಈ ಅನುಕೂಲವನ್ನೂ ಇತರ ಸಹಾಯವನ್ನೂ ಶಾಮಣ್ಣನವರು ಏರ್ಪಡಿಸಿಕೊಟ್ಟರು.

ಶಾಮಣ್ಣನವರ ಕುಟುಂಬ

ನಾನೂ ಆಗ ಎಲ್ಲೂರು ಸೇರಿದ್ದೆ. ಆ ಕಾಲದಲ್ಲಿ ಶಾಮಣ್ಣನವರ ಧರ್ಮಪತ್ನಿ ವೆಂಕಮ್ಮನವರು ಬಹುದಿನಗಳಿಂದ ಕಾಯಿಲೆಯಿಂದ ನರಳುತ್ತಿದ್ದವರು ಮೃತರಾದರು. ವೆಂಕಮ್ಮನವರು ಮೈಸೂರಿನಲ್ಲಿ ಲಾಯರಾಗಿದ್ದ ವೆಂಕಟಸುಬ್ಬಯ್ಯ ಎಂಬಾತನ ಮಗಳು. ಗುಣವತಿಯಾದ ಸಾಧ್ವಿ. ಮಕ್ಕಳಾಗಿರಲಿಲ್ಲ. ಆಕೆ ಸಾಯುವ ವೇಳೆಗೆ ಶಾಮಣ್ಣನವರಿಗೆ ವಯಸ್ಸು ಸುಮಾರು ೫೦. ಶೀನಣ್ಣನವರಿಗೆ ಒಬ್ಬ ಹೊಸ ಸೊಸೆಯನ್ನು ಮನೆಗೆ ತಂದು ಕೊಳ್ಳಬೇಕೆಂಬ ಅಭಿಲಾಷೆ. ಈ ವಿಷಯದಲ್ಲಿ ತಂದೆಗೂ ಮಗನಿಗೂ ಕೊಂಚ ತಕರಾರು. ಆದರೆ ತಂದೆ ಹಠಮಾರಿ. ಆತ ಊರೂರು ಸುತ್ತಿ ಕಡೆಗೆ ಒಂದು ಕಡೆ ಕನ್ಯೆಯನ್ನು ಕಂಡುಕೊಂಡ. ಆ ಕನ್ಯೆಯ ತಂದೆಯಾದರೋ ಒಂದು ಷರತ್ತನ್ನು ಹಾಕಿದ. ತನಗೆ ಆಗ ಇದ್ದವರು ಇಬ್ಬರು ಹೆಣ್ಣುಮಕ್ಕಳು. ಆ ಇಬ್ಬರಲ್ಲಿ ದೊಡ್ಡಾಕೆ ಹೆಳವಿ. ಹುಟ್ಟಿನಿಂದ ಕಾಲಿಲ್ಲದವಳು. ಎರಡನೆಯಾಕೆಗೆ ಅಂಗವೈಕಲ್ಯವೇನೂ ಇರಲಿಲ್ಲ. ಆ ಕುಂಟು ಹುಡುಗಿಗೆ ಯಾರು ತಾಳಿ ಕಟ್ಟಲೊಪ್ಪಿಕೊಳ್ಳುತ್ತಾನೋ ಅವನಿಗೆ ಇನ್ನೊಬ್ಬಳನ್ನೂ ಕನ್ಯಾದಾನವಾಗಿ ಕೊಡುತ್ತೇನೆ. ಇಬ್ಬರಿಗೂ ಒಬ್ಬನೇ ಪತಿಯಾಗಬೇಕು.

ಈ ಷರತ್ತನ್ನು ಶೀನಣ್ಣನವರು ಒಪ್ಪಿಕೊಂಡರು. ಅದರಂತೆ ಮದುವೆಯಾಯಿತು. ಅಲ್ಲಿಂದ ಒಂದು ವರ್ಷವಾದ ಮೇಲೆ ಹೊಸ ಹೆಂಡಿರು ಶಾಮಣ್ಣನ ಮನೆಸೇರುವ ಮುನ್ನ, ಸರಿಯಾಗಿದ್ದಾಕೆ ಪ್ಲೇಗಿನಿಂದಲೋ ಏನೋ ತೀರಿಕೊಂಡಳು. ಹೆಳವಿ ಹೆಂಡತಿ ಉಳಿದುಕೊಂಡಳು. ಇದನ್ನೇ ನಾನು ದೈವವೆಂಬುದು.

ಅಲ್ಲಿಂದಾಚೆಗೆ ಶೀನಣ್ಣನವರು ತೀರಿಕೊಂಡರು. ಶಾಮಣ್ಣನವರು ಪಿಂಚನ್ ಪಡೆದು ಮುಳುಬಾಗಿಲಿನಲ್ಲಿ ಬೇರೆಯಾಗಿ ಹೇಗೋ ಬಾಳ್ವೆ ನಡೆಸಿದರು.

ಕುಚೋದ್ಯ

ಶಾಮಣ್ಣನವರು ರಸಿಕರು. ಅವರಿಗೆ ಹತ್ತಾರು ಪದ್ಯಗಳೂ, ಹಾಡುಗಳೂ ವಾಚೋವಿಧೇಯವಾಗಿದ್ದವು. ಅವರದು ಹಾಸ್ಯಪ್ರವೃತ್ತಿ. ಎಂಥ ಸಂದರ್ಭದಲ್ಲಿಯೂ ಅವರಿಗೆ ಕುಚೋದ್ಯದ ಅವಕಾಶ ಕಾಣುತ್ತಿತ್ತು. ಒಂದು ಸಾರಿ ಯಾರೋ ಒಬ್ಬರು ಹೊಟ್ಟೆನೋವೆಂದು ನರಳುತ್ತಿದ್ದರು. ಶಾಮಣ್ಣನವರು ನನ್ನನ್ನು ಕರೆದು ಹೀಗೆಂದರು:

ಶಾ: “ಎಲಾ ಅಪ್ಪಯ್ಯ, ನೀನು ಸ್ತೋತ್ರ ಹೇಳುತ್ತಿದ್ದೆಯೆಲ್ಲ, ಅದನ್ನು ಸ್ವಲ್ಪ ಹೇಳು.”

ನಾನು: “ಯಾವ ಸ್ತೋತ್ರ?”

ಶಾ: “ನೀನು ಆಗಾಗ ಹೇಳುತ್ತಿಯಲ್ಲೋ ಅದನ್ನೇ”

ನಾನು: “ಯಾವುದು?”

ಶಾ: “ಅದೇ ಡರ್ ಬುರ್ ನಾಯಕ ಎಂದು ಹೇಳುತ್ತೀಯಲ್ಲೋ–”

ಈಗ ನನಗೆ ಅರ್ಥವಾಯಿತು. ಆ ಕಾಲದಲ್ಲಿ ಸ್ಕೂಲಿನಲ್ಲಿ ಹೇಳಿಕೊಡುತ್ತಿದ್ದ ಹಾಡುಗಳಲ್ಲಿ ಒಂದು ಹೀಗೆ:

> ಗರಪುರ ನಾಯಕ ಪಾಹಿ
> ಸ್ಮರಹರ ವರಮಿಹ ದೇಹಿ ॥

ಇದು ಬಹುಶಃ ನಂಜನಗೂಡು ಸುಬ್ಬಾಶಾಸ್ತ್ರಿಗಳ ಕೃತಿ; ಸಂಗೀತ ಸಾಹಿತ್ಯಗಳೆರಡೂ ಸೊಗಸಾದವು. ಇದನ್ನು ನನ್ನ ಚಿಕ್ಕಪ್ಪ ಶಾಮಣ್ಣನವರು “ಡರ್ ಬುರ್ ನಾಯಕ” ಎಂದು ಅಣಕ ಮಾಡಿದರು.

ಅವರು ಸರಕಾರಿ ಅಧಿಕಾರದಲ್ಲಿ ದಕ್ಷರು, ಮತ್ತು ಕಟ್ಟುನಿಟ್ಟಾಗಿದ್ದವರು. ಆ ಹೋಬಳಿಯ ಶಾನುಭೋಗರುಗಳೆಲ್ಲ ಅವರಿಗೆ ಮೆಚ್ಚಿನ ಸ್ನೇಹಿತರಾಗಿದ್ದರು. ಅವರ ಪೈಕಿ ಲಕ್ಷ್ಮೀಸಾಗರ ಎಂಬ ಸ್ಥಳದ ನಂದವರೀಕ ಲಕ್ಷ್ಮೀಪತಯ್ಯ ಎಂಬವರು ಶಾಮಣ್ಣನವರ ಆಪ್ತಮಿತ್ರರು.

ಅವರಿಬ್ಬರೂ ಸೇರಿದಾಗ ಘಂಟೆಗಟ್ಟಲೆ ಕುಚೇಷ್ಟೆ ಪದ್ಯಗಳು, ಸಾಮತಿಗಳು, ಹಾಡುಗಳು, ಹಾಸ್ಯ. ಇತರರನ್ನು ನಗಿಸಿ ತಾವೂ ನಗುತ್ತಿದ್ದರು.

ಶೀನಣ್ಣನವರ ಅವಸಾನ

ಶೀನಣ್ಣನವರು ಬೆಂಗಳೂರು ಆನೇಕಲ್‌ಪ್ರಾಂತ ಅಲೆದಾಡುತ್ತಿದ್ದರೆಂದು ಹೇಳಿದೆ. ಅವರ ಅಂತ್ಯಕಾಲದ ಋಣವಿದ್ದದ್ದು ಎಲಹಂಕ ಗ್ರಾಮದ ಮುಂದುಗಡೆಯ ಒಂದು ಅಶ್ವತ್ಥಕಟ್ಟೆಗೆ. ಎಲಹಂಕದಲ್ಲಿ ಶ್ರೀನಿವಾಸಯ್ಯ ಎಂಬವರು ಸ್ಕೂಲುಮಾಸ್ಟರಾಗಿದ್ದರಂತೆ. ಆತ ಮುಳುಬಾಗಲಿನವನಂತೆ. ನಮ್ಮ ಮನೆಯವರೆಲ್ಲರಿಗೂ ಶ್ರೀನಿವಾಸಯ್ಯನ ವಿಷಯದಲ್ಲಿ ಪ್ರಿತಿ ಗೌರವಗಳು ಬೆಳೆದಿದ್ದವು. ಶೀನಣ್ಣನವರು ಆ ಅಶ್ವತ್ಥಕಟ್ಟೆಯ ಮೇಲೆ ಮಲಗಿ, ದಾರಿಯಲ್ಲಿ ಹೋಗುತ್ತಿದ್ದ ಒಬ್ಬಾತನ ಮೂಲಕ ಶ್ರೀನಿವಾಸಯ್ಯನಿಗೆ ಹೇಳಿಕಳುಹಿಸಿದರಂತೆ. ಶ್ರೀನಿವಾಸಯ್ಯ ಹೋಗಿ ನೋಡುವ ವೇಳೆಗೆ ದೇಹ ಖಾಲಿಯಾಗಿತ್ತು. ಕಾಶಿರಾಮೇಶ್ವರಗಳ ಯಾತ್ರೆಯಿಂದಲೂ, ನಾರಾಯಣಸೂಕ್ತ ರುದ್ರಸೂಕ್ತಗಳ ಪಾರಾಯಣದಿಂದಲೂ, ರುದ್ರಾಕ್ಷಿಹಾರ ರಾಮನಾಮ ಉತ್ತರೀಯಗಳಿಂದಲೂ ಪರಿಶುದ್ಧವಾಗಿದ್ದ ಜೀವದ ಕಳೇಬರ ಅಲ್ಲಿ ಪಂಚಭೂತಗಳ ಪಾಲಾಯಿತು.

ಶಾಮಣ್ಣನವರ ಬಾಳೂ ಅದೇ ರೀತಿಯ ಸಂದರ್ಭಗಳಲ್ಲಿ ಮುಕ್ತಾಯಗೊಂಡಿತು. ಅವರಿಗೆ ಕಾಯಿಲೆಯಾಗಿ ಬೆಂಗಳೂರಿಗೆ ಬಂದರು. ವಿಕ್ಟೋರಿಯ ಆಸ್ಪತ್ರೆಗೆ ಸೇರಿಸಿದೆವು. ಕಾಯಿಲೆ ವಾಸಿಯಾಯಿತು. ಮನೆಗೆ ಬಂದು ನಮ್ಮೊಡನೆ ಎರಡು ಮೂರು ವಾರ ಇದ್ದರು. ಆದರೂ ಮನಸ್ಸಿಗೆ ನೆಮ್ಮದಿಯಿರಲಿಲ್ಲ. ನಾನು ಅವರ ಕಣ್ಣಿನಲ್ಲಿ ಹುಡುಗನಾಗಿದ್ದದ್ದರಿಂದ ಅವರು ನನ್ನಲ್ಲಿ ಅಂತರಂಗವನ್ನು ಹೇಳುತ್ತಿರಲಿಲ್ಲ. ಮುಳುಬಾಗಲಿಗೆ ಹೋಗಿ ಒಂದೆರಡು ಕಾಗದ ಬರೆದರು–ತಮಗೆ ಹಿಂಸೆ, ತಾವು ಮಾಡಿಕೊಂಡಿದ್ದ ಸಂಬಂಧದಿಂದ ಮನಸ್ಸಿಗೆ ಬೇಸರ–ಎಂದು ಸೂಚಿಸಿದ್ದರು. ಯಾರೂ ಅವರಿಗೆ ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಅಷ್ಟರಲ್ಲಿ ಅವರು ಕಣ್ಣು ಮುಚ್ಚಿಕೊಂಡರು. ನಾನು ಅವರಿಗೆ ಕರ್ಮಾಂತರ ಮಾಡತಕ್ಕದ್ದೆಂದು ಹಿರಿಯರು ಹೇಳಿದಂತೆ ನಾನು ಶಕ್ತ್ಯನುಸಾರ ಅಂತ್ಯ ಸೇವೆಯನ್ನು ಸಲ್ಲಿಸಿದೆ.

ಶಾಮಣ್ಣನವರ ಪೇಚಾಟ

೧೯೧೨-೧೩ರ ಸುಮಾರಿನಲ್ಲಿ ನಾನು ಮುಳುಬಾಗಲಿಗೆ ಹೋಗಬೇಕಾದ ಸಂದರ್ಭಬಂತು– ನಮ್ಮ ಮನೆಯ ದುರಸ್ತಿ ಮೊದಲಾದ ಕೆಲಸಕ್ಕಾಗಿ. ನನ್ನೊಡನೆ ಮೋಕ್ಷಗುಂಡಂ ಕೃಷ್ಣಮೂರ್ತಿ, ಬೇಲೂರು ಶ್ರೀನಿವಾಸಯ್ಯಂಗಾರ್, ಇನ್ನಿಬ್ಬರು ಸ್ನೇಹಿತರು ಬಂದಿದ್ದರು. ಆ ಇನ್ನಿಬ್ಬರು ಯಾರೋ ಮರೆತುಹೋಗಿದೆ. ಆಗ ನನ್ನ ಚಿಕ್ಕಪ್ಪ ಶಾಮಣ್ಣನವರು ಅಗ್ರಹಾರದ ಬೀದಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಒಂದು ದಿನ ಮಧ್ಯಾಹ್ನ ನಾನು ಸ್ನೇಹಿತರೊಡನೆ ಅವರ ಮನೆಗೆ ಹೋದೆ. ತುಂಬ ಸಂತೋಷಪಟ್ಟರು. ಆದರದಿಂದ ಎಲ್ಲರನ್ನೂ ಮಾತನಾಡಿಸಿ, ನನ್ನನ್ನು ಗೃಹಕೃತ್ಯದ ವಿಚಾರವಾಗಿ ಕೇಳಿದರು. ಸಮಾಧಾನವಾಗಿ ಮಾತುಕಥೆ ನಡೆದ ಮೇಲೆ ಒಂದೆರಡು ದೊಡ್ಡ ತಟ್ಟೆಗಳಲ್ಲಿ ಬುರುಗಲು, ಹುರಿಗಡಲೆ, ಕೊಬ್ಬರಿ, ಬೆಲ್ಲ, ಬಾಳೆಹಣ್ಣು, ಇದನ್ನು ಕೊಟ್ಟು ಉಪಚರಿಸಿದರು. ಆಗ ಪೇಚಾಡಿದರು: "ನಾನು ಏನು ಮಾಡಲಿ ಅಪ್ಪಯ್ಯ? ಯಾರಾದರೂ ಮನೆಗೆ ಬಂದರೆ ನಾನು ಇನ್ನೇನೂ ಉಪಚಾರ ಮಾಡುವ ಸ್ಥಿತಿಯಲ್ಲಿಲ್ಲ. ಊಟಕ್ಕೇಳಿರೆನ್ನಲು ಮನೆಯಲ್ಲಿ ಅನುಕೂಲವಿಲ್ಲ. ಉಪ್ಪಿಟ್ಟು ಕಾಫಿ ಕೂಡ ಮಾಡಿಸಲಾಗುವಂತಿಲ್ಲ." ನಾವು "ನಮಗೆ ಅದೆಲ್ಲ ಬೇಕಿಲ್ಲ. ಹೊಟ್ಟೆಬಿರಿಯ ಊಟ ಮಾಡಿದ್ದೇವೆ. ನಮಗೆ ಬೇಕಾದದ್ದು ನಿಮ್ಮ ವಿಶ್ವಾಸ, ಆಶೀರ್ವಾದ" ಎಂದೆವು.

ರಾಮನಾಮ

ಆಮೇಲೆ ಶಾಮಣ್ಣನವರು ಅಲ್ಲಿ ಗೂಡಿನಲ್ಲಿದ್ದ ಆರೇಳು ದೊಡ್ಡ ದೊಡ್ಡ ದಪ್ಪ ಎಕ್ಸರ್ಸೈಸ್ ಬುಕ್ಕುಗಳನ್ನು ತೆಗೆದು ನಮ್ಮ ಮುಂದೆ ಇರಿಸಿದರು. ಅದರ ತುಂಬ ರಾಮ ನಾಮ– "ಶ್ರೀರಾಮ ಶ್ರೀರಾಮ ಶ್ರೀರಾಮ."

ಅವರು ಹೇಳಿದರು: "ಇದೇ ಈಗ ನನ್ನ ಕೆಲಸ: ಬೆಳಿಗ್ಗೆ ಸ್ನಾನ ಮಾಡಿ ರಾಮಾಯಣ ಎರಡು ಮೂರು ಸರ್ಗ ಓದುತ್ತೇನೆ. ಊಟವಾದ ಮೇಲೆ ಸ್ವಲ್ಪ ವಿಶ್ರಾಂತಿ. ಆಮೇಲೆ ಈ ಕೆಲಸ. ಇದಾದ ಮೇಲೆ ಸಂಜೆ ಗುಡಿ. ಹೀಗೆ ಕಳೆಯುತ್ತಿದೆ ಕಾಲ."

ನಾನು: "ನತ್ತಿಶಾಸ್ತ್ರಿಗಳು ನಿಮಗೆ ಗುರುಗಳೆಂದು ಹೇಳಿದ್ದನ್ನು ಕೇಳಿದ್ದೇನೆ. ಅವರ ಪಾಠ ಈಗ ಉಪಯೋಗಕ್ಕೆ ಬರುತ್ತಿದೆ."

ಶಾ: (ಕೊಂಚ ನಕ್ಕು) "ನಾನು ಆಗ ಮೂರ್ಖಶಿಖಾಮಣಿಯಾಗಿದ್ದೆ–ಏನೂ ಕಲಿತುಕೊಳ್ಳಲಿಲ್ಲ. ನಮ್ಮ ಜನ್ಮ ವ್ಯರ್ಥವಾಗಿಹೋಯಿತು."

ನಾನು ಅದಕ್ಕೆ ಏನು ಜವಾಬು ಹೇಳಬಹುದು?

ಬೆಂಗಳೂರಿಗೆ ಬಂದ ಮೇಲೆ ನನ್ನ ತಂದೆಗೆ ಎಲ್ಲ ವರದಿ ಹೇಳಿದೆ. ಅವರು ತಮ್ಮನ ವಿಷಯವನ್ನು ವಿಚಾರಿಸಿದರು. ನಾನು ಕಂಡದ್ದನ್ನು ಹೇಳಿದೆ. "ರಾಮನಾಮ ಬರೆಯುತ್ತಿದ್ದಾರೆ. ಎಷ್ಟೋ ಲಕ್ಷ ಆಗಿದೆಯಂತೆ, ದೇವರು ಆಯುಸ್ಸು ಕೊಟ್ಟರೆ ಐದು ಕೋಟಿ ರಾಮನಾಮ ಬರೆದು ದೇವರ ಪಾದದಲ್ಲಿಡಬೇಕೆಂದು ಆಶೆಯಿದೆ. ನೋಡಬೇಕು–ಎಂದು ಚಿಕ್ಕಪ್ಪ ಹೇಳಿದರು."

ಇದನ್ನು ಕೇಳಿ ನಮ್ಮ ತಂದೆ ನಿಟ್ಟುಸಿರು ಬಿಟ್ಟು–

> ಪತಿತಪಾವನ ರಾಮ
> ಪಾಪವಿಮೋಚನ

ಎಂಬ ಕೀರ್ತನೆಯ ಪಲ್ಲವಿಯನ್ನು ನುಡಿದು ಕೈ ಮುಗಿದರು.

೭

ವೆಂಕಟಗಿರಿಯಪ್ಪನವರು

ಬೆಂಗಳೂರು ಚಿಕ್ಕಪೇಟೆಯಲ್ಲಿ ದಿವಂಗತ ರಾಜಸೇವಾಸಕ್ತ ಪಾಮಡಿ ಸುಬ್ಬರಾಮಶೆಟ್ಟರ ಜವಳಿ ಅಂಗಡಿಯ ಸಮೀಪದಲ್ಲಿ ಆ ಅಂಗಡಿಯ ಪೂರ್ವದ ಕಡೆ ಒಂದು ಓಣಿಯಲ್ಲಿ ಬಹುದೊಡ್ಡ ಮನೆಯಿತ್ತು. ಬಾರಿ ಮನೆ. ಅದರಲ್ಲಿ ವಾಸವಾಗಿದ್ದವರು ಲಾಯರ್ ವೆಂಕಟಗಿರಿಯಪ್ಪನವರು. ವೆಂಕಟಗಿರಿಯಪ್ಪನವರು ನನ್ನ ತಂದೆಯ ಮಾತಾಮಹರು. ಅವರ ಕಾಲ ಮೈಸೂರು ದೇಶದಲ್ಲಿ ಬ್ರಿಟಿಷರ ಆಳ್ವಿಕೆ ನೆಲಸಿದ್ದ ಕಾಲದ ಪ್ರಾರಂಭ. ಆಗ ಸದರ್ ಅದಾಲತ್ ಕೋರ್ಟ್ ಎಂಬ ನ್ಯಾಯಸ್ಥಾನಗಳು ಸ್ಥಾಪಿತವಾಗಿ ಆ ನ್ಯಾಯಸ್ಥಾನದಲ್ಲಿ ಕಕ್ಷಿಗಳ ಪರವಾಗಿ ಅವರವರ ಹಕ್ಕುಗಳನ್ನು ಬಿನ್ನಯಿಸಿ ವಾದ ಮಾಡಲು ಮೊಖ್ತೇಸರರುಗಳೆಂಬ ಲಾಯರುಗಳು ಅವಕಾಶ ಪಡೆದ ಕಾಲ. ಬೆಂಗಳೂರಿಗೆ ಮಾರ್ವಾಡಿಗಳೂ ಮುಲ್ತಾನಿಗಳೂ ಬಂದು ವ್ಯಾಪಾರ ಹೂಡುತ್ತಿದ್ದ ಕಾಲ. ಈ ಕಾಲದ ಅವಕಾಶವನ್ನು ಕಂಡೇ ವೆಂಕಟಗಿರಿಯಪ್ಪನವರು ಬೆಂಗಳೂರಿಗೆ ಬಂದು ಲಾಯರಾಗಿ ನೆಲಸಿದ್ದು.

ಅವರ ಹುಟ್ಟೂರು ಆನೆಕಲ್ ಸರ್ಜಾಪುರಗಳ ಬಳಿ ಯಾವುದೋ ಹಳ್ಳಿ. ಬಹುಶಃ ಇಮ್ಮಡಿಹಳ್ಳಿ ಎಂಬುದು ಇದ್ದೀತು. ನನಗೆ ಈ ವಿವರ ಹೆಚ್ಚು ಗೊತ್ತಿಲ್ಲ.

ವೆಂಕಟಗಿರಿಯಪ್ಪನವರಿಗೆ ಇಬ್ಬರು ಹೆಂಡಿರು. ಮೊದಲನೆಯಾಕೆಗೆ ಮಕ್ಕಳಾಗಿರಲಿಲ್ಲ. ಎರಡನೆಯಾಕೆಗೆ ಮೂರು ಮಂದಿ ಹೆಣ್ಣು ಮಕ್ಕಳೆಂದು ತೋರುತ್ತದೆ. ಮೊದಲನೆಯ ಮಗಳು ವೆಂಕಟಸುಬ್ಬಮ್ಮ–ನನ್ನ ತಂದೆಯ ತಾಯಿ; ಆಕೆಯ ತರುವಾಯ ಜಾನಕಮ್ಮ; ಮೂರನೆಯಾಕೆ ಸೀತಮ್ಮ.

ಹೀಗೆ ಇಬ್ಬರು ಹೆಂಡಿರು ಇರುತ್ತಿರಲಾಗಿ ವೆಂಕಟಗಿರಿಯಪ್ಪನವರಿಗೆ ಧರ್ಮಸಂಕಟ ಬಂದು ಮೂರನೆಯಾಕೆಯನ್ನು ಮದುವೆಯಾಗಬೇಕಾಯಿತು. ಆ ಪ್ರಸಂಗ ಹೇಳಬೇಕಾದದ್ದು.

ವೆಂಕಟಗಿರಿಯಪ್ಪನವರ ಬಳಗದ ಗುಂಪಿನಲ್ಲಿ ಯಾರೋ ಒಬ್ಬರ ಮನೆಯಲ್ಲಿ ಒಂದು ಕುರುಡು ಹೆಣ್ಣು ಮಗು ಹುಟ್ಟಿತು. ಆ ಹೆಣ್ಣು ಮಗು ಬೆಳೆಯಿತು. ಮದುವೆಯ ವಯಸ್ಸು ಬಂತು. ಯಾರು ಮದುವೆ ಮಾಡಿಕೊಳ್ಳುವರು? ಕನ್ಯೆಯ ತಂದೆ ತಾಯಿಗಳು ಸ್ವಜನದಲ್ಲಿ ಎಲ್ಲೆಲ್ಲಿ ವಿಚಾರಿಸಬಹುದೋ ಅಲ್ಲೆಲ್ಲ ಪ್ರಸ್ತಾವ ಮಾಡಿ ನಿರಾಶರಾದರು. ಆ ವೇಳೆಗೆ ವೆಂಕಟಗಿರಿಯಪ್ಪನವರು ಪ್ರಸಿದ್ಧರಾಗಿದ್ದರು. ಇವರಲ್ಲಿಗೆ ಆ ಜನ ಬಂದು ತಮ್ಮ ಕಷ್ಟವನ್ನು ಹೇಳಿಕೊಂಡು ಸಹಾಯ ಬೇಡಿದರು. ವೆಂಕಟಗಿರಿಯಪ್ಪನವರು ಅವರಿಗೆ ಧೈರ್ಯ ಹೇಳಿ ಹೀಗೆಂದರು:

“ನಾನು ಈ ಕನ್ಯೆಗಾಗಿ ಎಷ್ಟು ಹಣ ಬೇಕಾದರೂ ಕೊಡಲು ಸಿದ್ಧನಾಗಿದ್ದೇನೆ. ಸಾವಿರವಾಗಲಿ, ಎರಡು ಸಾವಿರವಾಗಲಿ, ಮೂರು ಸಾವಿರವಾಗಲಿ ವರದಕ್ಷಿಣೆ ತೆಗೆದುಕೊಂಡು ಮದುವೆ ಮಾಡಿಕೊಳ್ಳುವವರನ್ನು ನೀವು ಸಂಪಾದಿಸಿ. ಮಿಕ್ಕ ಜವಾಬ್ದಾರಿ ನನಗಿರಲಿ.”

ತಂದೆ ತಾಯಿಗಳು ಇದರಿಂದ ಪುನಃ ಧೈರ್ಯ ತಂದುಕೊಂಡು ಹೋಗಿ ಮತ್ತೆ ವಿಚಾರ ಮಾಡಿದರು. ಅವರಿಗೆ ದೊರೆತ ಉತ್ತರವನ್ನು ವಾಚಕರು ಊಹಿಸಿಯಾರು.

“ಹಣ ಕಟ್ಟಿಕೊಂಡು ನಾವು ಏನು ಮಾಡಿಯೇವು? ಈ ಹುಟ್ಟುಕುರುಡಿಯನ್ನು ಯಾವಜ್ಜೀವವೂ ಕಾಪಾಡಿಕೊಂಡಿರಬೇಕಲ್ಲ? ಅದು ನಮ್ಮಿಂದಾಗದ ಜವಾಬ್ದಾರಿ. ಹೋಗಿ ಹೋಗಿ ಕುರುಡಿಯನ್ನು ಯಾರು ಕೈಹಿಡಿದಾರು?”

ಆ ಕನ್ಯೆಯ ತಂದೆ ತಾಯಿಗಳು ಮತ್ತೆ ವೆಂಕಟಗಿರಿಯಪ್ಪನವರಲ್ಲಿ ಬಂದು ತಮ್ಮ ಪ್ರಯತ್ನ ನಿಷ್ಫಲವಾದದ್ದನ್ನು ಹೇಳಿಕೊಂಡರು. ಆಗ ವೆಂಕಟಗಿರಿಯಪ್ಪನವರು ಮಾಡಿದ್ದೇನು?

“ಒಳ್ಳೆಯದಾಯಿತು. ಇರಲಿ. ನನಗೆ ಈಗ ಇಬ್ಬರು ಹೆಂಡತಿಯರಿದ್ದಾರೆ. ದೊಡ್ಡವಳಿಗೆ ಮಕ್ಕಳಿಲ್ಲ. ಈ ಹುಡುಗಿಗೆ ನಾನು ತಾಳಿ ಕಟ್ಟಿದರೆ ಇವಳ ಶುಶ್ರೂಷೆಗೆ ನನ್ನ ಮೊದಲ ಹೆಂಡತಿ ಸಿದ್ಧವಾಗಿ ನಿಂತಿರುತ್ತಾಳೆ. ಭಗವಂತನ ಚಿತ್ತವನ್ನು ಯಾರೂ ಅರಿಯಲಾರರು. ಆ ಹುಡುಗಿಗೆ ಕನ್ಯಾತ್ವವನ್ನು ಬಿಡಿಸಿ ಗೃಹಿಣೀತ್ವವನ್ನು ಕೊಡುವ ಯೋಗವನ್ನು ನನ್ನ ಪಾಲಿಗೆ ದೇವರು ಕೊಟ್ಟಿದ್ದರೆ ನಾನೇಕೆ ಬೇಡವೆನ್ನಲಿ?”

ಗುಡ್ಡಕ್ಕಯ್ಯ

ಹೀಗೆ ವೆಂಕಟಗಿರಿಯಪ್ಪನವರಿಗೆ ಗುಡ್ಡಕ್ಕಯ್ಯ ಎಂಬಾಕೆ ಮೂರನೆಯ ಹೆಂಡತಿಯಾದಳು. ಆಕೆಗೆ ಬೇರೆ ಹೆಸರಿತ್ತೋ ಇಲ್ಲವೋ ನನಗೆ ತಿಳಿಯದು. ಬಹುಶಃ ಅಕ್ಕಯ್ಯ ಎಂದು ಹೆಸರಿರಬಹುದು. ಕುರುಡಿಯಾದದ್ದರಿಂದ ಗುಡ್ಡಿ (ಕುರುಡಿ) ಎಂಬ ಉಪಪದವನ್ನು ಒರಟು ಜನ ಸೇರಿಸಿರಬಹುದು.

ಈವರೆಗಿನ ಕಥೆಯನ್ನು ನಾನು ಕೇಳಿದ್ದೇನೆ–ನನ್ನ ಹಿರಿಯರಿಂದ. ಮುಂದಿನ ಕಥೆ ನನಗೆ ತಿಳಿಯದು.

ವೆಂಕಟಗಿರಿಯಪ್ಪನವರಿಗೆ ಸಂಪಾದನೆ ದೊಡ್ಡದಾಗಿತ್ತು. ನನ್ನ ತಂದೆ ಕಂಡದ್ದನ್ನು ನನಗೆ ಹೇಳಿದ್ದಾರೆ. ಮಾರ್ವಾಡಿ, ಮುಲ್ತಾನಿ, ಸೇಟುಗಳು ಬರುತ್ತಿದ್ದರು. ಬಂದ ಒಬ್ಬೊಬ್ಬ ಕಕ್ಷಿಗಾರನೂ ಒಂದು ತಟ್ಟೆಯ ತುಂಬ ದ್ರಾಕ್ಷಿ ಖರ್ಜೂರ ಬಾದಾಮಿ ಮೊದಲಾದ ತೀನಿ ಪದಾರ್ಥಗಳನ್ನೂ, ಇನ್ನೊಂದು ತಟ್ಟೆಯಲ್ಲಿ ಗೋಪುರವಾಗಿದ್ದಷ್ಟು ರೂಪಾಯಿಗಳನ್ನೂ ವೆಂಕಟಗಿರಿಯಪ್ಪನವರ ಮುಂದೆ ಇರಿಸುತ್ತಿದ್ದ. ಕೆಲವರು ಶಾಲು, ರೇಷ್ಮೆವಸ್ತ್ರಗಳನ್ನೂ ತಂದು ಕೊಡುತ್ತಿದ್ದರು.

ನಮ್ಮ ತಾತ ವೆಂಕಟಗಿರಿಯಪ್ಪನವರು ನನ್ನನ್ನು ಯಾವಾಗಲು ಹತ್ತಿರ ಕುಳ್ಳಿರಿಸಿ ಕೊಂಡಿರುತ್ತಿದ್ದರು–ಮಗಳ ಮಗನಾದದ್ದರಿಂದ ಮತ್ತು ತಾಯಿ ಇಲ್ಲದ ಮಗುವಾದದ್ದರಿಂದ. ಆ ದ್ರಾಕ್ಷಿ ಖರ್ಜೂರಗಳು ಮಿತಿಯಿಲ್ಲದೆ ನನ್ನ ಹೊಟ್ಟೆ ಸೇರುತ್ತಿದ್ದವು. ಇದರಿಂದ ನನಗೆ ಭೇದಿಗಳು: ಕೈಕಾಲು ಸಣ್ಣ, ಹೊಟ್ಟೆ ಡುಬ್ಬಣ್ಣ. ಇದನ್ನು ನೋಡಿ ಮನೆಗೆ ಬಂದವರೆಲ್ಲ ಅಸಮಾಧಾನಪಡುತ್ತಿದ್ದರು. ನನ್ನ ಚಿಕ್ಕತಾಯಿ ಜಾನಕಮ್ಮ ಇದನ್ನು ತಡೆಯಲಾರದೆ ಒಂದು ದಿನ ನನ್ನ ತಾತನಿಗೆ ಹೇಳಿದಳು– "ಈ ಮಗುವನ್ನು ಇಲ್ಲಿಯೇ ಬಿಟ್ಟರೆ ಇದು ಎಂದೋ ಒಂದು ದಿನ ಅಜೀರ್ಣ ರೋಗದಿಂದ ಸತ್ತು ಹೋದೀತು. ನನ್ನ ಕೈಗೆ ಅದನ್ನು ಕೊಟ್ಟುಬಿಡಿ ನಾನು ಸಾಕಿ ಬೆಳೆಸುತ್ತೇನೆ."

ಅದರಂತೆ ಸರ್ಜಾಪುರದ ರಾಮಣ್ಣನವರ ಕುಟುಂಬ ಜಾನಕಮ್ಮನವರು ನನ್ನ ತಂದೆಯನ್ನು ಆತ ಎಳೆಯ ಮಗುವಾಗಿದ್ದಾಗ ಕರೆದುಕೊಂಡು ಹೋಗಿ ಸಂರಕ್ಷಣೆ ಮಾಡಿದರು. ಜಾನಕಮ್ಮನವರಿಗೆ ಬೇರೆ ಮಕ್ಕಳಿರಲಿಲ್ಲ. ಆಕೆ ಸತ್ತಾಗ ಆ ವರ್ತಮಾನವನ್ನು ಕೇಳಿ ನನ್ನ ತಂದೆ ಗೋಳಾಡಿದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ.

ಮರಳಿ ಮುಳುಬಾಗಲಿಗೆ

ನನ್ನ ತಂದೆಯ ಬಾಲ್ಯ ಸರ್ಜಾಪುರದಲ್ಲಿ ಕಳೆಯಿತು. ಶ್ರೀಕಂಠಭಟ್ಟರೆಂಬುವರು ನನ್ನ ತಂದೆಯ ಎಳೆತನದಲ್ಲಿ ಆಟವಾಡಿಸುತ್ತಿದ್ದುದನ್ನು ಪದೇ ಪದೇ ಜ್ಞಾಪಿಸಿಕೊಳ್ಳುತ್ತಿದ್ದರು. ಹೀಗೆ ಆ ಪ್ರಾಂತದಲ್ಲಿ ನನ್ನ ತಂದೆ ಇದ್ದಾಗ ಮುಳುಬಾಗಲಿನಲ್ಲಿ ಅವರ ಚಿಕ್ಕ ತಂದೆ ರಾಮಣ್ಣನವರು ಇದನ್ನು ನೆನೆಸಿಕೊಂಡು ಅಣ್ಣ ಶೇಷಗಿರಿಯಪ್ಪನೊಡನೆ ಪದೇ ಪದೇ ವಾದ ಹೂಡುತ್ತಿದ್ದರಂತೆ. “ನಮ್ಮ ಮನೆಗಿರುವುದು ಒಂದೇ ಪಿಳ್ಳೆ. ಅದನ್ನು ಎಲ್ಲಿಯೋ ನಾವು ಬಿಟ್ಟಿರಲಾಗುತ್ತದೆಯೆ? ಮಗುವನ್ನು ಬೇಗ ಇಲ್ಲಿಗೆ ಕರಸಿಕೊಳ್ಳಬೇಕು. ಉದಾಸೀನ ಮಾಡಬಾರದು. ಕಾಲ ಕಳೆದಷ್ಟೂ ಮಗುವಿಗೆ ನಮ್ಮ ಸಂಬಂಧ ಕಡಮೆಯಾಗಿಹೋಗುತ್ತದೆ” –ಎನ್ನುತ್ತಿದ್ದರಂತೆ. ಈ ತಕರಾರಿನ ಫಲಿತಾಂಶವಾಗಿ ನನ್ನ ತಂದೆಯನ್ನು ಮುಳುಬಾಗಲಿಗೆ ಕರಸಿಕೊಂಡರಂತೆ. ಆಗ ಆತನ ವಯಸ್ಸು ೬–೭ ಇರಬಹುದು.

೨

ಎಲ್ಲೂರ್ದಿನ ವಿದ್ವದ್ರಸಿಕರು

ಎಲ್ಲೂರ್ದು ಸಾಮಾನ್ಯವಾದ ಸಣ್ಣ ಊರು. ಆದರೆ ಚಂದವಾಗಿ ಚೊಕ್ಕಟವಾಗಿತ್ತು. ಊರಿನ ಮುಖ್ಯ ಬೀದಿ ಪೂರ್ವ ಪಶ್ಚಿಮವಾಗಿತ್ತು. ಪಶ್ಚಿಮದ ಕಡೆಯ ಕೊನೆಯಲ್ಲಿ ಉತ್ತರಾಭಿಮುಖವಾಗಿ ಕೋದಂಡರಾಮಸ್ವಾಮಿಯ ಗುಡಿ, ಅದಕ್ಕೆದುರಾಗಿ ಶಿವಾಲಯ ಇದ್ದವು. ಎರಡು ದೇವಸ್ಥಾನಗಳಲ್ಲೂ ಕಾಲಕಾಲಕ್ಕೆ ಪೂಜೆ ನಡೆಯುತ್ತಿತ್ತು.

ಆ ಊರಿನ ಬ್ರಾಹ್ಮಣ ವರ್ಗದಲ್ಲಿ ವೆಂಕಟೇಶಶಾಸ್ತ್ರಿಗಳು ಪ್ರಮುಖರು. ಇವರು ವೇದಾಧ್ಯಯನಶೀಲರು ಮತ್ತು ಆಚಾರನಿಷ್ಠರು. ಆಸಾಮಿ ಎತ್ತರವಾಗಿದ್ದರು. ಮೈ ಬಹು ತೆಳುವು. ಊರಲ್ಲಿ ಎಲ್ಲರಿಗೂ ಅವರ ವಿಷಯದಲ್ಲಿ ಗೌರವ ಮತ್ತು ವಿಶ್ವಾಸ. ಅವರ ಮಗ ವೆಂಕಟಸುಬ್ಬಶಾಸ್ತ್ರಿಗಳು, ವೆಂಕಟಸುಬ್ಬಶಾಸ್ತ್ರಿಗಳು ಕೋಲಾರದಲ್ಲಿ ಅವರಿಗೆ ಸೋದರಮಾವಂದಿರ ವರಸೆಯಲ್ಲಿ ಬಂಧುವಾಗಿದ್ದ ಮಣಿಕುಂಡಲ ಸುಬ್ಬರಾಯಶಾಸ್ತ್ರಿಗಳವರಲ್ಲಿ ಪ್ರಯೋಗ ಮಂತ್ರಗಳನ್ನು ಕಲಿಯುತ್ತಿದ್ದರು. ಅವರು ಎಲ್ಲೂರ್ದಿಗೆ ಹಿಂತಿರುಗಿದಾಗ ನಾನು ಅವರ ಮನೆಯಲ್ಲೇ ಇದ್ದೆ. ನನಗೆ ಓದೆಂಬುದು ನಿಂತುಹೋಗಿತ್ತು. ಮಾಡಲು ಬೇರೆ ಕೆಲಸ ಕಾಣದಿದ್ದದ್ದರಿಂದ ನನ್ನನ್ನು ವೆಂಕಟಸುಬ್ಬಶಾಸ್ತ್ರಿಗಳು ಜೊತೆಗೆ ಕರೆದರು. ಹೀಗೆ ನಾವಿಬ್ಬರೂ ಪ್ರತಿ ದಿವಸವೂ ಬೆಳಗ್ಗೆ ಕೋದಂಡರಾಮದೇವರ ಗುಡಿಗೆ ಹೋಗಿ ಅಲ್ಲಿ ಮಂತ್ರಗಳನ್ನು ಕಲಿಯುತ್ತಿದ್ದೆವು. ಈಗ ನನಗೆ ತೋರುತ್ತದೆ, ನನಗೆ ಅದೂ ಒಂದು ಒಳ್ಳೆಯ ಯೋಗವೆಂದು.

ರಾಘವೇಂದ್ರರಾಯರು

ಆಗ ಶ್ರೀನಿವಾಸಪುರ ತಾಲೂಕಿಗೆ ಆರ್. ರಾಘವೇಂದ್ರರಾಯರು ಅಮಲ್ದಾರರಾಗಿದ್ದರು. ಇವರ ಮಕ್ಕಳೇ ಉತ್ತರೋತ್ತರ ಬೆಂಗಳೂರಿನ ಹೆಲ್ತ್ ಆಫೀಸರ್ ಆಗಿದ್ದ ಡಾ || ಆರ್. ಸುಬ್ಬರಾಯರು ಮತ್ತು ಸರಕಾರದ ಚೀಫ್ ಸೆಕ್ರೆಟರಿ ಆರ್. ರಂಗರಾಯರು. ರಾಘವೇಂದ್ರರಾಯರು ಎಲ್ಲೂರ್ದಿಗೆ ಸರಕಾರಿ ಕೆಲಸದ ನಿಮಿತ್ತವಾಗಿ ಬರುತ್ತಿದ್ದರು. ಬಂದಾಗ ಅವರ ಬಿಡಾರ ಶಿವದೇವಾಲಯದಲ್ಲಿ. ಗರ್ಭಗುಡಿಯ ಮುಂದಿನ

ನವರಂಗದಲ್ಲಿ ಅಮಲ್ದಾರರ ಕಛೇರಿ. ರಾಘವೇಂದ್ರರಾಯರು ದೇವರ ಕಡೆ ಬೆನ್ನು ಮಾಡಿ ಕುರ್ಚಿಯ ಮೇಲೆ ಕೂಡುತ್ತಿದ್ದರು. ಅವರಿಗೆ ಸಿಗಾರ್ ಅಭ್ಯಾಸ ಬಲವಾಗಿತ್ತು. ಹೊಗೆಯನ್ನು ದೇವರ ಕಡೆ ಬಿಡಬಾರದೆಂದು ಅವರ ಮನೋಗತ. ಈ ಸಿಗಾರ್ ಅಭ್ಯಾಸವೊಂದನ್ನು ಬಿಟ್ಟರೆ ಅವರಲ್ಲಿ ಯಾವ ಅಶುಚಿಯೂ ಇರಲಿಲ್ಲ.

ಒಂದು ಸಂದರ್ಭ ಜ್ಞಾಪಕಕ್ಕೆ ಬರುತ್ತದೆ.

ರಾಘವೇಂದ್ರರಾಯರು ಸರ್ಕಾರಿ ಕೆಲಸದಿಂದ ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲಸಿದ್ದಾಗ, ಬಹುಶಃ ೧೯೧೨-೧೩ರಲ್ಲಿ ಒಂದು ದಿನ ಮಾಮೂಲ್ ಪೇಟೆಯ ಡಾ ॥ ಗುಂಡಣ್ಣನವರ ರಿಲೈಯನ್ಸ್ ಔಷಧಾಲಯಕ್ಕೆ ಬಂದಿದ್ದರು. ಬೆಳಗ್ಗೆ ಸುಮಾರು ೧೦ ಘಂಟೆ. ಆ ಹೊತ್ತಿಗೆ ಸರಿಯಾಗಿ ನಾನೂ ಪೂಜ್ಯ ಎನ್. ನರಸಿಂಹಮೂರ್ತಿಗಳೂ ಅಲ್ಲಿಗೆ ಬಂದು ಸೇರಿದೆವು. ನಾವಿನ್ನೂ ಬೀದಿಯಲ್ಲಿದ್ದಾಗ ಮೂರ್ತಿಗಳು ರಾಯರು ಅಲ್ಲಿದ್ದದ್ದನ್ನು ನೋಡಿ ನನ್ನನ್ನು ಬಾಗಿಲ ಹೊರಗಡೆ ನಿಂತಿರುವಂತೆ ಹೇಳಿದರು. ಅವರು ಹೊಸ್ತಿಲು ದಾಟಿದೊಡನೆಯೇ ರಾಯರನ್ನು ಕಂಡರು. ರಾಯರು ಹಿಂದೆ ಶ್ರೀರಂಗಪಟ್ಟಣದಲ್ಲಿ ಅಮಲ್ದಾರರಾಗಿದ್ದರಂತೆ. ಆಗಿನಿಂದ ಮೂರ್ತಿಗಳ ತಂದೆಯವರಿಗೂ ರಾಯರಿಗೂ ಸ್ನೇಹ. ಹೀಗೆ ಮೂರ್ತಿಗಳಿಗೂ ರಾಯರಿಗೂ ಬಳಕೆ. ನಮ್ಮ ಕಥೆಯಲ್ಲಿ ಮೂರ್ತಿಗಳು ರಾಯರನ್ನು ಕಂಡು ನಮಸ್ಕರಿಸಿದ ಕೂಡಲೆ ರಾಯರು: “ಏನಯ್ಯ ಮೂರ್ತಿ–ನಿನಗೆ ಹೇಳಿದ್ದೆನಲ್ಲ–ಒಬ್ಬ ಪಂಡಿತರನ್ನು ಗೊತ್ತು ಮಾಡಿಕೊಡಯ್ಯ ಅಂತ?”

ಮೂ: “ಹೌದು, ಜ್ಞಾಪಕವಿದೆ. ಒಬ್ಬರನ್ನು ನೋಡಿದ್ದೇನೆ. ಅವರಿಗೆ ಸಂಸ್ಕೃತ ಜ್ಞಾನದ ಜೊತೆಗೆ ಪಾಶ್ಚಾತ್ಯ ತತ್ತ್ವಶಾಸ್ತ್ರದ ಪರಿಚಯವೂ ಇದೆ. ನೀವು ಶಾಸ್ತ್ರ ಓದಬೇಕೆಂದಲ್ಲವೆ ಇಷ್ಟಪಟ್ಟದ್ದು?”

ರಾ: “ಹೌದಪ್ಪ. ವಯಸ್ಸಾಯಿತು. ಗೀತೆ ಮೊದಲಾದದ್ದನ್ನು ನೋಡೋಣವೆಂದೆನಿಸುತ್ತದೆ.”

ಮೂ: “ಅವರು ನಿಮ್ಮ ಉದ್ದೇಶಕ್ಕೆ ತಕ್ಕ ಹಾಗಿದ್ದಾರೆ. ಆದರೆ...

ರಾ: “ಆದರೆ ಏನು ಅಂತಿ?”

ಮೂ: (ತುಟಿಯನ್ನು ಬೆರಳುಗಳಿಂದ ಅದುಮಿಕೊಂಡು) “ಅವರು ಎಲ್ಲ ಸರಿಯೆ, ಆದರೆ-ಸ್ಮಾರ್ತರು!”

ರಾ: “ಅಯ್ಯೋ ಮಾಧ್ವರು ಯಾರೂ ಸಿಕ್ಕುವುದಿಲ್ಲವೇನಪ್ಪ?”

ಇಷ್ಟು ಹೊತ್ತಿಗೆ ಮೂರ್ತಿಗಳು ನನಗೆ ಸಂಜ್ಞೆ ಮಾಡಿದರು. ನಾನು ಒಳಕ್ಕೆ ಹೋಗಿ ಕಾಣಿಸಿಕೊಂಡೆ.

ಮೂ: “ಇವರೇ ನಾನು ಹೇಳಿದವರು.”

ರಾ: “ಅಯ್ಯೋ ಮೂರ್ತಿ-ಇಂಥವರಾದರೆ ನನ್ನದೇನಪ್ಪ ಅಡ್ಡಿ? ತುಂಬ ಒಳ್ಳೆಯವರು–ಮಾಧ್ವರ ಹಾಂಗೇನೇವೇ.”

ಹೀಗೆ ನಗುವಿನಲ್ಲಿ ಪರಿಸಮಾಪ್ತಿಯಾಯಿತು.

“ರಿಗ್ರೆಟ್”

ರಾಘವೇಂದ್ರರಾಯರ ವಿಷಯದಲ್ಲಿ ಇನ್ನೊಂದು ಕಥೆ ಕೇಳಿದ್ದೇನೆ. ಯಾವುದೋ ಆಡಳಿತ ವಿಚಾರದಲ್ಲಿ ಸರಕಾರದವರು ಅಮಲ್ದಾರ ರಾಘವೇಂದ್ರರಾಯರನ್ನು ವಿವರಣೆ ಕೇಳಿದ್ದರು. ರಾಯರು ತಮ್ಮ ಪ್ರತ್ಯುತ್ತರವನ್ನು ಡೆಪ್ಯುಟಿಕಮಿಷನರ್ ಮೂಲಕ ತಿಳಿಯಪಡಿಸಿದರು. ಆ ವಿವರಣೆ ತಕ್ಕಷ್ಟು ಸಮಾಧಾನಕರವಾಗಿಲ್ಲವೆಂದು ರಾಯರಿಗೆ ಡೆಪ್ಯುಟಿಕಮಿಷನರ್ ಮೂಲಕ ಸರಕಾರದಿಂದ ಜವಾಬು ಬಂದಿತು. ಸರಕಾರದ ಪತ್ರದಲ್ಲಿ “ಗವರ್ನ್‌ಮೆಂಟ್ ರಿಗ್ರೆಟ್ ದಟ್”... ಎಂದಿತ್ತು. ರಾಘವೇಂದ್ರರಾಯರು ಅದನ್ನು ನೋಡಿ ಒಂದು ವಾರ ರಜಾ ಬೇಡಿದರು. ರಜಾ ದೊರೆತ ಮೇಲೆ ಅವರು ಬೆಂಗಳೂರಿಗೆ ಬಂದು ದಿವಾನ್ ಕೃಷ್ಣಮೂರ್ತಿಗಳ ಮನೆಗೆ ಹೋಗಿ ಭೇಟಿಯಾಗಲು ಅವಕಾಶ ಬೇಡಿದರು. ಕರೆಬಂದ ಕೂಡಲೆ ರಾಘವೇಂದ್ರರಾಯರು ದಿವಾನರೆದುರಿಗೆ ನಿಂತು ಮುಖ ಬಗ್ಗಿಸಿಕೊಂಡು ಅಂಗವಸ್ತ್ರದಿಂದ ಕಣ್ಣುಜ್ಜಿಕೊಳ್ಳುತ್ತಾ ಬಿಕ್ಕಿಬಿಕ್ಕಿ ಅಳುತ್ತ ನಿಂತರು. ದಿವಾನರು ಕೇಳಿದರು:

ದಿ: “ಏನು ರಾಘವೇಂದ್ರರಾಯರೆ, ಏನಾಯಿತು? ಯಾಕೆ ದುಃಖ?”

ರಾ. “ಅಯ್ಯೋ–ಅಪರಾಧ ಮಾಡಿದೆನಲ್ಲ! ನಮ್ಮ ಸರಕಾರಕ್ಕೆ ವ್ಯಸನ ತಂದಿಟ್ಟೆನಲ್ಲ! ಖಾವಂದರು ಕಣ್ಣೊರಸಿಕೊಳ್ಳುವುದಕ್ಕಾಗಿ ನಾಲ್ಕು ಕರವಸ್ತ್ರ ತಂದಿದ್ದೇನೆ, ಅಪ್ಪಣೆಯಾದರೆ ಒಪ್ಪಿಸುತ್ತೇನೆ.”

ಕೃಷ್ಣಮೂರ್ತಿಗಳಿಗೆ ತಬ್ಬಿಬ್ಬಾಯಿತು. ವಿಷಯವೇನೋ ತಿಳಿಯಲಿಲ್ಲ. ಆಗ ರಾಯರು ಸರಕಾರದ ಕಾಗದವನ್ನು “ಗವರ್ನ್‌ಮೆಂಟ್ ರಿಗ್ರೆಟ್” ಎಂಬ ಮಾತುಗಳ ಕೆಳಗೆ ಕೆಂಪುಗೆರೆ ಎಳೆದಿದ್ದದ್ದನ್ನು ದಿವಾನರ ಮುಂದೆ ಹಿಡಿದರು. ದಿವಾನರು ಘೊಳ್ಳೆಂದು ನಕ್ಕರು. “ಇದಕ್ಕೇ ಇಷ್ಟು ಅವಾಂತರ? ರಾಘವೇಂದ್ರರಾಯರೆ, ಇದು ಯಾರೋ ಗುಮಾಸ್ತರು ಮಾಮೂಲಿನಂತೆ ಬರೆದ ಕಾಗದ. ಇದನ್ನು ಇಷ್ಟು ಸೀರಿಯಸ್ ಆಗಿ ತಗೊಂಬೋದೆ? ಅದು ಅರ್ಥವಿಲ್ಲದ ಮಾತು.” ರಾಯರು “ಸರಕಾರ ಬರೆದ ಮಾತನ್ನು ಅರ್ಥವಿಲ್ಲದ್ದೆಂದು ನನ್ನಂಥವ ಹೇಳುವುದಕ್ಕಾದೀತೆ? ಸರಕಾರದ ಮಾತನ್ನು ನಾವು ತಲೆಯ ಮೇಲಿಟ್ಟುಕೊಂಡು ನಡಸಬೇಕಾದವರು.”

ಐರಾವಂತಂ ರಂಗಪ್ಪ

ಎಲ್ಲೂರಿನಲ್ಲಿ ರಂಗಪ್ಪ ಎಂಬ ಹೆಸರಿನವರು ಇಬ್ಬರು ಪ್ರಸಿದ್ಧರಾಗಿದ್ದರು. ಒಬ್ಬರು ಐರಾವತಂ ರಂಗಪ್ಪ. ಇವರು ಶ್ರೀವೈಷ್ಣವ ಬ್ರಾಹ್ಮಣರು. ಮಾಸ್ತಿ ವೆಂಕಟೇಶಯ್ಯಂಗಾರ್ಯರ ಜನಾಂಗ. ಈ ರಂಗಪ್ಪನವರನ್ನು ನೋಡಿದರೆ ಮಿಕ್ಕ ಹಳ್ಳಿಯವರಂತೆಯೇ ಇದ್ದರು. ಎಲೆ ಅಡಕೆ, ಕಡ್ಡಿಪುಡಿಯ ಅಭ್ಯಾಸ ಇತ್ತು. ಆದರೆ ಇವರು ಐರಾವತ ಪುರಾಣ ಹೇಳಲಾರಂಭಿಸಿದರೆ ಕೇಳುವವರಿಗೆ ಮೈ ಮರೆಯುತ್ತಿತ್ತು.

ಐರಾವತವೆಂಬುದು ಒಂದು ಪುರಾಣ ಕಥೆ. ಕುಂತೀದೇವಿ ತಾನು ಮಾಡುತ್ತಿದ್ದ ಒಂದು ವ್ರತಕ್ಕೆ ಇಂದ್ರಲೋಕದಿಂದ ಐರಾವತ ಬರಬೇಕೆಂದು ಅಪೇಕ್ಷಿಸಿದ್ದು, ಅದರಂತೆ ಭೀಮಸೇನನು ಹೋಗಿ ಐರಾವತವನ್ನು ಕರೆದುತಂದದ್ದು–ಇದರ ಕಥಾವಸ್ತು. ಇದನ್ನು ಕಾವ್ಯರೀತಿಯಲ್ಲಿ ವಿಸ್ತರಿಸಿ ವರ್ಣಿಸಿದ್ದ ಹಾಡನ್ನು ರಾಗರಾಗಗಳಲ್ಲಿ ಹಾಡುತ್ತಿದ್ದದ್ದು ರಂಗಪ್ಪನವರ ಸಿದ್ಧಿ. ಇದನ್ನು ಕೇಳಲು ಆ ಪ್ರಾಂತದ ಹಳ್ಳಿಹಳ್ಳಿಗಳಿಂದಲೂ ಜನ ಬರುತ್ತಿದ್ದರು. ೧೦೦೦-೨೦೦೦ ಜನ ಸೇರುತ್ತಿದ್ದರು. ರಂಗಪ್ಪನವರು ಸಾತ್ತ್ವಿಕರು, ವಿನಯಶೀಲರು, ಗುಣಾಢ್ಯರು. ಅಂಥವರಿಂದ ನಮ್ಮ ಗ್ರಾಮಜೀವನದಲ್ಲಿ ಶಾಂತಿಯೂ ಸಂತೋಷವೂ ಪರಮಾರ್ಥವೂ ಉಂಟಾಗುತ್ತಿತ್ತು.

ಕೊಡದವಾಡಿ ರಂಗಪ್ಪ

ಇನ್ನೊಬ್ಬ ರಂಗಪ್ಪನವರು ಕೊಡದವಾಡಿ ರಂಗಪ್ಪ. ಇವರು ಬಹುಶಃ ಬಣಜಿಗರೆಂದು ತೋರುತ್ತದೆ. ತಕ್ಕಮಟ್ಟಿಗೆ ಅನುಕೂಲಸ್ಥರು. ಇವರಿಗೆ ಸಂಗೀತ ಸಾಹಿತ್ಯಗಳಲ್ಲಿ ಪರಿಶ್ರಮ. ಅವರು ರಚಿಸಿದ್ದ ಕೃತಿಗಳಲ್ಲಿ ಎರಡು ತುಣುಕುಗಳು ಜ್ಞಾಪಕದಲ್ಲಿವೆ. ಒಂದು ಮೋಹನರಾಗದ್ದು.

ವರಲಕ್ಷ್ಮೀ ಬ್ರೋವವೇ
ಪಲುಮಾರು ವೇಡಿನ
ಪರಿಪೂರ್ಣಮುಗಾ ನೀದು
ಚರಣಮು ಜೂಪಿ...

ಎರಡನೆಯದು ಯಾವ ರಾಗವೋ ಮರೆತುಹೋಗಿದೆ. ಬಹುಶಃ ಅದೂ ಮೋಹನ:

ಭವತಿ ಭಿಕ್ಷಾಂ ದೇಹಿ ಮಹಾಲಕ್ಷ್ಮೀ ವೇಗಮೇ

ಕೊಡದವಾಡಿ ರಂಗಪ್ಪನವರು ಸರಳಜೀವಿ. ಭಗವದ್ಭಕ್ತರು. ಕರುಣಾಳು. ಜನಕ್ಕೆ ಅವರಲ್ಲಿಯೂ ತುಂಬ ಗೌರವ.

೮

ಶಿವಪೂಜೆ ನಾರಣಪ್ಪನವರು

ಈ ಹಿಂದೆ ನನ್ನ ಮಾತಾಮಹಿ ಸಾಕಮ್ಮನಮ್ಮನವರನ್ನು ಕುರಿತು ಒಂದು ಮಾತು ಹೇಳಿದ್ದೇನೆ. ಆಕೆಯ ಯಜಮಾನರು ನಾರಣಪ್ಪನವರು.

ಇವರಿಗೆ ಮುಳುಬಾಗಲು ಪ್ರಾಂತಕ್ಕೆ ವರ್ಗವಾದದ್ದು ಹೇಗೋ, ಮೊದಲು ಅವರು ಎಲ್ಲಿ ಚಾಕರಿಯಲ್ಲಿದ್ದರೋ ಅದು ನನಗೆ ಗೊತ್ತಿಲ್ಲ. ಅವರು ಮುಳುಬಾಗಲು ತಾಲ್ಲೂಕು ಬೈಕೂರು ಹೋಬಳಿಯ ಶೇಕದಾರರಾಗಿ ಬಂದರು. ಆ ಕಾಲದಲ್ಲಿ ಅವರು ನಮ್ಮ ಸ್ವಜನವೆಂದು ನನ್ನ ಹಿರಿಯರಿಗೆ ತಿಳಿದಂತಿಲ್ಲ. ಸ್ವಲ್ಪಕಾಲದ ಮೇಲೆ ಹಿಂದೆ ಹೇಳಿದ ತಿಪ್ಪದೊಡ್ಡಿ ಸಂಜೀವಯ್ಯನವರ ಮೊಕದ್ದಮೆಯ ಸಂದರ್ಭದಲ್ಲಿ ಗುಂಜೂರು ನಾರಣಪ್ಪನವರು ಲಾಯರ್ ಶೇಷಗಿರಯ್ಯನವರನ್ನು ಕಾಣಬೇಕಾದದ್ದು ಒದಗಿ ಬಂತು. ಆಗಲೇ ಅವರಿಬ್ಬರಿಗೂ ಮೊದಲ ಪರಿಚಯ.

ನನ್ನ ತಾತ ಶೇಷಗಿರಿಯಪ್ಪನವರಿಗೆ ನಾರಣಪ್ಪನವರ ವಿಷಯದಲ್ಲಿ ಮೊದಲು ಅಷ್ಟು ಆದರವಿರಲಿಲ್ಲ; ನಾರಣಪ್ಪನವರು ಲೋಭಿ ಎಂದು ಭಾವಿಸಿಕೊಂಡಿದ್ದರು. ಅವರ ಬಟ್ಟೆ ಬರೆ ಮಾಸಲು ಮಾಸಲಾಗಿ ಹರಕು ಹರಕಾಗಿತ್ತಂತೆ. ಕೋಟಿನ ತೋಳುಗಳ ಮುಂಭಾಗ ಜೂಲುಜೂಲಾಗಿತ್ತಂತೆ. ಈ ರೂಪ ವೇಷಗಳ ಅತಿಸಾಮಾನ್ಯತೆಯೇ ಶೇಷಗಿರಿಯಪ್ಪನವರ ಮನಸ್ಸಿನಲ್ಲಿ ಒಂದು (Prejudice) ಪೂರ್ವವಿರೋಧ ಹುಟ್ಟಿದ್ದಕ್ಕೆ ಕಾರಣ ಎಂದು ನನ್ನ ಅಜ್ಜಿ ಹೇಳುತ್ತಿದ್ದದ್ದುಂಟು. ಅದರ ತಾತ್ಪರ್ಯ ನನ್ನ ಕಡೆಯವರನ್ನು ಹಂಗಿಸುವುದಷ್ಟೇ ಆಗಿದ್ದಿರಬಹುದು.

ನಾರಣಪ್ಪನವರು ಗುಣದಿಂದ ಉತ್ತಮರೆಂಬುದು ಕಾಲಕ್ರಮದಲ್ಲಿ ನನ್ನ ತಾತಂದರಿಗೆ ತಿಳಿದುಬಂತು. ನಾರಣಪ್ಪನವರು ಕಾರ್ಯದಕ್ಷರು. ಪ್ರಾಮಾಣಿಕರು; ಜನಾನುರಾಗಿಗಳು. ಅವರ ವಿಷಯ ನನಗೆ ಇನ್ನೇನೂ ಹೆಚ್ಚಾಗಿ ತಿಳಿಯದು.

ಸೂರ್ಯೋಪಾಸನೆ

ನಾರಣಪ್ಪನವರಿಗೆ ಅವರ ಚಿಕ್ಕ ವಯಸ್ಸಿನಲ್ಲಿ ಮೂರ್ಛೆ ಬರುತ್ತಿತ್ತಂತೆ. ಆಗ ಯಾರೋ ಒಬ್ಬರು ಅವರಿಗೆ ಸೂರ್ಯೋಪಾಸನೆಯನ್ನು ಉಪದೇಶ ಮಾಡಿದರಂತೆ. ಅದರಂತೆ ನಾರಣಪ್ಪನವರು ಪ್ರತಿ ದಿವಸವೂ ಒಂದು ದಿನ ತಪ್ಪದೆ ಸೂರ್ಯನಮಸ್ಕಾರ ಮಾಡುತ್ತಿದ್ದರು. ಅವರು ಎಲ್ಲಿರಲಿ, ಸರ್ಕೀಟಿನಲ್ಲಿರಲಿ, ಕಸಬೆಯಲ್ಲಿರಲಿ, ಸೂರ್ಯೋದಯವಾಗುವ ವೇಳೆಗೆ ಸೂರ್ಯನಮಸ್ಕಾರ ಮಾಡುತ್ತಿದ್ದರು.

ತ್ರುಚ ಕಲ್ಪವೆಂಬ ವಿಧಾನದಲ್ಲಿ ಇದರ ಮುಖ್ಯ ಮಂತ್ರ:

ಉದ್ಯನ್ ಆದ್ಯನ್ ಅದ್ಯಮಿತ್ರಮಃ

ಎಂದು ಆರಂಭವಾಗುತ್ತದೆ.

ಈ ನಿತ್ಯಾನುಷ್ಠಾನಕ್ಕಾಗಿ ದೇವತಾರ್ಚನೆ ಪರಿಕರಗಳನ್ನು ನಾರಣಪ್ಪನವರು ತಮ್ಮ ಕುದುರೆಯ ಮೇಲಿನ ಕಂಟಾಡಿಯಲ್ಲಿ ಇರಿಸಿಕೊಂಡಿರುತ್ತಿದ್ದರು. ಒಂದು ತಾಮ್ರದ ಸೂರ್ಯ ಚಕ್ರ: ಅದರ ವ್ಯಾಸ ೫-೬ ಅಂಗುಲವಿರಬಹುದು. ತಾಮ್ರದ ಪಂಚಪಾತ್ರೆಗಳು ದೊಡ್ಡದು ನಡುಬೆಟ್ಟಷ್ಟು ಎತ್ತರವಾದದ್ದು, ಇನ್ನೊಂದು ಕಿರುಬೆರಳಿನಷ್ಟು. ಈ ಪಾತ್ರೆಗಳ ಕಲಶವನ್ನು ಇರಿಸುವುದಕ್ಕಾಗಿ ಎರಡು ಸಣ್ಣ ಸಣ್ಣ ಹಿತ್ತಾಳೆ ತಗಡು ಹೊದ್ದಿಸಿದ ಮಣೆಗಳು, ಅಂಗೈಯಗಲದವು. ಒಂದು ಸಣ್ಣ ಶಂಖ; ಅದಕ್ಕೆ ತಕ್ಕೆ ಕೂರ್ಮಾಸನ. ಒಂದು ಸಣ್ಣ ಘಂಟೆ. ಇವೇ ಮೊದಲಾದ ಪರಿಕರಗಳು ಇವು ಒಂದು ಬೆತ್ತದ ಬುಟ್ಟಿಯಲ್ಲಿ. ಇನ್ನೊಂದು ಸಣ್ಣ ಬುಟ್ಟಿಯಲ್ಲಿ ಒಂದು ಬೆಲ್ಲದ ಗಡ್ಡೆ, ಒಂದು ಬಿಲ್ವಪತ್ರೆ ಕಾಯಲ್ಲಿ ವಿಭೂತಿ. ಇಷ್ಟು ಸಾಮಾನುಗಳು ನಾರಣಪ್ಪನವರ ಹಸುಬಿ ಸಂಚಿಯಲ್ಲಿ ಯಾವಾಗಲೂ ಇರುತ್ತಿದ್ದವು.

ನಿತ್ಯಾನುಷ್ಠಾನ

ಅವರು ಹಳ್ಳಿಗಳಿಗೆ ಪದೇ ಪದೇ ಹೋಗಬೇಕಾಗಿತ್ತಷ್ಟೆ–ವಾರಕ್ಕೆ ಮೂರು ನಾಲ್ಕುಸಾರಿ. ಹಾಗೆ ಪ್ರಯಾಣ ಮಾಡುತ್ತಿದ್ದಾಗ ಸೂರ್ಯೋದಯ ಕಾಲದಲ್ಲಿ ಎಲ್ಲಿ ಕೊಳವೋ ಬಾವಿಯೋ ನಿರ್ಮಲವಾದದ್ದು ಕಾಣಿಸಿದರೆ ಅಲ್ಲಿ ಕುದುರೆಯಿಂದಿಳಿದು ಪೂಜೆಯ ಸಾಮಾನುಗಳನ್ನು ಹೊರಕ್ಕೆ ತೆಗೆದು ಸ್ನಾನಾನಂತರ ಸಂಧ್ಯಾವಂದನೆ ಮಾಡಿ ಸೂರ್ಯ ಪೂಜೆಯಾದ ಬಳಿಕ ೧೨ ನಮಸ್ಕಾರ ಮಾಡುವುದು. ಬೇರೆ ಏನೂ ಸಿಕ್ಕದಿದ್ದರೆ ನೈವೇದ್ಯಕ್ಕಾಗಿ ಬೆಲ್ಲದ ಗಡ್ಡೆ. ರಾತ್ರಿ ಉಪವಾಸ. ಮಾಘಮಾಸದಲ್ಲಿ ಭಾನುವಾರ ಭಾನುವಾರವೂ ಪೂಜೆಯ ಜತೆಗೆ ಬ್ರಾಹ್ಮಣಭೋಜನ. ರಥಸಪ್ತಮಿಯ ದಿನ ಸಂತರ್ಪಣೆ. ಇಷ್ಟನ್ನು ಅವರು ನಡೆಸುತ್ತಿದ್ದರು.

ಇದು ಪ್ರಾರಂಭವಾದ ಮೇಲೆ ಅವರಿಗೆ ಮೂರ್ಛೆ ರೋಗದ ಭಯವೇ ಇರಲಿಲ್ಲ. ಅವರ ಅನಂತರ ಅವರ ಹೆಂಡತಿ (ನನ್ನ ಅಜ್ಜಿ) ಸಾಕಮ್ಮನವರು ಆ ಸಂಪ್ರದಾಯವನ್ನು ಉಳಿಸಿದ್ದರು. ಅವರು ಅಪಕ್ವ ಭಾನುವಾರ ಎಂಬ ವ್ರತವನ್ನು ಆಚರಣೆಯಲ್ಲಿಟ್ಟುಕೊಂಡಿದ್ದರು. ಮಾಘ ಭಾನುವಾರಗಳಲ್ಲಿ ಇಬ್ಬರು ಮೂವರು ಬ್ರಾಹ್ಮಣರಿಗೆ ಭೋಜನ ಮಾಡಿಸಿ ದಕ್ಷಿಣೆ ಕೊಡುತ್ತಿದ್ದರು. ರಥಸಪ್ತಮಿಯ ದಿವಸ ಕೊಂಚ ಭಾರಿಯಾದ ಸಂತರ್ಪಣೆ ನಡೆಸುತ್ತಿದ್ದರು. ಸಂತರ್ಪಣೆಗಾಗಿ ಪಾಯಸ ಮಾಡುತ್ತಿದ್ದ ಕೊಳದಪ್ಪಲೆ ಈಗಲೂ ನನ್ನ ಮನೆಯಲ್ಲಿದೆ. ಆದರೆ ಪಾಯಸಕ್ಕಾಗಿ ಅಲ್ಲ. ಅದರಲ್ಲಿ ತುಂಬುವಷ್ಟು ಹಾಲಿನ ಮಾತಿರಲಿ, ಅಷ್ಟು ನೀರೂ ನಮಗೆ ಕಷ್ಟದ ಮಾತಾಗಿದೆ.

ನಾರಣಪ್ಪನವರ ದೇವತಾರ್ಚನೆಯ ವಸ್ತುಗಳು, ಸೂರ್ಯಚಕ್ರ ಮೊದಲಾದವು ಮೊನ್ನೆ ಮೊನ್ನೆಯವರೆಗೂ ನನ್ನ ಮನೆಯಲ್ಲಿದ್ದದ್ದನ್ನು ಕಂಡಿದ್ದೇನೆ.

ನನ್ನ ಅಜ್ಜಿ ಸಾಕಮ್ಮನವರ ತವರುಮನೆ ಸರ್ಜಾಪುರ. ಆ ಮನೆತನಕ್ಕೆ ಶಿವಪೂಜೆಯವರೆಂದು ಅಡ್ಡ ಹೆಸರು. ನಾನು ಬಹಳ ಚಿಕ್ಕಂದಿನಲ್ಲಿದ್ದಾಗ ನನ್ನ ಅಜ್ಜಿ ನನ್ನನ್ನೂ ನನ್ನ ತಾಯಿ ತಂದೆಗಳನ್ನೂ ಸರ್ಜಾಪುರಕ್ಕೆ ತನ್ನ ತಮ್ಮ ಶಿವಪೂಜೆ ನಾರಣಪ್ಪನವರ ಮನೆಗೆ ಕರೆದುಕೊಂಡು ಹೋಗಿದ್ದರು. ನನ್ನ ಅಜ್ಜಿಯ ಅಣ್ಣ ಶಿವಪೂಜೆಯ ಅಪ್ಪಾಜಿಯವರು ಆಗ್ಗೆ ಬಹುಶಃ ತೀರಿಕೊಂಡಿದ್ದರೋ ಹೇಗೋ. ನಾರಣಪ್ಪನವರಿಗೆ ಪತ್ನೀವಿಯೋಗವಾಗಿತ್ತು. ಆಗ ಆ ಮನೆಯಲ್ಲಿದ್ದವರು ಇಬ್ಬರೇ;

ನಾರಣಪ್ಪನವರು, ಅವರ ಮಗ. ಆತನ ಹೆಸರು ಸುಬ್ರಹ್ಮಣ್ಯ ಎಂದೋ ಏನೋ; ನನಗೆ ಮರೆತುಹೋಗಿದೆ.

ನಾರಣಪ್ಪನವರಿಗೆ ಇದ್ದ ಹುದ್ದೆ ಹಳ್ಳಿಯ ಪೋಸ್ಟ್ ಮ್ಯಾನ್ ಕೆಲಸ. ಆದದ್ದರಿಂದಲೇ ಅವರನ್ನು "ಅಂಚೆಯ ನಾರಣಪ್ಪ" ಎಂದು ಕರೆಯುತ್ತಿದ್ದದ್ದು, ಸರ್ಜಾಪುರದ ಸುತ್ತ ಮುತ್ತಲಿನ ಹಳ್ಳಿಗಳಿಗೆ ಆತ ಟಪ್ಪಾಲು ತೆಗೆದುಕೊಂಡು ಹೋಗಿ ಪಾವತಿ ಮಾಡಬೇಕಾದದ್ದು. ಪೋಸ್ಟ್ ಆಫೀಸಿನವರು ಗ್ರಾಮಾಂತರಗಳಿಗೆ ಹೋಗಬೇಕಾದ ಪೋಸ್ಟ್ ಕಾರ್ಡ್ ಕಾಗದಗಳನ್ನು ಒಂದು ಚೀಲದಲ್ಲಿ ಹಾಕಿ ಮೂಲೆಕಟ್ಟಿ ಒಂದು ಕೋಲಿನ ಕೊನೆಗೆ ಅದನ್ನು ತಗುಲಿಸಿ ನಾರಣಪ್ಪನವರ ಕೈಗೆ ಕೊಡುವರು. ಆ ಕೋಲಿಗೆ ಗೆಜ್ಜೆಯ ಸರಗಳನ್ನು ಕಟ್ಟುವರು. ಇದನ್ನು ಭುಜದ ಮೇಲಿರಿಸಿಕೊಂಡು ನಾರಣಪ್ಪನವರು ಬೇಗ ಬೇಗ ನಡೆಯುತ್ತ ಹೋಗುವರು. ಗೆಜ್ಜೆಯ ಸದ್ದಿನಿಂದ ಅಂಚೆ ಬರುತ್ತಿದೆ ಎಂದು ಜನ ತಿಳಿದುಕೊಳ್ಳುವರು. ನಾರಣಪ್ಪನವರು ಅವಶ್ಯವಿದ್ದ ಕಡೆ ಸಂಚಿ ಬಿಚ್ಚಿ ಕಾಗದಗಳನ್ನು ಅಲ್ಲಲ್ಲಿ ವಿಲೇವಾರಿ ಮಾಡುವರು. ಗ್ರಾಮಾಂತರಗಳ ಜನರಿಗೆ ಇದು ಅಭ್ಯಾಸವಾಗಿದ್ದದ್ದರಿಂದ ಎಷ್ಟೋ ಮಂದಿ ಕಾಗದ ನಿರೀಕ್ಷಿಸುತ್ತಿದ್ದವರು ತಾವಾಗಿ ನಾರಣಪ್ಪನವರ ದಾರಿ ಕಾದು ತಮ್ಮ ಟಪ್ಪಾಲನ್ನು ತೆಗೆದುಕೊಂಡು ಹೋಗುವರು. ಈ ಹುದ್ದೆಯಿಂದ ನಾರಣಪ್ಪನವರಿಗೆ ದೊರಕುತ್ತಿದ್ದದ್ದು ತಿಂಗಳಿಗೆ ಮೂರು ರೂಪಾಯಿ ಸಂಬಳ.

ಕೊಂಚ ಜಮೀನೂ ಇದ್ದಿರಬೇಕು.

ನಾರಣಪ್ಪನವರ ಮನೆ ಹಿಂದೆ ಎಂದೋ ೫೦-೬೦ ಅಂಕಣದಷ್ಟು ದೊಡ್ಡದಾಗಿತ್ತಂತೆ. ನಾನು ನೋಡುವ ವೇಳೆಗೆ ಅದರ ಬಹುಭಾಗ ಬಿದ್ದುಹೋಗಿ ೮-೧೦ ಅಂಕಣ ಉಳಿದುಕೊಂಡಿತ್ತು. ಅದೂ ಮಣ್ಣು ಮಾಳಿಗೆ, ಅಲ್ಲಲ್ಲಿ ಸೋರುತ್ತಿತ್ತು.

ದೇವತಾ ಮೂರ್ತಿಗಳು

ಅದರಲ್ಲಿ ಒಂದು ವಿಶೇಷ. ಭದ್ರವಾಗಿದ್ದ ಒಂದು ಕೋಣೆ ದೇವರಿಗಾಗಿ. ನಾನು ಅಲ್ಲಿ ನೋಡಿದಷ್ಟು ದೇವತಾ ಮೂರ್ತಿಗಳನ್ನು ಇನ್ನೆಲ್ಲೂ ಕಂಡಿಲ್ಲ. ಯಾವ ಮಠದಲ್ಲೂ ಅದಕ್ಕಿಂತ ಹೆಚ್ಚಾಗಿ ನಾನು ನೋಡಿಲ್ಲ. ದೇವರ ಕೋಣೆಯಲ್ಲಿ ನೆಲದಿಂದ ಮಾಳಿಗೆಯವರೆಗೂ ಮೆಟ್ಟಿಲು ಮೆಟ್ಟಿಲಾಗಿ ಸುಮಾರು ೧೫-೨೦ ವಿಗ್ರಹಗಳು: ವಿಷ್ಣುವಿನ ದಶಾವತಾರಗಳು, ರಾಮ ಪಂಚಾಯತನ, ಕೋದಂಡರಾಮ; ಕೃಷ್ಣ ವಿಗ್ರಹಗಳು: ಬೆಣ್ಣೆ ಕೃಷ್ಣ, ದೊಗ್ಗಾಲಕೃಷ್ಣ, ಗೋಪೀಕೃಷ್ಣ, ಕಾಳೀಯ ಮರ್ದನ: ಶ್ರೀನಿವಾಸ; ಚಂದ್ರಶೇಖರ, ಗೌರೀಶಂಕರ, ಗಣೇಶ, ಸುಬ್ರಹ್ಮಣ್ಯ, ನವಗ್ರಹಗಳು, ಅಂಬಿಕೆ, ಮಹಾಲಕ್ಷ್ಮಿ, ಮಹಿಷಾಸುರಮರ್ದಿನಿ, ಇತ್ಯಾದಿ. ಆಕಾರದಲ್ಲಿ ಹೇಗೋ ಗಾತ್ರದಲ್ಲಿ ಹಾಗೆ ಹೆಬ್ಬೆರಳ ಗಾತ್ರದಿಂದ ಹಿಡಿದು ಒಂದು ಒಂದೂವರೆ ಅಡಿಯಷ್ಟು ಎತ್ತರ. ಈ ನೂರಾರು ವಿಗ್ರಹಗಳ ಜತೆಗೆ ಬಲಮುರಿ ಶಂಖ, ಮರಕತ ಲಿಂಗ, ಸ್ಫಟಿಕ ಲಿಂಗ, ರಾಮಟಂಕಿ ವರಹ ಇವೆಲ್ಲಾ ಪೂಜೆಯಲ್ಲಿದ್ದವು.

“ಪಾರ್ಥಿವ ಪೂಜೆ”

ನಾರಣಪ್ಪನವರು ಬೆಳಗ್ಗೆ ೫ ಘಂಟೆಗೆ ಎದ್ದು ತಣ್ಣೀರು ಸ್ನಾನ ಮಾಡಿ ವಿಭೂತಿಧರಿಸಿ ಮೂರು ನಾಲ್ಕು ರುದ್ರಾಕ್ಷಿಸರಗಳನ್ನು ಹಾಕಿಕೊಂಡು ಮೊದಲು ಪಾರ್ಥಿವ ಪೂಜೆಮಾಡುವರು. ಈ ಪಾರ್ಥಿವಲಿಂಗ ಪೂಜೆಯ ಪದ್ಧತಿ ಈಗ ನನಗೆ ತಿಳಿದಿರುವಂತೆ ಎಲ್ಲೂ ಇಲ್ಲ. ನನಗೆ ತೋರುತ್ತದೆ ಅದು ಸರ್ವೋತ್ಕೃಷ್ಟವಾದ ಏಕಾಂತ ಭಕ್ತಿ ಎಂದು. ಭಕ್ತನು ಹುತ್ತದ ಮಣ್ಣನ್ನು ತಂದಿರಿಸಿಕೊಂಡಿರುತ್ತಾನೆ, ಅದು ಒದ್ದೆಯಾಗಿರುತ್ತದೆ, ಮಾರನೆಯ ದಿನ ಬೆಳಗೆ ಸ್ನಾನ ಸಂಧ್ಯಾದಿಗಳು ಮುಗಿದ ತರುವಾಯ ಆತನು ತನ್ನ ಎಡಗೈಯಲ್ಲಿ ಆ ಮಣ್ಣಿನಿಂದ ಒಂದು ಶಿವಲಿಂಗದ ಪ್ರತೀಕವನ್ನು ಮಾಡಿ ಇರಿಸಿಕೊಳ್ಳುತ್ತಾನೆ. ಮಾಡಿ ಅದನ್ನು ಬಲಗೈಯಿಂದ ಪೂಜಿಸುತ್ತಾನೆ. ಆಗ ಹೇಳುವ ಮಂತ್ರಗಳೇ “ನಿಧನಪತಯೇ ನಮಃ” ಇತ್ಯಾದಿಗಳು. ಅದೇ “ಅಂಗೈಯ ಲಿಂಗ.” ಈ ಅರ್ಚನೆಗೆ ಬೇಕಾದದ್ದು ತುಂಬೆ ಹೂವು ಮತ್ತು ಬಿಲ್ವ. ಒಂದೊಂದು ಸಾರಿ ನಮ್ಮ ನಾರಣಪ್ಪನವರು ನೈವೇದ್ಯಕ್ಕೆ ಬೇರೆ ಏನೂ ಗತಿಯಿಲ್ಲದೆ ಕುದುರೆಗಾಗಿ ಇರಿಸಿಕೊಂಡಿದ್ದ ಹುರಿದ ಹುರುಳಿಯನ್ನು ನೈವೇದ್ಯ ಮಾಡಿದ್ದುಂಟಂತೆ.

ನಾರಣಪ್ಪನವರನ್ನು ಜನ ಶಿವಪೂಜಾಧುರಂಧರ ಎಂದು ಕರೆಯುತ್ತಿದ್ದರು.

***

ನಾನು ಸರ್ಜಾಪುರದಲ್ಲಿ ಅವರ ಮನೆಗೆ ಹೋಗಿದ್ದಾಗ ಒಂದು ಸಂದರ್ಭ ನಡೆಯಿತು. ನಾರಣಪ್ಪನವರಿಗೆ ತಂಗಿ, ತಂಗಿಯ ಮಕ್ಕಳು ಬಂದಿದ್ದಾರೆಂದು ಸಂತೋಷ. ತಾವು ಅವರೊಡನೆ ಇರಬೇಕೆಂದು ಮನಸ್ಸು. ಆದರೆ ಅಂಚೆಯನ್ನು ಹೊತ್ತು ಹೋಗಬೇಕಲ್ಲ? ಈ ಕೆಲಸವನ್ನು ಮಗನಿಗೆ ಒಪ್ಪಿಸಿದರು. ಆತ ಸಮರ್ಥ, ಚಟುವಟಿಕೆಯುಳ್ಳವನು. ತಂದೆಗೆ ತಕ್ಕ ಮಗ. ಆತ ಸಂತೋಷದಿಂದ ಒಪ್ಪಿಕೊಂಡ. ಆದರೆ ಅವನಿಗೆ ಆಗ ಆತನ ಮೈ ಮೇಲಿದ್ದ ಉಟ್ಟ ಪಂಚೆಯ ವಿನಾ ಬೇರೆ ಬಟ್ಟೆ ಇರಲಿಲ್ಲ. ಆತ ಮನೆಯಿಂದ ಹೊರಡುವ ಘಳಿಗೆಯಲ್ಲಿ ನಾರಣಪ್ಪನವರು ತಮ್ಮ ಮೈ ಮೇಲಿದ್ದ ಪಂಚೆಯನ್ನು ಮಗನಿಗೆ ಕೊಟ್ಟರು. ಮಗ ಕೇಳಿದ:

“ನುವೇಮಿ ಕಪ್ಪು ಕೊಂಚಾವು?” (ನೀನೇನು ಹೊದ್ದುಕೊಳ್ಳುತ್ತೀ?)

ನಾ: “ಪರಮೇಶ್ವರುಡಿಚ್ಚಿನ ಪೈತೋಲು” (ಈಶ್ವರ ಕೊಟ್ಟ ಮೇಲ್ಚರ್ಮ.)

ಇದು ನನಗೆ ನೆನಪಿನಲ್ಲಿ ಆಳವಾಗಿ ಊರಿದೆ. ನನ್ನ ಅಜ್ಜಿಯೂ ಮಿಕ್ಕವರೂ ನಕ್ಕರು. ಅದು ಎಂಥ ನಗು? ದಾರಿದ್ರ್ಯವನ್ನು ಮುಚ್ಚಿಟ್ಟುಕೊಳ್ಳುವ ಪ್ರಯತ್ನದ ನಗು.

ಅಪ್ಪಾಜಯ್ಯನವರ ಸಂಪಾದನೆ

ನಾನು ಆ ದಿನ ಸಂಜೆ ನನ್ನ ಅಜ್ಜಿಯನ್ನು ಕೇಳಿದೆ, ಈ ಮನೆ ಏಕೆ ಇಷ್ಟು ಬಡವಾಗಿದೆ ಎಂದು. ಆಕೆ ಹೇಳಿದಳು:

"ನಮ್ಮ ತಾತ ಅಪ್ಪಾಜಯ್ಯ ಸರ್ಜಾಪುರದ ನವಾಬರ ಹತ್ತಿರ ಉದ್ಯೋಗದಲ್ಲಿದ್ದ. ಏನೋ ದೊಡ್ಡ ಉದ್ಯೋಗ. ಆ ಸುಲ್ತಾನ ಯಾವಯಾವುದೋ ದೇವಸ್ಥಾನಗಳಿಗೆ ಹೋಗಿ ಅಲ್ಲಿ ಇದ್ದದ್ದು ಪದ್ದದ್ದನ್ನೆಲ್ಲ ಕೊಳ್ಳೆ ಹೊಡೆದುಕೊಂಡು ಬಂದು ರಾಶಿ ಹಾಕಿಡುತ್ತಿದ್ದ. ಒಂದು ದಿನ ಆತ ನಮ್ಮ ತಾತನನ್ನು ಕರೆದು ಹೇಳಿದ: 'ಅಪ್ಪಾಜಯ್ಯ, ಇದರಲ್ಲಿ ನಿನಗೇನಾದರೂ ಬೇಕಿದ್ದರೆ ತಗೋ, ಮಿಕ್ಕದ್ದನ್ನು ಬಾವಿಯಲ್ಲಿ ಹಾಕಿಸಿಬಿಡುತ್ತೇನೆ' –ಎಂದು. ಆಗ ನಮ್ಮ ತಾತ ಈ ಪ್ರತಿಮೆಗಳನ್ನೂ ಸಾಲಿಗ್ರಾಮಗಳನ್ನೂ ಆರಿಸಿಕೊಂಡ. ಆದರೆ ಮುಖ್ಯವಾದದ್ದನ್ನು ಮರೆತ. 'ಇಷ್ಟು ದೇವರುಗಳನ್ನು ಕೊಡುತ್ತೀ. ನೀನು ಇದರ ಜೊತೆಗೆ ನೈವೇದ್ಯಕ್ಕಾಗಿ ನಾಲ್ಕೆಕರೆ ಗದ್ದೆ ಕೊಡು' ಎಂದು ಕೇಳುವಷ್ಟು ಬುದ್ಧಿ ನನ್ನ ತಾತನಿಗೆ ಬಾರದೆ ಹೋಯಿತು! ಈಗ ದೇವರು ನಮಗೆ ಭಾರವಾಗಿದೆ. ದೀಪ ಹೊತ್ತಿಸಿಡುವುದಕ್ಕೆ ಗತಿಯಿಲ್ಲ. ಇದು ನನ್ನ ಹುಟ್ಟಿದ ಮನೆಯ ಲಕ್ಷಣ."

ಇದನ್ನು ಹೇಳುವಾಗ ನನ್ನ ಅಜ್ಜಿಯ ಕಣ್ಣು ತೇವವಾಯಿತು.

ಶಿವಭಕ್ತಿ ಪಾರಮ್ಯ

ಈಗ ಕಡೆಯ ದೃಶ್ಯ, ನಾರಣಪ್ಪನವರ ಮಗನೂ ತೀರಿಕೊಂಡ. ನಾರಣಪ್ಪನವರ ಮನೆ ಇದ್ದದ್ದು ಬಿದ್ದು ಹೋಯಿತು. ಅವರು ತೀರ ಮುದುಕರಾದರು. ಶಿವಪೂಜೆಯನ್ನು ಮಾತ್ರ ಬಿಡಲಿಲ್ಲ. ಯಾರ ಮನೆಯ ಮುಂದೆಯೋ ಕೈ ಸಾಲೆಯಲ್ಲಿ ಕುಳಿತು ಕಾಲಕ್ಷೇಪ ಮಾಡುವರು. ಗುಡಿಗೆ ಹೋಗುವುದಕ್ಕೆ ಕೂಡ ಕೈ ಕಾಲುಗಳಲ್ಲಿ ಶಕ್ತಿಯಿಲ್ಲ. ಅವರಿಗೆ ಏನೂ ಬೇಕಾಗಿರಲಿಲ್ಲ. ಆಯಾ ಮನೆಯ ಜನರಿಂದ ಎರಡು ಕೊಡ ನೀರು ಸೇದಿಸಿಕೊಂಡು ಸ್ನಾನ ಮಾಡುವರು. ಅಂಗಳದಲ್ಲಿ ಕುಳಿತು ಶಿವಪೂಜೆ ಮಾಡುವರು. ಮಂತ್ರಗಳು ಬಾಯಿಂದ ಸ್ಫುಟವಾಗಿ ಉಚ್ಚಾರವಾಗುತ್ತಿದ್ದವು. ಅವರಿಗೆ ಅಷ್ಟರಿಂದಲೇ ತೃಪ್ತಿ. “ಶಿವ” “ಶಿವ ಮಹಾದೇವ” ಎಂದರೆ ಸಂತೋಷ. ಅವರು ಯಾರ ಮನೆಯೊಳಕ್ಕೂ ಹೋಗುತ್ತಿರಲಿಲ್ಲ. ಸ್ನಾನಕ್ಕೆ ಮಾತ್ರ ಅಂಗಳ. ಊರಲ್ಲಿ ಯಾರೋ ಬ್ರಾಹ್ಮಣರು ಮಧ್ಯಾಹ್ನದ ಹೊತ್ತಿಗೆ ತಂದಿಟ್ಟ ಒಂದೆರಡು ತುತ್ತನ್ನು ಕೈಸಾಲೆಯಲ್ಲಿಯೇ ತಿಂದು ಅಲ್ಲಿಯೇ ಮಲಗುವರು.

ಹೀಗೆ ಮುಗಿಯಿತು ಅವರ ಅವತಾರ. ಅವರು ಒಂದು ದಿನವಾದರೂ, ಒಂದು ಸಲವಾದರೂ ತಮಗೆ ಕಷ್ಟ ಬಂತೆಂದು ಹೇಳುವುದಿರಲಿ, ತಮ್ಮಷ್ಟಕ್ಕೆ ತಾವು ಅಂದುಕೊಂಡದ್ದೂ ಇಲ್ಲ. ಅಂಥಾದ್ದು ಅವರ ಶಿವಭಕ್ತಿ.

೯

ನನ್ನ ಮಾತಾಮಹಿ

ನನ್ನ ಅಜ್ಜಿ ಸಾಕಮ್ಮನವರು ತುಂಬ ಮುಪ್ಪಿನವರೆಗೂ ಆರೋಗ್ಯದಿಂದ ಬಾಳಿದರು. ಪ್ರತಿನಿತ್ಯದ ಅಡುಗೆಯ ಕೆಲಸ ಆಕೆಯದು. ಮನೆಗೆ ಬಂದ ದವಸ ಧಾನ್ಯಗಳನ್ನು ಜೋಪಾನ ಮಾಡುವ ಜವಬ್ದಾರಿಯೂ ಆಕೆಯದು. ಅಡುಗೆ ಮನೆ ನಡುಮನೆಗಳನ್ನು ಗುಡಿಸಿ ಚೊಕ್ಕಟವಾಗಿಟ್ಟುಕೊಳ್ಳುವ ಕೆಲಸವೂ ಆಕೆಯದು. ಆಕೆ ಒಂದು ದಿನ ವಿಶ್ರಾಂತಿ ಪಡೆದವರಲ್ಲ. ಮನೆಯ ಹಣಕಾಸಿನ ಜವಾಬ್ದಾರಿಯನ್ನು ನನ್ನ ಚಿಕ್ಕತಾತ ರಾಮಣ್ಣನವರು ಹೇಗೆ ಒಂದು ದಿನವೂ ಪಾಲುಮಾರದೆ ಹೊತ್ತು ನಿರ್ವಹಿಸಿದರೋ ಅದೇ ತೆರದ ಜಾಗರೂಕತೆಯಿಂದ ಮನೆಯೊಳಗಣ ಗೃಹಕೃತ್ಯಗಳನ್ನು ಸಾಕಮ್ಮನವರು ನಡಸಿದರು.

ವೈದ್ಯ

ಆಕೆಯ ಪ್ರೀತಿಯು ಮನೆಯ ಜನಕ್ಕೆಲ್ಲ, ನೆರೆಹೊರೆಗೆಲ್ಲ ವಜ್ರಕವಚದಂತಿತ್ತು. ಮುನಿದವರಿಗೆ ಆಕೆ ಸಮಾಧಾನ ಹೇಳುವರು. ನೊಂದವರಿಗೆ ಮನಶ್ಶಾಂತಿ ಹೇಳುವರು. ರೋಗಿಷ್ಠರಿಗೆ ಉಪಚಾರಮಾಡುವರು. ಆಕೆಗೆ ಹಳೆ ಕಾಲದ ಆಯುರ್ವೇದ ವೈದ್ಯ ಒಂದಿಷ್ಟು ತಿಳಿದಿತ್ತು. ಪುಲ್ಲಂಪುರುಚಿ, ಹೊಂದೆಲಗ, ಬಿಲ್ವಪತ್ರೆ, ಹೊನಗೊನ್ನೆ, ಚಿಲಕೀರೆ ಮೊದಲಾದ ಗಿಡಮೂಲಿಕೆಗಳ ವೈದ್ಯಕೀಯ ಗುಣ ಆಕೆಗೆ ತಿಳಿದಿತ್ತು. ಸಣ್ಣ ಸಣ್ಣ ವ್ಯಾಧಿಗಳಿಗೆ ಆಕೆಯೇ ವೈದ್ಯ ಹೇಳುತ್ತಿದ್ದರು. ನೆರೆಹೊರೆಯಲ್ಲಿ ಯಾವ ಬ್ರಾಹ್ಮಣ ಕುಟುಂಬದಲ್ಲಾದರೂ ಏನಾದರೂ ಹೆಚ್ಚು ಕಡಮೆ ನಡೆದಾಗ ಆಕೆ ತಾನಾಗಿ ಅಲ್ಲಿಗೆ ಹೋಗಿ ಸಹಾಯ ಮಾಡುವರು. ಆಕೆ ಒಬ್ಬಳೇ ೫೦ ಜನಕ್ಕೆ ಬೇಕಾದ ಅಡುಗೆಯನ್ನು ಮಾಡುವಷ್ಟು ಸಮರ್ಥಳಾಗಿದ್ದಳು.

ಕಣ್ಣುಪೊರೆ

ಆಕೆಗೆ ಕಣ್ಣುಪೊರೆ ಬಂತು. ದೃಷ್ಟಿ ಮಂದವಾಯಿತು. ಆ ಕಾಲದಲ್ಲಿ ನೇತ್ರ ವೈದ್ಯ ಈಗಿರುವಷ್ಟು ಮಾತ್ರ ಕೂಡ ಬೆಳೆದಿರಲಿಲ್ಲ. ಆದರೆ 'ನೇಟಿವ್' ವೈದ್ಯರು ಶಸ್ತ್ರಚಿಕಿತ್ಸೆ ತಮ್ಮಿಂದ ನಡೆದೀತೆಂದು ಹೇಳಿಕೊಳ್ಳುವವರು ಅಲ್ಲಲ್ಲಿದ್ದರು. ನನ್ನ ತಾತ ಶೇಷಗಿರಯ್ಯನವರೂ ಚಿಕ್ಕತಾತ ರಾಮಣ್ಣನವರೂ ಆ ನಾಟಿವೈದ್ಯರಿಂದ ಚಿಕಿತ್ಸೆ ಮಾಡಿಸುವ ಪ್ರಸ್ತಾಪವನ್ನು ನಾಲ್ಕೆಂಟು ಸಲ ಮಾಡಿದರೂ ಆಕೆ ಆ ಯೋಚನೆಯನ್ನು ಖಂಡಿತವಾಗಿ ಬಿಟ್ಟು ಬಿಡತಕ್ಕದ್ದೆಂದು ಉತ್ತರ ಹೇಳುತ್ತಿದ್ದಳು. "ನಾನು ಅನುಭವಿಸಬೇಕೆಂದು ದೈವಸಂಕಲ್ಪವಿದ್ದರೆ ಅದಕ್ಕೆ ಅಡ್ಡಿ ಬರಲು ಯಾವ ಮನುಷ್ಯನಿಂದ ಆದೀತು? ನನ್ನ ಪಾಡನ್ನು ನಾನು ಪಡುತ್ತೇನೆ" –ಎಂದು ಹೇಳುತ್ತಿದ್ದರು.

ನಾನು ಕಣ್ಣಾರೆ ಕಂಡಿರುವ ಒಂದು ಸಂಗತಿಯನ್ನು ಇಲ್ಲಿ ಹೇಳುತ್ತೇನೆ. ಮುಳುಬಾಗಲಿನಲ್ಲಿ ಕುಡಿಯುವ ನೀರಿಗಾಗಿ ನಮ್ಮ ಮನೆಯಿಂದ ಸುಮಾರು ಒಂದೂವರೆ ಮೈಲಿ ದೂರದಲ್ಲಿರುವ ಬಾವಿಗೆ ಹೋಗಬೇಕಾಗಿತ್ತು. ಆ ಬಾವಿಗೆ ಗೋಪಾಲಕೃಷ್ಣಸ್ವಾಮಿ ಬಾವಿ ಎಂದು ಹೆಸರು. ಅದು ಬೆಟ್ಟದ ಅಡಿಯಲ್ಲಿ ಗೋಪಾಲಕೃಷ್ಣಸ್ವಾಮಿಯ ದೇವಾಲಯದ ಹಿಂಭಾಗದಲ್ಲಿದ್ದ ಬಾವಿ. ಆ ಬಾವಿಗೆ ಸುತ್ತುಗೋಡೆ ಮೊದಲಾದದ್ದೇನೂ ಇರಲಿಲ್ಲ; ನೆಲಬಾವಿ. ನೀರಿಗೆ ಒಂದು ಆಳಕ್ಕಿಂತ ಹೆಚ್ಚು ಸೇದಬೇಕಾಗಿರಲಿಲ್ಲ. ತಿಳಿಯಾದ ಸಿಹಿನೀರು, ಎಲ್ಲರಿಗೂ ಬೇಕಾದದ್ದು. ಸಾಕಮ್ಮನವರು ಪ್ರತಿದಿನವೂ ಈ ಬಾವಿಯಿಂದ ನೀರು ತರುತ್ತಿದ್ದರು.

ಬೆಳಿಗ್ಗೆ ಸುಮಾರು ೮ ಘಂಟೆಗೆ ಸ್ನಾನಾನಂತರ ವಿಭೂತಿ ಹಚ್ಚಿ ತಮ್ಮ ಕೈಯಲ್ಲಿ ಒಂದು ದೊಡ್ಡ ತಪ್ಪಲೆ, ಅದರ ಮೇಲೆ ಒಂದು ಸಣ್ಣ ತಪ್ಪಲೆ, ಅದರ ಮೇಲೊಂದು ತಂಬಿಗೆ ಇಷ್ಟನ್ನು ಬಲಗಡೆಯೂ ಇನ್ನೊಂದು ಸಣ್ಣ ತಪ್ಪಲೆ ಒಂದು ತಂಬಿಗೆಯನ್ನು ತಲೆಯ ಮೇಲೆಯೂ ಮತ್ತೊಂದು ಬಿಂದಿಗೆ, ಒಂದು ಹಗ್ಗ, ಒಂದು ಬಟ್ಟೆ ಇಷ್ಟನ್ನು ಇನ್ನೊಂದು ಕೈಯಲ್ಲಿಯೂ ಹಿಡಿದು ಬಾವಿಗೆ ಹೋಗುವರು. ಅಲ್ಲಿ ಬಿಂದಿಗೆಯಿಂದ ನೀರು ಸೇದಿ ಬಟ್ಟೆಯಿಂದ ಶೋಧಿಸಿ ಪಾತ್ರೆಗಳಿಗೆ ತುಂಬುವರು. ತುಂಬಿದ ಪಾತ್ರೆಗಳನ್ನು ಹೊತ್ತುಕೊಂಡು, ಕೈಯಲ್ಲಿದ್ದ ಬಿಂದಿಗೆಯಲ್ಲಿ ಸಹ ನೀರು ತುಂಬಿಕೊಂಡು ಮನೆಗೆ ಬರುವರು. ತಲೆಯ ಮೇಲಿನ ಪಾತ್ರೆಗಳ ನೀರು ನಮ್ಮ ಪುರೋಹಿತರು ವೆಂಕಟರಾಮಭಟ್ಟರ ಮನೆಗೆ. ಬಗಲಿನಲ್ಲಿ ಸಂದದ್ದು ಮನೆಗೆ. ಬಿಂದಿಗೆಯಲ್ಲಿ ತಂದದ್ದು

ನಮ್ಮ ಮನೆಗೆ ಬರುತ್ತಿದ್ದ ಜನ ಕೇಳಿದಾಗ ಅವರಿಗೆ ಕುಡಿಯಲು ವಿನಿಯೋಗವಾಗುತ್ತಿತ್ತು. ಬೇಸಗೆಯ ದಿನಗಳಲ್ಲಿ ಈ ನೀರಿಗಾಗಿಯೇ ನಮ್ಮ ಮನೆಗೆ ಜನ ಬರುತ್ತಿದ್ದುದುಂಟು.

ಜನದ ಸೌಜನ್ಯ

ಒಂದು ವಿಶೇಷ ಸಂಗತಿ. ಸಾಕಮ್ಮನವರಿಗೆ ಕಣ್ಣಿನಲ್ಲಿ ಪೊರೆ ಬಂದು ದೃಷ್ಟಿ ಹೋಗಿತ್ತೆಂದು ಹೇಳಿದನಲ್ಲವೆ. ಇದರಿಂದ ಅವರ ದಿನಗಟ್ಟಲೆ ಕೆಲಸಕ್ಕೆ ಎಷ್ಟು ಮಾತ್ರವೂ ಅಡ್ಡಿಯಾಗಲಿಲ್ಲ. ಅವರು ಮಡಿಯುಟ್ಟು ಬಾವಿಗೆ ಹೋಗುತ್ತಿದ್ದಾಗಲೂ ಅಲ್ಲಿಂದ ಹಿಂದಕ್ಕೆ ಬರುತ್ತಿದ್ದಾಗಲೂ ಅವರಿಗೆ ಮೈಲಿಗೆಯಾಗುವ ಭಯವೇ ಇರಲಿಲ್ಲ. ಅವರು ಬರುತ್ತಿದ್ದುದನ್ನು ಜನ ನೋಡಿದ ಕೂಡಲೆ ತಾವು ತಾವಾಗಿ ಹಿಂದಕ್ಕೆ ಸರಿಯುತ್ತಿದ್ದರು. ಅವರು "ಅಮ್ಮಗಾರು ವಸ್ತುನಾರು, ದಾವ ವಿಡರಾ" (ಅಮ್ಮನವರು ಬರುತ್ತಿದ್ದಾರೆ, ದಾರಿ ಬಿಡೊ) ಎಂದು ಹೇಳಿ ದಾರಿ ಬಿಟ್ಟುಕೊಡುತ್ತಿದ್ದರು.

ಅಂತರ್ಬೋಧೆ

ಸಾಕಮ್ಮನವರು ಅಡುಗೆಗೆ ಕುಳಿತಾಗ ಅವರು ಯಾವಾಗಲೂ ಅಲ್ಲಿ ಪಕ್ಕದಲ್ಲಿರಿಸಿಕೊಂಡಿದ್ದ ಒಂದು ಬಟ್ಟಲಿನಿಂದ ಒಂದು ಚಿಟಿಕೆ ಮಂತ್ರಾಕ್ಷತೆಯನ್ನು ಎತ್ತಿ ದೇವರ ಹೆಸರು ಹೇಳಿ ಒಲೆಯೊಳಕ್ಕೆ ಹಾಕಿ ಕೈಮುಗಿಯುವರು. ಆಮೇಲೆ ಅಗ್ನಿಸ್ಥಾಪನೆ, ಎಸರು. ಎಷ್ಟು ಹೊತ್ತಿಗೆ ಹದವಾದೀತೆಂಬುದು ಅವರಿಗೆ ಅಂದಾಜು. ಆ ಹೊತ್ತಿಗೆ ಸರಿಯಾಗಿ ಸೌಟಿನಿಂದ ಅಕ್ಕಿಯನ್ನೋ ಬೇಳೆಯನ್ನೋ ಮೇಲಕ್ಕೆತ್ತಿ ಕೈಮುಟ್ಟಿ ಅದು ಪಕ್ವವಾಗಿದೆ ಎಂದು ತಿಳಿದುಕೊಳ್ಳುವರು. ಆಮೇಲೆ ಸಾರಿಗೆ ಹುಳಿ ಸೇರಿಸುವಾಗ ಮಾತ್ರ ಅವರಿಗೆ ಸಹಾಯ ಅವಶ್ಯವಾಗುವುದು. ಆಗ ತನ್ನ ಮಗಳನ್ನು (ನನ್ನ ತಾಯಿಯನ್ನು) ಕರೆದು ಸಾರಿನ ಬಣ್ಣ ನೋಡು ಎಂದು ಹೇಳುವರು. ಆಕೆಗೆ ತಿಳಿಯಬೇಕಾಗಿದ್ದದ್ದು ಬಣ್ಣ, ಅದರ ಮೇಲೆ ಎದ್ದಿರುವ ಹಬೆ, ಅದರ ಘಮಲು, ಇಂಥಾದ್ದು. ಇದನ್ನು ಕಣ್ಣಿನಿಂದಲೇ ತಿಳಿಯಬೇಕು. ಈ ತಪಶೀಲನ್ನು ತಿಳಿದುಕೊಂಡಮೇಲೆ ಮಿಕ್ಕ ಪಾಕಕ್ರಿಯೆಯನ್ನು ತಾವೇ ಮಾಡುವರು. ಇದೇ ಪಳಕ. ಕೈಪಳಕದಿಂದಲೇ ಅಡುಗೆಯ ರುಚಿ. ಪಳಕವನ್ನು ಹೇಳಿಕೊಡಲಾಗದು. ಅದನ್ನು ಅಡುಗೆ ಮಾಡುವವರು ತಾವಾಗಿ ಕಂಡುಕೊಳ್ಳುತ್ತಾರೆ. ಅದು ಒಂದು Intuition (ಅಂತರ್ಬೋಧೆ). ಸಾಕಮ್ಮನವರಿಗೆ ಭಗವಂತನು ಕೊಟ್ಟಿದ್ದದ್ದು ಈ ಅಂತರ್ಬೋಧೆಯನ್ನು. ನನ್ನ ತಾತಂದಿರು ಮುಳುಬಾಗಿಲಿಗೆ ಬಂದು ಊಟ ಮಾಡುತ್ತಿದ್ದ ಕಾಲದಲ್ಲಿ ಸಾಕಮ್ಮನವರನ್ನು ಕುರಿತು. “ಅಕ್ಕನವರೇ, ಈ ಸಾರನ್ನ ಒಂದು ಶೀಷೆಯಲ್ಲಿ ಹಾಕಿಕೊಟ್ಟರೆ ನಾನು ಕೋಲಾರಕ್ಕೆ ತೆಗೆದುಕೊಂಡು ಹೋಗುತ್ತೇನೆ” ಎನ್ನುತ್ತಿದ್ದರು. ಆಕೆ “ಈ ಮುಸುರೆಯನ್ನು ಯಾಕೆ?” ಎನ್ನುತ್ತಿದ್ದರು.

ನೇತ್ರಚಿಕಿತ್ಸೆ

ಕಡೆಗೆ ಸಾಕಮ್ಮನವರಿಗೆ ನೇತ್ರಚಿಕಿತ್ಸೆ ಆಯಿತು. ಯಾರೋ ಪಲಮನೇರಿ ಅಥವಾ ಪೆನುಕೊಂಡ ಕಡೆಯ ಜನ–ಬಹುಶಃ ಮುಸಲ್ಮಾನರು–ಏನೋ ಸೊಪ್ಪಿನ ರಸ ಹಾಕಿ ಪೊರೆ ತೆಗೆದೆವೆಂದು ಹೇಳಿಕೊಂಡರು. ಆ ಚಿಕಿತ್ಸೆಯಿಂದ ಆಕೆ ಎಂಟುಹತ್ತು ದಿನ ನೋವು ಪಟ್ಟರು–ತುಂಬ ನೋವು. ಆಗ ಹೇಳಿಕೊಳ್ಳುತ್ತಿದ್ದ ಒಂದು ಕೀರ್ತನೆಯ ತುಣುಕು ಇನ್ನೂ ನನ್ನ ನೆನಪಿನಲ್ಲಿ ಉಳಿದುಕೊಂಡಿದೆ:

ಕಣ್ಣುನೋವು ತಾಳಲಾರೇ
ಪನ್ನಗಶಯನಾ ರೇ
ನಿನ್ನ ನಂಬಿದೆ ಮುರಾರೇ
ಎನ್ನ ಪಾಲಿಸೋ ದೊರೇ ॥

ಎಂಟು ಹತ್ತು ದಿನವಾದ ಮೇಲೆ ನೋವು ಇಳಿಯಿತು. ದೃಷ್ಟಿ ಬಹು ಕೊಂಚವಾಗಿ ಬಂತು. ಆಮೇಲೆ ಆಕೆ ಹೇಳುತ್ತಿದ್ದರು: “ಈ ಮಂಕುನೋಟಕ್ಕೆ ಅಷ್ಟು ಹಣ ಯಾತಕ್ಕೆ ಖರ್ಚುಮಾಡಿದಿರಪ್ಪಾ? ಇದರಿಂದ ನನಗೆ ಏನು ಪ್ರಯೋಜನ? ಇದು ಇಲ್ಲದೆ ಏನು ಕಷ್ಟವಾಯಿತು?” ಎಂದು. ಆದರೂ ನನ್ನ ತಾತಂದಿರಿಗಿಬ್ಬರಿಗೂ ಏನೋ ಒಂದು ಸಮಾಧಾನ. ಸಾಕಮ್ಮನವರು ದೇವರ ದೀಪಕ್ಕೆ ತಾವೇ ಎಣ್ಣೆ ಬತ್ತಿ ಹಾಕಿಕೊಳ್ಳುವ ಮಟ್ಟಿಗಾದರೂ ಆಯಿತಲ್ಲ–ಎಂಬುದು ಅವರ ತೃಪ್ತಿ.

ಸಾಕಮ್ಮನವರಿಗೆ ಪುರಾಣಕಥೆಗಳೂ ದೇವರನಾಮಗಳೂ ತೆಲುಗುನೀತಿ ಪದ್ಯಗಳೂ ನೂರುನೂರಾಗಿ ಬಾಯಿಗೆ ಬರುತ್ತಿದ್ದವು. ನಾನು ದಿನದಿನವೂ ಹಾಸುಗೆಯಿಂದೇಳುತ್ತಿದ್ದದ್ದು ಬಹುಶಃ ಆಕೆಯ ಹಾಡಿಕೆಯ ನಾದದಿಂದ. ಇದು ಭೂಪಾಳಿ ರಾಗದಲ್ಲಿ:

ನಾರಾಯಣ ಎನ್ನು ಮನವೇ
ನಿನ್ನ ನಾಲಿಗೆಯೊಳು ಮುಳ್ಳು ಮುರಿದಿಹುದೇ
ಕಲ್ಲು ಕವಿದಿಹುದೇ ಹರೀ-ನಾರಾಯಣ ಎನ್ನು ಮನವೇ ॥

೧೦

ಅವಿಭಕ್ತ ಕುಟುಂಬ

ನನ್ನ ಮನೆ ಹಿರಿಯರ ಕಥೆಯನ್ನು ಚಿಂತಿಸಿದಾಗಲೆಲ್ಲ ಒಂದು ಕಳವಳ ನನ್ನನ್ನು ಎದುರಿಸುತ್ತದೆ. ಅವಿಭಕ್ತ ಕುಟುಂಬ (ಜಾಯಿಂಟ್ ಫ್ಯಾಮಿಲಿ) ಪದ್ಧತಿಗೆ ನಮ್ಮ ದೇಶದಲ್ಲಿ ಭವಿಷ್ಯವುಂಟೆ? ಆ ಪದ್ಧತಿ ಈಗ ಕ್ಷೀಣಿಸುತ್ತಿದೆಯಲ್ಲವೆ? ಆ ಪದ್ಧತಿ ಒಟ್ಟು ದೃಷ್ಟಿಯಿಂದ ಒಳ್ಳೆಯದೆಂದು ನಾವು ನಿಶ್ಚಯಿಸಿದರೆ, ಅದನ್ನು ಉಳಿಸಿಕೊಳ್ಳುವುದು ಇಂದಿನ ಸಂದರ್ಭದಲ್ಲಿ ಸಾಧ್ಯವೆ?

ಅವಿಭಕ್ತ ಪದ್ಧತಿಯಲ್ಲಿ ನನಗೆ ತೋರುವ ಗುಣ ಅದು ಆತ್ಮವಿಸ್ತಣಕ್ಕೆ ಅನುಕೂಲವಾದದ್ದೆಂಬುದು. ಮನೆಯಲ್ಲಿ ನಾಲ್ಕೈದು ಮಂದಿ ಅಣ್ಣತಮ್ಮಂದಿರು ಒಟ್ಟಾಗಿ ಬಾಳಿಕೊಂಡಿದ್ದರೆ ಅವರಲ್ಲಿ ಪ್ರತಿಯೊಬ್ಬನೂ ತನ್ನ ಸ್ವತ್ವವನ್ನು ಉಳಿದ ನಾಲ್ಕೈದುಮಂದಿ ಅಣ್ಣತಮ್ಮಂದಿರುಗಳ ಸ್ವತ್ವಗಳಲ್ಲಿ ಏಕೀಭವಿಸುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಾನೆ. ಆ ನಾಲ್ವರೈವರ ಹೆಂಡಂದಿರುಗಳೂ ಹಾಗೆಯೇ ಪರಸ್ಪರವಾಗಿ ಅಭೇದ ದೃಷ್ಟಿಯಿಂದ ನಡೆದುಕೊಳ್ಳುವುದನ್ನು ಕಲಿಯುತ್ತಾರೆ. ಒಬ್ಬರು ಉಟ್ಟ ಪಂಚೆಯನ್ನು ಮತ್ತೊಬ್ಬರು ಉಡುವುದೂ ಅಪರೂಪವಲ್ಲ.

ಆತ್ಮವಿಸ್ತಾರ

ಈ ಅನ್ಯೋನ್ಯಭಾವದಿಂದ ಅವರುಗಳ ಮನಸ್ಸಿನ ಸಹಾನುಭೂತಿ ಗುಣವು ವಿಸ್ತಾರ ಪಡುತ್ತದೆ. ಇದೇ ಆತ್ಮವಿಸ್ತಾರದ ದಾರಿ. ಅವರಲ್ಲಿ ಕಡಿಮೆ ಶಕ್ತಿಯವನಿರುತ್ತಾನೆ. ಕಡಮೆ ಸಂಪಾದನೆಯವನಿರುತ್ತಾನೆ. ಗುಣದಲ್ಲಿ ಕಡಿಮೆಯಾದವನು ಕೂಡ ಇರುತ್ತಾನೆ. ಅಂಥವನಿಗೆ ಹೆಚ್ಚು ಗುಣವಂತರ, ಹೆಚ್ಚು ಶಕ್ತಿವಂತರ ಸಂಪರ್ಕ ನಿರಂತರವಾಗಿರುವುದರಿಂದ ಅವನ ಸಣ್ಣತನ ಮರೆತಂತೆಲ್ಲ ಒಂದು ದೊಡ್ಡತನ ರೂಢಿಗೆ ಬರುತ್ತದೆ. ಇದೇ ಹೃದಯವೈಶಾಲ್ಯ. ಇದು ತನ್ನದು ಇದು ಅವನದು ಎಂಬ ಭೇದಬುದ್ಧಿ ಕಳೆದುಹೋಗಬೇಕಾದರೆ ಮನುಷ್ಯನು ಇತರರೊಡನೆ ಬೆರೆತು ಅವರ ಕಷ್ಟಗಳೂ

ದುಃಖಗಳೂ ದುರ್ಬಲತೆಗಳೂ ಅವು ತನ್ನವೇ ಎಂಬಂತೆ ಅನುಭವಿಸಬೇಕು. ಈ ಅಭೇದವೃತ್ತಿಯ ಅಭ್ಯಾಸಕ್ಕೆ ಅವಿಭಕ್ತ ಕುಟುಂಬ ಸಹಾಯಕಾರಿ. ವೇದಾಂತತತ್ತ್ವಜ್ಞರು,

ಸರ್ವಭೂತಸ್ಥಮಾತ್ಮಾನಂ
ಸರ್ವಭೂತಾನಿ ಚಾತ್ಮನಿ

ಎಂಬ ರೀತಿಯನ್ನು ಅಭ್ಯಾಸ ಮಾಡುವುದೇ ಆತ್ಮಶಾಂತಿಗೂ ಸಾಧನವೆಂದು ಉಪದೇಶಿಸಿದ್ದಾರೆ. ಈ ಸರ್ವಾತ್ಮಭಾವನೆಯು ಬಾಯ ಮಾತಿಗೆ ಸುಲಭವಾಗಿರುವಷ್ಟು ಮಟ್ಟಿಗೆ ನಿತ್ಯಾನುಷ್ಠಾನಕ್ಕೆ ಸುಲಭವಲ್ಲ. ಅದು ನಮ್ಮ ದಿನಚರಿಯಲ್ಲಿ ಅನುಭವಕ್ಕೆ ಬರಬೇಕಾದರೆ ನಮಗೆ ಅಂದಂದಿನ ಕೋಪತಾಪ ಲೋಭಮತ್ಸರಗಳನ್ನು ಅದುಮಿಕೊಳ್ಳುತ್ತ ಅನ್ಯೋನ್ಯತಾ ತತ್ತ್ವವನ್ನು ಶಿಕ್ಷಣ ಮಾಡಿಸಿಕೊಡುವ ಪಾಠಶಾಲೆ ಅವಿಭಕ್ತ ಕುಟುಂಬ.

ಅನಾನುಕೂಲ

ಈ ಮಾತನ್ನು ಹೇಳಿದೊಡನೆಯೇ ಹೇಳಬೇಕಾದ ಮಾತು ಆ ಪದ್ಧತಿಯಲ್ಲಿ ಇರುವ ಅನಾನುಕೂಲತೆಯದು. ಕುಟುಂಬ ದೊಡ್ಡದಾದಷ್ಟೂ ಮುಜುಗರಕ್ಕೆ ಕಾರಣಗಳು ಹೆಚ್ಚುತ್ತವೆ. ಮನೆಗೆ ಹಣ್ಣು ತರುವುದಕ್ಕೆ ಹತ್ತು ರೂಪಾಯಿ ಇಲ್ಲದಾಗ ಯಾರಾದರೂ ಒಂದು ರೂಪಾಯವನು ನಾಲ್ಕು ಮಾವಿನಹಣ್ಣನ್ನು ತಂದರೆ ಅದನ್ನು ಇಪ್ಪತ್ತು ಬಾಯಿಗೆ ಹಂಚಬೇಕಾಗುತ್ತದೆ. ಐದು ಹೋಳನ್ನು ಬಯಸುವ ಬಾಯಿಗೆ ಸಿಕ್ಕುವುದು ಒಂದೆ ಹೋಳು. ಯಾಕೆ ಈ ಕಾರ್ಪಣ್ಯ? ತನ್ನ ಗಂಡನು ತನ್ನ ರೂಪಾಯಿ ಖರ್ಚು ಮಾಡಿ ಹಣ್ಣು ತಂದಿರುವಾಗ, ಅದರಲ್ಲಿ ಇತರರ ಮಕ್ಕಳಿಗೆ ಭಾಗವೇಕೆ?

ಒಂದು ಪ್ರಕರಣ

ನಾನು ಕಣ್ಣಾರ ಕಂಡಿರುವ ಒಂದು ಸಂದರ್ಭವನ್ನು ನಿರೂಪಿಸುತ್ತೇನೆ. ಒಬ್ಬ ದೊಡ್ಡ ಮನುಷ್ಯನಿಗೆ ನಾಲ್ಕು ಮಂದಿ ಗಂಡುಮಕ್ಕಳು, ಜೊತೆಗೆ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಹಿರಿಯ ಮಗನಿಗೆ ಸಂಬಳ ಐದು ನೂರು ಬರುತ್ತಿತ್ತು. ಎರಡನೆಯವನಿಗೆ ನಾನೂರು. ಮೂರನೆಯವನಿಗೆ ಆರುನೂರು. ನಾಲ್ಕನೆಯವನು ಕಾಲೇಜಿನಲ್ಲಿ ಓದುತ್ತಿದ್ದವನು. ಅವನಿಗೂ ಭಾರಿ ಸಂಬಳದ ಉಮೇದು ಇತ್ತು. ತಂದೆ ಬಡವನೇನೂ ಅಲ್ಲ. ಮನೆ, ನಗದು ಮೊದಲಾದ ಸಂಪತ್ತು ಆತನಿಗೂ ಇತ್ತು. ಆತ ಸಂಪಾದನೆಯನ್ನೂ ಮಾಡುತ್ತಿದ್ದ.

ಹೀಗಿದ್ದ ಆ ಅವಿಭಕ್ತ ಕುಟುಂಬದಲ್ಲಿ ಹಿರಿಯ ಮಗ ಒಂದು ದಿನ ಸಂಜೆ ಮನೆಗೆ ಹಿಂತಿರುಗಿದಾಗ ಕೈಯಲ್ಲಿ ಒಂದು ಅಂಗಡಿ ತಿಂಡಿಯ ಪೊಟ್ಟಣವನ್ನು ತಂದು ನೇರವಾಗಿ ಬಿರಬಿರನೆ ಮಹಡಿ ಹತ್ತಿ ತನ್ನ ಕೋಣೆಯಲ್ಲಿ ಅದನ್ನಿಟ್ಟು ಬಂದ. ರಾತ್ರಿ ಭೋಜನಾ ನಂತರ ಆತನೂ ಆತನ ಹೆಂಡತಿಯೂ ತಮ್ಮ ಕೋಣೆಯಲ್ಲಿ ಆ ತಿಂಡಿಯನ್ನು ತಿಂದು ತಮ್ಮ ಮಗುವಿಗಾಗಿ ಒಂದು ಚೂರು ಲಾಡು ಒಂದೆರಡು ಕಾರಾಶೇವ ಮುರುಕನ್ನೂ ತೆಗದಿಟ್ಟಿದ್ದು ಮಾರನೆಯ ದಿನ ಬೆಳಗ್ಗೆ ಆ ಮಗುವಿಗೆ ಕೊಟ್ಟರೆಂದು ತೋರುತ್ತದೆ. ಅಲ್ಲಿಂದೀಚೆಗೆ ನಡೆದದ್ದು ಪ್ರಕಟ. ಆ ಮುದ್ದುಮಗು ತನ್ನ ಸಂತೋಷವನ್ನು ತನ್ನ ಚಿಕ್ಕಪ್ಪನ ಮಕ್ಕಳಿಗೆ ತೋರಿಸಿತು. ಈ ಚಿಕ್ಕಪ್ಪನ ಮಕ್ಕಳು ಸುಮ್ಮನಿರುತ್ತವೆಯೇ? ಷುರುವಾಯಿತು ವಾಲಿ-ಸುಗ್ರೀವರ ಯುದ್ಧ. ಮಲಗುವ ಕೋಣೆಯಲ್ಲಿ ಪ್ರಾರಂಭವಾದದ್ದು ಬೀದಿಗೆ ಬಂದು ಓರಗಿತ್ತಿಯರಲ್ಲಿ ಬಿಸಿಬಿಸಿ ಉಸಿರಿಗೆ ಅವಕಾಶವಾಯಿತು.

ಇಂಥಾದ್ದು ಅವಿಭಕ್ತ ಕುಟುಂಬದಲ್ಲಿ ಹುಟ್ಟುವ ವಾತಾವರಣ. ಇದನ್ನು ಎಷ್ಟು ಕಾಲ ಸಹಿಸಲಾದೀತು?

ಮೂಲಕಾರಣ

ಈ ಗೃಹಛಿದ್ರಕ್ಕೆ ಮೂಲಕಾರಣವಾದದ್ದು ಯಾವುದು? ಸಂಬಳಗಿತ್ತಿಯರ ಸಂಬಳದಲ್ಲಿದ್ದ ಹೆಚ್ಚುಕಡಮೆ. ಎಂದು ನಮ್ಮ ಸಮಾಜದಲ್ಲಿ ದವಸಧಾನ್ಯಗಳ ಸಂಪತ್ತು ದರ್ಜೆಯಲ್ಲಿ ಹಣಕಾಸಿನ ಸಂಪತ್ತಿಗಿಂತ ಬೀಳೆನಿಸಿತೋ ಅಂದು ನಮ್ಮ ಸಮಾಜ ಒಂದು ಕ್ರಾಂತಿಗೊಳಗಾಯಿತು. ಪ್ರಪಂಚದಲ್ಲಿ ಎಲ್ಲ ದೇಶಗಳಲ್ಲಿಯೂ ಸಮಾಜಕ್ರಾಂತಿ ಪ್ರಾರಂಭವಾದದ್ದು ನಾಣ್ಯದ ಕಾರಣದಿಂದ. ನಾಣ್ಯ–ಚಿನ್ನದ್ದಾಗಲಿ ತಾಮ್ರದ್ದಾಗಲಿ, ಬೇರೆ ಲೋಹದ್ದಾಗಲಿ, ಕಾಗದದ್ದೇ ಆಗಲಿ–ಅದೇ ಧನ. ಭೂವ್ಯವಸಾಯದ ಉತ್ಪತ್ತಿ ಧನಕ್ಕೆ ಸಮಾನವಲ್ಲ. ಇದು ಎರಡು ಮೂರು ಅರ್ಥಗಳಲ್ಲಿ:

1. ಬೇರೆ ಪದಾರ್ಥವನ್ನು ನಾಣ್ಯದಿಂದ ಕೊಂಡುಕೊಳ್ಳುವುದು ಸುಲಭವಾಗಿರುವಷ್ಟು ಮಟ್ಟಿಗೆ ಪದಾರ್ಥದ ಬದಲಾಬದಲಿಯಿಂದ (Barter) ಸಾಧ್ಯವಿಲ್ಲ, ಈ ಬದಲಾಬದಲಿಯ ಸೌಲಭ್ಯ ನಾಣ್ಯದ ದೊಡ್ಡ ಗುಣ.
2. ನಾಣ್ಯವನ್ನು ಬಚ್ಚಿಡುವುದು ಸುಲಭವಾದಷ್ಟು ಮಟ್ಟಿಗೆ ದವಸಧಾನ್ಯಗಳನ್ನು ಬಚ್ಚಿರಿಸುವುದು ಸುಲಭವಲ್ಲ. ಈ ಕೈಯಾಟದ ಸೌಲಭ್ಯ ನಾಣ್ಯದ ಎರಡನೆಯ ಗುಣ.
3. ನಾಣ್ಯವನ್ನು ಎಣಿಸುವಷ್ಟು ಸುಲಭವಾಗಿ ದವಸ ಧಾನ್ಯಗಳನ್ನು ಎಣಿಸಿ ಗೊತ್ತುಮಾಡುವುದು ಸುಲಭವಲ್ಲ. ಈ ಲೆಕ್ಕಾಚಾರದ ಸೌಲಭ್ಯ ನಾಣ್ಯದ ಗುಣ.

ನಾಣ್ಯವು ಸಿದ್ಧ ಸಂಪತ್ತು. ಮೂವತ್ತು ದಿನ ಕಳೆದರೆ ಅದು ನಿಯಮಿತವಾದಷ್ಟು ಕೈಗೆ ಬರುತ್ತದೆ. ದವಸಧಾನ್ಯಗಳಾದರೋ ಮಳೆ ಗಾಳಿ ಬಿಸಿಲುಗಳನ್ನು ಕಾದು ನೋಡಿಕೊಂಡಿರುತ್ತವೆ. ಆದದ್ದರಿಂದ ಎಲ್ಲರೂ ನಾಣ್ಯ ಸಂಬಳಕ್ಕೆ ತಮ್ಮನ್ನು ಮಾರಿಕೊಳ್ಳಲು ಸಿದ್ಧರಾಗಿದ್ದಾರೆ. ಭೂವ್ಯವಸಾಯ ಕಷ್ಟವಾದದ್ದು ಮತ್ತು ಅನಿಶ್ಚಿತವಾದದ್ದು. ಆದ್ದರಿಂದ ಇದು ಸಾಮಾನ್ಯ ಜನಕ್ಕೆ ಬೇಡವೆನಿಸುತ್ತದೆ.

ಎಂದು ನಾಣ್ಯದ ಸಂಬಳ ಜೀವನದ ಮುಖ್ಯಧ್ಯೇಯವಾಯಿತೋ ಅಂದು ಕುಟುಂಬದಲ್ಲಿ ಬೇರೆ ವಿಂಗಡತನಕ್ಕೆ ಅವಕಾಶ ದೊರೆಯಿತು. ಮೊದಲನೆಯದಾಗಿ, ಸಂಬಳ ಎಲ್ಲರದೂ ಒಂದೇ ಮಟ್ಟದ್ದಾಗಿರುವುದಿಲ್ಲ. ಎರಡನೆಯದಾಗಿ, ಅವನವನ ಸಂಪಾದನೆ ಅವನನದು. ಹಾಗೆಯೆ ಅವನವನ ಖರ್ಚು ಅವನವನ ಇಷ್ಟದಂತೆ. ಒಬ್ಬನು ಇನ್ನೊಬ್ಬನನ್ನು ಕೇಳಬೇಕಾಗಿಲ್ಲ. ಮೂರನೆಯದಾಗಿ, ಎಲ್ಲಿ ಸಂಬಳವೋ ಅಲ್ಲಿ ಜೀವನವೆಂದಾದ ಮೇಲೆ

ಅಣ್ಣತಮ್ಮಂದಿರೆಲ್ಲರೂ ಒಂದೇ ಕಡೆ ಇರುವುದು ಅಸಂಭವ. ಹೀಗೆ ಕುಟುಂಬ ಚದರಿ ಹೋಗುತ್ತದೆ.

ಒಟ್ಟಿನಲ್ಲಿ, ನಾಣ್ಯದ ಅರ್ಥಪದ್ಧತಿಯು ಅವಿಭಕ್ತ ಕುಟುಂಬ ಪದ್ಧತಿಗೆ ವಿರೋಧವಾಗಿದೆಯೆಂಬುದು ಸಿದ್ಧಾಂತ.

ಆದರೆ ಅವಿಭಕ್ತ ಕುಟುಂಬದಲ್ಲಿ ಕೆಲವು ಆಧ್ಯಾತ್ಮಿಕ ಲಾಭಗಳು ಉಂಟೆಂದು ಮೇಲೆ ಹೇಳಿತಲ್ಲ–ಆ ಲಾಭ ಬೇಡವೋ? ಗಂಡ-ಹೆಂಡತಿ ಅವರಿಗೆ ಮಿತವಾದ ಸಂತಾನವಾಗಿದ್ದರೆ ಆ ಒಬ್ಬರಿಬ್ಬರು-ಇಷ್ಟು ಮಾತ್ರ ಕುಟುಂಬವಾದರೆ ಅವರು ತಮಗಿಷ್ಟವಾದದನ್ನು ಉಂಡು, ಇಷ್ಟವಾದದ್ದನ್ನುಟ್ಟು ತೊಟ್ಟು, ಐಹಿಕ ಸುಖವನ್ನಾದರೂ ಪಟ್ಟೆವೆಂದುಕೊಳ್ಳಬಹುದು. ಇಷ್ಟರಮೇಲೆ ನಮಗೆ ಅನುಭವದಿಂದ ತಿಳಿದಿರುವ ವಿಷಯ ಐಹಿಕ ಸಂಪತ್ತು-ಇಷ್ಟು ತಾನೆ? ಇದನು ಹಾಳು ಮಾಡಿಕೊಂಡು ಅಧ್ಯಾತ್ಮವೆಂಬ ಯಾವುದೋ ಕಣ್ಣಿಗೆ ಕಾಣದ ಉದ್ದೇಶಕ್ಕಾಗಿ ಕಷ್ಟಸಹನೆ ಮಾಡಬೇಕೆ? ಇದು ಒಂದು ಸ್ವಾಭಾವಿಕ ಪ್ರಶ್ನೆ. ಅದು ಸ್ವಾಭಾವಿಕ ಪ್ರವೃತ್ತಿ. ಇದಕ್ಕೆ ಹೇಳಬಹುದಾದ ಸಮಾಧಾನ ಯಾರಿಗೂ ಆಧ್ಯಾತ್ಮದಲ್ಲಿ ಯತ್ಕಿಂಚಿತ್ತಾದರೂ ಗಮನ ಉಂಟೋ ಅಂಥವರಿಗೆ ಮಾತ್ರ ಹಿಡಿಸುವಂಥಾದ್ದು. ಆಧ್ಯಾತ್ಮದ ಗಂಧವೇ ಇಲ್ಲದವರಿಗೆ ಇಂಥ ಆಧ್ಯಾತ್ಮಿಕ ನೀತಿಯನ್ನು ಹೇಳಹೊರಡುವುದು ವ್ಯರ್ಥ ಪ್ರಯತ್ನ.

ಆದರೆ ಆಧ್ಯಾತ್ಮಿಕ ನೀತಿ ಬೇಡವೆನ್ನುವವರಿಗೂ ಅದು ರುಚಿಸುವಂತೆ ಹೇಳಬೇಕಾದದ್ದು ಆಧ್ಯಾತ್ಮವಿಶ್ವಾಸವುಳ್ಳವರ ಕರ್ತವ್ಯವಾಗಿದೆ. ಆದದ್ದರಿಂದ ಒಂದೆರಡು ಮಾತನ್ನು ಬಿನ್ನಯಿಸುತ್ತೇನೆ.

ಸಂಖ್ಯಾಪರಿಮಿತಿ

ಅವಿಭಕ್ತ ಕುಟುಂಬವು ಎಂದೆಂದಿಗೂ ಹಾಗೆಯೇ ಇರಬೇಕಾದದ್ದೆಂದು ಯಾರೂ ವಾದಿಸರು. ಯಾವುದೋ ಒಂದು ಸಂದರ್ಭದಲ್ಲಿ ಕುಟುಂಬವಿಭಾಗ ಅನಿವಾರ್ಯವಾಗುತ್ತದೆಂಬುದನ್ನು ನಮ್ಮ ಧರ್ಮಶಾಸ್ತ್ರಗಳು ಮೊದಲಿಂದಲೂ ಅಂಗೀಕರಿಸಿವೆ. ದಾಯವಿಭಾಗ ಪ್ರಕರಣ. ದತ್ತಕಸ್ವೀಕಾರ ಪ್ರಕರಣ ಮೊದಲಾದವು ಧರ್ಮಶಾಸ್ತ್ರಗಳಲ್ಲಿ ಅಂತರ್ಗತವಾಗಿವೆ. ಕುಟುಂಬವಿಭಾಗವು ಶಾಸ್ತ್ರಕಾರರ ದೃಷ್ಟಿಯಲ್ಲಿತ್ತೆಂಬುದಕ್ಕೆ ಇದೇ ನಿದರ್ಶನ. ಅವಿಭಕ್ತ ಕುಟುಂಬ ಒಂದಾನೊಂದು ದಶೆಯಲ್ಲಿ ನೀತಿಪೋಷಕವಾದರೆ ಅದೇ ಕುಟುಂಬವು ಇನ್ನೊಂದು ದಶೆಯಲ್ಲಿ ನೀತಿಗೆ ಹಾನಿಕರವಾದೀತು. ಐವತ್ತು ಮಂದಿ ನೂರು ಮಂದಿ ಒಂದೇ ಕುಟುಂಬದಲ್ಲಿ ಒಟ್ಟಿಗೆ ಬಾಳುವುದೆಂದರೆ ಆಗ ಅವರಲ್ಲಿ ಯಾರಿಗೆತಾನೆ ಸಂಸಾರಸೌಖ್ಯ ಅಷ್ಟಿಷ್ಟಾದರೂ ದೊರಕೀತು? ಆಗ ಎಲ್ಲರಿಗೂ ಅಸಂತೃಪ್ತಿ, ಎಲ್ಲರಿಗೂ ಮನಸ್ತಾಪ ತಪ್ಪಿದ್ದಲ್ಲ. ಹೀಗೆಂದಮೇಲೆ ಅವಿಭಕ್ತ ಕುಟುಂಬಕ್ಕೆ ಕೂಡ ಒಂದು ಸಂಖ್ಯಾಪರಿಮಿತಿ ಇರಲೇಬೇಕಾದದ್ದೆಂದು ಅಂಗೀಕರಿಸಿದಂತಾಯಿತು.

ಇಂದಿನ ಪರಿಸ್ಥಿತಿಯಲ್ಲಿ ಕುಟುಂಬದ ಜನಸಂಖ್ಯೆ ಹಿಂದಿನಷ್ಟು ಹೆಚ್ಚಾಗಿ ಇರದೆ ಇನ್ನೂ ಕೊಂಚದ್ದಾಗ ಬೇಕಾಗಿದೆ. ಇದಕ್ಕೆ ಕಾರಣ, ಇಂದಿನ ಹೊಸ ಸಂಪದ್ವ್ಯವಸ್ಥೆ; ನಾಣ್ಯ ಪ್ರಧಾನವಾದ ಸಂಪದ್ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಕುಟುಂಬವಿಭಾಗ ಬಹು ಸಂದರ್ಭಗಳಲ್ಲಿ ಅನಿವಾರ್ಯವೆಂದೇ ಹೇಳಬೇಕಾಗಿದೆ. ಜೀವನೋಪಾಯದ ಕಾರಣದಿಂದ ಅಣ್ಣನು ಬೆಂಗಳೂರಿನಲ್ಲಿ, ತಮ್ಮನು ಮದರಾಸಿನಲ್ಲಿ, ಮತ್ತೊಬ್ಬನು ಕಲ್ಕತ್ತಾದಲ್ಲಿ, ಇನ್ನೊಬ್ಬನು ಕಲ್ಲಿಕೋಟೆಯಲ್ಲಿ ನೆಲಸಬೇಕಾಗುತ್ತದೆ. ಹೀಗೆ ಕುಟುಂಬವಿಭಾಗವು ಅನಿವಾರ್ಯವಾಗಿದೆ. ಹೀಗಿದ್ದರೂ, ಇಂಥ ವಿಷಮ ಸ್ಥಿತಿಯಲ್ಲಿ ಕೂಡ ಜೀವಕ್ಕೆ ಯತ್ಕಿಂಚಿತ್ತಾದರೂ ಆಧ್ಯಾತ್ಮ ನೀತಿಯನ್ನು ಅಭ್ಯಾಸ ಮಾಡಿಸುವ ಮಾರ್ಗವನ್ನು ನಾವು ಹುಡುಕಬೇಕಾಗಿದೆ.

ಏಕೀಭಾವ

ಆಧ್ಯಾತ್ಮ ನೀತಿಯೆಂದರೆ ಅದೇನೋ ಭಯಂಕರವಾದದ್ದೆಂದು ಯಾರೂ ಅಂದುಕೊಳ್ಳಬೇಕಾಗಿಲ್ಲ. ಅದೊಂದು ಸಾಮಾನ್ಯ ಸಂಗತಿ. ನಮ್ಮಲ್ಲಿ ನೂರರಲ್ಲಿ ತೊಂಬತ್ತು ಮಂದಿ ಅದರ ಹೆಸರನ್ನರಿಯದೆ ಆ ಗುಣವನ್ನು ಅಭ್ಯಾಸಮಾಡಿಕೊಂಡೇ ಇದ್ದಾರೆ. ನೀತಿಪ್ರಭಾವವಿಲ್ಲದೆ ಸಮಾಜದ ನಿರ್ವಹಣೆ ಸಾಧ್ಯವೇ ಆಗದು. ಆ ನೀತಿಯು ನಮ್ಮ ನಿತ್ಯವ್ಯವಹಾರದಲ್ಲಿ ಸ್ನೇಹದ ರೂಪ ತಾಳಿರುತ್ತದೆ. ಕರುಣೆಯ ರೂಪ ತಾಳಿರುತ್ತದೆ. ಮತ್ತೊಬ್ಬರ ಹಿತಕ್ಕಾಗಿ ನಾವು ಸ್ವಲ್ಪವಾದರೂ ಸ್ವಾರ್ಥತ್ಯಾಗ ಮಾಡಬೇಕೆನ್ನುವ ಉಪಕಾರಬುದ್ಧಿಯ ರೂಪವನ್ನು ತಾಳಿರುತ್ತದೆ. ನಾವು ಸ್ವಾರ್ಥತ್ಯಾಗ ಮಾಡಿದಷ್ಟು ಮಟ್ಟಿಗೆ ನಮ್ಮ ಆತ್ಮವನ್ನು ಮತ್ತೊಬ್ಬರ ಆತ್ಮದೊಡನೆ ಏಕೀಕರಣ ಮಾಡಿದಂತಾಗುತ್ತದೆ. ಈ ಸ್ವಾತ್ಮ-ಪರಾತ್ಮಗಳ ಏಕೀಭಾವದ ಅಭ್ಯಾಸವೇ ಆಧ್ಯಾತ್ಮನೀತಿ. ನಾವು ನಮ್ಮನಮ್ಮ ವೈಯುಕ್ತಿಕವಾದ, ನಮ್ಮ ಸ್ವಂತದವಷ್ಟೇ ಆದ ಸುಖದುಃಖಗಳನ್ನು ನಮ್ಮ ನೆರಹೊರೆಯವರ ಸುಖದುಃಖಗಳಲ್ಲಿ ಬೆರಸಿದಾಗ, ಅವರ ಸಂತೋಷದಲ್ಲಿ ನಾವು ಸೇರಿಕೊಂಡು ಸಂತೋಷಪಟ್ಟಾಗ, ಅವರ ದುಃಖದಲ್ಲಿ ಭಾಗಿಗಳಾಗಿ ನಾವು ದುಃಖಿಸಿದಾಗ ನಮಗೆ ಆಧ್ಯಾತ್ಮ ನೀತಿಯ ಅಭ್ಯಾಸವಾಗುತ್ತದೆ. ಇದಕ್ಕೆ ಅವಿಭಕ್ತ ಕುಟುಂಬವು ಜೀವನದಲ್ಲಿ ನಮಗೆ ಪ್ರಥಮ ಸೋಪಾನ.

ಮಮತೆ

ಕುಟುಂಬವಿಭಾಗವೆಂಬುದರಲ್ಲಿ ಎರಡು ಅಂಶಗಳು ಸೇರಿವೆ. ಮೊದಲನೆಯದು ಪಿತ್ರಾರ್ಜಿತವಾದ ಸ್ವತ್ತಿನಲ್ಲಿ ಪಾಲುಗೊಳ್ಳುವುದು; ಎರಡನೆಯದು ಅಣ್ಣ ತಮ್ಮಂದಿರುಗಳಲ್ಲೂ ಅವರ ಪುತ್ರಪೌತ್ರಾದಿಗಳಲ್ಲೂ ಮಮತೆ ಉಳಿದುಕೊಂಡಿರುವುದು.

ಈಗ ನಮಗೆ ಪ್ರಸಕ್ತವಾಗಿರುವುದು ಮಮತೆಯ ಅಂಶ. ಅನ್ಯೋನ್ಯಪ್ರೀತಿ, ಅನ್ಯೋನ್ಯಸಹಾಯಶೀಲತೆ–ಇವು ನಮಗೆ ಅಧ್ಯಾತ್ಮನೀತಿಯ ದೃಷ್ಟಿಯಿಂದ ಮುಖ್ಯವಾದವು.

ಮಮತೆ ಎಂಬ ಪದವನ್ನು ಅಪಾರ್ಥ ಮಾಡಬಾರದು. ವಾಸ್ತವವಾಗಿ ಮಮತೆ ಎಂದರೆ ನನ್ನದು ಎಂಬ ಅಭಿಮಾನ. ಅಣ್ಣನು ನನ್ನವನು, ತಮ್ಮನು ನನ್ನವನು, ಸೋದರಿಯರು ನನ್ನವರು, ಸೋದರಸೋದರಿಯರ ಮಕ್ಕಳು ನನಗೆ ಸೇರಿದವರು ಎಂಬ ಸ್ವ-ಪರಗಳ ಏಕೀಭಾವವೇ ವ್ಯಷ್ಟಿಸ್ವಾರ್ಥಕ್ಕೆ ಸುಲಭವಾದ ಮದ್ದು. ಅಲ್ಲಿ ನನ್ನದು ಎಂಬ ದರ್ಜೆಯಿಂದ 'ನನ್ನವರದು' ಎಂಬ ಅಂತಸ್ತಿಗೆ ಜೀವವನ್ನೆತ್ತುತ್ತದೆ. ನಮಗೆ ಬೇಕಾದದ್ದು ಇದು.

ಜಮೀನು ಹಂಚಿಕೆಯಾದರಾಗಲಿ, ಹಣಕಾಸು ಹಂಚಿಕೆಯಾದರಾಗಲಿ, ಚಿನ್ನರನ್ನಗಳು ಹಂಚಿಕೆಯಾದರಾಗಲಿ, ಹೃದಯದ ಅಭಿಮಾನ ಮುರಿದು ಹೋಗದೆ ಬೆಳೆಯುತ್ತಿರಲಿ. ನಾವು ಸಾಧಿಸಬೇಕಾದದ್ದು ಇದನ್ನು.

ರಕ್ತ ಸಂಬಂಧ

ಕುಟುಂಬವಿಭಾಗದ ವಿಭಾಗಪತ್ರಗಳನ್ನು ಬರೆಯುವಾಗ ಅದರಲ್ಲಿ ಒಂದು ಮಾತನ್ನು ಹೇಳುವುದು ಪೂರ್ವದಿಂದ ಬಂದಿರುವ ವಾಡಿಕೆ, ಹೀಗೆ: "ಇಲ್ಲಿಂದ ಮುಂದಕ್ಕೆ ಅವರಿಗೂ ಇವರಿಗೂ ಇರುವುದು ರಕ್ತಸಂಬಂಧವೇ ವಿನಾ ಅರ್ಥ ಸಂಬಂಧವೇನೂ ಇರುವುದಿಲ್ಲ" ಎಂದು. ಈ ರಕ್ತಸಂಬಂಧವೇ ಮಮತೆ. ಅರ್ಥ ಸಂಬಂಧವನ್ನು ಬಿಟ್ಟು ರಕ್ತ ಸಂಬಂಧವನ್ನು ನಾವು ಈಗ ಕಾಪಾಡಿಕೊಳ್ಳಬೇಕಾದದ್ದು. ಇದಕ್ಕೆ ನನಗೆ ತೋರಿದ ಒಂದೆರಡು ಹಿತಸೂಚನೆಗಳನ್ನು ಇಲ್ಲಿ ಬಿನ್ನಯಿಸುತ್ತೇನೆ.

(೧) ಕುಟುಂಬದಲ್ಲಿ ಯಾರೊಬ್ಬರಾದರೂ ಬೇರೆ ಹೋಗಬೇಕು ಎಂಬ ಉದ್ದೇಶದ ಸೂಚನೆಯನ್ನು ತೋರಿಸಿದ ಕೂಡಲೇ ಆ ಕುಟುಂಬದ ಆಸ್ತಿಪಾಸ್ತಿಗಳನ್ನು ಹಂಚಿಕೆ ಹಾಕಿ ವ್ಯವಸ್ಥೆಮಾಡಿಕೊಳ್ಳುವುದು ಉತ್ತಮ ಪಕ್ಷ.

(೨) ಈ ವಿಭಾಗವ್ಯವಸ್ಥೆಯನ್ನು ಸಕಾಲದಲ್ಲಿ ಮಾಡಿಕೊಳ್ಳದೆ ಮುಂದು ಮುಂದಕ್ಕೆ ತಳ್ಳಿಹಾಕಿ ಮುಜಗರ ಮನಸ್ತಾಪಗಳು ಬೆಳೆಯಲು ಅವಕಾಶ ಕೊಡುವುದು ನ್ಯಾಯವೂ ಅಲ್ಲ. ಸುಖವೂ ಅಲ್ಲ.

(೩) ವಿಭಾಗವೆಂದರೆ ಬೇರೆ ಬೇರೆ ಒಲೆಗಳನ್ನಿಡಬೇಕು ಎಂಬ ಅರ್ಥಮಾಡುವುದು ಅವಶ್ಯವಲ್ಲ. ಅಡಿಗೆಮನೆ ಒಂದೇ ಇರಬಹುದು. ಆದರೆ ಆಸ್ತಿ ಯಾರು ಯಾರದು ಎಷ್ಟೆಷ್ಟೆಂಬುದು ತಿಳಿದಿದ್ದರೆ ಅದರಿಂದ ಎಲ್ಲರಿಗೂ ಮನಸ್ಸಮಾಧಾನ.

ಔದಾರ್ಯ

(೪) ಆಸ್ತಿ ವಿಂಗಡವಾದ ಮೇಲೂ ಕುಟುಂಬದ ನಾನಾ ಭಾಗಗಳು ಒಟ್ಟಿಗೇ ಒಂದೇ ಮನೆಯಲ್ಲಿ ಬಾಳಿಕೊಂಡಿರಬೇಕಾದರೆ ಆ ನಾನಾ ಜನದಲ್ಲಿ ಆತ್ಮಸಂಯಮ ಹೆಚ್ಚಾಗಿರಬೇಕು. ಅಣ್ಣ ಹೆಚ್ಚು ತುಪ್ಪ ತಿಂದರೆ ತಿನ್ನಲಿ, ತಮ್ಮ ನಾಟಕಕ್ಕೆ ಹೋಗುವುದಾದರೆ ಹೋಗಲಿ. ಅವನು ತಿಂದದ್ದೂ ನನ್ನ ಸಂತೋಷವೇ ಇವನು ನೋಡಿದ್ದೂ ನನ್ನ ಸಂತೋಷವೇ ಎನ್ನುವ ಔದಾರ್ಯ ಇರಬೇಕು. ಈ ಪರಸ್ಪರ ಪ್ರೀತಿಯೂ ಔದಾರ್ಯವೂ ಮನೆಯ ಮುಖ್ಯ ಮುಖ್ಯ ಜನದಲ್ಲಿ ಇಲ್ಲದೆ ಹೋದಾಗ ಆ ಮನೆ ಮನೆಯಲ್ಲ, ಯುದ್ಧರಂಗ.

(೫) ಈಗ ಇನ್ನೊಂದು ಪ್ರಸಂಗವನ್ನು ನೋಡೋಣ. ಅಣ್ಣತಮ್ಮಂದಿರು ಬೇರೆಬೇರೆಯಾಗಿ, ಬೇರೆಬೇರೆ ಊರುಗಳಲ್ಲಿರುತ್ತಾರೆ. ಅವರವರಿಗೆ ಅರ್ಥದ ಸಂಬಂಧ ನಿಶ್ಶೇಷವಾಗಿರುತ್ತದೆ. ರಕ್ತಸಂಬಂಧ ಮಾತ್ರ ಕೊಂಚ ಕೊಂಚ ಶೇಷ ಉಳಿದುಕೊಂಡಿರುತ್ತದೆ. ಇಂಥವರ ಮಾತೇನು?

ಗೌರವ

(೬) ಅಣ್ಣತಮ್ಮಂದಿರುಗಳು ಎಲ್ಲರೂ ತಮ್ಮಲ್ಲಿ ಹಿರಿಯನಾದೊಬ್ಬನನ್ನು ಹಿರಿಯನಂದು ಅಂಗೀಕರಿಸಿ ಗೌರವಿಸುವುದು ಎಲ್ಲರಿಗೂ ಕ್ಷೇಮಕರ. ಈ ಕಾಲದ ಜನ ಒಂದು ತತ್ತ್ವವನ್ನು ಮರೆತಿರುವಂತೆ ಕಾಣುತ್ತದೆ. ನಾವು ಯಾರಾದರೂ ಒಬ್ಬಾತನನ್ನು ಗುರುವೆಂದೋ ಹಿರಿಯನೆಂದೋ ಅಂಗೀಕರಿಸಿದಾಗ ಸಂತೋಷವುಂಟಾಗುವುದು ಆತನಿಗೊಬ್ಬನಿಗೆ ಮಾತ್ರವಲ್ಲ; ಆತನಿಗೆ ಸಂತೋಷವಾಗುತ್ತದೋ ಇಲ್ಲವೋ ಅದು ಹೇಗಾದರಿರಲಿ, ಆ ಗುರೂಪಚರಣದಿಂದ ಕಿರಿಯನಿಗೆ ಸಂತೋಷವುಂಟಾಗುತ್ತದೆಂಬುದು ನಿಶ್ಚಯ. ಆದರೆ ಈ ನಿಶ್ಚಯವನ್ನು ಚಿಕ್ಕ ವಯಸ್ಸಿನವರೂ ಲೋಕಾನುಭವವಿರುವವರೂ ಒಪ್ಪಿಕೊಳ್ಳಬಹುದು. ನನ್ನ ಅನುಭವದಿಂದ ಹೇಳುವ ಮಾತಿಗೆ ಬೆಲೆಯುಂಟೆಂದರೆ, ನನ್ನ ಅಂತರಂಗವನ್ನು ಬಿಚ್ಚಿ ಹೇಳುತ್ತೇನೆ. ಮನುಷ್ಯ ಬೆಳೆದಂತೆಲ್ಲ, ಲೋಕದ ಕಷ್ಟಗಳನ್ನು ಕಂಡಂತೆಲ್ಲ ಅವನಿಗೆ ಯಾರೊ ಒಬ್ಬ ಗುರು ಇರಬೇಕೆನಿಸುತ್ತದೆ. ಒಬ್ಬ ಹಿರಿಯನು ಬೇಕೆನಿಸುತ್ತದೆ. ಒಂದು ಸಂಸಾರದ ಕಷ್ಟವೋ ಚಿಂತೆಯೋ ಬಂದಾಗ ಒಬ್ಬ ಹಳೆಯ ಮುದುಕಿ ಮನೆಯಲ್ಲಿದ್ದರೆ ಆಕೆಯನ್ನು ಕೇಳಿ ನಡೆಯೋಣವೆನಿಸುತ್ತದೆ. ನಮಗೆ ಪ್ರೀತಿಸುವುದಕ್ಕೆ, ನಮ್ಮೆದೆಯ ಪ್ರೀತಿರಸವನ್ನು ಅಭಿಷೇಕ ಮಾಡಲಿಕ್ಕೆ ಒಂದು ವಸ್ತು ಇದೆಯಲ್ಲ-ಎಂಬುದೇ ಒಂದು ಸಂತೋಷವಾಗುತ್ತದೆ. ಅದೇ ಒಂದು ಹೆಮ್ಮೆಯಾಗುತ್ತದೆ. ಹೀಗೆ ಒಂದು ಕುಂಟುಬವು ಯಾರಾದರೊಬ್ಬಾತನನ್ನು ಅಥವಾ ಒಬ್ಬಾಕೆಯನ್ನು ಮನೆತನಕ್ಕೆ ಹಿರಿಯನು ಅಥವಾ ಹಿರಿಯಳು ಎಂದು ಭಾವಿಸಿ ಗೌರವಮರ್ಯಾದೆ ಸಲ್ಲಿಸಿದರೆ ಅದರಿಂದ ಪ್ರಯೋಜನವಾಗುವುದು, ಆ ಮುದುಕನಿಗಾಗಲಿ ಮುದುಕಿಗಾಗಲಿ ಅಲ್ಲ. ಅದು ಒಟ್ಟು ಕುಟುಂಬಕ್ಕೆ. ಯಾರನ್ನು ಹಿರಿಯರೆಂದು ಆರಿಸಿಕೊಳ್ಳುವುದರಲ್ಲಿ ದುರ್ಬೀನು ಹಾಕಿ ನೋಡಬೇಕಾದದ್ದಿಲ್ಲ. ಬಹುಮಂದಿಗೆ ಒಪ್ಪಿತವಾದುದನ್ನು ಸ್ಥೂಲವಾಗಿ ಅಂಗೀಕರಿಸಿಕೊಂಡರೆ ಸಾಕು.

(೭) ಬೇರೆ ಬೇರೆ ಕಡೆಗಳಲ್ಲಿರುವ ಅಣ್ಣತಮ್ಮಂದಿರು ವರ್ಷಕ್ಕೆ ಒಂದು ಸಾರಿಯಾದರೂ ಒಂದು ಕಡೆ ಸೇರಿ ಎರಡುಮೂರು ದಿನವಾದರೂ ಒಟ್ಟಿಗಿರಬೇಕು. ಈ ಪುನಃಪುನಸ್ಸಮ್ಮೇಳನ ಮಮತೆಯನ್ನು ದೃಢಪಡಿಸುತ್ತದೆ.

ಸಹಾಯಬುದ್ಧಿ

(೮) ಮಕ್ಕಳ ವಿದ್ಯೆ ಆರೋಗ್ಯಗಳ ವಿಷಯದಲ್ಲಿ ಅಣ್ಣತಮ್ಮಂದಿರು ಭೇದಗಣನೆಯನ್ನು ಮರೆಯಬೇಕು. ಶಕ್ತನು ಅಶಕ್ತನಿಗೆ ಸಹಾಯ ಮಾಡಬೇಕು. ಹಣವಂತನು ಬಡವನಿಗೆ ಸಹಾಯ ಕೊಡಬೇಕು. ಆದರೆ ಇದು ಬಹು ನವುರು ನಾಜೂಕಿನಿಂದ ನಡೆಯಬೇಕಾದ ಕೆಲಸ. ಕೊಡುವವನಲ್ಲಿ "ನಾನು ಕೊಟ್ಟೆ" ಎಂಬ ಅಹಂಕಾರವಿರಬಾರದು. ತೆಗೆದುಕೊಳ್ಳುವವನಲ್ಲಿ "ನಾನು ಕೈಯೊಡ್ಡಿದೆ" ಎಂಬ ದೈನ್ಯ ತೋರಬಾರದು. ಅಣ್ಣ ತಮ್ಮಂದಿರಲ್ಲಿ ತಿರುಕ-ಧನಿಕ ಎಂಬ ಭೇದ ಕೊಂಚವಾದರೂ ಸುಳಿದ ಕೂಡಲೆ ಅವರ ಮಮತೆ ಕಂದಿಹೋಗುತ್ತದೆ.

(೯) ಮನೆತನಕ್ಕೆ ಹಿಂದಿನಿಂದ ಬಂದ ಸದಾಚಾರ ಸಂಪ್ರದಾಯಗಳನ್ನು ಎಲ್ಲರೂ ಉಳಿಸಬೇಕು. ದೇವರ ಹಬ್ಬ, ರಥೋತ್ಸವ, ಅರವಟ್ಟಿಗೆಯ ಸೇವೆ, ಗುಡಿಯಲ್ಲಿ ದೀಪಾರಾಧನೆ, ರಾಮೋತ್ಸವ–ಈ ಬಗೆಯ ಧರ್ಮಸಂದರ್ಭಗಳು ಸಾಮಾನ್ಯವಾಗಿ ಎಲ್ಲ ಹಿಂದೂ ಮನೆಗಳಲ್ಲಿಯೂ ಕೊಂಚವಾಗಿಯೋ ಹೆಚ್ಚಾಗಿಯೋ ಇರುತ್ತದೆ. ಇಂಥ ಸಂದರ್ಭಗಳು ಅಣ್ಣತಮ್ಮಂದಿರನ್ನು ಒಟ್ಟುಗೂಡಿಸಲು ಸಹಕಾರಿ. ಪೂರ್ವಕಾಲದಲ್ಲಿ ಬೇರೆ ಯಾವ ಸಂದರ್ಭದಲ್ಲಲ್ಲದಿದ್ದರೂ ತಂದೆತಾಯಿಗಳ ಶ್ರಾದ್ಧಕಾಲದಲ್ಲಿ ಅಣ್ಣ ತಮ್ಮಂದಿರೆಲ್ಲರೂ ಒಂದು ಕಡೆ ಸೇರುತ್ತಿದ್ದುದು ವಾಡಿಕೆಯಾಗಿತ್ತು. ಮುಖ್ಯವಾಗಿ ವರ್ಷಕ್ಕೊಂದು ದಿನವಾದರೂ ಮನೆಯವರೆಲ್ಲ ಕೂಡಿ ಕಲೆಯಬೇಕು.

ಅಹಂಕಾರ ದಮನ

(೧೦) ಒಂದು ಕುಟುಂಬವೇ ಆಗಲಿ ಸಮಾಜವೇ ಆಗಲಿ ಒಂದು ಸಂಸ್ಥೆಯೇ ಆಗಲಿ ಅದು ಒಡೆದುಹೋಗದೆ ಒಟ್ಟಿಗೆ ನಿಲ್ಲಬೇಕಾದರೆ ಅದಕ್ಕೆ ಸೇರಿದ ಎಲ್ಲ ಜನರೂ ತಮ್ಮತಮ್ಮತನವನ್ನು ಅದುಮಿಡುವುದಕ್ಕೆ ಪ್ರಯತ್ನಿಸಬೇಕು. ನಾನು ಮುಂದೆ ನಾನು ಮುಂದೆ ಎಂಬ ಅಹಂಭಾವವೇ ಮನೆಮುರುಕತನಕ್ಕೆ ಮೂಲಕಾರಣ. ಒಂದು ಭಕ್ಷ್ಯವನ್ನಾಗಲಿ ಬಟ್ಟೆಯನ್ನಾಗಲಿ ಒಡವೆಯನ್ನಾಗಲಿ ನನ್ನ ತಮ್ಮ ಅನುಭವಿಸಿದರೇನು, ನಾನಾದರೇನು? ನನ್ನ ಹೆಂಡತಿ ತೊಟ್ಟರೇನು, ತಂಗಿ ತೊಟ್ಟರೇನು? ಇದೂ ನನ್ನ ಸಂತೋಷ, ಅದೂ ನನ್ನ ಸಂತೋಷ–ಎಂಬ ಅಭೇದವೃತ್ತಿ ಬರಬೇಕು. ಈ ಅಭೇದಭಾವನೆ ಬಲಪಟ್ಟಷ್ಟೂ ಕುಟುಂಬದ ಒಟ್ಟು ಬಲ ವೃದ್ಧಿಯಾಗುತ್ತದೆ. ಅಣ್ಣ ತಮ್ಮಂದಿರು ಹೀಗೆ ಇರುವುದಕ್ಕಿಂತ ಮುಖ್ಯವಾದದ್ದು ಅವರ ಹೆಂಡಂದಿರ ಅಹಂಕಾರಮಿತಿ. “ನನ್ನ ಮಗ ಪ್ಯಾಸು ಮಾಡಿದ, ಅವಳ ಮಗ ಫೈಲಾದ” “ನನ್ನ ಮಗಳು ಬೆಳ್ಳಗಿದ್ದಾಳೆ. ಅವಳ ಮಗಳು ಕಪ್ಪು” “ನನ್ನ ಒಡವೆ ಚಿನ್ನ; ಅವಳದು ಹಳೆಯ ಕಾಲದ್ದು” – ಈ ರೀತಿಯಾದ ಮಕ್ಕಳನ್ನು ಕುರಿತ ಹೆಮ್ಮೆಯೂ ಗಂಡನ ಸಂಬಳ ಅಧಿಕಾರಗಳನ್ನು ಕುರಿತ ಹೆಮ್ಮೆಯೂ ಹೆಂಗಸರಿಗೆ ಗಂಡಸರಿಗಿಂತ ಹೆಚ್ಚು ಸ್ವಾಭಾವಿಕ. ಆದದ್ದರಿಂದ ಗಂಡಸಾದವನು ತನ್ನ ಹೆಂಡತಿಯ ಇಂಥ ಅಹಂಕಾರಪ್ರದರ್ಶನವನ್ನು ಹದ್ದಿನಲ್ಲಿರಿಸಬೇಕು.

***

ಈ ಮೇಲಣ ಸೂಚನೆಗಳಲ್ಲಿ ಗಹನವಾದದ್ದೂ ಹೊಸದಾದದ್ದೂ ಏನೂ ಇಲ್ಲ. ಇಂಥ ಉಪದೇಶಗಳನ್ನು ನಮ್ಮ ದೇಶದಲ್ಲಿ ನೂರಾರು ವರ್ಷಗಳಿಂದ ಸಾವಿರಾರು ಮಂದಿ ಮಾಡಿಕೊಂಡು ಬಂದಿದ್ದಾರೆ. ತೆಲುಗಿನಲ್ಲಿ ಒಂದು ಗಾದೆಯುಂಟು;

> ಆಲಿವಂಕವಾರು ಆತ್ಮಬಂಧುವುಲಯ್ಯ
> ತಂಡ್ರಿವಂಕವಾರು ದಾಯಾದುಲು.

ಹೀಗೆಯೇ ಇತರ ದೇಶಭಾಷೆಗಳಲ್ಲೂ ಎಷ್ಟೋ ಉಂಟು. ಅದರ ತಾತ್ಪರ್ಯ ಇಷ್ಟು: ಅಣ್ಣತಮ್ಮಂದಿರಾಗಿ ಹುಟ್ಟಿದವರು ಅಣ್ಣತಮ್ಮಂದಿರಾಗಿಯೇ ಬಾಳಬೇಕು. ಹಾಗೆಂದರೆ

ಅಹಂಕಾರದ ಶಮನ, ಆತ್ಮಭಾವವಿಸ್ತಾರ, ಒಂದು ಔದಾರ್ಯ, ಒಂದು ದೊಡ್ಡತನ. ದಾಯವಿಭಾಗವು ಕುಟುಂಬವಿಭಾಗವಾಗಬೇಕಾದದ್ದಿಲ್ಲ. ಕುಟುಂಬದ ಏಕತೆಯನ್ನು ಕಾಪಾಡಬೇಕಾದದ್ದೇಕೆಂದರೆ, ಅವಿಭಕ್ತ ಕುಟುಂಬದ ಪದ್ಧತಿಯಿಂದ ದೊರೆಯುವ ಆತ್ಮ ಸಂಸ್ಕಾರ ಲಾಭಕ್ಕಾಗಿ; ಅದರಿಂದಾಗುವ ಹೃದಯವೈಶಾಲ್ಯ ಲಾಭಕ್ಕಾಗಿ.

ಒಟ್ಟಿನಲ್ಲಿ ನನ್ನ ಮನಸ್ಸು ಈ ವಿಷಯದಲ್ಲಿ ಆಶಾಪೂರ್ಣವಾಗಿಲ್ಲ. ಎಲ್ಲಿ ಹೋದರೂ ಕುಟುಂಬಗಳಲ್ಲಿ ಮಕ್ಕಳ ಮಾತು ಬಂದಾಗ– "ಅವನೇನಾದರೂ ಮಾಡಿಕೊಳ್ಳಲಿ, ಸುಖವಾಗಿದ್ದರೆ ಸಾಕು", "ಅವಳೇನಾದರೂ ಮಾಡಿಕೊಳ್ಳಲಿ, ಅವಳಿಗೆ ಸಮಾಧಾನವಾಗಿದ್ದರೆ ಸರಿ" –ಈ ರೀತಿಯ ಬಿಡಿಬಿಡಿ ಜೀವನದ ಆಲೋಚನೆ ಮುಖ್ಯವಾಗುತ್ತಿದೆ. ವಿವಾಹ, ಕುಟುಂಬ ಮೊದಲಾದ ಸಂಪ್ರದಾಯಗಳು ಮುಖ್ಯವಾಗಿ ಆತ್ಮಸಂಸ್ಕಾರಗಳು; ಭೋಗಾವಕಾಶ ಮಾತ್ರಗಳಲ್ಲ–ಎಂಬ ತತ್ತ್ವ ಮರೆತುಹೋಗುತ್ತಿದೆ. ಆತ್ಮಚಿಂತೆಗಿಂತ ಭೋಗೈಶ್ವರ್ಯ ಚಿಂತೆ ಪ್ರಬಲವಾಗುತ್ತಿದೆ. ಇಂಥ ಕಾಲದಲ್ಲಿ ಭರತಖಂಡದ ಆರ್ಷೇಯ ಧರ್ಮವೂ ಸಂಪ್ರದಾವೂ ಹೇಗೆ ಸುಧಾರಣೆ ಹೊಂದಬೇಕು? ಹೇಗೆ ಉಳಿದುಕೊಳ್ಳಬೇಕು? ಅದು ಉಳಿಯದೆ ಅಳಿದರೆ ಪ್ರಪಂಚಕ್ಕೆ ಏನು ನಷ್ಟ?– ಎಂಬುದನ್ನು ವಿಚಾರವಂತರು ಪರ್ಯಾಲೋಚಿಸುವುದಾದರೆ ಅದರಲ್ಲಿ ನಮ್ಮ ಆಸೆಗೆ ಕೊಂಚ ಪ್ರೋತ್ಸಾಹ ದೊರೆತೀತು.

೧೧

ಆಶುಕವಿತ್ವ, ಆಶುಗಾಯನ

೧೯೦೯-೧೦ರ ಸುಮಾರಿನಲ್ಲಿ ಒಂದು ದಿನ ನವರತ್ನ ಅಂಡ್ ಸನ್ಸ್ ರವರ ಅಚ್ಚಿನ ಕಾರ್ಖಾನೆಯಲ್ಲಿ ಕುಳಿತಿದ್ದೆ. ಘಂಟೆ ಸುಮಾರು ೯ ಇರಬಹುದು. ಅಲ್ಲಿಗೆ ಇಬ್ಬರು ಗಿರಾಕಿಗಳು ಬಂದರು. ಅವರು ನಾಲ್ಕು ಪುಟದಷ್ಟು ಯಾವುದೋ ಬರಹವನ್ನು ತೋರಿಸಿ ಅದನ್ನು ಅಚ್ಚು ಮಾಡಲು ಎಷ್ಟು ವೆಚ್ಚವಾದೀತೆಂದು ಕೇಳಿದರು. ಮಾಲೀಕರು ಒಂದು ಸಾವಿರ ಪ್ರತಿಗೆ ಕಾಗದದ ಖರ್ಚೂ ಸೇರಿ ಮೂರು ರೂಪಾಯಿ ಎಂದರು. ಗಿರಾಕಿಗಳು ಒಪ್ಪಿಕೊಂಡು, “ಇದನ್ನು ಈಗಲೇ ಹತ್ತು ಘಂಟೆಗೆ ಕೊಡಬೇಕು” ಎಂದರು. “ಹನ್ನೆರಡು ಘಂಟೆಗೆ ಕೊಡುತ್ತೇನೆ” ಎಂದರು ಮಾಲೀಕರು.

ಆ ಬರಹದಲ್ಲಿದ್ದದ್ದು ಎರಡು ಹಾಡುಗಳು. ಜ್ಞಾಪಕದಲ್ಲಿ ಇರುವಷ್ಟನ್ನು ಇಲ್ಲಿ ಬರೆದಿದ್ದೇನೆ.

ಬೈಸ್ಕಲ್ ॥
ಕಾಲ್ತಪ್ಪಿದ ಮೇಲೆ ಫೈಸಲ್ ॥
ಬೀದೀಲ್ ಹೋಗೋರ್ಗಮ್ಮತ್ ॥
ಪೋಲೀಸ್ನೋರ್ಗೆ ಕಿಮ್ಮತ್ ॥

(ಹೀಗೆಯೇ ಮೂರುನಾಲ್ಕು ಚರಣ).

ಓಟವ ನೋಡ್ತೈ ಮೋಟಾರ್ ಗಾಡಿ
ಇದೇ ದೇವತ ವಿಮಾನ ॥
ನೋಟಾ ನೋಡ್ತಾ ಬೆಪ್ಪಿಪ್ಪಾದರೆ
ಕೈಕಾಲ್ಗಾಯ್ತದೆ ಊನ ॥
ಊನಾ ಆದೋರ್ಗ್ ಶಿವನಾಜ್ಞ್ಯಾದರೆ
ಕೂಡ್ಲೆ ಓಯ್ತದೆ ಪ್ರಾಣ ॥

(ಹೀಗೆ ಮೂರು ನಾಲ್ಕು ಚರಣ).

ಸುಮಾರು ಹನ್ನೊಂದು ಘಂಟೆಯ ವೇಳೆಗೆ ಒಂದು ಸಾವಿರ ಪ್ರತಿ ತೆಗೆದುಕೊಂಡು ಹೋದರು. ಮಧ್ಯಾಹ್ನ ಮತ್ತೆ ಹಾಜರ್-ಪುನಃ ಎರಡು ಸಾವಿರ ಪ್ರತಿ ಬೇಕೆಂದು. ಬೆಳಗ್ಗೆ ಮಾಡಿದ್ದ ಅಚ್ಚಿನ ಜೋಡಣೆಯು ಹಾಗೆಯೇ ಇದ್ದದ್ದರಿಂದ ಒಂದು ಘಂಟೆಯೊಳಗಾಗಿ ಇನ್ನೆರಡು ಸಾವಿರ ಪ್ರತಿ ಮಾಡಿಕೊಟ್ಟೆವು. "ಅಷ್ಟೊಂದು ಪ್ರತಿಗಳನ್ನು ಏನು ಮಾಡಿದಿರಿ?" ಎಂದು ನಾನು ಕೇಳಿದಾಗ ಅವರು "ಬಂದು ನೋಡರ್ಲ್ಲಾ" ಎಂದರು.

ಚಿಕ್ಕಪೇಟೆ, ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ ಸೇರುವ ಕಡೆ ಒಂದು ಮೂಲೆಯಲ್ಲಿ ಒಬ್ಬನು ಹಾಡುವನು. ಇನ್ನೊಬ್ಬನು ಕೊಂಚ ಸೇರುವನು. ಪ್ರತಿಗೆ ಮೂರುಕಾಸು. ಒಂದು ಸಾವಿರ ಪ್ರತಿಗೆ ಹದಿನೈದೂ ಮುಕ್ಕಾಲು ರೂಪಾಯಿ ಬಂತು. ಅಚ್ಚಿನ ಖರ್ಚು ಮೂರು ರೂಪಾಯಿ ಹೋದರೆ ಹನ್ನೆರಡೂ ಮುಕ್ಕಾಲು ರೂಪಾಯಿ ನಫೆ.

ನಾನು ಹೋಗಿ ನೋಡಿದೆ. "ನನಗೊಂದು" "ನನಗೊಂದು" ಎಂದು ಜನ ಕೈಯೊಡ್ಡುತ್ತಿದ್ದರು.

ಮಾರನೆಯ ದಿನವೂ ಒಂದೆರಡು ಸಾವಿರ ಪ್ರತಿ ಮಾಡಿಸಿಕೊಂಡು ಹೋದರೆಂದು ನೆನಪು.

ಭಟ್ಟರಾಜರು

ಅದನ್ನು ಮಾಡಿದವರು ಮಾಗಡಿಯ ಕಡೆಯವರು–ಭಟ್ಟರಾಜರಂತೆ: ಒಂದಾನೊಂದು ಕಾಲದಲ್ಲಿ ಅರಮನೆಯಲ್ಲಿ ಚಾಕರಿಗಿದ್ದವರಂತೆ.

ಅಲ್ಲಿಂದ ಒಂದೆರಡು ವರ್ಷಗಳಾದ ಮೇಲೆ ಇನ್ನೊಂದು ಸಂದರ್ಭ ನಡೆಯಿತು. ಆಗ ಕೆಲವು ಮಿತ್ರರು ಮಾಗಡಿ ರಸ್ತೆಯಲ್ಲಿರುವ ಅಂಟುರೋಗದ ಆಸ್ಪತ್ರೆಯಲ್ಲಿಯೂ ಅದರ ಪಕ್ಕದಲ್ಲಿದ್ದ ಅನಿವಾರಣೀಯ ವ್ಯಾಧಿಗಳ ಆಸ್ಪತ್ರೆಯಲ್ಲಿಯೂ ಇದ್ದ ರೋಗಿಗಳಿಗೆ ವರ್ಷೇ ವರ್ಷೇ ದೀವಳಿಗೆ ಯುಗಾದಿಗಳ ಸಂದರ್ಭಗಳಲ್ಲಿ ಸಿಹಿ ತಿಂಡಿ ಹಣ್ಣು ಬಟ್ಟೆಗಳನ್ನು ಹಂಚುವ ಏರ್ಪಾಡು ಇಟ್ಟುಕೊಂಡಿದ್ದರು. ಒಂದು ಸಾರಿ ಬೆಂಗಳೂರಿನಲ್ಲಿ ಪ್ಲೇಗಿನ ಶಂಕೆ ಇದ್ದ ಕಾರಣ ಹುಚ್ಚಾಸ್ಪತ್ರೆಯೂ ಈ ಜಾಗಕ್ಕೆ ಬಂದಿತ್ತು. ಆ ವರ್ಷ ನಮ್ಮ ಉತ್ಸವಕ್ಕೆ ಅಧ್ಯಕ್ಷರಾಗಿ ಸರ್ ಕೆ.ಪಿ. ಪುಟ್ಟಣ್ಣಶೆಟ್ಟರವರು ದಯಮಾಡಿಸಿದ್ದರು. ಎರಡು ಆಸ್ಪತ್ರೆಗಳಲ್ಲಿಯೂ ನಮ್ಮ ಸೇವೆ ಆದಬಳಿಕ ಈ ಹುಚ್ಚರೆಂಬವರ ಆಸ್ಪತ್ರೆಗೆ ನಡೆದೆವು.

ಅವರಲ್ಲಿ ನಾಲ್ಕಾರು ಮಂದಿ ಹೊರಗಡೆ ನಿಂತು ನೋಡುತ್ತಿದ್ದರು. ನಾವು ಸಮೀಪಿಸಿದ ಕೂಡಲೆ ಒಬ್ಬಾತ ಹೀಗೆ ಹಾಡಲು ಉಪಕ್ರಮಿಸಿದ, ಕೈಮುಗಿದು:

ಪುಟ್ಟಣ್ಣಶೆಟ್ಟರೇ
ಹೊಟ್ಟೇಗನ್ನ ಇಟ್ಟಿರೇ
ಹಿಟ್ಟು ಆಮ್ರ ಕೊಟ್ಟಿರೇ
ಮೈಗೆ ಬಟ್ಟೆ ತೊಟ್ಟಿರೇ

ಬಹುಶಃ ಹೀಗೆ ಆತ ಇನ್ನೂ ಬೆಳಸುತ್ತಿದ್ದನೆಂದು ತೋರುತ್ತದೆ. ಅಷ್ಟರಲ್ಲಿ ಪುಟ್ಟಣ್ಣ ಶೆಟ್ಟರು ಆತನನ್ನು ಗುರುತುಹಿಡಿದು ಮಾತನಾಡಿಸಿದರು. ಆತ ಅರಮನೆಯಲ್ಲಿದ್ದವನು. ಅವನು ಹೇಳಿದ:

"ಸ್ವಾಮಿಗಳವರ ಸವಾರಿ ದಯಮಾಡಿಸುತ್ತಾ ಇತ್ತಲ್ಲ ಅರಮನೆಯ ದರ್ಬಾರಿಗೆ?"

ಪುಟ್ಟಣ್ಣಶೆಟ್ಟರು ನಗುತ್ತಾ ಒಂದೆರಡು ಒಳ್ಳೆಯ ಮಾತನ್ನಾಡಿದರು. ಅವರು ನಮಗೆ ಹೇಳಿದರು:

"ಇವರು ಅರಮನೆಯ ಭಟ್ಟರಾಜರು. ಅಲ್ಲಿಯ ಅಭ್ಯಾಸ ಇನ್ನೂ ಬಿಟ್ಟಿಲ್ಲ. ಅವರ ಜ್ಞಾಪಕ ಇನ್ನೂ ಕೆಲಸಮಾಡುತ್ತಿದೆ."

***

ಕೃಷ್ಣಪ್ಪನವರೆಂಬವರೊಬ್ಬರು ನನಗೆ ಅತ್ತೆಯ ಮನೆಯ ಕಡೆಯ ಬಂಧುಗಳು. ಕೃಷ್ಣಪ್ಪನವರ ತಂದೆ ಸುಬ್ಬಣ್ಣನೆಂಬವರು. ಅವರ ಬಾಲ್ಯದಲ್ಲಿಯೇ ಮೈಸೂರು ಪಟ್ಟಣ ಸೇರಿದರು. ಅವರ ಹುಟ್ಟೂರು ಬೇರೆ–ಮೈಸೂರಿನಿಂದ ದೂರವಾದದ್ದು. ಸುಬ್ಬಣ್ಣನವರಿಗೆ ಸಂಗೀತದ ಖಯಾಲಿ ನೈಜವಾಗಿ ಬಂದಿತ್ತೆಂದು ತೋರುತ್ತದೆ. ಅವರ ಮನೆತನ ಅನುಕೂಲವಾಗಿದ್ದದ್ದು. ಮನೆ, ಜಮೀನು ಮೊದಲಾದವು ತಕ್ಕಮಟ್ಟಿಗಿದ್ದದ್ದಲ್ಲದೆ ಬಂಧುಬಳಗವೂ ದೊಡ್ಡದಾಗಿತ್ತು. ಅವರೆಲ್ಲ ಸಭ್ಯರು, ಮರ್ಯಾದೆವಂತರು. ಸುಬ್ಬಣ್ಣನವರು ಅವರ ಹಳೆಯ ಜಾಡಿಗೆ ಬೀಳದೆ ಹೇಗೋ ಮನೆಯಿಂದ ಹೊರಟು ಅಲ್ಲಲ್ಲಿ ಕೆಲ ದಿವಸ ಇದ್ದು ಕಡೆಗೆ ಮೈಸೂರು ಪಟ್ಟಣ ಸೇರಿದರು. ಅಲ್ಲಿ ಸಂಗೀತಪಾಠ ಕಲಿತು ಹೆಸರಾದ ಮೇಲೆ ತಾವೇ ನಾಲ್ಕು ಕಡೆ ಸಂಗೀತ ಬೋಧಕರಾಗಿ ಜೀವನ

ಸಂಪಾದಿಸಿ ಕೊಳ್ಳುತ್ತಿದ್ದರು. ಅವರಿಗೆ ಅರಮನೆಯ ಆಶ್ರಯವೂ ದೊರಕಿತ್ತು. ಕಾಲಕ್ರಮದಲ್ಲಿ ವಿವಾಹವೂ ಆಯಿತು. ಮೂರು ಮಂದಿ ಮಕ್ಕಳು–ಎರಡು ಹೆಣ್ಣು, ಒಂದು ಗಂಡು. ಆ ಮಗನೇ ನಮ್ಮ ಪ್ರಕೃತ ಪ್ರಸಂಗಕ್ಕೆ ವಿಷಯವಾದ ಕೃಷ್ಣಪ್ಪ ಎಂಬುವರು.

ನಿತ್ಯೋದ್ಯೋಗ

ಕೃಷ್ಣಪ್ಪನವರು ಸಂಗೀತಾಭ್ಯಾಸ ಮಾಡಿದರು. ಆದರೆ ಅವರ ಬಾಲ್ಯದಲ್ಲಿಯೇ ತಂದೆ ಸುಬ್ಬಣ್ಣನವರು ದೈವಾಧೀನರಾದರು. ತಾಯಿಯೂ ತೀರಿಕೊಂಡಳೆಂದು ತೋರುತ್ತದೆ. ಅಕ್ಕತಂಗಿಯರಿಬ್ಬರೂ ವಿವಾಹಿತರಾಗಿ ಅವರವರ ಗಂಡಂದಿರ ಮನೆಯಲ್ಲಿದ್ದರು. ಕೃಷ್ಣಪ್ಪ ಧನಿಕರಾದ ಮತ್ತು ಅಧಿಕಾರಸ್ಥರಾದ ಅವರಿವರ ಮನೆಗಳಲ್ಲಿ ಸಂಗೀತಬೋಧಕರಾಗಿ ಕಾಲ ನೂಕುತ್ತಿದ್ದರು. ಅವರು ಮದುವೆ ಮಾಡಿಕೊಳ್ಳಲಿಲ್ಲ. ಆದದ್ದರಿಂದ ಸ್ವಂತ ಮನೆಯೆಂಬುದು ಇರಲಿಲ್ಲ. ಸಂಗೀತದ ಹುಚ್ಚು ಮಾತ್ರ ನಿರಂತರವಾಗಿತ್ತು. ತಾವು ಸಾಧನೆ ಮಾಡಿಕೊಳ್ಳುವುದು, ಪಾಠ ಹೇಳಿಕೊಡುವುದು, ಒಳ್ಳೊಳ್ಳೆಯ ಕಚೇರಿಗಳಿಗೆ ಹೋಗಿ ಸಂಗೀತ ಕೇಳುವುದು–ಇಷ್ಟೇ ಅವರ ನಿತ್ಯೋದ್ಯೋಗ.

ಹೀಗೆ ಅರವತ್ತು ಅರವತ್ತೈದು ವರ್ಷ ಕಳೆದರು. ಅವರ ಜ್ಞಾತಿ ಸಹೋದರರೊಬ್ಬರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದದ್ದರಿಂದ ವರ್ಷಕ್ಕೆ ಎರಡು ಸಾರಿ ಮೈಸೂರಿಗೆ ಹೋಗುತ್ತಿದ್ದರು. ಅವರು ಆಗ ಕೃಷ್ಣಪ್ಪನವರನ್ನು ಹುಡುಕಿ ಪತ್ತೆಮಾಡಿ ಊರಿಗೆ ಬರಬೇಕೆಂದು ಕರೆಯುತ್ತಿದ್ದರು. ಕೃಷ್ಣಪ್ಪನವರು "ಆಗಲಿ ಬರೋಣ. ನನಗೆ ಇಲ್ಲೇ ಸರಿಯಾಗಿದೆ. ಅಲ್ಲೇನು ವಿಶೇಷ?"

–ಹೀಗೆ ಉಡಾಫೆ ಮಾತುಗಳನ್ನಾಡುತ್ತಿದ್ದರು. ಕಡೆಗೊಂದು ಸಾರಿ ಆ ಸಹೋದರರು ಕೃಷ್ಣಪ್ಪನವರಿಗೆ ಹೇಳಿದರು:

"ಅಯ್ಯಾ, ನೀನು ಎಪ್ಪತ್ತು ವಯಸ್ಸಿನ ಸಮೀಪಕ್ಕೆ ಬಂದಿದ್ದೀ. ಈಗಲಾದರೂ ನಿನ್ನ ಊರಿಗೆ ಬರಬಾರದೆ? ನಿನ್ನ ಮುಪ್ಪಿನಲ್ಲಿ ಇಲ್ಲೇಕೆ ಅಗಸಾಟಲು ಪಡುತ್ತಿದ್ದೀ? ಊರಿನಲ್ಲಿ ನಿನಗೆ ಸೇರಬೇಕಾದ ಜಮೀನು ಜಾಗ ಇದೆ. ನೀನು ತಿನ್ನುವ ಅನ್ನವನ್ನು ಅದು ಕೊಡುತ್ತದೆ. ಈಗ ನಮ್ಮ ಮನೆಯಲ್ಲಿ ಒಂದು ಹೊತ್ತಿಗೆ ಇಪ್ಪತ್ತೈದು ಮೂವತ್ತು ಜನ ಊಟಮಾಡುತ್ತಾರೆ. ನೀನು ಯಾರಿಗೂ ಭಾರವಾಗುವುದಿಲ್ಲ."

–ಹೀಗೆ ಬಹು ವಿಧವಾಗಿ ಹೇಳಿ ಅಣ್ಣನನ್ನು ಒಡಂಬಡಿಸಿ ತಮ್ಮ ಊರಿಗೆ ಕರೆದುಕೊಂಡು ಬಂದರು.

ಮರಳಿ ಊರಿಗೆ

ಅಲ್ಲಿ ಕೃಷ್ಣಪ್ಪನವರು ಒಂದು ಸಂದರ್ಭದ ವಿನಾ ಎಲ್ಲ ವಿಷಯದಲ್ಲೂ ಸಮಾಧಾನವಾಗಿದ್ದರು. ಬೆಳಗ್ಗೆ ತಮ್ಮ ಜ್ಞಾತಿ ತಮ್ಮಂದಿರ ಜೊತೆಯಲ್ಲಿ ತೋಟ ಗದ್ದೆಗಳಿಗೆ ಹೋಗುವುದು, ಕಾಡುಹರಟೆ ಹರಟುವುದು, ಬಟ್ಟೆಗಳನ್ನು ಶುಭ್ರವಾಗಿ ಒಗೆದುಕೊಳ್ಳುವುದು, ಪರಿಶವಣೆ ಹೇಳಿಕೊಂಡು ಬೋಜನ ಮಾಡುವುದು, ತಮ್ಮ ಅನುಭವಗಳನ್ನು ಹೇಳಿ ನಗಿಸುವುದು–ಹೀಗೆ ಖುಷ್‌ಭಾಷ್ ಮನುಷ್ಯರಾಗಿದ್ದರು.

ಅವರಿಗಿದ್ದ ಒಂದು ಅಸಮಾಧಾನವೇನೆಂದರೆ ಅವರ ಚಿಕ್ಕಪ್ಪಂದಿರು ಸೂರಪ್ಪನವರು ಎಂದಾದರೊಂದು ದಿನ ಕೇಳುತ್ತಿದ್ದರು:

“ಕೃಷ್ಣ, ಕೊಂಚ ಏನಾದರೂ ಹಾಡೋ.”

ಸೂರಪ್ಪನವರಲ್ಲಿ ಯಾವ ದುರ್ಗುಣವೂ ಇರಲಿಲ್ಲ. ತುಂಬಾ ಆಚಾರಶೀಲರು. ತೆಲುಗು ಭಾರತ, ಭಾಗವತಗಳಿಂದಲೂ ದೇವರನಾಮಗಳಿಂದಲೂ ವಾಕ್ಯಗಳನ್ನು ಪದೇ ಪದೇ ಉದಾಹರಿಸುವರು. ಕೊಂಚ ಕೊಂಚ ಹಾಸ್ಯ ಮಾಡುವರು. ಬಹು ಮೃದುವಾದ ಮನಸ್ಸು. ಒಂದು ದೃಷ್ಟಾಂತ ಹೇಳುತ್ತೇನೆ.

ಫಲಾಹಾರ ಕುತೂಹಲ

ಸೂರಪ್ಪನವರಿಗೆ ವಯಸ್ಸು ೮೦-೮೫ರಲ್ಲಿತ್ತು. ಅವರ ಮನೆಯಲ್ಲಿ ಅವರ ಅಣ್ಣಂದಿರ ಮತ್ತು ಇತರ ಹಿರಿಯ ಬಂಧುಗಳ ಸೊಸೆ ಮೊದಲಾದ ಸ್ತ್ರೀಜನ ನಾಲ್ಕೈದು ಮಂದಿ ಮಡಿಹೆಂಗಸರಿದ್ದರು. ತಮ್ಮ ಸ್ವಂತ ಸೊಸೆ ಆ ಮಡಿ ಹೆಂಗಸರನ್ನು ಆದರಿಸಿ ಉಪಚರಿಸಬೇಕೆಂದು ಮುದುಕರ ಆಸೆ. ಆದರೆ ಸೊಸೆಗೆ ಈ ಮಾತನ್ನು ಸ್ಪಷ್ಟವಾಗಿ ಹೇಳುವುದು ಅನುಚಿತವಾದೀತು. ಆಕೆ ಬಹಳ ಒಳ್ಳೆಯವಳು. ಆದರೆ ಆಕೆಯ ಉಪಚಾರವನ್ನು ಆ ಮಡಿ ಹೆಂಗಸರು ಸ್ವೀಕರಿಸಬೇಕಲ್ಲ? ಇದಕ್ಕಾಗಿ ಸೂರಪ್ಪನವರು ಒಂದು ಉಪಾಯ ಮಾಡಿದ್ದರು. ರಾತ್ರಿಯ ಬೋಜನ ಸುಮಾರು ಎಂಟು ಎಂಟೂವರೆ ಘಂಟೆಗೆ ಮುಗಿಯುವುದು. ಊಟ ಮಾಡತಕ್ಕವರೆಲ್ಲ ಊಟಮಾಡಿ ಆದಮೇಲೆ ಸೂರಪ್ಪನವರು ಅಡಿಗೆಮನೆಯೊಳಕ್ಕೆ ಹೋಗಿ ಸೊಸೆಯನ್ನು ಕರೆದು–

“ಅಚ್ಚಮ್ಮಾ, ಈ ಹೊತ್ತು ಫಲಾಹಾರಕ್ಕೆ ಏನು ಮಾಡಿಸಿದ್ದೀ?”

–ಎಂದು ಕೇಳುವರು. ಆಕೆ ರೊಟ್ಟಿಯೆಂದೋ ದೋಸೆಯೆಂದೋ ಹೇಳಿದರೆ “ನನ್ನ ಕೈಯಲ್ಲಿ ಕೊಂಚ ಹಾಕು” ಎಂದು ಕೇಳುವರು. ಸೂರಪ್ಪನವರು ರಾತ್ರಿ ಊಟ ಮಾಡುತ್ತಿದ್ದವರಲ್ಲ. ಅವರ ಕೈಯಲ್ಲಿ ಒಂದು ಚೂರು ರೊಟ್ಟಿಯನ್ನೋ ದೋಸೆಯನ್ನೋ ಒಂದು ಕೋಡುಬಳೆಯನ್ನೋ ಚಕ್ಕುಲಿ ತುಂಡನ್ನೋ ಸೊಸೆ ಕೊಟ್ಟರೆ ಸೂರಪ್ಪನವರು ತಾವು ಅದನ್ನು ಬಾಯಿಗೆ ಹಾಕಿಕೊಂಡಂತೆ ಮಾಡುವುದು. ಅವರಿಗೆ ದವಡೆಹಲ್ಲು ಬಿದ್ದು ಹೋಗಿತ್ತಾದ್ದರಿಂದ ಗಟ್ಟಿ ಪದಾರ್ಥವನ್ನು ತಿನ್ನಲಾರರು. ಅವರು ಹೆಚ್ಚು ತಿಂಡಿಯ ಚಪಲವಿದ್ದವರೂ ಅಲ್ಲ. ತಮ್ಮ ಕೈಯಲ್ಲಿದ್ದ ತಿಂಡಿಯನ್ನು ತೆಗೆದುಕೊಂಡು ಅವರು ಉಂಡಜನ ಮಲಗಿದ್ದ ಕಡೆಗೆ ಬರುವರು. ಅಲ್ಲಿ ಯಾರಾದರೊಬ್ಬರ ಹಾಸಿಗೆಯ ಪಕ್ಕದಲ್ಲಿ ಕುಳಿತು ತಮ್ಮ ಕೈಯಲ್ಲಿದ್ದ ತಿಂಡಿಯನ್ನು ಅವರ ಮೂತಿಯೊಳಕ್ಕೆ ತುರುಕುವರು. ಅವರು ತಿಂಡಿಯನ್ನು ಕೊಂಚ ಉಗುಳುತ್ತ “ಬೇಡ ತಾತ” “ಬೇಡ ತಾತ” ಎನ್ನುವರು. ಸೂರಪ್ಪನವರು “ಯಾಕೋ ಅಪ್ಪಣ್ಣ ಹೀಗಾಡುತ್ತಿ? ಮುಪ್ಪು ಬಂತೇನೋ?” ಎಂದು ಹಾಸ್ಯ ಮಾಡಿ ಅವನಿಂದ ಅದನ್ನು ತಿನ್ನಿಸುವರು.

ಇಂಥ ಸರಸಿಯಾದ ಮುದುಕ ಆತ.

ಸೂರಪ್ಪನವರು ಶನಿವಾರ ಶನಿವಾರವೂ ಹನುಮದ್ವಿಲಾಸ ಕಾವ್ಯವನ್ನು ಪಾರಾಯಣ ಮಾಡುವರು. ಸಂಜೆ ದೇವರಿಗೆ ದೀಪಹಚ್ಚಿ ಹನುಮದ್ವಿಲಾಸವನ್ನು ಮೊದಲಿನಿಂದ ಕಡೆಯವರೆಗೂ ಹೇಳಿ ಮಂಗಳಾರತಿ ಮಾಡುವವರೆಗೂ ಅವರಿಗೆ ಬೇರೆ ಚಿಂತೆಯಿಲ್ಲ. ಶ್ರೀ ರಾಮನವಮಿ, ಕೃಷ್ಣಾಷ್ಟಮಿ, ಗಣೇಶ ಚತುರ್ಥಿ, ಕಾರ್ತಿಕ ಸೋಮವಾರ ಇಂಥ ದಿನಗಳಲ್ಲಿಯೂ ಅವರ ಮನೆಯಲ್ಲಿ ತೆಲುಗು ಭಾಷೆಯ ರಾಮಾಯಣ, ಭಾರತ, ಭಾಗವತಾದಿ ಗ್ರಂಥಗಳ ಪಾರಾಯಣವಾಗುತ್ತಿತ್ತು.

ಪ್ರಕೃತ ಇಂಥ ಸಂದರ್ಭಗಳಲ್ಲಿ ಸೂರಪ್ಪನವರು ಕೃಷ್ಣಪ್ಪನನ್ನು ಹಾಡೆಂದು ಕೇಳುವರು. ಕೃಷ್ಣಪ್ಪನಿಗಾದರೋ ಪಕ್ಕವಾದ್ಯಗಳಿಲ್ಲದೆ ಹಾಡುವುದಕ್ಕೆ ಮನಸ್ಸಿಲ್ಲ. ಆತನದು ಕಚೇರಿಯ ಅಭ್ಯಾಸ. ಇದರ ಜೊತೆಗೆ ಏನೋ ಕೊರತೆಯೂ ಸೇರಿತ್ತು. ಹಾಡು ಎಂದರೆ ಕೃಷ್ಣಪ್ಪ ಹೀಗೆ ಹೇಳುತ್ತಿದ್ದರು:

"ಏನು ಹಾಡುವುದಪ್ಪ? ಗಂಟಲಿಗೆ ತುಪ್ಪ ಬಿದ್ದರಲ್ಲವೆ? ನಮ್ಮ ತಿರುಮಲಾಚಾರ್ಯರ ಮನೆಯಲ್ಲಿ ಕೈತುಂಬ ತುಪ್ಪ. ಹಾಗೆ ಬಿದ್ದರಲ್ಲವೆ ಹಾಡು? ಕೈತುಂಬಾ ತುಪ್ಪ, ಬಾಯಿ ತುಂಬ ಸಜ್ಜಪ. ಅಂಥ ತರತೀಪು ಬಿದ್ದರೆ ಆಗ ಸಂಗೀತ."

ಹೀಗೆ ಒಂದು ಸಾರಿ ಸೂರಪ್ಪನವರು ಹಾಡಬೇಕೆಂದು ಕೃಷ್ಣಪ್ಪನಿಗೆ ಒತ್ತೊತ್ತಿ ಹೇಳಿದಾಗ ಆತ ಆ ನಿರ್ಬಂಧಕ್ಕೆ ಒಪ್ಪಿಕೊಂಡು ತಂಬೂರಿಯನ್ನು ಶ್ರುತಿಮಾಡಿ ಮುಂದಿರಿಸಿಕೊಂಡು ಹೀಗೆ ಹಾಡಿದರು: ಮಾಯಾಮಾಳವಗೌಳ ರಾಗದಲ್ಲಿ ಅದು ಸಮಯಸ್ಫೂರ್ತಿಯಿಂದ ಅವರು ಸ್ವಂತವಾಗಿ ಮಾಡಿದ ಕೃತಿ.

ತಿರಿದು ತಿರಿದು ತಿನ್ನನ್ನ–ಆ–
ತಿರಿದು ತಿರಿದು ತಿನ್ನನ್ನ–ಆ–
ಹೊಟ್ಟೆ ತಿರಿದು ಬಟ್ಟೆ ತಿರಿದು
ಪಾತ್ರೆ ತಿರಿದು ಧೋತ್ರ ತಿರಿದು
ತಿರಿದೂ ತಿರಿದೂ–ಸುಖ ಬರದೂ ಬರದೂ
ತಿರಿದು ತಿರಿದು ತಿನ್ನನ್ನಾ...

ಇದನ್ನು ಅಕ್ಷರ ಅಕ್ಷರವಗಿ ಬಿಡಿಸಿ ಸ್ವರಸಂಯೋಜನೆ ಮಾಡಿ ಹೇಳುತ್ತಿದ್ದಾಗ ಕೃಷ್ಣಪ್ಪನ ಕಣ್ಣುಗಳಲ್ಲಿ ಕಂಬನಿ. ಈತನಿಗೆ ಅದೇನು ಬಂತು ಈ ಹೊತ್ತು? ಈ ಉದ್ವೇಗ, ಆವೇಶ?

ಆತನನ್ನು ಬಲ್ಲವರಿಗೆ ಅದರ ಅರ್ಥ ಗೋಚರವಾಯಿತು. ಆತ ತನ್ನ ಆಯುಷ್ಯದಲ್ಲಿ ಮುಪ್ಪಾಗಕ್ಕಿಂತ ಹೆಚ್ಚಾಗಿ ಇತರರ ಆಶ್ರಯದಲ್ಲಿಯೇ ಕಳೆದಿದ್ದ. ಈ ದಿವಸವೂ ತಾನು ಇತರರಿಗೆ ಹೊರೆಯಾಗಿದ್ದೇನೆಂದೇ ಆತನ ಮನೋಭಾವ. ತನ್ನ ಅನ್ನ ವಸ್ತ್ರಗಳಿಗಾಗಿ ಎಷ್ಟು ಜನಕ್ಕೆ ಋಣಿಯಾಗಿದ್ದೇನೆಂಬುದನ್ನು ನನೆಪಿಗೆ ತಂದುಕೊಂಡು ಆತ ಹಾಗೆ ಹಾಡಿರಬೇಕು.

ಲೋಕದಲ್ಲಿ ಇಂಥ ಜೀವಿಗಳೂ ಉಂಟು.

೧೨

ರಾಮೇಶ್ವರಯ್ಯನವರು

ಮೈಸೂರು ಪಟ್ಟಣದಲ್ಲಿ ಒಂದು ದಿನ ಬೆಳಗ್ಗೆ ಲಾನ್ಸ್ ಡೌನ್ ಬಜಾರಿನ ಉತ್ತರ ಭಾಗದ ಖಾಲಿ ಜಾಗದಲ್ಲಿ ಒಬ್ಬಾತ ನಿಂತು ಅವನ ಬಳಿ ಸೇರಿದ್ದ ಎಂಟು ಹತ್ತು ಮಂದಿಗೆ ಮತವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಿದ್ದ. ಅದು ಕ್ರೈಸ್ತ ಮಿಷನರಿಗಳ ಚಟುವಟಿಕೆ ಪ್ರಬಲವಾಗಿದ್ದ ಕಾಲ. ಆ ದಿನ ಅಲ್ಲಿ ಉಪನ್ಯಾಸ ಮಾಡುತ್ತಿದ್ದಾತ "ನೋಡಿರಿ–ನಮ್ಮ ಕ್ರಿಸ್ತನು ಪತಿತರನ್ನು ಉದ್ಧಾರ ಮಾಡಿದ. ಬಡವರಿಗೆ ಸಹಾಯ ಮಾಡಿದ. ಆತನು ದೇವರ ಮಗ. ಆತನನ್ನು ನಂಬಿರಿ. ನಿಮ್ಮ ಕೃಷ್ಣನು ಏನು ಮಾಡಿದ್ದಾನೆ? ಬೆಣ್ಣೆ ಕದ್ದಿದ್ದಾನೆ..."

ಇಷ್ಟು ಹೇಳಿದ ಹೊತ್ತಿಗೆ ಸರಿಯಾಗಿ ಆ ದಾರಿಯಲ್ಲಿ ಹೋಗುತ್ತಿದ್ದ ಒಬ್ಬಾತ ಈ ಮಿಷನರಿಯ ಮಾತಿನೊಳಕ್ಕೆ ಬಾಯಿ ಹಾಕಿಕೊಂಡು ಬಂದ.

ಆಗಂತುಕ: "ಕೃಷ್ಣನ ವಿಚಾರ ನಿಮಗೆ ಏನು ತಿಳಿಯುವುದು?"

ಉಪನ್ಯಾಸಕ: "ನೀವು ಯಾರ್ರಿ?"

ಆ: "ನೀವು ಯಾರು?"

ಉ: "ನಾವು ಪಾದ್ರಿಗಳು."

ಆ: "ನಾವು ಪಾದ್ರಿಗಳಿಗೆ ಉಪಾದ್ರಿಗಳು."

ಉ: "ಅದು ಹೇಗೆ?

ಆ: "ನಿಮಗೆಲ್ಲ ಗುರುಗಳಾಗಿರುವ ವೆಸ್ಲಿಯನ್ ಮಿಷನ್‌ನವರನ್ನು ಕೇಳಿರಿ. ಅವರಿಗೆ ನಾನು ಪಾಠ ಹೇಳಿಕೊಡುವವನು."

ಹೀಗೆಂದಾತ ರಾಮೇಶ್ವರಯ್ಯನವರು. ಇವರು ಮೈಸೂರು ಪಟ್ಟಣದಲ್ಲಿದ್ದ ಪರಂಗೀ ಜನಕ್ಕೆ–ಮುಖ್ಯವಾಗಿ ಪಾದರಿಗಳಿಗೆ ಕನ್ನಡ ಹೇಳಿಕೊಡುತ್ತಿದ್ದರು.

ಅಭಿನಯ

ರಾಮೇಶ್ವರಯ್ಯನವರು ಚೆನ್ನಾಗಿ ಬಿ.ಎ. ಪ್ಯಾಸು ಮಾಡಿದ್ದರು. ಸಂಸ್ಕೃತದಲ್ಲಿ ವಿದ್ವಾಂಸರಾಗಿದ್ದರು. ಈ ಮೇಲಿನ ಸಂದರ್ಭ ನಡೆದ ಸುಮಾರಿನಲ್ಲಿ ಅವರು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಅವರು ಚರಿತ್ರೆ ಪಾಠ ಹೇಳುತ್ತಿದ್ದರಂತೆ. ಮೊಗಲ್ ಚಕ್ರವರ್ತಿ ಹುಮಾಯೂನನಿಗೆ ಕಾಯಿಲೆ ಬಂದಾಗ ಆತನ ತಂದೆ ಬಾಬರನು ದೇವರನ್ನು ಬೇಡಿಕೊಂಡು ಯಾವುದೋ ಮಂತ್ರ ಹೇಳುತ್ತ ತನ್ನ ಮಗನಿಗೆ ಬಂದಿದ್ದ ರೋಗ ತನಗೆ ಬಂದು ಮಗನು ಆರೋಗ್ಯವಂತನಾಗಲಿ ಎಂದು ಹೇಳಿಕೊಂಡು ಯಾವುದೋ ಶಾಸ್ತ್ರಕ್ರಿಯೆ ನಡಸಿದನೆಂದು ಕಥೆ. ಇದನ್ನು ಕಾರ್ಯಾನುಕರಣದ ಮೂಲಕವಾಗಿ ನಿರೂಪಣ ಮಾಡುತ್ತಿದ್ದರಂತೆ ರಾಮೇಶ್ವರಯ್ಯನವರು. ಶಾಸ್ತ್ರಕ್ರಿಯೆ ನಡಸುವಾಗ ಬಾಬರನು ತನ್ನ ಎರಡು ಕೈಗಳನ್ನೂ ಮೇಲಕ್ಕೆತ್ತಿ ಪ್ರದಕ್ಷಿಣಾಕಾರವಾಗಿ ತಿರುಗಿ "ಜೈ ಜಪ್" ಎಂದು ಮೂರು ಸಲ ಹೇಳಿ ಧೊಪ್ಪೆಂದು ಕೆಳಕ್ಕೆ ಬಿದ್ದನಂತೆ. ಇದನ್ನು ರಾಮೇಶ್ವರಯ್ಯನವರು ಕಾರ್ಯದಲ್ಲಿ ತೋರಿಸುತ್ತಿದ್ದರಂತೆ. ಇದನ್ನು ನೋಡುವುದಕ್ಕೆ ಹುಡುಗರಿಗೆ ಬಹು ಖುಷಿ.

ಇದನ್ನು ನನಗೆ ಹೇಳಿದವರು ಆ ಕಾಲದಲ್ಲಿ ಅಲ್ಲಿ ವಿದ್ಯಾರ್ಥಿಯಾಗಿದ್ದ ಎಂ.ಜಿ. ವರದಾಚಾರ್ಯರು. ಕೆಲವು ಕಾಲ ಎಂ.ಪಿ. ಸೋಮಶೇಖರರಾಯರು ಕೂಡ ರಾಮೇಶ್ವರಯ್ಯನವರ ವಿದ್ಯಾರ್ಥಿಯಾಗಿದ್ದರು.

ರಾಮೇಶ್ವರಯ್ಯನವರು ಪಾಠ ಹೇಳುವಾಗ ವಿನೋದದ ಕಥೆಗಳನ್ನು ಹೇಳುತ್ತಿದ್ದರು. ಅವರು ಕೆಲವು ವರ್ಷಗಳಾದ ಮೇಲೆ ತುಮಕೂರಿನಲ್ಲಿ ಎಂಪ್ರೆಸ್ ಗರ್ಲ್ಸ್ ಹೈಸ್ಕೂಲಿಗೆ ಹೆಡ್‌ಮಾಸ್ಟರಾಗಿ ಬಂದರು. ಅಲ್ಲಿಯೂ ವಿದ್ಯಾರ್ಥಿನಿಯರ ಪ್ರೀತಿ ಮನ್ನಣೆಗಳನ್ನು ಸಂಪಾದಿಸಿದರು.

ರಾಮೇಶ್ವರಯ್ಯನವರು ನಡತೆಯಲ್ಲಿ ಪರಿಶುದ್ಧರು. ಪ್ರಾಮಾಣಿಕರು. ಆದದ್ದರಿಂದ ಅವರ ವಿಷಯದಲ್ಲಿ ಎಲ್ಲರಿಗೂ ಗೌರವ.

ಅವರು ವೃತ್ತಪತ್ರಿಕೆಗಳಲ್ಲಿ ಸಾರ್ವಜನಿಕ ವಿಚಾರಗಳನ್ನು ಕುರಿತು ಟೀಕೆ ಮಾಡಿ ಬರೆಯುತ್ತಿದ್ದದ್ದುಂಟು. ಮತ್ತು ಈ ಕಾರ್ಯದಲ್ಲಿ ಅವರು ನಿರ್ಭೀತರಾಗಿ, ನಿರ್ದಾಕ್ಷಿಣ್ಯದಿಂದ ಇರುತ್ತಿದ್ದರು.

ಪತ್ರಿಕಾ ಲೇಖನ

ಕೆಲವು ಕಾಲದ ಅನಂತರ ಮೈಸೂರಿನಲ್ಲಿ ಸಬ್ ಜಡ್ಜಿಯಾಗಿದ್ದು ಉತ್ತರೋತ್ತರ ಸರಕಾರದ ಸೆಕ್ರೆಟರಿ ಪದವಿಗೆ ಹತ್ತಿದ ಡಿ.ಎಂ. ನರಸಿಂಗರಾಯರು ರಾಮೇಶ್ವರಯ್ಯನವರ ಪತ್ರಿಕಾ ಲೇಖನದ ಸಂಗತಿಯನ್ನು ತಿಳಿದುಕೊಂಡು ರಾಮೇಶ್ವರಯ್ಯನವರ ಸ್ನೇಹವನ್ನು ಸಂಪಾದಿಸಿದರು. ಅವರಿಬ್ಬರೂ ಸೇರಿ ಹತ್ತಾರು ಲೇಖನಗಳನ್ನು ಬರೆದದ್ದು ನನಗೆ ಗೊತ್ತಿದೆ. ಅವರಿಬ್ಬರೂ ಬದುಕಿದ್ದ ಕಾಲದಲ್ಲಿ ಈ ಸಂಗತಿಯನ್ನು ಪ್ರಕಟಪಡಿಸುವುದು ಅನುಚಿತವಾಗುತ್ತಿತ್ತು. ರಾಮೇಶ್ವರಯ್ಯನವರೂ ನರಸಿಂಗರಾಯರೂ ಬರೆದ ಲೇಖನಗಳು ಮದರಾಸಿನ “ಇಂಡಿಯನ್ ಪೇಟ್ರಿಯಟ್” ಎಂಬ ಇಂಗ್ಲಿಷ್ ದಿನಪತ್ರಿಕೆಯಲ್ಲಿ ಬಂದವು. ಬಹುಶಃ “ಹಿಂದೂ” ಪತ್ರಿಕೆಯಲ್ಲೂ ಕೆಲವು ಪ್ರಕಟವಾದವು. ಆ ಲೇಖನಗಳು ಪುಸ್ತಕರೂಪದಲ್ಲಿ ಪ್ರಕಟಗೊಂಡವು–ಮೂರು ಸಂಪುಟಗಳೆಂದು ನನ್ನ ಜ್ಞಾಪಕ. Epoch-making Events in Mysore: Part I, Part II, Part III. ಇದು ೧೯೧೧–೧೨ರ ಮಾತು. ಅದರ ತಾತ್ಪರ್ಯ–ವಿಶ್ವೇಶ್ವರಯ್ಯನವರು ಮೈಸೂರಿನ ಸರಕಾರಕ್ಕೆ ಬಂದದ್ದೂ ಇಕನಾಮಿಕ್ ಕಾನ್‌ಫರೆನ್ಸನ್ನು ಸ್ಥಾಪಿಸಿದ್ದೂ ದಿವಾನರಾದದ್ದೂ ಒಂದು ನೂತನಯುಗದ ಪ್ರಾರಂಭ–ಎಂದು. ಇದನ್ನು ಹೇಳುವ ವ್ಯಾಜ್ಯದಲ್ಲಿ ಹತ್ತಾರು ಸಂಗತಿಗಳನ್ನು ಮತ್ತು ಹತ್ತಾರು ಮಂದಿ ಮಹನೀಯರನ್ನು ಕುರಿತ ಟೀಕೆಗಳಿವೆ. ನನ್ನಲ್ಲಿದ್ದ ಪುಸ್ತಕಗಳು ಕಳೆದುಹೋಗಿವೆ. ಅವುಗಳನ್ನು ಯಾರಾದರೂ ನನಗೆ ಕಳುಹಿಸಿದಲ್ಲಿ ಬೆಲೆ ಕೊಡುವುದಲ್ಲದೆ, ಕೃತಜ್ಞತೆಯಿಂದ ವಂದಿಸಲು ಸಿದ್ಧನಾಗಿದ್ದೇನೆ. ಆ ಪ್ರಕಟಣೆಗಳಲ್ಲಿ ಮೈಸೂರು ದೇಶದ ರಾಜ್ಯಚರಿತ್ರೆಗೂ ಪ್ರಜಾಭ್ಯುದಯ ಚರಿತ್ರೆಗೂ ಸಂಬಂಧಪಟ್ಟ ಬಹು ಸಂಗತಿಗಳು ಸೇರಿವೆ. ದೇಶಚರಿತ್ರೆಯನ್ನು ಬರೆಯುವವರಿಗೆ ಅದು ಬಹು ಬೆಲೆಯುಳ್ಳ ಸಾಮಾಗ್ರಿ. ನಮ್ಮ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ದೇಶಚರಿತ್ರೆಯ ಸಾಮಾಗ್ರಿಯನ್ನು ಸಂಗ್ರಹಿಸಿಡುತ್ತೇವೆ. ವಾಚಕ ಮಹಾಶಯರಲ್ಲಿ ಯಾರಾದರೂ ಚಾರಿತ್ರಿಕ ಸಮಾಗ್ರಿಯುಳ್ಳವರು ಆ ಸಾಮಾಗ್ರಿಯನ್ನು ಅದು ಎಷ್ಟು ಸಣ್ಣದಾದರೂ ಸ್ವಲ್ಪದ್ದಾದರೂ ಅದನ್ನು ಗೋಖಲೆ ಸಂಸ್ಥೆಗೆ ಕೊಟ್ಟು ಉಪಕರಿಸಬೇಕೆಂದು ಬೇಡುತ್ತೇನೆ.

ಕೌಪೀನಧಾರಿ

ಒಂದು ಸಾರಿ ದಸರಾ ಸಮಯದಲ್ಲಿ ನಾನು ಮೈಸೂರಿನಲ್ಲಿ ಸೆಕ್ರೆಟರಿ ನರಸಿಂಗರಾಯರ ಅತಿಥಿಯಾಗಿ ಅವರ ಬಿಡಾರದಲ್ಲಿದ್ದೆ. ಅಂದು ಬೆಳಗ್ಗೆ ನರಸಿಂಗರಾಯರು ಬಹುಶಃ ದಿವಾನರನ್ನು ಕಾಣಲು ಅವರ "ಲೇಕ್‌ವ್ಯೂ" ಬಂಗಲೆಗೆ ಹೋಗಿದ್ದರು. ಆಗ ನಾನು ಆ ಜಾಗದಲ್ಲಿ ಹಾಕಿದ ಬಿದಿರು ತಡಿಕೆಯ ಕೋಣೆಯಲ್ಲಿ ಸ್ನಾನ ಮಾಡುತ್ತಿದ್ದೆ. ಅಲ್ಲಿಗೆ ದಯ ಮಾಡಿಸಿತು ರಾಮೇಶ್ವರಯ್ಯರನವರ ಸವಾರಿ. ಮೈಮೇಲೆ ಒಂದು ಬನಿಯನ್ ಕೂಡ ಇಲ್ಲ. ಪಂಚೆಗೆ ಬದಲಾಗಿ ಕೌಪೀನ. ದೊಡ್ಡ ಶಾಲು ಹೊದೆದಿದ್ದರು. ನಾನು ಕೇಳಿದೆ:

"ಇದೇನು ಹೀಗೆ ಬಂದಿರಿ?"

"ಬೆಳಗ್ಗೆ ವಾಕಿಂಗ್ ಬಂದೆ. ಕುಕ್ಕನಹಳ್ಳಿ ಕೆರೆಯ ಕಡೆ ಬಂದು, ಹೀಗೆ ನರಸಿಂಗರಾಯರನ್ನು ನೋಡೋಣವೆಂದು ಹೀಗೆ ಕಾಲು ಹಾಕಿದೆ."

ನಾನು "ಅದು ಸರಿ, ವೇಷ?"

ರಾ: "ಇದು ವೇಷವಲ್ಲ. ಇದೆ ಸರಿಯಾದ ಉಡುಪು. ಮಾನಕ್ಕೆ ಕೌಪೀನ; ಚಳಿಗೆ ಶಾಲು. ಮಿಕ್ಕದ್ದು ಹೊರೆ."

ಇದು ರಾಮೇಶ್ವರಯ್ಯನವರ ಸ್ವಭಾವ.

‘ಈಡು-ಜೋಡು’

ನಾವು ಮಾತನಾಡುತ್ತಿದ್ದದ್ದು ಸಂಸ್ಕೃತ ಭಾಷೆಯಲ್ಲಿ. ನನ್ನ ಮಾತಿನಲ್ಲಿ ಎಷ್ಟೋ ತಪ್ಪುಗಳಿದ್ದಿರಬೇಕು. ಬೇಸರ ಪರಿಹಾರಕ್ಕೆಂದು ಮಾತನಾಡುತ್ತಿದ್ದೆವು. ಅಷ್ಟರಲ್ಲಿ ಡಿ.ಎಂ.ನರಸಿಂಗರಾಯರು ಅಲ್ಲಿ ಬಂದು, ಸ್ನಾನದ ಕೋಣೆಯೊಳಕ್ಕೆ ಇಣುಕಿ ನೋಡಿದರು. ಕಣ್ಣಗಲಿಸಿದರು.

ನಾನು ಕೇಳಿದೆ:

“ಏನು, ಆಶ್ಚರ್ಯವೆ?”

ನ: “ಮೊದಲೇ ಸಾಕಾಗಿತ್ತು ನಮ್ಮ ರಾಮೇಶ್ವರಯ್ಯನ ಹುಚ್ಚಾಟ. ಈಗ ಜೊತೆಗೆ ನೀವೂ ಸೇರಿದಿರಿ! ನಾನು ಹೊರಗಡೆಯಿಂದ ಸಂಸ್ಕೃತ ಮಾತನ್ನು ಕೇಳಿ ಯಾರೋ ಮುಳುಬಾಗಿಲು ಆಚಾರ್ರು ಎಂದುಕೊಂಡೆ. ಸರಿ–ಮುಖ್ಯ ಪ್ರಾಣದೇವರ ಶಿಷ್ಯರು!”

ಎಲ್ಲರೂ ನಕ್ಕೆವು.

ರಾಮೇಶ್ವರಯ್ಯನವರು ನಿರಹಂಕಾರಿಗಳು. ಕುಟಿಲ ಕೃತ್ರಿಮಗಳನ್ನರಿಯದವರು. ಉಪಾಯಗಳನ್ನೂ ಅರಿಯದವರು. ನೈಜವಾದ ಒಳ್ಳೆಯವನನ್ನು ಕಾಣಬೇಕೆಂದರೆ ಅಂಥವರನ್ನು ನೋಡಬೇಕು.

೧೩

ವೆಂಕಟಪತಯ್ಯಂಗಾರ್ಯರು

ಬಹುಶಃ ಮಾರ್ಗಶಿರಮಾಸ.

ಬೆಳಗ್ಗೆ ೭ ಘಂಟೆ ಇರಬಹುದು. ಗಾಳಿ ತಂಪಾಗಿ ತಣುವಾಗದೆ ಮಂದವಾಗಿ ಬೀಸುತ್ತಿದೆ. ಗಿಡಮರಗಳು ಹೊಸಹೊಸದೆಂಬಂತೆ ಕಾಣುತ್ತಿವೆ. ಪ್ರಯಾಣಿಕರಿಗೆ ಹಿತಕರವಾದಕಾಲ. ಅಂದು ಮಾಲೂರು ತಾಲ್ಲೂಕು ನರಸಾಪುರದ ಬಳಿಯ ರಸ್ತೆಯಲ್ಲಿ ವೆಂಕಟಪತಯ್ಯಂಗಾರ್ಯರು ಜೋಡೆತ್ತಿನ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದರು.

ಆ ಕಾಲದಲ್ಲಿ ಸರಕಾರೀ ಅಧಿಕಾರಿಗಳು ಪ್ರಯಾಣ ಮಾಡುತ್ತಿದ್ದದ್ದು ಎತ್ತಿನ ಗಾಡಿಯಲ್ಲಿ. ಮೋಟಾರ್ ಬಂದಿರಲಿಲ್ಲ. ಬೈಸಿಕಲ್ಲೂ ಇರಲಿಲ್ಲ. ರೈಲಿಲ್ಲದ ಗ್ರಾಮಗಳಿಗೆ ಹೋಗಬೇಕಾದದವರು ಮೇಲ್ದರ್ಜೆಯ ಹುದ್ದೆದಾರರಾದರೆ ಕುದುರೆ ಗಾಡಿಗಳಲ್ಲಿ ಹೋಗುತ್ತಿದ್ದರು-ದಿವಾನರು, ಕೌನ್ಸಿಲರು ಇಂಥವರು. ಎರಡನೆಯ ದರ್ಜೆಯವರು, ಡಿಪಾರ್ಟ್‌ಮೆಂಟುಗಳ ಮೊಖ್ತೇಸರರು, ಡೆಪ್ಯುಟಿ ಕಮಿಷನರು ಮೊದಲಾದವರು ಪೆಟ್ಟಿಗೆ ಗಾಡಿಯಲ್ಲಿ ಹೋಗುವರು. ಮೂರನೆಯ ದರ್ಜೆಯವರು ಸ್ಕೂಲ್ ಇನ್‌ಸ್ಪೆಕ್ಟರುಗಳು ಮೊದಲಾದವರು. ವೆಂಕಟಪತಯ್ಯಂಗಾರ್ಯರು ಸ್ಕೂಲುಗಳ ಇನ್‌ಸ್ಪೆಕ್ಟರು: ಎರಡೆತ್ತಿನ ಗಾಡಿಯಲ್ಲಿ ಇವರ ಪ್ರಯಾಣ.

ನರಸಾಪುರದ ಮುಂದೆ ಯಾರೋ ಒಬ್ಬಾತ ರಸ್ತೆ ಪಕ್ಕದ ಮಾವಿನಮರದಿಂದ ಎಲೆ ಬಿಡಿಸಿಕೊಳ್ಳುತ್ತಿದ್ದ. ಸುಮಾರು ೩೦ ವರ್ಷ ವಯಸ್ಸು. ತಲೆಗೆ ಲಪ್ಪಟ್ಟಿ ಸುತ್ತಿದ್ದ. ಮೈಮೇಲೆ ಬನೀನು. ಈತನು ವೆಂಕಟಪತಯ್ಯಂಗಾರ್ಯರ ದೃಷ್ಟಿಪಥಕ್ಕೆ ಬಂದ ಕೂಡಲೆ ಅವರಿಗೆ ಆತನ ವಿಷಯದಲ್ಲಿ ಏನೋ ಕೊಂಚ ಕುತೂಹಲವುಂಟಯಿತು. ಅವರು ಗಾಡಿಯಲ್ಲಿ ಕುಳಿತೇ ಆತನನ್ನು ಕರೆದು ಕೇಳಿದರು:

ವೆಂ: “ಯಾರಪ್ಪಾ ನೀವು? ಈ ಊರಿನವರೆ?”

ವ್ಯಕ್ತಿ: “ಹೌದು, ನರಸಾಪುರದ ಹತ್ತಿರದ ಒಂದು ಹಳ್ಳಿ ನಮ್ಮ ಸ್ಥಳ.”

ವೆಂ: “ನೀವು ಯಾವ ಜನ?”

ವ್ಯಕ್ತಿ: “ಬ್ರಾಹ್ಮಣ, ಸ್ವಾಮಿ. ನಾವು ಶಾನುಭೋಗರು.”

ವೆಂ: “ವಿದ್ಯೆ ಏನು ಕಲಿತಿದ್ದೀರಿ?”

ವ್ಯಕ್ತಿ: “ನನಗೇನೂ ವಿದ್ವತ್ತಿಲ್ಲ ಸ್ವಾಮಿ.”

ವೆಂ: “ನೀವು ಶಾನುಭೋಗಿಕೆ ಲೆಕ್ಕಗಳನ್ನು ಬರೆಯಬೇಕಲ್ಲ?”

ವ್ಯಕ್ತಿ: “ಅಷ್ಟು ಅಕ್ಷರ ಬರುತ್ತದೆ ಸ್ವಾಮಿ. ಅದೇನು ವಿದ್ಯೆ!”

ವೆಂ: “ಅಮರ ಬರುತ್ತದೊ?”

ವ್ಯಕ್ತಿ: “ಒಂದು ಕಾಂಡ ಬಾಯಿಗೆ ಬರುತ್ತದೆ ಸ್ವಾಮಿ.”

ವೆಂ: “ನಿಮ್ಮ ಊರಿನಲ್ಲಿ ಸ್ಕೂಲು ಇದೆಯೆ? ಪಾಠಶಾಲೆ?”

ವ್ಯಕ್ತಿ: “ಇಲ್ಲ ಸ್ವಾಮಿ. ಈ ಸುತ್ತಮುತ್ತೂರ ಎಲ್ಲೂ ಇಲ್ಲ.”

ವೆಂ: “ನೀವು ಯಾಕೆ ಒಂದು ಸ್ಕೂಲು ಮಾಡುವುದಿಲ್ಲ?”

ವ್ಯಕ್ತಿ: “ನನಗೆ ಅಷ್ಟು ಶಕ್ತಿ ಎಲ್ಲಿದೆ ಸ್ವಾಮಿ?”

ವೆಂ: “ಅದಕ್ಕೆ ಏನು ಶಕ್ತಿ ಬೇಕು? ನೀವು ಹೇಳಿಕೊಡಬೇಕಾದದ್ದು ಅಕ್ಷರ ಲೆಕ್ಕ. ಇದಕ್ಕೆ ಬೇಕಾದಷ್ಟು ವಿದ್ಯೆ ನಿಮ್ಮಲ್ಲಿದೆ. ಹತ್ತು ಜನ ಹುಡುಗರನ್ನು ಸೇರಿಸಿಕೊಂಡು ಶಾಲೆ ಪ್ರಾರಂಭಮಾಡಿ. ಸರಕಾರದಿಂದ ನಿಮಗೆ ತಿಂಗಳಿಗೆ ೩ ರೂಪಾಯಿ ಕೊಡುವಂತೆ ನಾನು ಏರ್ಪಾಟುಮಾಡುತ್ತೇನೆ.”

ವಿದ್ಯಾಪ್ರಚಾರದ ಉಗಮ

ಈ ರೀತಿ ಪ್ರಾರಂಭವಾದವು ನಮ್ಮ ದೇಶದ ಹಳ್ಳಿಯ ಸ್ಕೂಲುಗಳು. ಈಗ್ಗೆ ೮೦-೯೦ ವರ್ಷಗಳ ಕೆಳಗೆ ದೊಡ್ಡ ದೊಡ್ಡ ತಾಲ್ಲೂಕು ಸ್ಥಳಗಳಲ್ಲಿಯೂ ಊರುಗಳಲ್ಲಿಯೂ

ಸ್ಕೂಲುಗಳನ್ನು ತೆರೆದದ್ದು, ಸರಕಾರದ ಪ್ರಯತ್ನದಿಂದ ಹಳ್ಳಿಗಳಲ್ಲಿ ಸ್ಕೂಲುಗಳಾದದ್ದು ವಿದ್ಯಾ ಇಲಾಖೆಯ ಮಧ್ಯಮ ದರ್ಜೆಯ ಅಧಿಕಾರಿಗಳ ನೈಜವಾದ ಉತ್ಸಾಹದಿಂದ. ಮೈಸೂರು ಸಂಸ್ಥಾನದಲ್ಲಿ ವಿದ್ಯಾ ಪ್ರಚಾರದ ಏರ್ಪಾಟಿಗೆ ತಳಪಾಯ ಕಟ್ಟಿಸಿದ ಮಹಾನುಭಾವರಲ್ಲಿ ವೆಂಕಟಪತಯ್ಯಂಗಾರ್ಯರು ಒಬ್ಬ ಮುಖ್ಯರು. ಅವರು ಸ್ವಂತ ಆಸಕ್ತಿಯಿಂದ ತಕ್ಕ ಜನರನ್ನು ಪ್ರೋತ್ಸಾಹಿಸಿ ಅವರ ಮೂಲಕ ಏರ್ಪಡಿಸಲಾದ ಸ್ಕೂಲುಗಳು ನೂರಾರೆಂದು ಹೇಳಿದರೆ ಅತಿಶಯೋಕ್ತಿಯಲ್ಲ.

ವೆಂಕಟಪತಯ್ಯಂಗಾರ್ಯರು ಪ್ರಾತಃಸ್ಮರಣೀಯರು. ಧರ್ಮಿಷ್ಠರು, ಜನಾನುರಾಗಿ, ಸ್ನೇಹಶೀಲರು. ಎಲ್ಲ ದೃಷ್ಟಿಗಳಿಂದಲೂ ಮಾನ್ಯರಾಗಿದ್ದವರು.

ಉಪಕಾರಶೀಲತೆ

ವೆಂಕಟಪತಯ್ಯಂಗಾರ್ಯರಿಗೆ ಸಂಸ್ಕೃತವಿದ್ಯೆಯ ವಿಷಯದಲ್ಲಿ ಶ್ರದ್ಧೆ ತೀವ್ರವಾಗಿತ್ತು. ವಿದ್ವಾನ್ ಛಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳವರಿಗೆ ಮೊದಮೊದಲು ಆಶ್ರಯ ಕೊಟ್ಟು ಸಹಾಯ ಮಾಡಿದವರಲ್ಲಿ ವೆಂಕಟಪತಯ್ಯಂಗಾರ್ಯರೂ, ವಿ. ಎನ್. ನರಸಿಂಹಯ್ಯಂಗಾರ್ಯರೂ ಮುಖ್ಯರು. ಆ ಪ್ರಯತ್ನದಿಂದ ಹುಟ್ಟಿ ಬೆಳೆದ ಪಾಠಶಾಲೆಯೇ ಈಗಿನ ಸರಕಾರಿ ಸಂಸ್ಥೆ ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆ.

ಅನೇಕ ಬ್ರಾಹ್ಮಣ ಪಂಗಡಗಳಲ್ಲಿ ವೆಂಕಟಪತಯ್ಯಂಗಾರ್ಯರನ್ನು ಸಾಕ್ಷಾತ್ ವೆಂಕಟಾಚಲಪತಿ ಎಂದು ಸ್ಮರಿಸಿಕೊಂಡು ದೀಪ ಹಚ್ಚುವ ಕುಟುಂಬಗಳು ಇಂದಿಗೂ ಇವೆ. ಆ ಕುಟುಂಬಗಳಿಗೆ ಆತನೇ ಅನ್ನದಾತ; ಎಂದರೆ ಆ ಕುಟುಂಬ ನಿರ್ಗತಿಕವಾಗಿದ್ದಾಗ ಸರಕಾರದ ಚಾಕರಿ–ಸ್ಕೂಲು ಮೇಷ್ಟರ ಉದ್ಯೋಗ ಮಾಡಿಸಿಕೊಟ್ಟು ಪೋಷಿಸಿದರು.

ವೆಂಕಟಪತಯ್ಯಂಗಾರ್ಯರ ಉಪಕಾರಶೀಲತೆ ಹೀಗಿದ್ದದ್ದರಿಂದ ಅವರು ಸರ್ಕೀಟು ಹೋದ ಕಡೆ ಅವರಿಗೆ ಆದರಣೆ ಹೆಚ್ಚಾಗಿ ದೊರೆಯುತ್ತಿತ್ತು. ಮನೆ ಮನೆಗೂ ಅವರನ್ನು ಕರೆಯುವರು. ಕೆಲವು ಮನೆಗಳಲ್ಲಿ ಅಭ್ಯಂಜನ; ಕೆಲವು ಮನೆಗಳಲ್ಲಿ ನಿಂಬೆಹುಳಿ ಚಿತ್ರಾನ್ನ, ಖೀರು, ಅಂಬೊಡೆ ಮೊದಲಾದ ಔತಣ; ಕೆಲವು ಮನೆಗಳಲ್ಲಿ ಫಲಾಹಾರ ಪೂಜೆ; ಹೀಗೆ ಜನದ ಕೃತಜ್ಞತೆ ಪ್ರದರ್ಶನವಾಗುತ್ತಿತ್ತು. ಆದರೆ ವೆಂಕಟಪತಯ್ಯಂಗಾರ್ಯರು ಮರ್ಯಾದೆಗೆ ವಿರೋಧವಿಲ್ಲದಂತೆ ಹೇಗೆ ತಪ್ಪಿಸಿಕೊಳ್ಳಬಹುದೋ ಹಾಗೆ ಈ ಊಟ ಉಪಚಾರಗಳ ಅತಿರೇಕವನ್ನು ತಪ್ಪಿಸಿಕೊಳ್ಳುತ್ತಿದ್ದರು.

ಅವರ ಭೋಜನಸಾಮಾಗ್ರಿಯೂ ಅಡಿಗೆಯಾತನೂ ಗಾಡಿಯಲ್ಲೇ ಇರುತ್ತಿದ್ದವು. ವೆಂಕಟಪತಯ್ಯಂಗಾರ್ಯರು ಸ್ವಭಾವದಿಂದಲೇ ಸರಸಿಗಳೂ ಸುಲಭರೂ ಆಗಿದ್ದದ್ದರಿಂದ ಯಾರಿಗೂ ಮುಖಭಂಗವಾಗುತ್ತಿರಲಿಲ್ಲ. ಅವರು ಯಾರಲ್ಲಿಯೂ ದರ್ಪ ದುರಹಂಕಾರ ತೋರಿದವರಲ್ಲ.

ನಿರ್ಣಾಯಕ

ಒಂದು ಸ್ವಂತ ವಿಷಯ ಹೇಳುತ್ತೇನೆ; ವಾಚಕರು ಕ್ಷಮಿಸಬೇಕು. ನಾನು ಸಾರ್ವಜನಿಕ ಕ್ಷೇತ್ರದಲ್ಲಿ ಅಷ್ಟಿಷ್ಟು ಹೆಣಗಾಡಿದ್ದೇನಷ್ಟೆ. ಇದಕ್ಕೆ ಕಾರಣಕರ್ತರಾದವರು ವೆಂಕಟಪತಯ್ಯಂಗಾರ್ಯರು. ೧೯೦೭-೮ರ ಸುಮಾರಿನಲ್ಲಿ ನಾನು ಸರಕಾರದ ಚಾಕರಿ ಸೇರಬೇಕೆಂದು ನನ್ನ ತಂದೆ ಹಠ ಮಾಡುತ್ತಿದ್ದರು. ನಾನು ಒಲ್ಲೆನೆಂದು ಹಠ ತೊಟ್ಟಿದ್ದೆ. ನನ್ನ ತಂದೆ ನಮ್ಮ ಮನೆತನಕ್ಕೆ ಬೇಕಾದ ಐದಾರು ಸ್ನೇಹಿತರಿಂದ ಹೇಳಿಸಿ ನೋಡಿದರು. ನಾನು ಒಪ್ಪಲಿಲ್ಲ. ಕಡೆಗೆ ನಮ್ಮ ಸಂಸಾರಕ್ಕೆ ತುಂಬ ಆಪ್ತರಾಗಿದ್ದ ಐದಾರು ಮಂದಿಯನ್ನು ಜೊತೆ ಮಾಡಿಕೊಂಡು ಬೆಂಗಳೂರಿಗೆ ಬಂದು ನನ್ನ ಮೇಲೆ ಒತ್ತಾಯ ಹೇರಿದರು. ನನ್ನ ಹಠವನ್ನು ಕಂಡ ಒಬ್ಬಾತ ಕಡೆಗೆ ನನ್ನ ತಂದೆಗೆ ಹೇಳಿದರು: “ನಾವು ಒಂದು ಕೆಲಸ ಮಾಡೋಣ. ವೆಂಕಟಪತಯ್ಯಂಗಾರ್ಯರವರಲ್ಲಿ ಈ ತಕರಾರನ್ನೆಲ್ಲ ಹೇಳೋಣ. ಅವರು ತೀರ್ಮಾನ ಮಾಡಿದಂತೆ ನಾವೆಲ್ಲ ಒಪ್ಪಿಕೊಳ್ಳೋಣ” (ನನ್ನ ಕಡೆಗೆ ತಿರುಗಿ) “ಏನಪ್ಪಾ ಆಗಬಹುದಷ್ಟೆ?” ನಾನು ಏನು ಹೇಳುವುದಕ್ಕೂ ತೋರದೆ ನಿಂತೆ. ಆಗ್ಗೆ ನಾನು ವೆಂಕಟಪತಯ್ಯಂಗಾರ್ಯರನ್ನು ದೂರದಿಂದ ಕೂಡ ಕಂಡಿರಲಿಲ್ಲ. ಅವರ ಹೆಸರನ್ನು ಕೇಳಿದ್ದೆ, ಅಷ್ಟೆ. “ಅವರು ಏನಾದರೂ ಹೇಳಲಿ, ನನ್ನ ತೀರ್ಮಾನ ನನ್ನದು” ಎಂದು ಮನಸ್ಸಿನಲ್ಲಿ ಗಟ್ಟಿಮಾಡಿಕೊಂಡಿದ್ದೆ.

ಸ್ವಾವಲಂಬನೆ

ಆಗ ವೆಂಕಟಪತಯ್ಯಂಗಾರ್ಯರು ಚಾಮರಾಜಪೇಟೆಯ ಐದನೆಯ ಬೀದಿಯ ತಮ್ಮ ಮನೆಯಲ್ಲಿದ್ದರು. ನನ್ನ ತಂದೆಯೂ ಅವರ ನಿಯೋಗ ಗೋಷ್ಠಿಯೂ ಅವರನ್ನು ಕಂಡು ತಮ್ಮ ಅಹವಾಲನ್ನು ಹೇಳಿಕೊಂಡರು. ಅಯ್ಯಂಗಾರ್ಯರು ಸಾವಧಾನವಾಗಿ ಕೇಳಿದರಂತೆ. ಕಡೆಗೆ ಅವರು ಕೊಟ್ಟ ತೀರ್ಮಾನವನ್ನು ನನ್ನ ತಂದೆ ಹೇಳಿದಂತೆ ಹೇಳುತ್ತೇನೆ: "ವೆಂಕಟರಮಣಾ, ನಿನಗೇಕೋ ಈ ಚಿಂತೆ? ತನ್ನ ಜೀವನ ತಾನು ಸಂಪಾದಿಸಿಕೊಳ್ಳುತ್ತೇನೆಂದು ಅವನು ಹೇಳುತ್ತಿದ್ದಾನೆ. ಹಾಗೆ ಮಾಡಲಿ ಬಿಡು. ಅದರಲ್ಲೇನು ತಪ್ಪು? ಅವನು ಕಷ್ಟಕ್ಕೆ ಸಿಕ್ಕಿಕೊಂಡರೆ ಆಗ ನೀನು ಸಹಾಯಕ್ಕೆ ಬರುವೆಯಂತೆ. ನನ್ನ ದಾರಿ ನಾನು ನೋಡಿಕೊಳ್ಳುತ್ತೇನೆ ಎಂದು ಹೇಳುವ ಜನರೇ ಅಪರೂಪ. ನಿನ್ನ ಮಗ ಹಾಗೆ ಹೇಳಿದರೆ ನೀನು ಸಂತೋಷ ಪಡಬೇಡವೆ? ಅವನಿಗೆ ಒಂದು ಚಾನ್ಸ್ ಕೊಡು."

ನನ್ನ ತಂದೆಗೆ ವೆಂಕಟಪತಯ್ಯಂಗಾರ್ಯರ ಮಾತಿನ ಮೇಲೆ ಯಾರ ಮಾತೂ ಲೆಕ್ಕಕ್ಕೆ ಬರುತ್ತಿರಲಿಲ್ಲ. ವೆಂಕಟಪತಯ್ಯಂಗಾರ್ಯರು ಕೋಲಾರದಲ್ಲಿದ್ದಾಗ ಅವರಿಗೂ ನನ್ನ ಅಜ್ಜ ಶೇಷಗಿರಿಯಪ್ಪನವರಿಗೂ ತುಂಬ ಸ್ನೇಹ ಬೆಳೆದಿತ್ತು. ಈ ಕಾರಣದಿಂದ ಅವರು ನನ್ನ ತಂದೆಯನ್ನು ಏಕವಚನದಿಂದ ಸಂಬೋಧಿಸಿ ಸಲಿಗೆಯಿಂದ ಮಾತನಾಡುತ್ತಿದ್ದರು.

ಅಂದು ಅವರು ನನ್ನನ್ನು ಕುರಿತು ಹೇಳಿದ ಮಾತು ನನ್ನ ತಂದೆಗೆ ಸಮ್ಮತವಾಯಿತು. ಹೀಗೆ ನಾನು "ಮಾಡಿದ್ದುಣ್ಣೋ ಮಹಾರಾಯ" ಆಗಿದ್ದೇನೆ.

೧೪

ಶಿಕ್ಷಣ ಶ್ರದ್ಧೆ

ವಿದ್ಯಾ ಇಲಾಖೆಯಲ್ಲಿ ಮೇಷ್ಟರುಗಳಿಗೆ ಪ್ರಾರಂಭದ ಸಂಬಳ ತಿಂಗಳಿಗೆ ೩ ರೂಪಾಯಿ. ಇದು ಗ್ಯಾರೆಟ್, ಲೆನ್ನರ್ಡ್, ರೈಸ್ ಮೊದಲಾದ ಆಂಗ್ಲೇಯ ಅಧಿಕಾರಿಗಳಿದ್ದ ಕಾಲದಲ್ಲಿ. ಹಾಗೆ ೧೦-೧೫ ವರ್ಷ ನಡೆದ ಮೇಲೆ ೪ ರೂಪಾಯಿಗೆ ಪ್ರಮೋಷನ್, ೨೦ ವರ್ಷ ಚಾಕರಿ ಮಾಡಿದ್ದವನಿಗೆ ೫ ರೂಪಾಯಿ. ಇಲಾಖೆಯ ಅಧಿಕಾರಿಗಳಿಂದ ಇದು ಸಾಲದೆಂದೂ ಹೆಚ್ಚಿಸಬೇಕೆಂದೂ ಪದೇ ಪದೇ ಶಿಫಾರಸು. ಸರಕಾರ ಹಣದ ಅನುಕೂಲವಿಲ್ಲವೆಂದು ಜವಾಬು ಹೇಳುತ್ತಿತ್ತು. ಭಾಭಾ ಸಾಹೇಬರ ಕಾಲದಲ್ಲಿ ೫ ರಿಂದ ೭ಕ್ಕೆ ಹೆಚ್ಚಿಸಬೇಕೆಂದು ಅವರ ಒತ್ತಾಯ. ಈ ಪ್ರಶ್ನೆ ೮-೧೦ ವರ್ಷ ಬಗೆಹರಿಯದೆ ಉಳಿದಿತ್ತು. ಆಗಿನ ಒಂದು ಸಂದರ್ಭವನ್ನು ನಾನು ಕಣ್ಣಾರೆ ಕಂಡವನು.

ಕೃಷ್ಣರಾಯರು

ಮುಳುಬಾಗಿಲಿನ ಒಬ್ಬ ದೊಡ್ಡಮನುಷ್ಯರು ಎಮ್. ಕೃಷ್ಣರಾಯರು. ಇವರಿಗೆ "ದೊಡ್ಡ ಮನೆಯವರು" ಎಂದೇ ಹೆಸರಿತ್ತು. ಅವರ ಭೂಸ್ವತ್ತು ಭಾರಿಯದು. ಅವರ ಮುಳುಬಾಗಿಲು ಮನೆಯೂ ದೊಡ್ಡದು. ಕೃಷ್ಣರಾಯರಿಗೆ ಚಿಕ್ಕಂದಿನಲ್ಲಿಯೇ ಪಿತೃವಿಯೋಗವಾಗಿತ್ತು. ಅವರು ಮೈಸೂರು ಪಟ್ಟಣವನ್ನು ಸೇರಿ ಅಲ್ಲಿ ಮೇಲು ವಿದ್ಯಾಭ್ಯಾಸ ಮಾಡಿ ಮಹಾರಾಜ ಕಾಲೇಜಿನಲ್ಲಿ ಮುಖ್ಯ ಗುಮಾಸ್ತೆ (Head Clerk) ಆಗಿದ್ದರು. ಕೃಷ್ಣರಾಯರು ಪ್ರಿನ್ಸಿಪಾಲರಾಗಿದ್ದ ವೀರ್ (Weir) ಅವರಿಗೂ ಡೆನ್‌ಹ್ಯಾಮ್ (Denham) ಅವರಿಗೂ ಅಚ್ಚುಮೆಚ್ಚಾಗಿದ್ದರು.

ಅವರಿಗೆ ಮದುವೆಯಾಗಿದ್ದಾಕೆ ದಿವಾನ್ ಕೃಷ್ಣಮೂರ್ತಿಗಳ ಸಂಬಂಧಿಕರೆಂದು ಖ್ಯಾತಿ ಹರಡಿತ್ತು. ಹೀಗೆ ಅವರ ಪ್ರಭಾವ ಹೆಚ್ಚಿನದೆಂದು ಮುಳುಬಾಗಿಲು ಮಹಾಜನ ತಿಳಿದುಕೊಂಡಿದ್ದರು. ಅವರು ದಿವಾನರ ಬಂಧುಗಳಾದ್ದರಿಂದಲೂ ವೀರ್, ಭಾಭಾ ಮೊದಲಾದವರ ಆಪ್ತರಾಗಿದ್ದದ್ದರಿಂದಲೂ ಇತರರಾರಿಗೂ ತಿಳಿಯಲಾಗದ ಗೋಪ್ಯವರ್ತಮಾನಗಳು ಅವರಿಗೆ ತಿಳಿದಿರುವುದೆಂದು ಎಲ್ಲರಿಗೂ ಖಾತರಿ. ಮೇಷ್ಟರುಗಳ

ಸಂಬಳದ ಬಗೆಗೆ ಮಾಡಿದ್ದ ಶಿಫಾರಸು ಎಲ್ಲಿಗೆ ಬಂದಿದೆ ಎಂಬುದರ ನಿಜಸ್ಥಿತಿ ಕೃಷ್ಣರಾಯರಿಗೆ ಖಂಡಿತವಾಗಿ ತಿಳಿದಿರುತ್ತದೆ-ಎಂದು ಎಲ್ಲರ ಅನಿಸಿಕೆ.

ಕೃಷ್ಣರಾಯರು ಬಾಲ್ಯದಲ್ಲಿ ನನ್ನ ತಂದೆಯ ವಿದ್ಯಾರ್ಥಿ. ಆದದ್ದರಿಂದ ನನ್ನ ತಂದೆಗೂ ಆತನಿಗೂ ತುಂಬ ಸ್ನೇಹ. ನನ್ನ ತಂದೆ ಸ್ಕೂಲುಮೇಷ್ಟರಷ್ಟೆ. ಈ ಊರಿನ ಇತರ ಸ್ಕೂಲುಮೇಷ್ಟರುಗಳೂ ಕೃಷ್ಣರಾಯರಿಗೆ ಚೆನ್ನಾಗಿ ತಿಳಿದವರು. ತಿರುವೇಂಗಡಯ್ಯ, ಮಾರಶೆಟ್ಟಿ, ಚಿನ್ನಸ್ವಾಮಿ, ಚಂದ್ರಶೇಖರ ಶಾಸ್ತ್ರಿಗಳು.

ಕೃಷ್ಣರಾಯರು ವರ್ಷಕ್ಕೊಂದು ಸಾರಿ ಬೇಸಗೆ ರಜ ಬಂದಾಗ ಮುಳುಬಾಗಿಲಿಗೆ ಬರುವರು- ನಂಗಲಿ ಮುಂತಾದ ಕಡೆ ಅವರ ರೈತರಿಂದ ಸಲ್ಲಬೇಕಾಗಿದ್ದ ತಮ್ಮ ಭಾಗವನ್ನು ವಸೂಲು ಮಾಡಲು. ಅವರು ಬರುವ ದಿವಸವನ್ನು ಮುಳುಬಾಗಿಲಿನ ಜನ ಊಹಿಸಿಕೊಂಡು ದಾರಿ ಕಾಯುವರು. ಬೆಳಗ್ಗೆ ೧೨ ಘಂಟೆಯ ಸುಮಾರಿಗೆ ಟಪಾಲು ಹೊತ್ತ ಜಟಕಾ ಬರುವುದು. ಅದು ವಾಡಿಕೆಯಾಗಿ ತೆಲುಗು ಸ್ಕೂಲು ಚೌಕದಲ್ಲಿ ನಿಲ್ಲುವುದು. ಅಲ್ಲಿ ಮೇಷ್ಟರುಗಳ ಸಮ್ಮೇಳನ. ಟಪಾಲು ಗಾಡಿಯಲ್ಲಿ ಅವರು ಬಾರದಿದ್ದರೆ ನಾಳೆ ಬಂದಾರು ಎಂದುಕೊಂಡು ಮನೆಗಳಿಗೆ ಹೋಗುವರು. ಹೀಗೆ ಒಂದು ವಾರ ಹತ್ತು ದಿವಸ ನಡೆದದ್ದುಂಟು. ಆಮೇಲೆ ಒಂದು ದಿನ ಕೃಷ್ಣರಾಯರ ಸವಾರಿ ದಯಮಾಡಿಸುವುದು. ಮೇಷ್ಟರುಗಳಲ್ಲಿ ಒಬ್ಬೊಬ್ಬರು ಕೃಷ್ಣರಾಯರ ಗಂಟು ಮೂಟೆಗಳನ್ನು ಹೊತ್ತು ಅವರ ಮನೆಗೆ ಸೇರಿಸುವರು. ಕೃಷ್ಣರಾಯರು ನಗುಮುಖದಿಂದ ಎಲ್ಲರನ್ನೂ ಮಾತನಾಡಿಸಿ “ಇರಲಿ, ಮಾತನಾಡೋಣ. ಸಾವಕಾಶವಾಗಿ ಹೇಳಬೇಕಾದದ್ದಿದೆ. ಮಧ್ಯಾಹ್ನ ಸೇರೋಣ” ಎನ್ನುವರು.

ಕಥಾಪ್ರಸಂಗ

ಆ ಮಧ್ಯಾಹ್ನ ಮೇಷ್ಟರುಗಳು ಕುತೂಹಲಭರಿತರಾಗಿ ತೆಲುಗು ಸ್ಕೂಲಿನ ಹತ್ತಿರ ಬರುವರು. ಕೃಷ್ಣರಾಯರು ತಮ್ಮ ಪ್ರಯಾಣದ ಅನುಭವಗಳನ್ನು ಹೇಳುವರು. ದಿವಾನ್ ಕೃಷ್ಣಮೂರ್ತಿಗಳ ಮನೆಯ ವೈಭವವನ್ನು ವರ್ಣಿಸುವರು. ಹಾಗೆಯೇ ಕೌನ್ಸಿಲರುಗಳ ಕಥೆಗಳನ್ನು ಹೇಳುವರು. ಅಷ್ಟು ಹೊತ್ತಿಗೆ ಎಲ್ಲರಿಗೂ ಸಾಕಾಗುವುದು.

ಮಾರನೆಯ ದಿನ ಅದೇ ಪ್ರಸಂಗ. ಈ ಹೊತ್ತು ಭಾಭಾ ಸಾಹೇಬರ ಕಥೆ, ವೀರ್ ಸಾಹೇಬರ ಕಥೆ, ಕಾಲೇಜಿನ ಕಥೆ, ಅಲ್ಲಿಗೆ ಮುಗಿಯುವುದು.

ಮಾರನೆಯ ದಿನ ತಮ್ಮ ಸ್ನೇಹಿತರ ಕಥೆಗಳು, ಊರಿನ ವಿಚಾರ, ಬಂಧುಬಳಗದ ಕ್ಷೇಮಸಮಾಚಾರ, ನಾಲ್ಕನೆಯ ದಿನವೂ ಇದೇ. ಸ್ಕೂಲು ಮೇಷ್ಟರ ಸಂಬಳವೊಂದನ್ನು ಬಿಟ್ಟು ಮಿಕ್ಕ ಏನೇನೂ “ರಹಸ್ಯ” ಗಳು, ಹುನ್ನರುಗಳು, ತರದೂದುಗಳು–ಇದೇ ಮಾತಿಗೆ ವಿಷಯ. ಹೀಗೆ ಐದಾರು ದಿನ ಕಳೆದ ಮೇಲೆ ಮೇಷ್ಟರುಗಳಲ್ಲೊಬ್ಬರು ಧೈರ್ಯ ಮಾಡಿ ಕೇಳಿಯೇ ಬಿಡುವರು:

“ನಮ್ಮ ಸಂಬಳದ ವಿಷಯ ಹೇಳಲೇ ಇಲ್ಲವಲ್ಲ?”

ಸಮಾಧಾನ

ಆಗ ಕೃಷ್ಣರಾಯರು ಬಾಯಿ ಬಿಡುವರು: “ಶಿಫಾರಸು ಹೋಗಿದೆಯಪ್ಪ. ಈ ಸಲ ಬಹು ಬಲವಾಗಿ ಶಿಫಾರಸು ಮಾಡಿದ್ದಾರೆ. ಖಂಡಿತವಾಗಿ ತೀರ್ಮಾನವಾಗಿಯೇ ಆಗುತ್ತದೆ. ದಿವಾನರ ಟೇಬಲಿಗೆ ಹೋಗುವುದಷ್ಟೇ ತಡ.”

ಇದರಿಂದಲೇ ಮೇಷ್ಟರುಗಳು ಸಂತುಷ್ಟರಾಗಿ ತಮ್ಮ ಆಶೆಗಳನ್ನು ಕೆರಳಿಸಿಕೊಳ್ಳುವರು.

ಕೃಷ್ಣರಾಯರು ಮೈಸೂರಿಗೆ ವಾಪಸ್ಸು ಹೋದದ್ದಾಯಿತು. ಒಂದು ತಿಂಗಳಾಯಿತು, ಎರಡು ತಿಂಗಳಾಯಿತು. ಮೇಷ್ಟರುಗಳ ಪ್ರಮೋಷನ್ನಿನ ಕನಸು ಇದ್ದಂತೆಯೇ ಉಳಿದು ಕೊಂಡಿತು. ಅದು ವಾಸ್ತವವಾಗುವ ಸೂಚನೆಯ ಸುಳಿವೂ ತೋರಲಿಲ್ಲ.

ಅಭೀಷ್ಟ ಸಿದ್ಧಿ

ಆದರೆ ಭಾಭಾ ಸಾಹೇಬರು ಸರಕಾರವನ್ನು ಒತ್ತಾಯಪಡಿಸುತ್ತಿದ್ದುದು ನಿಜ. ಕಡೆಗೆ ಅದು ಮಂಜೂರಾಯಿತು. ಸ್ಕೂಲುಮೇಷ್ಟರ ಸಂಬಳ ೫ ಇದ್ದದ್ದು ೭ ಆಯಿತು. ಈ ಮಹಾಸಂಪತ್ತಿಗೆ ಸುಮಾರು ೨೦ ವರ್ಷಗಳ ಪ್ರಯತ್ನ. ಅದೇ ನಮ್ಮ ಮೇಷ್ಟರುಗಳಿಗೆ ಅಮೃತವರ್ಷಣ. ಗುಡಿಗಳಲ್ಲಿ ಪೂಜೆ ನಡಸಿದ್ದೂ ನಡಸಿದ್ದೇ! ಭಾಭಾ ಸಾಹೇಬರನ್ನು ಕೊಂಡಾಡಿದ್ದೂ ಕೊಂಡಾಡಿದ್ದೇ!

ಸಂಬಳ ಸಾಲದೆಂದು ಗುಂಪು ಮುಷ್ಕರಮಾಡುವ ಯೋಚನೆ ಆಗ ಯಾರಿಗೂ ತೋರಿರಲಿಲ್ಲ. ನನ್ನ ತಂದೆ, ನನ್ನ ಸೋದರಮಾವಂದಿರು, ಇತರ ಬಂಧುಗಳು, ಮುಳುಬಾಗಿಲು ಸುತ್ತಮುತ್ತಲಿನ ಹಳ್ಳಿಯ ಸ್ಕೂಲುಮೇಷ್ಟರುಗಳು, ಅವರ ಸ್ನೇಹಿತರುಗಳು ಅವರಾರಿಗೂ "ಸ್ಟ್ರೈಕ್" ಎಂಬುದರ ಯೋಚನೆ ಹೊಳೆಯಲಿಲ್ಲ. ಯಾರಾದರೂ ಅವರಿಗೆ ಹೇಳಿದ್ದಿದ್ದರೆ ಅವರೆಲ್ಲ ಸೇರಿ ಆ ಸಲಹೆಗಾರನಿಗೆ ಬೇಕೂಫ ಪಟ್ಟಿ ಕಟ್ಟುತ್ತಿದ್ದರೆಂಬುದರಲ್ಲಿ ನನಗೆ ಕೊಂಚವೂ ಸಂದೇಹವಿಲ್ಲ. ಹರಕು ಅಂಗಿಯೋ, ಮಾಸಲು ಪಂಚೆಯೋ ತಮ್ಮ ಪಾಡು ಏನಾದರಾಗಲಿ, ತಾವು ಮಾಡಬೇಕಾದ ಕೆಲಸವನ್ನು ಶ್ರದ್ಧೆಯಿಂದ ಮನಸ್ಸಿಟ್ಟು ಮಾಡಬೇಕೆಂದು ಆಗಿನ ಜನದ ಮತ. ಅದರಂತೆ ಅವರು ನಡೆದರು.

೧೫

ವಿದ್ಯಾವೈಭವ

ಈಗ ನಾನು ನನ್ನ ವಿದ್ಯೋಪಾಧ್ಯಾಯರುಗಳ ಸ್ಮರಣೆಗೆ ಹೊರಟಿದ್ದೇನೆ.

ಭಗವಂತನು ನನ್ನ ವಿಷಯದಲ್ಲಿ ಎಷ್ಟೋ ಅನುಗ್ರಹಗಳನ್ನೂ ಮಾಡಿದ್ದಾನೆ, ಎಷ್ಟೋ ಕೊರತೆಗಳನ್ನೂ ಕೊಟ್ಟಿದ್ದಾನೆ. ಆ ಕೊರತೆಗಳಲ್ಲಿ ಈ ಪ್ರಕರಣಕ್ಕೆ ಸೇರಿದುವು ಎರಡು:

1. ನನ್ನ ಗುರುಗಳು ಅಂಥ ಪಂಡಿತರು, ಇಂಥ ವಿದ್ವನ್ಮಣಿಗಳು ಎಂದು ಹೇಳಿ ಪ್ರಸಿದ್ಧ ಪುರುಷರ ಸಂಬಂಧವನ್ನು ಸೂಚಿಸಿ ಹೆಮ್ಮೆಪಟ್ಟುಕೊಳ್ಳುವ ಅವಕಾಶ ನನಗಿಲ್ಲ. ನನ್ನ ಉಪಾಧ್ಯಾಯರು ನನ್ನ ಪಾಲಿಗೆ ಮಹನೀಯರಾಗಿದ್ದರೂ ಲೋಕದ ದೃಷ್ಟಿಯಿಂದ ಅಪ್ರಸಿದ್ಧರು; ಮಹಾಮಹೋಪಾಧ್ಯಾಯ, ಡಿ.ಲಿಟ್. ಮೊದಲಾದ ಬಿರುದುಗಳನ್ನು ಪಡೆದವರಲ್ಲ; ದೊಡ್ಡ ದೊಡ್ಡ ಸಭೆಗಳಲ್ಲಿ ಗರ್ಜಿಸಿದವರೂ ಅಲ್ಲ. ಅವರು ಸಾಮಾನ್ಯರಲ್ಲಿ ಸಾಮಾನ್ಯರು.
2. ನನ್ನ ಸಹಪಾಠಿಗಳಲ್ಲಿ ಅಂಥ ಪ್ರಸಿದ್ಧರಿದ್ದರು, ಇಂಥ ಸಮರ್ಥರಿದ್ದರು–ಎಂದು ಹೇಳಿಕೊಳ್ಳುವ ಹಾಗೂ ಇಲ್ಲ. ನನ್ನ ಜೊತೆಯಲ್ಲಿದ್ದವರೆಲ್ಲ ಸಾಮಾನ್ಯರಲ್ಲಿ ಅತಿ ಸಾಮಾನ್ಯ. ಯಾರೂ ಮಹಾಪಂಡಿತ ಪಂಕ್ತಿಗೆ ಹತ್ತಲಿಲ್ಲ. ಅಧಿಕಾರ ಪದವಿಗಳಿಗೆ ಹತ್ತಲಿಲ್ಲ. ವಕೀಲರಾಗಿಯೋ ವೈದ್ಯರಾಗಿಯೋ ಪ್ರಖ್ಯಾತಿ ಪಡೆದವರಲ್ಲ.

ಸಹಪಾಠಿಗಳು

ನನ್ನ ಸಹಪಾಠಿಗಳಲ್ಲಿ ಕೆಲವರ ಹೆಸರನ್ನು ಹೇಳುತ್ತೇನೆ. ಅದರಿಂದಲೇ ಅವರ ಸ್ಥಾನ ಮಾನಗಳು ಎಷ್ಟರವೆಂಬುದು ಸ್ಪಷ್ಟವಾದೀತು: ಸುಣ್ಣಕಲ್ಲುನಾಗ, ಅಗಸರ ಸುಬ್ಬ, ವೆಂಕಟದಾಸರಿ ಮಗ ವೆಂಕಟಸಾಮಿ, ಕಮ್ಮಾರ ಗುರಪ್ಪಾಚಾರಿ, ಸ್ಕೂಲು ಜವಾನ ಮಾದಯ್ಯನ ಮಗ ಮುನಿತಿಮ್ಮ, ಬಣಜಿಗರ ಗುರುವಯ್ಯ.

ಇಂಥವರು ನನ್ನ ಸಹಪಾಠಿಗಳು. ಅವರ ನಡುವೆ ಒಬ್ಬೊಬ್ಬರು ಸುಸಂಸ್ಕೃತ ಮನೆಗಳವರು ಇದ್ದರು. ಆದರೆ ಬಹುಭಾಗ ಹಳ್ಳಿಯ ಕಸಬಿನವರ ಮನೆಗಳ ಹುಡುಗರು.

ಹೀಗಿರುವಾಗ ನನ್ನ ವಿದ್ಯಾಭ್ಯಾಸದ ಚರಿತ್ರೆಯಲ್ಲಿ ವಿದ್ವಾಂಸರನ್ನು ಸಂತೋಷ ಪಡಿಸಬಹುದಾದ ಸಂಗತಿ ತೀರಾ ಅಪರೂಪ.

ಹೀಗಿದ್ದರೂ ಒಂದು ಜೋರು ಹೋಗಿಲ್ಲ. ನಮ್ಮಂಥ ಅಪಕ್ವಗಳಿಗೂ ಲೋಕದಲ್ಲಿ ಒಂದು ಸ್ಥಾನ ಉಂಟೆಂದು ಆ ಜೋರು. "ನಮಗೆ ಬದುಕುವುದಕ್ಕೆ ಹಕ್ಕುಂಟು!" –ಎಂಬ ನಂಬಿಕೆ ನನ್ನಲ್ಲಿ ಅಳಿಸಿಹೋಗಿಲ್ಲ. ಆ ಧೈರ್ಯದಿಂದ ಈ ಬರವಣಿಗೆ.

ಕೊರತೆ

ಮೇಲೆ ನಾನು “ಕೊರತೆ” ಎಂದು ಹೇಳಿದ್ದು ಮನಸ್ಸಿನಿಂದ; ನಾಟಕಕ್ಕಾಗಿ ಅಲ್ಲ. ಚಿಕ್ಕವಯಸ್ಸಿನಲ್ಲಿ ನಾನು ಅಪಾಪೋಲಿಯಾಗಿದ್ದರೂ ಈಚೀಚೆಗೆ ವಿದ್ಯೆ ದೊಡ್ಡ ವಸ್ತು ಎಂಬುದನ್ನು ಕಲಿತುಕೊಂಡಿದ್ದೇನೆ. ಐವತ್ತು ವರ್ಷಗಳ ಹಿಂದೆ ಈ ಬುದ್ಧಿ ಬಂದಿದ್ದರೆ ಬಹುಶಃ ನಾನು ದೊಡ್ಡ ವಿದ್ವಾಂಸರ ಆಶ್ರಯ ಸಂಪಾದಿಸಿ ಒಂದೆರಡು ಶಾಸ್ತ್ರಗಳನ್ನು ತಕ್ಕಮಟ್ಟಿಗಾದರೂ ಸ್ವಾಧೀನಪಡಿಸಿಕೊಳ್ಳಬಹುದಾಗಿತ್ತೋ ಏನೊ! ದೊಡ್ಡವರಿಂದ ಶಾಸ್ತ್ರಸಂಸ್ಕಾರ ಪಡೆಯಲಿಲ್ಲವಲ್ಲ, ಮೇಧಾವಿಗಳ ಸಂಪರ್ಕ ಆಗಲಿಲ್ಲವಲ್ಲ–ಎಂಬ ಅಳುಕೂ ಗೋಳೂ ನನ್ನ ಎದೆಯಲ್ಲಿ ಆಳವಾಗಿ ನಿಂತಿವೆ. ದೊಡ್ಡ ಗುರುವಿನಲ್ಲಿ ಓದಿದೆ ಎಂದು ಹೇಳಿಕೊಂಡು ಹೆಮ್ಮೆ ಪಡುವುದೂ, ಆ ಗುರುವನ್ನು ಪದೇ ಪದೇ ಸ್ಮರಿಸಿ ಕೈಮುಗಿಯುವುದೂ ದೊಡ್ಡ ಭಾಗ್ಯ; ದೇವರು ಅದನ್ನು ನನಗೆ ಕೊಡಲಿಲ್ಲ.

***

ಪೂರ್ವಕಾಲದಲ್ಲಿ ಅಕ್ಷರಾಭ್ಯಾಸವೆಂಬ ಒಂದು ಸಂಸ್ಕಾರವಾಗುವುದಕ್ಕೆ ಮೊದಲು ಹುಡುಗನ ಕೈಯಿಂದ ಒಂದಕ್ಷರವನ್ನೂ ಬರೆಯಿಸುತ್ತಿರಲಿಲ್ಲ. ಅದು ಹುಡುಗನಿಗೆ ಮಂಗಲಕರವಾದದ್ದೆಂದೂ ಅದರಿಂದ ಪ್ರಾರಂಭವಾದ ವಿದ್ಯಾಭ್ಯಾಸ ಸಾಂಗವಾಗಿ, ನಿರ್ವಿಘ್ನವಾಗಿ ನಡೆದೀತೆಂದೂ ಆಗಿನ ಜನದ ನಂಬಿಕೆ.

ಅಕ್ಷರಾಭ್ಯಾಸ

ಅಕ್ಷರಾಭ್ಯಾಸದ ಪ್ರಾರಂಭ ದಿನವೆಂದರೆ ಅದು ಮನೆಗೆಲ್ಲ ಒಂದು ಹಬ್ಬ. ಆ ದಿನವನ್ನು ಜೋಯಿಸರು ಗೊತ್ತು ಮಾಡುವರು. ಅಂದು ವಿದ್ಯಾರ್ಥಿಗೆ ಸ್ನಾನಮಾಡಿಸಿ ಒಗೆದ ಬಟ್ಟೆಯನ್ನುಡಿಸುವರು. ಅವನ ವಯಸ್ಸು ಸುಮಾರು ೫ ವರ್ಷ. ಅವನ ಹಣೆಗೆ ಚಂದನವನ್ನೋ ತಿಲಕವನ್ನೋ ಇಡುವರು. ಅವನು ಸಿದ್ಧವಾದ ಬಳಿಕ ಅವನಿಂದ ಪೂಜೆ. ಸರಸ್ವತಿಯ ಪಟ, ಅಥವಾ ಯಾವುದಾದರೂ ದೇವಿಯ ಚಿತ್ರಪಟ ಅಥವಾ ವಿಗ್ರಹ, ವಿಘ್ನೇಶ್ವರಪಟ ಅಥವಾ ಪಿಳ್ಳಾರಿ, ಒಂದೆರಡು ಪುಸ್ತಕ, ಮಸಿಕುಡಿಕೆ ಲೇಖನಿ, ಸ್ಲೇಟು (ಹಲಗೆ) ಬಳಪ–ಇವು ಪೂಜಾವಸ್ತುಗಳು. ಗಂಧಪುಷ್ಪ ಅರಿಶಿನ ಕುಂಕುಮ ಧೂಪ ದೀಪಾದಿಗಳಿಂದ ಸರಸ್ವತೀ ಪೂಜೆ. ಬಾಲಕನ ತಂದೆ ಅಥವಾ ಅಜ್ಜ ಸಹಕರಿಸುವರು. ಪುರೋಹಿತರು ಮಂತ್ರ ಹೇಳಿ ಪೂಜೆ ಮಾಡಿಸಿ ಆಶೀರ್ವದಿಸುವರು. ವಿದ್ಯಾರ್ಥಿಯ ಜೊತೆಯ ಹುಡುಗರಿಗೆ ಪುರಿ ಕೊಬ್ಬರಿ ಬೆಲ್ಲ ಹಂಚುವರು. ಆಗ ಪುರೋಹಿತರು ಮುಖ್ಯವಾಗಿ ಹೇಳಿಕೊಡುತ್ತಿದ್ದ ವಾಕ್ಯ ಇದು:

ಸರಸ್ವತಿ ನಮಸ್ತುಭ್ಯಂ
ವರದೇ ಕಾಮರೂಪಿಣಿ
ವಿದ್ಯಾರಂಭಂ ಕರಿಷ್ಯಾಮಿ
ಸಿದ್ಧಿರ್ಭವತು ಮೇ ಸದಾ ॥

ಈ ಸ್ತೋತ್ರವಾಕ್ಯವನ್ನು ಬಾಲಕನ ಬಾಯಿಂದ ಹೇಳಿಸಿದ ಬಳಿಕ ಅವನ ಕೈಯಿಂದ ಹಲಗೆಯ ಮೇಲೆ ಒಂದು ಪಂಕ್ತಿ ಬರೆಯಿಸುವರು: "ಶ್ರೀ ಗಣೇಶಾಯ ನಮಃ" ಎಂದೋ "ಶ್ರೀಶಾರದಾಯ್ಕೆ ನಮಃ" ಎಂದೋ "ಓಂ ನಮಶ್ಶಿವಾಯ" ಎಂದೋ "ಓಂ ನಮಶ್ಶಿವಾಯ ಸಿದ್ಧಂ ನಮಃ" ಎಂದೋ ಬರೆಯಿಸುವರು.

ಹೀಗೆ ಆ ಪ್ರಾರಂಭದ ದಿನ ವಿದ್ಯಾರ್ಥಿಯಿಂದ ಬರೆಯಿಸಿದ ಪಂಕ್ತಿಯ ಮೊದಲಿನಲ್ಲಿ "ಓಂ ನಮಃ" ಎಂಬ ಮಾತು ಇರುತ್ತಿದ್ದುದರಿಂದ ಈ ಸಂಸ್ಕಾರಕ್ಕೆ 'ಓನಾಮಪಾಠ', 'ಓನಾಮ ಕಲಿಸುವುದು' ಎಂದು ಹೆಸರಾಯಿತು. ಇಂಗ್ಲಿಷಿನಲ್ಲಿ "ಎಬಿಸಿ ತರಗತಿ" ಎಂದ ಹಾಗೆ ಕನ್ನಡದಲ್ಲಿ "ಓನಾಮದ ತರಗತಿ" ಎಂಬುದು ಬಾಲಪಾಠಕ್ಕೆ ಹೆಸರು.

ಯಾವುದು ಬಾಲಪಾಠದ ಪ್ರಾರಂಭವಾಕ್ಯವೋ ಅದೇ ಜ್ಞಾನವೃದ್ಧರ ಪಾಠದ ಸಮಾಪ್ತಿವಾಕ್ಯ. ಮಹಾಜ್ಞಾನಿಗಳು ಅಂತ್ಯದಲ್ಲಿ ಹೇಳುವುದು ಓಂ ನಮಃ ಎಂಬುದನ್ನ. ಯಾವುದು ಆದಿಯೋ ಅದೇ ಅಂತ್ಯ.

ಪುಟ್ಟಪ್ಪನವರು

ನನಗೆ ಈ ಸಂಸ್ಕಾರವನ್ನು ಮಾಡಿಸಿದ್ದರೆಂದು ನನ್ನ ಹಿರಿಯರು ಹೇಳುತ್ತಿದ್ದದ್ದು ನನಗೆ ಜ್ಞಾಪಕವಿದೆ. ಸಂಸ್ಕಾರದಲ್ಲಿ ಸೇರಿದ್ದವರು ನನ್ನ ತಂದೆ ಮತ್ತು ನನ್ನ ಕುಲಗುರುಗಳು ವೇದಮೂರ್ತಿ ವೆಂಕಟರಾಮಭಟ್ಟರು. ಅವರ ತರುವಾಯ ಕ್ರಮವಾಗಿ ದಿನ ದಿನವೂ ನನಗೆ ಪಾಠ ಹೇಳಿ ಅಕ್ಷರ ಕಲಿಸಿದ್ದವರು ಪುಟ್ಟಪ್ಪನೆಂಬುವರು.

ಪುಟ್ಟಪ್ಪನವರು ಮುಳುಬಾಗಿಲಿಗೆ ಸಮೀಪದಲ್ಲಿದ್ದ ಯಾವುದೋ ಹಳ್ಳಿಯಲ್ಲಿ ಸ್ಕೂಲುಮೇಷ್ಟರು. ಅವರು ಪ್ರಥಮಶಾಖೆಯವರು. ಅವರಲ್ಲಿ ನನ್ನ ಅಜ್ಜಂದಿರಿಗೆ ತುಂಬ ಗೌರವ. ಪುಟ್ಟಪ್ಪನವರು ಎರಡು ಮೂರು ತಿಂಗಳಿಗೊಂದಾವರ್ತಿ ಮುಳುಬಾಗಿಲಿಗೆ ಬರುತ್ತಿದ್ದರು. ಆಗ ತಪ್ಪದೆ ನಮ್ಮ ಮನೆಗೆ ಬರುವರು. ಅವರು ಬಂದ ದಿನ ಮನೆಯಲ್ಲಿ ಏನಾದರೂ ಒಂದು ಭಕ್ಷ್ಯ ಮಾಡಿಸುವರು. ಪುಟ್ಟಣ್ಣನವರು ಅದನ್ನು ಸೇವಿಸಬೇಕು; ತಾಂಬೂಲ ಹಾಕಿಕೊಳ್ಳಬೇಕು; ಯೋಗಕ್ಷೇಮ ಮಾತನಾಡಬೇಕು; ಅವರಿಗೆ ನಾನು ಕಾಲು ಮುಟ್ಟಿ ನಮಸ್ಕಾರ ಮಾಡಬೇಕು. ಇದು ಬಹುಕಾಲ ನಡೆದು ಬಂದಿತು. ವಾಸ್ತವವಾಗಿ ಪುಟ್ಟಪ್ಪನವರ ಸ್ಕೂಲಿನಲ್ಲಿ ನಾನು ಓದಿದವನಲ್ಲ. ಅವರು ನನಗೆ ಅಕ್ಷರ ಪರಿಚಯ ಮಾಡಿಸಿದರೇ ಹೊರತು ಹೆಚ್ಚಿನ ವಿದ್ಯೆಯೇನನ್ನೂ ಕೊಡಲು ಅವಕಾಶವಾಗಲಿಲ್ಲ. ಅವರು ಕೊಟ್ಟ ವಿದ್ಯೆ ಸ್ವಲ್ಪದ್ದಾದರೂ ಅವರ ವಿನಯ ಸೌಜನ್ಯಗಳಿಗಾಗಿ ಎಲ್ಲರಿಗೂ ಅವರಲ್ಲಿ ಗೌರವ.

‘ಕುರ್‍ರಾಯ’

ಪುಟ್ಟಪ್ಪನವರ ತಮ್ಮ ಶ್ರೀನಿವಾಸರಾಯರೆಂಬವರ ಪರಿಚಯ ನನಗೆ ಇನ್ನೂ ಕೊಂಚ ಹೆಚ್ಚಾಗಿ ದೊರೆಯಿತು. ಈ ಶ್ರೀನಿವಾಸರಾಯರು ನನ್ನ ಗುರುಗಳಾದ ಚಂದ್ರಶೇಖರ ಶಾಸ್ತ್ರಿಗಳಲ್ಲಿ ಶಿಷ್ಯರಾಗಿದ್ದರು. ನಾನು ಮೂರು–ನಾಲ್ಕನೆಯ ಕ್ಲಾಸಿನಲ್ಲಿದ್ದಾಗ ಶ್ರೀನಿವಾಸರಾಯರು ಐದನೆಯ ಕ್ಲಾಸಿನಲ್ಲಿದ್ದರು. ಇವರಿಗೆ ಶಾಸ್ತ್ರಿಗಳವರು “ಕುರ್‍ರಾಯ” ಎಂದು ಹೆಸರಿಟ್ಟಿದ್ದರು. ಊರಿನ ಎಲ್ಲರೂ ಆತನನ್ನು “ಕುರ್‍ರಾಯಡು” ಎಂದೇ ಕರೆಯುತ್ತಿದ್ದರು. “ಕುರ್‍ರಾಯ” ಎಂಬುದು “ಕುರುರಾಯ” ಎಂಬುದರ ರೂಪಾಂತರ. ಕುಮಾರವ್ಯಾಸ ಭಾರತದ ಕೆಲವು ಪದ್ಯಗಳು ಆ ವರ್ಷ ಲೋವರ್ಸೆಕಂಡರಿ ಪಠ್ಯಪುಸ್ತಕದಲ್ಲಿ ಸೇರಿದ್ದವು. ಆ ಪದ್ಯಗಳು “ಎಂದ ಕುರುರಾಯ”, “ಕುರುರಾಯ ಕೇಳೆಂದ” –ಎಂದು ಮುಗಿಯುತ್ತಿದ್ದವು. ಈ ಪಂಕ್ತಿಗಳನ್ನೋದುವಾಗ ನಮ್ಮ ಶ್ರೀನಿವಾಸರಾಯರು ಎರಡು “ರ” ಗಳನ್ನು ಒಂದು ಮಾಡಿ ಓದಿದರು. ಹೆಡ್‌ಮಾಸ್ಟರು ಅದನ್ನೇ ಹಿಡಿದು ಆತನಿಗೆ ಅಂಕಿತ ಮಾಡಿಬಿಟ್ಟರು. ಹಾಗೆ ಬಂದದ್ದು “ಕುರ್‍ರಾಯ” ಎಂಬ ಅಡ್ಡ ಹೆಸರು.

ಕಾಲಕ್ರಮದಲ್ಲಿ ಶ್ರೀನಿವಾಸರಾಯರು ಸ್ಕೂಲುಮೇಷ್ಟರಾದರು. ಅದರ ಜೊತೆಗೆ ಆಗ ಇದ್ದ ಅಪ್ಪರ್ ಸೆಕೆಂಡರಿ ಪರೀಕ್ಷೆಯನ್ನು ಪಾಸು ಮಾಡಿದರು. ಹೀಗೆ ಅವರು ಅಪ್ಪರ್ ಸೆಕಂಡರಿ ವಿದ್ಯಾರ್ಥಿಯಾಗಿದ್ದಾಗ ಅವರಿಗೆ ಸಹಪಾಠಿಗಳಾಗಿದ್ದವರು ಅತ್ತಿಕುಂಟೆ ಸುಬ್ಬರಾಯರು, ಶ್ರೀನಿವಾಸಪುರದ ಶೇಷಪ್ಪನವರು. ಇವರೂ ಉತ್ತರೋತ್ತರ ಸ್ಕೂಲುಮೇಷ್ಟರುಗಳಾದರು. (ಇವರ ವಿಷಯವನ್ನು ಬೇರೆ ಕಡೆ ಬರೆದಿದೆ.)

ತೆಲುಗು ಸಾಹಿತ್ಯ

ನನ್ನ ತಂದೆ, ಸೋದರಮಾವ–ಇವರನ್ನು ಕುರಿತು ಇಲ್ಲಿ ಪ್ರಸ್ತಾಪಿಸುವ ಉದ್ದೇಶವಿಲ್ಲ. ಆದರೆ ನನ್ನ ವಿದ್ಯಾಭ್ಯಾಸದ ಸ್ವರೂಪವನ್ನು ತಿಳಿಸುವ ಒಂದು ಸಂಗತಿಯನ್ನು ಹೇಳಬೇಕೆನಿಸುತ್ತದೆ. ಈ ಸಂಗತಿಯಲ್ಲಿ ಮುಖ್ಯ ವಸ್ತು ನನ್ನ ಸೋದರಮಾವ. ಆತ ತೆಲುಗು ಸ್ಕೂಲಿನಲ್ಲಿ ಉಪಾಧ್ಯಾಯರು, ಪ್ರೈಮರಿ ತರಗತಿಗೆ. ಆದರೆ ಅವರಿಗೆ ತೆಲುಗಿನ ಸಾಹಿತ್ಯ ತಕ್ಕಮಟ್ಟಿಗೆ ಪರಿಚಯವಿತ್ತೆಂದು ನನಗನಿಸುತ್ತದೆ. ಅವರು ಪದ್ಯಗಳನ್ನೂ ಹಾಡುಗಳನ್ನೂ ಹೇಳುತ್ತಿದ್ದದ್ದುಂಟು. ಅವೆಲ್ಲ ತೆಲುಗಿನವು. ಆತ ಒಂದು ಪ್ರಹ್ಲಾದ ನಾಟಕವನ್ನು ಮೊದಲಿನಿಂದ ಕಡೆಯವರೆಗೂ ಹೇಳುತ್ತಿದ್ದರು. ಅದನ್ನು ಕೇಳಿದ ಜ್ಞಾಪಕ ನನಗೆ ಚೆನ್ನಾಗಿದೆ.

“ದೂತುಡು ವಚ್ಚೆನು”
“ಕಂಚುಕಿ ಇಟ್ಲನಿಯೇ”

ಮೊದಲಾದ ರಂಗಸ್ಥಳದ ಸಂಕೇತಗಳನ್ನೂ ಹೇಳುತ್ತಿದ್ದರು. ಅನೇಕ ಶತಕಗಳನ್ನು ಹೇಳುವರು. ಸುಮತಿಶತಕ ಮೊದಲಾದ ಪದ್ಯಗಳನ್ನು ಹೇಳುವರು. ಅದರಲ್ಲಿ ಒಂದು:

ಏರಕುಮೀ ಕಸುಗಾಯಲ
ದೂರಕುಮೀ ಬಂಧುಜನುಲ ದೋಷಮುಸುಮ್ಮೀ
ಪಾರಕುಮೀ ರಣಮಂದುನ
ಮೀರ-ಕುಮೀ ಗುರುವುಲಾಜ್ಞ ಮೇದಿರ ಸುಮತೀ

ಅವನ ಕಂಠಧ್ವನಿ ನನ್ನ ಕಿವಿಗೆ ಇಂಪೆಂದು ತೋರುತ್ತಿತ್ತು. ನಾನು ಅವರಿಗೆ ಅತ್ಯಂತ ಪ್ರಿಯನಾದವನು. ಯಾವಾಗಲೂ ನನ್ನನ್ನು ಹತ್ತಿರದಲ್ಲಿಯೇ ಇರಿಸಿಕೊಂಡಿರುವರು. ಎತ್ತಿಕೊಂಡು ತಿರುಗಾಡುವರು. ತೆಲುಗು ಸ್ಕೂಲು ನಮ್ಮ ಮನೆಗೆ ಎಂಟು ಹತ್ತು ಗಜ ದೂರ. ಆದದ್ದರಿಂದ ಬೆಳಗ್ಗೆ, ಮಧ್ಯಾಹ್ನ ನನ್ನನ್ನು ಎತ್ತಿಕೊಂಡು ಸ್ಕೂಲಿಗೆ ಹೋಗುವರು.

ಗಜ್ಜುಗದ ಟೋಪಿ

ಅಲ್ಲಿ ನಮ್ಮ ತರಗತಿಗೆ ಬೆಂಚು ಮೇಜುಗಳಿರಲಿಲ್ಲ. ಬಾಲಕರೆಲ್ಲ ನೆಲದ ಮೇಲೆ ಸಾಲು ಸಲಾಗಿ ಕುಳಿತು ನಮ್ಮ ಮುಂದುಗಡೆ ಮರಳನ್ನು ಹರವಿ ಅದರಲ್ಲಿ ಅಕ್ಷರ ಬರೆಯುತ್ತಿದ್ದೆವು. ಮರಳಿನಲ್ಲಿ ಉಜ್ಜಿ ಉಜ್ಜಿ ಸವೆದು ಹೋದೀತೆಂಬ ಭಯದಿಂದ ಕೆಲಮಂದಿ ಹುಡುಗರು ಗಜ್ಜುಗದ ಕಾಯನ್ನೊಡೆದು ಅದರ ಚಿಪ್ಪುಗಳನ್ನು ಬೆರಳಿಗೆ ಟೋಪಿ ಮಾಡಿಕೊಂಡು ಅಕ್ಷರ ತಿದ್ದುವರು. ಆದರೆ ಈ ನಾಜೂಕು ಯಾರಿಗೂ ಬಹುಕಾಲ ನಡೆಯುತ್ತಿರಲಿಲ್ಲ. ಎರಡು ಮೂರು ದಿನಗಳೊಳಗಾಗಿ ಗಜ್ಜುಗದ ಟೋಪಿಗಾಗಿ ಜಗಳ ಹುಟ್ಟುವುದು. ಟೋಪಿ ಒಡೆದುಹೋಗುವುದು, ಉಪಾಧ್ಯಾಯರಿಂದ ಒಂದಿಷ್ಟು ಚೀಮಾರಿಯಾಗಿ ಜಗಳ ಮರೆತುಹೋಗುವುದು.

ಆ ಕಾಲದಲ್ಲಿ ಫೌಂಟನ್ ಪೇನಾಗಳಿರಲಿಲ್ಲ, ಕಾಗದ ಪೇನಾ ಇವೇ ಬಳಕೆಗೆ ಬಂದಿರಲಿಲ್ಲ. ಸ್ಲೇಟು ಬಳಪ ಕೂಡ ಅಪರೂಪ. ನಾನು ಕಲಿತದ್ದನ್ನು ನೆಲದ ಮೇಲೆ ಮರಳಿನಲ್ಲಿ ತಿದ್ದಿ ಕಲಿತವನು. ಇಷ್ಟು ಬರಹದ ವಿಷಯ.

ಕಾಗುಣಿತ

ಇನ್ನು ಕಾಗುಣಿತದ ವಿಷಯ. ಕಾಗುಣಿತವನ್ನು ಬಾಯಿಪಾಠದಿಂದಲೇ ಕಲಿಯಬೇಕು. ಸಂಜೆ ನಾಲ್ಕು ಘಂಟೆಗೆ ನಮ್ಮ ಕ್ಲಾಸಿನ ಹುಡುಗರೆಲ್ಲ ಎದ್ದು ನಿಲ್ಲಬೇಕು. ನಮ್ಮ ಪೈಕಿ ಯಾರೋ ಒಬ್ಬರನ್ನು ನಾಯಕನನ್ನಾಗಿ ಉಪಾಧ್ಯಾಯರು ನಿಯಮಿಸುವರು. ಆತ ಹೇಳಿದಂತೆ ನಾವು ಅನೂಚ್ಚಾರಣೆ ಮಾಡತಕ್ಕದ್ದು. ಪಾಠ ಹೀಗೆ:

> “ಕಕ್ಕೆ ತಲೆಕಟ್ಟು ಕೊಟ್ಟರೆ ಕ
> ಕಕ್ಕೆ ದೀರ್ಘ ಕೊಟ್ಟರೆ ಕಾ
> ಕಕ್ಕೆ ಗುಡಿಸು ಕೊಟ್ಟರೆ ಕಿ
> ಕಕ್ಕೆ ಗುಡಿಸಂದೀರ್ಘ ಕೊಟ್ಟರೆ ಕೀ
> ಕಕ್ಕೆ ಏತ್ವ ಕೊಟ್ಟರೆ ಕೆ
> ಏತ್ವಂದೀರ್ಘ ಕೊಟ್ಟರೆ ಕೇ”

ಇದರಂತೆ ಕ್ಷಕಾರದವರೆಗೂ ಬಾಯಿಪಾಠ, ಅನಂತರ ಸಂಯುಕ್ತಾಕ್ಷರಗಳು, ಅದಾದ ಮೇಲೆ ಮಗ್ಗಿ.

ಮಗ್ಗಿ

ಈ ಮಗ್ಗಿಯದು ನನಗೆಕೊಂಚ ತಲೆನೋವಿನ ಪ್ರಸಂಗ. ಒಂದೊಂದಲ ಒಂದರಿಂದ ಹತ್ತೊಂದಲವರೆಗೂ ಹಾಗೂ ಹೀಗೂ ನಿರ್ವಾಹ ಮಾಡುತ್ತಿದ್ದೆ. ಹನ್ನೆರಡೊಂದಲಿಂದ ಮುಂದಕ್ಕೆ ಎಲ್ಲ ಪದೇ ಪದೇ ತಪ್ಪುಗಳು. ಆದರೆ ಆ ಉಪಾಧ್ಯಾಯರುಗಳು ಸುಲಭವಾಗಿ ಕ್ಷಮಿಸುತ್ತಿದ್ದವರಲ್ಲ. ಹನ್ನೆರಡೊಂದಲ ಹನ್ನೆರಡು... ಹನ್ನೆರಡು ಹತ್ತಲ ನೂರಿಪ್ಪತ್ತು. ಇಷ್ಟಾದ ಮೇಲೆ ಪ್ರತಿಲೋಮ.

ಹನ್ನೆರಡು ಹತ್ತಲ ನೂರಿಪ್ಪತ್ತು
ಹನ್ನೆರಡೊಂಬೋತ್ಲ ನೂರೆಂಟು
ಹನ್ನೆರಡೆಂಟಲ ತೊಂಬತ್ತಾರು

ಹೀಗೆ "ಹತ್ತೊಂಬತ್ತು ಹತ್ತಲ ನೂರ ತೊಂಬತ್ತು" ರವರೆಗೆ: ಅಲ್ಲಿಂದ "ಹತ್ತೊಂಭತ್ತೊಂದಲ" ವರೆಗೆ ಬಾಯಿಪಾಠ ಹೇಳಿ ಮುಗಿಸಬೇಕು.

ಇದಾದ ಮೇಲೆ ವಾರಗಳು, ತಿಂಗಳು, ಋತುಗಳು, ಪ್ರಭವಾದಿ ಅರವತ್ತು ಸಂವತ್ಸರಗಳು– ಇದು ಪಾಠವಾಗುತ್ತಿತ್ತು.

***

ಇದನ್ನು ನಾನು ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ ಅದು ಬಹು ಒಳ್ಳೆಯ ಪದ್ಧತಿಯೆಂದು ಈಗ ನನಗೆ ನಂಬಿಕೆ ಬಂದಿದೆ. ಈಗಿನ ಪಾಠಕ್ರಮದಲ್ಲಿ ಆ ಪದ್ಧತಿ ಉಂಟೋ ಇಲ್ಲವೋ ನನಗೆ ತಿಳಿಯದು.

ಈಚಿನ ಒಂದು ಘಟನೆ

ಒಂದು ಅನುಭವ ನನ್ನ ನೆನಪಿನಲ್ಲಿ ನಿಂತಿದೆ. ಐದಾರು ವರ್ಷಗಳ ಹಿಂದೆ ಒಂದು ಭಾನುವಾರ ಬೆಳಗ್ಗೆ ನಾನು ಗೋಖಲೆ ಸಂಸ್ಥೆಗೆ ಹೋಗುತ್ತಿದ್ದೆ ಅಂದು ಅಲ್ಲಿ ನಡೆಯಬೇಕಾಗಿದ್ದ ಗ್ರಂಥವ್ಯಾಸಂಗಕ್ಕಾಗಿ. ಘಂಟೆ ಸುಮಾರು ಎಂಟೂವರೆ ಇರಬಹುದು. ಆಚಾರ್ಯ ಪಾಠಶಾಲೆಯ ದಕ್ಷಿಣ ಪಕ್ಕದ ರಸ್ತೆಯಲ್ಲಿ ಹೋಗುತ್ತಿದ್ದೆ.

ಅಲ್ಲಿಗೆ ಒಬ್ಬಾತ ಬೈಸಿಕಲ್ಲಿನ ಮೇಲೆ ಅವಸರವಸರವಾಗಿ ಬಂದಿಳಿದು. "ಈಸ್‌ಟ್ ಎಲ್ಲಿ ಸಾರ್?" ಎಂದು ಕೇಳಿದ. ಆತನ ವಯಸ್ಸು ಹದಿನಾರು ಹದಿನೆಂಟು ಇರಬಹುದು. ತಲೆಯಲ್ಲಿ ಕ್ರಾಪು ಕೈಯಲ್ಲಿ ರಿಸ್‌ಟ್‌ವಾಚು. ಠಾಕ್‌ಠೀಕಾಗಿ ಉಡುಪು. ಒಂದೆರಡು ಇಂಗ್ಲಿಷ್ ಮಾತನ್ನೂ ಆಡುತ್ತಿದ್ದ. ಆತ "ಈಸ್‌ಟ್" ಎಂದ ಕೂಡಲೆ ನನಗೆ ಕೊಂಚ ಭ್ರಾಂತಿಯಾಯಿತು. ಎಂಟೂವರೆ ಘಂಟೆಗೆ ಸೂರ್ಯಪ್ರಕಾಶ ಪ್ರತ್ಯಕ್ಷವಾಗಿರುತ್ತದೆ. ಆದದ್ದರಿಂದ ಈತನ ಪ್ರಶ್ನೆ ದಿಕ್ಕನ್ನು ಕುರಿತು ಇರಲಾರದು. ಬೇರೆ ಯಾವ ವಿಷಯಕ್ಕೋ ಈತನು "ಈಸ್‌ಟ್" ಎನ್ನುತ್ತಿದ್ದಾನೆ. "ಯೀಷ್‌ಟ್" ಎಂಬ ಮಾತಿಗೆ "ಹುದುಗು" ಎಂದರ್ಥವುಂಟು. ದೋಸೆಹಿಟ್ಟು ಮೊದಲಾದ ಪಂಡಗಳಿಗೆ ಹಿಟ್ಟನ್ನು ಉಬ್ಬಿಸುವುದಕ್ಕಾಗಿ ಒಂದು ಉಪ್ಪಿನ ಸಂಬಂಧದ ಪುಡಿಯನ್ನು ಹಾಕುತ್ತಾರೆ. ಅದಕ್ಕೆ ಯೀಸ್‌ಟ್ ಎಂದು ಹೆಸರುಂಟು.

ಹೀಗೆ ನಾನು ತರ್ಕ ಮಾಡಿಕೊಂಡು ಆತನನ್ನು ಕೇಳಿದೆ:

"ಈಸ್ಟ್ ಎಂದರೆ ಏನು ನಿಮ್ಮ ಅಭಿಪ್ರಾಯ?" ಆತನಿಗೆ "ಪೂರ್ವದಿಕ್ಕು" ಎಂದು ಹೇಳಲೂ ತೋರಲಿಲ್ಲ. ತಬ್ಬಿಬ್ಬಾದ.

ಅಷ್ಟರಲ್ಲಿ–ಆತನ ಅಣ್ಣ ಇರಬಹುದು–ಸುಮಾರು ಇಪ್ಪತ್ತೆರಡು ವರ್ಷದವನು. ನಾಗರಿಕತೆಯ ಅಲಂಕಾರಗಳನ್ನು ಧರಿಸಿ ಬೈಸಿಕಲ್ಲಿನ ಮೇಲೆ ಬಂದಿಳಿದು ಅದೇ ಪ್ರಶ್ನೆ ಹಾಕಿದ. ನಾನು ಮತ್ತೆ ಕೇಳಿದೆ:

ನಾನು: "ಈಸ್ಟ್ ಎಂದರೆ ಏನಪ್ಪ?"

ಆತ: "ಈಸ್ಟ್ ಆಂಜನೇಯ ಸ್ಟ್ರೀಟ್ ಸಾರ್."

ನಾನು: “ನಿಮಗೆ ಬೇಕಾದದ್ದು ದಿಕ್ಕೆ! ತಲೆಯ ಮೇಲೆ ನೋಡಿ.”

ಅಲ್ಲಿಗೂ ಆತನಿಗೆ ತಿಳಿಯಲಿಲ್ಲ.

ನಾನು: “ನೋಡಿ, ಸೂರ್ಯ ಹುಟ್ಟಿ ಮೇಲಕ್ಕೆ ಬರುತ್ತಿದ್ದಾನೆ. ಸೂರ್ಯ ಹುಟ್ಟುವ ದಿಕ್ಕೇ ಈಸ್ಟ್. ಅದೇ ಪೂರ್ವ.”

ಅಲ್ಲಿಂದ ನಾನು ಮುಂದಕ್ಕೆ ನಡೆದು ಗೋಖಲೆ ಸಂಸ್ಥೆಯ ಕಟ್ಟಡವನ್ನು ಸೇರಿ ಅಲ್ಲಿ ಸೇರಿದ್ದ ಎಂಟು ಹತ್ತು ಮಂದಿ ವ್ಯಾಸಂಗ ಸದಸ್ಯರಲ್ಲಿ ನನ್ನ ಅನುಭವವನ್ನು ಹೇಳಿದೆ. ಅವರಲ್ಲೊಬ್ಬಾತ, ಎಂ.ಎ., ಬಿ.ಎಲ್. ಆಗಿ ವಕೀಲಿ ನಡಸುತ್ತಿದ್ದ ಸ್ನೇಹಿತ ಹೇಳಿದ:

ಆತ “ಇದೇನು ಸಾರ್ ಆಶ್ಚರ್ಯ! ನಮ್ಮ ಅಡ್ವೊಕೇಟುಗಳಲ್ಲಿ ಇಂಥವರು ಎಷ್ಟೋ ಜನ ಇದ್ದಾರೆ.”

ನಾನು (ಆಶ್ಚರ್ಯದಿಂದ): “ಹಾಗುಂಟೆ?”

ಆತ: “ನಾಳೆ ೧೨ ಘಂಟೆಯ ಹೊತ್ತಿಗೆ ನೀವು ಕೋರ್ಟಿನ ಹತ್ತಿರ ಬನ್ನಿ. ನಾನು ನಾಲ್ಕು ಮಂದಿ ಇಂಥವರನ್ನು ತೋರಿಸುತ್ತೇನೆ.”

ಇದು ನವನಾಗರಿಕತೆಯ ಒಂದು ಲಕ್ಷಣ.

***

ನನ್ನ ಪಾಠಶ್ರದ್ಧೆ

ನನ್ನ ಸೋದರಮಾವಂದಿರು ಈ ಮೇಲಣ ಎಲ್ಲ ಪಾಠಗಳಿಗೂ ನನ್ನನ್ನು ತಯಾರು ಮಾಡಿದರು. ಅದರ ವಿಶೇಷಾಂಶ ಲೆಕ್ಕದ್ದು. ಅದರ ವಿಚಕ್ಷಣೆ ಹೀಗೆ:

ನಮ್ಮ ಮನೆಯಲ್ಲಿ ನಡುಮನೆಯ ಒಂದು ಕತ್ತಲೆ ಮೂಲೆಯಲ್ಲಿ ಅವರು ಕುಳಿತು ನನ್ನನ್ನು ಹತ್ತಿರ ಕೂಡಿಸಿಕೊಳ್ಳುವರು. ನನ್ನ ಅಜ್ಜಿ ಏನಾದರೂ ತಿಂಡಿ, ಕೊಡುಬಳೆ ಚಕ್ಕುಲಿ ಇತ್ಯಾದಿ ಹವಣಿಸುವರು. ನನ್ನ ಮಾವ ಘಟ್ಟಿಯಾದ ಧ್ವನಿಯಲ್ಲಿ "ಹದಿನೆಂಟಾರಲ ಎಷ್ಟು?" ಎಂದು ಕೇಳುವರು. ಮರುಕ್ಷಣವೇ ಮೆಲುದನಿಯಲ್ಲಿ ನನ್ನ ಕಿವಿಯಲ್ಲಿ "ನೂರೆಂಟು" ಎಂದು ಉಸಿರುವರು. ನಾನು ಘಟ್ಟಿಯಾಗಿ "ನೂರೆಂಟು" ಎಂದು ಕೂಗುವೆ. ಆಗ ಒಂದು ಚೂರು ಕೋಡುಬಳೆ ಬಾಯಿಗೆ.

ಇದರ ಅಂತರಂಗವನ್ನು ಕೇಳಬೇಕು. ನನಗೆ ಹದಿನೆಂಟಾರಲ ಎಷ್ಟೆಂದು ಗೊತ್ತಿಲ್ಲವೆಂದು ನನ್ನ ಮಾವನಿಗೆ ಗೊತ್ತು. ನನ್ನ ಬಾಯಿಂದ ತಪ್ಪು ಹೊರಟರೆ ಅದು ನನ್ನ ತಂದೆಯವರಿಗೆ ಕಿವಿಗೆ ಬಿದ್ದೀತು. ಆಗ ನನಗೆ ದಡ್ಡು ಬುಡ್ಡೂ ದಾಸಯ್ಯ ಆದೀತು. ನಾನು ಪೆಟ್ಟುತಿಂದು ಅತ್ತರೆ ನನ್ನ ಮಾವನಿಗೂ ನನ್ನ ಅಜ್ಜಿಗೂ ತಡೆಯಲಾರದಷ್ಟು ನೋವು. ಈ ಸಂಕಟವನ್ನು ಪಡಲಾರದೆ ನನ್ನ ಮಾವ ಒಂದು ಒಳ್ಳೆಯ ಸುಳ್ಳಿನಿಂದ ನನ್ನನ್ನು ಕಾಪಾಡುತ್ತಿದ್ದರು. ಪೂರ್ವ ಕಾಲದ ನೀತಿಸೂತ್ರಕಾರರು ಐದು ಸಂದರ್ಭಗಳಲ್ಲಿ ಸುಳ್ಳು ಹೇಳಿದರೆ ಪಾತಕವಲ್ಲವೆಂದು ಪರವಾನಗಿ ಕೊಟ್ಟಿದ್ದಾರೆ. (ಪಂಚಾನೃತಾನ್ಯಾಹುರಪಾತಕಾನಿ!") ನನ್ನ ಮಾವ, ನಾನು ಸೇರಿ ಮಾಡಿದ ಸುಳ್ಳು ಈ ಐದರಲ್ಲಿ ಸೇರಿಲ್ಲ. ನನ್ನ ಮಾವನ ಪಾಲಿಗೆ ಅದು ಪಾತಕವಲ್ಲವೆಂದು ನನಗೆ ಸಿದ್ಧವಾಗಿದೆ. ಆದರೆ ನನ್ನ ಪಾಲು ಪಾತಕವಲ್ಲದೆ ಹೋಗಿದ್ದಿದ್ದರೆ ನನ್ನ ಲೆಕ್ಕಾಚಾರ ಇಷ್ಟು ನಗೆಗೀಡಾಗುತ್ತಿರಲಿಲ್ಲ.

ಕೊಂಚ ಕಾಲದ ಮೇಲೆ ನನ್ನ ತಂದೆ ಈ ನಮ್ಮ ಕತ್ತಲೆಕೋಣೆ ಉಪಾಯವನ್ನು ಕಂಡು ನನಗೂ ನನ್ನ ಮಾವನಿಗೂ ಇಬ್ಬರಿಗೂ ತಕ್ಕ ಶಾಸ್ತಿಯನ್ನು ಸಲ್ಲಿಸಿದರು.

ಚಂದ್ರಶೇಖರಶಾಸ್ತ್ರಿಗಳು

ನಮ್ಮ ಹೆಡ್‌ಮಾಸ್ಟರಾಗಿದ್ದ ವೇದಮೂರ್ತಿ ಚಂದ್ರಶೇಖರ ಶಾಸ್ತ್ರಿಗಳವರನ್ನು ಕುರಿತು ಬೇರೆಯಾಗಿ ಬರೆದಿದ್ದೇನೆ (ಜ್ಞಾಪಕ ಚಿತ್ರಶಾಲೆ ೫). ಅವರು ಸ್ಕೂಲಿನ ಕಟ್ಟಡದಲ್ಲಿ ನಮಗೆ ಕಲಿಸಿದ ವಿದ್ಯೆ ಎಷ್ಟು ದೊಡ್ಡದೋ, ಅವರು ಸ್ಕೂಲಿನ ಹೊರಗೆ ಗುಡಿಯಲ್ಲಿ, ಮನೆಯಲ್ಲಿ, ಬೀದಿಯಲ್ಲಿ, ಪೇಟೆಯಲ್ಲಿ, ವಿದ್ಯೆಯೆಂದು ಹೆಸರಿಡದೆ ಕಲಿಸಿದ ವಿದ್ಯೆ ಅಷ್ಟು ದೊಡ್ಡದು; ಇನ್ನೂ ದೊಡ್ಡದೆಂದೇ ಹೇಳಬಹುದು. ಅವರೇ ನಿಜವಾದ ಗುರುಗಳು. ಸ್ಫುಟವಾದ ಉಚ್ಚಾರಣೆ, ಸಂದರ್ಭಯೋಗ್ಯವಾದ ಪದ, ಪದಗಳ ಜೋಡಣೆ, ಮಾತಿನ ಅರ್ಥಸ್ವಾರಸ್ಯ– ಇವು ಅವರ ಸಾಹಿತ್ಯಪಾಠದಲ್ಲಿನ ಮುಖ್ಯಾಂಶಗಳು. ಅವರ ಕಾವ್ಯವಾಚನ ಸೌಂದರ್ಯವೂ ಶ್ಲೋಕ ಹೇಳುವುದರ ಸೌಂದರ್ಯವೂ ಅದೇ ತೆರನದ್ದು. ಹೃದಯಂಗಮವಾದದ್ದು. ಅವರ ವೇದಪಾಠ ಕ್ರಮವೂ ಹಾಗೆಯೇ. “ಬ್ರಹ್ಮಾತ್ಮನ್ವದಸೃಜತ....” ಇತ್ಯಾದಿ ಆತ್ಮರಕ್ಷಾ ಮಂತ್ರಗಳನ್ನು ನಾನು ಮೊದಲು ಅವರ ಬಾಯಿಂದ ಕೇಳಿ ಮೈಮರೆತದ್ದು ಈಗಲೂ ಜ್ಞಾಪಕದಲ್ಲಿದೆ. ಅವರ ಕೈಯಲ್ಲಿದ್ದ ರೂಲುಕಟ್ಟಿಗೆ, ಅದರಿಂದ ನಮ್ಮ ಗಿಣ್ಣುಗಳ ಮೇಲೆ ಬೀಳುತ್ತಿದ್ದ ಪೆಟ್ಟು ಒಂದುಕಡೆ; ಅವರು ಮಾಡಿದ ಅಡಿಗೆಯ ಘಮಲು, ರುಚಿ, ಮತ್ತು ಬಡಿಸಿದ ಆದರಣೆ ಇದು ಒಂದು ಕಡೆ. ಅವರ ಆಚಾರನಿಷ್ಠೆ ಒಂದು ಕಡೆ, ಅವರು ವಿಧವಿಧವಾಗಿ ನಮಗೆ ಬಯ್ಯುತ್ತಿದ್ದ ವೈಚಿತ್ರ್ಯ ಒಂದು ಕಡೆ. ಹೀಗೆ ನಾಲ್ಕು ಕಡೆಗಳಿಂದಲೂ ನಮಗೆ ಅವರಲ್ಲಿ ಭಯಸಮನ್ವಿತವಾದ ಮೆಚ್ಚಿಕೆ. ಮೆಚ್ಚಿಕೆಯೊಡಗೂಡಿದ ಭಯ. ವಿದ್ಯಾರ್ಥಿ ಏನಾದರೂ ತಪ್ಪು ಉತ್ತರ ಹೇಳಿದರೆ ಅಥವಾ ಸ್ನೇಹಿತರಾರಾದರೂ ಅಸಂಬದ್ಧವನ್ನಾಡಿದರೆ ನಮ್ಮ ಶಾಸ್ತ್ರಿಗಳು “ದಿವ್ಯಃ!” ಎನ್ನುವರು. ನಾವು ನೆಲದೊಳಕ್ಕೆ ಇಳಿದುಹೋಗಬೇಕೆನ್ನಿಸುವುದು. ಒಂದೊಂದು ಸಾರಿ ತೆಲುಗಿನಲ್ಲಿ “ಬಹುಚೆನ್ನಾಗಿದೆ. ಅತ್ತು ಮುಖ ತೊಳೆದುಕೊಂಡ ಹಾಗೆ!” ಎನ್ನುವರು. ಹೀಗೆ ಎಷ್ಟೋ ಹೇಳಬಹುದು ಅವರ ವಿಷಯ.

ನಂಜುಂಡಯ್ಯನವರು

ನನ್ನ ತಂದೆ ಚಂದ್ರಶೇಖರಶಾಸ್ತ್ರಿಗಳ ಕೈಕೆಳಗೆ ಸಹಾಯೋಪಾಧ್ಯಾಯರಾಗಿದ್ದರು. ಅವರು ಚಂದ್ರಶೇಖರಶಾಸ್ತ್ರಿಗಳನ್ನು ತಮ್ಮ ಸ್ವಂತ ಗುರುಗಳಾದ ನಂಜುಂಡಯ್ಯನವರಿಗೆ ಸಮಾನರಾದವರೆಂದು ಹೊಗಳುತ್ತಿದ್ದರು. ಆ ನಂಜುಂಡಯ್ಯ ಎಂಬುವರನ್ನು ನಾನು ಕಾಣೆ. ಅವರು ನನಗೆ ಒಂದು ಅಪಕೀರ್ತಿ ತಂದುಕೊಟ್ಟರು. ನಾನು ಹುಟ್ಟಿದ ದಿವಸವೋ ಅದರ ಹಿಂದಿನ ದಿವಸವೋ ನಂಜುಂಡಯ್ಯನವರು ತೀರಿಕೊಂಡರಂತೆ. ಇದನ್ನು ನಮ್ಮ ತಂದೆ ಸ್ಮರಿಸಿ "ನಮ್ಮ ಗುರುಗಳನ್ನು ನುಂಗಿ ಹುಟ್ಟಿದವನು ಇವನು" ಎಂದು ನನ್ನನ್ನು ಮೂದಲಿಸುತ್ತಿದ್ದರು.

ನಂಜುಂಡಯ್ಯನವರ ಶಿಷ್ಯರಲ್ಲಿ ನನ್ನ ತಂದೆಯ ಸ್ನೇಹಿತರಾದ ವೇಗಮಡುಗು ಶೀನಪ್ಪ ಎಂಬಾತ ಇನ್ನೊಬ್ಬರು. ಅವರಿಬ್ಬರಿಗೂ ನಂಜುಂಡಯ್ಯನವರು ಕಾವ್ಯಪಾಠ ಮಾಡಿಸಿದ್ದರಂತೆ. ನನ್ನ ತಂದೆಗೂ ಶೀನಪ್ಪನವರಿಗೂ ಹಳೆಯ ಕನ್ನಡ ಕಾವ್ಯಗಳಲ್ಲಿ ತುಂಬ ಉತ್ಸಾಹ. ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ರಾಜಶೇಖರ ವಿಲಾಸ, ಹರಿಶ್ಚಂದ್ರ ಚಂಪೂ–ಈ ಕಾವ್ಯಗಳನ್ನು ನನ್ನ ತಂದೆ ಓದುವರು; ಶೀನಪ್ಪನವರು ವ್ಯಾಖ್ಯಾನ ಮಾಡುವರು. ಅಥವಾ ಶೀನಪ್ಪನವರು ಓದುವರು: ನನ್ನ ತಂದೆ ಅರ್ಥ ಹೇಳುವರು. ಇದನ್ನು ನಾನು ಕೇಳಿದ್ದೇನೆ. ಶೀನಪ್ಪನವರಿಗೆ ಶಬ್ದಾಲಂಕಾರಗಳಲ್ಲಿ ತುಂಬ ಉತ್ಸಾಹ. "ಪಾವನತುಲಾಭರಣಮಂ" "ಕೆತ್ತ ಬಲ್ಗತ್ತಲೆಗೆ" –ಇಂಥ ವಾಕ್ಯಗಳು ಬಂದಾಗ ಬಲಗೈಯ ತರ್ಜನಿ, ಮಧ್ಯಮ ಬೆರಳುಗಳನ್ನು ತರ್ಕರೀತಿಯಲ್ಲಿ ತಿರುಗಿಸಿಕೊಂಡು ಆವೇಶದಿಂದ ಅರ್ಥಹೇಳುವರು. ಇದನ್ನು ಕೇಳುವುದಕ್ಕಲ್ಲದೆ ನೋಡುವುದಕ್ಕೂ ನಮಗೆ ಸಂತೋಷ, ಶೀನಪ್ಪನವರಿಗೆ ನಸ್ಯದ ಚಟ ಹೆಚ್ಚಾಗಿತ್ತು. ಡಬ್ಬಿ, ವಸ್ತ್ರ ಹುಡುಕುವ ಪ್ರಕರಣದಿಂದ ಅವರ ಕಾವ್ಯವಾಚನಕ್ಕೆ ಇನ್ನಷ್ಟು ಸ್ವಾರಸ್ಯ ಬರುತ್ತದೆ. ಪದ ಪದವನ್ನೂ ಹೀಗೆ ಬಿಡಿಸಿ ಹಾಗೆ ಬಿಡಿಸಿ, ಹೀಗೊಂದು ಅರ್ಥ ಹಾಗೊಂದರ್ಥ ತೋರಿಸುವರು.

ಉದ್ಯೋಗದಲ್ಲಿ ಶೀನಪ್ಪನವರು ಬಡ ಶಾನುಭೋಗರು. ಅವರಿಗಿದ್ದ ಕಾವ್ಯಜ್ಞಾನ ನನ್ನ ಕಾಲದ ಪದವೀಧರರಿಗಿದ್ದಿದ್ದರೆ ದೇಶಕ್ಕೆ ಎಷ್ಟೋ ಸಂತೋಷ ದೊರೆಯುತ್ತಿತ್ತು. ಮಹಾಮಹೋಪಾಧ್ಯಾಯ ರಾ. ನರಸಿಂಹಾಚಾರ್ಯರು ಆಡುತ್ತಿದ್ದ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ: "ನಿಮ್ಮ ಕಾಲದ ದೊಡ್ಡ ಮನುಷ್ಯರೇನಪ್ಪ–ಮಹಾಸಂಪನ್ನರು; ಸಂಗೀತಶತ್ರುಗಳು, ಶಾರದಾ ವೈರಿಗಳು."

ಬಹುಮುಖತೆ

ನಮ್ಮ ಕಾಲದಲ್ಲಿ ಆ ನಂಜುಂಡಯ್ಯನವರಂಥ ರಸಿಕ ವಿದ್ವಾಂಸರನ್ನು ಹೆಡ್‌ಮಾಸ್ಟರ ಕೆಲಸಕ್ಕೆ ತರುವುದು ಹೇಗೆ? ನಂಜುಂಡಯ್ಯನವರು ಕನ್ನಡದಲ್ಲಿ ಹೇಗೋ ತೆಲುಗಿನಲ್ಲೂ ಹಾಗೆಯೇ ದೊಡ್ಡ ವಿದ್ವಾಂಸರು; ನಮ್ಮ ತೆಲುಗುಸ್ಕೂಲಿನ ಹೆಡ್‌ಮಾಸ್ಟರು ತಿರುವೇಂಗಡಯ್ಯನವರು ನಂಜುಂಡಯ್ಯನವರ ಶಿಷ್ಯರು, ಆಂಧ್ರದಲ್ಲಿ. ನಂಜುಂಡಯ್ಯನವರಿಗೆ ಸಂಸ್ಕೃತ ಪಾಂಡಿತ್ಯ ಚೆನ್ನಾಗಿತ್ತು. ಅವರಿಗೆ ಕೊಂಚ ಇಂಗ್ಲಿಷ್ ಕೂಡ ಬರುತ್ತಿತ್ತಂತೆ.

ಅವರಿಗೆ ವರ್ಣಚಿತ್ರ ಶಿಲ್ಪಗಳ ಪರಿಚಯ ಚೆನ್ನಾಗಿತ್ತಂತೆ. ಅವರಿಗೆ ಪತ್ನೀವಿಯೋಗವಾಗಿತ್ತು. ಆ ಪತ್ನಿಯ ಪ್ರತಿಮೆಯೊಂದನ್ನು ತಮ್ಮ ಕೈಯಿಂದ ಮಾಡಿ ಅದನ್ನು ವರ್ಣಗಳಿಂದಲಂಕರಿಸಿ ಮೇಜಿನ ಮೇಲಿರಿಸಿಕೊಂಡಿರುತ್ತಿದ್ದರಂತೆ.

ಅವರು ಊರಿನ ಜನರಿಗೆಲ್ಲ ಗೌರವಾರ್ಹರಾಗಿದ್ದರು. ಶುಭ್ರವಾದ ಧೋತ್ರ, ಅಂಗರೇಖು, ರುಮಾಲುಗಳನ್ನು ಧರಿಸುವರು. ಅವರು ಪೇಟೆಯಲ್ಲಿ ಹೋಗುತ್ತಿದ್ದಾಗ ಅಂಗಡಿ ಅಂಗಡಿಯ ಯಜಮಾನರೂ ಎದ್ದು ನಿಂತು ನಮಸ್ಕರಿಸಿ ಆಮೇಲೆ ತಮ್ಮ ಗಿರಾಕಿಗಳನ್ನು ನೋಡುವರು. ಹೀಗಿತ್ತು ಆಗಿನ ವಿದ್ಯಾಗೌರವ ಮತ್ತು ಸೌಜನ್ಯಗೌರವ.

೧೬

ಕೆ. ವಿ. ರಾಮಸ್ವಾಮಯ್ಯರ್

ನನ್ನ ಸಂಸ್ಕೃತ ಉಪಾಧ್ಯಾಯರು ಕಾಶಿ ರಾಘವೇಂದ್ರಾಚಾರ್ಯರ ವಿಷಯವನ್ನು ಬೇರೆ ಬರೆದದ್ದಾಗಿದೆ (ಜ್ಞಾಪಕ ಚಿತ್ರಶಾಲೆ ೪). ಈಗ ನನ್ನ ಇಂಗ್ಲಿಷ್ ಉಪಾಧ್ಯಾಯರ ಸ್ಮರಣೆಗೆ ಹೋಗುತ್ತೇನೆ.

ಮುಳುಬಾಗಲಿಗೆ ಇಂಗ್ಲಿಷ್ ವಿದ್ಯಾಸೌಕರ್ಯ ಬಂದದ್ದು ೧೯೦೦ರಲ್ಲಿ ಎಂದು ತೋರುತ್ತದೆ. ಅದಕ್ಕೆ ಮುಂಚೆ ಆ ಊರಿನಲ್ಲಿ ಇಂಗ್ಲಿಷ್ ಅಕ್ಷರಜ್ಞಾನವಿದ್ದವರು ಪೋಸ್ಟ್ ಆಫೀಸಿನ ಹೊರಗಡೆ ಇಬ್ಬರು ಮೂವರು ಮಾತ್ರ. ಅವರಲ್ಲೊಬ್ಬರು ಕಾವೇರಿಪಟ್ಟಣದ ರಾಮಚಂದ್ರಾಚಾರ್ಯರು. ಇವರ ಪ್ರಸ್ತಾಪವನ್ನು ಬೇರೆ ಕಡೆ ಮಾಡಿದ್ದಾಗಿದೆ (ಜ್ಞಾಪಕ ಚಿತ್ರಶಾಲೆ ೧). ಇನ್ನೊಬ್ಬರು ತೆಲುಗು ಸ್ಕೂಲಿನ ಸಹಾಯೋಪಾಧ್ಯಾಯರಾದ ಮಾರಶೆಟ್ಟಿ ಎಂಬುವರು. ಇವರು ಜಾತಿಯಲ್ಲಿ ಬಣಜಿಗರು. ಈ ಜನ ಒಬ್ಬ ಶ್ರೀವೈಷ್ಣವ ಆಚಾರ್ಯರ ಶಿಷ್ಯವರ್ಗಕ್ಕೆ ಸೇರಿದವರು. ಮೈಸೂರಿನಲ್ಲಿ ಎಸ್. ರಂಗಾಚಾರ್ಯರೆಂಬವರು ಸಂಸ್ಕೃತ ಪಾಠಶಾಲೆಗಳ ಇನ್‌ಸ್ಪೆಕ್ಟರಾಗಿದ್ದರು. ಈ ರಂಗಾಚಾರ್ಯರ ಅಣ್ಣಂದಿರು ವೆಂಕಟಾಚಾರ್ಯರು. ಅವರೂ ಮಹಾ ವಿದ್ವಾಂಸರು. ನಮ್ಮ ಮಾರಶೆಟ್ಟಿಯವರು ವಂಶಪಾರಂಪರ್ಯದಿಂದ ಈ ವೆಂಕಟಾಚಾರ್ಯರ ಶಿಷ್ಯಕೋಟಿಗೆ ಸೇರಿದವರು. ವೆಂಕಟಾಚಾರ್ಯರ ಅಭಿಯಾನದಿಂದ ನಮ್ಮ ಮಾರಶೆಟ್ಟಿಯ ತಂದೆ ಮುನಿಯಪ್ಪನವರು ತಮ್ಮ ಮಗನನ್ನು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಕಳುಹಿಸಿದ್ದರು. ಆಗ ಮಾರಶೆಟ್ಟಿಯವರು ಒಂದಷ್ಟು ಇಂಗ್ಲಿಷ್ ಕಲಿತರು. ಬಹುಶಃ ಆಗ ಇದ್ದ ಮೆಟ್ರಿಕ್ಯುಲೇಷನ್ ತರಗತಿಯವರೆಂದು ತೋರುತ್ತದೆ.

ಈ ಇಬ್ಬರ ಹೊರತು ಇಂಗ್ಲಿಷ್ ಪರಿಚಯವಿದ್ದವರು ಊರ ಜನ ಯಾರೂ ಇರಲಿಲ್ಲ. ಸರಕಾರಿ ಅಧಿಕಾರಿಗಳು ಸಹ ಮೇಲ್ಮಟ್ಟದ ವಿದ್ಯಾಸಂಪತ್ತು ಪಡೆದಿದ್ದವರಲ್ಲ. ನಮ್ಮ ಊರಿಗೆ ಸರಕಾರದ ಅಧಿಕಾರಿಯಾಗಿ ಮೊದಲು ಬಂದ ಬಿ.ಎ. ಪಟ್ಟಾಂಕಿತರು ಸಬ್‌ರಿಜಿಸ್ಟ್ರಾರ್ ರಾಮದಾಸಪ್ಪನವರು. ಇದು ಸುಮಾರು ೧೯೦೧ರಲ್ಲಿ. ಈ ವಿಚಾರಕ್ಕೆ ಮತ್ತೆ ಬರೋಣ.

ತಪಃಫಲ

ಮುಳುಬಾಗಿಲಿನಲ್ಲಿ ಇಂಗ್ಲೀಷ್ ಉಪಾಧ್ಯಾಯರೂ ಸಂಸ್ಕೃತ ಉಪಾಧ್ಯಾಯರೂ ಬೇಕೆಂದು ಸರಕಾರಕ್ಕೆ ಪದೇ ಪದೇ ಅರ್ಜಿ ಬರೆಯುತ್ತಿದ್ದವರಲ್ಲಿ ಮುಖ್ಯರು ನನ್ನ ತಂದೆ. ಆ ಅರ್ಜಿಗಳಿಗೆ ಹತ್ತಿಪ್ಪತ್ತು ಮಂದಿ ರುಜು ಹಾಕಿರುತ್ತಿದ್ದರು. ಆದರೂ ನನ್ನ ತಂದೆಯನ್ನು ಅವರ ಸ್ನೇಹಿತರು ಮೂದಲಿಸುತ್ತಿದ್ದರು.– “ನಿನ್ನ ಮಗನಿಗೋಸ್ಕರ ತಾನೆ ಇದೆಲ್ಲ?” – ಎಂದು. ಅದಕ್ಕೆ “ಈ ಹೊತ್ತು ನನ್ನ ಮಗನಿಗೆ; ನಾಳೆ ನಿನ್ನ ಮಗನಿಗೆ. ಅದರಲ್ಲಿ ಏನು ತಪ್ಪು?” ಎಂದು ನನ್ನ ತಂದೆ ಉತ್ತರಿಸುವರು. ಹೀಗೆ ಬಹುಕಾಲದ ತಪಸ್ಸಿನ ಫಲವಾಗಿ ಅಲ್ಲಿಯ ಮಿಡ್‌ಲ್‌ಸ್ಕೂಲಿನಲ್ಲಿ ಒಬ್ಬ ಇಂಗ್ಲಿಷ್ ಮೇಷ್ಟರು ಇರತಕ್ಕದ್ದೆಂದು ಸರಕಾರ ಅನುಗ್ರಹ ಮಾಡಿತು. ಅದರಂತೆ ನೇಮಕವಾಗಿ ಬಂದ ಮೊದಲನೆಯ ಮೇಷ್ಟರು ಕೆ.ವಿ. ರಾಮಸ್ವಾಮಯ್ಯರ್ ಎಂಬವರು.

ಕೆ.ವಿ. ರಾಮಸ್ವಾಮಯ್ಯರ್ ಅವರು ಕೊಯಮತ್ತೂರು ಪ್ರಾಂತದವರು. ಅವರಿಗೆ ಮದುವೆಯಾಗಿದ್ದದ್ದು ಮೈಸೂರಿನ ಹೆಣ್ಣು. ಆ ಹೆಣ್ಣಿನ ತಂದೆ ಮೈಸೂರು ಪಟ್ಟಣದ ಸಬ್ ಜಡ್ಜಿ ಕೋರ್ಟಿನಲ್ಲಿ ಶಿರಸ್ತೇದಾರರಾಗಿದ್ದರು. ಈ ಶಿರಸ್ತೇದಾರರಿಗೂ ನನ್ನ ಜಾತಿಗೆ ಸೇರಿದ ವಕೀಲ ವೆಂಕಟಸುಬ್ಬಯ್ಯ ಎಂಬವರಿಗೂ ಸ್ನೇಹವಿತ್ತು–ಇಬ್ಬರೂ ಕೋರ್ಟಿನ ಕೆಲಸದವರಾಗಿದ್ದದ್ದರಿಂದ. ಶಿರಸ್ತೇದಾರ ಅಯ್ಯರ್ ಅವರು ನಮ್ಮ ವೆಂಕಟಸುಬ್ಬಯ್ಯನವರೊಡನೆ ಒಂದು ದಿನ ಮಾತನಾಡುತ್ತ ತಮ್ಮ ಕಷ್ಟಗಳನ್ನು ಹೇಳಿಕೊಂಡು ಸಹಾಯ ಬೇಡಿದರಂತೆ.

“ಸ್ವಾಮಿ, ನನ್ನ ಮಗಳಿಗೆ ಬಹುಕಾಲ ಹುಡುಕಿ ಕಷ್ಟಪಟ್ಟು ಮದುವೆ ಮಾಡಿದ್ದಾಯಿತು. ಆತ ಎಫ್.ಎ. ಪ್ಯಾಸು ಮಾಡಿ ಮುಂದಿನ ಓದಿಗೆ ಅನುಕೂಲ ಸಾಲದೆ ಚಾಕರಿ ಹುಡುಕಿಕೊಂಡಿದ್ದ. ನಾನು ನನಗೆ ತಿಳಿದವರಿಗೆಲ್ಲ ಹೇಳಿಕೊಂಡಿದ್ದೆ. ದೇವರ ದಯೆಯಿಂದ ಆತನಿಗೆ ಸ್ಕೂಲುಮೇಷ್ಟರ ಚಾಕರಿ ದೊರೆತಿದೆ: ಆದರೆ ದೂರದೇಶದಲ್ಲಿ. ಯಾವುದೋ ಮುಳುಬಾಗಿಲು ಎಂಬ ಜಾಗ ಇದೆಯೆಂತೆ ಕೋಲಾರ ಜಿಲ್ಲೆಯಲ್ಲಿ. ಅದು ನನಗೆ ಹೆಸರಿನ ಪರಿಚಯ ಕೂಡ ಇಲ್ಲದ ದೇಶ. ನನ್ನ ಅಳಿಯನಿಗಾದರೋ ಕನ್ನಡ ತೆಲುಗು ಬಾರದು. ಈತ ಆ ಊರಿಗೆ ಹೋಗಿ ನಿರ್ವಾಹ ಮಾಡುವುದು ಹೇಗೆ? ಯೋಚನೆಯಾಗಿದೆ. ನಿಮಗೆ ಅಲ್ಲಿ ಯಾರಾದರೂ ಪರಿಚಿತರು ಇದ್ದರೆ ಅವರಿಗೆ ಒಂದು ಕಾಗದ ಬರೆಯಲಾದೀತೆ? ನನ್ನ ಮಗಳು ಎರಡು ಮೂರು ತಿಂಗಳು ಅಲ್ಲಿಗೆ ಹೋಗುವ ಹಾಗಿಲ್ಲ. ಆತನ ಭೋಜನ

ವಸತಿಗಳಿಗೆ ಅನುಕೂಲ ಮಾಡಿಕೊಡಬೇಕು. ಇದು ನಿಮ್ಮಿಂದ ಆದೀತೆ?" –ಎಂದು ಬೇಡಿದರು.

ಪರಿಚಯ

ಇದಕ್ಕೆ ಉತ್ತರವಾಗಿ ವೆಂಕಟಸುಬ್ಬಯ್ಯನವರು "ಅದೇನು ಕಷ್ಟ! ಕೋಲಾರದಲ್ಲಿ ನಮ್ಮ ಬೀಗರು ಶೇಷಗಿರಯ್ಯನವರು ಇದ್ದಾರೆ. ಅವರು ಲಾಯರು. ಆ ದೊಡ್ಡ ಕುಟುಂಬದಲ್ಲಿ ಒಬ್ಬ ಅತಿಥಿಗೆ ಊಟವೆಂಬುದು ಅವರಿಗೆ ಸಣ್ಣ ವಿಷಯ. ಸಂತೋಷದಿಂದ ಒಪ್ಪಿಕೊಂಡಾರು. ನಿಮ್ಮ ಅಳಿಯನ ಕೈಯಲ್ಲಿ ಒಂದು ಕಾಗದ ಕೊಡುತ್ತೇನೆ" ಎಂದು ಭರವಸೆ ಕೊಟ್ಟರು. ಮತ್ತು ಈ ಮಾತನ್ನು ಮುಳುಬಾಗಲಲ್ಲಿದ್ದ ನನ್ನ ಚಿಕ್ಕಜ್ಜಂದಿರಿಗೂ ಕಾಗದ ಬರೆದು ತಿಳಿಸಿದರು. ಕೆ.ವಿ. ರಾಮಸ್ವಾಮಯ್ಯರು ಕೋಲಾರದಲ್ಲಿ ನನ್ನ ಅಜ್ಜನನ್ನು ಕಂಡು ಅಲ್ಲಿಂದ ಮುಳುಬಾಗಲಿಗೆ ಬಂದರು.

ಅವರು ಬಂದ ದಿನ ನಮ್ಮ ಮನೆಯಲ್ಲಿ ಸಂಭ್ರಮ. ಊರಿನ ಎಷ್ಟೋ ಮಂದಿಗೆ ಸಂಭ್ರಮ. ಆ ದಿನ ನಮ್ಮ ಹೆಡ್‌ಮಾಸ್ಟರು ಚಂದ್ರಶೇಖರ ಶಾಸ್ತ್ರಿಗಳೂ, ರಾಮಚಂದ್ರಾಚಾರ್ಯರೂ ನಮ್ಮ ಮನೆಗೆ ಭೋಜನಕ್ಕೆ ದಯಮಾಡಿಸಿದ್ದರು. ಅಂದಿನಿಂದ ಎರಡು ಮೂರು ತಿಂಗಳ ಕಾಲ ರಾಮಸ್ವಾಮಯ್ಯರು ಮನೆಯ ಮನುಷ್ಯರಂತೆ ನಮ್ಮಲ್ಲಿಯೇ ಇದ್ದರು. ಇದು ನನ್ನ ವಿದ್ಯಾಭ್ಯಾಸಕ್ಕೆ ಒಂದು ವಿಶೇಷ ಸೌಕರ್ಯವಾಯಿತೆಂದು ಹೇಳಬೇಕಾಗಿಲ್ಲ.

ಆ ವೇಳೆಗೆ ನಾನು ಕನ್ನಡ ಲೋವರ್ ಸೆಕೆಂಡರಿ ಪ್ಯಾಸುಮಾಡಿದ್ದೆ. ಮುಂದೆ ಇಂಗ್ಲಿಷ್ ಕಲಿಯಬೇಕೆಂದು ನನ್ನ ಹಿರಿಯರ ಉದ್ದೇಶ. ಈ ವೇಳೆಗೆ ನಾನು ರಾಮಚಂದ್ರಾಚಾರ್ಯರ ಬಳಿ ಇಂಗ್ಲಿಷ್ ಅಕ್ಷರಾಭ್ಯಾಸಮಾಡಿಕೊಂಡಿದ್ದೆ. ಆ ಗತಕಾಲದಲ್ಲಿ ಗಾರ್ತ್‌ವೈಟ್ (Garthwaite) ಎಂಬಾತನ ಇಂಗ್ಲಿಷ್ ಬಾಲಬೋಧೆ ಪ್ರಚಾರದಲ್ಲಿತ್ತು. ಅದನ್ನು ರಾಮಚಂದ್ರಾಚಾರ್ಯರು ನಮಗೆ ಕಲಿಸಿದ್ದರು. ಒಂದು ಸಂಗತಿ ಈಗಲೂ ಜ್ಞಾಪಕಕ್ಕೆ ಬರುತ್ತದೆ. ಆ ಪುಸ್ತಕದಲ್ಲಿ ಮೊದ ನಾಲ್ಕೈದು ಪಾಠಗಳ ಪೈಕಿ ಒಂದರಲ್ಲಿ "He saw me. She saw me. They saw me." ಎಂಬ ವಾಕ್ಯಗಳಿದ್ದವು. ಇದನ್ನು ಓದುವಾಗ "ಸಾಮಿ ಸಾಮಿ" ಎಂಬ ಮಾತುಗಳನ್ನು ಕೇಳಿ ನನಗೆ ನಗು ಬಂದಿತು.

"ಹೀಸಾಮಿ ಏನು ಆಸಾಮಿ!"

ಎಂದೆ ನಾನು. ರಾಮಚಂದ್ರಾಚಾರ್ಯರು ಹುಬ್ಬುಗಂಟಿಕ್ಕಿದರು. ಆದರೆ ಅಲ್ಲಿ ನೋಡುತ್ತ ಕುಳಿತಿದ್ದ ನನ್ನ ಚಿಕ್ಕಜ್ಜ ಗಟ್ಟಿಯಾಗಿ ನಕ್ಕರು, ನಾನು ಹಾಸ್ಯಮಾಡುತ್ತಿದ್ದೇನೆಂದು. ನನ್ನ ಅಜ್ಜನ

ನಗುವನ್ನು ನೋಡಿ ರಾಮಚಂದ್ರಾಚಾರ್ಯರೂ ನಕ್ಕರು. ಆಗಾಗ ಹೀಗೆ ಇಂಗ್ಲಿಷ್ ಮಾತನ್ನು ಕುರಿತು ವಿನೋದ ನಡೆಯುತ್ತಿತ್ತು.

ಹೀಗೆ ಅಲ್ಪ ಸ್ವಲ್ಪ ಅಕ್ಷರಪರಿಚಯವಾಗಿದ್ದರಿಂದ ರಾಮಸ್ವಾಮಯ್ಯರ್ ಅವರು ನನ್ನನ್ನು ಇಂಗಿಷ್ ಎರಡನೆ ಕ್ಲಾಸಿಗೆ ಸೇರಿಸಿಕೊಳ್ಳಬಹುದೆಂದು ತೀರ್ಮಾನಿಸಿದರು. ಆಮೇಲೆ ರಾಮಸ್ವಾಮಯ್ಯರವರ ಬೋಧನೆ.

ದೈವಿಕ

ರಾಮಸ್ವಾಮಯ್ಯರವರು ಸ್ಕೂಲುಮೇಷ್ಟರ ವೃತ್ತಿಯನ್ನು ಆರಿಸಿಕೊಂಡು ಪಡೆದವರಲ್ಲ. ಅವರು ಯಾವುದಾದರೂ ಚಾಕರಿ ಬೇಕೆಂದಿದ್ದವರು. ಅವರ ಅಣ್ಣಂದಿರು ಎಲ್ಲೋ ಪೋಸ್ಟ್ ಮಾಸ್ಟರ್ ಆಗಿದ್ದರು. ರಾಮಸ್ವಾಮಯ್ಯರ್ರವರೂ ಸಹ ಕೊಂಚ ಕಾಲ ಬದಲಿ ಪೋಸ್ಟ್ ಮಾಸ್ಟರ್ ಕೆಲಸ ನೋಡಿದವರು. ಅವರಿಗೆ ಮೈಸೂರು ಸೀಮೆಯಲ್ಲಿ ಇಂಗ್ಲಿಷ್ ಮೇಷ್ಟರಾಗಿ ನೌಕರಿ ದೊರೆತದ್ದು ದೈವಿಕವೆಂದೇ ಹೇಳಬೇಕು. ಮಿಕ್ಕವರ ಮಾತು ಹೇಗಾದರಿರಲಿ; ನನ್ನ ಪಾಲಿಗೆ ಅದು ದೈವದ ಘಟನೆ. ನಾನು ನನ್ನ ಮನಸ್ಸಿನ ಅಂತರಾಳದಿಂದ ಹೇಳುತ್ತೇನೆ: ನನಗೆ ಈಗ ಬರುವ ಇಂಗ್ಲಿಷ್ ರಾಮಸ್ವಾಮಯ್ಯರು ಕಲಿಸಿದ್ದೆಷ್ಟೋ ಅಷ್ಟೇ. ಇದು ಉಪಚಾರದ ಮಾತಲ್ಲ. ನನ್ನ ಮುಖಸ್ತೋತ್ರಕ್ಕೆ ಈಗ ರಾಮಸ್ವಾಮಯ್ಯರವರು ಬಹು ದೂರವಾಗಿದ್ದಾರೆ.

ಪೋಸ್ಟ್ ಮಾಸ್ಟರು ಕೆಲಸದಲ್ಲಿದ್ದವರಿಗೆ, ಬಿ.ಎ.ಗೆ ಕೂಡ ಹತ್ತದವರಿಗೆ ಇಂಗ್ಲಿಷ್ ಪಾಠ ಬೋಧನೆಯಲ್ಲಿ ಅಂಥ ಪರಿಜ್ಞಾನವೂ ವಿಚಕ್ಷಣೆಯೂ ಹೇಗೆ ಬಂದವೋ ನನಗೆ ತಿಳಿಯದು.

ಭಾಷಾ ಸೌಲಭ್ಯ

ರಾಮಸ್ವಾಮಯ್ಯರ್ ಮುಳುಬಾಗಿಲಿಗೆ ಬಂದ ಮೇಲೆ ಮೂರು ನಾಲ್ಕು ತಿಂಗಳೊಳಗಾಗಿ ಕನ್ನಡ ಕಲಿತರು. ಅವರು ಕೊಯಮತ್ತೂರಿನವರಾದದ್ದರಿಂದ ಕನ್ನಡ ಮಾತುಗಳು ಅವರ ಕಿವಿಗೆ ಕೊಂಚ ಕೊಂಚ ಪರಿಚಿತವಾಗಿದ್ದವು. ಕನ್ನಡದ ಅನೇಕ ಮಾತುಗಳು ಉಚ್ಚಾರಣೆಯಲ್ಲಿ ತಮಿಳಿಗೆ ಸಮೀಪವಾಗಿದ್ದದ್ದರಿಂದ ಕನ್ನಡ ರಾಮಸ್ವಾಮಯ್ಯರಿಗೆ ಸುಲಭವಾಯಿತು. ಮೊದಮೊದಲು ಕನ್ನಡದಲ್ಲಿ ಸುಲಭವಾಗಿ ಮಾತನಾಡುತ್ತಿದ್ದರು. ನಾಲ್ಕೈದು ತಿಂಗಳಾದ ಮೇಲೆ ಕನ್ನಡ ಓದುವುದಕ್ಕೂ ಕಲಿತರು. ಆಮೇಲೆ ಪಾಠಹೇಳುವುದು ಅವರಿಗೆ ಸುಲಭವಾಯಿತು. ಅವರು ತಮಿಳಿನಲ್ಲಿಯೂ ಪಾಂಡಿತ್ಯ ಪಡೆದಿದ್ದರೆಂದು ತೋರುತ್ತದೆ. ಆಗಾಗ ತಮಿಳು ಕಾವ್ಯಗಳಿಂದ ವಾಕ್ಯಗಳನ್ನು ಉದಾಹರಿಸುತ್ತಿದ್ದರು. ಸರಕಾರಿ ಕೆಲಸದಿಂದ ಪಿಂಛನ್ ಪಡೆದ ಮೇಲೆ ಅವರು ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಹೈಸ್ಕೂಲಿನ ತಮಿಳು ಪಂಡಿತರಾಗಿ ಕೆಲಸ ಮಾಡಿದರು.

ಮುಳುಬಾಗಿಲಿಗೆ ಬಂದ ಬಳಿಕ ಅವರು ಕೊಂಚ ಸಂಸ್ಕೃತವನ್ನೂ ಕಲಿತರು. ಅವರಿಗೆ ವೇದಶಾಸ್ತ್ರಗಳಲ್ಲಿಯೂ ಪೂರ್ವಾಚಾರದಲ್ಲಿಯೂ ತುಂಬ ಶ್ರದ್ಧೆ. ನಾನು ಓದಿದ ಮೊದಲನೆಯ ಉಪನಿಷತ್ ಪುಸ್ತಕಗಳು ಅವರವು. ಮೈಸೂರಿನ ಎ. ಮಹಾದೇವಶಾಸ್ತ್ರಿಗಳು ಇಂಗ್ಲಿಷಿಗೆ ತರ್ಜುಮೆಮಾಡಿ ವಿವರಣೆಗಳೊಡನೆ ಪ್ರಕಟಿಸಿದ್ದ ದಕ್ಷಿಣಾಮೂರ್ತ್ಯುಪನಿಷತ್ತು. ಭಾವನೋಪನಿಷತ್ತು. ಕೈವಲ್ಯೋಪನಿಷತ್ತು ಇವು ಆ ಪುಸ್ತಕಗಳು. ರಾಮಸ್ವಾಮಯ್ಯರ್ ಶ್ರೀಮದ್ರಾಮಾಯಣ ಪಾರಾಯಣ ಮಾಡುತ್ತಿದ್ದರು. ಶ್ರೀರಾಮನವಮಿಯ ದಿನ ಅವರಿಗೆ ತುಂಬ ಸಂಭ್ರಮ. ಇದನ್ನು ಅವರ ಸ್ವಭಾವ ಪ್ರದರ್ಶಕವಾಗಿ ಹೇಳಿದ್ದೇನೆ.

ಮೂಲಾಂಶಗಳು

ನನ್ನ ಅನುಭವದಿಂದ ನಾನು ಮಾಡಿಕೊಂಡಿರುವ ಸಿದ್ಧಾಂತ ಹೀಗೆ. ಯಾರಿಗೆ ಕನ್ನಡವನ್ನು ಚೆನ್ನಾಗಿ ಹೇಳಿಕೊಟ್ಟಿದ್ದಾರೋ ಅವರಿಗೆ ಇಂಗ್ಲಿಷು ತಕ್ಕಮಟ್ಟಿಗೆ ಸುಲಭವಾಗಿ ಬರುತ್ತದೆ. ಭಾಷೆಯಲ್ಲಿ ವ್ಯಾಕರಣ ಪ್ರಕ್ರಿಯೆಯೂ ಪ್ರಯೋಗರೂಢಿಯೂ ಮೂಲಾಂಶಗಳು. ಈ ಮೂಲಾಂಶಗಳು ಒಂದು ಭಾಷೆಯಲ್ಲಿ ಸ್ವಾಧೀನಕ್ಕೆ ಬಂದ ಮೇಲೆ ಅವನ್ನು ಇನ್ನೊಂದು ಭಾಷೆಯಲ್ಲಿ ಕಂಡುಕೊಳ್ಳುವುದೂ ಸುಲಭ. ರೂ. ಆ. ಪೈಗಳ ಲೆಕ್ಕವನ್ನು ಕಲಿತವನಿಗೆ ಪೌಂಡ್ ಷಿಲಿಂಗ್ ಪೆನ್ಸ್ ಲೆಕ್ಕ ಕಷ್ಟವಾಗದು. ಮರದಿಂದ ಕುರ್ಚಿಮಾಡಲು ಕಲಿತವನಿಗೆ ಮೇಜು ಮಾಡುವುದು ಕಷ್ಟವಾಗದು. ಇದೇ ಭಾಷಾತತ್ತ್ವ. ಚಂದ್ರಶೇಖರಶಾಸ್ತ್ರಿಗಳ ಕನ್ನಡ ಪಾಠವಿಚಕ್ಷಣೆಯಿಂದ ರಾಮಸ್ವಾಮಯ್ಯರ ಇಂಗ್ಲಿಷ್ ಪಾಠ ಸಫಲವಾಯಿತು.

ರಾಮಸ್ವಾಮಯ್ಯರ್ ಅವರ ಇಂಗ್ಲಿಷ್ ಪಾಠಕ್ರಮವನ್ನು ಕುರಿತು ಒಂದೆರಡು ಮಾತು ಹೇಳುವುದಿದೆ. ಅವರಿಗಿದ್ದ ವಿದ್ಯಾರ್ಥಿಗಳು ಮೊದಲನೆಯ ವರ್ಷ ನಾಲ್ಕು ಮಂದಿ. ಅವರಲ್ಲಿ ಮುಖ್ಯರು ವಿಜಲಾಪುರಂ ವೆಂಕಟೇಶಯ್ಯ ಎಂಬಾತ. ಈತ ಉತ್ತರೋತ್ತರ ಬಿ.ಎ., ಬಿ.ಎಲ್. ಪ್ಯಾಸ್ ಮಾಡಿ ಕೆಲಕಾಲ ರೆವಿನ್ಯು ಕಮಿಷನರ್ ಆಫೀಸಿನಲ್ಲಿದ್ದು ಬಳಿಕ ಬೌರಿಂಗ್ ಪೇಟೆಯಲ್ಲಿ ವಕೀಲಿ ಕೆಲಸ ನಡಸಿದರು. ಈತ ಅವರ ಮೆಚ್ಚಿನ ಶಿಷ್ಯ. (ನಾನಲ್ಲವೆಂದು ಅವರೇ ಸ್ಪಷ್ಟವಾಗಿ ಹೇಳಿದ್ದರು.) ಇನ್ನೊಬ್ಬಾತ ಗಂಜಿಗುಂಟೆ ಸುಬ್ರಹ್ಮಣ್ಯ. ಉತ್ತರೋತ್ತರ ಈತ ಸ್ಯಾನಿಟರಿ ಇನ್‌ಸ್ಪೆಕ್ಟರೋ ವೆಟೆರಿನರಿ ಇನ್‌ಸ್ಪೆಕ್ಟರೋ ಆಗಿದ್ದರು. ಮೂರನೆಯಾತ ಬಲಸಾ ವೆಂಕಟರಾಮಶೆಟ್ಟರು.

ಒಂದು ದಿನ ಬಲಸಾ ವೆಂಕಟರಾಮಶೆಟ್ಟರನ್ನು ರಾಮಸ್ವಾಮಯ್ಯರು ಹೀಗೆ ಕೇಳಿದರು:

ರಾ: Why are you standing there?

ವೆಂ: I am standing still.

ರಾ: Why are you standing still?

ವೆಂ: I am standing still still.

ರಾಮಸ್ವಾಮಯ್ಯರು ನಗುತ್ತಾ still ಪದದ ಎರಡರ್ಥಗಳನ್ನು ವಿವರಿಸಿದರು: ಇಂಗ್ಲಿಷ್ ಭಾಷೆಯ ಸ್ವಭಾವವನ್ನು ನಮಗೆ ತೋರಿಸಿಕೊಡಬೇಕೆಂಬುದು ರಾಮಸ್ವಾಮಯ್ಯರ ಆಶಯ.

ಪರಿಕರಗಳು

ಪಾಠಕ್ಕಾಗಿ ಸರಕಾರದವರು ಅವರಿಗೆ ಕೊಟ್ಟಿದ್ದ ಉಪಕರಣ ಸಂಪತ್ತು ಒಂದೇ ಒಂದು: ಆನಂಡೇಲ್ ಎಂಬಾತ ಬರದ ನಿಘಂಟು. ಈ ಪುಸ್ತಕಕ್ಕೆ ರಾಮಸ್ವಾಮಯ್ಯರ್ ಕ್ರಾಫ್ಟ್ ಪೇಪರ್ ಎಂದು ಈಗ ಕರೆಯುವ ರಟ್ಟಿನ ಕಾಗದದಲ್ಲಿ ಚೊಕ್ಕಟವಾಗಿ ಬೈಂಡು ಹಾಕಿ ಜೋಪಾನವಾಗಿರಿಸುತ್ತಿದ್ದರು. ಅವರು ಬೈಂಡು ಹಾಕುತ್ತಿದ್ದದ್ದೇ ಒಂದು ಸೊಗಸು. ಪುಸ್ತಕವನ್ನು ಕೊಳೆ ಮಾಡದೆ, ಸುಕ್ಕು ಸುಕ್ಕು ಮಾಡದೆ ಇಟ್ಟಿರಬೇಕೆಂದು ಅವರ ನಿಯಮ.

ನಮ್ಮ ಹೆಡ್‌ಮಾಸ್ಟರು ಇಂಗ್ಲಿಷ್ ಮೇಷ್ಟರ ಉಪಯೋಗಕ್ಕಾಗಿ ಒಂದು ಮರದ ಪೆಠಾರಿಯನ್ನು (ಸಂದೂಕ ಪೆಟ್ಟಿಗೆ) ಕೊಟ್ಟಿದ್ದರು. ಅದರೊಳಗಿನ ಆರು ಪಾರ್ಶ್ವಗಳಿಗೂ (ಟಿನ್) ತಗಡಿನಿಂದ ಇಸ್ತ್ರಿ (ಲೈನಿಂಗ್) ಕಟ್ಟಿತ್ತು. ಗೆದ್ದಲು ಬಾರದಂತೆ ಕಾಪಾಡಲು. ಈ ಪೆಟ್ಟಿಗೆಯಲ್ಲಿ ರಾಮಸ್ವಾಮಯ್ಯರ್ ಇಡುತ್ತಿದ್ದದ್ದು ಪಾಠದ ಪುಸ್ತಕಗಳನ್ನು; ಆನಂಡೇಲ್ ನಿಘಂಟು ಮತ್ತು "ಎಜುಕೇಷನಲ್ ರೆವ್ಯು" ಮಾಸಪತ್ರಿಕೆಯನ್ನ. ಈ ಎಲ್ಲ ಪುಸ್ತಕ ಪತ್ರಿಕೆಗಳೂ ಅವರ ನಿತ್ಯೋಪಯೋಗದಲ್ಲಿದ್ದವು. ಪಾಠಕಾಲದಲ್ಲಿ ಮೂರು ಅಭ್ಯಾಸಗಳು:

1. **ಪಾಠ ವಾಚನ:** ಎಂದರೆ ರೀಡರ್ ಪುಸ್ತಕದಲ್ಲಿಯ ವಾಕ್ಯಗಳನ್ನು ಓದುವುದು. ಅಕ್ಷರಗಳ ಉಚ್ಚಾರಣೆ, ಧ್ವನಿಯ ಏಳುಬೀಳುಗಳು, ವಿರಾಮ ಅರ್ಧವಿರಾಮಗಳು. ಅವುಗಳಲ್ಲಿ ವಿದ್ಯಾರ್ಥಿ ತಪ್ಪಬಾರದು. ಅಕ್ಷರೋಚ್ಚಾರಣೆ ಸ್ಫುಟವಾಗಿರಬೇಕು. ಇಂಗ್ಲಿಷಿನಲ್ಲಿ ವಿಶೇಷ ಲಕ್ಷಣವಾದ ಆಕ್ಸೆಂಟ್ (Accent) ಎಂಬ ಸ್ವರಭಾರ ಕ್ರಮ ಹೆಚ್ಚು ಕಡಮೆಯಾಗಬಾರದು. ಈ ವಚನಗುಣಗಳಲ್ಲಿ ವಿದ್ಯಾರ್ಥಿ ಎಚ್ಚರ ತಪ್ಪಿದರೆ ರಾಮಸ್ವಾಮಯ್ಯರವರು ಅದನ್ನು ಗಮನವಿಟ್ಟು ತಿದ್ದುತ್ತಿದ್ದರು. ಸಣ್ಣ ತಪ್ಪನ್ನು ಕೂಡ ಅಲಕ್ಷ್ಯದಿಂದ ನೋಡುತ್ತಿರಲಿಲ್ಲ.
2. **ಶಬ್ದಾರ್ಥ:** ಪ್ರತಿಯೊಂದು ಮಾತಿಗೂ ಕನ್ನಡದಲ್ಲಿ ಅರ್ಥ ಹೇಳಬೇಕು. ಶಬ್ದವು ಕಷ್ಟವಾದದ್ದೆಂದು ಉಪಾಧ್ಯಾಯರಿಗೆ ತೋರಿದಾಗ ಅವರು ಅರ್ಥ ಹೇಳುವರು. ಎರಡು ಮೂರು ಅರ್ಥಗಳಿದ್ದಾಗ ಎರಡು ಮೂರನ್ನೂ ಹೇಳಿ ಒಂದೊಂದಕ್ಕೂ ಉದಾಹರಣೆ ಕೊಡುವರು. ಆ ಉದಾಹರಣೆಗಳನ್ನು ವಿದ್ಯಾರ್ಥಿ ಗೊತ್ತುಮಾಡಿ ಕೊಳ್ಳುವವರೆಗೂ ಪಾಠ ಮುಗಿಸುತ್ತಿರಲಿಲ್ಲ.
3. **ವಾಕ್ಯಾರ್ಥ:** ಬಿಡಿಬಿಡಿ ಮಾತಿನ ಅರ್ಥ ತಿಳಿದಷ್ಟರಿಂದ ವಿಷಯ ಮುಗಿಯದು. ಮಾತುಗಳನ್ನು ವಾಕ್ಯದಲ್ಲಿ ಜೋಡಿಸಿ ನೋಡಬೇಕು. ಇಂಗ್ಲಿಷಿನಲ್ಲಿ ಇದು ಬಹು

ವಿಶೇಷವಾದ ಅಂಶ. “ಗೆಟ್” ಅಂದರೆ ಏನು, “ಆನ್” ಅಂದರೆ ಏನು, “ಗೆಟ್ ಆನ್” ಅಂದರೆ ಏನು? ಈ “ಗೆಟ್ ಆನ್” ಎಂಬುದನ್ನು “ಇಡಿಯಮ್” (Idiom) ಎಂದು ಕರೆಯುತ್ತಾರೆ. ಇಡಿಯಮ್ ಎಂದರೆ ಭಾಷಾರೂಢಿ, ಪ್ರಯೋಗರೂಢಿ ಎನ್ನಬಹುದು. ಇದು ಇಂಗ್ಲಿಷಿನಲ್ಲಿ ದೊಡ್ಡ ವಿಷಯ. ರಾಮಸ್ವಾಮಯ್ಯರ್‌ರವರು ಈ ವಿಷಯಕ್ಕೆ ಚೆನ್ನಾಗಿ ಗಮನಕೊಡುವರು.

ನಿಘಂಟುವಿನ ಅಭ್ಯಾಸ

ಅವರು ತಮಗೆ ಸಂದೇಹ ಬಂದಾಗ ಉಡಾಫೆಯಿಂದ ಮಾತನಾಡುತ್ತಿರಲಿಲ್ಲ. ನಿಘಂಟನ್ನು ನೋಡುವುದರಲ್ಲಿ ಅವರಿಗೆ ಕೊಂಚವೂ ಪಾಲುಮಾರಿಕೆ ಇರಲಿಲ್ಲ. ನಿಘಂಟುವಿನ ಅಭ್ಯಾಸವನ್ನು ನಮ್ಮ ವಿದ್ಯಾರ್ಥಿಗಳು ಬೆಳಸಿಕೊಳ್ಳಬೇಕು.

ನಾನು ಕೇಳಿರುವ ಒಂದು ಸಂಗತಿಯನ್ನು ಹೇಳುತ್ತೇನೆ. ಎಚ್. ಜೆ. ಭಾಭಾ ಎಂಬವರು ಮೈಸೂರಿಗೆ ಬಂದಾಗ ಉಪಾಧ್ಯಾಯರು. ಅವರು ಪಾಠ ಹೇಳಬೇಕಾಗಿತ್ತು. ಪಾಠಕಾಲದಲ್ಲಿ ಒಂದಾನೊಂದು ಇಂಗ್ಲಿಷ್ ಮಾತನ್ನು ವಿವರಿಸಬೇಕಾಗಿ ಬಂದಾಗ ಅವರ ಮೇಜಿನ ಮೇಲಿದ್ದ ನಿಘಂಟು ಪುಸ್ತಕದ ಮೇಲೆ ಬೆರಳಿಟ್ಟು ಕಣ್ಣು ಮುಚ್ಚಿಕೊಂಡು ಪುಸ್ತಕವನ್ನು ತೆರೆಯುವರಂತೆ. ಅವರು ಯಾವ ಪುಟವನ್ನು ಹಾಗೆ ತೆರೆಯುವರೋ ಆ ಪುಟದಲ್ಲಿ ಪ್ರಸಕ್ತವಾದ ಮಾತು ಇರುತ್ತಿತ್ತಂತೆ. “ಎಂ” ಅಕ್ಷರದ ಮಾತಿಗೆ ತಿರುಗಿಸಬೇಕಾದ ಪುಟಗಳ ಗಾತ್ರ ಅವರು ಬೆಟ್ಟಿನ ಸ್ಪರ್ಶಮಾತ್ರದಿಂದ ಪುಟ ಇಷ್ಟಿರಬಹುದು, ಇಲ್ಲಿ ಈ ಮಾತು ದೊರೆಯಬಹುದು ಎಂದು ಅಂದಾಜು ಮಾಡಬಲ್ಲವರಾಗಿದ್ದರು. ಪುಸ್ತಕ ರೂಢಿ ಅವರಿಗೆ ಅಷ್ಟು. ತಾಯಿ ತನ್ನ ಮಗುವಿನ ಅಥವಾ ಮಗು ತನ್ನ ತಾಯಿಯ ಮೈಯನ್ನು ಸೋಕಿನ ಮಾತ್ರದಿಂದ ಗುರುತು ಹಿಡಿಯುವುದುಂಟಂತೆ. ಅಷ್ಟು ಆಪ್ತತೆ ಭಾಭಾರವರಿಗೂ ನಿಘಂಟುವಿಗೂ ಇತ್ತು. ರಾಮಸ್ವಾಮಯ್ಯರೂ ಈ ಜಾತಿಗೆ ಸೇರಿದವರೇ. ಅವರು ಇಂಗ್ಲಿಷ್ ಪದ, ಅದರ ಮೂಲರೂಪ, ಆ ಮೂಲರೂಪದಿಂದ ಉತ್ಪನ್ನವಾದ ನಾಲ್ಕಾರು ರೂಪಗಳು, ಅವುಗಳ ಉಚ್ಚಾರಣೆ, ಅವುಗಳ ವಿವಿಧ ಪ್ರಯೋಗಗಳು–ಈ ಎಲ್ಲ ವಿವರಗಳನ್ನೂ ಗಮನಿಸಿ ನೋಡಿ ಮನಸ್ಸಿನಲ್ಲಿ ಧಾರಣೆ ಮಾಡುತ್ತಿದ್ದರು.

ವಾಚಕ ಪುಸ್ತಕ

ಹೀಗೆ ಕಲಿಸುವುದರಲ್ಲಿ ಇಂಗ್ಲೀಷಿನ ನಾಮ ಪದಗಳ ಲಿಂಗವಿವೇಚನೆ, ಕಾಲವಾಚಕ ರೂಪಗಳು, ಏಕವಚನ, ಬಹುವಚನ ರೂಪಗಳು–ಇವುಗಳನ್ನು ಹೇಳುವಲ್ಲಿ ಆ ಪದಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ಹೇಳಿ ವಿವರಿಸುವರು. ಇಂಗ್ಲಿಷಿನಲ್ಲಿ ಎಲ್ಲಕ್ಕಿಂತ ಹೆಚ್ಚು ಕಷ್ಟವಾಗಿದ್ದದ್ದು ಪ್ರಿಪೊಸಿಷನ್ (Preposition) ಪ್ರತ್ಯಯಪದಗಳ ಪ್ರಯೋಗ. ಇದು ಇಂಗ್ಲಿಷ್ ಭಾಷೆಯ ಒಂದು ವಿಶೇಷ ಸಂಗತಿ. Get ಎಂಬ ಧಾತುವಿಗೆ Get in, get on, get up –ಹೀಗೆ ನಾನಾ ಪ್ರತ್ಯಯಪದಗಳು ಅನುಗೂಡುತ್ತವೆ. ಇದು ಆ ಭಾಷೆಯ ವಿಶೆಷ ಲಕ್ಷಣ. ಇದನ್ನು ರಾಮಸ್ವಾಮಯ್ಯರ್ ಅವರು ಉದಾಹರಣಪೂರ್ವಕವಾಗಿ ತಾವು ಹೇಳುವುದಲ್ಲದೆ ಶಿಷ್ಯರಿಂದ ಹೇಳಿಸುವರು.

ಆ ಕಾಲದಲ್ಲಿ ಉಪಯೋಗದಲ್ಲಿದ್ದ ವಾಚಕ ಪುಸ್ತಕ The New Oriental Reader ಎಂಬ ಮ್ಯಾಕ್‌ಮಿಲನ್ ಕಂಪನಿಯ ಪ್ರಕಟನೆ. ಅದರ ಜೊತೆಗೆ ವ್ಯಾಕರಣ. ಮದರಾಸಿನ ಕ್ರಿಸ್ಚಿಯನ್ ಲಿಟರೇಚರ್ ಸೊಸೈಟಿಯವರು ಒಂದು ವ್ಯಾಕರಣ ಪುಸ್ತಕಾವಳಿಯನ್ನು ಪ್ರಕಟಿಸಿದರು. ಮೊದಲನೆಯದು "ಪ್ರಿಮರ್" ಬಾಲಬೋಧೆ. ಎರಡನೆಯದು "ಮ್ಯಾನ್ಯುಯಲ್" ಕೈಪಿಡಿ–ಮಧ್ಯಮ ತರಗತಿಯವರಿಗೆ. ಮೂರನೆಯದು "ಅಡ್ವಾನ್‌ಸ್‌ಡ್" –ಪ್ರೌಢ ತರಗತಿಗಳವರಿಗೆ. ಅಂಥ ಒಳ್ಳೆಯ ವ್ಯಾಕರಣ ಪುಸ್ತಕ ಆಮೇಲೆ ಹುಟ್ಟಲಿಲ್ಲವೆಂದು ನನ್ನ ಅಭಿಪ್ರಾಯ. ಇಂಡಿಯ ದೇಶದ ವಿದ್ಯಾರ್ಥಿಗಳನ್ನು ಉದ್ದೇಶದಲ್ಲಿರಿಸಿಕೊಂಡು ಇಂಗ್ಲಿಷ್ ವಿದ್ವಾಂಸರು ಬರೆದಿದ್ದ ಪುಸ್ತಕ ಅದು. ಅದನ್ನೇ ರಾಮಸ್ವಾಮಯ್ಯರ್ ನನಗೆ ಕಲಿಸುತ್ತಿದ್ದದ್ದು.

ಆ ಪುಸ್ತಕದ ಪ್ರತಿಯನ್ನು ಸಂಪಾದಿಸಲು ನಾನು ಬಹು ಪ್ರಯತ್ನ ಮಾಡಿದೆ. ನಮ್ಮ ಪಾಂಡಿತ್ಯ ಪ್ರವಾಹದಲ್ಲಿ, ಕನ್ನಡದಲ್ಲಿ ಹೇಗೋ ಇಂಗ್ಲಿಷಿನಲ್ಲಿಯೂ ಹಾಗೆಯೇ ಹತ್ತಾರು ಸದ್ಗ್ರಂಥಗಳು ಕೊಚ್ಚಿಕೊಂಡು ಹೋಗಿವೆ.

ರಾಮಸ್ವಾಮಯ್ಯರ್ ಅವರು ಕ್ಲಾಸಿನಲ್ಲಿ ಪಾಠ ಹೇಳಿಕೊಡುತ್ತಿದ್ದದ್ದು ಅವರ ಬೋಧನೆಯ ಮೂರಂಶದಲ್ಲಿ ಒಂದು. ಸಾಮಾನ್ಯವಾಗಿ ಶಿಷ್ಯರನ್ನು ಇಂಗ್ಲಿಷಿನಲ್ಲಿ ಮಾತನಾಡಿಸುವರು. ಇಂಗ್ಲಿಷಿನಲ್ಲಿ ಜವಾಬು ಹೇಳೆನ್ನುವರು. ತಪ್ಪುಗಳನ್ನು ತಿದ್ದುವರು. ಒಳ್ಳೆಯ ಪ್ರಯೋಗಗಳನ್ನು ಆಡಿ ತೋರಿಸುವರು. ಈ ಸಂಭಾಷಣೆಯ ಬೋಧನೆಯಲ್ಲಿ ಒಂದು

ಮುಖ್ಯಭಾಗ ನನ್ನ ಕಾಲದಲ್ಲಿ “ಕಾನ್ವರ್ಸೇಷನ್ ಲೆಸನ್” (Conversation Lesson) ಎಂಬ ಸಂಭಾಷಣೆ ಪಾಠ ವಿಹಿತವಾಗಿತ್ತು.

ಹೆಚ್ಚುವರಿ ಓದು

ರಾಮಸ್ವಾಮಯ್ಯರವರ ಬೋಧನ ವಿಚಕ್ಷಣೆಯ ಮೂರನೆಯ ಅಂಶ ಹೆಚ್ಚುವರಿ ಓದಿನದು. ಎಂದರೆ ಇಲಾಖೆಯಿಂದ ನಿಯಮಿಸಲ್ಪಡುವ ಬೇರೆ ಕಥಾರೂಪದ ಪುಸ್ತಕ ವ್ಯಾಸಂಗ. ಇದನ್ನು ರಾಮಸ್ವಾಮಯ್ಯರ್ ಕ್ರಮವಾಗಿ ನಡಸಿದರು. ದಿನದಿನವೂ ಸಂಜೆ ೭ ಘಂಟೆಯ ಸುಮಾರಿಗೆ ಅವರ ಮನೆಯಲ್ಲಿ ಮೂವರು ನಾಲ್ವರು ವಿದ್ಯಾರ್ಥಿಗಳು ಸೇರುತ್ತಿದ್ದೆವು. ಸುಮಾರು ಒಂದು ಘಂಟೆ ಯಾವುದೋ ಬಾಲಸಾಹಿತ್ಯವನ್ನು ನನ್ನಲ್ಲೊಬ್ಬನು ಓದತಕ್ಕದ್ದು, ಮಿಕ್ಕವರು ಕೇಳತಕ್ಕದ್ದು. ಕಷ್ಟ ತೋರಿದಾಗ ಅಲ್ಲಿಯೇ ಇದ್ದ ಉಪಾಧ್ಯಾಯರು ಕಷ್ಟವನ್ನು ಸುಲಭಪಡಿಸತಕ್ಕದ್ದು. ಹೀಗೆ ನಾವು ಓದಿ ಮುಗಿಸಿದ ಗ್ರಂಥಗಳಲ್ಲಿ ನನಗೆ ಜ್ಞಾಪಕವಿರುವುದು ಮೂರು ನಾಲ್ಕು:

1. Evenings at Home
2. Robinson Crusoe
3. Swiss Family Robinson
4. Sanford and Merton

"ಈವನಿಂಗ್ಸ್ ಅಟ್ ಹೋಮ್" ಗ್ರಂಥ ನನಗೆ ತುಂಬ ಮೆಚ್ಚಾಯಿತು. ಒಂದಾನೊಂದು ಕುಟುಂಬದವರು ಸಂಜೆಯ ಬಿಡುವಿನಲ್ಲಿ ಅಗ್ಗಿಷ್ಟಿಕೆಯ ಸುತ್ತ ಮೈ ಬಿಸಿ ಮಾಡಿಕೊಳ್ಳುತ್ತ ನೆಮ್ಮದಿಯಾಗಿ ಕುಳಿತಿರುತ್ತಾರೆ. ಅವರಲ್ಲೊಬ್ಬ ತನಗೆ ತೋಚಿದ ಕಥೆಯನ್ನು ಹೇಳುತ್ತಾನೆ. ಆ ಕಥೆಗಳು ಕಥಾವಸ್ತುವಿನ ಚಮತ್ಕಾರದಿಂದ ಸ್ವಾರಸ್ಯ ತಾಳುತ್ತವೆ. ಆ ಕಥಾಸ್ವಾರಸ್ಯದ ನಡುವೆ ಒಂದು ನೀತಿ ಅಡಗಿಕೊಂಡಿರುತ್ತದೆ. ಆ ಕಥೆಗಳಲ್ಲಿ ಒಂದು "Eyes and No Eyes" (ಕಣ್ಣಿದ್ದೂ ಕುರುಡ) ಎಂಬುದು. ನಾವು ಕಣ್ಣು ಬಿಟ್ಟುಕೊಂಡು ಬೀದಿ ನಡೆಯುತ್ತೇವೆ. ಆದರೂ ಎಷ್ಟೋ ಮುಖ್ಯ ಸಂಗತಿಗಳನ್ನು ಗಮನಕ್ಕೆ ತಂದುಕೊಳ್ಳುವುದಿಲ್ಲ. ಇಂಥವು ಆ ಕಥೆಗಳು.

ಏನು ಬಂದಿದೆ ನಮ್ಮ ದೇಶಕ್ಕೆ? ಅಂಥ ಒಳ್ಳೆಯ ಗ್ರಂಥಗಳನ್ನು ನಾವು ಏಕೆ ಪ್ರಚಾರದಲ್ಲಿರಿಸಿಕೊಂಡಿಲ್ಲ?

ಒಡನಾಡಿ

ರಾಮಸ್ವಾಮಯ್ಯರವರ ಪ್ರಭಾವ ಪುಸ್ತಕ ಮಾತ್ರದ್ದಲ್ಲ; ತರಗತಿಯ ಪಾಠದ ಮಾತ್ರದ್ದಲ್ಲ. ಅವರು ವಿದ್ಯಾರ್ಥಿಗಳಿಗೆ ಒಡನಾಡಿಯಂತೆ ಇದ್ದವರು. ರಜಾ ದೊರೆತ ದಿನ ನಮ್ಮನ್ನು ಮೂರು ನಾಲ್ಕು ಜನರನ್ನು ಸೇರಿಸಿಕೊಂಡು ಬೆಟ್ಟ ಹತ್ತುವರು. ತುದಿಮುಟ್ಟಿದ ಮೇಲೆ ಬೆಟ್ಟದ ಹಿಂಬಾಗದಿಂದಿಳಿದು ಅಲ್ಲಿಯ ಕಣಿವೆಯ ನೀರಿನ ತೊರೆ ಹುಲ್ಲು ಬಯಲುಗಳಲ್ಲಿ ಸುತ್ತಾಡಿಸುವರು. ನಮಗೆ ಅದು ಮಹಾ ಆನಂದದ ಅನುಭವ. ಗಿಡಗಳ ಕಡೆ, ಮರಗಳ ಕಡೆ ನಮ್ಮ ಗಮನವನ್ನು ತಿರುಗಿಸುವರು. ಚಿಗುರಿನ ಸೊಗಸನ್ನು ತೋರಿಸುವರು. ನೀರಿನ ಸೊಗಸನ್ನು ತೋರಿಸುವರು. ಹೀಗೆ ಪ್ರಕೃತಿಯ ಚೆಲುವನ್ನು ಮನಸ್ಸಿಗೆ ಗೋಚರಪಡಿಸುವರು. ಸೌಂದರ್ಯವು ಪ್ರಕೃತಿಯಲ್ಲಿರುತ್ತದೆಂಬುದು ನಿಜ. ಆದರೆ ನಮ್ಮ ಕಣ್ಣು ಅದಕ್ಕೆ ತರೆದಿರುತ್ತದೆಂಬುದು ಅಷ್ಟು ನಿಜವಲ್ಲ. ಯಾರಾದರೊಬ್ಬರು ನಮ್ಮ ಕಣ್ಣಿನ ರೆಪ್ಪೆಯನ್ನು ತೆರೆದು ನಮ್ಮ ದೃಷ್ಟಿಯನ್ನು ಸೌಂದರ್ಯ ಸ್ಥಾನದ ಕಡೆಗೆ ತಿರುಗಿಸಬೇಕು. ಹೀಗೆ ಮಾಡಿದವರು ರಾಮಸ್ವಾಮಯ್ಯರ್. ಬೆಟ್ಟದಲ್ಲಿಯೋ ಬೇರೆ ಕಡೆಯೋ ಪಾದರಿ ಹೂವಿನ ಮತ್ತು ಪಗಡೆ ಹೂವಿನ ಮರಗಳಿರುತ್ತಿದ್ದವು. ರಾಮಸ್ವಾಮಯ್ಯರಿಗೆ ಶ್ರೀರಾಮನವಮಿಯ ಉತ್ಸವದಲ್ಲಿಯೂ ಸಾಮಾನ್ಯವಾಗಿ ಶ್ರೀರಾಮಚಂದ್ರಮೂರ್ತಿಯಲ್ಲಿಯೂ ಹೆಚ್ಚು ಉತ್ಸಾಹ. ವಿದ್ಯಾರ್ಥಿಗಳು ಪಾದರಿಯ ಹೂವನ್ನೂ ಪಗಡೆಯ ಹೂವನ್ನೂ ಶೇಖರಿಸಿ ಹಾರ ಹಾರವಾಗಿ ತಂದುಕೊಟ್ಟರೆ ರಾಮಸ್ವಾಮಯ್ಯರಿಗೆ ತುಂಬ ಸಂತೋಷ. ಆ ಹಾರಗಳನ್ನು ಶ್ರೀರಾಮರ ಚಿತ್ರಪಟಕ್ಕೆ ಅಲಂಕರಿಸಿ "ಇದು ನಮ್ಮ ಹುಡುಗರ ಸೇವೆ" ಎಂದು ಹೆಮ್ಮೆಪಡುವರು. ನಮ್ಮ ಊರ ಬಳಿಯ ತೋಟಗಳಲ್ಲಿಯೂ ಬೆಟ್ಟದ ಮೇಲೂ ತಿರುಗಾಡುವಾಗ ಪ್ರಾಸ್ತಾವಿಕವಾಗಿ ಎಷ್ಟೋ ಇಂಗ್ಲಿಷ್ ಪದಗಳನ್ನು ಹೇಳಿಕೊಡುವರು. ಇಂಗ್ಲಿಷ್ ಸಂಭಾಷಣೆಯನ್ನು ರೂಢಿ ಮಾಡಿಸುವರು. ನಡತೆ ನಡೆ ನುಡಿಗಳಲ್ಲಿಯೂ ಮರ್ಯಾದೆಯನ್ನು ಕಲಿಸುವರು. ಇದು ಅವರ ವಿಶೇಷ ಲಕ್ಷಣ.

***

ರಾಮಸ್ವಾಮಯ್ಯರವರ ಕುಟುಂಬಜೀವನದಲ್ಲಿ ಆಗಾಗ ದುಃಖ ಬಂದಿತ್ತು. ಅವರ ಮೊದಲನೆಯ ಭಾರ್ಯೆ ತೀರಿದ ಮೇಲೆ ಪುನರ್ವಿವಾಹ ಮಾಡಿಕೊಂಡರು. ಆಕೆಯೂ ಒಂದು ವರ್ಷದೊಳಗಾಗಿ ತೀರಿಕೊಂಡಳು. ಮತ್ತೆ ಮದುವೆ ಮಾಡಿಕೊಳ್ಳತಕ್ಕದ್ದೆಂದು ಅವರ ಅಣ್ಣಂದಿರು ಮೊದಲಾದ ಬಂಧುಗಳು ಒತ್ತಾಯಪಡಿಸಿದರು. ಅವರು ಒಪ್ಪಲಿಲ್ಲ.

ಆ ಕಾಲದಲ್ಲಿಯೇ ಅವರು ಉಪನಿಷತ್ತಿನ ಕಡೆಗೆ ಮನಸ್ಸು ತಿರುಗಿಸಿದ್ದು. ಆದರೆ ನಮ್ಮ ಚಂದ್ರಶೇಖರ ಶಾಸ್ತ್ರಿಗಳೂ, ನನ್ನ ತಂದೆ ಚಿಕ್ಕಜ್ಜ ಇವರೂ ರಾಮಸ್ವಾಮಯ್ಯರವರು ಪುನಃ ವಿವಾಹ ಮಾಡಿಕೊಳ್ಳಬೇಕೆಂದು ಒತ್ತಾಯ ಹಾಕಿ ಮತ್ತೆ ಮದುವೆ ಮಾಡಿಸಿದರು. ಈ ವಿವಾಹದಿಂದ ಅವರಿಗೆ ಸಂತಾನ ಪ್ರಾಪ್ತಿಯಾಯಿತು.

ಸಂಭಾವಿತ

ಸ್ಕೂಲುಮೇಷ್ಟರ ವಿಷಯ ಹೆಚ್ಚಾಗಿ ಬರೆಯಲು ಏನಿದ್ದೀತು? ರಾಮಸ್ವಾಮಯ್ಯರ್ ಹಣಕಾಸಿನ ವಿಷಯದಲ್ಲಿ ಕಟ್ಟುನಿಟ್ಟಿನಿಂದ ನಡೆದವರು. ಸ್ಕೂಲಿನ ಅಡ್ಮಿಷನ್, ಪ್ರೊಮೋಷನ್ ಮತ್ತು ಶಿಕ್ಷಣಮರ್ಯಾದೆಗೆ ಸಂಬಂಧಪಟ್ಟ ವಿಷಯಗಳಲ್ಲೆಲ್ಲ ನಿರ್ದಾಕ್ಷಿಣ್ಯದಿಂದ ನಡೆಯುತ್ತಿದ್ದರು. ಒಬ್ಬಿಬ್ಬರು ಇದಕ್ಕಾಗಿ ಕೋಪ ಮಾಡಿಕೊಂಡದ್ದೂ ಉಂಟು. ಆ ಕೋಪವನ್ನು ರಾಮಸ್ವಾಮಯ್ಯರ್ ಲೆಕ್ಕಕ್ಕೆ ತಂದುಕೊಳ್ಳರು.

ರಾಮಸ್ವಾಮಯ್ಯರ್ ಅವರು ಭಗವದ್ಭಕ್ತರು. ಸೋಮೇಶ್ವರ ದೇವಾಲಯದಲ್ಲಿ ದೀಪಾರಾಧನೆ ಎಂದರೆ ತಪ್ಪದೆ ಬರುವರು. ಆ ಹೊತ್ತು ಮಂತ್ರಪುಷ್ಪ ಕಾಲದಲ್ಲಿ ಚಂದ್ರಶೇಖರ ಶಾಸ್ತ್ರಿಗಳು ವೇದ ಹೇಳುವುದನ್ನು ಕೇಳಬೇಕೆಂದು ಅವರಿಗೆ ಆಶೆ. ಅಚ್ಚಪ್ಪದಾಸರ ಹರಿಕಥೆಗೆ ಬರುತ್ತಿದ್ದದ್ದೂ ಉಂಟು. ಅವರು ಸಂಭಾವಿತರಾಗಿದ್ದದ್ದರ ಜೊತೆಗೆ ಸ್ನೇಹತತ್ಪರರೂ ಆಗಿದ್ದರು. ನನ್ನ ನೆನಪಿನ ಅಂಗಳದಲ್ಲಿ ಅವರ ತಮಿಳು ಬೆರೆತ ಕನ್ನಡವನ್ನಾಡುವ ಎತ್ತರವಾದ ಮೂರ್ತಿ ಆಗಾಗ ಸುಳಿದಾಡುತ್ತದೆ.

೧೭

ಬುಡ್ಡು ಸಾಹೇಬರು ಬೆಟ್ಟ ಹತ್ತಿದ್ದು

ಜನಾಬ್ ಮಹಮದ್ ಬುಡನ್‌ಖಾನ್ ಸಾಹೇಬರು ಉರ್ದು ಸ್ಕೂಲುಗಳ ಇನ್‌ಸ್ಪೆಕ್ಟರು. ಅವರು ನಮ್ಮ ಊರಿನಲ್ಲಿದ್ದ ಆಂಗ್ಲೋ–ಹಿಂದೂಸ್ತಾನಿ ಸ್ಕೂಲನ್ನು ಪರೀಕ್ಷಿಸುವುದಕ್ಕಾಗಿ ವರ್ಷಕ್ಕೆ ಒಂದೆರಡು ಸಾರಿ ಬರುತ್ತಿದ್ದರು.

ನಮ್ಮ ಊರಿನಲ್ಲಿ ಮುಸಲ್ಮಾನ್ ಪ್ರಜೆ ವಿಶೇಷವಾಗಿದ್ದದ್ದರಿಂದ ಅವರಿಗಾಗಿ ಒಂದು ಪ್ರತ್ಯೇಕ ಸ್ಕೂಲ್. ಆ ಸ್ಕೂಲಿನಲ್ಲಿ ಕನ್ನಡ ಕಲಿಸುವುದಕ್ಕಾಗಿ ಇಬ್ಬರು ಹಿಂದೂ ಉಪಾಧ್ಯಾಯರೂ ಇದ್ದರು. ಸ್ಕೂಲಿನ ಜನಸಂಖ್ಯೆ ನೂರರ ಸುಮಾರು ಇರಬಹುದು. ಸ್ಕೂಲಿನ ಹೆಡ್‌ಮಾಸ್ಟರು ಜನಾಬ್ ಮುಸ್ತಫಾ ಸಾಹೇಬರು. ಇವರು ಉರ್ದು ಭಾಷೆಯಲ್ಲಿಯೂ ಅರಬ್ಬಿ ಪಾರಸಿಗಳಲ್ಲಿಯೂ ಸಹ ವಿದ್ವಾಂಸರೆಂದು ಹೆಸರಾಗಿದ್ದರು.

ಮುಸ್ತಾಫಾ ಸಾಹೇಬರು ಒಳ್ಳೆಯವರು. ಸೌಮ್ಯವಾದ ಸ್ವಭಾವ. ಸ್ನೇಹ ಪ್ರವೃತ್ತಿಯುಳ್ಳವರು. ಊರಿನಲ್ಲಿದ್ದ ಎಲ್ಲ ಸ್ಕೂಲುಗಳ ಉಪಾಧ್ಯಾಯರುಗಳೂ ಅವರಿಗೆ ಮನ್ನಣೆಯನ್ನೂ ವಿಶ್ವಾಸವನ್ನೂ ತೋರುತ್ತಿದ್ದರು.

ಇನ್‌ಸ್ಪೆಕ್ಟರವರು, ನಾವು ಇಲ್ಲಿ ಬುಡ್ಡು ಸಾಹೇಬರೆಂದು ಕರೆಯೋಣ, ಇದೇ ಅವರಿಗೆ ವಿದ್ಯಾರ್ಥಿಗಳು ಇಟ್ಟಿದ್ದ ಹೆಸರು.

ಬುಡ್ಡು ಸಾಹೇಬರು ಮೊದಲನೆಯ ಸಾರಿ ಮುಳುಬಾಗಿಲಿಗೆ ಬಂದಾಗ ಅಲ್ಲಿಯೇ ದರ್ಗಾಕ್ಕೆ ಭೇಟಿ ಕೊಟ್ಟರು. ದರ್ಗಾ ಎನ್ನುವುದು ಮಹಮ್ಮದೀಯ ಸಾಧು ಸಂತರ ಸಮಾಧಿಗಳಿರುವ ಸ್ಥಳ. ಅದು ಪವಿತ್ರ ಸ್ಥಳ, ಯಾತ್ರಾಸ್ಥಳ.

ಮುಳುಬಾಗಿಲಿನ ದರ್ಗಾ ಪ್ರಸಿದ್ಧವಾದದ್ದು. ಎಂಟು ವರ್ಷಕ್ಕೋ ಹತ್ತು ವರ್ಷಕ್ಕೋ ಒಂದು ಸಾರಿ ಜಾತ್ರೆ ನಡೆಯುತ್ತಿತ್ತು. ಆ ಜಾತ್ರೆಗೆ ಉರ್ಸ್ ಎಂದು ಹೆಸರು. ಅದಕ್ಕಾಗಿ ಪೆನುಕೊಂಡೆ, ಚಿತ್ತೂರು, ಪುಂಗನೂರು ಮೊದಲಾದ ಕಡೆಗಳಿಂದಲೂ ಮುಳುಬಾಗಲಿನ ಸುತ್ತಮುತ್ತಲಿನ ಪ್ರದೇಶಗಳಿಂದಲೂ ಭಕ್ತಾದಿಗಳು ತಂಡ ತಂಡವಾಗಿ ಬರುತ್ತಿದ್ದರು. ಒಂದು

ಕಟ್ಟುಪಾಡಿನಂತೆ ಗೊತ್ತಾದ ಒಬ್ಬ ಫಕೀರನು ದರ್ಗಾದಲ್ಲಿ ಗೊತ್ತಾದ ಕಡೆ ದೀಕ್ಷಾಬದ್ಧನಾಗಿ ಕುಳಿತು ಜನಕ್ಕೆ ದರ್ಶನ ಕೊಡುವನು. ಅವನ ಪಕ್ಕದಲ್ಲಿ ಒಂದು ನವಿಲುಗರಿಗಳ ಕಟ್ಟು–ಆಶೀರ್ವಾದ ಮಾಡುವುದಕ್ಕಾಗಿ. ಮುಂದುಗಡೆ ಆಲಮಡ್ಡಿ ಊದುಬತ್ತಿ ಮೊದಲಾದ ಪರಿಮಳ ದ್ರವ್ಯಗಳು. ಕೆಲಮಂದಿ ಪಂಜರದಲ್ಲಿ ಒಂದು ಪಕ್ಷಿಯನ್ನಿರಿಸಿಕೊಂಡಿರುತ್ತಿದ್ದರು.

ಫಕೀರರಲ್ಲಿ ನಾಲ್ಕು ಪಂಗಡಗಳುಂಟಂತೆ. ಆ ನಾಲ್ಕರಲ್ಲಿ ಒಂದೊಂದು ಪಂಗಡಕ್ಕೆ ಒಂದೊಂದು ಪರ್ಯಾಯ. ಈ ಪರ್ಯಾಯ ವ್ಯವಸ್ಥೆಯ ತಪಶೀಲುಗಳು ನನ್ನ ಚಿಕ್ಕಜ್ಜಂದಿರಿಗೆ ತಿಳಿದಿತ್ತಂತೆ. ಅದಕ್ಕೆ ಸಂಬಂಧಪಟ್ಟ ದಾಖಲೆ ದೂಖಲೆಗಳು ಅವರಲ್ಲಿದ್ದವಂತೆ. ಈ ಕಾರಣದಿಂದ ದರ್ಗಾಕ್ಕೆ ಸಂಬಂಧಪಟ್ಟ ಜನ ನನ್ನ ತಾತಂದಿರಲ್ಲಿಗೆ ಆಗಾಗ ಬರುವರು. ಗೊತ್ತಾದ ಫಕೀರನು ಗೊತ್ತಾದಷ್ಟು ದಿವಸ-ಎಂಟು ದಿವಸವೋ ಹತ್ತು ದಿವಸವೋ–ಒಂದು ಅಲಂಕೃತವಾದ ಮಂಟಪದಲ್ಲಿ ಪಟ್ಟ ಕುಳಿತು ಆದಮೇಲೆ ಕಡೆಯ ದಿನ ಊರಲ್ಲೆಲ್ಲ ಮೆರವಣಿಗೆ ಬರುವುದು. ನಾಲ್ಕು ಕೋಲುಗಳಿಗೆ ದೊಡ್ಡ ಕನಾತನ್ನು ಕಟ್ಟಿ ಚಪ್ಪರ ಮಾಡುತ್ತಿದ್ದರು. ಆ ಚಪ್ಪರದ ಕೆಳಗೆ ಜೀನು ಹಾಕಿ ಸಿಂಗರಿಸಿದ ಒಂದು ಕುದುರೆ, ಸುತ್ತಮುತ್ತ ಜನ ಬರುವರು. ಮೇಳ, ಬೆಳಗುವ ಪಂಜು–ಇದು ಜನರನ್ನು ಆಕರ್ಷಿಸುವುದು. ಕುದುರೆಯ ಬೆನ್ನಿನ ಮೇಲೆ ಒಂದು ಚೀಲದಲ್ಲಿ ಗಂಧದ ಹುಡಿ ಇರುವುದು. ಈ ಗಂಧದ ಹುಡಿಯನ್ನೂ ಕೊಂಚ ಕೊಂಚ ಪನ್ನೀರು ಅತ್ತರುಗಳನ್ನೂ ಪ್ರಮುಖ ಜನರ ಮನೆಗಳಿಗೆ ಹಂಚುವರು.

ಇದು ನನ್ನ ಬಾಲ್ಯದ ಅನುಭವ.

ಹೈದರ್ ವಲಿ

ಬುಡ್ಡು ಸಾಹೇಬರು ನಿಜವಾಗಿ ಭಕ್ತರು. ಅವರಿಗೆ ತಮ್ಮ ಮತತತ್ತ್ವಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ಗಾಢವಾದ ನಂಬಿಕೆ. ಅವರು ದರ್ಗಾಕ್ಕೆ ಭೇಟಿ ಕೊಟ್ಟಗ ಅಲ್ಲಿ ಒಬ್ಬ ವೃದ್ಧರು ಅವರಿಗೆ ದರ್ಗಾ ಇತಿಹಾಸವನ್ನು ಹೇಳುತ್ತ ಅಲ್ಲಿರುವ ಮುಖ್ಯ ಸಮಾಧಿಯು ಹೈದರ್ ವಲಿ ಎಂಬ ಮಹಾತಪಸ್ವಿಯದೆಂದೂ ಆ ಹೈದರ್ ವಲಿ ಬೆಟ್ಟದ ತುದಿಯಲ್ಲಿ ಇರುವ ಗುಹೆಯಲ್ಲಿ ತಪಸ್ಸು ಮಾಡುತ್ತಿದ್ದನೆಂದೂ ಅಲ್ಲಿರುವ ದೊಣೆಯಲ್ಲಿ ಆತ ಸ್ನಾನ ಮಾಡುತ್ತಿದ್ದನೆಂದೂ ತಿಳಿಸಿದರು. ಈ ವೃತ್ತಾಂತ ಬುಡ್ಡು ಸಾಹೇಬರಿಗೆ ತುಂಬ ಕುತುಕವನ್ನುಂಟುಮಾಡಿತು. ತಾವು ಆ ಗವಿಗೆ ಹೋಗಬೇಕೆಂದೂ ಆ ದೊಣೆಯನ್ನು

ನೋಡಬೇಕೆಂದೂ ಇಷ್ಟಪಟ್ಟು ತಮ್ಮ ಕೋರಿಕೆಯನ್ನು ಮುಸ್ತಫಾ ಸಾಹೇಬರೇ ಮೊದಲಾದ ಸ್ಕೂಲುಮೇಷ್ಟರುಗಳಿಗೆ ಹೇಳಿದರು.

ಆ ಮೇಷ್ಟರುಗಳು ಒಬ್ಬರ ಮುಖ ಒಬ್ಬರು ನೋಡಿಕೊಂಡು ಕೊಂಚ ಪಿಸುಮಾತನಾಡಿಕೊಂಡು ಕಡೆಗೆ "ಆಗಬಹುದು ಏರ್ಪಾಡು ಮಾಡೋಣ ನಾಲ್ಕೈದು ದಿನ ಬಿಡುವು ಕೊಟ್ಟರೆ ತಜವೀಜು ನಡಸುವುದಾಗುತ್ತೆ" ಎಂದು ಬಿನ್ನವಿಸಿದರು. ಬುಡ್ಡು ಸಾಹೇಬರು "ಆಗಲಿ ಈಗ ಅವಸರವಿಲ್ಲ. ಅಕ್ಟೋಬರ್ ನವಂಬರ್ ತಿಂಗಳ ವೇಳೆಗೆ ಮತ್ತೆ ನಾನು ಬರುತ್ತೇನೆ. ಆಗ ಬೆಟ್ಟ ಹತ್ತೋಣ" ಎಂದರು.

ಈಗ ಬುಡ್ಡು ಸಾಹೇಬರ ವ್ಯಕ್ತಿಸ್ವರೂಪವನ್ನು ಗಮನಿಸಬೇಕು.

ಸ್ಥೂಲಕಾಯ

ಅವರ ವಯಸ್ಸು ಆಗ ಸುಮಾರು ನಲವತ್ತೈದು. ಬಣ್ಣ ಕಪ್ಪು ಮಿಶ್ರವಾದ ಕಂದು ಬಣ್ಣ. ಆಳು ಎತ್ತರ ಮತ್ತು ದೇಹದ ಮಧ್ಯಭಾಗದಲ್ಲಿ ಬಹು ಸ್ಥೂಲ. ಗಂಟಲು ದೊಡ್ಡದು. ಆಕಾರ ಘನವಾದದ್ದು. ಇಂಥವರನ್ನು ಬೆಟ್ಟ ಹತ್ತಿಸುವುದೆಂದರೆ ಮೇಷ್ಟರುಗಳಿಗೆ ಕೊಂಚ ಯೋಚನೆ.

ನವೆಂಬರ್ ತಿಂಗಳು ಬಂದಿತು. ಬುಡ್ಡು ಸಾಹೇಬರು ಊರಿಗೆ ಬಂದಿಳಿದರು. ಮೇಷ್ಟರುಗಳೆಲ್ಲ ಅವರನ್ನು ಕಂಡು ಹೇಳಿದರು:

“ಏರ್ಪಾಟೆಲ್ಲ ಆಗಿದೆ. ಶನಿವಾರ ಬೆಳಗ್ಗೆ, ಕತ್ತಲು ಕತ್ತಲಾಗಿರುವಾಗಲೇ ಪರ್ವತಾರೋಹಣಕ್ಕೆ ಸಕಾಲ.”

ಸಾಹೇಬರು: “ಆಗಬಹುದು. ನಾನು ಸಿದ್ಧನಾಗಿರುತ್ತೇನೆ.”

ಈ ವೇಳೆಗೆ ಮೇಷ್ಟರುಗಳು ಮಾಡಿಕೊಂಡಿದ್ದ ಸಿದ್ಧತೆ: ನಾಲ್ಕು ದಪ್ಪನೆಯ ಹೊರಜೆ ಹಗ್ಗಗಳು. ಒಂದು ನೂರು ಕಲ್ಲುಸಕ್ಕರೆ ದ್ರಾಕ್ಷಿ ಖರ್ಜೂರ ಚೂರುಗಳ ಪೊಟ್ಟಣಗಳು. ನೂರೈವತ್ತು ಇನ್ನೂರು ಮಂದಿ ಹುಡುಗರು. ಈ ಹುಡುಗರಲ್ಲಿ ಎಲ್ಲ ಮತಗಳವರೂ ಇದ್ದರು. ಬ್ರಾಹ್ಮಣರೂ ಇದ್ದರು. ಆ ಶನಿವಾರದ ಹಿಂದಿನ ದಿವಸ ಮೇಷ್ಟರುಗಳು ತಮ್ಮ ವಿದ್ಯಾರ್ಥಿಗಳಿಗೆಲ್ಲ ತಾಕೀತು ಮಾಡಿದ್ದರು:

“ಶನಿವಾರ ಸ್ಕೂಲಿಗೆ ರಜಾ. ಆದರೆ ನೀವು ಬೆಳಗ್ಗೆ ಐದು ಘಂಟೆಯ ವೇಳೆಗೆ, ಬೆಳಗಾಗುವುದಕ್ಕೆ ಮುಂಚೆ ಬೆಟ್ಟದಡಿಯಲ್ಲಿ ಗೋಪಲಕೃಷ್ಣಸ್ವಾಮಿ ಗುಡಿಯ ಹತ್ತಿರ ಸೇರಿರತಕ್ಕದ್ದು. ಅಲ್ಲಿಂದ ಬೆಟ್ಟ ಹತ್ತುವುದರಲ್ಲಿ ನಮ್ಮ ಜೊತೆ ಬರತಕ್ಕದ್ದು. ನಾವು ಹೇಳಿದಂತೆ ಎಳೆಯತಕ್ಕದ್ದು, ಅಥವಾ ತಳ್ಳತಕ್ಕದ್ದು. ಅಲ್ಲಲ್ಲಿ ನಾವು ಹೇಳಿದಾಗ ನಿಲ್ಲತಕ್ಕದ್ದು. ಹತ್ತು ಹನ್ನೊಂದು ಘಂಟೆಯ ವೇಳೆಗೆ ಹಿಂತಿರುತ್ತೇವೆ. ಆಗ ಅಲ್ಲಿಗೆ ನಿಮ್ಮ ನಿಮ್ಮ ಮನೆಗಳವರು ಊಟ ತಂದಿರುವಂತೆ ಹೇಳಿರತಕ್ಕದ್ದು. ತೋಪಿನಲ್ಲಿ ಎಲ್ಲರೂ ಊಟ ಮಾಡಿದ್ದಾದ ಮೇಲೆ ನಿಮ್ಮ ನಿಮ್ಮ ಮನೆಗಳಿಗೆ ನೀವು ನೀವು ಹೋಗತಕ್ಕದ್ದು.”

ಪರ್ವತಾರೋಹಣ

ಏರ್ಪಾಟಿನಂತೆ ವಿದ್ಯಾರ್ಥಿಗಳು ಕೋಲಾಹಲದಿಂದ ಸೇರಿದರು. ಮೇಷ್ಟರುಗಳೆಲ್ಲ ಉತ್ಸಾಹದಿಂದ ಬಂದಿದ್ದರು. ಇನ್‌ಸ್ಪೆಕ್ಟರ್ ಸಾಹೇಬರು ದಯಮಾಡಿಸಿದರು. ಎಲ್ಲರೂ "ಅಲ್ಲಾ ಹೋ ಅಕ್ಬರ್" ಎಂದು ಪ್ರಾರ್ಥನೆ ಘೋಷಿಸಿ ಬೆಟ್ಟ ಹತ್ತಲು ಮೊದಲು ಮಾಡಿದರು. ಅಷ್ಟರಲ್ಲಿ ನಾಲ್ವರೈವರು ಮೇಷ್ಟರುಗಳು ಮುಂದೆ ಬಂದು ಸಾಹೇಬರ ನಡುವಿಗೆ ಒಂದು ಬಲವಾದ ನಡುಕಟ್ಟನ್ನು ಬಿಗಿದರು. ಆಗ ನಡುಕಟ್ಟಿನ ನಾಲ್ಕು ದಿಕ್ಕುಗಳಲ್ಲಿ-ಎಡಕ್ಕೆ ಮುಂದೆ ಒಂದು ಹಿಂದೆ ಒಂದು, ಬಲಕ್ಕೆ ಹಿಂದೆ ಒಂದು ಮುಂದೆ ಒಂದು ಹೀಗೆ ಹೊರಜೆ ಹಗ್ಗಗಳನ್ನು ಕಟ್ಟಿ ತೇರನ್ನು ಎಳೆಯಲು ನಿಂತಂತೆ ಹುಡುಗರು ಹಗ್ಗಗಳನ್ನು ಹಿಡಿದು ನಿಂತರು. ದೊಡ್ಡವರಾದ ಕೆಲಮಂದಿ ವಿದ್ಯಾರ್ಥಿಗಳನ್ನು ಸಾಹೇಬರ ಪೃಷ್ಠಭಾಗದಲ್ಲಿ ನಿಲ್ಲಿಸಿ ಅದನ್ನು ಅದುಮಿ ಹಿಡಿದುಕೊಂಡಿರುವಂತೆ ಹೇಳಿದರು. ಇಬ್ಬರು ಮೂವರು ಮೇಷ್ಟರುಗಳು ಮುಂದುಗಡೆ ಎರಡು ಪಕ್ಕಗಳಲ್ಲೂ ನಿಂತು ಹಗ್ಗಗಳನ್ನು ಮೆತ್ತಗೆ, ಹಗುರವಾಗಿ ಸೆಳೆಯುವರು. ಸಾಹೇಬರು ಹೆಜ್ಜೆಯನ್ನೆತ್ತಿ ಮುಂದಿಡುವರು. ಹೀಗೆ ಹೆಜ್ಜೆ ಹೆಜ್ಜೆಯಾಗಿ ಸವಾರಿ ಮುಂದಕ್ಕೆ ಬೆಳೆಯಿತು. ಮುಂದುಗಡೆಯ ಎರಡು ಹಗ್ಗಗಳ ಸೆಳೆತದಿಂದ ಅವರಿಗೆ ಬಲ; ಹಿಂದುಗಡೆಯ ಎರಡು ಒತ್ತಡದಿಂದಲೂ ಬಲ. ಹೀಗೆ ಹತ್ತಿಪ್ಪತ್ತು ಹೆಜ್ಜೆಗಳಾದಾಗ ಸಾಹೇಬರಿಗೆ ಆಯಾಸವಾಗುವುದು. ಅವರು ಕೈಸನ್ನೆಯಿಂದ ಅದನ್ನು ತೋರಿಸುವರು. ಆಗ ದಂ ತೆಗೆದುಕೊಳ್ಳುವುದಕ್ಕಾಗಿ ಎಲ್ಲರೂ ನಿಲ್ಲುವರು. ಈಗ ಕಲ್ಲುಸಕ್ಕರೆ ದ್ರಾಕ್ಷಿ ಖರ್ಜೂರಗಳ ಸಮಾರಾಧನೆ. ಹುಡುಗರಿಗೆಲ್ಲ ಒಂದೊಂದು ಪೊಟ್ಟಣ ಕೊಡುವರು.

ಹೀಗೆ ಸಾಗಿ ಶಿಖರವನ್ನು ತಲಪುವ ವೇಳೆಗೆ ಸುಮಾರು ಒಂಭತ್ತೂವರೆ ಘಂಟೆ ಆಯಿತು. ಅಲ್ಲಿ ಕೊಂಚ ವಿಶ್ರಾಂತಿ. ಸಾಹೇಬರು ನೋಡಬೇಕಾದದ್ದನ್ನೆಲ್ಲ ನೋಡಿ ಸಂತೋಷ ವ್ಯಕ್ತಪಡಿಸಿದ ಬಳಿಕ ಅವರೋಹಣ ಪ್ರಾರಂಭ. ಆದರೆ ಈಗ ಹಗ್ಗಗಳ ಎಳೆತ ಹಿಂದುಗಡೆಯಿಂದ ಮತ್ತು ಹಿಂಬಾಗದ ಒತ್ತಡವಿಲ್ಲ. ಇಳಿಯುವ ಅವಸರದಲ್ಲಿ ಸಾಹೇಬರು ಮುಗ್ಗರಿಸಬಾರದು. ಆದದ್ದರಿಂದ ಅವರ ವೇಗವನ್ನು ಹಿಂಬದಿಯಿಂದ ತಡೆಯತಕ್ಕದ್ದು. ಈಗ ಅಲ್ಲಲ್ಲಿ ಮಜಲುಮಾಡುವ ಅವಶ್ಯಕತೆ ಕಡಮೆ; ಎಲ್ಲೋ ಮೂರು ನಾಲ್ಕು ಕಡೆಗಳಲ್ಲಿ ಮಾತ್ರ. ಬೆಟ್ಟದ ಅಡಿ ಸೇರುವ ವೇಳೆಗೆ ಘಂಟೆ ಹನ್ನೆರಡಕ್ಕೆ ಮೇಲಾಗಿತ್ತು. ಶೀತಕಾಲವಾದದ್ದರಿಂದ ಯಾರಿಗೂ ಹೆಚ್ಚು ಆಯಾಸ ತೋರಲಿಲ್ಲ.

ಮಾರನೆಯ ದಿನ ಭಾನುವಾರ. ಆ ಮಾಧ್ಯಾಹ್ನ ಆಂಗ್ಲೋ–ಹಿಂದುಸ್ಥಾನಿ ಸ್ಕೂಲು ಕಟ್ಟಡದಲ್ಲಿ ಉಪಾಧ್ಯಾಯರೂ ಶಿಷ್ಯರುಗಳೂ ಎಲ್ಲ ಸೇರಿದ್ದರು. ಇನ್‌ಸ್ಪೆಕ್ಟರ್ ಸಾಹೇಬರ ಸವಾರಿ ಅಲ್ಲಿಗೆ ಬಂದಿತು. ಅವರು ಎಲ್ಲರಿಗೂ ತಮ್ಮ ಕೃತಜ್ಞತೆಯನ್ನು ತಿಳಿಸಿ "ದೇವರು ಶುಭ ಮಾಡಲಿ" ಎಂದು ಕೋರಿದ್ದಲ್ಲದೆ ಎಲ್ಲರಿಗೂ ಕೊಂಚ ಕೊಂಚ ಸಕ್ಕರೆ ಹಂಚಿದರು. (ಅದು ಮುಳುಬಾಗಿಲಿನ ಮೊಗದುಂ ಸಕ್ಕರೆ. ಕಾಷ್ಠಿ ಮದಾರ್ ಸಾಹೇಬರ ಮಳಿಗೆಯದು.)

ಇಂಥಾದ್ದು ನನ್ನ ಚಿಕ್ಕಂದಿನ ಕಾಲ.

೧೮

ರಾಮದಾಸಪ್ಪನವರು

ನನಗೆ ಇಂಗ್ಲಿಷ್ ಹೇಳಿಕೊಟ್ಟ ಗುರುಗಳಲ್ಲಿ ರಾಮದಾಸಪ್ಪನವರು ಎರಡನೆಯವರು.

ಮುಳುಬಾಗಿಲು ಕಂಡ ಮೊಟ್ಟಮೊದಲನೆಯ ಬಿ.ಎ. ಇವರು. ಇವರು ಅಲ್ಲಿಗೆ ಸಬ್ ರಿಜಿಸ್ಟ್ರಾರರಾಗಿ ಬಂದದ್ದು ೧೯೦೭ರಲ್ಲಿ ಎಂದು ಜ್ಞಾಪಕ. ಆ ಅಧಿಕಾರವನ್ನು ವಹಿಸಿಕೊಂಡ ಹದಿನೈದಿಪ್ಪತ್ತು ದಿನಗಳ ಮೇಲೆ ಒಂದು ದುಃಖ ಘಟನೆ. ರಾಮದಾಸಪ್ಪನವರು ಮೈಸೂರು ಸ್ಥಳವಂತರು. ಆ ಕಾಲದಲ್ಲಿ ಅಲ್ಲಿಗೆ ಮುಳುಬಾಗಿಲು ದೂರದ ಸೀಮೆ. ಆದದ್ದರಿಂದ ಅವರನ್ನು ಅಲ್ಲಿ ನೆಲೆಗೊಳಿಸಿ ಹೋಗಬೇಕೆಂದು ಅವರ ತಂದೆ ಸಂಜೀವಯ್ಯನವರು, ಅವರ ಕುಟುಂಬ ಸಹ ಮುಳುಬಾಗಲಿಗೆ ಬಂದಿದ್ದರು. ಅಲ್ಲಿ ಹದಿನೈದು ದಿವಸ ಇದ್ದದ್ದಾದ ಮೇಲೆ ಹಿಂತಿರುಗುತ್ತಾ ಸಂಜೀವಯ್ಯನವರು ಬೌರಿಂಗ್ ಪೇಟೆಗೆ ಬರುವ ವೇಳೆಗೆ ಏನೋ ಅವರಿಗೆ ನೋವು ಕಾಣಿಸಿಕೊಂಡು ಅವರು ಸ್ಟೇಷನ್ ಫ್ಲಾಟ್‌ಫಾರಂನಲ್ಲಿಯೇ ಮೃತರಾದರು. ರಾಮದಾಸಪ್ಪನವರು ತಂದೆಗೆ ಉತ್ತರಕ್ರಿಯೆಗಳನ್ನು ಮುಳುಬಾಗಿಲಿನಲ್ಲಿ ನೇರವೇರಿಸಬೇಕಾಯಿತು. ಇದಕ್ಕಾಗಿ ಅವರು ಶಂಕರತೀರ್ಥವೆಂಬ ಕಡೆ ಹೋಗಿದ್ದಾಗ ಅಲ್ಲಿಗೆ ನನ್ನ ತಂದೆ ನನ್ನ ಅಜ್ಜಂದಿರ ಕರ್ಮಾಂತರಗಳನ್ನು ಮಾಡಲು ಹೋಗಿದ್ದರು. ಹೀಗೆ ರುದ್ರಭೂಮಿಯಲ್ಲಿ ನನ್ನ ತಂದೆಗೂ ರಾಮದಾಸಪ್ಪನವರಿಗೂ ಭೇಟಿಯಾಯಿತು. ಅದು ಸ್ನೇಹವಾಗಿ ಬೆಳೆದು ಸ್ಥಿರವಾಯಿತು. ರಾಮದಾಸಪ್ಪನವರು ಮುಳುಬಾಗಿಲಿನಲ್ಲಿ ವಾಸವಾಗಿದ್ದದ್ದು ಕೂಡ ನಮ್ಮ ಮನೆಯ ಪಕ್ಕದಲ್ಲಿ. ಅವರಿದ್ದ ಮನೆಗೂ ನಮ್ಮದಕ್ಕೂ ನಡುವೆ ಒಂದು ಸತ್ರದ ಕಟ್ಟಡ. ರಾಮದಾಸಪ್ಪನವರು ಕಚೇರಿಗೆ ಹೋಗುವಾಗಲೂ ಮನೆಗೆ ಬರುವಾಗಲೂ ನಮ್ಮ ಮನೆಯ ಮುಂದೆಯೇ ಹೋಗಬೇಕಾಗಿತ್ತು. ನನ್ನ ಚಿಕ್ಕಜ್ಜಂದಿರಿಗೆ ಹೀಗೆ ಅವರ ಬಳಕೆಯಾಯಿತು.

ರಾಮದಾಸಪ್ಪನವರು ಇಬ್ಬರು ಪ್ರಸಿದ್ಧ ಪುರುಷರ ಪ್ರಭಾವದಲ್ಲಿ ಬೆಳೆದಿದ್ದವರು.

ಮೊದಲನೆಯವರು ವೆಂಕಟಕೃಷ್ಣಯ್ಯನವರು; ಎರಡನೆಯವರು ಪೆರಿಯಸ್ವಾಮಿ ತಿರುಮಲಾಚಾರ್ಯರು. ಅವರ ಇಂಗ್ಲಿಷ್ ವಿದ್ಯಾಭ್ಯಾಸ ವೆಂಕಟಕೃಷ್ಣಯ್ಯನವರ

ಶಾಲೆಯಲ್ಲಿ; ಸಂಸ್ಕೃತ ವಿದ್ಯಾಭ್ಯಾಸ ತಿರುಮಲಾಚಾರ್ಯರವರಲ್ಲಿ.

ಭಾಷಾಜ್ಞಾನ

ತಿರುಮಲಾಚಾರ್ಯರವರಲ್ಲಿ (ಸರ್) ಎಂ.ಎನ್. ಕೃಷ್ಣರಾಯರು ರಾಮದಾಸಪ್ಪನವರಿಗೆ ಸಹಪಾಠಿಗಳಾಗಿದ್ದರೆಂದು ತೋರುತ್ತದೆ. ರಾಮದಾಸಪ್ಪನವರ ಸಂಸ್ಕೃತ ಭಾಷಾಜ್ಞಾನ ಸಮ್ಯಕ್ಕಾದದ್ದು; ವ್ಯಾಕರಣಶುದ್ಧವಾದದ್ದು. ಸಂಸ್ಕೃತ ಕಾವ್ಯದಲ್ಲಿ ಅವರಿಗೆ ಅತ್ಯಂತ ಸಂತೋಷ. ಸಂಸ್ಕೃತ ಕಾವ್ಯದ ಪದಗಾಂಭೀರ್ಯವನ್ನೂ ಅರ್ಥದ ರಸ ಪುಷ್ಟಿಯನ್ನೂ ಚೆನ್ನಾಗಿ ಮನಗಂಡಿದ್ದರು. ಹೊಸ ಶ್ಲೋಕವೊಂದನ್ನು ಹೇಳಿದರೆ ಅದರ ಸ್ವಾರಸ್ಯಭಾಗವನ್ನು ಪದೇ ಪದೇ ತಾವು ಉಚ್ಚಾರಣೆಮಾಡಿ ಆನಂದಪಡುತ್ತಿದ್ದರು.

ಅವರಿಗೆ ಒಳ್ಳೆಯ ಶಾರೀರವಿತ್ತು. ಸಂಗೀತದ ಪರಿಚಯವಿತ್ತು. ಸ್ತೋತ್ರವನ್ನಾಗಲಿ ಬೇರೆ ಪದ್ಯವನ್ನಾಗಲಿ ಅವರು ಹೇಳಿದರೆ ಕೇಳಲು ಬಹು ಇಂಪಾಗಿತ್ತು. ಇಂಥಾದ್ದು ಅವರಿಗಾಗಿದ್ದ ಮನಸ್ಸಂಸ್ಕಾರ.

ಇಂಗ್ಲಿಷ್ ಶೈಲಿ

ಇನ್ನು ಅವರ ಇಂಗ್ಲಿಷ್ ಭಾಷೆ ಸಾಹಿತ್ಯಗಳ ಜ್ಞಾನವನ್ನು ಕುರಿತು ಒಂದು ಮಾತನ್ನು ಹೇಳುತ್ತೇನೆ. ಅಂದಿನಿಂದ ಇಂದಿನವರೆಗೆ ನಾನು ನೂರಾರು ಮಂದಿ ಇಂಗ್ಲಿಷ್ ವಿದ್ವಾಂಸರನ್ನೂ, ಲೇಖಕರನ್ನೂ ಕಂಡಿದ್ದೇನೆಂಬುದನ್ನು ನನ್ನ ವಾಚಕರು ಬಹುಶಃ ಒಪ್ಪಿಯಾರು. ಆ ನೂರಾರು ಮಂದಿಯಲ್ಲಿ ರಾಮದಾಸಪ್ಪನವರಿಗಿಂತ ಓಜಸ್ವಿಯಾಗಿ ಇಂಗ್ಲಿಷ್ ಬರೆಯಬಲ್ಲವರನ್ನು ನಾನು ಕಂಡಿಲ್ಲ. ಅವರಿಗೆ ಸಮಾನವಾದ ಪರಿಷ್ಕಾರದಿಂದ ಇಂಗ್ಲಿಷ್ ಬರೆಯಬಲ್ಲವರನ್ನು ಸುಮಾರು ೧೦-೧೫ ಮಂದಿಯನ್ನು ಕಂಡಿರಬಹುದು. ಅಂಥ ವಾಕ್ಯಶೈಲಿ ಅವರದು. ಅತಿ ಪ್ರೌಢವಲ್ಲ, ಆದರೆ ನಿರ್ವೀರ್ಯವಲ್ಲ. ಅವರಿಗೆ ಸ್ವಾಭಾವಿಕವಾಗಿ ಉಚಿತ ಪದಗಳೂ ಉಚಿತ ಪ್ರಯೋಗಗಳೂ ಒದಗಿಬರುತ್ತಿದ್ದವು. ಅವರ ಸ್ನೇಹಿತರು ಅವರನ್ನು "ಡಾಕ್ಟರ್ ಜಾನ್‌ಸನ್" ಎಂದೂ ಅವರದು "ಜಾನ್‌ಸೋನಿಯನ್ ಸ್ಟೈಲ್" ಎಂದೂ ಹಾಸ್ಯಮಾಡಿದ್ದನ್ನು ನಾನು ಕೇಳಿದ್ದೇನೆ. ಅವರಿಗೆ ಆ ವಾಕ್ಯಗಾಂಭೀರ್ಯ ಹೇಗೆ ಬಂತೋ ನಾನು ಹೇಳಲಾರೆ. ಅವರು ಷೇಕ್‌ಸ್ಪಿಯರಿನ ಮತ್ತು ಮಿಲ್ಟನ್ನಿನ ಕಾವ್ಯಗಳಲ್ಲಿ ನಾಲ್ಕಾರು ಸಾರಿ ಆಲೋಚನೆ ಮಾಡಿ ಶಬ್ದ ಸಂಪತ್ತನ್ನು ಸ್ವಾಧೀನಪಡಿಸಿಕೊಂಡಿದ್ದರೆಂದು ನನಗೆ ತೋರುತ್ತದೆ. ಅವರ ವಾಕ್ಯಶೈಲಿಗಾಗಿಯೇ ಅವರ ಲೇಖನಗಳನ್ನು ಎರಡು ಮೂರು ಸಾರಿ ಓದಿ ಅದರಿಂದ ತಮಗಾದ ಸಂತೋಷವನ್ನು ನನಗೆ ಹೇಳಿದವರಿದ್ದಾರೆ. ಅವರ ವಾಕ್ಯದಲ್ಲಿ ವ್ಯಾಕರಣದ್ದಾಗಲಿ, ಭಾಷಾರೂಢಿಯದಾಗಲಿ ಪದದ ಔಚಿತ್ಯದ್ದಾಗಲಿ ಯಾವ ದೋಷವೂ ಇರುತ್ತಿರಲಿಲ್ಲ. ಒಂದು ಸಾರಿ ಅವರು ಮಧುಗಿರಿಯಲ್ಲಿಯೋ ಚಿಕ್ಕಮಗಳೂರಿನಲ್ಲಿಯೋ ಇದ್ದಾಗ, ನೆಲಗಡಲೆಕಾಯಿಯ ವ್ಯವಸಾಯವನ್ನು ಕುರಿತು ಒಂದು ಸಣ್ಣ ಪ್ರಬಂಧವನ್ನು ಬರೆದಿದ್ದರು–ಯಾವುದೋ ಹಳ್ಳಿಗರ ಕಾನ್‌ಫರೆನ್ಸ್‌ನಲ್ಲಿ ಓದುವುದಕ್ಕಾಗಿ. ನಾನು ಆ ಲೇಖನವನ್ನು "ಹಿಂದೂಸ್ತಾನ್ ರೆವ್ಯೂ" ಎಂಬ ಪ್ರೌಢ ದರ್ಜೆಯ ಇಂಗ್ಲಿಷ್ ಮಾಸಪತ್ರಿಕೆಗೆ ಕಳುಹಿಸಿದೆ. ಆ ಪತ್ರಿಕೆಯ ಸಂಪಾದಕರು ನನ್ನಲ್ಲಿ ವಿಶ್ವಾಸವಿಟ್ಟಿದ್ದವರು. ಅವರು ಆ ಲೇಖನವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದರು. ಆ ಕಾಲದಲ್ಲಿ (೧೯೧೦-೧೧) ಒಬ್ಬ ಸಮರ್ಥನಾದ ಪತ್ರಿಕೋದ್ಯೋಗಿ ಬೆಂಗಳೂರಿನಲ್ಲಿದ್ದ–ಕೆ.ಎಸ್. ನಾಯರ್ ಎಂಬಾತ. ಆತ ಒಳ್ಳೆಯ ಇಂಗ್ಲಿಷ್ ಬರೆಯುತ್ತಿದ್ದ. ಆತನ ಕೈಗೆ ನಾನು ರಾಮದಾಸಪ್ಪನವರ ಕಡಲೆಕಾಯಿ ಪ್ರಬಂಧವಿದ್ದ "ಹಿಂದೂಸ್ತಾನ್ ರೆವ್ಯೂ" ಪತ್ರಿಕೆಯನ್ನು ಕೊಟ್ಟೆ. ಆತ ಅದನ್ನು ಎಂಟು ಹತ್ತು ದಿನ ತನ್ನ ಬಳಿಯಲ್ಲಿಟ್ಟುಕೊಂಡಿದ್ದ. ಆತ ನನಗೆ ಹೇಳಿದ: "ಏನಯ್ಯಾ–ಇದರ ಸ್ಟೈಲು ಬಹು

ಚೆನ್ನಾಗಿದೆ. ಒಳ್ಳೆಯ ಸ್ಟೈಲಾದದ್ದರಿಂದ ಎರಡು ಮೂರು ಸಾರಿ ಓದಿದೆ. ತುಂಬಾ ಸಂತೋಷವಾಯಿತು."

ಸರಕಾರದ ಪ್ರೋತ್ಸಾಹ

ಎಚ್.ವಿ. ನಂಜುಂಡಯ್ಯನವರು ಸರಕಾರಕ್ಕಾಗಿ "ಎತ್ನೋಗ್ರಾಫಿಕಲ್ ಸರ್ವೆ" ಎಂಬ ಜಾತಿ ಬುಡಕಟ್ಟುಗಳನ್ನು ಕುರಿತ ಪ್ರಬಂಧಗಳನ್ನು ಬರೆಯಿಸುತ್ತಿದ್ದರಷ್ಟೇ. ಅದರಲ್ಲಿ ಶಿವಾಚಾರದ ಗುಂಪನ್ನು ಕುರಿತು ಬರೆಯುವ ಕೆಲಸವನ್ನು ರಾಮದಾಸಪ್ಪನವರಿಗೆ ಕೊಟ್ಟಿದ್ದರು. ರಾಮದಾಸಪ್ಪನವರು ಆ ಕಾರ್ಯವನ್ನು ಪ್ರಕಟಿಸಿ ಬಸವಣ್ಣನವರ ಜೀವನ ಚರಿತ್ರೆಯನ್ನು ನಾಲ್ಕೈದು ಪುಟಗಳಲ್ಲಿ ಸಂಗ್ರಹವಾಗಿ ಬರೆದಿದ್ದರು. ಅದನ್ನು ನಾನು ಓದಿದ್ದೇನೆ. ಆ ಪ್ರಬಂಧ ಪ್ರಕಟವಾಗಿಲ್ಲ. ರಾಮದಾಸಪ್ಪನವರು ಆ ಕೆಲಸವನ್ನು ಪೂರ್ತಿ ಮಾಡಲಾಗಲಿಲ್ಲ– ಅನಾರೋಗ್ಯದ ಕಾರಣದಿಂದ, ಸರಕಾರಿ ಕೆಲಸದ ಒತ್ತಡದ ಕಾರಣದಿಂದ ಮತ್ತು ಪರಸ್ಥಳಗಳಲ್ಲಿ ಗ್ರಂಥಸಾಮಾಗ್ರಿಯೂ ಪಂಡಿತ ಸಹಾಯವೂ ತಕ್ಕಷ್ಟು ದೊರೆಯದಿದ್ದ ಕಾರಣದಿಂದ. ಒಂದೇ ಮಾತಿನಲ್ಲಿ ಹೇಳಬೇಕಾದರೆ, ಆ ಕಾಲದಲ್ಲಿ ಸರಕಾರದ ಸಣ್ಣ ಸಣ್ಣ ಹುದ್ದೆಗಳಲ್ಲಿದ್ದವರ ಸಾಹಿತ್ಯಪ್ರತಿಭೆಯನ್ನು ಕಂಡುಕೊಂಡು ಪ್ರೊತ್ಸಾಹ ಕೊಡುವ ಜನ ಮೇಲಂತಸ್ತಿನ ಅಧಿಕಾರಿಗಳಲ್ಲಿ ಅಪರೂಪವಾಗಿಯಾದರೂ ಇದ್ದರು.

‘ಸಂಸ್ಥಾನ’

ರಾಮದಾಸಪ್ಪನವರು ಭಗವದ್ಭಕ್ತರು. ಸದಾಚಾರಶೀಲರು. ಅವರ ಮನೆಯಲ್ಲಿ ದಿನದಿನವೂ ಬೆಳಗ್ಗೆ ಒಂದೆರಡು ಘಂಟೆಯ ಕಾಲ ವಿದ್ವಜ್ಜನ ಸೇರಿ ಏನಾದರೂ ದೊಡ್ಡ ಕಾವ್ಯದ ಅಥವಾ ಶಾಸ್ತ್ರದ ವಿಷಯವನ್ನು ಪರಾಮರ್ಶೆ ಮಾಡುತ್ತಿದ್ದರು. ಸಂಜೆ ಕೆಲವು ದಿನ ಭಜನೆ ನಡೆಯುವುದು. ಏಕಾದಶಿ ಮುಂತಾದ ದಿವಸಗಳಲ್ಲಿ ಸಂಜೆ ಹರಿಕಥೆ ನಡೆಯುವುದು. ನಮ್ಮ ಅಚ್ಯುತದಾಸರು ಈ ಹರಿಕಥಾ ಕಾಲಕ್ಷೇಪದಲ್ಲಿ ಮುಖ್ಯರು. ಆಗಾಗ ಬಾಗೇಪಲ್ಲಿಯ ಶೇಷದಾಸರೂ ಹರಿಕಥೆ ಮಾಡುವರು. ಹೆಬ್ಬಣಿ ರಾಮಚಂದ್ರಶಾಸ್ತ್ರಿಗಳು ಒಂದೊಂದು ದಿನ ಪುರಾಣ ಹೇಳುವರು. ಮುಳುಬಾಗಿಲಿನ ಸಂಗೀತ ವಿದ್ವಾಂಸರನ್ನು ಕುರಿತು ಬೇರೆ ಕಡೆ ಹೇಳಿದ್ದೇನೆ. ಅವರಿಗೆಲ್ಲ ರಾಮದಾಸಪ್ಪನವರ ಮನೆ ಒಂದು ಸಂಸ್ಥಾನ.

ಈಗ ಅವರು ನನಗೆ ಇಂಗ್ಲಿಷ್ ಹೇಳಿಕೊಟ್ಟ ಮಾತಿಗೆ ಬರುತ್ತೇನೆ. ನನ್ನ ಸ್ವಂತ ಇಂಗ್ಲಿಷ್ ಉಪಾಧ್ಯಾಯರಾದ ರಾಮಸ್ವಾಮಯ್ಯರ್ ಅವರು ತಮ್ಮ ಮುಳುಬಾಗಿಲು ದಿನಗಳ ಮೊದಮೊದಲಿನಲ್ಲಿ ಆಗಾಗ ಮೈಸೂರಿಗೂ, ತಮ್ಮ ಜನ್ಮಸ್ಥಳಕ್ಕೂ ಹೋಗಿಬರುತ್ತಿದ್ದರು. ಬೇಸಗೆಯ ರಜಾಕಾಲ ಇದಕ್ಕೆ ಅನುಕೂಲವಾಗಿತ್ತು. ಹಾಗೆ ಅವರು ಊರಿನಲ್ಲಿಲ್ಲದಾಗ ಒಂದು ದಿನ ನನ್ನ ಚಿಕ್ಕಜ್ಜಂದಿರು ನನ್ನನ್ನು ನೆರಮನೆಯ ರಾಮದಾಸಪ್ಪನವರಲ್ಲಿ ಕರೆದುಕೊಂಡು ಹೋಗಿ ಕೊಂಚ ಪಾಠ ಹೇಳಬೇಕೆಂದು ಕೇಳಿದರು. ರಾಮದಾಸಪ್ಪನವರು ಸಂತೋಷದಿಂದ ಒಪ್ಪಿ ಆ ಸಂಜೆಯಿಂದಲೇ ಸುಮಾರು ಒಂದು ತಿಂಗಳ ಕಾಲ ಪಾಠ ಹೇಳಿದರು. ಆಗ ನಮಗೆ ಪಠ್ಯಪುಸ್ತಕವಾಗಿದ್ದದ್ದು “ಓರಿಯಂಟಲ್ ರೀಡರ್.” ಇದು ಮ್ಯಾಕ್‌ಮಿಲನ್ ಕಂಪನಿಯ ಪ್ರಕಟನೆ. ನಮಗೆ ಗೊತ್ತಾಗಿದ್ದದ್ದು ಆ ಪ್ರಕಟನೆಯ ಮೂರನೆಯ ಭಾಗ ಅಥವಾ ನಾಲ್ಕನೆಯ ಭಾಗವೆಂದು ಜ್ಞಾಪಕ.

ರಾಮದಾಸಪ್ಪನವರು ಮೊದಲು ಪಾಠವನ್ನು ನನ್ನ ಬಾಯಿಂದ ಓದಿಸುವರು. ನನ್ನ ಉಚ್ಚಾರಣೆಯನ್ನು ತಿದ್ದುವರು. ಪದಗಳ ಅರ್ಥವನ್ನು ಕೇಳುವರು. ಆನಂತರ ಪದ ಪ್ರಯೋಗದ ವಿಶೇಷ, ಭಾಷಾರೂಢಿ; ಇದೆಲ್ಲ ಆದ ಮೇಲೆ ನಾನೇ ಒಂದೆರಡು ಸಣ್ಣ ವಾಕ್ಯಗಳನ್ನು ರಚನೆ ಮಾಡಿ ಹೇಳಬೇಕಾದದ್ದು. ಇದು ಅವರ ಪಾಠಕ್ರಮ. ಬಹು ಮಟ್ಟಿಗೆ ರಾಮಸ್ವಾಮಯ್ಯರ ಕ್ರಮವೂ ಅದೇ. ಆ ಕಾಲದಲ್ಲಿ ಅದು ಸರ್ವಸಾಮಾನ್ಯವಾಗಿದ್ದದ್ದೆಂದು ತೋರುತ್ತದೆ.

ನಾನು ಹೈಸ್ಕೂಲಿನ ದರ್ಜೆಗೆ ಹತ್ತಿದ ಮೇಲೆ ಮೈಸೂರಿನಲ್ಲಿ ಕಾಲೇಜ್ ಹಾಸ್ಟಲಿನಲ್ಲಿದ್ದೆ. ಹಾಸ್ಟಲಿನ ವಾರ್ಡನ್ ಆಗಿದ್ದವರು ಬೆಳವಾಡಿ ದಾಸಪ್ಪನವರು. ಇವರು ರಾಮದಾಸಪ್ಪನವರ ಸ್ನೇಹಿತರು. ರಾಮದಾಸಪ್ಪನವರ ಕೋರಿಕೆಯಂತೆ ಬೆಳವಾಡಿ ದಾಸಪ್ಪನವರು ನನ್ನ ವಿಷಯದಲ್ಲಿ ಹೆಚ್ಚು ಆಸಕ್ತಿ ತೋರುತ್ತಿದ್ದರು. ಭಾನುವಾರ ಭಾನುವಾರವೂ ನಾನು ಅವರ ಮನೆಗೆ ಹೋಗಬೇಕೆಂದು ವಿಧಿ. ದಾಸಪ್ಪನವರು ನನಗೆ ಕೆಲವು ಇಂಗ್ಲಿಷ್ ಪತ್ರಿಕೆಗಳನ್ನು ಓದಬೇಕೆಂದು ನಿಯಮಿಸಿದರು. "ಲಿಟ್ಲ್ ಫೋಕ್ಸ್", "ಚೆಮ್ಸ್", "ವೈಡ್ ವರ್ಲ್ಡ್ ಮ್ಯಾಗಜೀನ್", "ಬಾಯ್ಸ್ ಓನ್ ಪೇಪರ್" ಇಂಥವು ಆ ಮಾಸಪತ್ರಿಕೆಗಳು. ಬಾಲವಿದ್ಯಾರ್ಥಿಗಳನ್ನು ಉದ್ದೇಶದಲ್ಲಿಟ್ಟುಕೊಂಡಿದ್ದ ಪತ್ರಿಕೆಗಳು. ಭಾನುವಾರ ನಾನು ದಾಸಪ್ಪನವರ ಮನೆಗೆ ಹೋದಾಗ ಅವರು ತಿಂಡಿ ಕಾಫಿ ಕೊಟ್ಟದ್ದಾದ ಬಳಿಕ ನನ್ನನ್ನು ಕೇಳುವರು:

ಅವರು: "ನೀನು ಯಾವ ಪತ್ರಿಕೆಯನ್ನು ಓದಿದೆ?"

ನಾನು: "ಲಿಟ್ಲ್ ಫೋಕ್ಸ್ ಓದಿದೆ."

ಅವರು: "ಅದರಲ್ಲಿ ಯಾವುದು ಸ್ವಾರಸ್ಯವಾಗಿತ್ತು?"

ನಾನು: "ಒಂದು ಸಣ್ಣ ಕಥೆ."

ಅವರು: "ಅದನ್ನು ಇಂಗ್ಲಿಷಿನಲ್ಲಿ ಸಂಗ್ರಹವಾಗಿ ಹೇಳು" (ಅಥವಾ) "ಅದನ್ನು ಕನ್ನಡದಲ್ಲಿ ಹೇಳು".

ಇದು ದಾಸಪ್ಪನವರ ಬೋಧನಕ್ರಮ. ಉತ್ತರ ವಿದ್ಯಾರ್ಥಿಯ ಬಾಯಿಂದ ಹೊರಡಬೇಕು. ಅದು ಅವನ ಸ್ವಂತ ಬುದ್ಧಿಕಾರ್ಯದಿಂದಾಗಬೇಕು. ತಿಳಿದುಕೊಂಡದ್ದು ಕೊಂಚದ್ದಾದರೂ ಅದನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ಇದು ಆ ಕಾಲದವರ ಬೋಧನ ತತ್ತ್ವ.

‘ಮದರಾಸ್ ಮೈಲ್’

ರಾಮದಾಸಪ್ಪನವರಲ್ಲಿ ಹೀಗೆ ಹೋಗಿ ಬರುತ್ತಿದ್ದದ್ದು ಕೆಲವು ವಾರಗಳಾದ ಮೇಲೆ ಅವರು ನನಗೆ ಬೇರೊಂದು ತೆರದ ವ್ಯಾಸಂಗವನ್ನು ಕಲಿಸಿದರು. ಅವರಿಗೆ ದಿನದಿನವೂ “ಮದರಾಸ್ ಮೈಲ್” ಪತ್ರಿಕೆ ಬರುತ್ತಿತ್ತು. ಅವರ ಪರಮ ಸ್ನೇಹಿತರಾದ ಎಳಂದೂರು ಜಹಗೀರ್ ನರಸಿಂಗರಾವ್ ಪೂರ್ಣಯ್ಯನವರು ಚಂದಾ ಕೊಟ್ಟು ಆ ಪತ್ರಿಕೆಯನ್ನು ತರಿಸುತ್ತಿದ್ದರು. ಅವರು ಅದನ್ನು ಓದಿ ಮುಗಿಸಿದ ಕೂಡಲೇ ರಾಮದಾಸಪ್ಪನವರಿಗೆ ಕಳುಹಿಸುತ್ತಿದ್ದರು. ರಾಮದಾಸಪ್ಪನವರಾದರೋ ದೃಷ್ಟಿಯಲ್ಲಿ ಬಲ ಕಡಮೆಯಾಗಿದ್ದವರು. ದಪ್ಪ ಗಾಜಿನ ಕನ್ನಡಕ ಹಾಕೊಂಡಿದ್ದವರು. ರಾತ್ರಿಯ ದೀಪದ ಬೆಳಕಿನಲ್ಲಿ “ಮದರಾಸ್ ಮೈಲ್” ಓದುವುದು ಅವರಿಗೆ ಪ್ರಯಾಸದ ಕೆಲಸವಾಗಿತ್ತು. ಅವರು ತಮ್ಮ ಆಫೀಸಿನಿಂದ ಹಿಂತಿರುಗುವಾಗ ನನ್ನ ಮನೆಯ ಮುಂದೆ ಹೋಗಬೇಕಾಗಿತ್ತಷ್ಟೆ. ಆಗ ನನ್ನ ಮನೆಯಲ್ಲಿ ಒಂದು ಮಾತು ಹೇಳಿ ತಮ್ಮ ಮನೆ ತಲಪುತ್ತಿದ್ದರು. ನಾನು ಹಿಂದುಗೂಡಿ ಅವರ ಮನೆಗೆ ಬರುತ್ತಿದ್ದೆ. ಕೊಂಚ ಉಪಾಹಾರ ನಡೆಯುವುದು. ಹುರಿಹಿಟ್ಟು, ಅವಲಕ್ಕಿ, ಇಂಥಾದ್ದು. ಆಮೇಲೆ “ಮೈಲ್” ಪತ್ರಿಕೆಯನ್ನು ನನಗೆ ಕೊಡುವರು. ಸೀಮೆಯೆಣ್ಣೆ ಲಾಂದರದ ಬೆಳಕಿನಲ್ಲಿ ಅದನ್ನೋದಿ ರಾಮದಾಸಪ್ಪನವರಿಗೆ ಶ್ರುತಪಡಿಸುವುದು ನನ್ನ ಕೆಲಸ.

ಆ ಕಾಲದಲ್ಲಿ ದಕ್ಷಿಣ ದೇಶದಲ್ಲೆಲ್ಲ ಬಹು ಪ್ರಸಿದ್ಧವಾಗಿದ್ದದ್ದು “ಮದರಾಸ್ ಮೈಲ್” ಪತ್ರಿಕೆ. ಮೈಲಿನ ಇಂಗ್ಲಿಷ್ ಶೈಲಿ ಗಂಭೀರವಾಗಿ ವೀರ್ಯವತ್ತಾಗಿ ಮತ್ತು ಮರ್ಯಾದಾನುಗುಣವಾಗಿದ್ದದ್ದು. ಬಹು ಸೊಗಸಾದ ಇಂಗ್ಲಿಷ್ ಶೈಲಿ. ಆ ಪತ್ರಿಕೆಯ ಸಂಪಾದಕರುಗಳಾಗಿದ್ದವರಲ್ಲಿ ಬ್ಯೂಚಂ (Beaucham) ಎಂಬಾತನೂ, ವೆಲ್ಬಿ (Welby) ಎಂಬಾತನೂ ನನಗೆ ತಿಳಿದವರು. ವೆಲ್ಬಿ ಇಂಗ್ಲಿಷ್ ಲೇಖಕ ಸಾಹಿತ್ಯ ವಿಮರ್ಶಕರಲ್ಲಿ ಅಗ್ರಪಂಕ್ತಿಯಲ್ಲಿ ಗಣ್ಯನಾಗಿದ್ದನು. ಅಂಥ ಒಳ್ಳೇ ಇಂಗ್ಲಿಷ್ ಪತ್ರಿಕೆಯನ್ನು ದಿನವೂ ಓದುವ ಯೋಗ ನನಗೆ ರಾಮದಾಸಪ್ಪನವರ ಕಾರಣದಿಂದ ಲಭ್ಯವಾಗಿತ್ತು. ನಾನು ಓದುವಾಗ ತಪ್ಪಿದರೆ, ತಡವರಿಸಿದರೆ, ರಾಮದಾಸಪ್ಪನವರು ತಿದ್ದುವರು, ಅಪರೂಪವಾದ ಮಾತುಗಳು ಬಂದರೆ ಅರ್ಥವೇನೆಂದು ಕೇಳುವರು. ನನಗೆ ತಿಳಿಯದಿದ್ದರೆ ತಾವು ಅರ್ಥ ಹೇಳುವುದರ ಜೊತೆಗೆ “ಡಿಕ್ಷನರಿ ನೋಡು” ಎನ್ನುವರು. ಅವರ ಹತ್ತಿರ ಇದ್ದದ್ದು ಸ್ಟಾರ್ಮನ್ಸ್ ಡಿಕ್ಷನರಿ. ಹೀಗೆ ನಡೆದ ಒಂದು ಸಂಗತಿ ನೆನಪಿನಲ್ಲಿ ನಿಂತಿದೆ. “Skedaddle” ಎಂಬ ಮಾತು, “ಸಿಕ್ಕಾಪಟ್ಟೆ ಓಡಾಡು.” ಇಂಥದ್ದು

ರಾಮದಾಸಪ್ಪನವರಿಂದ ನನಗಾದ ಉಪಕಾರ. ಈ ಉಪಕಾರದಿಂದ ನಾನು ಫೋರ್ತ್‌ಫಾರಂ ಸೇರುವುದಕ್ಕೆ ಮುಂಚೆಯೇ ಷೇಕ್‌ಸ್‌ಪಿಯರಿನ "ಜುಲಿಯಸ್ ಸೀಸರ್" ಎಂಬ ನಾಟಕವನ್ನು ಓದುವಂತಾಯಿತು. ನಾನು ಅದರಲ್ಲಿ ಪಂಡಿತನಾದೆನೆಂದಲ್ಲ; ಸ್ಥೂಲವಾಗಿ ಅರ್ಥದ ಜಾಡನ್ನು ಗುರುತಿಸುವಂತಾಯಿತು.

ರಾಮದಾಸಪ್ಪನವರೂ ರಾಮಸ್ವಾಮಿ ಅಯ್ಯರ್ ಅವರೂ ಒಬ್ಬರನ್ನೊಬ್ಬರು ಪ್ರೀತಿ ಗೌರವಗಳಿಂದ ಕಾಣುತ್ತಿದ್ದರು. ಒಂದೊಂದು ಸಲ ತಕರಾರು ಬರುವುದು. ಅದು ಬೇಗ ತೀರ್ಮಾನಕ್ಕೆ ಬಂದು ಮರೆತುಹೋಗುವುದು.

ನಾನು ೧೯೦೦ರಲ್ಲಿ ಇಂಗ್ಲಿಷ್ ಸ್ಕೂಲನ್ನು ಸೇರಿದಾಗ ನನ್ನನ್ನು ಎರಡನೆಯ ಕ್ಲಾಸಿಗೆ ಸೇರಿಸಿಕೊಂಡಿದ್ದರೆಂದು ಹಿಂದೆ ಹೇಳಿದನಷ್ಟೆ. ಆ ವರ್ಷ ಪರೀಕ್ಷೆ ನಡೆದ ಮೇಲೆ ನನಗೆ ಡಬಲ್ ಪ್ರೊಮೋಷನ್ ಕೊಟ್ಟು ನಾಲ್ಕನೆಯ ತರಗತಿಗೆ ಎತ್ತಿದರು. ಮಾಮೂಲು ಕ್ರಮದಲ್ಲಿ ಅದಕ್ಕಿಂತ ಮುಂದಿನ ಕ್ಲಾಸಿನಿಂದ, ಎಂದರೆ ಐದನೆಯ ಕ್ಲಾಸಿನಿಂದ ಲೋಯರ್ ಸೆಕಂಡರಿ ಪರೀಕ್ಷೆಗೆ ಕಟ್ಟಬೇಕಾದದ್ದು. ಈ ಪರೀಕ್ಷೆಗೆ ಕಟ್ಟಲು ಸ್ಕೂಲಿನವರು ಒಂದು ಸೆಲೆಕ್ಷನ್ ಎಗ್ಸಾಮಿನೇಷನ್ (ಆಯ್ಕೆಯ ಪರೀಕ್ಷೆ) ಮಾಡುತ್ತಿದ್ದುದುಂಟು. ರಾಮಸ್ವಾಮಯ್ಯರ್ ಆ ಆಯ್ಕೆಯ ಪರೀಕ್ಷೆಗೆ ನಾನೂ ಕೂಡಬಹುದೆಂದು ಸೂಚನೆ ಮಾಡಿದರು. ಹೆಡ್‌ಮಾಸ್ಟರೂ ಒಪ್ಪಿದರು. ಆ ಆಯ್ಕೆಯ ಪರೀಕ್ಷೆಯ ಪ್ರಶ್ನಪತ್ರಿಕೆಗಳಿಗೆ ನಾನು ಉತ್ತರಗಳನ್ನು ಬರೆದೆ. ಬಹುಶಃ ಮೂರು ಪ್ರಶ್ನೆಪತ್ರಿಕೆಗಳು. ಒಂದು ವ್ಯಾಕರಣದ್ದು; ಇನ್ನೊಂದು ವಾಚಕ ಪುಸ್ತಕದ ಪಾಠದಿಂದ ಎತ್ತಿದ್ದು; ಮೂರನೆಯದು ಸ್ವಂತ ವಾಕ್ಯರಚನೆ. ದೇವರ ದಯೆಯಿಂದ ಈ ಮೂರರಲ್ಲಿಯೂ ನನಗೆ ಒಳ್ಳೆಯ ನಂಬರು ಬಂದಿತು.

ಒಂದು ಅಡಚಣೆ

ಹೀಗೆ ತೇರ್ಗಡೆಯಾದ ಮೇಲೆ ನನ್ನನ್ನೂ ಲೋಯರ್ ಸೆಕಂಡರಿ ಪರೀಕ್ಷೆಗೆ ಕಟ್ಟಿಸಬಹುದಲ್ಲ? ಆದರೆ ಒಂದು ಅಡಚಣೆ. ಲೋ ॥ ಸೆ ॥ ಪರೀಕ್ಷೆಯ ನಿಯಮಗಳಲ್ಲಿ ವಿದ್ಯಾರ್ಥಿ ಐದನಯೆ ತರಗತಿಯಲ್ಲಿ ವ್ಯಾಸಂಗ ಮಾಡಿದವನಾಗಿರಬೇಕು–ಎಂಬುದು ಒಂದು. ಈ ಅಡಚಣೆಯನ್ನು ದಾಟುವುದು ಹೇಗೆ?–ಎಂದು ವಿಚಾರ ಮಾಡಲು ಮೇಷ್ಟರುಗಳು ಕುಂಸಲ್ ನಡಸಿದ್ದರು. ನಿಯಮದಿಂದ ವಿನಾಯಿತಿ ಕೊಡಬೇಕೆಂದು ಬೇಡಿ ಹೆಡ್‌ಮಾಸ್ಟರು ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರಿಗೆ ಬರೆದರು.

ಆಗ ಇನ್‌ಸ್ಪೆಕ್ಟರಾಗಿದ್ದವರು ಕೆ.ರಂಗಪ್ಪನವರು. ಇವರು ಕೋಲಾರದಲ್ಲಿ ನನ್ನ ಅಜ್ಜಂದಿರಿಗೆ ಸ್ನೇಹಿತರಾಗಿದ್ದವರು; ನಮ್ಮ ಮನೆಗೆ ಒಂದೆರಡು ಸಲ ಔತಣಕ್ಕೆ ಬಂದಿದ್ದವರು. ಆದದ್ದರಿಂದ ಅವರನ್ನು ಒಲಿಸಿಕೊಳ್ಳುವುದು ಕಷ್ಟವಾಗಲಾರದೆಂದು ನನ್ನ ತಂದೆ ತಿಳಿದುಕೊಂಡು ಕೋಲಾರಕ್ಕೆ ಹೋಗಿ ಇನ್‌ಸ್ಪೆಕ್ಟರ್ ಸಾಹೇಬರನ್ನು ಕಂಡರು. ಅವರ್ಯ "ಬಿಲ್‌ಕುಲ್ ಆಗತಕ್ಕದ್ದಲ್ಲ" ಎಂದರು. "ಆಗುವುದಿಲ್ಲ. ಪೂರ್ವದಲ್ಲಿ ಹುಟ್ಟುವ ಸೂರು ಪಶ್ಚಿಮದಲ್ಲಿ ಹುಟ್ಟಿದರೂ ಆಗುವುದಿಲ್ಲ."

ನನ್ನ ತಂದೆ ನಿರಾಶರಾಗಿ ಊರಿಗೆ ಬಂದು ಸಂಗತಿಯನ್ನು ತಿಳಿಯಪಡಿಸಿದರು.

ಈಗ ಇನ್ನೊಂದು ಘಟನೆ.

ಆಗ ನಮ್ಮ ಊರಿನಲ್ಲಿ ಸರ್ವೋತ್ತಮರಾಯರೆಂಬ ತಾಲ್ಲೂಕ್ ಹೆಡ್ ಗುಮಾಸ್ತೆ ಇದ್ದರು. ಅವರ ಮನೆಯಲ್ಲಿ ಯಾರೋ ಹಿರಿಯರು ಕಾಶೀಯಾತ್ರೆ ಮಾಡಬೇಕೆಂದು ಸಿದ್ಧಪಡಿಸಿಕೊಂಡಿದ್ದರು. ನಾನು ಒಂದು ದಿನ ನನ್ನ ಆಲೋಚನೆಯನ್ನು ತೋಡಿಕೊಂಡೆ– "ಈಗ ಪರೀಕ್ಷೆಗಂತೂ ಹೋಗುವ ಹಾಗಿಲ್ಲ. ಯೋಗ್ಯತೆ ಇದ್ದರೂ ಅದು ನಿಷ್ಫಲ. ಆದದ್ದರಿಂದ ನಾನು ಇಲ್ಲಿದ್ದು ಮಾಡತಕ್ಕದ್ದೇನು? ಸರ್ವೋತ್ತಮರಾಯರ ಮನೆಯವರ ಜೊತೆಯಲ್ಲಿ ನಾನು ಕಾಶಿಗೆ ಹೋಗುತ್ತೇನೆ." ಇದು ನನ್ನ ಅಜ್ಜಿಯ ಪಾಲಿಗೆ ಸಿಡಿಲು ಬಡಿದಂತಾಯಿತು. ನಾನು ಹೇಳಿದ್ದು ಅರ್ಧ ಬೇಸರದಿಂದ; ಅರ್ಧ ಹುಡುಗಾಟದಿಂದ. ಆಕೆ ಈ ಮಾತನ್ನು ಉತ್ಕಟ ವಾಕ್ಯವೆಂದು ಗ್ರಹಿಸಿ ಭಯಪಟ್ಟು, ನನ್ನ ತಂದೆಗೂ, ನನ್ನ

ಅಜ್ಜಂದಿರಿಗೂ ಹೇಳಿ ಅಂಗಲಾಚಿದಳು. “ಮಗು ಹೀಗನ್ನುತ್ತಿದ್ದಾನೆ. ಅವನು ಕಾಶಿಗೆ ಹೋದರೆ ನಾವು ಯಾಕೆ ಇಲ್ಲಿರಬೇಕು?”

ಈ ಕಾಟವನ್ನು ತಡೆಯಲಾರದೆ ನನ್ನ ಅಜ್ಜಂದಿರು ಭಾಭಾ ಸಾಹೇಬರನ್ನು ಕಂಡು ಬರತಕ್ಕದ್ದೆಂದು ನನ್ನ ತಂದೆಗೆ ಆಜ್ಞೆ ಮಾಡಿದರು.

ಭಾಭಾ ಸಾಹೇಬರ ದರ್ಶನ

ನನ್ನ ತಂದೆ ಬೆಂಗಳೂರಿಗೆ ಬಂದು ಭಾಭಾ ಸಾಹೇಬರ ಬಂಗಲೆಯಿರುವ ಜಾಗವನ್ನು ವಿಚಾರಿಸಿ ತಿಳಿದುಕೊಂಡು ಅಲ್ಲಿಗೆ ಹೋದರು. ಬೆಳಗ್ಗೆ ಸುಮಾರು ೮-೯ ಘಂಟೆ. ಇವರು ಬಂಗಲೆಯ ಗೇಟಿನ ಬಳಿ ನಿಂತಿದ್ದರು ಕಾದುಕೊಂಡು. ಇವರು ಆ ಜಾಗಕ್ಕೆ ಹೋದ ಹತ್ತುಹದಿನೈದು ನಿಮಿಷಗಳೊಳಗಾಗಿ ಭಾಭಾರವರು ಡಾಗ್‌ಕಾರ್ಟ್ ಗಾಡಿಯಲ್ಲಿ ಕುಳಿತು ಅವರ ಮಗಳ ಸಮೇತ ಹೊರಕ್ಕೆ ಬಂದರಂತೆ. ತಾವೇ ಗಾಡಿ ಹೊಡೆದುಕೊಂಡು ಬರುತ್ತಿದ್ದರು. ಅಲ್ಲಿ ಯಾರೋ ವ್ಯಕ್ತಿ ನಿಂತಿದ್ದದ್ದನ್ನು ನೋಡಿ ಆತನು ಮಾಡಿದ ನಮಸ್ಕಾರಕ್ಕೆ ಪ್ರತಿನಮಸ್ಕಾರ ಮಾಡಿ ಗಾಡಿ ನಿಲ್ಲಿಸಿ ಕೇಳಿದರು:

"ನೀವು ಯಾರು?"

ನನ್ನ ತಂದೆ "ನಾನೊಬ್ಬ ಸ್ಕೂಲುಮೇಷ್ಟರು" ಎಂದು ಪೀಠಿಕೆ ಹೇಳಿ ನಿಂಬೆ ಹಣ್ಣು ಹಾರಗಳನ್ನು ಸಮರ್ಪಿಸಿ ತಮ್ಮ ಉದ್ದೇಶವನ್ನು ವಿವರಿಸಿದರಂತೆ; ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರು ಹೇಳಿದ ಮಾತನ್ನೂ ತಿಳಿಸಿದರಂತೆ. ಸಾಹೇಬರು ಕೊಂಚ ನಕ್ಕು ಕನ್ನಡದಲ್ಲಿ ಕೇಳಿದರು:

"ಆ ಹುಡುಗ ಬರೆದ ಉತ್ತರಪತ್ರಿಕೆಗಳನ್ನು ತಂದಿದ್ದೀರೊ?"

ನನ್ನ ತಂದೆ ನನ್ನ ಉತ್ತರಪತ್ರಿಕೆಗಳನ್ನು ಸಾಹೇಬರ ಕೈಗೆ ಕೊಟ್ಟರು. ಭಾಭಾ ಸಾಹೇಬರು ಆ ಮೂರು ಉತ್ತರಪತ್ರಿಕೆಗಳಲ್ಲಿಯೂ ಎರಡು ಮೂರು ಪುಟದಂತೆ ತಿರುಗಿಸಿ ನೋಡಿ ಒಂದರ ಮೇಲುಗಡೆಯ ಹಾಳೆಯ ಮೇಲೆ ಪೆನ್ಸಿಲಿನಲ್ಲಿ ಬರೆದು ಕೊಟ್ಟು ಹೀಗೆ ಹೇಳಿದರು:

"ಈ ಹುಡುಗನನ್ನು ಪರೀಕ್ಷೆಗೆ ಸೇರಿಸಿಕೊಳ್ಳಬಹುದು. ನೀವು ಇದನ್ನು ೧೧ ಘಂಟೆಗೆ ಆಫೀಸಿಗೆ ಹೋಗಿ ಮ್ಯಾನೇಜರಿಗೆ ತೋರಿಸಿ. ಅವರು ನಿಮಗೆ ಉತ್ತರ ಬರೆದು ಕೊಡುತ್ತಾರೆ. ನೀವು ಅದನ್ನು ಇನ್‌ಸ್ಪೆಕ್ಟರಿಗೆ ತೋರಿಸಿ, ಆಮೇಲೆ ಅದನ್ನು ನಿಮ್ಮ ಹೆಡ್‌ಮಾಸ್ಟರಿಗೆ ಕೊಡಿ."

ಶಿಖರಾಗ್ರ

ಹೀಗೆ ನಡೆಯಿತು. ಇನ್‌ಸ್ಪೆಕ್ಟರ್ ರಂಗಪ್ಪನವರೂ ಸಂತೋಷಪಟ್ಟರು. ನಮ್ಮ ಹೆಡ್ ಮಾಸ್ಟರಿಗೂ ರಾಮಸ್ವಾಮಯ್ಯರಿಗೂ ಮಾತಿನಿಂದ ಹೇಳಲಾಗದಷ್ಟು ಸಂತೋಷ. ನನ್ನ ಅಜ್ಜಿ ಮನೆಯಲ್ಲಿದ್ದ ತುಪ್ಪವನ್ನೆಲ್ಲ ದೇವರ ದೀಪಕ್ಕೆ ಹಾಕಿದಳು. ಅವರ ಭಕ್ತಿಯ ಪ್ರಭಾವದಿಂದ ನಾನು ಇಂಗ್ಲಿಷ್ ವಿದ್ಯೆಯ ಹಿಮಪರ್ವತದ ಶಿಖರಾಗ್ರವನ್ನು ಮುಟ್ಟಿದೆ.

ನನ್ನ ವಿದ್ಯಾವೈಭವದ ಚರಿತ್ರೆ ನಿಜವಾಗಿ ಇಲ್ಲಿಗೆ ಮುಗಿಯಿತೆಂದು ಹೇಳಬಹುದು.

ಅಲ್ಲಿಂದ ಮುಂದಕ್ಕೆ ನಾನು ಹೈಸ್ಕೂಲು ಸೇರಿದ್ದರ ಕಥೆಯನ್ನು ರಸೂಲ್ ಖಾನರ ಪ್ರಸ್ತಾವದಲ್ಲಿ ಹೇಳಿದ್ದೇನೆ. ಮಾರಶೆಟ್ಟಿ, ರಸೂಲ್ ಖಾನ್–ಇವರಿಬ್ಬರ ಪ್ರೋತ್ಸಾಹದಿಂದಲೂ ಒತ್ತಾಯದಿಂದಲೂ ನನ್ನ ತಂದೆ ತಾತಂದಿರು ನನ್ನನ್ನು ಮೈಸೂರಿಗೆ ಕಳುಹಿಸಲೊಪ್ಪಿದ್ದರು.

೧೯

ದಾಸಪ್ಪನವರು, ವರದಾಚಾರ್ಯರು

ನನ್ನ ವಿದ್ಯಾವೈದುಷ್ಯವನ್ನು ಕಿವಿಯಿಂದ ಕೇಳಿದ ಒಬ್ಬ ದೂರದ ಸ್ವಜನ ಅನುಕೂಲದಶೆಯಲ್ಲಿದ್ದವರು ತಮಗೆ ಬೇಕಾಗಿದ್ದ ಒಬ್ಬ ವರನು ಈ ಬಡ ಹುಡುಗನಲ್ಲಿರಬಹುದೋ ಏನೋ ಎಂದು ಭ್ರಮಿಸಿ ಒಂದಿಷ್ಟು ದ್ರವ್ಯಸಹಾಯ ಮಾಡಲೊಪ್ಪಿಕೊಂಡಿದ್ದರು. ಅದು ಐದಾರು ತಿಂಗಳು ನಡೆಯಿತು. ನಾನು ಮೈಸೂರಿನಲ್ಲಿ ಮಹಾರಾಜ ಕಾಲೇಜಿನ ಹೈಸ್ಕೂಲು ವಿಭಾಗದಲ್ಲಿ ಫೋರ್ತ್ ಫಾರ್ಮ್ ಸೇರಿದೆ.

ಆಗ ನನ್ನ ಮನಸ್ಸೊಪ್ಪುವಂತೆ ಪಾಠ ಹೇಳಿದ ಉಪಾಧ್ಯಾಯರಲ್ಲಿ ಮುಖ್ಯರು ಬಾಪು ಸುಬ್ಬರಾಯರು ಮತ್ತು ಬಿ. ದಾಸಪ್ಪನವರು. ಬಾಪು ಸುಬ್ಬರಾಯರು ಕನ್ನಡ ಸಾಹಿತ್ಯಕ್ಕೆ ಸೇವೆ ಮಾಡಿದವರು. ಬೆಳವಾಡಿ ದಾಸಪ್ಪನವರು ಇಂಗ್ಲಿಷ್ ಸಾಹಿತ್ಯ ಬೋಧನೆಯಲ್ಲಿ ನಿಸ್ಸೀಮರಾಗಿದ್ದವರು; ಕನ್ನಡದಲ್ಲಿಯೂ ಗ್ರಂಥ ರಚನೆ ಮಾಡಿದವರು. ಇವರು ಕಾಲೇಜು ಹಾಸ್ಟಲಿನ ವಾರ್ಡನ್ ಆಗಿದ್ದರೆಂಬುದನ್ನೂ ಅವರು ರಾಮದಾಸಪ್ಪನವರ ಶಿಫಾರಸಿನಂತೆ ನನ್ನ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದರೆಂಬುದನ್ನೂ ಬೇರೆ ಕಡೆ ಹೇಳಿದ್ದೇನೆ. ನಾನು ಭಾನುವಾರ ಭಾನುವಾರವೂ ದಾಸಪ್ಪನವರ ಮನೆಗೆ ಹೋಗಿ ಪಾಠ ಒಪ್ಪಿಸಿ ಬರಬೇಕಾಗಿತ್ತು. ಅವರು ಕ್ಲಾಸಿನಲ್ಲಿ ಇಂಗ್ಲೀಷ್ ಪಾಠ ಹೇಳುತ್ತಿದ್ದರು. ಪಾಠದ ನಡುನಡುವೆ ಕನ್ನಡದಲ್ಲಿ ವಿವರಣೆ ಕೊಡುತ್ತಿದ್ದದ್ದುಂಟು. ಅವರಿಗೆ ಬಿಲಿಯರ್ಡ್ಸ್, ಹಾಕಿ, ಗಾಲ್ಫ್ ಆಟಗಳಲ್ಲಿ ಅಭಿಮಾನ. ಮತ್ತು ಕುದುರೆ ಸವಾರಿಯಲ್ಲಿ ಹೆಚ್ಚು ಕುತೂಹಲ.

ವಿದ್ವದಾನಂದ

ಆ ಕಾಲದಲ್ಲಿ ಅವರಿಗೆ ತತ್ತ್ವ ವಿಚಾರದಲ್ಲಿಯೂ ತಾತ್ಪರ್ಯವಿತ್ತು. ಆದರೆ ಆಗ್ಗೆ ಅದು ಗೂಢವಾಗಿತ್ತು. ಅಲ್ಲಿಂದ ಹತ್ತು ಹದಿನೈದು ವರ್ಷಗಳಾದ ಮೇಲೆ ಅವರ ವೇದಾಂತಶ್ರದ್ಧೆ ರೂಪುಗೊಂಡಿತು. ಅವರು ಶೃಂಗೇರಿ ಜಗದ್ಗುರುಗಳಲ್ಲಿ ಉಪದೇಶ ಬೇಡಲು ಹೋಗಿದ್ದರು. ಆ ಗುರುಭಕ್ತಿ ಪಕ್ವಕ್ಕೆ ಬಂದಿತು. ಉಪನಿಷದ್ವಾಕ್ಯಗಳೂ ಸೂತ್ರಭಾಷ್ಯದ ವಾಕ್ಯಗಳೂ ಅವರಿಗೆ ಕಂಠಗತವಾಗಿದ್ದವು. ಸಂದರ್ಭ ಬಂದಾಗಲೆಲ್ಲ ಆ ವಾಕ್ಯಗಳನ್ನು ಉದಾಹರಿಸುವರು.

ಹಾಗೆಯೇ ಸದಾಶಿವಬ್ರಹ್ಮೇಂದ್ರರ ಆತ್ಮವಿದ್ಯಾವಿಲಾಸ ಗ್ರಂಥವೆಲ್ಲ ಮುಖಸ್ಥವಾಗಿತ್ತು. ಅವರು ಆ ಕಾವ್ಯವನ್ನು ತಮ್ಮ ಹೆಣ್ಣುಮಕ್ಕಳಿಬ್ಬರಿಗೂ ಹೇಳಿಕೊಟ್ಟಿದ್ದರು. ದಾಸಪ್ಪನವರು ಸಂಜೆ ಆರಾಮವಾಗಿ ಕೂಡುವರು. ಹೆಣ್ಣು ಮಕ್ಕಳ್ಳಿಬ್ಬರೂ ವೀಣೆಯ ಶ್ರುತಿಯೊಡನೆ ಆ ಪದ್ಯಗಳನ್ನು ಹಾಡುವರು. ದಾಸಪ್ಪನವರು ತಲೆದೂಗುತ್ತ ಸಂತೋಷದಿಂದಿರುವರು.

ಹಾಗೆಯೇ ಜಗನ್ನಾಥಪಂಡಿತನ ಕರುಣಾಲಹರಿ, ಲಕ್ಷ್ಮೀಲಹರಿ ಮೊದಲಾದ ಸ್ತೋತ್ರಗಳನ್ನು ಹೇಳಿಸುವರು. ಇದು ಅವರ ವಿದ್ವದಾನಂದದ ಒಂದು ಬಗೆ. ಇನ್ನೊಂದು ಬಗೆಯದು ಅವರ ಷೇಕ್ಸ್ಪಿಯರ್ ಉತ್ಸಾಹ.

ಅವರು ಬೆಂಗಳೂರಿನಲ್ಲಿ ಬಸವನಗುಡಿಯ ಮೊದಲನೆಯ ರಸ್ತೆಯಲ್ಲಿ ನ್ಯಾಷನಲ್ ಹೈಸ್ಕೂಲಿಗೆ ಸಮೀಪದಲ್ಲಿ ವಾಸವಾಗಿದ್ದಾಗ ನಾನು ಶಂಕರಪುರದಲ್ಲಿ ಹತ್ತಿರದಲ್ಲೇ ವಾಸವಿದ್ದೆ. ಆಗ ಭಾನುವಾರ ಮಧ್ಯಾಹ್ನ, ಎರಡು ಘಂಟೆಯ ಸುಮಾರಿಗೆ ದಾಸಪ್ಪನವರ ಮನೆಗೆ ಹೋಗಬೇಕಾದದ್ದು. ಅಲ್ಲಿ ತಿಂಡಿ ಕಾಫಿ ಸೇವಿಸತಕ್ಕದ್ದು. ಅನಂತರ ಷೇಕ್ಸ್ಪಿಯರಿನ ನಾಟಕಗಳಲ್ಲಿ ಯಾವುದಾದರೊಂದರ ಕೆಲವು ವಾಕ್ಯಗಳನ್ನು ಓದಬೇಕಾದದ್ದು. ಇನ್ನು ಕೆಲವು ದಿನ ಗಿಬ್ಬನ್ ಚಾರಿತ್ರಕನ Decline and Fall of the Roman Empire ಮಹಾಗ್ರಂಥದ ಕೆಲವು ಪ್ರಕರಣಗಳನ್ನು ಓದಬೇಕಾದದ್ದು. ನಾಲ್ಕೂವರೆ ಘಂಟೆಗೆ ದಾಸಪ್ಪನವರ ಕುದುರೆ ಗಾಡಿಯಲ್ಲಿ (ಕೋಚ್) ಕುಳಿತು, ಮಲ್ಲೇಶ್ವರದಲ್ಲಿದ್ದ. ಮಹಾನುಭಾವ ಚ. ವಾಸುದೇವಯ್ಯನವರ ಮನೆಗೆ ಹೋಗತಕ್ಕದ್ದು. ಅಲ್ಲಿ ಮಾತುಕಥೆ. ರಾಮಾಯಣ ಭಾರತಗಳಿಂದ ವಾಸುದೇವಯ್ಯನವರು ಉದಾಹರಣೆ ಕೊಡುವರು. ದಾಸಪ್ಪನವರ ಮನಸ್ಸು ತೃಪ್ತಿ ಪಡೆದು ಪ್ರಸನ್ನವಾಗುವುದು. ಈ ರೀತಿ ಸುಮಾರು ಮೂರು ನಾಲ್ಕು ವರ್ಷ ನಡೆಯಿತು.

ಗ್ರಂಥಾಧಿಕಾರ

ದಾಸಪ್ಪನವರಿಗೆ ಷೇಕ್‌ಸ್ಪಿಯರ್ ಸರ್ವಸ್ವವೂ ಸ್ವಾಧೀನದಲ್ಲಿತ್ತು. ಅವರು ಉಪಯೋಗಿಸುತ್ತಿದ್ದ ಪುಸ್ತಕ ಕಾಲಿನ್‌ಸ್ ಮುದ್ರಣದ್ದು. ಆ ಪುಸ್ತಕದಲ್ಲಿ ಪ್ರತಿಯೊಂದು ಪುಟದಲ್ಲಿಯೂ ವಿಷಯಗಳೇನೆಂಬುದನ್ನು ಒಂದು ಮಾತಿನಲ್ಲಿ ಸೂಚಿಸಿ ಮಾರ್ಜಿನಿನಲ್ಲಿ ಟಿಪ್ಪಣಿ ಬರೆದಿಟ್ಟಿದ್ದರು. ಇದರ ಜೊತೆಗೆ ಷೇಕ್ಷ್ಪಿಯರಿನ ಸ್ವಾರಸ್ಯಗಳನ್ನೂ ಚರ್ಚಾಸ್ಪದ ವಾಕ್ಯಗಳನ್ನೂ ಬೇರೊಂದು ಫೂಲ್ಸ್ ಕ್ಯಾಪ್ ಆಕಾರದ ಪುಸ್ತಕದಲ್ಲಿ ಬರೆದಿಟ್ಟಿದ್ದರು. ಆ ಎರಡು ಪುಸ್ತಕಗಳನ್ನು ಸಂಪಾದಿಸಲು ನಾನು ಬಹು ಶ್ರಮಪಟ್ಟೆ. ಅವು ಎಲ್ಲಿ ಹೋದವೋ ಯಾರಿಗೂ ತಿಳಿಯದು. ಅವೆರಡೂ ಸಿಕ್ಕಿದ್ದಿದ್ದರೆ ಅವುಗಳಿಂದ ವಿದ್ಯಾರ್ಥಿಗಳಿಗೆ ಅಭೂತಪೂರ್ವ ಸಹಾಯ ದೊರೆಯುತ್ತಿತ್ತು.

ಸ್ಮರಣಶಕ್ತಿ

ದಾಸಪ್ಪನವರೂ ನವರತ್ನ ರಾಮರಾಯರೂ ಗಾಢ ಸ್ನೇಹಿತರು. ಅವರಿಬ್ಬರ ಜ್ಞಾಪಕಶಕ್ತಿಯೂ ನನಗೆ ಅಚ್ಚರಿಯುಂಟುಮಾಡುತ್ತಿತ್ತು. ಒಂದು ದಿನ ನರಸಿಂಹಮೂರ್ತಿಗಳೂ ನಾನು ಪಬ್ಲಿಕ್ ಲೈಬ್ರರಿಯ ಕಡೆ ಹೋಗುತ್ತಿದ್ದೆವು. ನಮ್ಮಿಬ್ಬರಿಗೂ ಒಂದು ತಕರಾರು ಬಂದಿತ್ತು–ಕಾರ್ಲೈಲನ್ನು ಕುರಿತು. ನಮ್ಮ ವಾಗ್ವಾದ ರಭಸದಲ್ಲಿದ್ದಾಗ ಒಂದು ಪಕ್ಕದ ರಸ್ತೆಯಿಂದ ದಾಸಪ್ಪನವರು ಬರುತ್ತಿದ್ದುದು ಕಾಣಿಸಿತು. ನರಸಿಂಹಮೂರ್ತಿಗಳು ನಮ್ಮ ವಿವಾದವನ್ನು ದಾಸಪ್ಪನವರಿಗೆ ಹೇಳಿದರು. ದಾಸಪ್ಪನವರು ಕಾರ್ಲೈಲನ "ಸಾರ್ಟರ್ ರಿಸಾರ್ಟಸ್" ಗ್ರಂಥದಿಂದ ಹತ್ತು ಪುಟಗಳಷ್ಟನ್ನೂ "ಪಾಸ್ಟ್ ಅಂಡ್ ಪ್ರೆಸೆಂಟ್" ಗ್ರಂಥದಿಂದ ಎರಡು ಮೂರು ಪುಟಗಳನ್ನೂ ತಡಬಡಿಸದೆ ಉದಾಹರಿಸಿದರು. ಆಮೇಲೆ ಪ್ರಾಸ್ತಾವಿಕವಾಗಿ ಬೈರನ್ ಕವಿ ನೆಪೋಲಿಯನ್ನನನ್ನು ಕುರಿತು ಬರೆದ ಐದಾರು ಪದ್ಯಗಳನ್ನು ಹೇಳಿದರು. ಸ್ವಲ್ಪ ಹೊತ್ತಾದ ಮೇಲೆ ಬಾಲ್ಫರ್ ರಾಜ್ಯ ತಂತ್ರಜ್ಞನನ್ನು ಕುರಿತು "ಪಂಚ್" ಪತ್ರಿಕೆಯಲ್ಲಿ ಬಂದಿದ್ದ ಹಾಸ್ಯಮಯ ಪದ್ಯಗಳನ್ನು ಹೇಳಿದರು. ನಮಗೆ ತುಂಬಾ ಆಶ್ಚರ್ಯವಾಯಿತು. ಆ ಕಾಲದ ಜನಕ್ಕೆ ಸದ್ಗ್ರಂಥದ ಮೇಲಿದ್ದ ಅಧಿಕಾರ ಇಷ್ಟು ಮಟ್ಟಿನದು.

***

ದಾಸಪ್ಪನವರ ಕಡೆಕಡೆಯ ದಿನಗಳು ಅವರಲ್ಲಿ ಪ್ರೀತಿಯಿದ್ದಂಥವರಿಗೆ ಸಂತೋಷದ ಕಾಲವಾಗಿ ಕಾಣಲಿಲ್ಲ. ಸಾಂಸಾರಿಕವಾದ ಕೆಲವು ಚಿಂತೆಗಳು ಅವರಿಗೂ ಬಂದವು. ಆದರೆ ಅವರ ಮಟ್ಟಿಗೆ ಅವರು ನಿರ್ಲಿಪ್ತರಾಗಿದ್ದಂತೆ ಕಾಣುತ್ತದೆ. ಪ್ರತಿದಿನವೂ ಅವರು ವಾಯುಸೇವನೆಗಾಗಿ, ಅಂಗವ್ಯಾಯಾಮಕ್ಕಾಗಿ ತಿರುಗಾಡುತ್ತಿದ್ದರು. ಅವರ ಹಿಂದೆ ಒಂದು ಕ್ಯಾನ್‌ವಾಸ್ ಚೇರನ್ನು ಹೊತ್ತುಕೊಂಡು ಒಬ್ಬ ಆಳು ಹೋಗುತ್ತಿದ್ದ. ಅವರು ಯಾವುದಾದರೂ ಒಂದು ನಿರ್ಜನ ಪ್ರದೇಶವನ್ನು ಹುಡುಕುವರು. ಅದು ನಿರ್ಜನವಾಗಿದ್ದರೂ, ವಾತವರಣ ಧ್ಯಾನಾನುಕೂಲವಾಗಿರಬೇಕು. ಅಲ್ಲಿ ಕ್ಯಾನ್‌ವಾಸ್ ಚೇರಿನಲ್ಲಿ ಘಂಟೆಗಟ್ಟಲೆ ಒಬ್ಬರೇ ಕುಳಿತು ಉಪನಿಷದ್ವಾಕ್ಯಗಳನ್ನು ಹೇಳಿಕೊಳ್ಳುವರು. ಇದನ್ನು ನಾನು ಕಂಡಿದ್ದೇನೆ.

ಒಂದು ದಿನ ಬೆಳಗ್ಗೆ ಸುಮಾರು ೬-೧೦ ಘಂಟೆ ಸಮಯ. ನಾನೂ ಬಿ.ಎಂ. ಶ್ರೀಕಂಠಯ್ಯನವರೂ ಬೆಂಗಳೂರು ಸಂಪಂಗಿ ಕೆರೆಯ ಏರಿಯ ಮೇಲೆ ವಾಕಿಂಗ್ ಹೋಗುತ್ತಿದ್ದೆವು. ಆಗ ಕೊಂಚ ದೂರದಲ್ಲಿ ದಾಸಪ್ಪನವರು ಒಂದು ಹೊಂಗೆ ಮರದ ಕವಲಿನ ನಡುವೆ ಕುಳಿತು ಉಪನಿಷದ್ವಾಕ್ಯಗಳನ್ನು ಹೇಳುತ್ತಿದ್ದರು.

ದಾಸಪ್ಪನವರಿಗೆ ಅನೇಕ ಇಂಗ್ಲಿಷ್ ಕಾವ್ಯಗಳು ಪ್ರಿಯವಾಗಿದ್ದವು. ಅವುಗಳಲ್ಲಿ ಷೆಲ್ಲಿ ಕವಿಯ "ಸ್ಕೈಲಾರ್ಕ್" ಎಂಬುದೊಂದು. ಇದು ಒಬ್ಬಾನೊಬ್ಬ ನಿಶ್ಚಿಂತನಾದ ವಿರಕ್ತನ ಸ್ವಭಾವಕ್ಕೆ ನಿದರ್ಶನವೆಂದು ದಾಸಪ್ಪನವರು ಗ್ರಹಿಸಿದ್ದರು. ಈ ಕಾವ್ಯವನ್ನು ಅವರು ಪಂಡಿತ ಮಂಡಕಲ್ ರಾಮಶಾಸ್ತ್ರಿಗಳವರಿಂದ ಸಂಸ್ಕೃತಕ್ಕೆ ತರ್ಜುಮೆ ಮಾಡಿಸಿ ಅಚ್ಚು ಮಾಡಿಸಿ ಪ್ರಕಟಿಸಿದ್ದರು.

ದಾಸಪ್ಪನವರ ಈ ವಿಶೇಷ ಗುಣಗಳನ್ನು ಸ್ಮರಣೆಗೆ ತಂದುಕೊಳ್ಳುವುದು ನನಗೊಂದು ದೊಡ್ಡ ಸಂತೋಷ.

***

ಕೆ. ವರದಾಚಾರ್ಯರು

ನನಗೆ ಮೈಸೂರು ವಿದ್ಯಾರ್ಥಿತನದಿಂದ ದೊರೆತ ಲಾಭಗಳಲ್ಲಿ ಅತ್ಯಂತ ಮುಖ್ಯವಾದದ್ದು ಕಾನಕಾನಹಳ್ಳಿ ವರದಾಚಾರ್ಯರ ಸಂಪರ್ಕ. ವರದಾಚಾರ್ಯರು ಮಹಾವಿದ್ವಾಂಸರು. ಕನ್ನಡ ಸಂಸ್ಕೃತಗಳೆರಡರಲ್ಲಿಯೂ ಅವರದು ಸಮಾನವಾದ ಪಾಂಡಿತ್ಯ. ಅದು ಗಾಢವಾದ ಪಾಂಡಿತ್ಯ. ಇದರ ಜೊತೆಗೆ ಅವರ ರಸಿಕತೆ ಮತ್ತು ವಿನೋದಶೀಲತೆ. ಇನ್ನೊಂದು ಗುಣ ಕೋಪ ಬಂದಾಗ ಅವರ ನಾಲಿಗೆಯ ಕಟುತ್ವ. ಹೀಗೆ ಅವರ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಭಯ ಪ್ರಿತಿಗಳೆರಡೂ ಮಿಶ್ರರೂಪದಲ್ಲಿ ಸಂದಾಯವಾಗುತ್ತಿತ್ತು.

ವರದಾಚಾರ್ಯರ ಕಾವ್ಯಪಾಠದ ಸೊಗಸೇ ಸೊಗಸು. ಕಂಠಧ್ವನಿ ಮನೋಹರವಾದದ್ದು. ಅದರ ಜೊತೆಗೆ ಮುಖಭಾವ ಹಸ್ತಾಭಿನಯಗಳ ಆಕರ್ಷಣೆ ಸೇರಿತ್ತು. ಅವರು ಕಾವ್ಯವಾಚನ ಮಾಡುತ್ತಿದ್ದಾಗ ಅದನ್ನು ಕೇಳುವ ಸಂತೋಷಕ್ಕಾಗಿ ಇತರ ಕ್ಲಾಸುಗಳ ವಿದ್ಯಾರ್ಥಿಗಳು ಮಾತ್ರವಲ್ಲದೆ ಉಪಾಧ್ಯಾಯರೂ ಸಹ ಕಿಟಕಿಗಳ ಬಳಿ ನಿಂತಿರುತ್ತಿದ್ದರು. ವರದಾಚಾರ್ಯರ ಸಂಗೀತಜ್ಞಾನ ಸಂಸ್ಕಾರ ಪಡೆದು ಶುದ್ಧ ವಾದದ್ದು ಮತ್ತು ಕವಿಯ ವಾಕ್ಯವೆಂದು ಹೆದರಿಕೆ ಏನು ಇರಲಿಲ್ಲ. ಅಪಪ್ರಯೋಗ ಕಂಡರೆ "ಇಲ್ಲಿ ಕವಿ ಎಲ್ಲೊ ಕಣ್ಣಿಟ್ಟಿದ್ದ" ಎನ್ನುವರು; "ಬೆಪ್ಪು ನೋಟ ನೋಡಿ ಎಡವಿದ" ಎನ್ನುವರು. ಹೀಗೆ ಟೀಕೆ ಮಾಡುವಾಗ ಧ್ವನಿಯಲ್ಲಿ ಕೊಂಚ ವ್ಯಂಗ್ಯ ತೋರುವುದು. ವಿದ್ಯಾರ್ಥಿ ಯಾರಾದರೂ ಪ್ರಶ್ನೆ ಕೇಳಿದರೆ "ಬೀದಿಗೆ ಸೆಳೆಯಬೇಡ ಕವಿಯನ್ನು ಮಗೂ" ಎನ್ನುವರು. ನಾವೆಲ್ಲ ನಗುವೆವು. ಕಾವ್ಯದಲ್ಲಿ ರಸ ಎಲ್ಲಿದೆ? ಸ್ವಾರಸ್ಯ ಎಲ್ಲಿ? ಅದನ್ನು ಹುಡುಕುವುದು ಹೇಗೆ?–ಇದನ್ನು ತೋರಿಸಿಕೊಟ್ಟವರು ಕಾನಕಾನಹಳ್ಳಿ ವರದಾಚಾರ್ಯರು.

ಸಂಶೋಧನೆ

ಅವರು ಕೆಲಸದಿಂದ ನಿವೃತ್ತರಾದ ಬಳಿಕ 'ಶಬ್ದಾನುಶಾಸನ' ಕರ್ತೃತ್ವದ ವಿಚಾರದಲ್ಲಿ ಸಂಶೋಧನೆ ನಡಸಿದರು. ಅದು ಬಹುಕಾಲದ ಶೋಧನೆ. ಅವರನ್ನು ಅಷ್ಟಿಷ್ಟು ಬಲ್ಲ ಶಿಷ್ಯರಾದ ಎ.ಆರ್. ಕೃಷ್ಣಶಾಸ್ತ್ರಿಗಳಾಗಲಿ ವೆಂಕಣ್ಣಯ್ಯನಾಗಲಿ ನಾನಾಗಲಿ ಅವರ ಬಳಿಗೆ ಹೋಗಿ ಉಪನ್ಯಾಸ ಬೇಕೆಂದಾಗಲಿ ಲೇಖನ ಬೇಕೆಂದಾಗಲಿ ಕೇಳಿದಾಗ ಅವರು ನಗುತ್ತ "ನಾನೇನು ಮಾಡಲಪ್ಪ? ಈ ಭಟ್ಟಾಕಲಂಕ ಪಿಶಾಚಿ ಬಿಟ್ಟಿರಲ್ಲವೆ? ಇದು ನನ್ನನ್ನು ಮುಷ್ಟಿಯಿಂದ ಹಿಡಿದಿದೆ. ಇದು ಬಿಟ್ಟ ಮೇಲೆ ಬೇರೆ ಮಾತು" ಎನ್ನುವರು.

ಈ ಸಂಶೋಧನೆಯ ಗ್ರಂಥ ವಿಸ್ತಾರವಾಯಿತು. ಅತಿ ವಿಸ್ತಾರವಾಯಿತು. ಯಾರಿಗೆ ಬೇಕಾಗಿದೆ ಆ ರಗಳೆ? ವ್ಯಾಕರಣಕರ್ತನನ್ನು ಕುರಿತ ಒಣರಗಳೆ? ಅದನ್ನು ಅಚ್ಚು ಮಾಡಲಿಕ್ಕೆ ಎಷ್ಟೊಂದು ವೆಚ್ಚ! ಹೀಗೆ ಅವರು ಮೊದಲು ಮಾಡಿದ ಕೆಲಸ ಅವರ ಮನಸ್ಸಿಗೇ ಪೆಡಂಭೂತವೆಂದು ತೋರಿತು. ನಮ್ಮ ಕೃಷ್ಣಶಾಸ್ತ್ರಿಗಳು ಗಟ್ಟಿ ಮನಸ್ಸಿನವರು, ತಾಳ್ಮೆವಂತರು. ಅವರು ವರದಾಚಾರ್ಯರಲ್ಲಿಗೆ ಪದೇ ಪದೇ ಹೋಗಿ ಒತ್ತಾಯ ಮಾಡಿ, ಗುರುಗಳಿಂದ ಅವರ ಸಂಶೋಧನೆಯನ್ನು ಕುರಿತ ಒಂದು ಸಣ್ಣ ಸಂಗ್ರಹಲೇಖನವನ್ನು ಬರೆಯಿಸಿದರು. ಅದನ್ನು ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸಿದರೆಂದು ನನ್ನ ಜ್ಞಾಪಕ. ಶೋಧನೆ ಸಿದ್ಧಾಂತಗಳ ಮಾತು ಹಾಗಿರಲಿ. ಆ ಶ್ರದ್ಧೆಯನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳೋಣ. ಬಹು ವರ್ಷ ಆ ತದೇಕನಿಷ್ಠೆಯನ್ನೂ ಆ ದೇಹಶ್ರಮ ಬುದ್ಧಿಶ್ರಮಗಳನ್ನೂ ನಾವು ಆಲೋಚಿಸೋಣ. ವಿದ್ವತ್ತೆ ಎಂದರೆ ಅದು, ತಪಸ್ಸು ಎಂದರೆ ಅದು.

ವರದಾಚಾರ್ಯರಿಗೆ ಆಯುರ್ವೇದದಲ್ಲಿ ಶ್ರದ್ಧೆ. ಉಚಿತವಾಗಿ ಔಷಧ ಕೊಡುವರು. ಹೀಗೆ ಕಾಸಿನ ಮೇಲೆ ಗಮನವಿಲ್ಲದೆ, ಪ್ರಯಾಸ ಲೆಕ್ಕಕ್ಕಿಲ್ಲದೆ, ಲೋಕದ ಹಿತಕ್ಕಾಗಿ, ಕೇವಲ ಆತ್ಮ ಸಂತೃಪ್ತಿಗಾಗಿ, ಕೇವಲ ಮನಸ್ಸಮಾಧಾನಕ್ಕಾಗಿ ಸ್ವತಂತ್ರತೆಯಿಂದ ದುಡಿದು ಬದುಕಿದವರು ವರದಾಚಾರ್ಯರು.

ಮನಸ್ವೀ ಕಾರ್ಯಾರ್ಥೀ ನ ಗಣಯತಿ ದುಃಖಂ ನ ಚ ಸುಖಂ ॥

೨೦

ಹನುಮಂತರಾಯರು, ಕೃಷ್ಣಸ್ವಾಮಯ್ಯರ್

ನಾನು ಮೈಸೂರಿನಲ್ಲಿ ಓದುತ್ತಿದ್ದುದು ಏಳೆಂಟು ತಿಂಗಳು ಮಾತ್ರ. ಆ ವರ್ಷ (೧೯೦೧) ನನ್ನ ಕುಟುಂಬಕ್ಕೆ ದುರದೃಷ್ಟದ ವರ್ಷ. ನನ್ನ ಅಜ್ಜಂದಿರು ೧೯೦೦ರಲ್ಲಿಯೇ ತೀರಿಕೊಂಡಿದ್ದರು. ಅದಾದ ಕೊಂಚ ಕಾಲದಲ್ಲಿ ನನ್ನ ಮಾತಾಮಹಿ ಸಮಸ್ತ ಕುಟುಂಬವನ್ನೂ ತಾಯಿಯಂತೆ ಕಾಪಾಡಿದವರು ತೀರಿಕೊಂಡರು. ಅವರ ತಮ್ಮಂದಿರು ನಮ್ಮ ಕುಟುಂಬವನ್ನೆಲ್ಲ ಪೋಷಿಸುತ್ತಿದ್ದವರು ಅಲ್ಲಿಂದ ಎರಡು ವರ್ಷದೊಳಗಾಗಿ ತೀರಿಕೊಂಡರು. ಈ ಸಾವುಗಳ ಸುದ್ದಿಯಿಂದ ನನಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಓದಿನಲ್ಲಿ ಉತ್ಸಾಹ ಹೋಯಿತು. ಊರಿಗೆ ರಜಾಕ್ಕೆಂದು ಹೋದವನು ಮೈಸೂರಿಗೆ ಹಿಂತಿರುಗಲಿಲ್ಲ. ಮಾರನೆಯ ವರ್ಷ (೧೯೦೩) ಕೋಲಾರದಲ್ಲಿ ಫಿಫ್ತ್ ಫಾರ್ಮ್‌ಗೆ ಸೇರಿದೆ.

ಹನುಮಂತರಾಯರು

ಆಗ ನನಗೆ ಉಪಾಧ್ಯಾಯರಾಗಿದ್ದ ಹಲವರ ಹೆಸರನ್ನು ಭಕ್ತಿ ಕೃತಜ್ಞತೆಗಳಿಂದ ನೆನೆಯಬೇಕು. ಮೊದಲನೆಯವರು ಕನ್ನಡ ಪಂಡಿತ ಹನುಮಂತರಾಯರು. ಇವರ ಪಾಠ ಕ್ರಮದ ಸ್ವಾರಸ್ಯ ಹೆಚ್ಚಿನದೋ, ಸ್ವಭಾವದ ಸೌಜನ್ಯ ಹೆಚ್ಚಿನದೋ ನಾನು ನಿರ್ಣಯಿಸಲಾರೆ. ಎರಡರ ಪ್ರಯೋಜನವನ್ನೂ ಪಡೆದವನು ನಾನು.

ಪಾಠ ಹೇಳುವಾಗ ಛಂದಸ್ಸು ಅಲಂಕಾರಗಳೆರಡನ್ನೂ ಕೊಂಚಕೊಂಚ ಪ್ರಸ್ತಾವಿಸುವರು. ಕುವಲಯಾನಂದದಿಂದ ಉದಾಹರಣೆಗಳನ್ನು ಕೊಡುವರು. ಒಂದಾನೊಂದು ಸಂದರ್ಭದಲ್ಲಿ ಅಪ್ಪಯ್ಯದೀಕ್ಷಿತರು ಕಂಚಿಯ ವರದರಾಜ ಸ್ವಾಮಿಯನ್ನು ಕುರಿತು ರಚಿಸಿದ ಸ್ತೋತ್ರಗಳಲ್ಲೊಂದನ್ನು ಛಂದೋಲಕ್ಷಣ ಅಲಂಕಾರ ಲಕ್ಷಣಗಳಿಗೆ ಉದಾಹರಣೆಯಾಗಿ ಹೇಳಿದ್ದು ನನಗೆ ಈಗಲೂ ಜ್ಞಾಪಕವಿದೆ: “ಮಂದಸ್ಮಿತ ಸ್ಫುರಿತ ಮುಗ್ಧ ಮುಖಾರವಿಂದ.... ॥”

‘ಕಂದ’ ರಚನೆ

ಒಂದು ಸಾರಿ ನಾನು ಅವರನ್ನು “ಕಂದ ರಚನೆ ಹೇಗೆ?” ಎಂದು ಕೇಳಿದೆ. ಅವರು “ತಾನೇ ತಿಳಿಯಬೇಕಪ್ಪಾ!” ಎಂದರು. ನಾನು “ನನಗೆ ಸ್ವಲ್ಪ ಹೇಳಿಕೊಡಬೇಕಲ್ಲ ಸಾರ್?” ಎಂದೆ. ಅವರು “ಹೇಳಿದೆನಲ್ಲಪ್ಪ, ತಾನೇ ತಿಳಿದು ಬರುತ್ತದೆಂದು? ಕೊಂಚ ವಯಸ್ಸಾಗಿ ಅನುಭವವಾಗಬೇಕು” ಎಂದರು. ಕ್ಲಾಸಿನಲ್ಲಿ ಎಲ್ಲರೂ ನಕ್ಕರು. ನನಗೆ ನಾಚಿಕೆಯಾಗಿರಬೇಕು. ನನಗೆ ಒಂದಾನೊಂದು ಕಾಲದಲ್ಲಿ ನಾಚಿಕೆಯಿತ್ತು.

ಇದಾದ ಕೆಲವು ದಿವಸಗಳ ಮೇಲೆ ಗಣೇಶನ ಹಬ್ಬ ಬಂತು. ಆಗ ಹಾಸ್ಟಲಿನಲ್ಲಿ ವಿದ್ಯಾರ್ಥಿಗಳು ಗಣೇಶನನ್ನು ಕೂಡಿಸಿ ಪೂಜೆ ಮಾಡಿದರು. ಗಣೇಶಮೂರ್ತಿಯನ್ನು ಉದ್ವಾಸನ ಮಾಡುವ ದಿವಸ ಭಜನೆ ಮಂಗಳಾರತಿ ಏರ್ಪಾಟಿತ್ತು. ನಾನು ಆ ಹೊತ್ತಿಗೆ ಒಂದೆರಡು ಪದ್ಯಗಳನ್ನು ಹೊಸೆದಿದ್ದೆ. ಒಂದರಲ್ಲಿ ಒಂದು ಸಣ್ಣ ತುಣುಕು ಜ್ಞಾಪಕವಿದೆ.

ಧರೆಯೊಳ್ ಕಾಂಚನಭಾಗ ಸಂಸ್ಥಿತ ಲಸತ್-
ಕೋಲಾಹಲಾಭಿಖ್ಯ ಸತ್-
ಪುರದಾಂಗ್ಲೇಯ ಕಲೋಚ್ಚ ಪಾಠಗೃಹದೊಳ್
ನಾಮೋದುವರ್ ಬಾಲಕರ್ ॥.....

ಒಂದೆರಡು ಕಂದಪದ್ಯಗಳು:

ಶ್ರೀ ಗೌರೀ ಪ್ರಿಯತನಯಂ
ವಾಗೀಶಾದ್ಯಮರವಿನುತಪಾದಂ ವರದಂ ॥
ಭೋಗೀಶ ಭೂಷಿತಾಂಗಂ
ರಾಗದಿ ಪೊರೆಯೆಮ್ಮ ಗುರುಗಳಂ ಬಾಲಕರಂ ॥
ಪುರದಹನ ಸಮಯದಂದಾ
ಪುರಹರನುಂ ನಿನ್ನನೈದೆ ಪೂಜಿಸಿದನೆನಲ್ ॥
ಧರೆಯೊಳ್ ಮನುಜರ ಮಾತೇಂ
ಪರಿ ಪರಿ ವಿದ್ಯೆಗಳನ್ನಿತ್ತು ಪೊರೆ ಗಣನಾಥಾ ॥

ಹನುಮಂತರಾಯರು ಆ ಉತ್ಸವಕ್ಕೆ ಬಂದಿದ್ದರು. ನನ್ನನ್ನು ನೋಡಿ ನಗುತ್ತಾ “ಏನಯ್ಯಾ, ಕಂದ ಮಾಡಿಬಿಟ್ಟೆ! ಚೆನ್ನಾಗಿದೆಯಪ್ಪ!” ಎಂದರು. ಆ ಹೊತ್ತಿನ ನಗುವಿಗೆ ಕೊನೆಮೊದಲಿಲ್ಲ.

ಹನುಮಂತರಾಯರು ಅತ್ಯಂತ ಪರಿಶುದ್ಧರು. ಭಗವದ್ಭಕ್ತರು, ವಿನೀತರು. ಅವರು ಮುಳುಬಾಗಿಲಿಗೆ ಬಂದು ಒಂದು ತಿಂಗಳಿದ್ದು ನೃಸಿಂಹತೀರ್ಥದಲ್ಲಿ ಶ್ರೀಪಾದರಾಜರ ಸೇವೆ ಮಾಡಿದರು. ಹಾಗೆಯೇ ಸೋಮೇಶ್ವರ ಸನ್ನಿಧಿಯಲ್ಲಿ ಸೇವೆ ಸಲ್ಲಿಸಿದರು.

ಕೆಲಸದಿಂದ ನಿವೃತ್ತರಾದ ಬಳಿಕ ಅವರ ಕನ್ನಡದ ಅಭಿಮಾನ ಹಿಂದಿನಂತೆಯೇ ಕ್ರಿಯಾತತ್ಪರವಾಗಿತ್ತು. ನಾನು ಸಾಹಿತ್ಯ ಪರಿಷತ್ತಿನಲ್ಲಿ ಕೆಲಸ ಮಾಡುತ್ತಿದ್ದಾಗ ನಾಲ್ಕಾರು ಬಾರಿ ಬಂದು ಉದಾರವಾಗಿ ಕಾಣಿಕೆ ಸಲ್ಲಿಸಿದ್ದರು. ಅವರಿಗಿದ್ದ ಹುದ್ದೆ ಹೈಸ್ಕೂಲು ಪಂಡಿತನದು. ಅವರಿಗಿದ್ದ ದೊಡ್ಡತನ ಮಂತ್ರಿ ಮಹಾಮಂತ್ರಿಗಳಿಗೆ ಇರಬೇಕಾದದ್ದು.

ಕೃಷ್ಣಸ್ವಾಮಯ್ಯರ್

ನನ್ನ ಕೋಲಾರದ ಮೇಷ್ಟರುಗಳಲ್ಲಿ ನನಗೆ ವೈಯುಕ್ತಿಕವಾಗಿ ಮೆಚ್ಚಾದವರು ಆರ್. ವಿ. ಕೃಷ್ಣಸ್ವಾಮಯ್ಯರ್. ಇವರು ಇಂಗ್ಲಿಷ್ ಪಾಠ ಹೇಳುತ್ತಿದ್ದರು. ಉತ್ತರೋತ್ತರ ಇವರು ಚನ್ನಪಟ್ಟಣದಲ್ಲಿ ಹೈಸ್ಕೂಲ್ ಹೆಡ್‌ಮಾಸ್ಟರಾಗಿದ್ದರು. ಮೈಸೂರಿನಲ್ಲಿಯೂ ಬಹುಕಾಲ ಹೆಡ್‌ಮಾಸ್ಟರಾಗಿದ್ದರು. ಅವರ ರೂಪವ್ಯಕ್ತಿ ನನಗೆ ಆಕರ್ಷಕವೆನಿಸಿತ್ತು. ಆಳು ತುಂಬ ಎತ್ತರವಲ್ಲ. ತುಂಬ ದಪ್ಪವೂ ಅಲ್ಲ. ಬಣ್ಣ ಕಾಂತಿಯುಳ್ಳದ್ದು. ಅವರ ಉಡುಪು ಚೊಕ್ಕಟವಾಗಿ ಚಕ್ಕಿತವಾಗಿದ್ದದ್ದು. ಹಾಲು ನೊರೆಯಂತೆ ಬಿಳುಪಾದ ರುಮಾಲು, ಅದರಂತೆಯೇ ಬಿಳುಪಾದ ಉಡುವ ಪಂಚೆ. ಮೈಗೊಪ್ಪುವಂಥ ಕೋಟು ಕನ್ನಡಕ. ಇದು ಅವರ ಸಾಮಾನ್ಯವಾದ ರೂಪ. ಮುಖ ಪ್ರಸನ್ನವಾಗಿರುತ್ತಿತ್ತು. ಆದರೆ ಯಾರೂ ಅವರೊಡನೆ ಸಲಿಗೆ ತೆಗೆದುಕೊಳ್ಳುವಂತಿರಲಿಲ್ಲ. ಒಟ್ಟಿನ ಮೇಲೆ ಯಾವುದನ್ನು ಇಂಗ್ಲಿಷಿನಲ್ಲಿ ಅರಿಸ್ಟೊಕ್ರ್ಯಾಟಿಕ್ ಎನ್ನುತ್ತಾರೋ ಅಂಥ ಶ್ರೀಮದ್ಗಾಂಭೀರ್ಯ.

ಅವರ ವಿಶೇಷ ಶಕ್ತಿಯೆಂದರೆ ಅವರ ಇಂಗ್ಲಿಷ್ ವಾಕ್ಕು. ಶಬ್ದೋಚ್ಚಾರಣೆಯೇ ಆಕರ್ಷಕವಾದದ್ದು. ವಾಕ್ಯರಚನೆಯೂ ಹಾಗೆಯೇ. ಇಂಗ್ಲಿಷ್ ವಂಶದಲ್ಲಿ ಹುಟ್ಟಿದವರು ಒಪ್ಪಿಕೊಳ್ಳಬಹುದಾಗಿದ್ದದ್ದು ಕೃಷ್ಣಸ್ವಾಮಯ್ಯರ ಇಂಗ್ಲಿಷ್ ಮಾತು. ಅವರು ಬಹು ಮಾತಿನವರಲ್ಲ. ಆದರೆ ಆಡಿದ ಕೊಂಚ ಮಾತನ್ನು ಚೆನ್ನಾಗಿ ಆಡುವರು. ಅವರ ಇಂಗ್ಲಿಷ್ ಮಾತಿನಲ್ಲಿ ನನಗೆ ಕೊಂಚ ಮೋಹವಿತ್ತೆಂದು ಒಪ್ಪಿಕೊಳ್ಳಬೇಕು.

ಅವರು ನೈಜವಾಗಿ ಸಾಹಿತ್ಯಪ್ರೇಮಿಗಳು. ಕೋಲಾರದಲ್ಲಿ ಅವರು ವಾಸವಾಗಿದ್ದದ್ದು ಹೈಸ್ಕೂಲಿಗೆ ಸಮೀಪವಾಗಿದ್ದ ಒಂದು ಮನೆಯಲ್ಲಿ. ಅವರ ಕುಟುಂಬ ಆರೋಗ್ಯ ಸಾಲದವರು. ಆದ ಕಾರಣ ಅವರ ಪತ್ನೀಪುತ್ರಾದಿಗಳು ವರ್ಷದಲ್ಲಿ ಆರು ತಿಂಗಳ ಕಾಲ ಮದರಾಸಿನಲ್ಲಿರುತ್ತಿದ್ದರು. ಅವರನ್ನು ನೋಡಿಕೊಂಡು ಬರುವುದಕ್ಕಾಗಿ ಕೃಷ್ಣಸ್ವಾಮಯ್ಯರವರು ಆಗಾಗ ಮದರಾಸಿಗೆ ಹೋಗಿಬರುವರು. ಆ ಎರಡು ಮೂರು ದಿನಗಳ ಕಾಲ ಇಬ್ಬರು ಆಪ್ತ ಶಿಷ್ಯರಿಗೆ ಮನೆಯನ್ನೊಪ್ಪಿಸುವರು. ಆ ಶಿಷ್ಯರಲ್ಲಿ ನನ್ನ ಸ್ನೇಹಿತ ವಿಜಲಾಪುರದ ವೆಂಕಟಶಯ್ಯ ಒಬ್ಬ, ನಾನೊಬ್ಬ. ಈ ಕಾರಣದಿಂದ ನಾನು ಎಷ್ಟೋ ದಿನ ಶಾಲೆಗೆ ಚಕ್ಕರ್ ಹೊಡೆದು ಕೃಷ್ಣಸ್ವಾಮಯ್ಯರವರ ಮನೆಯಲ್ಲಿ ಅವರ ಪುಸ್ತಕಗಳನ್ನು ನೋಡುತ್ತಿದ್ದುದುಂಟು.

ಕೃಷ್ಣಸ್ವಾಮಯ್ಯರ್ ಒಳ್ಳೆಯ ಗ್ರಂಥಭಾಂಡಾರವನ್ನಿಟ್ಟಿದ್ದರು. ಅದರಲ್ಲಿ ಇಂಗ್ಲಿಷ್ ಕಾವ್ಯ ಕಾದಂಬರಿಗಳೂ ವಿಮರ್ಶೋಪನ್ಯಾಸಗಳೂ ಚರಿತ್ರೆಯ ಪುಸ್ತಕಗಳೂ ಹೆಚ್ಚಾಗಿದ್ದವು. ಅವುಗಳ ಜೊತೆಯಲ್ಲಿ "ಬ್ರಹ್ಮವಾದಿನ್" ಪತ್ರಿಕೆಯ ರಟ್ಟು ಕಟ್ಟಿದ ಸಂಪುಟಗಳೂ, ಬಿ.ವಿ. ಕಾಮೇಶ್ವರಯ್ಯರ್ ಮೊದಲಾದವರು ಪ್ರಕಟಿಸಿದ್ದ ಸಂಸ್ಕೃತ ಸಾಹಿತ್ಯವನ್ನು ಕುರಿತ ಮತ್ತು ಹಿಂದೂ ಮತಕ್ಕೆ ಸಂಬಂಧಪಟ್ಟ ಇಂಗ್ಲಿಷ್ ಪುಸ್ತಕಗಳೂ ಇದ್ದವು. ನನ್ನ ಕಾಲ ಈ ಇಂಗ್ಲಿಷ್ ಸಾಹಿತ್ಯ ಪುಸ್ತಕಗಳಿಗೂ ಮತ ಧರ್ಮಗಳನ್ನು ಕುರಿತ ಪುಸ್ತಕಗಳಿಗೂ ವಿನಿಯೋಗವಾಗುತ್ತಿತ್ತು.

ಆ ಸುಮಾರಿನಲ್ಲಿ ಕಾಶಿಯಲ್ಲಿ ಅನಿಬೆಸೆಂಟ್‌ರವರು ಬೆನಾರಸ್ ಹಿಂದೂ ಕಾಲೇಜ್ ಸಂಸ್ಥೆಯನ್ನು ನಡೆಸುತ್ತಿದ್ದರು. ಆ ಕಾಲೇಜಿನ ಪರವಾಗಿ Text book of Sanatana Dharma ಎಂಬ ಮೂರು ಗ್ರಂಥಗಳು ಪ್ರಕಟವಾಗಿದ್ದವು. ಈ ಸಂಗತಿ ನನಗೆ ತಿಳಿಯಬಂದದ್ದು ನನ್ನ ಮೇಷ್ಟರು ಕೃಷ್ಣಸ್ವಾಮಯ್ಯರವರ ಮನೆಯಲ್ಲಿ ನನಗೆ ಸಿಕ್ಕಿದ ಸೆಂಟ್ರಲ್ ಹಿಂದೂ ಕಾಲೇಜ್ ಮ್ಯಾಗಜೀನ್ ಪತ್ರಿಕೆಯಿಂದ. ಆ ಸಂಗತಿ ನನಗೆ ತಿಳಿದ ಕೂಡಲೆ ನಾನು ಆ ಪುಸ್ತಕಗಳನ್ನು ಬೇಡಿ ಕಾಶಿಗೆ ಬರೆದೆ. ಅದರಂತೆ ನನಗೆ ಪುಸ್ತಕದ ಭಾಂಗಿ ವಿ.ಪಿ. ಮೂಲಕ ಬಂದಿತು. ಅಂಚೆಯಾಳು ಆ ಭಾಂಗಿಯನ್ನು ಹಿಡಿದು ಹೈಸ್ಕೂಲಿನಲ್ಲಿ ನಾನು ಕ್ಲಾಸಿನಲ್ಲಿದ್ದಾಗ ಅಲ್ಲಿಗೆ ತಂದ. ಆಗ ಕೃಷ್ಣಸ್ವಾಮಯ್ಯರ್ ಕ್ಲಾಸು ನಡಸುತ್ತಿದ್ದರು. ನಾನು ಅಂಚೆಯವನ ಸನ್ನೆಯನ್ನು ನೋಡಿ ಕ್ಲಾಸಿನಿಂದ ಹೊರಕ್ಕೆ ಹೋಗಿ ಹಣ ಪಾವತಿ ಮಾಡಿ ಭಾಂಗಿಯನ್ನು ಕೈಯಲ್ಲಿ ಹಿಡಿದು ಕ್ಲಾಸಿಗೆ ಬಂದೆ. ಇದನ್ನೆಲ್ಲ ಕೃಷ್ಣಸ್ವಾಮಯ್ಯರ್ ನೋಡಿ ಸಂದರ್ಭವನ್ನು ಗ್ರಹಿಸಿದರು. ನಾನು ಕ್ಲಾಸಿನೊಳಕ್ಕೆ ಬಂದ ಕೂಡಲೆ ಕೇಳಿದರು:

ಕೃ: "ಏನದು?"

ನಾನು: "ಪುಸ್ತಕ."

ಕೃ: "ಏನು ಪುಸ್ತಕ?"

ನಾನು: "Textbook of Sanatana Dharma."

ಕೃ: "ಸರಿಯಾಯಿತು ಈಗ! ನಿನ್ನ ಓದು ಮೊದಲೇ ದಾರಿ ತಪ್ಪಿತ್ತು. ಇನ್ನು ಎಂಟು ದಿನ ಬೇರೆ ಎಲ್ಲ ವಿಚಾರಕ್ಕೂ ಸೊನ್ನೆ. ಈ ಪಿಶಾಚಿ ಹಿಡಿಯುತ್ತದೆ."

ನಾನು ಸುಮ್ಮನಿದ್ದೆ.

ಕೃ: “ಎಲಾ ವೆಂಕಟೇಶಯ್ಯ, ಇನ್ನು ಮೇಲೆ ಇವನನ್ನು ಆ ಮನೆಗೆ ಸೇರಿಸಬೇಡ. ಇವನು ಓದಬೇಕಾದದ್ದನ್ನು ಓದದೆ ಇನ್ನೇನೇನೋ ನೋಡಿ ತಲೆ ಕೆಡಿಸಿಕೊಳ್ಳುತ್ತಿದ್ದಾನೆ.”

ಆದರೆ ಅವರ ಚೀಮಾರಿ ಸಾರ್ಥಕವಾಗಲಿಲ್ಲ. “General reading” ಎಂದರೆ ಸಾಮಾನ್ಯ ಗ್ರಂಥಾವಲೋಕನೆಯಲ್ಲಿ ನನಗೆ ಅಭಿರುಚಿಯುಂಟುಮಾಡಿದವರೇ ಕೃಷ್ಣಸ್ವಾಮಯ್ಯರ್. ಒಂದು ನಿದರ್ಶನ.

ಚರಿತ್ರೆಯ ಬೋಧನೆ

ಅವರು ಚರಿತ್ರೆ ಪಾಠ ಹೇಳುತ್ತಿದ್ದರು–ಇಂಗ್ಲೆಂಡಿನ ಚರಿತ್ರೆ. ಆಗ ನಮಗೆ ಗೊತ್ತಾಗಿದ್ದ ಪಠ್ಯಪುಸ್ತಕ ಅರಬೆಲ್ಲಾ ಬಿ.ಬಕ್‌ಲಿ (Arabella B. Buckley) ಎಂಬ ಲೇಖಕರು "ಔಟ್‌ಲೈನ್ ಆಫ್ ದಿ ಹಿಸ್ಟರಿ ಆಫ್ ದಿ ಬ್ರಿಟಿಷ್ ಪೀಪಲ್" Outline of the History of the British People ಎಂಬುದು. ಆ ಗ್ರಂಥದ ಇಂಗ್ಲಿಷ್ ಶೈಲಿ ಸೊಗಸಾದದ್ದು. ಕಥಾ ನಿರೂಪಣೆ ಮೋಹವಾದದ್ದು. ಈ ಪುಸ್ತಕವನ್ನೋದುವುದಕ್ಕೆ ನನಗೆ ತುಂಬ ತಂತೋಷ. ನಮ್ಮ ಮೇಷ್ಟರಿಗೆ ಅದನ್ನು ಪಾಠ ಹೇಳುವುದಕ್ಕೆ ಅತ್ಯಂತ ಉತ್ಸಾಹ.

ಒಂದು ದಿನ ಈ ಗ್ರಂಥವನ್ನು ಪಾಠ ಹೇಳುವ ಕಾಲದಲ್ಲಿ ಅಂದಿನ ವಿಷಯವನ್ನು ಉಪಕ್ರಮಿಸುವುದಕ್ಕೆ ಮುಂಚೆ ಕೃಷ್ಣಸ್ವಾಮಯ್ಯರ್ ಪೀಠಿಕಾರೂಪವಾಗಿ ಹತ್ತು ವಾಕ್ಯ ಹೇಳಿದರು. ಆ ವಾಕ್ಯ ಆ ದಿವಸ ತಾನೇ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿ ಬಂದಿದ್ದ ಲಾರ್ಡ್ ಮಾರ್ಲೆ ಮಹಾಶಯನ "ಗ್ಲಾಡ್‌ಸ್ಟನ್ ಜೀವನಚರಿತ್ರೆ" ಪ್ರಕಾಶವಾಯಿತೆಂಬ ವಿಷಯ. ಗ್ಲಾಡ್‌ಸ್ಟನ್ನನ ಮಹಿಮೆಯನ್ನು ಕುರಿತು ಎರಡು ಮಾತು. ಮಾರ್ಲೆಯ ಬರವಣಿಗೆಯನ್ನು ಕುರಿತು ಎರಡು ಮಾತು. ಆ ಮಹಾ ಗ್ರಂಥವನ್ನು ಇಂಡಿಯಾ ದೇಶದಲ್ಲಿ ಎಲ್ಲರೂ ಓದಬೇಕಾದದ್ದೆಂದು ಎರಡು ಮಾತು. ಕೃಷ್ಣಸ್ವಾಮಯ್ಯರ ವಾಕ್ಯಗಳನ್ನು ಕೇಳುತ್ತಿದ್ದಂತೆ ನನಗೆ ಹೃದಯದ ಅಂತರಾಳದಲ್ಲಿ ಏನೋ ಒಂದು ದೊಡ್ಡ ಬೆಳಕಿನ ಅನುಭವವಾಯಿತು. ಇಂಥ ಮಹಾನುಭಾವರಿರುತ್ತಾರೆಯೆ? ಅಂಥ ಒಳ್ಳೆಯ ಲೇಖಕರಿರುತ್ತಾರೆಯೆ? ನಾನು ಆ ಗ್ರಂಥವನ್ನೋದುವುದೆಂದಿಗೆ? ಇವು ನನ್ನಲ್ಲುಂಟಾದ ಆಲೋಚನೆಗಳು.

***

ಕೃಷ್ಣಸ್ವಾಮಯ್ಯರ್ ಸ್ವಭಾವದಲ್ಲಿ ಕೊಂಚ ಕಟ್ಟುನಿಟ್ಟಾದವರು. ಅವರನ್ನು ಕಂಡರೆ ನಮಗೆ ಭಯವೇ. ಅವರು ನಿರ್ದಾಕ್ಷಿಣ್ಯವಾಗಿ ಖಂಡಿಸಬೇಕಾದದ್ದನ್ನು ಖಂಡಿಸುವರು. ಆದರೆ ದಯಾವಂತರು. ಉಪಕಾರಶೀಲರು. ಎಷ್ಟೋಮಂದಿ ಬಡ ವಿದ್ಯಾರ್ಥಿಗಳಿಗೆ ಅವರು ಸಹಾಯ ಕೊಟ್ಟಿದ್ದನ್ನು ನಾನು ಬಲ್ಲೆ.

ಅವರು ರೈ ॥ ಆ ॥ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳನ್ನು ಕಾಣುವುದಕ್ಕಾಗಿ ಆಗಾಗ ಬರುತ್ತಿದ್ದರು. ಶಾಸ್ತ್ರಿಗಳವರಿಗೆ ಅವರ ವಿಷಯದಲ್ಲಿ ತುಂಬ ಆದರಣೆ. ಶಾಸ್ತ್ರಿಗಳ

ಜೊತೆಯಲ್ಲಿ ನಾನಿದ್ದಾಗ ನನ್ನ ಮೇಷ್ಟರು ನನ್ನನ್ನು ಕೊಂಚ ಕೊಂಚ ಗೇಲಿ ಮಾಡುವರು. ಶಾಸ್ತ್ರಿಗಳಿಗೆ ಅದರಿಂದ ತುಂಬ ಸಂತೋಷ.

ಕೃಷ್ಣಸ್ವಾಮಯ್ಯರ್ ನೋಟಕ್ಕೂ ನಡತೆಯಲ್ಲಿಯೂ ತಮ್ಮ ವಿದ್ವತ್ಪ್ರಭಾವದಿಂದ ಎಲ್ಲರಲ್ಲಿಯೂ ಮನ್ನಣೆ ಪಡೆದವರು. ಅವರಿಗೆ ಸಂಗೀತದಲ್ಲಿಯೂ ಅಭಿಮಾನ. ನನ್ನ ಮನಸ್ಸಿಗೆ ಅವರನ್ನು ಸ್ಮರಿಸಿಕೊಳ್ಳುವುದು ಒಂದು ದೊಡ್ಡ ಸಂತೋಷ.

೨೧

ನನ್ನ ವ್ಯಾಸಂಗಶ್ರದ್ಧೆ

ನಾನು ಪಂಡಿತ ಹನುಮಂತರಾಯರ ಶಿಷ್ಯನೆಂದು ಹೇಳಿದೆನಷ್ಟೆ. ನಾನು ಬಹಳ ಬುದ್ಧಿವಂತನೆಂದು ಅವರು ತಿಳಿದುಕೊಂಡಿದ್ದರು. ಅವರು ಹಾಗೆ ತಿಳಿದುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೆ. ಫಲಿತಾಂಶ ನನಗೆ ಪರೀಕ್ಷೆಯಲ್ಲಾದ ಮಂಗಳಾರತಿ.

ನಾನು ಒಂದು ಪಠ್ಯಪುಸ್ತಕವನ್ನೂ ಓದಿರಲಿಲ್ಲ. ಕ್ಲಾಸಿನಲ್ಲಿ ಪ್ರಶ್ನೆ ಕೇಳಿದಾಗ ಹೇಗೋ ಉಡಾಫೆಯಿಂದ ಜವಾಬು ಹೇಳಿ ಭೇಷ್ ಎನ್ನಿಸಿಕೊಂಡಿದ್ದೆ; ಪುಸ್ತಕ ಪರಿಶ್ರಮದಿಂದ ಅಲ್ಲ. ಮೆಟ್ರಿಕ್ಯುಲೇಷನ್ ಪರೀಕ್ಷೆಯ ದಿನ ಪ್ರಶ್ನೆಪತ್ರಿಕೆಗಳಿಗೆ ಉತ್ತರ ಬರೆದು ಹೊರಗೆ ಬಂದೆ. ಅಂದು ಸಂಜೆಯೋ ಮಾರನೆಯ ದಿನವೋ ಪಂಡಿತರು ಬಂದು ಕೇಳಿದರು.

ಹ: “ಏನಪ್ಪಾ?”

ನಾನು: “ಎಲ್ಲ ಪ್ರಶ್ನೆಗಳಿಗೂ ಉತ್ತರ ಬರೆದಿದ್ದೇನೆ.”

ಅವರು (ಪತ್ರಿಕೆಯಿಂದ ಒಂದು ಪ್ರಶ್ನೆಯನ್ನೆತ್ತಿ): “ಇದಕ್ಕೇನು ಬರೆದಿದ್ದಿ?”

ಆ ಪ್ರಶ್ನೆ ನಮಗೆ ಪಠ್ಯಪುಸ್ತಕವಾಗಿದ್ದ ಪ್ರಹ್ಲಾದ ಚರಿತ್ರೆಯದು ಎಂದು ಜ್ಞಾಪಕ. ಪದ್ಯ ಹೀಗಿತ್ತು:

> ಒಬ್ಬನೇ ಕೊಂದಾತ ಸಲಹಿದನೊಬ್ಬನೇ....

ನಾನು ಪದ್ಯವನ್ನೋದಿದ ಜ್ಞಾಪಕವಿರಲಿಲ್ಲ. ನಾನು ಪರೀಕ್ಷೆಯಲ್ಲಿ ಬರೆದಿದ್ದ ಉತ್ತರ ಹೀಗೆ: “ಇರತಕ್ಕ ವಸ್ತು ಒಂದೇ. ಕೊಲ್ಲತಕ್ಕ ವಸ್ತುವೂ ಅದೇ, ಕೊಲ್ಲಿಸಿಕೊಳ್ಳತಕ್ಕದ್ದೂ -ಅದೇ. ಈ ಪದ್ಯ ಭಗವಂತನ ಸರ್ವಾತ್ಮಕತೆಯನ್ನು ತಿಳಿಸುತ್ತದೆ....”

ಹನುಮಂತರಾಯರು ನಿಟ್ಟುಸಿರು ಬಿಟ್ಟು ಹಣೆ ಚಚ್ಚಿಕೊಂಡರು. “ಏನಯ್ಯಾ, ನೀನು ಪುಸ್ತಕ ಓದಲಿಲ್ಲವೋ?”

ನಾನು ಏನು ಜವಾಬು ಹೇಳಬೇಕು? ತೆಲುಗಿನಲ್ಲಿ ಒಂದು ಗಾದೆಯುಂಟು. ಅವರೇಕಾಯನ್ನು ಹೆಚ್ಚಾಗಿ ಸೇವಿಸಿದವನು ವಾಯುಪೀಡಿತನಾಗಿ ಅಪಾನ ವಾಯುವನ್ನು ಸಡಿಲಿಸಬೇಕೆನಿಸಿದಾಗ ಅದನ್ನು ಯಾರಿಗೂ ತಿಳಿಸಬಾರದೆಂದು ಕೆರೆಯ ನೀರಿನೊಳಕ್ಕಿಳಿದು ಅಲ್ಲಿ ಸದ್ದಿಲ್ಲದಂತೆ ಗಾಳಿ ಹೊರಕ್ಕೆ ಬಿಡುತ್ತಾನಂತೆ. ಆಗ ಸದ್ದು ಕೇಳಿಸುವುದಿಲ್ಲ, ನಿಜ. ಆದರೆ ನೀರಿನಲ್ಲಿ ಬುಡ್ಡೆಗಳೇಳುತ್ತವಲ್ಲ?

ವಿದ್ಯಾರ್ಥಿ ಏನು ಮಾಡಿದ್ದಾನೆಂಬುದು ಪರೀಕ್ಷೆಯ ಫಲಿತಾಂಶಗಳು ಹೊರ ಬಿದ್ದಾಗ ತಾನಾಗಿ ಬುಡ್ಡೆಬುಡ್ಡೆಯಾಗಿ ಹೊರಗೆ ಬರುತ್ತದೆ. ನನ್ನ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ನಾನು ಫೆಯಿಲ್–ಕನ್ನಡದಲ್ಲಿ. ಕನ್ನಡದಲ್ಲಿ ಮಾತ್ರವೇ ಅಲ್ಲ; ಗಣಿತ, ವಿಜ್ಞಾನ, ಕನ್ನಡ ಮೂರರಲ್ಲಿಯೂ ಸೊನ್ನೆ.

ಕೋಲಾರದಲ್ಲಿ ನನ್ನ ಇತರ ಉಪಾಧ್ಯಾಯರುಗಳಲ್ಲಿ ನಾನು ಇನ್ನಿಬ್ಬರನ್ನು ಕುರಿತು ಒಂದೊಂದು ಮಾತನ್ನು ಹೇಳಬಹುದು. ಸಯನ್ಸ್ ಮೇಷ್ಟರಾಗಿದ್ದವರು ಸಿ. ಸುಬ್ಬರಾಯರು. ಅವರ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಪ್ರೀತಿಯಿತ್ತು. ಭಯ ಕೊಂಚವೂ ಇರಲಿಲ್ಲ. ಅವರು ಪಾಠ ಹೇಳುವಾಗ ಸಾಮಾನ್ಯವಾಗಿ ಕುರ್ಚಿಯ ಮೇಲೆ ಕುಳಿತುಕೊಂಡೇ ಇರುತ್ತಿದ್ದರು. ನಿಂತುಕೊಳ್ಳುವುದಕ್ಕೆ ಅವರಿಗೆ ಇಷ್ಟವಿರಲಿಲ್ಲ. ಒಂದು ಸಲ ಅವರನ್ನು ವಿದ್ಯಾರ್ಥಿ ಸಂಘದಲ್ಲಿ ಉಪನ್ಯಾಸ ಕೊಡಲು ಕರೆದಿದ್ದರು. ಅವರು ಬಂದು ಕುರ್ಚಿಯ ಮೇಲೆ ಕುಳಿತು “ನಾನು ಕೂತುಕೊಂಡೇ ಮಾತಾಡ್ತೇನೆ. ಇದಕ್ಕೆ ಯಾರು ನಿಂತುಕೋಂಬೋರು” ಎಂದರು. ನಾವು ನಕ್ಕೆವು. “ನೀವು ನಗಿ ಪರವಾಗಿಲ್ಲ” ಎಂದರು ಅವರು.

ಕ್ಲಾಸಿನಲ್ಲಿ ಅವರ ಕುರ್ಚಿಯ ಪಕ್ಕದಲ್ಲಿ ದೊಡ್ಡ ಮೇಜಿರುತ್ತಿತ್ತು. ಮೇಜಿಗೆ ಪೂರ್ತಿ ಟಿನ್ ತಗಡನ್ನು ಹೊದಿಸಿತ್ತು. ಮೇಜಿನ ದೂರದ ಕಡೆಯಲ್ಲಿ ಒಂದು ನೀರಿನ ಜಾಡಿ. ಅದರ ಮುಂದೆ ನೀರು ಬಿಡುವುದಕ್ಕಾಗಿ ಸಣ್ಣ ತೊಟ್ಟಿ ಹಳ್ಳ ಇರುತ್ತಿತ್ತು. ಈ ಹಳ್ಳದಲ್ಲಿಯೂ ತಗಡು. ಈ ಮೇಜಿನ ಉದ್ದೇಶ ಅದರ ಮೇಲೆ ಎಕ್ಸ್‌ಪರಿಮೆಂಟುಗಳನ್ನು ನಡಸಬೇಕೆಂಬುದು. ದ್ರಾವಕ ಮೇಜಿನ ಮೇಲೆ ಬಿದ್ದರೆ ಮರ ಸುಡಬಾರದೆಂದು. ಅದಕ್ಕೆ ರಕ್ಷಕವಾಗಿ ತಗಡು. ಈ ಮೇಜಿನ ಜಾಡಿಯಿದ್ದ ಭಾಗ ಮೇಷ್ಟರಿಂದ ಕೊಂಚ ದೂರವಾಗಿತ್ತು. ವಿದ್ಯಾರ್ಥಿಗಳಲ್ಲಿ ಕೆಲಮಂದಿ ಯಾವಾಗಲೂ ಈ ನೀರಿನ ಜಾಡಿಗೆ ಕಾವಲುಗಾರರಂತೆ ಅದರ ಸುತ್ತ

ಜಮಾಯಿಸುತ್ತಿದ್ದರು. ಅವರ ಪೈಕಿ ಚಿಂತಾಮಣಿಯ ಸುಬ್ಬಯ್ಯ ಎಂಬಾತ ಗಡಾವುದ್ದಿ. ಆತ ಆಕಾರದಲ್ಲಿಯೂ ಜರ಼್ುದಾರಿ ಮನುಷ್ಯ. ಆತ ಹೇಳಿದಂತೆ ನಾವೆಲ್ಲ ನಡೆಯುತ್ತಿದ್ದೆವು.

ಒಂದು ದಿನ ಮೇಷ್ಟರು ಕುಳಿತು ಪಾಠ ಉಪಕ್ರಮ ಮಾಡಿದರು. ಎರಡು ಮೂರು ನಿಮಿಷಗಳೊಳಗಾಗಿ ಅವರು ಈ ಗುಂಪಿನ ಕಡೆಗೆ ತಿರುಗಿ "ಎಲ್ಲಿಂದ ಬರುತ್ತಿದೆ ಸಿಗರೇಟು ವಾಸನೆ?" ಎಂದು ಮೂಗಿನ ಮೇಲೆ ಬೆಟ್ಟನ್ನಾಡಿಸಿದರು. ಕೇಳಿದರು: "ಹೌದು, ಸಿಗರೇಟು ವಾಸನೆಯೇ" ಎನ್ನುತ್ತ ಗುಂಪಿನ ಕಡೆಗೆ ತಿರುಗಿದರು. ಸುಬ್ಬಯ್ಯ "ಒತ್ತಾಗಿ ಹತ್ತಿರ ಹತ್ತಿರ ನಿಂತುಕೊಳ್ರೊ" ಎಂದ. ಸಿಗರೇಟಿದ್ದದ್ದು ಅವನ ಹತ್ತಿರ. ಅದನ್ನು ಬೆನ್ನ ಕಡೆ ತಿರುಗಿಸಿ ನೆಲಕ್ಕೆ ಹಾಕಿ ಅದರ ಮೇಲೆ ಕಾಲುಗಳನ್ನಿಟ್ಟು ನಿಂತ.

"ಎಲ್ಲಿದೆ ಸಾರ್ ಸಿಗರೇಟು? ಎಲ್ಲಿಯದೋ ವಾಸನೆ. ನಿಮ್ಮ ಮೂಗಿನಲ್ಲಿರಬಹುದು."

ಮೇಷ್ಟರು ಏನು ಮಾಡಬೇಕು? ನಕ್ಕು ಮುಂದಿನ ವಿಷಯಕ್ಕೆ ಹೋದರು.

ಇನ್ನೊಂದು ಸಂಗತಿ.

ನಮ್ಮ ವಿದ್ಯಾರ್ಥಿಸಂಘದಲ್ಲಿ ಒಂದು ಪ್ರಬಂಧ ಲೇಖನ ಸ್ಪರ್ಧೆಯನ್ನೇರ್ಪಡಿಸಿದರು. ಪ್ರಬಂಧದ ವಿಷಯವನ್ನು ಪಂಡಿತ ಹನುಮಂತರಾಯರು ಸೂಚಿಸಿದರೆಂದು ನನ್ನ ಜ್ಞಾಪಕ. ವಿಷಯ "ವಿದ್ಯಾಭ್ಯಾಸ." ಸ್ಪರ್ಧೆಯಲ್ಲಿ ನಾನೂ ಸೇರಿದ್ದೆ.

ನನ್ನ ಪ್ರಬಂಧದಲ್ಲಿ ಮೊದಲನೆಯ ವಾಕ್ಯವನ್ನು ಸುಬ್ಬರಾಯರು ಗಟ್ಟಿಯಾಗಿ ಓದಿದರು, ಹೀಗೆ:

"ವಿದ್ಯೆ ಎರಡು ವಿಧ: (೧) ಸುವಿದ್ಯೆ, (೨) ದುರ್ವಿದ್ಯೆ..."

ಸುಬ್ಬರಾಯರು ಅಷ್ಟಕ್ಕೇ ನಿಲ್ಲಿಸಿ "ಸುವಿದ್ಯೆ ಎಲ್ಲಿದೆಯೋ ನಿನಗೆ ತಿಳಿಯದು. ದುರ್ವಿದ್ಯೆ ನಿನಗೆ ತಿಳಿದ ಹಾಗೆ ಬೇರೆ ಯಾರಿಗೂ ತಿಳಿಯದು" ಎಂದರು.

ನನ್ನ ಸ್ನೇಹಿತರಿಗಾದ ಸಂತೋಷವನ್ನು ವಾಚಕರೇ ಊಹಿಸಬಹುದು.

ಇನ್ನೊಂದು ದಿನ ಮೇಷ್ಟರು ಸುಬ್ಬರಾಯರು ಪಾಠ ಹೇಳುತ್ತಿದ್ದರು. ಅವರು ಒಂದು ಪ್ರಶ್ನೆ ಕೇಳಿದರು:

"What is energy?" ("ಶಕ್ತಿ ಎಂದರೆ ಏನು?")

ವಿದ್ಯಾರ್ಥಿಗಳು ಯಾರೂ ಬಾಯಿ ಬಿಡಲಿಲ್ಲ. ಒಂದೆರಡು ನಿಮಿಷ ನೋಡಿ ಮೇಷ್ಟರು ತಾವೇ ಉತ್ತರ ಕೊಡಲು ಪ್ರಯತ್ನಿಸಿದರು. ಅವರ ಬಾಯಿಂದ ಹೊರಟ ಮಾತು ಹೀಗೆ:

"When a body is in..." ಹೀಗೆ ಹೇಳಿ ಎರಡು ಕೈಗಳನ್ನು ಬಟ್ಟಲಿನಂತೆ ಗುಂಡು ಮಾಡಿಕೊಂಡು ಹತ್ತಿರ ಹತ್ತಿರಕ್ಕೆ ತರುತ್ತಿದ್ದರು. ಹೀಗೆ ನಾಲ್ಕೈದು ಸಲ ಮಾಡಿದರು. ನಾನು ತಡೆಯಲಾರದೆ ಅವರಿಗೆ ಸರಿಯಾದ ಮಾತು ತೋಚಲಿಲ್ಲವೆಂದು ಭ್ರಮಿಸಿ "... motion" ಎಂದೆ.

ನಾನು ಮಾತನಾಡಿದ ಕೂಡಲೆ ಮೇಷ್ಟರು ನನ್ನ ಕಡೆಗೆ ತಿರುಗಿ "You stand up on the bench. You are always talkative" ಎಂದು ತೀರ್ಮಾನ ಹೇಳಿಬಿಟ್ಟರು. ಅದು ಸ್ಥಿರವಾಗಿ ನಿಂತುಹೋಯಿತು.

ಸುಬ್ಬರಾಯರು ಒಳ್ಳೆಯ ಮನೆತನದವರು, ಸ್ವತಃ ತುಂಬ ಒಳ್ಳೆಯವರು. ದಯಾವಂತರು. ಅವರ ಬಂಧುಗಳಲ್ಲಿ ಕೆಲವರನ್ನು ನಾನು ಬಲ್ಲೆ.

ವೆಂಕಟರಮಣಾಚಾರ್ಯರು

ಆಗಿನ ಇನ್ನೊಬ್ಬ ಮೇಷ್ಟರು ಎಸ್. ವೆಂಕಟರಮಣಾಚಾರ್ಯರು. ಕೆಲವು ಕಾಲವಾದ ಮೇಲೆ ಇವರು ಚನ್ನಪಟ್ಟಣಕ್ಕೆ ವರ್ಗಪಟ್ಟು ಅಲ್ಲಿ ಹೈಸ್ಕೂಲು ಮೇಷ್ಟರಾಗಿದ್ದರು.

ಇವರ ಪಾಠ ರೈಲ್ವೆ ಎಂಜಿನ್ನಿನ ವೇಗದ್ದು. ಕೈಯಲ್ಲಿ ಸೀಮೆಸುಣ್ಣ ಹಿಡಿದು ಬೋರ್ಡಿನ ಮುಂದೆ ನಿಂತರೆ ಎಡಗೈ ಮೂಲೆಯಿಂದ ಕೆಳಗೆ ಬಲಗಡೆಯ ಮೂಲೆಯವರೆಗೂ ಮೆಟ್ಟಲು ಮೆಟ್ಟಲಾಗಿ ಆಲ್‌ಜಿಬ್ರಾ ಲೆಕ್ಕ ಬರೆಯುವರು. ಸೀಮೆಸುಣ್ಣ ಎಡೆಬಿಡದೆ ಟಿಕ್ ಟಿಕ್ ಎಂದು ಓಡುವುದು. ನನ್ನ ಕ್ಲಾಸಿನಲ್ಲಿ ಮೂರು ನಾಲ್ಕು ಮಂದಿ ಬುದ್ಧಿವಂತರಿದ್ದಿರಬಹುದು. ಬುದ್ಧಿವಂತರಂತೆ ಸುಮ್ಮನಿದ್ದವರು ಎಂಟು ಹತ್ತು ಮಂದಿ. ನಾನು ಈ ಎರಡು ವರ್ಗಕ್ಕೂ ಸೇರಿದವನಲ್ಲ. ನನಗೆ ಆ ಮೆಟ್ಟಲುಗಳು ಅರ್ಥವಾಗುತ್ತಿರಲಿಲ್ಲ. ಕೇಳಿತಿಳಿದುಕೊಳ್ಳೋಣವೆಂದರೆ ಹೆದರಿಕೆ.

ಈ ಹೆದರಿಕೆಗೆ ಕಾರಣವಿತ್ತು. ಮುಳುಬಾಗಿಲಿನಲ್ಲಿ ಎರಡನೆಯ ಕ್ಲಾಸಿನಿಂದ ನಾಲ್ಕನೆಯದಕ್ಕೆ ಹಾರಿ ಅದರಿಂದ ಲೋಯರ್ ಸೆಕೆಂಡರಿ ತಲಪಿದ್ದೆ. ಈ ಅವಸರದಲ್ಲಿ ಪುಸ್ತಕದ ಮಾತು ಅಷ್ಟಿಷ್ಟು ನನಗೆ ಬಂದಿರಬಹುದೇ ಹೊರತು ಕ್ಲಾಸಿನಲ್ಲಿ ಇಂಗ್ಲಿಷ್ ಉಪನ್ಯಾಸದ ಧೋರಣೆಯನ್ನು ನಾನು ಅನುಸರಿಸಲಾಗುತ್ತಿರಲಿಲ್ಲ. ಆಮೇಲೆ ಮೈಸೂರಿನಲ್ಲಿ ಈ ಅರ್ಧಮರ್ಧ ತಿಳಿವಳಿಕೆಯಿಂದ ಗಣಿತ ವಿಜ್ಞಾನಗಳ ಪಾಠ ಅರ್ಧಮರ್ಧವಾಯಿತು. ಮಿಡ್ಲ್‌ಸ್ಕೂಲಿಗೂ ಹೈಸ್ಕೂಲಿಗೂ ಹೊಂದಿಕೆಯಾಗಲಿಲ್ಲ. ಹೈಸ್ಕೂಲ್ ದರ್ಜೆಯಲ್ಲಾದರೋ ಮೈಸೂರಿನಲ್ಲಿ ನಾಲ್ಕು ತಿಂಗಳ ಪಾಠ ತಪ್ಪಿಹೋಗಿತ್ತು. ಆದದ್ದರಿಂದ ಮೈಸೂರಿನ ಪಾಂಡಿತ್ಯಕ್ಕೂ ಕೋಲಾರದ್ದಕ್ಕೂ ಹೊಂದಿಕೆಯಾಗಲಿಲ್ಲ. ಹೀಗೆ ನನ್ನ ಓದಿಗೆ ಬುಡಭದ್ರವಿರಲಿಲ್ಲ. ವೆಂಕಟರಮಣಾಚಾರ್ಯರು ಸಮರ್ಥರು. ಆಚಾರವ್ಯವಹಾರಗಳಲ್ಲಿ ಲೋಪ ಮಾಡದಿದ್ದವರು. ಸ್ನೇಹತತ್ಪರರು.

೨೨

ಕೋಲಾರ ವಸತಿ

ನನ್ನ ಹೈಸ್ಕೂಲ್ ಮೊದಲ ವರ್ಷದ (ಫೋರ್ತ್ ಫಾರ್ಮ್) ಅಧ್ಯಯನ ಮೈಸೂರಿನಲ್ಲಿ ಬೆಳಗಿದ್ದಾದ ಮೇಲೆ ಎರಡನೆಯ ವರ್ಷಕ್ಕಾಗಿ (ಫಿಫ್ತ್‌ಫಾರ್ಮ್) ಕೋಲಾರಕ್ಕೆ ಬಂದೆ. ಅಲ್ಲಿ ಅಶನವಸತಿಗಳಿಗಾಗಿ, ಅಷ್ಟಿಷ್ಟು ಪರದಾಟವಾದ ಮೇಲೆ ವೆಂಕಟರಾಮಯ್ಯ ಎಂಬವರ ಮನೆಯಲ್ಲಿ ಭೋಜನಾನುಕೂಲ ದೊರೆಯಿತು. ಇದು ರಾಮದಾಸಪ್ಪನವರ ದಯೆಯಿಂದ.

ರಾಮದಾಸಪ್ಪನವರೂ ವೆಂಕಟರಾಮಯ್ಯನವರೂ ಸ್ನೇಹಿತರು. ಅವರಿಬ್ಬರೂ ಬಂಧುಗಳಲ್ಲದಿದ್ದರೂ ಒಂದೇ ಪಂಗಡಕ್ಕೆ (ಬಡಗನಾಡು) ಸೇರಿದ್ದವರು; ಸಮಾನವಾದ ನೇಮನಿಷ್ಠೆಗಳಿದ್ದವರು. ವೆಂಕಟರಾಮಯ್ಯನವರು ಸಬ್ ಡಿವಿಜನ್ ಆಫೀಸಿನಲ್ಲಿ ಹೆಡ್ ಗುಮಾಸ್ತೆ ಕೆಲಸದಲ್ಲಿದ್ದರು. ಅವರು ತಿಂಗಳಿಗೆ ಹದಿನೈದು ಇಪ್ಪತ್ತು ದಿನ ಸರ್ಕೀಟು ಹೋಗಬೇಕಾಗಿತ್ತು. ಅವರು ಪರಸ್ಥಳಕ್ಕೆ ಹೋಗಿದ್ದಾಗ ಮನೆಯಲ್ಲಿ ದೇವತಾರ್ಚನೆ ನಿಂತುಹೋಗುತ್ತಿತ್ತೆಂದು ಅವರ ಕೊರತೆ. ಇದನ್ನು ಅವರು ರಾಮದಾಸಪ್ಪನವರಲ್ಲಿ ಹೇಳಿಕೊಂಡರು. ಫಲಿತಾಂಶ ಗೊತ್ತಾದ ಏರ್ಪಾಟು ಇದು: ವೆಂಕಟರಾಮಯ್ಯನವರು ಊರಿನಲ್ಲಿಲ್ಲದ ದಿವಸ ನಾನು ಅವರ ಮನೆಯಲ್ಲಿ ದೇವತಾರ್ಚನೆ ಮಾಡತಕ್ಕದ್ದು. ಪ್ರತಿದಿನವೂ ಅವರ ಮೂವರು ಮಕ್ಕಳಿಗೆ ಪಾಠ ಹೇಳತಕ್ಕದ್ದು. ಅವರ ಮನೆಯಲ್ಲಿ ನಾನು ಎರಡುಹೊತ್ತೂ ಊಟಮಾಡಿಕೊಂಡು ನನ್ನ ವಿದ್ಯಾರ್ಜನೆಯನ್ನು ಮುಂದಕ್ಕೆ ಸಾಗಿಸತಕ್ಕದ್ದು. ನನ್ನ ವಸತಿಗಾಗಿ ಆ ಸಮೀಪದಲ್ಲಿ (ಕೋಟೆಯಲ್ಲಿ) ವೇದಮೂರ್ತಿ ಮಣಿಕುಂಡಲಂ ಸುಬ್ಬರಾಯಶಾಸ್ತ್ರಿಗಳವರ ಮನೆಯಲ್ಲಿ ಒಂದು ಕೊಠಡಿಯಲ್ಲಿ ಗೊತ್ತುಮಾಡಿದ್ದಾಯಿತು.

ದಿನಚರಿ

ಈ ಕಾಲದಲ್ಲಿ ನನ್ನ ಕಾರ್ಯಕ್ರಮ ಹೀಗಿತ್ತು: ಬೆಳಕು ಹರಿಯುವ ವೇಳೆಗೆ ವೆಂಕಟರಾಮಯ್ಯನವರ ಮನೆಗೆ ಹೋಗಿ ಅಂದಂದಿನ ಮಡಿ ಬಟ್ಟೆಗಳನ್ನು–ಸಾಮಾನ್ಯವಾಗಿ ಒಂದೆರಡು ಉಡುವ ಪಂಚೆ, ಒಂದೆರಡು ಸಣ್ಣ ಸಣ್ಣ ಪಂಚೆ

ತೆಗೆದುಕೊಂಡು ಒಂದು ಸಣ್ಣ ಬಿಂದಿಗೆ, ಒಂದು ಕಡಾಯಿ, ಒಂದು ದೊಡ್ಡ ಹಗ್ಗ–ಇಷ್ಟರೊಡನೆ ಅಂಗಳದ ಬಾವಿಯ ಬಳಿ ಹೋಗತಕ್ಕದ್ದು. ನೀರು ಸೇದಿಟ್ಟುಕೊಳ್ಳತಕ್ಕದ್ದು: ಇದೇ ಕಷ್ಟ ಭಾಗ–ಬಾವಿಯ ಆಳದ ಕಾರಣದಿಂದ. ಬಟ್ಟೆ ಒಗೆದು ಹಿಂಡಿ ಪಾತ್ರೆಗಳೊಡನೆ ಮನೆ ಸೇರತಕ್ಕದ್ದು. ಸ್ನಾನಮಾಡಿ ದೇವತಾರ್ಚನೆ ಮಾಡತಕ್ಕದ್ದು: ಇದು ನನಗೆ ರೂಢಿಯಾಗಿದ್ದದ್ದು. ಆಮೇಲೆ ಮಕ್ಕಳಿಗೆ ಪಾಠ: ದೊಡ್ಡದು ಏಳೆಂಟು ವರ್ಷದ ಹೆಣ್ಣು, ಮಿಕ್ಕಿಬ್ಬರು ಅವಳ ತಮ್ಮಂದಿರು. ಓದಿಸುವುದು, ಬರೆಯಿಸುವುದು, ಮಗ್ಗಿ, ಪ್ರಭವ ವಿಭವ ಮೊದಲಾದದ್ದು. ಇದು ಪಾಠ ಕ್ರಮ. ಆಮೇಲೆ ಭೋಜನ. ವೆಂಕಟರಾಮಯ್ಯನವರು ಊರಿನಲ್ಲಿದ್ದಾಗ ಅವರೇ ದೇವತಾರ್ಚನೆ ಮಾಡುವರು. ನಾನು ಬೆಳಗ್ಗೆ ಅವರ ಮನೆಗೆ ಹೋಗುವಾಗ್ಗೆ ವೆಂಕಟರಾಮಯ್ಯನವರು ಹಾಸಿಗೆಯ ಬಳಿ ಕುಳಿತು ದೇವರನಾಮ ಹೇಳಿಕೊಳ್ಳುತ್ತಿದ್ದದ್ದನ್ನು ನಾನು ಕೇಳಿದ್ದೇನೆ. ಅವರು ತುಂಬ ಪರಿಶುದ್ಧರು, ಸದಾಚಾರಶೀಲರು, ಪ್ರಾಮಾಣಿಕರು ಕೊಂಚ ಮುಂಗೋಪಿಗಳು, ಇದೊಂದನ್ನು ಬಿಟ್ಟರೆ ಅವರು ದೇವತಾಪುರಷರು.

ಅವರ ಪತ್ನಿ ಗೌರಮ್ಮನಂತೂ ಸಾಕ್ಷಾತ್ ಗೌರೀದೇವಿ. ಆಕೆಯ ಆಚಾರ ಶ್ರದ್ಧೆಗಳು ಆದರ್ಶರೂಪದವು. ದೇವತಾರ್ಚನೆ ಮುಗಿಯುವ ವೇಳೆಗೆ ಕಾದಿದ್ದು ನಮಸ್ಕಾರ ಮಾಡಿ ಮಂಗಳಾರತಿಗೆ ಕೈ ಮುಗಿದು ತೀರ್ಥಕ್ಕೆ ಕೈಹಿಡಿಯುವರು. ಮಕ್ಕಳಿಂದಲೂ ಹಾಗೆ ಮಾಡಿಸುವರು. ಆಕೆಯ ಅಡಿಗೆ ಅಮೃತಪ್ರಾಯವಾಗಿತ್ತು.

ಸಂಜೆ ನಾನು ಸ್ಕೂಲಿನಿಂದ ಹಿಂದಕ್ಕೆ ಬಂದ ಹೊತ್ತಿನಲ್ಲಿ ವೇದಮೂರ್ತಿ ಮಣಿಕುಂಡಲಂ ಸುಬ್ಬರಾಯಶಾಸ್ತ್ರಿಗಳವರಲ್ಲಿ–ಬಿಡುವಾಗಿದ್ದರೆ ಆಗ, ಅಥವಾ ಇನ್ನು ಕೊಂಚ ಹೊತ್ತಾದ ಮೇಲೆ–ಅರ್ಧ ಘಂಟೆಯ ಕಾಲ ಅಧ್ಯಯನ. ಅದಾದ ಮೇಲೆ ನನ್ನ ಸ್ವಂತ ವ್ಯಾಸಂಗವೆಂಬ ವ್ಯಾಸಂಗಾಭಾಸ.

ಸುಬ್ಬರಾಯಶಾಸ್ತ್ರಿಗಳು ವೇದಾಧ್ಯಯನ ಸಂಪನ್ನರು. ಸ್ನಿಗ್ಧಗಂಭೀರವಾದ ಕಂಠಧ್ವನಿಯಿಂದಲೂ ಅಕ್ಷರೋಚ್ಚಾರಣೆಯ ಸ್ಫುಟತೆಯಿಂದಲೂ ಸ್ವರವಿನ್ಯಾಸ ಶುದ್ಧಿಯಿಂದಲೂ ಅವರ ವೇದಗಾಯನವು ಕಿವಿಗೂ ಮನಸ್ಸಿಗೂ ಹಬ್ಬ. ಅವರ ಮಾತುಕಥೆಯೂ ಸ್ವಾರಸ್ಯತುಂಬಿದ್ದು.

ಆ ವರ್ಷದ ಕಡೆಕಡೆಯಲ್ಲಿ ನನಗೆ ಕೊಂಚ ಆರೋಗ್ಯ ತಪ್ಪಿತು. ಊರಿಗೆ ಬಂದು ಚೇತರಿಸಿಕೊಂಡೆ. ಮಾರನೆಯ ವರ್ಷ ಮೆಟ್ರಿಕ್ಯುಲೇಷನ್ ತರಗತಿ. ಹಾಸ್ಟೆಲ್ ವಾಸ.

ಎಂ. ರಾಮರಾಯರು

ಕೋಲಾರದಲ್ಲಿ ನಾನು ಓದುತ್ತಿದ್ದಾಗ ಹೈಸ್ಕೂಲು ಹಾಸ್ಟೆಲಿನಲ್ಲಿದ್ದೆ. ಆ ಕಾಲದಲ್ಲಿ ಕೋಲಾರದಲ್ಲಿ ಸೆಷನ್ಸ್ ಕೋರ್ಟು ಇರಲಿಲ್ಲ. ಆದರೆ ಸೆಷನ್ಸ್ ಮೊಕದ್ದಮೆಗಳನ್ನು ವಿಚಾರಣೆ ಮಾಡುವುದಕ್ಕಾಗಿ ವರ್ಷದಲ್ಲಿ ಎರಡು ಮೂರು ಬಾರಿ ಬೆಂಗಳೂರಿನ ಸೆಷನ್ಸ್ ಜಡ್ಜರು ಅಲ್ಲಿಗೆ ಬಂದು ಕೋರ್ಟು ನಡಸುತ್ತಿದ್ದರು. ಹೀಗೆ ಸೆಷನ್ಸ್ ಕೋರ್ಟು ಕೋಲಾರದಲ್ಲಿ ನಡೆಯುತ್ತಿದ್ದಾಗ ಆ ಕೋರ್ಟಿನಲ್ಲಿ ಸರ್ಕಾರದ ಪರವಾಗಿ ವಕಾಲತ್ತು ನಡಸಲು ಬೆಂಗಳೂರಿನಿಂದ ಪಬ್ಲಿಕ್ ಪ್ರಾಸಿಕ್ಯೂಟರ್ ಎಂ. ರಾಮರಾಯರವರು ಕೋಲಾರಕ್ಕೆ ದಯಮಾಡಿಸುತ್ತಿದ್ದರು. ಕೋಲಾರಕ್ಕೆ ಬಂದಾಗ ಅವರು ಅಲ್ಲಿಯ ಹಾಸ್ಟಲಿನಲ್ಲಿ ಬಿಡಾರಮಾಡುವುದು ವಾಡಿಕೆಯಾಗಿತ್ತು.

ರಾಮರಾಯರು ಆಗ್ಗೆ ವೃದ್ಧರಾಗಿದ್ದರು. ಅವರು ಆಕಾರದಲ್ಲಿ ಗಿಡ್ಡು. ಸೊಗಸಾದ ಹೊಂಬಣ್ಣ. ತಲೆ ತಾಮ್ರದ ತಂಬಿಗೆ. ಬಿಳಿ ಮೀಸೆ. ಕೈ ಕಾಲುಗಳಲ್ಲಿ ಚಾಕಚಕ್ಯ. ಅವರ ಮನಸ್ಸೂ ದೇಹವೂ ಒಂದು ಕ್ಷಣ ಸೋಮಾರಿಯಾಗಿದ್ದದ್ದಲ್ಲ.

ಅವರು ಪ್ರತಿದಿನವೂ ಸಂಜೆ ಕೋರ್ಟು ಮುಗಿದ ಬಳಿಕ ನನ್ನ ಕೊಠಡಿಗೆ ಬರುವರು. ನಾನು ಪ್ರಿಫೆಕ್ಟ್ (Prefect) ಎನ್ನಿಸಿಕೊಂಡಿದ್ದೆ. ಈ ಕಾರಣದಿಂದ ಅವರು ನನ್ನ ಕೊಠಡಿಯನ್ನು ಚುನಾಯಿಸಿದರು. ಬಂದು ಕುಳಿತು ಕುಶಲಪ್ರಶ್ನೆಯಾದ ಬಳಿಕ,

"ಏನು ಓದುತ್ತಿದ್ದಿ? ಜನರಲ್ ಲಿಟರೇಚರ್?" ಎಂದು ಕೇಳುವರು. ಉತ್ತರ ಹೇಳುವುದು ತಡವಾದರೆ ತಾವೇ ಕೆಲವು ಗ್ರಂಥಗಳನ್ನು ಶಿಫಾರಸು ಮಾಡುವರು. ಅಷ್ಟೇ ಅಲ್ಲದೆ "ಗ್ರಂಥವನ್ನು ಓದು, ನಾನು ಕೇಳುತ್ತೇನೆ" ಎನ್ನುವರು.

ಹೀಗೆ ಸಾಮಾನ್ಯವಾಗಿ ಪ್ರತಿ ದಿನವೂ ಯಾವುದಾದರೂ ಒಳ್ಳೆಯ ಗ್ರಂಥವನ್ನು ಒಂದಿಷ್ಟು ಓದಿಸುವರು. ಹೀಗೆ ಅವರು ಓದಿಸಿದ ಗ್ರಂಥಗಳಲ್ಲಿ ಒಂದೆರಡು ಜ್ಞಾಪಕದಲ್ಲಿವೆ. ಮೇರಿಯಾ ಎಡ್‌ವರ್ತ್ ಎಂಬಾಕೆಯ ಕಥೆಗಳು; "ವಿಕಾರ್ ಆಫ್ ವೇಕ್ ಫೀಲ್ಡ್" "ಗೋಲ್ಡನ್ ಡೀಡ್ಸ್" "ವೆಸ್ಟ್‌ವರ್ಡ್ ಹೋ." ನನಗೆ ಅನೇಕ ಪುಸ್ತಕಗಳ ಹೆಸರುಗಳೂ ಗ್ರಂಥಕರ್ತರ ಹೆಸರುಗಳೂ ಮರೆತು ಹೋಗಿವೆ. ಆದರೆ ರಾಮರಾಯರ ದಾಕ್ಷಿಣ್ಯದಿಂದ ಓದಿದ್ದೂ ಅವರು ನಡುನಡುವೆ ಅರ್ಥವಿವರಣೆ ಕೇಳುತ್ತಿದ್ದದ್ದೂ ಉಚ್ಚಾರಣೆಯನ್ನು

ತಿದ್ದುತ್ತಿದ್ದದ್ದೂ ನನಗೆ ಜ್ಞಾಪಕವಿದೆ. ಆ ಉಪಕಾರದ ಫಲವನ್ನು ವಿದ್ಯಾರ್ಥಿದಶೆ ಮುಗಿದ ಮೇಲೆ ಅನುಭವದಿಂದ ಕಂಡಿದ್ದೇನೆ. ಅವರದು ವಿದ್ಯಾರ್ಥಿಗಳ ವಿಷಯದಲ್ಲಿ ನೈಜವಾದ ಪ್ರೀತಿ: ಕಾರ್ಯತತ್ಪರವಾದ ಪ್ರೀತಿ.

ಕಾಮನ ಹಬ್ಬ

ಒಂದು ಸಾರಿ ಕಾಮನಹಬ್ಬ ಬಂತು. ವಿದ್ಯಾರ್ಥಿಗಳಾದ ನಾವು ಸಂಭ್ರಮದಿಂದ ರಾಮರಾಯರಲ್ಲಿಗೆ ಹೋಗಿ ಚಂದಾ ಬೇಡಿದೆವು. ಅವರು–

"ಇಲ್ಲ, ಬಿಲ್‌ಕುಲ್ ಆಗುವುದಿಲ್ಲ" ಎಂದರು. ನಾವು "ಈ ಮುದುಕ ಪರಮಲೋಭಿ" ಎಂದು ಹಳಿದೆವು. ಆಮೇಲೆ ಎಂಟು ಹತ್ತು ದಿವಸಕ್ಕೆ ಸೆಷನ್ಸ್ ಕೆಲಸ ಮುಗಿಯಿತು. ರಾಮರಾಯರು ಕೋಲಾರ ಬಿಡುವ ದಿನಕ್ಕೆ ಹಿಂದಿನ ದಿವಸ ಎಲ್ಲ ವಿದ್ಯಾರ್ಥಿಗಳಿಗೂ ಚಿರೋಟಿ ಔತಣ ಮಾಡಿಸಿದರು. ಆ ಹೊತ್ತು ಹೇಳಿದರು:

"ವಿದ್ಯಾರ್ಥಿಗಳು ಕಾಮವಿಚಾರದಲ್ಲಿ ಪ್ರವೇಶ ಮಾಡುವುದು ನನಗಿಷ್ಟವಿಲ್ಲ. ಬೇರೆಜನ ಅದನ್ನು ಮಾಡಿಕೊಳ್ಳಲಿ, ನೀವು ಚೆನ್ನಾಗಿ ಓದಬೇಕು. ಚೆನ್ನಾಗಿ ಊಟ ಮಾಡಬೇಕು. ಚೆನ್ನಾಗಿ ವ್ಯಾಯಾಮ ಮಾಡಬೇಕು. ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ."

ಉಲ್ಲಾಸ

ನಾನು ಬೆಂಗಳೂರಿಗೆ ಬಂದ ಮೇಲೆ ರಾಮರಾಯರನ್ನು ಪ್ರಾಯಶಃ ಎರಡು ದಿನಕ್ಕೊಂದು ಸಲವಾದರೂ ನೋಡುತ್ತಿದ್ದೆ. ಹಿಂದಿನಂತೆಯೇ ಚಟುವಟಿಕೆ. ಬೆಳಗ್ಗೆ ೭ ರಿಂದ ೧೧ ಘಂಟೆಯವರೆಗೆ ವಾಕಿಂಗ್ ಹೋಗುವರು. ಕೈಯಲ್ಲಿ ಒಂದು ವಸ್ತ್ರ ಹಿಡಿದು ಮಾರ್ಕೆಟ್ಟಿಗೆ ಹೋಗಿ ತಮಗೆ ಇಷ್ಟವಾದ ತರಕಾರಿ ಕೊಂಡು ಮನೆಗೆ ಕೊಟ್ಟು ಮತ್ತೆ ವಾಕಿಂಗ್ ಹೋಗುವರು. ನಾನು ಮಾತನಾಡಿಸಿದಾಗ ನಗುಮುಖದಿಂದ ಜವಾಬು ಹೇಳಿ ಹಿಂದಿನ ನೆನಪುಗಳ ಮಾತೆತ್ತುವರು. ಆದರೆ ಮಾತು ತುಂಬ ಮಿತ. ಎಷ್ಟು ಪ್ರಕೃತವೋ ಅಷ್ಟೇ ಮಾತು.

ಅವರನ್ನು ನೆನಸಿಕೊಂಡರೆ ನನಗೆ ಈಗಲೂ ಸಂತೋಷವಾಗುತ್ತದೆ. ಕಾರಣವೇನೆಂದರೆ ಅವರು ಸಂತೋಷದ ಮೂರ್ತಿ ಎಂಬುದು. ಮುಪ್ಪಿನಲ್ಲಿಯೂ ಅಷ್ಟೇನೂ ಐಶ್ವರ್ಯ ಇಲ್ಲದಿದ್ದರೂ ಜೀವನ ವಿಷಯದಲ್ಲಿ ಅವರು ಬೇಸರ ತಂದುಕೊಂಡಿರಲಿಲ್ಲ. ಒಳ್ಳೆಯ ಕಾಯಿಪಲ್ಯ, ಹೊಸಹೊಸ ಸೊಪ್ಪು ಇಂಥಾದ್ದರಲ್ಲಿ ಸಂತೋಷ ಕಂಡಿದ್ದವರು. ದೇವರು ಕೊಟ್ಟದ್ದನ್ನು ಅದು ಸಿಹಿ ಪ್ರಸಾದವೆಂದು ಸ್ವೀಕರಿಸಿ ತಾವೂ ಉಲ್ಲಾಸಪಟ್ಟು ಇತರರನ್ನೂ ಉಲ್ಲಾಸಪಡಿಸುತ್ತಿದ್ದರು.

***

ಈ ಕಾಲದ ಸುಮಾರಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಪ್ರಸಿದ್ಧರಾಗಿದ್ದ ವ್ಯಕ್ತಿಗಳು ಇಬ್ಬರು. ಒಬ್ಬರು ಬೇತಮಂಗಲದ ಕದಿರಪ್ಪನವರು. ಇನ್ನೊಬ್ಬರು ಸುಣ್ಣಕಲ್ಲು ಅಬ್ದುಲ್ಲಾ ಸಾಹೇಬರು.

ಕದಿರಪ್ಪ

ಬೇತಮಂಗಲ ಹೆಸರುವಾಸಿಯಾದ ಊರು. ಅಲ್ಲಿಯ ಕೋಟೆಯ ಗಣಪತಿ ಮಹಾ ಪ್ರಭಾವಶಾಲಿ.

ಬೇತಮಂಗಲ ಕೋಟ ಸಿದ್ಧಿವಿನಾಯಕಾ
ಫಲಸಮರ್ಪಿತ ನೇತಿವತ್ತುಲು ಆರತೆತ್ತುದು
ವೇಗಮೇ ಕರುಣಿಂಚಿ ಬ್ರೋವುರ ಬೇತಮಂಗಲ....

***

ರಕ್ಷಿಂಚರೋರಿ ಗಣನಾಯಕಾ
ಮಮು ರಕ್ಷಿಂಚರೋರಿ ಗಣನಾಯಕಾ
ಅರಟಿಪಂಡು ತೆಂಕಾಯಲು ವಡಪಪು
ಚರುಕು ಪಿಚ್ಚಲು ತಿನಿ ಚಲರೇಗಿನಾ ಸಾಮಿ
ಭಕ್ಷಿಂಚರೋರಿ ಗಣನಾಯಕಾ
ಮಮು ರಕ್ಷಿಂಚರೋರಿ ಗಣನಾಯಕಾ.

ಇಂಥ ಬೇತಮಂಗಲದಲ್ಲಿ ಕದಿರಪ್ಪನೆಂಬವರು ಪಟೇಲರು. ಅವರು ಯಾವ ಗ್ರಾಮದ ಪಟೇಲರೋ ನಾನು ಕಾಣೆ. ಮಹಾಧೈರ್ಯವಂತರೆಂದು ಹೆಸರು. ಅವರಿಗೂ ಆಗ ಡೆಪ್ಯುಟಿ ಕಮಿಷನರಾಗಿದ್ದ ಸಿ. ಮಾದಯ್ಯನವರಿಗೂ ತಕರಾರು. ಈ ತಕರಾರು ಬಹುಕಾಲ ನಡೆಯಿತು. ಇದರಲ್ಲಿ ಜನಕ್ಕೆ ಮೆಚ್ಚಿಕೆಯಾದದ್ದು ಕದಿರಪ್ಪನವರು ಸರಕಾರಕ್ಕೆ ಕೊಡುತ್ತಿದ್ದ ದಿಗಲ್ ಜವಾಬ್ ಸವಾಲುಗಳು. ಡೆಪ್ಯುಟಿ ಕಮಿಷನರ ಆಫೀಸಿನಿಂದ ಯಾವ ಪ್ರಶ್ನೆ ಬಂದರೂ ಅದರ ಮುಖ ತಿವಿಯುವ ಹಾಗೆ ಕದಿರಪ್ಪನವರ ಮರು ಪ್ರಶ್ನೆ.

ಮಾ: “ನಿಮ್ಮನ್ನು ಸಸ್ಪೆಂಡ್ ಮಾಡಲಾದೀತು.”

ಕ: “ನಿಮ್ಮನ್ನು ಈ ಲೋಕದಿಂದಲೇ ಸಸ್ಪೆಂಡ್ ಮಾಡಲಾದೀತು.”

ಹೀಗೆ ವಾಗ್ವಾದ ನಡೆಯುತ್ತಿದ್ದದ್ದು ಜನಕ್ಕೊಂದು ವಿನೋದವಾಗಿತ್ತು.

ಕದಿರಪ್ಪನವರು ಸ್ವರ್ಣಕಾರ ಜಾತಿಯವರೆಂದು ಕೇಳಿದ್ದೇನೆ. ಕೆಲಮಂದಿ ಅವರನ್ನು ಕದರಿಗಾಡು ಎಂದು ಕರೆಯುತ್ತಿದ್ದದ್ದನ್ನು ಕೇಳಿದ್ದೇನೆ. “ಈ ಕದರಿಗಾಡು, ಆ ಮಾದಗಾಡು” ಎಂದು ಆತನೇ ಹೇಳುತ್ತಿದ್ದನಂತೆ. ನಮ್ಮ ಜನಪ್ರಮುಖರಲ್ಲಿ ಇಂಥಾದ್ದೂ ಒಂದು ಬಗೆ ಇತ್ತು. ಈಗಲೂ ಅದಿದೆ.

ಒಂದು ಮೊಕದ್ದಮೆ

ಸುಣ್ಣಕಲ್ಲು ಅಬ್ದುಲ್ಲಾ ಸಾಹೇಬರು ಶ್ರೀನಿವಾಸಪುರ ಪ್ರಾಂತದವರು. ಅವರ ಮೇಲೆ ನಾಲ್ಕೋ ಐದೋ ಖೂನಿ ಆಪಾದನೆಗಳಿದ್ದವಂತೆ. ಅಬ್ದುಲ್ಲಾ ಎಂದರೆ ಪೋಲೀಸರಿಗೆ ಸಿಂಹಸ್ವಪ್ನ. ಆತನ ಮೇಲೆ ಬಂದಿದ್ದ ಒಂದಾನೊಂದು ಮೊಕದ್ದಮೆಯ ವಿಚಾರಣೆ ಕೋಲಾರದ ಸೆಷನ್ಸ್‌ನಲ್ಲಿ ನಡೆಯಿತು. ಆಗ ಸೆಷನ್ಸ್ ಜಡ್ಜಿ ಎಸ್. ಸುಬ್ಬರಾಮ ಅಯ್ಯರ್. ಪ್ರಾಸಿಕ್ಯೂಟ್ ಮಾಡಿದವರು ಮೇಲೆ ಹೇಳಿದ ಎಂ. ರಾಮರಾಯರು. ವಿಚಾರಣೆ ಮುಗಿದು ತೀರ್ಮಾನ ಹೇಳುವ ದಿವಸ ಊರೆಲ್ಲ ಗುಲ್ಲೋ ಗುಲ್ಲು. ಜನ ಕೋರ್ಟಿನ ಸುತ್ತ ಮುತ್ತೂರ ನೆರೆದಿತ್ತು. ಜಡ್ಜರು ೧೧ ಘಂಟೆಗೆ ಸರಿಯಾಗಿ ಕೋರ್ಟಿಗೆ ಬಂದು ತಮ್ಮ ತೀರ್ಮಾನ ಹೇಳಿ ಆಪಾದಿತನಿಗೆ ಮರಣದಂಡನೆಯನ್ನು ವಿಧಿಸಿದರು. ಆ ಮಾತು ಹೇಳಿ ಮುಗಿದ ಕೂಡಲೆ ಸಾರೋಟಿನಲ್ಲಿ ಕುಳಿತು ಬೌರಿಂಗ್‌ಪೇಟೆಗೆ ಪ್ರಯಾಣ ಬೆಳಸಿದರು. ಸೆಷನ್ಸ್ ಜಡ್ಜರು ಹೀಗೆ ನಾಟಕೀಯವಾಗಿ ನಡವಳಿಕೆ ನಡೆದದ್ದನ್ನು ಕುರಿತು ಜನ ಮೆಚ್ಚಿಕೆ ತೋರಿಸಿದರು.

೨೨

ಹೆಡ್‌ಮಾಸ್ಟರ್ ಮಲ್ಹಾರಿರಾಯರು

ಮಲ್ಹಾರಿರಾಯರವರು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಗಣಿತಶಾಸ್ತ್ರ (Mathematics) ಬೋಧಕರಾಗಿದ್ದು ಹೆಸರುವಾಸಿಯಾದವರು. ಆ ಕಾಲದಲ್ಲಿ ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದು (ಪ್ರೊಮೋಷನ್) ಬಡ್ತಿಗೆ ಅವಕಾಶವಿಲ್ಲದಿದ್ದ ವಿದ್ವಾಂಸರನ್ನು ವಿದ್ಯಾಭ್ಯಾಸದ ಇಲಾಖೆಗೆ ಹೈಸ್ಕೂಲು ಹೆಡ್‌ಮಾಸ್ಟರಾಗಿಯೋ ಇನ್‌ಸ್ಪೆಕ್ಟರಾಗಿಯೋ ವರ್ಗಾಯಿಸಿ ಈ ಹೊಸ ಹುದ್ದೆಯಲ್ಲಿ ಬಡ್ತಿ ದೊರೆಯುವಂತೆ ಮಾಡುತ್ತಿದ್ದರು. ಹಾಗೆ ಕೋಲಾರಕ್ಕೆ ಹೈಸ್ಕೂಲು ಹೆಡ್‌ಮಾಸ್ಟರಾಗಿ ಬಂದವರು ಮಲ್ಹಾರಿರಾಯರು.

ಮಲ್ಹಾರಿರಾಯರು ತಂಜಾವೂರು ಕಡೆಯ ದೇಶಸ್ಥ ಬ್ರಾಹ್ಮಣರು. ಸಾತ್ವಿಕರು ಮತ್ತು ಸರಳರು.

ಇಂಗ್ಲಿಷ್ ಬೋಧನೆ

ಅವರು ಹೈಸ್ಕೂಲಿನಲ್ಲಿ ಪಾಠ ಹೇಳುತ್ತಿದ್ದುದು ಇಂಗ್ಲಿಷ್ ಸಾಹಿತ್ಯದ ಒಂದು ಭಾಗವನ್ನು. ಅವರ ಮುಖ್ಯಶಾಸ್ತ್ರ ಗಣಿತವಾದರೂ ಇಂಗ್ಲಿಷ್ ಸಾಹಿತ್ಯದಲ್ಲಿಯೂ ಅವರು ಕೃತಪರಿಶ್ರಮರಾಗಿದ್ದರು. ಅವರ ಪಾಠಕ್ರಮ ಆಗ ರೂಢಿಯಲ್ಲಿ ಸಾಮಾನ್ಯವಾಗಿದ್ದದ್ದು. ವಿದ್ಯಾರ್ಥಿ ಪಾಠವಾಕ್ಯಗಳನ್ನು ಕ್ಲಾಸಿನಲ್ಲಿ ನಿಂತು ಓದಬೇಕು. ಪದಗಳ ಉಚ್ಚಾರಣೆ; ಪಾದ ವಿರಾಮ, ಅರ್ಧ ವಿರಾಮ ಪೂರ್ಣವಿರಾಮ ಚಿಹ್ನೆಗಳ ಸ್ಥಾನದಲ್ಲಿ ವಿರಾಮ ಸೂಚಿಸುವುದು, ಧ್ವನಿಯ ಏರಿಳಿತಗಳು ಇದನ್ನೆಲ್ಲ ತನ್ನ ಓದಿನಲ್ಲಿ ತೋರಿಸಬೇಕು. ಇದಾದನಂತರ ಶಬ್ದಾರ್ಥ. ಆಮೇಲೆ ಪ್ರಯೋಗ ವಿಶೇಷ. ಇದನ್ನೆ ಮಲ್ಹಾರಿರಾಯರು ಅನೂಚಾನವಾಗಿ ನಡಸಿಕೊಂಡು ಬಂದರು. ಆದರೆ ಅವರ ಪಾಠ ಯಂತ್ರವತ್ತಾಗಿ ರಸಶೂನ್ಯವಾಗಿ ನಡೆಯಿತೆಂದು ತಿಳಿಯತಕ್ಕದ್ದಲ್ಲ. ಅವರು ಪಾಠವಿವರಣೆಯಲ್ಲಿ ಉಪಕಥೆಗಳನ್ನೂ ಉದಾಹರಣೆಗಳನ್ನೂ ಕೊಟ್ಟು ಪಾಠಕ್ಕೆ ಕಳೆಯೇರಿಸುತ್ತಿದ್ದರು. ವಿದ್ಯಾರ್ಥಿ ಏನಾದರೂ ತಪ್ಪು ಹೇಳಿದರೆ,

“ಏನು ಓದು ಬದನೆಕಾಯಿ!”

ಎನ್ನುವರು. ಇದೊಂದೇ ಅವರಿಗೆ ಬರುತ್ತಿದ್ದ ಬೈಗುಳದ ಮಾತೆಂದು ತೋರುತ್ತದೆ. ಯಾರ ಮೇಲೆ ಕೋಪ ಬಂದರೂ “ಬದನೆಕಾಯಿ” ಎನ್ನುವರು. ಇದು ನಮಗೆಲ್ಲ ಒಂದು ವಿನೋದ.

ಒಟ್ಟಿನಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಮಲ್ಹಾರಿರಾಯರಲ್ಲಿ ಗೌರವ–ಅವರು ಒಳ್ಳೆಯವರೆಂದು ಮತ್ತು ದೊಡ್ಡತನ ಅವರಲ್ಲಿತ್ತೆಂದು.

ಅವರಿಗೆ ಜೀರ್ಣಶಕ್ತಿ ಕೊಂಚ ಕಡಮೆಯೆಂದು ನಮಗನ್ನಿಸಿತು. ಸಂಜೆ ಮೋಡವಾಗಿದ್ದಾಗ ಅವರು ಹೈಸ್ಕೂಲು ವರಾಂಡದಲ್ಲಿ ಒಬ್ಬರೇ ಶತಪಥ ತುಳಿಯುವರು. ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ. ನಮ್ಮಲ್ಲಿ ಯಾರೋ ಅದನ್ನು ನೋಡಿ “ಬೋನಿನಲ್ಲಿ ಹುಲಿ ಓಡಾಡುವ ಹಾಗೆ” ಎಂದರು. ಇನ್ನೊಬ್ಬರು “ಬೋನೇನೋ ಸರಿ ಆದರೆ ಅದು ಹುಲಿಯಲ್ಲ, ದನ” ಎಂದರು.

ಈಗ ಒಂದು ಪ್ರಸಂಗ.

ನಾನು ವಾಸವಾಗಿದ್ದದ್ದು ಹೈಸ್ಕೂಲು ಹಾಸ್ಟಲಿನಲ್ಲಿ. ಆ ಹಾಸ್ಟಲಿನಲ್ಲಿ ಎರಡು ವಿಭಾಗ. ಒಂದರಲ್ಲಿ ಹೈಸ್ಕೂಲು ವಿದ್ಯಾರ್ಥಿಗಳು, ಇನ್ನೊಂದರಲ್ಲಿ ನಾರ್ಮಲ್ ಹೈಸ್ಕೂಲು ವಿದ್ಯಾರ್ಥಿಗಳು. ಆ ಎರಡು ಭಾಗಗಳಿಗೂ ಯಾವಾಗಲೂ ಪೈಪೋಟಿ. ನಾವು ವಯಸ್ಸಿನಲ್ಲಿ ಚಿಕ್ಕವರು. ಸಂಸಾರದ ಬಂದನಕ್ಕೆ ಸಿಕ್ಕಿಕೊಳ್ಳದವರು. ನಾರ್ಮಲ್ ಸ್ಕೂಲಿನವರು ಮೇಷ್ಟರುಗಿರಿಯಲ್ಲಿದ್ದವರು, ವಯಸ್ಸಾದವರು, ಸಂಸಾರಕ್ಕೆ ಗಂಟುಬಿದ್ದವರು. ಈ ಎರಡು ವರ್ಗಗಳಿಗೂ ಇದ್ದ ವೈಷಮ್ಯ ಆಗಾಗ ಹೊರಬೀಳುತ್ತಿತ್ತು.

ಆಗ ನೀರು ಕುಡಿಯುವುದಕ್ಕಾಗಿ ಹಿತ್ತಾಳೆ ತಗಡಿನ ಲೋಟಾ ಬಟ್ಟಲುಗಳನ್ನಿಟ್ಟಿದ್ದರು. ಹೈಸ್ಕೂಲಿನವರಾದ ನಾವು ಊಟವಾಗಿ ಹೊರಗೆ ಬಂದ ಮೇಲೆ ಹಿತ್ತಾಳೆಯ ಲೋಟಗಳನ್ನು ಹಿಡಿದುಕೊಂಡು ಬಂದು “ಕ್ಯಾಚ್” ಆಟ ಆಡುತ್ತಿದ್ದೆವು. ಈ ಅವಾಂತರದಲ್ಲಿ ಕೆಲವು ಲೋಟಗಳು ನೆಗ್ಗಿ ಹೋಗುತ್ತಿದ್ದವು. ಇನ್ನು ಕೆಲವು ನಾರ್ಮಲ್ ಸ್ಕೂಲ್ ಮೇಷ್ಟರುಗಳ ತಲೆಯ ಮೇಲೆ ಬೀಳುತ್ತಿದ್ದವು. ನಾವು ದುಷ್ಟರೆಂದು ಅವರ ಪುಕಾರು.

ಹಾಸ್ಟಲಿನಲ್ಲಿ ಅಡಿಗೆ ಮಾಡುತ್ತಿದ್ದವರು ದೇವರಾಯಸಮುದ್ರದವರು, ವೆಂಕಟರಾಮಯ್ಯರ್ ಮೊದಲಾದವರು. ಅವರಿಗೆ ನಾನು ಸಮೀಪಗ್ರಾಮದವನಾದ್ದರಿಂದಲೂ ಅವರು ನನ್ನ ತಾತಂದಿರ ಪ್ರಸಿದ್ಧಿಯನ್ನು ಕೇಳಿದ್ದವರಾದ್ದರಿಂದಲೂ ಅವರಿಗೂ ನನಗೂ ಸಲಿಗೆ. ಅಷ್ಟೇ ಅಲ್ಲದೆ ನಾನು ಹಾಸ್ಟಲಿನ ಹೈಸ್ಕೂಲು ವಿಭಾಗಕ್ಕೆ "ಪ್ರಿಫೆಕ್ಟ್" (perfect) ಎನ್ನಿಸಿಕೊಂಡಿದ್ದೆ. ಅಡಿಗೆಯವರು ೧೦ ಘಂಟೆಗೆ ಬಡಿಸಿ ವಿದ್ಯಾರ್ಥಿಗಳ ಊಟ ಮುಗಿದ ಮೇಲೆ ನಮ್ಮ ರಾತ್ರಿಯ ಊಟಕ್ಕೆಂದು ಕೊಬ್ಬರಿ ಚಟ್ನಿಯನ್ನು ಒರಲಿನಲ್ಲಿ ತಿರುಪಿ ಆ ದೊಡ್ಡ ಚಟ್ನಿ ಮುದ್ದೆಯನ್ನು ಒರಲುಕಲ್ಲಿನ ಪಕ್ಕದಲ್ಲಿಟ್ಟು ಮೇಲೆ ಒಂದು ಡಬರಿಯನ್ನು ಬೋರಲು ಹಾಕಿ ಹೊರಟು ಹೋಗುತ್ತಿದ್ದರು. ಹೈಸ್ಕೂಲಿನ ನಾವು ಎರಡು ಘಂಟೆಗೆ ವಾಪಸು ಬಂದು ಅಡಿಗೆಮನೆಯ ಬಾಗಿಲನ್ನು ತೆಗೆದು ಆ ಚಟ್ನಿಯನ್ನು ತಿಂದು ಮುಗಿಸಿ ಬಿಡುತ್ತಿದ್ದೆವು. ಸಂಜೆ ೫ ಘಂಟೆಗೆ ಅಡಿಗೆಯವರು ಬಂದು ರಾತ್ರಿ ಅಡಿಗೆಯ ಕೆಲಸವನ್ನು ಮುಗಿಸಿ ಬಡಿಸುವ ಹೊತ್ತಿನಲ್ಲಿ ಸಿದ್ಧ ಮಾಡಿಟ್ಟಿದ್ದ ಚಟ್ನಿಯನ್ನು ತೆಗೆದುಕೊಳ್ಳಲು ಹೋಗುವರು. "ಏನಾಯಿತು ಅಲ್ಲಿದ್ದ ಚಟ್ನಿಯ ಮುದ್ದೆ?" "ನಾನೇನು ಕಂಡೆ! ಚಟ್ನಿ ಅಲ್ಲಿತ್ತೇನು? ಅಲ್ಲಿ ಯಾಕೆ ಇಟ್ಟಿರಿ?" ಇತ್ಯಾದಿ. ಹೀಗೆ ಅಡಿಗೆಯವರಿಗೂ ನಮಗೂ ತಕರಾರು.

ಉಯ್ಯಾಲೆ

ಇದು ಸಾಲದೋ ಎಂಬಂತೆ ಇನ್ನೊಂದು ಪುಂಡಾಟದ ಆರೋಪಣೆ. ಕೋಲಾರದಲ್ಲಿ ನೀರಿನ ಕಷ್ಟ ಆಗ. ಆದದ್ದರಿಂದ ಕುಡಿಯುವ ನೀರನ್ನು ಕೆರೆಯಂಗಳದ ಬಾವಿಯಿಂದ ಸೇದಿ ತರುವುದಕ್ಕಾಗಿ ಹಾಸ್ಟಲಿನಲ್ಲಿ ದಪ್ಪವಾದ ತೆಂಗಿನ ನಾರಿನ ಹಗ್ಗಗಳನ್ನಿಟ್ಟಿದ್ದರು. ಆದರೆ ಹಾಸ್ಟಲಿನ ಹಿಂಭಾಗದಲ್ಲಿ ದೊಡ್ಡ ಗಂಗರೇಣಿ ಮರಗಳೂ ಹುಣಿಸೆಮರಗಳೂ ಇದ್ದವು. ನಾವು ಆ ಹಗ್ಗಗಳನ್ನು ಈ ಮರಗಳ ರೆಂಬೆಗೆ ಕಟ್ಟಿ ಉಯ್ಯಾಲೆ ಆಡುತ್ತಿದ್ದದ್ದುಂಟು. ಅಡಿಗೆಯವರು ಕೂಗಿಕೊಳ್ಳುತ್ತಿದ್ದರು. ನಾವು ಇನ್ನೂ ಗಟ್ಟಿಯಾಗಿ ಕೂಗುವೆವು.

ಕಡೆಗೆ ಒಂದು ದಿನ ಆ ಹಗ್ಗಗಳು ಮೂರು ನಾಲ್ಕು ತುಣುಕುಗಳಾಗಿ ನೀರುತರಲಾಗದೆ ಹೋಯಿತು. ಆಗ ಹೆಡ್‌ಮಾಸ್ತರ್ ಮಲ್ಹಾರಿರಾಯರಲ್ಲಿ ತಕರಾರು. ಅವರೇ ಹಾಸ್ಟಲಿನ ಅಧ್ಯಕ್ಷರು. ಇದಕ್ಕೆ ಹಿಂದೆ ಹೈಸ್ಕೂಲು ವಿದ್ಯಾರ್ಥಿಗಳು ಮಲ್ಹಾರಿರಾಯರಲ್ಲಿ ತಮ್ಮ ಊಟದ ಪರಿತವಣೆಯನ್ನು ಕುರಿತು ನಾಲ್ಕಾರು ಬಾರಿ ದೂರು ಹೇಳಿದ್ದರು. “ಈ ಹೊತ್ತು ಅಕ್ಕಿ ಬೆಂದೇ ಇರಲಿಲ್ಲ.” “ತುಪ್ಪ ಗಷ್ಟುವಾಸನೆ. ಕೊಳಕು ತರಕಾರಿ.” ಮಲ್ಹಾರಿರಾಯರು “ಏನು ತಿನ್ನುತ್ತೀರೋ ನೀವು ಹುಡುಗರು? ದಿನಾಗಲೂ ಹೇಳುತ್ತಲೇ ಇದ್ದೀರಲ್ಲ?”

“ನಮಗೆ ಹೊಟ್ಟೆ ಹಾಗಿದೆ ಸಾರ್!”

“ಅಲ್ಲವೋ–ನಾನು...”

“ನಮಗೆ ದೇವರು ಕೊಟ್ಟಿದ್ದಾನೆ ಸಾರ್ ಹೊಟ್ಟೇನ. ಊಟಕ್ಕೆ ಕೊಡಲಿಲ್ಲ. ನಿಮಗೆ ದೇವರು ಊಟಕ್ಕೆ ಕೊಟ್ಟಿದ್ದಾನೆ, ಹೊಟ್ಟೆ ಕೊಡಲಿಲ್ಲ. ಅದಕ್ಕೇ ವರಾಂಡದಲ್ಲಿ ತಿರುಗಾಡುತ್ತೀರಿ.”

ಇದನ್ನು ಕೇಳಿ ಮಲ್ಹಾರಿರಾಯರಿಗೆ ಕೋಪ ಬಂತೋ ವಿನೋದವಾಯಿತೋ ನಮಗೆ ತಿಳಿಯಲಿಲ್ಲ. ಅವರೇನೋ ನಗುತ್ತಲೇ ಇದ್ದರು.

ವಿಚಾರಣೆ

ಮೇಲಿನ ಹಗ್ಗದ ಪ್ರಸಂಗ ಬಂದ ಮೇಲೆ ಅದು ದುಷ್ಟತನವೆಂದು ಅವರು ತೀರ್ಮಾನಿಸಿಕೊಂಡು ಒಂದು ದಿನ ವಿಚಾರಣೆ ನಡಸತಕ್ಕದ್ದೆಂದು ಗೊತ್ತು ಮಾಡಿದರು. ಅಂದು ಸಂಜೆ ಗುಂಪು ಸೇರಿತು. ಹೈಸ್ಕೂಲು ವಿಭಾಗದವರು, ನಾರ್ಮಲ್ ಸ್ಕೂಲ್ ವಿಭಾಗದವರು. ಅಡಿಗೆಯವರು, ಆಳುಗಳು, ನಾರ್ಮಲ್ ಸ್ಕೂಲಿನವರೂ ಅಡಿಗೆಯವರೂ ನಮ್ಮ ಮೇಲೆ ವಿಷ ಕಾರಿದರು. ಆಳುಗಳು ಮುಸಿಮುಸಿ ನಗುತ್ತಾ ಒಬ್ಬರ ಮುಖ ಒಬ್ಬರು ನೋಡಿಕೊಳ್ಳುತ್ತಿದ್ದರು.

ಮಲ್ಹಾರಿರಾಯರು ಎಲ್ಲವನ್ನೂ ತಾಳ್ಮೆಯಿಂದ ಕೇಳಿದರು. ನಡುನಡುವೆ ತಾವೇ ಪ್ರಶ್ನೆಕೇಳಿ ವಿವರಗಳನ್ನು ತಿಳಿದುಕೊಂಡರು. ಅವರ ತೀರ್ಮಾನ ಹೀಗೆ: “ಹೈಸ್ಕೂಲು ವಿಭಾಗದ ಕೆಲ ಮಂದಿ ವಿದ್ಯಾರ್ಥಿಗಳು ತುಂಟಾಟ ನಡೆಸಿದ್ದಾರೆ. ಅವರಿಗೆ ಎರಡೆರಡು ರೂಪಾಯಿ ಜುಲ್ಮಾನೆ. ಆ ಹಣದಿಂದ ಹಗ್ಗವನ್ನು ಕೊಂಡುಕೊಳ್ಳತಕ್ಕದ್ದು.”

‘ರಿಯಾಯತಿ’

ನಾನು ಪ್ರಿಫೆಕ್ಟು. ನಮ್ಮ ಮೇಲೆ ಬಂದ ದಂಡನೆಗಾಗಿ ನಾನು ಜವಾಬು ಹೇಳಬೇಕಾಯಿತು.

ನಾನು: “ಸಾರ್, ನಿಜವಾಗಿ ನಾವು ತಪ್ಪು ಮಾಡಿದವರಲ್ಲ. ನೀವೇನೋ ತೀರ್ಮಾನ ಕೊಟ್ಟಿರಿ. ಅದರ ಮೇಲೆ ನಮ್ಮ ಮಾತಿಲ್ಲ. ಆದರೆ ಒಂದು ರಿಯಾಯಿತಿ ಕೇಳುತ್ತೇವೆ.”

ಮ: “ಏನದು?”

ನಾನು: “ನಮ್ಮ ಹೆಸರುಗಳನ್ನು ನೋಟೀಸ್ ಬೋರ್ಡಿನಲ್ಲಿ ಹಾಕಿಸಬೇಕು.”

ಮ: “ಅಯ್ಯೋ ಹುಚ್ಚ! ಎಲ್ಲಾದರೂ ಉಂಟೆ ಹೀಗೆ ಕೇಳುವುದು? ಅವಮಾನವಲ್ಲವೇನೋ?”

ನಾನು: “ನಿಜವಾಗಿ ಮಾಡಿದ್ದರೆ ತಾನೆ ಸಾರ್ ನಮಗೆ ಅವಮಾನ? We are martyrs.”

ಮಲ್ಹಾರಿರಾಯರು ಆ ಹೊತ್ತು ನಕ್ಕಷ್ಟು ಎಂದೂ ನಕ್ಕಿರಲಾರರು. ನನ್ನ ಕೋರಿಕೆಯನ್ನು ನಡಸಿದರು.

ಹದಿನೈದಿಪ್ಪತ್ತು ವರ್ಷ ಕಳೆದ ಮೇಲೆ ಸಹ ಜುಲ್ಮಾನೆಯ ನೋಟೀಸು ನೋಟೀಸ್ ಬೋರ್ಡಿನ ಮೇಲಿದ್ದದ್ದನ್ನು ನಾನೇ ನೋಡಿದೆ.

ಮಲ್ಹಾರಿರಾಯರು ತುಂಬ ಒಳ್ಳೆಯವರು. ವಿದ್ಯಾರ್ಥಿಗಳಲ್ಲಿ ನೈಜ ವಾತ್ಸಲ್ಯವಿದ್ದವರು.

೨೪

ಮಸಿಕುಡಿಕೆ ಜೀವನ

ಹೈಸ್ಕೂಲು ತರಗತಿಯಲ್ಲಿ ನನಗೆ ಪಾಠ ಹೇಳಿದವರಲ್ಲದಿದ್ದರೂ ನನ್ನ ಕೃತಜ್ಞತೆಗೆ ಪಾತ್ರರಾದ ಕೋಲಾರ ಹೈಸ್ಕೂಲಿನ ಇನ್ನೊಬ್ಬ ಮೇಷ್ಟರು ಗೋಪಾಲಕೃಷ್ಣರಾಯರು. ಇವರು ಹಾಸ್ಟಲಿನ ವಾರ್ಡನರಾಗಿದ್ದರು. ಹಾಗೆ ಇವರಿಗೂ ನನಗೂ ಪರಿಚಯ.

ಗೋಪಾಲಕೃಷ್ಣರಾಯರು ಕೋಲಾರದಲ್ಲಿದ್ದ ಅಮೆರಿಕನ್ ಮಿಷನ್ನಿನಲ್ಲಿ ಕೆಲಮಂದಿ ಅಮೆರಿಕನ್ನರಿಗೆ ಕನ್ನಡ ಕಲಿಸುತ್ತಿದ್ದರಂತೆ. ಹಾಗೆ ಅವರಲ್ಲಿ ಗೋಪಾಲಕೃಷ್ಣರಾಯರ ಮಾತಿಗೆ ಬೆಲೆ. ನನಗೆ ದ್ರವ್ಯಾನುಕೂಲವಿಲ್ಲವೆಂಬುದು ಗೋಪಾಲಕೃಷ್ಣರಾಯರಿಗೆ ಹೇಗೋ ತಿಳಿದುಬಂದಿತ್ತು. ನಾನು ಹಾಸ್ಟಲ್ ಫೀಜು ಕೊಡುವುದರಲ್ಲಿ ಆಗಾಗ ತಡವಾಗುತ್ತಿತ್ತು. ಇದರಿಂದ ಅವರು ಊಹಿಸಿರಬಹುದು.

ಮಶಿ ಜೀವನ

ಒಂದು ದಿನ ಅವರು ನನ್ನನ್ನು ಕರೆದು ಒಂದು ಪತ್ರಿಕೆಯನ್ನು ನನ್ನ ಕೈಗೆ ಕೊಟ್ಟು "ಅದನ್ನು ಕನ್ನಡಕ್ಕೆ ತರ್ಜುಮೆ ಮಾಡಿಕೊಟ್ಟೀಯಾ?" ಎಂದು ಕೇಳಿದರು. ನಾನು ಪ್ರಯತ್ನ ಮಾಡುವುದಾಗಿ ಹೇಳಿ ತೆಗೆದುಕೊಂಡೆ. ಅದು ಇಂಗ್ಲಿಷಿನಲ್ಲಿ ಅಚ್ಚಾಗಿದ್ದ ಪತ್ರಿಕೆ. ಅದರ ವಿಷಯ ಕ್ರೈಸ್ತಮತದ ಯಾವುದೋ ಉಪದೇಶ. ಅದನ್ನು ಲಕ್ನೋ ಪಟ್ಟಣದ ಬಿಷಪ್ ತೋಬರ್ನ್ (Bishop Thoburn) ಎಂಬಾತ ಉಪನ್ಯಾಸರೂಪದಲ್ಲಿ ಪ್ರಚುರಪಡಿಸಿದ್ದನಂತೆ. ನಾನು ಆ ಪ್ರಬಂಧವನ್ನು ಕನ್ನಡಿಸಿ ಗೋಪಾಲಕೃಷ್ಣರಾಯರಿಗೆ ಒಪ್ಪಿಸಿದೆ. ನಾಲ್ಕೈದು ದಿನದ ಮೇಲೆ ಗೋಪಾಲಕೃಷ್ಣರಾಯರು ನನ್ನನ್ನು ಕರೆದು ಐದು ರೂಪಾಯಿ ನೋಟನ್ನು ನನ್ನ ಮುಂದಿಟ್ಟು "ಇದು ನಿನ್ನ ಕನ್ನಡ ತರ್ಜುಮೆಗೆ ಸಂಭಾವನೆ" ಎಂದರು. ನಾನು ಅವರನ್ನು ವಂದಿಸಿ "ನಾನು ಹಾಸ್ಟಲಿಗೆ ಕೊಡಬೇಕಾದ ಫೀಜಿಗಾಗಿ ಈ ಹಣವನ್ನು ದಾಖಲು ಮಾಡಿಕೊಳ್ಳಿ" ಎಂದು ಬೇಡಿದೆ. ಅವರು ಸಂತೋಷಪಟ್ಟು "ಇನ್ನು ಮೇಲೆ ತಿಂಗಳು ತಿಂಗಳೂ ಹೀಗೆ ಮಾಡೋಣ–ಸಾಧ್ಯವಾದರೆ" ಎಂದರು. ಅದರಂತೆ ಏಳೆಂಟು ತಿಂಗಳು ನಡೆಯಿತೆಂದು ನನ್ನ ಜ್ಞಾಪಕ.

ಅಂದಿನಿಂದ ನನ್ನ ಮಸಿಕುಡಿಕೆಯ ಜೀವನ.

ಗೋಪಾಲಕೃಷ್ಣರಾಯರಿಗೆ ನನ್ನ ವಿಷಯದಲ್ಲಿ ತುಂಬ ಅಭಿಮಾನ. ಅವರು ಆಗಾಗ ಬೆಳಗಿನ ಜಾವದಲ್ಲಿ ಹಾಸ್ಟೆಲಿಗೆ ಬಂದು ರೂಮುಗಳ ಸುತ್ತ ತಿರುಗಿ ನೋಡಿ ಹೋಗುವರು. ಒಂದು ದಿನ ನನ್ನನ್ನು ಇತರ ಹಾಸ್ಟಲ್ ವಾಸಿಗಳೆದುರಿಗೆ ಪ್ರಶಂಸೆ ಮಾಡಿದರು. ನನ್ನ ರೂಮಿನ ಪಕ್ಕದ ರೂಮಿನಲ್ಲಿದ್ದವರು ಹಿಂದೆ ಪ್ರಸ್ತಾಪಿಸಿದ ಚಿಂತಾಮಣಿ ಸುಬ್ಬಯ್ಯ, ಚಿಂತಾಮಣಿ ಶ್ರೀನಿವಾಸರಾವ್–ಇವರು. ಇವರು ನನಗೆ ಪ್ರಿಯ ಸ್ನೇಹಿತರು. ನನ್ನ ಪ್ರಶಂಸೆಯನ್ನು ಇವರೂ ಕೇಳಿದರು. ಅದು ಹೀಗೆ:

“ಏನಯ್ಯಾ, ಮೆಟ್ರಿಕ್ಯುಲೇಷನ್ ವಿದ್ಯಾರ್ಥಿಗಳಾಗಿ ಬೆಳಗ್ಗೆ ಐದು ಘಂಟೆಯಾದರೂ ಏಳುವುದೇ ಇಲ್ಲ! ಏನು ನೀವು ಓದುವುದು? ಅವನನ್ನು ನೋಡಿ, ರಾತ್ರಿಯೆಲ್ಲ ಓದುತ್ತಾನೆಂದು ತೋರುತ್ತದೆ. ಇಷ್ಟು ಸಲ ನೋಡಿದ್ದೇನೆ. ಎಲ್ಲರೂ ಯಾವಾಗಲೂ ನಿದ್ದೆಯೇ. ಇವನೊಬ್ಬನ ರೂಮಿನಲ್ಲಿ ಮಾತ್ರ ಬೆಳಕಿರುತ್ತದೆ.”

ಈ ಮಾತನ್ನು ಕೇಳಿ ನನ್ನ ಸ್ನೇಹಿತರು ಮರುಮಾತನಾಡಲಿಲ್ಲ, ತಲೆ ಬಗ್ಗಿಸಿಕೊಂಡು ನಿಂತಿದ್ದರು.

ಮಾರನೆಯ ದಿನ ಅವರು ನಿದ್ದೆ ಕೆಟ್ಟು ಗೋಪಾಲಕೃಷ್ಣರಾಯರು ಬರುವ ಹೊತ್ತನ್ನು ಕಾದಿದ್ದು, ಅವರು ಬಂದಾಗ ನನ್ನ ರೂಮಿಗೆ ಕರೆದುಕೊಂಡು ಬಂದರು. ಲಾಂದ್ರ ಉರಿಯುತ್ತಿತ್ತು. ನಾನು ಚೆನ್ನಾಗಿ ನಿದ್ದೆ ಮಾಡುತ್ತಿದ್ದೆ. ನನಗೆ ಯಾವಾಗಲೂ ಗಾಢ ನಿದ್ರೆ. ಗೋಪಾಲಕೃಷ್ಣರಾಯರು “ಸಂದರ್ಭ ಹೀಗೆಂದು ನನಗೆ ತಿಳಿಯಲೇ ಇಲ್ಲವಲ್ಲ!” ಎಂದರು. ಅವರ ಮಾತಿನ ಮತ್ತು ನಗುವಿನ ಗದ್ದಲದಿಂದ ನನಗೆ ಎಚ್ಚರವಾಯಿತು. ನನಗೆ ಬೇರೆ ಮುಖಪ್ರಕ್ಷಾಳನೆ ಇನ್ನೇನು ಬೇಕು?

ಹೀಗೆ ಕಳೆಯಿತು ನನ್ನ ಹೈಸ್ಕೂಲು ವಿದ್ಯಾಭ್ಯಾಸ.

ನಿದ್ರಾವೇಶ

ಚಿಕ್ಕಂದಿನಲ್ಲಿ ಪುಸ್ತಕ ಕೈ ಹಿಡಿದರೆ ನನಗೆ ನಿದ್ದೆ ಬರುತ್ತಿತ್ತು. ಆ ಸಂದರ್ಭದಲ್ಲಿಯೇ ನನ್ನ ಪೂಜ್ಯ ಸೋದರತ್ತೆ ಹೀಗೆ ಹಾಡಿದ್ದು:

ಪುಸ್ತಕಮು ಚೇತಕಿಸ್ತೆ
ತೂಕಡಿಂಚುನೇ
ಮುಚ್ಚೋರಲು ಮುಂದ್ರ ಪೆಟ್ಟಿ
ಕಂಡ್ಲು ತೆರೆಚನೇ
ಚಕ್ಕಾನಿ ಪೆಂಡ್ಲಿಕೊಡಕಾ
ಕುಕ್ಕ ಮಂಗಳಂ.

ನಾನು ಹೀಗೆ ತೂಕಡಿಸುತ್ತಿದ್ದುದನ್ನು ನೋಡಿ ನನ್ನ ಅಜ್ಜಿಗೆ ಕನಿಕರ; ನನ್ನ ತಂದೆಗೆ ಕೋಪ. ನನ್ನ ತಂದೆ ಆತನ ಚಿಕ್ಕವಯಸ್ಸಿನಲ್ಲಿ ಚೆನ್ನಾಗಿ ಬಿಗಿಯುತ್ತಿದ್ದವರು. ಹೀಗೆ ಪೆಟ್ಟು ತಿಂದು ಮೊಮ್ಮಗನು ಅಳುತ್ತಾನಲ್ಲ; ಅವರು ಒಂದು ಸಲ ನನ್ನ ಪರವಾಗಿ, ಒಂದು ಸಲ ನನ್ನ ತಂದೆಯ ಪರವಾಗಿ ಮಾತನಾಡುವರು.

ಇದಕ್ಕೆ ಒಂದು ಉಪಾಯವನ್ನು ನನ್ನ ಅಜ್ಜಿ ಯೋಚಿಸಿದಳು. ನನ್ನ ಮನೆಯಲ್ಲಿ ರಾತ್ರಿ ಫಲಾಹಾರದ ಜನ ಮೂವರು ನಾಲ್ವರು ಯಾವಾಗಲೂ ಇರುತ್ತಿದ್ದರು. ಅವರಿಗಾಗಿ ಉಪ್ಪಿಟ್ಟು, ತಪ್ಪಲೆ ರೊಟ್ಟಿ, ಗೊಜ್ಜಿನ ಅವಲಕ್ಕಿ ಇತ್ಯಾದಿಗಳು ತಯಾರಾಗುತ್ತಿದ್ದವು. ಆದದ್ದರಿಂದ ನನ್ನ ನಿದ್ದೆಗೆ ಚಿಕಿತ್ಸೆಯಾಗಿ ಫಲಾಹಾರ ಸಾಮಾಗ್ರಿ ಮಾಡುವುದು ನನ್ನ ಅಜ್ಜಿಗೆ ಕಷ್ಟವಾಗಿರಲಿಲ್ಲ. ನಡುವಿನಲ್ಲಿ ಸಂಜೆ ೭ ಘಂಟೆಗೆ ದೀಪಸ್ತಂಭದಲ್ಲಿ ಹೊಂಗೆ ಎಣ್ಣೆ ಹಾಕಿ ಬತ್ತಿಹೊತ್ತಿಸುವರು. ನಾನು ಅದರ ಮುಂದೆ ಕೂಡತಕ್ಕದ್ದು. ಐದಾರು ನಿಮಿಷಗಳೊಳಗಾಗಿ ಏನಾದರೂ ಒಂದು ತಿಂಡಿಯ ಸಾಮಾನು ನನ್ನ ಮುಂದೆ ಬರತಕ್ಕದ್ದು. ಇದರಲ್ಲಿ ತಿಯೊರಿ ಏನೆಂದರೆ "ಹಲ್ಲು ತುಟಿ ಅಲುಗಾಡುತ್ತಿದ್ದರೆ ಕಣ್ಣೂ ಚಟುವಟಿಕೆಯಾಗಿರುತ್ತದೆ" ಎಂದು. ಹಾಗೆಯೇ "ನಾಲಗೆಗೆ ಉಪ್ಪುಖಾರ ಸವರುತ್ತಿದ್ದರೆ ಕಣ್ಣು ಎಚ್ಚರವಾಗಿರುತ್ತದೆ" ಎಂದು. ನನ್ನ ಅಜ್ಜಿಯ ಈ ತಿಯೋರಿಗಳನ್ನು ಕೇಳಿ ನನ್ನ ಅಜ್ಜಂದಿರು ನಗುವರು. ಆದರೂ "ಎಕ್ಸ್‌ಪೆರಿಮೆಂಟು ನಡೆಯಲಿ" ಎನ್ನುವರು.

ಏಳೆಂಟು ದಿವಸ ನಡೆಯಿತು. ದಿನದಿನವೂ ತಿಂಡಿ ಮುಗಿದುಹೋಗುವುದು. ತಲೆ ಝುಕಾಯಿಸುತ್ತಲೇ ಇರುವುದು.

ಉಪಾಯಾಂತರ

ಈಗ ಇನ್ನೊಂದು ತಿಯೋರಿ. "ಮಗು ಒಬ್ಬನೇ ಓದಬೇಕೆಂದರೆ ಬೇಸರ. ಜೊತೆಗೆ ಇನ್ನೊಬ್ಬರಿದ್ದರೆ ಬೇಸರ ಹೋಗಿ ಎಚ್ಚರ ಬರುತ್ತದೆ." ಈ ತಿಯೊರಿಯಂತೆ ನನಗೆ ಒಬ್ಬ ಜೊತೆಗಾರರನ್ನು ಒದಗಿಸಿದರು. ಆತ ಮಧ್ವರಾಯಾಚಾರ್ಯರ ಮಗ ವರಾಹ ಮೂರ್ತಿ. ಮಧ್ವರಾಯಾಚಾರ್ಯರು ಮಜ್ಜಿಗೆಹಳ್ಳಿ ಮಠದ ದಿವಾನರು. ಅವರು ನಮ್ಮ ಮನೆಗೆ ಆಗಾಗ ಬಂದು ಹೋಗುತ್ತಿದ್ದುದುಂಟು. ಆತ ನನ್ನ ಚಿಕ್ಕಜ್ಜಂದಿರಿಗೆ ಸ್ನೇಹಿತರು. ಆದದ್ದರಿಂದ ಅದು ಒಳ್ಳೆಯ ಸಹವಾಸ. ವರಾಹಮೂರ್ತಿ ತನ್ನ ಮನೆಯಲ್ಲಿ ಭೋಜನ ತೀರಿಸಿಕೊಂಡು ಏಳುವರೆ ಘಂಟೆಯ ಸುಮಾರಿಗೆ ನನ್ನ ಮನೆಗೆ ಬರತಕ್ಕದ್ದು. ನಾವಿಬ್ಬರೂ ದೀಪದ ಮುಂದೆ ಕುಳಿತು ಪಾಠ ಮಾಡತಕ್ಕದ್ದು. ವರಾಹಮೂರ್ತಿ ಪುಸ್ತಕವನ್ನು ಓದತಕ್ಕದ್ದು. ನಾನು ಕಿವಿಯಿಂದ ಕೇಳಿ ಪಾಠ ಗ್ರಹಿಸತಕ್ಕದ್ದು. ಇದು ಏರ್ಪಾಟು. ವರಾಹಮೂರ್ತಿ ಆಚಾರ್‍ರ ಮಡಿಯಂತೆ ನಡೆಯುವವನು; ಆದ ಕಾರಣ ಮುಸುರೆ ಪದಾರ್ಥ ಕೂಡದು. ಮುಸುರೆಯೆಂದರೆ ನೀರು ಸೋಕಿ ಬೇಯಿಸಿದ್ದು; ಉಪ್ಪಿಟ್ಟು ಇತ್ಯಾದಿ. ಆದದ್ದರಿಂದ ಈಗ ಎಲ್ಲ ಕರಿದ ಭಕ್ಷ್ಯಗಳು; ಅರಳು ಸಂಡಿಗೆ, ಚಕ್ಕುಲಿ, ಕೋಡಬಳೆ, ಮುಚ್ಚೋರೆ ಇತ್ಯಾದಿಗಳು. ಈ ಹಾಳು ಮುಚ್ಚೋರೆಯಿಂದಲೇ ನನ್ನ ಸೋದರತ್ತೆಯ ಕವಿತೆಗೆ ಸ್ಫೂರ್ತಿ. ಎರಡು ತಟ್ಟೆಗಳಲ್ಲಿ ಈ ತಿಂಡಿಗಳಿರುತ್ತಿದ್ದವು. ಪಾಪ, ವರಾಹಮೂರ್ತಿಗೆ ಮಾನಭಯ. ಆತ ಓದುತ್ತಲೇ ಇದ್ದ. ಎರಡು ತಟ್ಟೆಗಳನ್ನೂ ಖಾಲಿ ಮಾಡುವ ಜವಾಬ್ದಾರಿ ನನಗೆ ಬಂತು.

ಎರಡನೆಯ ಎಕ್‌ಸ್‌ಪೆರಿಮೆಂಟ್ ಹೀಗೆ ಮುಗಿಯಿತು.

ಅತಿ ನಿದ್ದೆ

ಒಂದು ದಿನ ನನ್ನ ತಂದೆಗೆ ವಿಪರೀತ ಕೋಪ ಬಂದು ದೀಪದಲ್ಲಿದ್ದ ಹೊಂಗೆ ಎಣ್ಣೆಯನ್ನು ನನ್ನ ಕಣ್ಣಿಗೆ ಸವರಿಬಿಡುವುದಾಗಿ ಘಾಟರಿಸಿಕೊಂಡು ಬಂದರು. ನನ್ನ ಚಿಕ್ಕ ತಾತಂದಿರು ಅದನ್ನು ತಡೆದರು. "ಎಲಾ! ಕಣ್ಣು ಹೋದೀತೋ" ಎಂದು ಕೂಗಾಡಿದರು.

ಇಷ್ಟಾದರೂ ನನ್ನ ಕಣ್ಣಿಗೆ ಬುದ್ಧಿ ಬರಲಿಲ್ಲ. ನನ್ನ ಮೇಲೆ ನನ್ನ ತಂದೆಗಿದ್ದ ಆಕ್ಷೇಪಣೆಗಳಲ್ಲಿ ಅತಿ ಮುಖ್ಯವಾದವು ಕೆಲವು. ಅವುಗಳಲ್ಲಿ ಎರಡು:

1. ನಾನು ಮಲಗಿಕೊಂಡು ಓದುತ್ತೇನೆಂಬುದು.
2. ನನಗೆ ಅತಿ ನಿದ್ದೆಯೆಂಬುದು.

ಎರಡೂ ನಿಜವೇ. ನಾನು ದೊಡ್ಡವನಾಗಿ ಲೋಕದಲ್ಲಿ ಬುದ್ಧಿವಂತನೆಂಬ ಭ್ರಾಂತಿಯನ್ನುಂಟುಮಾಡಿದ ಮೇಲೂ ನನ್ನ ತಂದೆ ನನ್ನನ್ನು ಪರೀಕ್ಷಿಸುವುದನ್ನು ಬಿಟ್ಟಿರಲಿಲ್ಲ. ನಾನು ಪತ್ರಿಕೆಗಳಿಗೆ ಆರ್ಟಿಕಲ್‌ಗಳನ್ನು ಬರೆಯುವಾಗಲೂ ಹಾಸಿಗೆಯ ಮೇಲೆ ಮಲಗಿಕೊಂಡೇ ಬರೆಯುತ್ತಿದ್ದೆ. ಬೋರಲು ಮಲಗಿ ಪೆನ್ಸಿಲಿನಿಂದ ಬರೆಯುವುದು; ಅಂಗಾತನಾಗಿ ಮಲಗಿ ಎದೆಯ ಮೇಲೆ ಪುಸ್ತಕವನ್ನಿರಿಸಿಕೊಂಡು ಓದುವುದು. ಇವೆರಡೂ ನನ್ನ ತಂದೆಗೆ ಸರಿ ಬೀಳದು. ಇದನ್ನು ನೋಡಿ ಭ್ರಷ್ಟ ಗಿಷ್ಟ ಮೊದಲಾಗಿ ಹೀನಾಮಾನ ಬಯ್ಯುತ್ತಿದ್ದರು.

ಹೀಗೆ ಭಗವಂತ ನನಗೆ ಕೊಟ್ಟಿದ್ದ ಸಂಗಾತಿ ನಿದ್ದೆ. ನನ್ನ ತಂದೆ ಬದುಕಿದ್ದಾಗಲೇ ಭಗವಂತ ಅದನ್ನು ನನ್ನಿಂದ ಕಸಿದುಕೊಂಡ. ಬರಬಾರದಿದ್ದಾಗ ನಿದ್ದೆ ಬಂತು. ಅದು ಬರಬೇಕಾದಾಗ ಇಲ್ಲ. ಇದು ಶಿವನ ಅವಿವೇಕ.

ನಾನು ಎಲ್.ಎಸ್. ತರಗತಿಗೆ ಬಂದಾಗ ನನ್ನ ಅತಿನಿದ್ದೆಯ ಕಾರಣದಿಂದ ಓದಿಗೆ ಖೋತಾ ಆಗಿ ಪರೀಕ್ಷೆಯಲ್ಲಿ ನನಗೆ ಸೊನ್ನೆ ಬಿದ್ದೀತೆಂದು–ಅವರ ಈ ಭೀತಿಯ ಕಾರಣದಿಂದ ನನಗೆ ಬೈಗಳೂ ಗದ್ದರಿಕೆಗಳೂ ಹೆಚ್ಚಾದವು. ಆಗಾಗ ಪ್ರಹಾರವೂ ಆಗುತ್ತಿತ್ತು. ಇದನ್ನೆಲ್ಲ ನೋಡುತ್ತಿದ್ದ ಕಾಶೀರಾಯರಿಗೂ ಅವರ ಭಾರ್ಯೆ ಭಾಗೀರಥಮ್ಮನವರಿಗೂ ತುಂಬ ಕಳವಳ. ಕಾಶೀರಾಯರು ನನ್ನ ತಂದೆಯ ಆಪ್ತ ಸ್ನೇಹಿತರು, ನಮ್ಮ ಮನೆಯ ಎದುರುಮನೆಯಲ್ಲಿದ್ದರು. ಅವರ ಉದ್ಯೋಗ ತಾಲ್ಲೂಕು ಕಚೇರಿಯಲ್ಲಿ. ಆಗ್ಗೆ ಅವರಿಗೆ

ಇನ್ನೂ ಮಕ್ಕಳಾಗಿರಲಿಲ್ಲ. ನನಗೆ ಪೆಟ್ಟು ಬಿದ್ದದ್ದನ್ನು ನೋಡಿದರೆ ಭಾಗೀರಥಮ್ಮನವರಿಗೆ ಅಳು ಬರುತ್ತಿತ್ತು.

ಅಷ್ಟರಲ್ಲಿ ಕಾಶೀರಾಯರಿಗೆ ಬೌರಿಂಗ್‌ಪೇಟೆಗೆ ವರ್ಗವಾಯಿತು. ಅವರು ಅಲ್ಲಿಗೆ ಹೋದ ಒಂದು ತಿಂಗಳೊಳಗಾಗಿ, ನನ್ನ ತಂದೆಗೆ ಕಾಗದ ಬರೆದು ಅವರನ್ನು ಬೌರಿಂಗ್ ಪೇಟೆಗೆ ಕರೆಸಿಕೊಂಡರು. ಒಂದು ತಲೆದಿಂಬನ್ನು ನನ್ನ ತಂದೆಯ ಕೈಗೆ ಕೊಟ್ಟು ಅದನ್ನು ನನಗೆ ಕೊಡತಕ್ಕದ್ದೆಂದು ಬೇಡಿದರು. ಆ ತಲೆದಿಂಬಿನ ವಿಶೇಷವೇನೆಂದರೆ–ಅದರ ನಡುವಣ ಭಾಗದ ಮೇಲೆ ತಲೆಯ ಭಾರ ಬಿದ್ದಾಗ ಅಲ್ಲಿಂದ ಕೊಂಯ್ ಶಬ್ದ ಮಾಡುತ್ತಿದ್ದದ್ದು. ತಲೆದಿಂಬಿನ ಒಳಗಡೆ ಒಂದು ಮರದ ಚೌಕಟ್ಟಿನಲ್ಲಿ ಹತ್ತಿ ಅಥವಾ ಬಟ್ಟೆಯ ಚಿಂದಿಯ ನಡುವೆ ಒಂದು ಸ್ಪ್ರಿಂಗ್–ಝುಂಪಕಪನ್ನಿಟ್ಟಿತ್ತೆಂದು ತೋರುತ್ತದೆ.

ಅಂಥ ರಬ್ಬರ್ ಬೊಂಬೆಗಳು ಪೇಟೆಯಲ್ಲಿ ನೂರಾರು ಸಿಕ್ಕುತ್ತವೆ ಈಗ. ಆಗ ಅದು ಅಪರೂಪವಾದ ವಸ್ತು. ಆ ತಲೆದಿಂಬಿನ ಮೇಲೆ ನಾನು ತಲೆಯಿಟ್ಟು ಮಲಗಿದರೆ ಅದರ ಕೊಂಯ್ ಕೊಂಯ್ ಟರ್ಟರ್ ಶಬ್ದಗಳಿಂದ ನನ್ನ ನಿದ್ರೆಗೆ ಭಂಗವಾಗಿ ನಾನು ಎಚ್ಚತ್ತು ಓದು ಸಾಗಿಸಿಯೇನು–ಎಂದು ಕಾಶೀರಾಯರೂ ಭಾಗೀರಥಮ್ಮನವರೂ ಅಂದಾಜು ಮಾಡಿ ಆ ತಲೆದಿಂಬನ್ನು ನನ್ನ ತಂದೆಗೆ ಕೊಟ್ಟು ಇನ್ನು ಮೇಲೆ ಅವರು ರೇಗುವುದನ್ನು ನಿಲ್ಲಿಸಬಹುದೆಂದು ಹೇಳಿದರು. ಕಾಶೀರಾಯರು ನನ್ನ ಅವಸ್ಥೆಯನ್ನು ಕುರಿತು ಯಾರೋ ಸ್ನೇಹಿತರಲ್ಲಿ ತಮ್ಮ ದುಃಖ ಹೇಳಿಕೊಂಡರಂತೆ. ಆ ಸ್ನೇಹಿತರು ಈ ತಲೆದಿಂಬಿನ ಮಹಿಮೆಯನ್ನು ವರ್ಣಿಸಿದರಂತೆ. ಇದನ್ನು ಅವರು ಭಾಗೀರಥಮ್ಮನವರಿಗೆ ಹೇಳಿದ ಕೂಡಲೆ ಆಕೆ ಯಜಮಾನರನ್ನು ಒತ್ತಾಯಪಡಿಸಿದರು. ಬೆಂಗಳೂರಿಗೆ ಹೋಗಿ ಹುಡುಕಾಡಿ ಆ ಸಾಮಾನನ್ನು ತರಿಸಿದ್ದಾಯಿತು.

ಆ ದಿಂಬು ನನ್ನ ವಶಕ್ಕೆ ಬಂದ ಮೇಲೆ ಹತ್ತು ಹದಿನೈದು ದಿನ ಕಳೆದು ಕಾಶೀರಾಯರು ಮುಳುಬಾಗಲಿಗೆ ಬಂದು ನನ್ನನ್ನು ವಿಚಾರಿಸಿದರು. ನಾನು ಹೇಳಿದೆ:

ನಾನು: "ಒಳ್ಳೆಯ ತಲೆದಿಂಬು ಇದು ಮಾವ. ಚೆನ್ನಾಗಿ ನಿದ್ದೆ ಬರುತ್ತದೆ."

ಕಾ: "ಅದು ಎಬ್ಬಿಸುವುದಿಲ್ಲವೆ ನಿನ್ನನ್ನು?"

ನಾನು: "ಅದು ಹೇಗೆ ಎಬ್ಬಿಸುತ್ತದೆ? ಅದರ ಸದ್ದು ನನಗೆ ಕೇಳಿಸಿದರಲ್ಲವೆ?"

ಹೀಗೆ ನನ್ನ ಭಂಡತನ ಚಿಕ್ಕಂದಿನಿಂದ ಅಭ್ಯಾಸವಾಗಿ ಬಂದಿರುವಂಥಾದ್ದು.

೨೫

ಸ್ವಾವಲಂಬನ ಪ್ರಯತ್ನಗಳು

ನನಗೆ ಚಿಕ್ಕಂದಿನಿಂದ “ಕೈಗಾರಿಕೋದ್ಯಮ” ಗಳಲ್ಲಿ ಆಸಕ್ತಿ. ಹೈಸ್ಕೂಲು ತರಗತಿಗಳಲ್ಲಿದ್ದಾಗ ಉದ್ಯೋಗ ಚಿಂತೆ ನನ್ನ ಕಾಲದಲ್ಲಿ ಸಹಜವಾಗಿತ್ತು. ಮೆಟ್ರಿಕ್ಯುಲೇಷನ್ ಎಂಬುದು ವಿದ್ಯಾಸೋಪನದಲ್ಲಿ ಮೊದಲನೆಯ ದೊಡ್ಡ ಘಟ್ಟ. ಆ ಘಟ್ಟವನ್ನು ಮುಟ್ಟಿದ ಮೇಲೆ ಮುಂದಿನ ಯೋಚನೆ. “ನೀನು ಏನಾಗುವೆ? ಮೇಷ್ಟರೆ, ಲಾಯರೆ, ಡಾಕ್ಟರೆ, ಇಂಜಿನಿಯರೆ, ಕಛೇರಿ ಉದ್ಯೋಗಸ್ಥನೆ?” ಈ ರೀತಿಯಾಗಿ ಆ ಕಾಲದ ಹಿರಿಯರು ಕೇಳುತ್ತಿದ್ದದ್ದುಂಟು. ಹೀಗೆ ನನಗೂ ಭವಿಷ್ಯದ ಚಿಂತೆ. ಇದು ನಾನು ಮೈಸೂರಿನಲ್ಲಿ ಫೋರ್ತ್ ಫಾರಮಿನಲ್ಲಿದ್ದಾಗ.

ಆಗ ಮದರಾಸಿನಲ್ಲಿ ಸರಕಾರದವರು “ಸ್ಕೂಲ್ ಆಫ್ ಆರ್ಟ್ಸ್” ಎಂಬ ಸಂಸ್ಥೆಯನ್ನು ನಡಸುತ್ತಿದ್ದರು. ಆ ಸಂಸ್ಥೆಯಲ್ಲಿ ಬಗೆಬಗೆಯ ಕಸುಬು ಕೈಗಾರಿಕೆಗಳಿಗೆ ಯುವಕರನ್ನು ತಯಾರುಮಾಡುವ ಏರ್ಪಾಟಿತ್ತು. ಅವರು ವಿದ್ಯಾರ್ಥಿಗಳಿಗೆ ಕೊಂಚ ಕೊಂಚ ಮಾಸಾಶನವನ್ನು ಕೊಡುತ್ತಿದ್ದರು. ಆ ಸಂಸ್ಥೆಯ ಮುಖ್ಯಸ್ಥ ಆಲ್‌ಫ್ರಡ್ ಚಾಟರ್ಟನ್ ಎಂಬಾತ. ಆತ ಉತ್ತರೋತ್ತರ ವಿಶ್ವೇಶ್ವರಯ್ಯನವರ ದಿವಾನಗಿರಿಯ ಪ್ರಾರಂಭದ ಕಾಲದಲ್ಲಿ ಮೈಸೂರಿಗೆ ಇಂಡಸ್ಟ್ರೀಸ್ ಇಲಾಖೆಯ ಮುಖ್ಯಸ್ಥನಾಗಿ ಬಂದ. ಇಲ್ಲಿ ಬಂದ ಮೇಲೆ ಸರ್ ಆಲ್‌ಫ್ರೆಡ್ ಚಾಟರ್ಟನ್ ಎಂದು ಪ್ರಸಿದ್ಧನಾದ. ಈತನು ಮದರಾಸಿನ ಸ್ಕೂಲ್ ಆಫ್ ಆರ್ಟ್ಸ್ ಸಂಸ್ಥೆಯ ಅಧ್ಯಕ್ಷನಾಗಿದ್ದಾಗ ಒಂದು ಜಾಹೀರಾತು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅದು ವಿದ್ಯಾರ್ಥಿಗಳನ್ನು ಆಹ್ವಾನಿಸುವ ಜಾಹೀರಾತು. ವಿದ್ಯಾರ್ಥಿವೇತನವೂ ಅದರಲ್ಲಿ ನಮೂದಿತ್ತು. ನಾನು ಇದನ್ನು ನೋಡಿ ವಿವರಗಳನ್ನು ತಿಳಿಸಬೇಕೆಂದು ಬೇಡಿ ಚಾಟರ್ಟನ್ ಅವರಿಗೆ ಒಂದು ಪತ್ರ ಬರೆದೆ. ಅವರು ದಯ ಮಾಡಿ ಆ ಸಂಸ್ಥೆಯ ಉದ್ದೇಶಗಳನ್ನೂ ನಿಯಮಗಳನ್ನೂ ತಿಳಿಸುವ ಲಘುಪುಸ್ತಕವನ್ನು ಕಳುಹಿಸಿದರು. ನಾನು ಅದನ್ನು ಓದಿ ನೋಡಿ “ನನಗೆ ಇಲ್ಲಿದೆ ತಕ್ಕ ಅವಕಾಶ” ಎಂದುಕೊಂಡು ನನ್ನ ತಂದೆಗೆ ಒಂದು ಕಾಗದ ಬರೆದೆ.

ಕಾಗದದ ಸಾರಾಂಶ ಹೀಗೆ: “ನಾನು ಯಾವುದಾದರೂ ಕೈಕಸಬನ್ನು ಕಲಿತು ಸ್ವತಂತ್ರನಾಗಿ ಜೀವಿಕೆ ಸಂಪಾದಿಸಬೇಕು. ಮತ್ತು ಆ ಜೀವಿಕಾವೃತ್ತಿ ಬಹು ಜನಕ್ಕೆ ಬೇಕಾದದ್ದಾಗಬೇಕು.

ಮದರಾಸಿನ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಅದಕ್ಕೆ ಅವಕಾಶವಿದೆ. ಆ ಸಂಸ್ಥೆಯ ನಿಯಮಾವಳಿಯನ್ನು ಇದರೊಡನೆ ಕಳಿಸಿದ್ದೇನೆ. ಅಲ್ಲಿ ನಾನು ಕಲಿಯಬೇಕೆಂದಿರುವ ಕಸಬು Sheet Metal Work ಎಂಬ ಲೋಹದ ತಗಡಿನ ಕೆಲಸ. ಈ ವಿದ್ಯಾಭ್ಯಾಸಕ್ಕೆ ಆ ಸಂಸ್ಥೆಯವರು ತಿಂಗಳಿಗೆ ೭ ರೂಪಾಯಿಯಂತೆ ಮಾಸಾಶನ ಕೊಡುತ್ತಾರೆ. ಅದರ ಜೊತೆಗೆ ನೀವು ಏಳೆಂಟು ರೂಪಾಯಿ ನನಗೆ ತಿಂಗಳು ತಿಂಗಳೂ ಕಳಿಸಬೇಕು. ಹೀಗೆ ಎರಡು ವರ್ಷ ನಡೆದರೆ ನನ್ನ ಕೋರ್ಸು ಮುಗಿಯುತ್ತದೆ. ಆಮೇಲೆ ನಾನೇ ಒಂದು ಸಣ್ಣ ಕಾರ್ಖಾನೆಯಿಟ್ಟು ವ್ಯಾಪಾರ ನಡಸಿ ಸಂಪಾದನೆ ಮಾಡಲಾಗುತ್ತದೆ.”

ದೈವವಿಲಾಸ

ನಮ್ಮ ಯೋಜನೆ ಎಷ್ಟು ಒಳ್ಳೆಯದಾದರೆ ಏನು! ದೈವ ಅದಕ್ಕೆ ಅನುಕೂಲವಾಗಬೇಕಲ್ಲ? ನನ್ನ ಕಾಗದ ನನ್ನ ತಂದೆಯ ಕೈ ಸೇರುವ ವೇಳೆಗೆ ಮಧ್ಯಾಹ್ನ ಸುಮಾರು ೨.೩೦ ಘಂಟೆ. ಮುಳುಬಾಗಿಲಿನಲ್ಲಿ ಪೋಸ್ಟು ಬರುತ್ತಿದ್ದದ್ದೇ ೧೨ ಘಂಟೆಗೆ. ನನ್ನ ಕಾಗದವನ್ನು ಓದಿದ ಕೂಡಲೆ ನನ್ನ ತಂದೆಯ ಮನಸ್ಸಿಗೆ ಕೊಂಚ ಕಳವಳವಾಗಿರಬೇಕು. ಈ ವಿಷಯದಲ್ಲಿ ತಾವೇ ನಿರ್ಣಯ ಮಾಡುವುದಕ್ಕಿಂತ ಸ್ನೇಹಿತರೊಡನೆ ಯೋಚಿಸಿ ನಿರ್ಣಯಿಸುವುದು ಯುಕ್ತವೆಂದು ಅವರಿಗೆ ತೋರಿತು. ಅದರಂತೆ ಆ ಮಾರನೆಯ ದಿನ ನನ್ನ ತಂದೆ ನಮ್ಮ ಪಕ್ಕದ ಮನೆಯಲ್ಲಿದ್ದ ರಾಮದಾಸಪ್ಪನವರಲ್ಲಿ ಹಿತಸೂಚನೆ ಕೇಳಲು ಹೋದರು. ರಾಮದಾಸಪ್ಪನವರ ವಿಷಯವನ್ನು ಹಿಂದೆ ಹೇಳಿದ್ದೇನೆ. ಅವರು ಸಬ್‌ರಿಜಿಸ್ಟ್ರಾರರು. ವಿದ್ಯಾವಂತರು, ಸಂಸ್ಕೃತ ಬಲ್ಲವರು, ಸದಾಚಾರಶೀಲರು, ಪರಮ ಪ್ರಾಮಾಣಿಕರು. ಆದದ್ದರಿಂದ ಅವರ ನಿಶ್ಚಯವನ್ನು ಅವಶ್ಯವಾಗಿ ಅಂಗೀಕರಿಸತಕ್ಕದ್ದು.

ದೈವವಿಲಾಸ ನೋಡಿ. ನನ್ನ ತಂದೆ ಅಲ್ಲಿಗೆ ಹೋದ ಹೊತ್ತಿನಲ್ಲಿ ರಾಮದಾಸಪ್ಪನವರು ಕ್ಷೌರಕ್ಕೆ ಕುಳಿತಿದ್ದರು. ವೆಂಕಟಶಾಮಿ ಎಂಬ ಒಳ್ಳೆಯ ಕ್ಷೌರಿಕ ಅವರ ಗಲ್ಲವನ್ನು ಹಿಡಿದು ಕತ್ತಿಯಾಡಿಸುತ್ತಿದ್ದ. ಇಂಥ ಹೊತ್ತಿನಲ್ಲಿ ನನ್ನ ತಂದೆ ನನ್ನ ಕಾಗದದ ಸಮಾಚಾರವನ್ನು ಪ್ರಸ್ತಾಪಿಸಿದರು. ರಾಮದಾಸಪ್ಪನವರು “ಆ ಕಾಗದವನ್ನು ಕೊಡಿ” ಎಂದು ಕೇಳಿ ತೆಗೆದುಕೊಂಡು ನನ್ನ ಪತ್ರವನ್ನೋದಿ ಬದಿಗಿರಿಸಿ “ಸರಿಯೆ” ಎಂದರು.

ನನ್ನ ತಂದೆ: “ಹಾಗೆಂದರೆ?”

ರಾ: “ಅವನು ಸ್ವತಂತ್ರನಾಗಬೇಕಂತೆ.”

ನನ್ನ ತಂದೆ: “ಓಹೋ! ಈಗ ಅತಂತ್ರನಾಗಿದ್ದಾನೋ?”

ರಾ: “ಏನೋ ಕಸಬು ಕಲಿತುಕೊಳ್ಳುತ್ತಾನಂತೆ.”

ನನ್ನ ತಂದೆ: “ಏನು ಕಸಬಂತೆ?”

ರಾ: “ಷೀಟ್ ಮೆಟಲ್ ವರ್ಕ್.”

ನನ್ನ ತಂದೆ: “ಹಾಗೆಂದರೆ ಏನು?”

ರಾ: (ವೆಂಕಟಶಾಮಯ್ಯ ಇಟ್ಟು ಕೊಂಡಿದ್ದ ನೀರಿನ ಬಟ್ಟಲನ್ನು ತೋರಿಸಿ) “ಇಂಥಾದನ್ನು ತಯಾರುಮಾಡುವುದು.”

ಅಲ್ಲಿಗೆ ನನ್ನ ಯೋಜನೆ ಮುಕ್ತಾಯವಾಯಿತು. ನನ್ನ ತಂದೆ ನನಗೆ ಉತ್ತರ ಬರೆದರು “ನೀನು ಸ್ವತಂತ್ರನಾಗುವುದೂ ಬೇಡ, ಕ್ಷೌರದ ಕಸಬೂ ಬೇಡ. ದೊಡ್ಡವರ ವಂಶದಲ್ಲಿ ಹುಟ್ಟಿ, ಮುತ್ತಾತ ಪ್ರಸಿದ್ಧನಾಗಿ, ತಾತ ಪ್ರಸಿದ್ಧನಾಗಿ ‘ಮೊಮ್ಮಗ ಕ್ಷೌರದ ಬಟ್ಟಲನ್ನು ಮಾಡುತ್ತಿದ್ದಾನೆ’ ಎನಿಸಿಕೊಳ್ಳುವುದು ಯೋಗ್ಯವಲ್ಲ. ನೀನು ಈ ಯೋಚನೆಯನ್ನು ಬಿಡದೆ ಹೋದರೆ ನಿನಗೂ ನನಗೂ ಸಂಬಂಧ ಹರಿಯಿತೆಂದೇ ತಿಳಿದುಕೊಳ್ಳತಕ್ಕದ್ದು.

ನನಗೆ ಕಸಬಿನ ಪರದಾಟ ಮುಗಿಯಲಿಲ್ಲ. ಕೆಲವು ದಿನ ಲೈಫ್‌ಇನ್‌ಷೂರೆನ್ಸ್ ಕಂಪನಿಯ ಏಜೆಂಟನಾಗಬೇಕೆಂದು ಒದ್ದಾಡಿದೆ. ಅನೇಕ ಕಂಪನಿಗಳ ಪತ್ರಿಕೆಗಳನ್ನೂ ಪಟ್ಟಿಗಳನ್ನೂ ತರಿಸಿ ಓದಿದೆ. ಸ್ನೇಹಿತರು ನಿರುತ್ಸಾಹ ಮಾಡಿದರು. ಕೊಂಚ ದಿನ ಪೋಸ್ಟ್ ಇಲಾಖೆಯ ಅವಕಾಶವನ್ನು ಚಿಂತಿಸಿದೆ. ಈ ಸಲಹೆ ನಮ್ಮ ಸುಬ್ಬಾಭಟ್ಟರದು. ಅವರ ಯೋಚನೆ ಏನೆಂದರೆ: ಅದರಲ್ಲಿ ಕೆಲಸ ಮಿತ, ಪುರುಸತ್ತು ಹೆಚ್ಚು, ಅಧ್ಯಯನಕ್ಕೆ ಅನುಕೂಲ ಎಂದು. ಆದರೆ ಜವಾಬ್ದಾರಿಯ ಭಾರ ದೊಡ್ಡದು.

ಕೆಲವು ದಿನ “ನಾನು ಪುರೋಹಿತನೇಕೆ ಆಗಬಾರದು?” ಎಂದು ಹಾರಾಡಿದೆ. ಇನ್ನು ಕೆಲವು ದಿನ ಪಟೇಲಗಿರಿಗಾಗಿ ಆಶೆಪಟ್ಟೆ.

ಸ್ವಂತ ರಚನೆಗಳು

ಕಡೆಯ ಒಂದು ಪ್ರಯತ್ನವನ್ನು ಹೇಳುತ್ತೇನೆ. ಆನೂರು ವೆಂಕಟಾಚಾರ್, ಕೆ. ವೆಂಕಟರಾಯರು, ದಂಡಿ ನರಸಿಂಗರಾಯರು, ನಾನು–ಇಷ್ಟು ಮಂದಿ ಒಂದು ಬಣ್ಣದ ಕಾರ್ಖಾನೆ ನಡಸತಕ್ಕದ್ದು. ಇದಕ್ಕಾಗಿ ಆರ್ಕಾಟ್ ಶ್ರೀನಿವಾಸಾಚಾರ್ಲು ರಸ್ತೆಯಲ್ಲಿ ಸೆಂಟ್ರಲ್ ಮಹಮಡನ್ ಅಸೋಸಿಯೇಷನ್ನಿನ ದಕ್ಷಿಣ ಪಾರ್ಶ್ವದಲ್ಲಿ ಸೆಟ್ಲೂರ್ ಅವರಿಗೆ ಸೇರಿದ್ದ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡೆವು. ಅಲ್ಲಿ ಬೀಸುವ ಕಲ್ಲುಗಳನ್ನು ಜೋಡಿಸಿ ಬಣ್ಣದ ಸಾಮಾನುಗಳನ್ನು ಪುಡಿ ಮಾಡತಕ್ಕದ್ದು. ಬೊಗ್ಗನ್ನು ಪುಡಿಮಾಡುವುದು. ಅಗಸೆ, ಎಣ್ಣೆ ಮೊದಲಾದವನ್ನು ಬೆರೆಸತಕ್ಕದ್ದು, ಇತ್ಯಾದಿ.

ಹೀಗೆ ಅನೇಕ ಸ್ವಂತ ರಚನೆಗಳನ್ನು ಮಾಡಿ ಕೈಯಲ್ಲಿದ್ದ ಪುಡಿಕಾಸುಗಳನ್ನು ಹಾಳು ಮಾಡಿಕೊಂಡೆವು.

ಸಾಬೂನು ತಯಾರಿ

೧೯೦೬ರ ಸುಮಾರಿನಲ್ಲಿ ನಾನು “ಸೂರ್ಯೋದಯ ಪ್ರಕಾಶಿಕಾ” ಪತ್ರಿಕೆಯಲ್ಲಿದ್ದಾಗ ಒಬ್ಬ ವೀರ ದೇಶಭಕ್ತ ಬೆಂಗಳೂರಿಗೆ ಬಂದ. ಆತ ಬಹುಶಃ ಪಂಜಾಬಿನ ಕಡೆಯವನು. ಆತನ ಹೆಸರು ನನಗೆ ಮರೆತುಹೋಗಿದೆ. ಎಂಥದೋ ಸರ್ದಾರ್ ಎಂದು. ಆತ ಗೂಢಕ್ರಾಂತಿಕಾರ (Secret revolutionary). ಆತ ನಮಗೆ ಹೇಳಿದ್ದೇನೆಂದರೆ: “ಪರದೇಶದವರು ಉಪಾಯಗಳಿಂದ ನಮ್ಮನ್ನು ತುಳಿದಾರು. ಅವರನ್ನು ಉಪಾಯದಿಂದ ತೊಲಗಿಸಲಾಗದು. ನಾವು ಕ್ರಾಂತಿ ಮಾಡಿಯೇ ಅವರನ್ನು ಓಡಿಸಬೇಕು. ಅದಕ್ಕಾಗಿ ನಮ್ಮ ಎಲ್ಲ ಯುವಕರೂ ಸಿದ್ಧರಾಗಬೇಕು. ಎಲ್ಲರೂ ಕತ್ತಿವರಸೆಯನ್ನೂ ಬಾಂಬು ತಯಾರಿಕೆಯನ್ನೂ ಕಲಿಯಬೇಕು. ಬಾಂಬಿನ ತಯಾರಿಕೆಯನ್ನು ನಾನು ಹೇಳಿಕೊಟ್ಟೇನು. ಆದರೆ ಅದು ಗೂಢವಾಗಿ, ರಹಸ್ಯವಾಗಿ. ಪ್ರಕಾಶವಾಗಿ ನಾನು ಮಾಡಬಹುದಾದ್ದೇನೆಂದರೆ, ಸಾಬೂನಿನ ತಯಾರಿ.”

ಈ ಕಸಬನ್ನು ಆತ ಮಾಡಿ ತೋರಿಸಿದ. ಆತ ನಮ್ಮ ಕೈಯಿಂದ ಮೊದಲು ತಯಾರು ಮಾಡಿಸಿದ ಸೋಪು ಬಣ್ಣದಲ್ಲಿ ಕೆಂಪಾಗಿ, ಕೈಗೆ ಅಂಟಂಟಾಗಿ ಮುದ್ದೆ ಮುದ್ದೆಯಾಗಿತ್ತು. ಅದನ್ನು ನೋಡಲಿಕ್ಕೆ ನನಗೆ ಅಸಹ್ಯ. ಬಣ್ಣ ಕೆಂಪಾದದ್ದರಿಂದ ಮಾಂಸಖಂಡಗಳೋ ಎನಿಸುವಂತಿತ್ತು. ಈ ಸೋಪನ್ನು ಬೇಯಿಸುವುದಕ್ಕೆ “ಸೂರ್ಯೋದಯ ಪ್ರಕಾಶಿಕಾ” ಪ್ರೆಸ್ಸಿನ ಹಿಂದೆ ಒಲೆ, ಬಾಣಲಿ, ಮೊದಲಾದ ಪರಿಕರಗಳು. ಇದೆಲ್ಲ ಗುಟ್ಟಾಗಿರಬೇಕಾದದ್ದೆಂಬ ಕಟ್ಟುಪಾಡು ಬೇರೆ.

ಮಹಾವಾಕ್ಯಗಳು

ಇದೊಂದು ಹದಿನೈದು ದಿನ ನಡೆಯಿತು. ನಮ್ಮ ಕ್ರಾಂತಿಗುರುವಿಗೆ ಆರ್ಕಾಟ್ ಭೀಮಾಚಾರ್ಯರ ಹೋಟೆಲಿನಲ್ಲಿ ಊಟದ ವ್ಯವಸ್ಥೆ ಮಾಡಿದ್ದೆವು. ಆತ ಷರಾಯಿ ಕೋಟು ಧರಿಸಿದ್ದ. ಹುಲುಸಾಗಿ ಗಡ್ಡ. ತಲೆಯ ಮೇಲೆ ಉತ್ತರ ದೇಶದವರಂತೆ ಸೊಟ್ಟ ಸೊಟ್ಟ ರುಮಾಲು. ಎಡ ಎದೆಯ ಮೇಲೆ ರುಮಾಲಿನ ಚುಂಗು. (ಇದನ್ನು ನಾನೂ ಅನುಕರಣ ಮಾಡಿದ್ದೆನೆಂಬ ಸಂಗತಿಯನ್ನು ಡಿ.ವೆಂಕಟರಾಮಯ್ಯನವರನ್ನು ಕುರಿತ ಲೇಖನದಲ್ಲಿ ಹೇಳಿದ್ದೇನೆ.)

ಆ ನಮ್ಮ ಗುರು ಒಂದು ಹಾಡನ್ನು ಹೇಳಿಕೊಟ್ಟಿದ್ದು.

ಪಗಡೀ ಸಂಭಾಲೋ ಜಾತಾ
ಪಗಡೀ ಸಂಭಾಲೋ ॥

ಜಾತಾ ಎಂದರೆ ಯುದ್ಧ ಮಾಡುವ ಜಾತಿಯವನಂತೆ. “ಏ ಜಾತಾ, ರುಮಾಲನ್ನು ಸರಿ ಮಾಡಿಕೊ” ಎಂದರ್ಥವಂತೆ. ರುಮಾಲು ಸರಿಮಾಡಿಕೊ ಎಂದರೆ ಯುದ್ಧಕ್ಕೆ ಸಿದ್ಧನಾಗು ಎಂದು ತಾತ್ಪರ್ಯ.

ಈ ಮಹಾಕಾವ್ಯದ ಜೊತೆಗೆ ನಾವು ಕೆಲವು ಇಂಗ್ಲಿಷ್ ವಾಕ್ಯಗಳನ್ನು ಸೇರಿಸಿಕೊಂಡೆಕೊಂಡಿದ್ದೆವು. ಅವುಗಳಲ್ಲೊಂದು ಬೈರನ್ ಕವಿಯದು.

Freedom's battle once begun
Bequeathed from bleeding sire to son
Though battled oft, is ever won.

ಈ ಕ್ರಾಂತಿ ವಾತಾವರಣದಲ್ಲಿ ಮೂರು ನಾಲ್ಕು ತಿಂಗಳು ಕಳೆದೆವು. ಈ ಅನುಭವದಲ್ಲಿ ನನ್ನ ಜೊತೆಗಾರರಾಗಿದ್ದವರ ಪೈಕಿ ಒಬ್ಬರು (ನವರತ್ನ ರಾಮಾರಾಯರ ತಮ್ಮಂದಿರು) ನವರತ್ನ ಕೃಷ್ಣಸ್ವಾಮಿ.

ಇಂಥ ತರುಣ ಕ್ರಾಂತಿಕಾರರ ಗುಂಪು ಆಗ ಬಹುಶಃ ಎಲ್ಲ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಇತ್ತು. ಕಲ್ಕತ್ತಾದಲ್ಲಿ, ಮದರಾಸಿನಲ್ಲಿ, ಪಾಂಡಿಚೇರಿಯಲ್ಲಿ. ಮದರಾಸಿನಲ್ಲಿ ಎ.ಪಿ. ತಿರುಮಲಾಚಾರ್ ಮೊದಲಾದವರು ಮುಖ್ಯರು. ಇವರು ಶ್ರೀಮಂತ ಕುಟುಂಬದವರು. ಮಂಡ್ಯದ ಶ್ರೀವೈಷ್ಣವರ ಪಂಗಡದವರು. ಅವರ ಮನೆ ಪಾರ್ಥಸಾರಥಿಸ್ವಾಮಿ ದೇವಸ್ಥಾನದ ಮುಂದುಗಡೆ ತೆಪ್ಪಕೊಳದ ದಡದಲ್ಲಿತ್ತು. ವಿಶಾಲವಾದ ಮನೆ, ಸೊಗಸಾದ ಕಟ್ಟಡ. ೧೯೦೬-೭ರಲ್ಲಿ ಮದರಾಸಿನಲ್ಲಿ ಪ್ರಚಂಡ ಭಾಷಣಗಳನ್ನು ಮಾಡಿದ ಬಿಪಿನ ಚಂದ್ರಪಾಲ್ ಅವರು ಎಂ.ಪಿ. ತಿರುಮಲಾಚಾರ್ಯರ ಮನೆಯಲ್ಲಿ ಅತಿಥಿಯಾಗಿದ್ದರು.

ಈ ಮನೆತನದ ಒಂದು ಶಾಖೆ ಪಾಂಡಿಚೇರಿಯಲ್ಲಿತ್ತು. ಪಾಂಡಿಚೇರಿಯಲ್ಲಿ ಶ್ರೀನಿವಾಸಾಚಾರ್ಯರೆಂಬವರ ಆಶ್ರಯದಲ್ಲಿ ಇಂಡಿಯ ಪ್ರೆಸ್ ಎಂಬ ಮುದ್ರಣಾಲಯವೂ ಆ ಮುದ್ರಣಾಲಯದಲ್ಲಿ ಮುಖ್ಯವಾಗಿ "ಇಂಡಿಯ" ಎಂಬ ಹೆಸರಿನ ಇಂಗ್ಲಿಷ್ ದಿನಪತ್ರಿಕೆಯೂ "ವಿಜಯ" ಎಂಬ ಹೆಸರಿನ ತಮಿಳು ದಿನಪತ್ರಿಕೆಯೂ ನಡೆಯುತ್ತಿದ್ದವು. ಆಗ ಪ್ರಸಿದ್ಧ ತಮಿಳು ಕವಿಗಳಾದ ಸುಬ್ರಹ್ಮಣ್ಯ ಭಾರತಿಯವರು ಪಾಂಡಿಚೇರಿಯಲ್ಲಿದ್ದರು. ಮತ್ತು ಈ ಪತ್ರಿಕಾ ಕಾರ್ಯಗಳಲ್ಲಿಯೂ ದೇಶಾಭಿಮಾನದ ಮಾತಿನ ರಭಸದಲ್ಲಿಯೂ ಅವರೂ ಭಾಗಿಗಳಾದ್ದರು. ನಾನು ಅಲ್ಲಿ ಕಳೆದ ಕಾಲ ಬಹುಸುಖಕರವಾದದ್ದೆಂದು ನನಗೆ ಈಗ ಅನ್ನಿಸುತ್ತದೆ. ಆ ಸುಖದ ಮುಖ್ಯ ಭಾಗ ನಮ್ಮ ಬೇಜವಾಬ್ದಾರಿ. ಜವಾಬ್ದಾರಿಯಿಲ್ಲದ ಹರಟೆ; ಹಿಂದೇನು ಮುಂದೇನು ಎಂದ ವಿಚಾರ ಮಾಡದ ಹರಟೆ. ಮನಸ್ಸಿಗೆ ಬಂದದ್ದೇ ಲೇಖನ. ಹಿಡಿದದ್ದೇ ವಾದ.

ಈ ಪ್ರಕರಣವನ್ನು ಇಲ್ಲಿಗೆ ಬಿಡುತ್ತೇನೆ.

೨೮

ಕ್ರಮಬದ್ಧ ವ್ಯಾಸಂಗ

ನಾನು ಸ್ಕೂಲು ಎಂಬುದಕ್ಕೆ ಶರಣುಹೊಡೆದು (೧೯೦೨) ಎಪ್ಪತ್ತು ವರ್ಷವಾಗಿದೆ. ಈಗ ಆ ಎಪ್ಪತ್ತು ವರ್ಷಗಳ ಸ್ವಂತ ಚರಿತ್ರೆಯನ್ನು ವಿಮರ್ಶೆ ಮಾಡಿಕೊಂಡಿದ್ದೇನೆ. ಅದರಿಂದ ನನಗೆ ತೋರಿಬಂದಿರುವ ಪಾಠಗಳು ಎರಡು:

1. ಆಗಿನ ಪಾಠಯೋಜನೆ ಪಾಠಕ್ರಮಗಳು ಚೆನ್ನಾಗಿದ್ದವು. ಅವುಗಳಲ್ಲಿ ಯಾವ ದೋಷವೂ ಇರಲಿಲ್ಲ.
2. ಓದಿನಿಂದ ಪೂರ್ತಿ ಪ್ರಯೋಜನ ಪಡೆಯಬೇಕಾದರೆ, ಅದು ಗೊತ್ತಾದ ಕ್ರಮದಲ್ಲಿ ಅನುಸ್ಯೂತವಾಗಿ, ಅಲ್ಲಲ್ಲಿ ಬಿರುಕು ಬಿಡದೆ ನಡೆದಿರಬೇಕು.

ಈ ಎರಡೂ ನಮ್ಮ ಇಂದಿನ ಸಂದರ್ಭಕ್ಕೆ ಮುಖ್ಯವಾದ ಸಂಗತಿ ಎಂದು ನಾನು ತಿಳಿದುಕೊಂಡಿದ್ದೇನೆ.

ದೋಷಾರೋಪಣೆ

ನಮ್ಮ ದೇಶಾಭಿಮಾನದ ಅವಸರದಲ್ಲಿ, ಅದರಲ್ಲಿಯೂ ಕಾಂಗ್ರೆಸ್ ನಾಯಕರ ಧೋರಣೆಯಲ್ಲಿ ಬ್ರಿಟಿಷ್ ಸರಕಾರ ಈ ದೇಶದಲ್ಲಿ ಪ್ರಚಾರ ಮಾಡಿದ ವಿದ್ಯಾ ಪದ್ಧತಿಯಲ್ಲಿ ದೋಷಾರೋಪಣೆ ಮಾಡುವುದು ಸಾಮಾನ್ಯವಾಗಿತ್ತು. ಈಗಲೂ ಆ ದೋಷೋದ್ಘಾಟನೆಯ ಜಾಡು ಉಳಿದಿದೆ. "ಬ್ರಿಟಿಷರಿಗೆ ಬೇಕಾಗಿದ್ದದ್ದು ಕಾರಕೂನ ಸಿಬ್ಬಂದಿ. ಅವರು ಸ್ಥಾಪಿಸಿದ ವಿಶ್ವವಿದ್ಯಾಲಯಗಳೂ ಕಾಲೇಜುಗಳೂ ಕಾರಕೂನ ತಯಾರಿಕೆಯ ಕಾರ್ಖಾನೆಗಳು, ಗುಮಾಸ್ತರಿಗಿಂತ ಮೇಲ್ಮಟ್ಟದ ವಿದ್ಯಾಪ್ರಚಾರಕ್ಕೆ ಬ್ರಿಟಿಷರು ಮನಸ್ಸಿಲ್ಲದವರಾಗಿದ್ದರು. ಹೆಚ್ಚು ವಿದ್ಯೆಯಿಂದ ಇಂಡಿಯದ ಜನ ಪ್ರಗತಿಶೀಲರಾಗಿ ಎಲ್ಲಿ ತಮಗೆ ಸರಿಸಮಾನಸ್ಥರಾದಾರೋ ಎಂಬ ಭೀತಿ ಬ್ರಿಟಿಷ್ ಜನಕ್ಕೆ ಇತ್ತು. ಆದದ್ದರಿಂದ ಅವರ ವಿದ್ಯಾಭ್ಯಾಸದಲ್ಲಿ ಅನೇಕ ಲೋಪಗಳು ನಡೆದುಕೊಂಡು ಬಂದವು–ಹೀಗೆಂಬುದು ಕೆಲವು ಕಾಲ ನಮ್ಮ ರಾಜಕೀಯಸ್ಥರ ದೊಡ್ಡ ಆಕ್ಷೇಪಣೆಯಾಗಿತ್ತು. ಬ್ರಿಟಿಷರು ನಮ್ಮ

ದೇಶಭಾಷೆಗಳನ್ನು ತುಳಿದುಹಾಕಿದರು. ಆದದ್ದರಿಂದ ನಮ್ಮ ಭಾಷಣಕರ್ತರಿಗೆ ಇಂಗ್ಲಿಷ್ ಹೊರತು ತಮ್ಮ ಸ್ವಭಾಷೆಯಲ್ಲಿ ಉಪನ್ಯಾಸ ಮಾಡುವುದು ಅಸಾಧ್ಯವಾಯಿತಂತೆ. ಹೀಗೆ ನನ್ನ ರಾಜಕೀಯ ಸ್ನೇಹಿತರು ವಾದ ಮಾಡಿದ್ದನ್ನು ನಾನು ನಾಲ್ಕಾರು ಸಲ ಕೇಳಿದ್ದೇನೆ. ಆ ವಾದವನ್ನು ನಾನು ಎಷ್ಟು ಮಾತ್ರವೂ ಒಪ್ಪಲಾರೆ.

ಸೂತ್ರದ್ವಯ

ಆ ಕಾಲದಲ್ಲಿ ಸರ್ವತ್ರ ಪ್ರಚಲಿತವಾಗಿದ್ದ ವಿದ್ಯಾಪ್ರಚಾರ ಸೂತ್ರಗಳು ಎರಡು:

1. The three Rs, -Reading, (W)riting, (A)rithmetic.

   (ಓದು, ಬರಹ, ಲೆಕ್ಕಾಚಾರ–ಇವು ಮುಖ್ಯಾಂಶಗಳು).

2. Something of everything and everything of something.

   (ಎಲ್ಲ ವಿಷಯಗಳಲ್ಲೂ ಕೊಂಚ ಪರಿಚಿತಿ: ಒಂದು ಗೊತ್ತಾದ ವಿಷಯದಲ್ಲಿ ಪರಿಣಿತಿ).

ಇದೇ “ಲಿಬರಲ್ ಎಜ್ಯುಕೇಷನ್” –ಎಂದರೆ ಉದಾರವಾದ ವಿದ್ಯಾಪದ್ಧತಿ.

ಈ ಸೂತ್ರಗಳನ್ನು ಆ ಕಾಲದಲ್ಲಿ ಎಲ್ಲ ದೇಶಗಳವರೂ ಅಂಗೀಕರಿಸಿದ್ದರು. ಇಂಗ್ಲೆಂಡಿನಲ್ಲಿ ಈ ಸೂತ್ರಗಳು ಅಂಗೀಕೃತವಾಗಿದ್ದವು. ಮತ್ತು ಈ ಸೂತ್ರಗಳು ಇಂಡಿಯಾದ ವಿದ್ಯಾಸಂಪ್ರದಾಯದಲ್ಲೂ ಹಿಂದಿನಿಂದ ರೂಢವಾಗಿದ್ದವು.

ಓದು ಬರಹ ಲೆಕ್ಕಾಚಾರಗಳು ಸರ್ವ ಜನಕ್ಕೂ ಬೇಕಾದ ವಿದ್ಯಾಂಶ. ಅವು ಯಾರಿಗೆ ಬೇಡ? ಮತ್ತು ದೊಡ್ಡ ಶಾಸ್ತ್ರಪಾಂಡಿತ್ಯ ಸಂಪಾದಿಸಬೇಕೆನ್ನುವವರಿಗೆ ಓದು ಬರಹ ಲೆಕ್ಕಾಚಾರಗಳು ಬೇಡವೆ? ಅವು ಎಲ್ಲಕ್ಕೂ ತಳಹದಿ.

ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಬಂದಿರುವ ನ್ಯೂನತೆ ಈ ಮೂರು ವಿಷಯಕ್ಕೆ. ಸ್ಫುಟವಾಗಿ ಅಕ್ಷರೋಚ್ಚಾರಣೆ ಮಾಡಿ ಓದುವುದು; ಅಕ್ಷರಗಳನ್ನು ವಿರಳ ವಿರಳವಾಗಿ ಓದಿಗೆ ಅನುಕೂಲಿಸುವಂತೆ ಬರೆಯುವುದು; ಪೇಟೆಯ ಗಣಿತವನ್ನು ಹೆಚ್ಚು ಆಯಾಸ ಪಡದೆ, ಹೆಚ್ಚು ಕಾಲ ತೆಗೆದುಕೊಳ್ಳದೆ, ತಪ್ಪಿಲ್ಲದೆ ಮಾಡುವುದು. ಪೂರ್ವದಲ್ಲಿ ಇದನ್ನು ಮಾನಸಿಕ ಗಣಿತವೆಂದು ಕರೆಯುತ್ತಿದ್ದರು.

ಅಂದು-ಇಂದು

ಈ ಮೂರು ಮೂಲಾಂಶಗಳೂ ಈಗ ಕ್ಷೀಣವಾಗಿವೆಯೆಂದು ನನ್ನ ತಿಳಿವಳಿಕೆ. ಇನ್ನು ಇದಕ್ಕಿಂತ ಮೇಲಿನ ವಿದ್ಯಾಭ್ಯಾಸ ಕ್ರಮದಲ್ಲಿ ಮೇಲಿನ ಎರಡನೆಯ ಸೂತ್ರ–ಎಲ್ಲ ವಿಷಯಗಳಲ್ಲೂ ಪರಿಚಿತಿ, ಒಂದು ವಿಷಯದಲ್ಲಿ ಪರಿಣಿತಿ ಎಂಬ ಸೂತ್ರ-ಅನ್ವಯವಾಗಿತ್ತು. ಆಗಿನ ಎಫ್.ಎ., ಬಿ.ಎ. ತರಗತಿಗಳಲ್ಲಿ ಗಣಿತವೋ ಸಾಹಿತ್ಯವೋ ಚರಿತ್ರೆಯೋ ಮುಖ್ಯ ವಿಷಯವಾಗಿದ್ದದ್ದರ ಜೊತೆಗೆ ಕೆಮಿಸ್ಟ್ರಿ, ಜಿಯಾಲಜಿ, ದೇಶಚರಿತ್ರೆ, ಒಂದಿಷ್ಟು ಕಾವ್ಯ-ಇವು ಕೂಡಿಕೊಂಡಿರುತ್ತಿದ್ದವು. ವೆಂಕಟನಾರಣಪ್ಪನವರು ಫಿಸಿಕ್ಸ್, ಶಾಸ್ತ್ರದ ಪ್ರೊಫೆಸರು; ಆದರೆ ಅವರಿಗೆ ರೊಮ್ ದೇಶದ ಪ್ರಾಚೀನ ಚರಿತ್ರೆ, ಗ್ರೀಸಿನ ಪ್ರಾಚೀನ ಚರಿತ್ರೆ–ಇವೂ ಅಷ್ಟಿಷ್ಟು ಗೊತ್ತಿದ್ದವು. ಅವರು ದೇಹರಚನೆಯ ಶಾಸ್ತ್ರವನ್ನೂ (ಫಿಸಿಯಾಲಜಿ) ಬೋಧನೆ ಮಾಡುತ್ತಿದ್ದರು. ಹಿಂದೆ ರಾಮದಾಸಪ್ಪನವರ ವಿಷಯವನ್ನು ಪ್ರಸ್ತಾವಿಸಿದೆ. ಅವರು ಹಿಸ್ಟರಿ ಬೋಧಕರು. ಆದರೆ ಅವರಿಗೆ ಮುಖ್ಯಮುಖ್ಯ ಕವಿಗಳು ಚೆನ್ನಾಗಿ ಪರಿಚಿತರಾಗಿದ್ದರು. ಅರ್ಥಶಾಸ್ತ್ರದಲ್ಲಿಯೂ ಯತ್ಕಿಂಚಿತ್ತು ಪರಿಚಯವಿತ್ತು. ಹೀಗೆ ಅಂದಿನ ವಿದ್ಯಾವಂತರಿಗೆ ಪ್ರಪಂಚ ಜೀವನಕ್ಕೆ ಬೇಕಾದ ಎಲ್ಲಬಗೆಯ ತಿಳಿವಳಿಕೆಗಳೂ ಅಷ್ಟಿಷ್ಟು ಇರುತ್ತಿದ್ದವು. ಈ ತಿಳಿವಳಿಕೆಗಳ ಕಲಸುಮೇಲೋಗರದ ಜೊತೆಗೆ ಯಾವುದೋ ಒಂದು ಶಾಸ್ತ್ರವನ್ನು ಹೆಚ್ಚಾಗಿ ವ್ಯವಸಾಯ ಮಾಡಿದ್ದರಿಂದ ಬುದ್ಧಿಯ ವಿಚಾರಶಕ್ತಿ ದೃಢಪಟ್ಟಿತ್ತು. ಈಗಿನ ವಿದ್ಯಾರ್ಥಿ ಫಿಸಿಕ್ಸ್‌ನಲ್ಲಿ ಮಹಾ ಪಂಡಿತನೆನಿಸಿಕೊಂಡಿರುತ್ತಾನೆ; ಭೀಷ್ಮ ಎಂದರೆ ಯಾರೋ ಆತನಿಗೆ ತಿಳಿಯದು. ಷೆಲ್ಲಿ ಎಂದರೆ ಯಾರೋ ಗೊತ್ತಿಲ್ಲ. ಹೀಗೆ ಇಂದಿನ ವಿದ್ಯಾಭ್ಯಾಸ ತುಂಡು ತುಣುಕುಗಳ ರಾಶಿಯಾಗಿದೆ.

ಪುಷ್ಟಿ–ಹಿತ

ಹಸಿವಾದವನು ತನ್ನ ಮನೆಯಲ್ಲಿ ಎಲೆಯ ಮುಂದೆ ಕುಳಿತು ತಾಯಿಯೋ ಹೆಂಡಿತಿಯೋ ಅತ್ತಿಗೆಯೋ ಯಾರೋ ಮನೆಯವರು ಮಾಡಿ ಬಡಿಸಿದ ಅಡಿಗೆಯನ್ನು ಊಟ ಮಾಡುವುದು ಒಂದು ಬಗೆ. ಅದೇ ಹಸಿವಿನ ಮನುಷ್ಯ ಮಿಠಾಯಂಗಡಿಯಿಂದ ವಡೆಗಳನ್ನೂ ಇನ್ನೊಂದಂಗಡಿಯಿಂದ ಜಿಲೇಬಿಯನ್ನೂ ಮತ್ತೊಂದರಿಂದ ಬ್ರೆಡ್ಡನ್ನೂ ಹರಕು ಮುರಕು ತಂದು ಹಸಿವು ತೀರಿಸಿಕೊಳ್ಳುವುದು ಇನ್ನೊಂದು ಬಗೆ. ಈ ಎರಡನೆಯ ಬಗೆಯಲ್ಲಿ ಹೊಟ್ಟೆ ತುಂಬಿತು; ಪುಷ್ಟಿ ಬರಲಿಲ್ಲ. ಅಜೀರ್ಣವಾಯಿತು; ಬಲ ಬರಲಿಲ್ಲ. ಈ ವಿಷಯವನ್ನು ನಮ್ಮ ದೇಶದ ವಿದ್ಯಾ ಸುಧಾರಕರು ಸಾವಧಾನವಾಗಿ ಆಲೋಚನೆ ಮಾಡಬೇಕೆಂದು ನನಗನ್ನಿಸುತ್ತದೆ. ಇಪ್ಪತ್ತು ಅಜೀರ್ಣವಾದ ತುಣುಕುಗಳಿಗಿಂತ ಜೀರ್ಣವಾದ ಐದು ಪದಾರ್ಥ ಹೆಚ್ಚು ಹಿತಕರವೆಂದು ನನಗೆ ಅನ್ನಿಸುತ್ತದೆ.

ಸ್ಕೂಲು ಕಾಲೇಜುಗಳಲ್ಲಿ ಮೆಟ್ಟಿಲು ಮೆಟ್ಟಲಾಗಿ ಓದಿದವನಿಗೆ ವಿದ್ಯೆಯಲ್ಲಿ ಒಂದು ನಿಷ್ಕರ್ಷೆಯಾದ ಆಕಾರ ಲಾಭವಾಗುತ್ತದೆ. ಹಾಗಲ್ಲದೆ ಅಲ್ಲೊಂದು ಹೆಜ್ಜೆಯಿಟ್ಟು ಹಾರೋಣ, ಇಲ್ಲೊಂದು ಹೆಜ್ಜೆಯಿಟ್ಟು ನೆಗೆಯೋಣ–ಹೀಗೆ ಹತ್ತಿದರೆ ಅವನ ವಿದ್ಯೆಯಲ್ಲಿ ಸಮಗ್ರತೆಯಿರುವುದಿಲ್ಲ. ಅಲ್ಲಲ್ಲಿ ಬಿರುಕು ಬಿಟ್ಟುಕೊಂಡಿರುತ್ತದೆ. ನಮ್ಮ ಹಲ್ಲುಸಾಲಿನಲ್ಲಿ ಹಲ್ಲು ಹಲ್ಲಿಗೆ ಹೊಂದಿಕೊಂಡಿದ್ದರೆ, ಆ ಕಾರಣದಿಂದ ಒಟ್ಟು ಹಲ್ಲು ಸಾಲುಬಲಪಡುತ್ತದೆ. ಹಲ್ಲುಗಳ ನಡುನಡುವೆ ಸಂದುಗಳೂ ಬಿಡುವುಗಳೂ ಬಿಟ್ಟಿದ್ದರೆ ಆ ಹಲ್ಲುಸಾಲು ಬಹುಕಾಲ ಬಾಳಲಾರದು. ನನ್ನ ಸ್ವಂತ ವಿದ್ಯೆಯಲ್ಲಿ ಭಾರಿಭಾರಿ ಬಿರುಕುಗಳೂ ಬಿಡುವುಗಳೂ ನಿಂತುಹೋಗಿವೆ. ವ್ಯಾಕರಣದಲ್ಲಿಯಾಗಲಿ ಛಂದಸ್ಸಿನಲ್ಲಾಗಲಿ ಒಂದು ನಿಷ್ಕರ್ಷೆಯ ಬುದ್ಧಿಯಿಂದ ಮಾತನಾಡುವುದು ನನಗೆ ಕಷ್ಟವಾಗಿದೆ. ಅಲ್ಲೊಂದು ಸಂದೇಹ ಇಲ್ಲೊಂದು ಸಂದೇಹ ಇದ್ದೇ ಇರುತ್ತದೆ. ಹೀಗೆ ಕ್ರಮವಾದ ವಿದ್ಯಾಭ್ಯಾಸದ ಬಲ ನನ್ನ ಪಾಲಿಗೆ ಬಂದಿಲ್ಲ.

ಈ ಮಾತನ್ನು ನಾನು ವಿಶೇಷವಾಗಿ ಹೇಳುವುದಕ್ಕೆ ಒಂದು ಕಾರಣವಿದೆ. ನನ್ನನ್ನು ಕುರಿತು ಸ್ನೇಹಿತರು ಪ್ರಶಂಸೆ ಮಾಡುವಾಗ ನಾನು ಓದದೆಯೇ ಪಂಡಿತನಾದೆನೆಂದು ಹೇಳುವುದುಂಟು. ಆ ಮಾತನ್ನು ಯಾರೂ ಯಥಾವತ್ತಾದದ್ದೆಂದು ಭಾವಿಸಬಾರದು. ನಿಜವಾದ ಪಾಂಡಿತ್ಯ ಹಾಗೆ ಬರಲಾರದು. ನಾನು ಬೀದಿಯ ಸೋಂಬೇರಿಯಂತೆ. ಅವರ ಮನೆಯ ಕಿಟಿಕಿಯಿಂದ ಹೊರಕ್ಕೆ ಬಿದ್ದ ಎಲೆಯಿಂದ ಪಲ್ಯ, ಇನ್ನೊಬ್ಬರ ಮನೆಯವರಿಂದ ವಾಂಗೀಭಾತು, ಮೂರನೆಯ ಮನೆಯವರಿಂದ ಲಾಡುಚೂರು–ಹೀಗೆ ಇಲ್ಲಷ್ಟು ಎಂಜಲು

ಅಲ್ಲಷ್ಟು ಎಂಜಲು ತಿಂದು ಹೊಟ್ಟೆ ತುಂಬಿಸಿಕೊಂಡವನು. ಇದು ಕ್ರಮವಾದ ವಿದ್ವತ್ತೆಯಲ್ಲ. ನಮ್ಮ ಯುವಕ ವಿದ್ಯಾರ್ಥಿಗಳು ಇದನ್ನು ಲಾಲಿಸಬೇಕು. ಅವರು ತಮ್ಮ ತರಗತಿಗೆ ನಿಯತವಾಗಿರುವ ಗ್ರಂಥಗಳನ್ನೋದಬೇಕು. ಅಭ್ಯಾಸಗಳನ್ನು ಸಾಧಿಸಬೇಕು. ತರಗತಿಯಿಂದ ತರಗತಿಗೆ ನಿಜವಾದ ಯೋಗ್ಯತೆಯಿಂದ ಹತ್ತಬೇಕು. ನಂಬರುಗಳಿಗಾಗಿ ಹುಡುಕಾಡದೆ ಪಾಠದಲ್ಲಿ ಶ್ರದ್ಧೆಯಿಟ್ಟು ವಿದ್ಯೆಯನ್ನು ಸಂಪಾದಿಸಬೇಕು. ಆಗ ನಮ್ಮ ದೇಶದ ವಿದ್ಯಾಸಂಪತ್ತು ನಿಜವಾದ ಅಭಿವೃದ್ಧಿಯನ್ನು ಪಡೆದೀತು.

೨೭

ವಿ. ಎನ್. ನರಸಿಂಹಯ್ಯಂಗಾರ್ಯರು

ಹಿಂದಿನ ಕಾಲದ ಪ್ರಮುಖ ಮೈಸೂರಿಗರಲ್ಲಿ ಬಹು ಪ್ರಸಿದ್ಧರಾಗಿದ್ದವರು ವಿ. ಎನ್. ನರಸಿಂಹಯ್ಯಂಗಾರ್ ಎಂಬವರು. ಇವರಿಗೆ ಮೀಶೆ ನರಸಿಂಹಯ್ಯಂಗಾರ್ಯರೆಂದೂ ಹೆಸರಿತ್ತು. ಕಾರಣವೇನೆಂದರೆ: ಶ್ರೀವೈಷ್ಣವ ಬ್ರಾಹ್ಮಣರಲ್ಲಿ ಸಾಮಾನ್ಯವಾಗಿ ಅದುವರೆಗೂ ರೂಢಿಯಲ್ಲಿಲ್ಲದಿದ್ದ ಮೀಶೆಯ ಪದ್ಧತಿಯನ್ನು ಮೊದಲುಮಾಡಿದವರು ಈ ನರಸಿಂಹಯ್ಯಂಗಾರ್ಯರು. ಇವರು ಹೆಬ್ಬಾರ್ ಶ್ರೀವೈಷ್ಣವರು. ಬ್ರಿಟಿಷ್ ಕಮಿಷನರುಗಳ ಕಾಲದಲ್ಲಿ ವಿದ್ಯೆ ಸಾಮರ್ಥ್ಯಗಳಿಂದ ಅಷ್ಟಿಷ್ಟು ಮುಂದೆ ಬಂದಿದ್ದವರು ಹೆಬ್ಬಾರ್ ಶ್ರೀವೈಷ್ಣವರು. ಮೊದಮೊದಲು ಹೆಸರಾದವರು ಸಾಹುಕಾರ್ (ರಾವ್ ಬಹದ್ದೂರ್ ಗರುಡಚಾರ್ಯರ ತಾತ) ಗರುಡಾಚಾರ್ಯರು, ಪೈಮಾಸ್ತ್ರಿ ವೆಂಕಟಾಚಾರ್ಯರು, ಕೋಲಾರದ ಡೆಪ್ಯುಟಿ ಕಮಿಷನರ್ ಕೃಷ್ಣಯ್ಯಂಗಾರ್ಯರು, ಭಕ್ಷಿತಿಮ್ಮಪ್ಪನವರು, ಭಕ್ಷಿ ಶಿಂಗಪ್ಪನವರು, ಬಿ. ವೆಂಕಟಪತಯ್ಯಂಗಾರ್ಯರು, ವಿ. ಎನ್, ನರಸಿಂಹಯ್ಯಂಗಾರ್ಯರು ಇತ್ಯಾದಿ.

ನರಸಿಂಹಯ್ಯಂಗಾರ್ಯರು ಸಂಸ್ಕೃತ ಬಲ್ಲವರು, ರಸಿಕರು, ಪರಿಹಾಸಶೀಲರು. ಇವರು ದಿವಾನ್ ಶೇಷಾದ್ರಯ್ಯರ ಕಾಲದಲ್ಲಿ ಡೆಪ್ಯುಟಿ ಕಮಿಷನರ್ ಪದವಿಗೆ ಹತ್ತಿ ಕೆಲಕಾಲ ಅರಮನೆಯ ಕಂಟ್ರೋಲರಾಗಿದ್ದರು. ಶೇಷಾದ್ರಯ್ಯರಿಗೂ ಇವರಿಗೂ ವಿರಸವೆಂದು ಪ್ರಸಿದ್ಧಿ. ಅಯ್ಯರು ಮದರಾಸ್ ಪಾರ್ಟಿ. ಅಯ್ಯಂಗಾರ್ಯರು ಮೈಸೂರು ಪಾರ್ಟಿ. ಬಹುಶಃ ಈ ಕಾರಣದಿಂದಲೋ ಏನೋ ನರಸಿಂಹಯ್ಯಂಗಾರ್ಯರು ಇನ್ನೂ ಮೇಲ್ದರ್ಜೆಗೆ ಏಳಲು ಅವಕಾಶವಾಗಲಿಲ್ಲ. ಅವರು ಯಾವುದೋ ಸಂದರ್ಭದಲ್ಲಿ ರೈಲುದಾರಿಯ ಮೇಲೆ ನಡೆದೋ ಕುದುರೆಗಾಡಿಯಲ್ಲೋ ಬಂದರೆಂಬ ಆಪಾದನೆಯ ಮೇಲೆ ಸರಕಾರ ಅವರನ್ನು ದಂಡಿಸಲು ಪ್ರಯತ್ನಿಸಿತಂತೆ. ಈ ಸಂದರ್ಭದಲ್ಲಿ ನರಸಿಂಹಯ್ಯಂಗಾರ್ಯರು ಕೆಲಸದಿಂದ ನಿವೃತ್ತರಾಗಬೇಕಾಯಿತು. ಇದು ನಾನು ಕೇಳಿರುವ ಕಥೆ. ಇದನ್ನು ಯಾರಾದರೂ ಸಮಗ್ರವಾಗಿ ತಿಳಿಸಿದರೆ ನಾನು ಕೃತಜ್ಞನಾಗಿರುತ್ತೇನೆ.

ನರಸಿಂಹಯ್ಯಂಗಾರ್ಯರು ನಿವೃತ್ತಿ ಹೊಂದಿದ ಕಾರಣದಿಂದ ತಮ್ಮ ಆತ್ಮವನ್ನು ಕುಗ್ಗಿಸಿಕೊಂಡವರಲ್ಲ ಎಂದು ಮಾತ್ರ ನಾನು ಖಂಡಿತವಾಗಿ ಹೇಳಬಲ್ಲೆ. ಅವರನ್ನು ಒಂದೆರಡು ಸಾರಿ ನೋಡುವ ಯೋಗ ನನ್ನ ಪಾಲಿಗೆ ಬಂದಿತ್ತು.

'ಮೈಸೂರು ಟೈಮ್ಸ್'

ಅವರ ಮನೆಯಿದ್ದದ್ದು ಬೆಂಗಳೂರು ಮುನಿಸಿಪಲ್ ಆಫೀಸಿನ ಎದುರಿಗೆ ಯುನೈಟೆಡ್ ಇಂಡಿಯ ಕಟ್ಟಡವಿರುವ ಜಾಗದಲ್ಲಿ. ಭಾರಿ ಮನೆ. ಅದರ ದಕ್ಷಿಣ ಪಾರ್ಶ್ವದಲ್ಲಿ ಈಗ ಕೆನರಾ ಬ್ಯಾಂಕಿನ ಕಟ್ಟಡವಿರುವ ಕಡೆ ಇದ್ದದ್ದು ಎಸ್.ಎನ್.ರಾಮಸ್ವಾಮಯ್ಯಂಗಾರ್ಯರ ಮನೆ. ರಾಮಸ್ವಾಮಯ್ಯಂಗಾರ್ಯರ ಅಳಿಯಂದಿರು ಶಾಮಣ್ಣನವರು ವಿ.ಎನ್.ನರಸಿಂಹಯ್ಯಂಗಾರ್ಯರ ಎರಡನೆಯ ಮಗ. ನರಸಿಂಹಯ್ಯಂಗಾರ್ಯರೂ ರಾಮಸ್ವಾಮಯ್ಯಂಗಾರ್ಯರೂ ಬೀಗರಾಗಿದ್ದದ್ದಕ್ಕಿಂತ ಹೆಚ್ಚಾಗಿ ಸ್ನೇಹಿತರಾಗಿದ್ದರು. ಇಬ್ಬರಿಗೂ ಇಂಗ್ಲಿಷಿನಲ್ಲಿ ಸಮರ್ಥರೆಂಬ ಪ್ರಸಿದ್ಧಿ. ನಾನು ರಾಮಸ್ವಾಮಯ್ಯಂಗಾರ್ಯರಿಗೆ "ಮೈಸೂರು ಟೈಮ್ಸ್" ಪತ್ರಿಕೆಯ ಚಾಲನೆಯಲ್ಲಿ ಸಹಾಯಕ ಅಸಿಸ್ಟೆಂಟ್ ಎಡಿಟರ್. ಈ ಕಾರಣದಿಂದ ರಾಮಸ್ವಾಮಯ್ಯಂಗಾರ್ಯರ ಮನೆಗೆ ವಾರಕ್ಕೆ ಎರಡು ಸಾರಿ ಹೋಗುತ್ತಿದ್ದೆ. ಒಂದು ಸಾರಿ "ಮೈಸೂರು ಟೈಮ್ಸ್ " ಪತ್ರಿಕೆಯ ಯಾವುದೋ ಲೇಖನದಲ್ಲಿ ಒಂದು ಸಂಸ್ಕೃತ ಪದ್ಯವನ್ನು ಉದಾಹರಣೆ ಮಾಡಿದ್ದೆ.

> ಅಸ್ತಿ ಸ್ವಾದಯಿತುಂ ಸುಧಾಽಸ್ತಿ ವಸಿತುಂ
> ವಾಸೋ ನಭಶ್ಚಾರಿಣಾಮ್
> ಧರ್ತುಂ ಸಂತಿ ಚ ಭೂಷಣಾನಿ ಶತಶಃ
> ನ ತ್ವಸ್ತಿ ಧೀರ್ಜೀವಿತುಮ್
> ಯೇನಾನ್ಯಾನುಪಜೀವ್ಯ ಸರ್ವಸುಲಭೇ
> ಕರ್ಮೈಕಲಭ್ಯೇ ಪದೇ–
> ಽಪ್ಯಾಯಾಸ್ಯಂತಿ ವ್ಯಥೈವ ಸೇವಕ
> ಇತಿ ಸ್ವಾಮೀತಿ ದುರ್ಮೇಧಸಃ ॥

"ಎಂಥ ದಡ್ಡರಯ್ಯ ದೇವತೆಗಳು! ಅವರಿಗೆ ಸವಿಯಲಿಕ್ಕೆ ಅಮೃತವಿದೆ; ವಾಸ ಮಾಡಲು ಸ್ವರ್ಗಲೋಕವಿದೆ; ಧರಿಸಿಕೊಳ್ಳುವುದಕ್ಕೆ ಸಾವಿರಾರು ಆಭರಣಗಳಿವೆ. ಬದುಕುವುದಕ್ಕೆ ಬುದ್ಧಿ ಮಾತ್ರ ಇಲ್ಲವಲ್ಲ! ಅವರಿಗೆ ದೊರೆತಿರುವ ಪದವಿಯಾದರೋ ಯಾರು ಬೇಕಾದರೂ

ಸಂಪಾದಿಸಿಕೊಳ್ಳಬಹುದಾದದ್ದು. ಅಲ್ಲಿ ಇನ್ನೊಬ್ಬರ ಶಿಫಾರಸು ಬೇಕಿಲ್ಲ. ಸತ್ಕರ್ಮ ಮಾಡಿದರೆ ಸಿದ್ಧವಾಗಿರುತ್ತದೆ ಆ ಪದವಿ. ಹೀಗೆ ಯಾವ ಹಂಗೂ ಇಲ್ಲದ ಆ ಲೋಕದಲ್ಲಿ ಈ ದೇವತೆಗಳು 'ಅವನು ದೊರೆ, ಇವನು ಸೇವಕ' ಎಂದುಕೊಂಡು ವ್ಯರ್ಥವಾಗಿ ಪ್ರಯಾಸಪಡುತ್ತಾರಲ್ಲ! ಇದೆಂಥ ಮೂಢತನ!"

(ಸ್ವರ್ಗಲೋಕದಲ್ಲಾದರೂ ಸಮಾನತ್ವವಿಲ್ಲವಲ್ಲ. ವಾಸ್ತವವಾಗಿ ನೋಡಿದರೆ ಅಲ್ಲಿಯ ಸೌಭಾಗ್ಯ ಕೇವಲ ಮೆರಿಟ್-ಯೋಗ್ಯತೆಗೆ ದೊರೆಯತಕ್ಕದ್ದು. ಶಿಫಾರಸಿನಿಂದಾಗಲಿ ಕೋಮುವಾರು ಹಕ್ಕುದಾರಿಕೆಯಿಂದಾಗಲಿ ದೊರೆಯತಕ್ಕದ್ದಲ್ಲ; ಹಾಗಿದ್ದರೂ ಅಲ್ಲಿ ಕೂಡ ಇಂದ್ರನು ರಾಜ, ಅಗ್ನಿಯು ದೂತ–ಮೊದಲಾದ ಭೇದಗಳನ್ನಿಟ್ಟುಕೊಂಡಿದ್ದಾರಲ್ಲ–ಎಂಥ ದಡ್ಡರು!)

ಈ ಶ್ಲೋಕವನ್ನು ವಿ.ಎನ್. ನರಸಿಂಹಯ್ಯಂಗಾರ್ಯರು ಓದಿ ಆ ಲೇಖನಿ ಬರೆದವನನ್ನು ತಾವು ನೋಡಬೇಂದು ರಾಮಸ್ವಾಮಯ್ಯಂಗಾರ್ಯರಿಗೆ ಹೇಳಿದರಂತೆ. ಇದೇ ರೀತಿ ಮೈಸೂರಿನ ಎಂ.ವೆಂಕಟಕೃಷ್ಣಯ್ಯನವರಿಗೂ ಹೇಳಿದರಂತೆ. ಈ ವರ್ತಮಾನವನ್ನು ಕೇಳಿ ನನಗೂ ಮನಸ್ಸು ಹಿಗ್ಗಿತು. ಇನ್ನೊಂದಾವರ್ತಿ ನರಸಿಂಹಯ್ಯಂಗಾರ್ಯರು ಮೈಸೂರಿನಿಂದ ಬೆಂಗಳೂರಿಗೆ ಬಂದು ರಾಮಸ್ವಾಮಯ್ಯಂಗಾರ್ಯರಲ್ಲಿಗೆ ದಯಮಾಡಿಸಿದಾಗ ರಾಮಸ್ವಾಮಯ್ಯಂಗಾರ್ಯರು ನನ್ನನ್ನು ನರಸಿಂಹಯ್ಯಂಗಾರ್ಯರಿಗೆ ಪರಿಚಯಮಾಡಿಸಿದರು. ಆ ವೇಳೆಗೆ ನಾನು ನರಸಿಂಹಯ್ಯಂಗಾರ್ಯರನ್ನು ಕುರಿತು ಕೆಲವು ಕಥನಗಳನ್ನು ಕೇಳಿದ್ದೆ. ಮುಖತಃ ಕಂಡಾಗ ಹೆಚ್ಚು ಮಾತುಕಥೆಯಾಡುವ ಸಲಿಗೆ ನನಗೆ ಬರಲಿಲ್ಲ. ದೊಡ್ಡವರಲ್ಲಿ ಭಯ ವಿನಯಗಳಿಂದ ನಡೆಯತಕ್ಕದ್ದೆಂಬುದನ್ನು ನನ್ನ ಹಿರಿಯರು ನನಗೆ ಕಲಿಸಿದ್ದರು.

ಸುಧಾರಕ

ನರಸಿಂಹಯ್ಯಂಗಾರ್ಯರು ಕೊಂಚ ಕೊಂಚ ಸಮಾಜ ಸುಧಾರಕರು (Social reformer). ಈ ಮನಃಪ್ರಗತಿಯ ಒಂದು ಲಾಂಛನ ಅವರ ಮೀಶೆ.

ಆ ಕಾಲದಲ್ಲಿ ಸಮುದ್ರಯಾನದ ಯುಕ್ತಾಯುಕ್ತತೆಗಳನ್ನು ಕುರಿತು ಚರ್ಚೆಯೆದ್ದಿತು. ಉಭಯ ಪಕ್ಷಗಳಲ್ಲೂ ಬಿರುಸಾದ ಚರ್ಚೆ. ನರಸಿಂಹಯ್ಯಂಗಾರ್ಯರು ವಿದೇಶಪ್ರವಾಸವು ಅವಶ್ಯವಾದದ್ದು, ಸಮುದ್ರಯಾನ ಪಾಪವಲ್ಲ ಎಂದು ವಾದಿಸಿದರು.

ನರಸಿಂಹಯ್ಯಂಗಾರ್ಯರು ಕೆಲ ಕಾಲ ಸೆನ್ಸಸ್ ಕಮಿಷನರ್ ಆಗಿದ್ದರು. ಆಗ ಒಂದಾನೊಂದು ಪಂಗಡದವರು–ಬಹುಶಃ ವಿಶ್ವಕರ್ಮದವರೋ ಏನೋ–ತಮ್ಮನ್ನು ಬ್ರಾಹ್ಮಣ ವರ್ಗದಲ್ಲಿ ಸೇರಿಸುವಂತೆ ಹುಕುಂ ಆಗಬೇಕೆಂದು ಸರಕಾರಕ್ಕೆ ಅರ್ಜಿ ಬರೆದುಕೊಂಡಿದ್ದರು. ಸರಕಾರದಿಂದ ಅದು ಸೆನ್ಸಸ್ ಕಮಿಷನರಿಗೆ ಬಂತು. ಸೆನ್ಸಸ್ ಕಮಿಷನರಾದ ನರಸಿಂಹಯ್ಯಂಗಾರ್ಯರು ತಮ್ಮ ಆಫೀಸಿನ ಮುಂದೆ ನೋಟೀಸು ಬೋರ್ಡಿನಲ್ಲಿ ಒಂದು ಜಾಹಿರಾತನ್ನು ಪ್ರಕಟಮಾಡಿಸಿದರು, ಹೀಗೆ:

"ಸೆನ್ಸಸ್ ವಿಷಯದಲ್ಲಿ ಅಹವಾಲು ಹೇಳಿಕೊಳ್ಳಬೇಕೆಂದಿರುವವರು ೧೫ನೆಯ ತಾರೀಖು ಸೋಮವಾರ ಬೆಳಗ್ಗೆ ೧೧ ಘಂಟೆಗೆ ಸೆನ್ಸಸ್ ಕಮಿಷನರ ಆಫೀಸಿಗೆ ಬಂದು ಅವರು ತಿಳಿಸುವ ವೇಳೆಗೆ ಕಮಿಷನರನ್ನು ಭೇಟಿ ಮಾಡಬಹುದು."

ಇತ್ಯರ್ಥ

ಈ ಜಾಹಿರಾತಿನ ಪ್ರಕಾರ ಗೊತ್ತಾದ ಹೊತ್ತಿಗೆ ಜನ ಬಹುಮಂದಿ ಸೇರಿದ್ದರು. ಕಮೀಷನರ ಜವಾನ ಬಾಗಿಲಲ್ಲಿ ನಿಂತು ಮೂರು ಸಾರಿ ಕೂಗಿದ, ಹೀಗೆ: "ಬ್ರಾಹ್ಮಣರು ಕಮಿಷನರ್ ಸಾಹೇಬರನ್ನು ನೋಡಲು ಈಗ ಬರಬಹುದು."

ಕಮೀಷನರನ್ನು ನೋಡಲು ಹೋದವರು ಯಾರೂ ಇರಲಿಲ್ಲ.

ಆಮೇಲೆ ಅದೇ ಜವಾನ "ಇತರರು ನೋಡಬೇಕಾದಲ್ಲಿ ಬರಬಹುದು" ಎಂದ. ಇತರರು ಯಾರು ಯಾರೋ ಹೋದರು, ಮೇಲೆ ಹೇಳಿದ ಅರ್ಜಿದಾರರೂ ಅವರ ಪೈಕಿ ಇದ್ದರು. ಈ ಅರ್ಜಿದಾರರು ತಮ್ಮನ್ನು "ಬ್ರಾಹ್ಮಣ ವರ್ಗದಲ್ಲಿ...." ಎನ್ನುತ್ತಲೇ ಕಮಿಷನರು "ಆ ವಿಚಾರ ಮುಗಿಯಿತು. ಬ್ರಾಹ್ಮಣರಾದವರು ಆಗಲೇ ಒಳಕ್ಕೆ ಬಂದಿರಬೇಕಾಗಿತ್ತು" ಎಂದರು.

ಅಲ್ಲಿಗೆ ಮುಗಿಯಿತು ಆ ಪ್ರಶ್ನೆ.

ವಾಗ್ವಿಜೃಂಭಣೆ

ನರಸಿಂಹಯ್ಯಂಗಾರ್ಯರು ಮಾಡಿದ ಒಂದು ರಾಜಕೀಯ ಭಾಷಣವನ್ನು ಕುರಿತು ಒಂದು ಟೀಕೆಯ ಮಾತು ಅವಶ್ಯವಾಗಿದೆ.

೧೯೦೮ರಲ್ಲಿ ದಿವಾನ್ ವಿ.ಪಿ. ಮಾಧವರಾಯರು ಮೈಸೂರು ಶಾಸನಸಭೆಯನ್ನು (ಲೆಜಿಸ್ಲೆಟಿವ್ ಕೌನ್ಸಿಲ್) ಸ್ಥಾಪನೆ ಮಾಡಿಸಿದರಷ್ಟೆ. ಆ ಸಭೆಗೆ ನರಸಿಂಹಯ್ಯಂಗಾರ್ಯರನ್ನು ಒಬ್ಬ ಸದಸ್ಯರನ್ನಾಗಿ ಸರಕಾರದವರು ನಿಯಮಿಸಿದರು. ಮತ್ತು ಆ ಸಭೆಯ ಮೊಟ್ಟಮೊದಲ ಅಧಿವೇಶನದಲ್ಲಿ ವೃತ್ತಪತ್ರಿಕೆಗಳ ನಿರ್ಬಂಧದ ಮಸೂದೆಯನ್ನು ಆಲೋಚನೆಗಿರಿಸಿದರು (Mysore Newspapers Regulation). ಆ ಮಸೂದೆಯನ್ನು ಅನುಮೋದಿಸಿ ನರಸಿಂಹಯ್ಯಂಗಾರ್ಯರು ಮಾಡಿದ ಭಾಷಣ ಪ್ರಗತಿ ವಿರೋಧವಾಗಿ, ಪ್ರಜಾಸ್ವಾತಂತ್ರ್ಯಕ್ಕೆ ವಿರೋಧವಾಗಿ ವಿಜೃಂಭಿಸಿತು. ನರಸಿಂಹಯ್ಯಂಗಾರ್ಯರ ವಾಕ್ಯ ಸರಣಿ “ವಿಜೃಂಭಣೆ” ಎಂಬ ಮಾತನ್ನು ಅಪೇಕ್ಷಿಸುತ್ತದೆ. ಅದು ಇಂಗ್ಲಿಷ್ ಶೈಲಿಯಲ್ಲಿ ಕಟುವಾಗಿ, ಪಟುವಾಗಿ, ತೀವ್ರವಾದ ಖಂಡನೆಯನ್ನೊಳಗೊಂಡಿದ್ದಾಗಿ ಪ್ರೌಢವೆನಿಸುವಂತಿತ್ತು. ಅವರು ಅನೇಕ ದೊಡ್ಡ ದೊಡ್ಡ ಮಾತುಗಳನ್ನು ಪ್ರಯೋಗಿಸಿದ್ದರು. ಅದರ ಜೊತೆಗೆ ಪತ್ರಿಕಾಕರ್ತರನ್ನು ಹಾಸ್ಯಕ್ಕೆ ಗುರಿ ಮಾಡಿದ್ದರು, ಹೀಗೆ:

“ಈಗ ನ್ಯೂಸ್‌ಪೇಪರ್ ಕೆಲಸಕ್ಕೆ ಬರುವ ಜನ ಎಂಥವರು? ಅರ್ಧ ಮರ್ಧ ಕಲಿತವರು. ಪೂರ್ಣ ವಿದ್ವಾಂಸರಲ್ಲ. ಅಕ್ಷರಜ್ಞಾನ ಮಾತ್ರ ಇರುವವರು; ಪ್ರೌಢರಲ್ಲ. ಹಳೆಯ ಗಾದೆಯೊಂದುಂಟಲ್ಲ-

> ಭಗ್ನಾಕೃಷಿರ್ಭಾಗವತಾ ಭವನ್ತಿ

ಬೇರೆ ಕಸುಬು, ಉದ್ಯೋಗ ಎಲ್ಲ ಮುರಿದು ಬಿತ್ತು: ಆಗ ಜೀವನೋಪಾಯಕ್ಕಾಗಿ ಭಾಗವತರಾಗಿ ಹರಿಕಥೆ ಮಾಡ ಬರುತ್ತಾರೆ.”

ಯಾರು ನೈಜವಾದ ಜನಪ್ರೀತಿಯಿಂದ, ಸೇವೋತ್ಸಾಹದಿಂದ ದೇಶಕಾರ್ಯಕ್ಕೆ ತೊಡಗಿರುತ್ತಾರೋ ಅಂಥವರನ್ನು ಹೀಗೆ ಅಪಹಾಸ್ಯಕ್ಕೆ ಗುರಿಪಡಿಸುವುದು ಅನುಚಿತವೆಂದು ಬಹು ಮಂದಿ ನರಸಿಂಹಯ್ಯಂಗಾರ್ಯರನ್ನು ಖಂಡಿಸಿದ್ದುಂಟು. ಅದನ್ನು ಕೇಳಿ ನರಸಿಂಹಯ್ಯಂಗಾರ್ಯರು ನಕ್ಕದ್ದೂ ಉಂಟು.

ಒಂದು ಪ್ರವೃತ್ತಿ

ಅವರು ಅರಮನೆಯ ಕಂಟ್ರೋಲರಾಗಿದ್ದಾಗ ಒಂದು ಸಾರಿ ಅರಮನೆಯ ಕೆಲಸದಲ್ಲಿದ್ದ ಒಬ್ಬ ಚಾಕರನ ಹೆಂಡತಿ ತನ್ನ ಗಂಡ ಮೃತಪಟ್ಟ ಮೇಲೆ ತನಗೆ ಜೀವನೋಪಾಯ ತಪ್ಪಿಹೋಯಿತೆಂದು ತನ್ನ ದಾರಿದ್ರ್ಯವನ್ನು ಹೇಳಿಕೊಳ್ಳಲು ನರಸಿಂಹಯ್ಯಂಗಾರ್ಯರ ಬಳಿ ಬಂದಿದ್ದಳಂತೆ. ಆಕೆಯ ಕಥೆಯನ್ನು ಅಯ್ಯಂಗಾರ್ಯರು ಕೇಳಿದರು. “ನೀನು ಇನ್ನೂ ಚಿಕ್ಕ ವಯಸ್ಸಿನವಳು. ಮತ್ತೆ ಏಕೆ ಮದುವೆ ಮಾಡಿಕೊಳ್ಳಬಾರದು?”

ಆಕೆ “ನನ್ನನ್ನು ಯಾರು ಮೆಚ್ಚಿಕೊಳ್ಳುತ್ತಾರೆ? ನೀವೇ ದೊಡ್ಡ ಮನಸ್ಸು ಮಾಡಬೇಕು.”

ಇದು ಕಥೆ. ನಿಜವೋ ಸುಳ್ಳೋ ನಾನು ಹೇಳಲಾರೆ. ಕಥೆ ಎಂದೇ ಇಟ್ಟುಕೊಂಡರೂ ಅದು ನರಸಿಂಹಯ್ಯಂಗಾರ್ಯರ ಯಾವುದೋ ಒಂದು ಪ್ರವೃತ್ತಿಯ ಸೂಚಕವೆಂದು ಇಷ್ಟವಿರುವವರು ಭಾವಿಸಬಹುದು. ಸ್ವಭಾವದ್ಯೋತಕವಾದ ಕಥೆ ಅದು.

ನರಸಿಂಹಯ್ಯಂಗಾರ್ಯರ ಇಂಗ್ಲಿಷ್ ಬರವಣಿಗೆಯ ಶೈಲಿ ಸೊಗಸಾದದ್ದು; ಆ ಕಾಲದ ಜನ ಮೆಚ್ಚಿಕೊಂಡಂಥಾದ್ದು. ಅವರು “ಮೈಸೂರು ಟೈಮ್ಸ್” ಪತ್ರಿಕೆಯಲ್ಲಿ “Old Scenes Revisited” (ಹಿಂದೆ ನೋಡಿದ್ದ ಸ್ಥಳಗಳಿಗೆ ಮರುಭೇಟಿ) ಎಂಬ ಶೀರ್ಷಿಕೆಯಲ್ಲಿ ವರ್ಣನ ಲೇಖನಗಳನ್ನು ಬರೆಯುತ್ತಿದ್ದರು. ಅವರು ತಾವು ಹಿಂದೆ ಎಲ್ಲೆಲ್ಲಿ ಕೆಲಸ ಮಾಡಿದ್ದರೋ ಆ ಊರುಗಳ ಮತ್ತು ಅವರಿಗೆ ಅಲ್ಲಿ ಆಗಿದ್ದ ಅನುಭವಗಳ ಚಿತ್ರಗಳು ಆ ಲೇಖನಗಳಲ್ಲಿದ್ದವು. ಬೆಂಗಳೂರಿನಲ್ಲಿ ಅಪ್ರಸಿದ್ಧ ಪತ್ರಿಕೆಯಲ್ಲಿ ಬಂದ ಆ ಲೇಖನಗಳನ್ನು ಬೊಂಬಾಯಿ, ಕಲ್ಕತ್ತ ಪಟ್ಟಣಗಳ ಪ್ರಸಿದ್ಧ ಪತ್ರಿಕೆಗಳು ಕೂಡ ಮನ್ನಿಸಿ ಸ್ವಾರಸ್ಯವಾದ ವಾಕ್ಯಗಳನ್ನು ತಮ್ಮ ತಮ್ಮ ಪತ್ರಿಕೆಗಳಲ್ಲಿ ಪುನಃಪ್ರಕಟಣೆ ಮಾಡಿದವು.

ಅಂಥ ಪತ್ರಿಕೆಗಳಲ್ಲಿ ಬೊಂಬಾಯಲ್ಲಿ ಕೆ. ನಟರಾಜನ್ ಅವರು ನಡಸುತ್ತಿದ್ದ “ದಿ ಇಂಡಿಯನ್ ಸೋಷಲ್ ರಿಫಾರ್ಮರ್” ಎಂಬ ಸುಪ್ರಸಿದ್ಧ ಪತ್ರಿಕೆ ಒಂದು. ಅದು ಶೈಲಿಯಲ್ಲೂ ಅಭಿರುಚಿಯಲ್ಲೂ ಶ್ರೇಷ್ಠವರ್ಗದ್ದು.

ಹಾಗೆ ಪ್ರಕಟವಾದ ರಸವತ್ತಾದ ಲೇಖನಗಳಲ್ಲಿ ಒಂದು ‘ಅರಾಬಿ ನಂಜುಂಡಿ’ ಎಂಬಾಕೆಯನ್ನು ಕುರಿತದ್ದು. ನಂಜುಂಡಿ ಎಂಬಾಕೆಯ ಅಂಗಾಂಗಸೌಷ್ಠವವನ್ನು ನರಸಿಂಹಯ್ಯಂಗಾರ್ಯರು ಮಿತಪದಗಳಲ್ಲಿ ಚಿತ್ರಿಸಿ ವಾಚಕರ ಮನಸ್ಸಿನ ಮೇಲೆ ಆ

ವ್ಯಕ್ತಿಯ ರೂಪ ಮುದ್ರಿತವಾಗುವಂತೆ ಮಾಡಿದ್ದರು. ಆ ಪುಣ್ಯಾತಗಿತ್ತಿ ತನ್ನ ತೋಳಿನ ಮೇಲೆ ಹಚ್ಚೆ ಹಾಕಿಸಿಕೊಂಡಿದ್ದಳಂತೆ, ಹೀಗೆ:

"ಈ ದೇಹ ಗಾಡಿಪಾಳ್ಯದ ಶಾಮರಾಯರದು" ಎಂದು.

ಗಾಡಿಪಾಳ್ಯ ಎಂಬುದು ಚಾಮರಾಜನಗರ ಪ್ರಾಂತದಲ್ಲೋ ಮತ್ತೆಲ್ಲೋ ಇದೆಯಂತೆ. ಆ ನಂಜುಂಡಿ ಎಂಬಾಕೆ ಪತಿವ್ರತಾ ಶಿರೋಮಣಿ ಎಂದು ವಿ.ಎನ್. ನರಸಿಂಹಯ್ಯಂಗಾರ್ಯರ ಚಿತ್ರಣದಿಂದ ಹೊರಪಡುತ್ತದೆ. ಮೇಲ್ನೋಟಕ್ಕೆ ಕೆಸರೆಂದು ಕಾಣುವುದರಲ್ಲಿ ಕಮಲದ ಮೊಗ್ಗನ್ನು ಗುರುತಿಸುವುದು ರಸಿಕತೆ.

ನರಸಿಂಹಯ್ಯಂಗಾರ್ಯರ ಬರವಣಿಗೆಗಳು ಬಹುಕಾಲ ಜನಕ್ಕೆ ಸ್ವಾರಸ್ಯಕರಗಳಾದಾವೆಂದೂ ಅವುಗಳನ್ನು ಸಂಕಲನ ಮಾಡಿ ಪುಸ್ತಕರೂಪದಲ್ಲಿ ಪ್ರಕಟಿಸಬೇಕೆಂದೂ ನಾನು ಅವರ ಬಂಧುಗಳಲ್ಲಿ ಬಹುಮಂದಿಗೆ ಹೇಳಿಕೊಂಡೆ. ಅವರ ಹಿರಿಯ ಮಕ್ಕಳು ಡೆಪ್ಯುಟಿ ಕಮಿಷನರಾಗಿದ್ದ ಚೊಕ್ಕಣ್ಣನವರು, ಇನ್ನೊಬ್ಬ ಮಕ್ಕಳು ಎಕ್ಸೈಸ್ ಅಸಿಸ್ಟೆಂಟ್ ಕಮಿಷನರ್ ಆಗಿದ್ದ ಶಾಮಣ್ಣನವರು. ಇತರ ಬಂಧುಗಳಿಗೂ ಹೇಳಿದೆ. ಫಲಕ್ಕೆ ಬರಲಿಲ್ಲ. ಈಗಲೂ ಅವರ ಲೇಖನಗಳನ್ನು ಪತ್ತೆ ಮಾಡಿ ಪ್ರಕಟಿಸಿದರೆ ಅದು ಇಂದಿಗೂ ಓದಲರ್ಹವಾದ ಗ್ರಂಥವಾದೀತು.

೨೮

ಹಲವರು ಕೌನ್ಸಿಲರುಗಳು

ಪೂರ್ಣ ಕೃಷ್ಣರಾಯರು ದಿವಾನ್ ರಂಗಾಚಾರ್ಯರ ಕಾಲದಲ್ಲಿ ಕೌನ್ಸಿಲರ್ ಆಗಿದ್ದವರು. ಮೈಸೂರಿನ ಕೌನ್ಸಿಲರುಗಳಲ್ಲಿ ಅವರೇ ಮೊಟ್ಟಮೊದಲನೆಯವರು.

ಅವರು ಹುಟ್ಟು ಮೈಸೂರಿಗರು.

ಅವರು ಪ್ರಾಮಾಣಿಕರೆಂದೂ ಸಾತ್ತ್ವಿಕರೆಂದೂ ಮರ್ಯಾದೆವಂತರೆಂದೂ ನಾನು ಹಿರಿಯರಿಂದ ಕೇಳಿದ್ದೇನೆ.

ಅವರ ಮಕ್ಕಳು ಪೂರ್ಣ ರಾಘವೇಂದ್ರರಾಯರು. ಇವರು ನಾಲ್ವಡಿ ಕೃಷ್ಣರಾಜ ಒಡೆಯರವರಿಗೆ ಉಪಾಧ್ಯಾಯರಾಗಿದ್ದರು. ಬಳಿಕ ಹುಜೂರ್ ಸೆಕ್ರೆಟರಿಯಾಗಿದ್ದರು. ವಿಶ್ವೇಶ್ವರಯ್ಯನವರ ಕಾಲದಲ್ಲಿ ಮೊದಲು ಎಕ್ಸೈಸ್ ಕಮಿಷನರಾಗಿದ್ದು ಆಮೇಲೆ ಕೌನ್ಸಿಲರಾದರು.

ರಾಘವೇಂದ್ರರಾಯ ಮೈಸೂರಿನ (ಜಿ.ಟಿ.ಎ.) ಗ್ರಾಜುಯೇಟ್ಸ್ ಟ್ರೇಡಿಂಗ್ ಆಸೋಸಿಯೇಷನ್ನಿನ ಪ್ರತಿಷ್ಠಾಪಕರಲ್ಲಿ ಒಬ್ಬರು. ಅವರು ಕನ್ನಡದಲ್ಲಿ ಬಹುಶಃ ಖನಿಜ ಶಾಸ್ತ್ರವನ್ನು (ಅಥವಾ ಪ್ರಾಣಿಶಾಸ್ತ್ರವನ್ನು) ಕುರಿತು ಗ್ರಂಥರಚನೆ ಮಾಡಿದ್ದಾರೆ.

ಇವರ ಇಂಗ್ಲಿಷ್ ಮಾತು ಇಂಗ್ಲಿಷ್ ಜನದ ಮರ್ಯಾದೆಯನ್ನನುಸರಿಸಿದ್ದು.

ರತ್ನಸಭಾಪತಿಯವರು

ರತ್ನಸಭಾಪತಿ ಮೊದಲಿಯಾರ್ ಅವರು ಪೂರ್ಣ ಕೃಷ್ಣರಾಯರವರಂತೆಯೇ ಮೊದಮೊದಲಿನ ಕೌನ್ಸಿಲರಾಗಿದ್ದವರು. ಇವರು ಬೆಂಗಳೂರು ಕಂಟೋನ್ಮೆಂಟ್ ಪ್ರದೇಶದಲ್ಲಿದ್ದವರು. ಸತ್ಪುರುಷರೆಂದು ಖ್ಯಾತಿಪಡೆದವರು. ಬೆಂಗಳೂರಿನ ಪೂರ್ವದಿಕ್ಕಿನಲ್ಲಿ ಹೊಸೂರು ಆನೆಕಲ್ ಮೊದಲಾದ ಕಡೆಗೆ ಹೋಗುವ ರಸ್ತೆಯಲ್ಲಿ ಆರೇಳು ಮೈಲಿಯ

ದೂರದಲ್ಲಿ ಚಂದಾಪುರವೆಂಬ ಹಳ್ಳಿ ಸಂತೆಗೆ ಪ್ರಸಿದ್ಧವಾದದ್ದು. ಅಲ್ಲಿ ರತ್ನ ಸಭಾಪತಿ ಮೊದಲಿಯಾರ್ ಅವರು ಕಟ್ಟಿಸಿದ ಧರ್ಮಸತ್ರ ಈಗಲೂ ಇದೆ ಎಂದು ತೋರುತ್ತದೆ. ಆ ಸತ್ರದಲ್ಲಿ ಹಳೆಯ ಕಾಲದ ಗಣ್ಯ ಪುರುಷರನೇಕರ ಫೋಟೋಗಳಿದ್ದದ್ದನ್ನು ನಾನು ನೋಡಿದ್ದೇನೆ.

ನಾನು ಕೊಂಚ ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಒಂದು ಸಂಗತಿ ಇದು: ರತ್ನಸಭಾಪತಿ ಮೊದಲಿಯಾರ್ ಅವರು ಸಂಸ್ಕೃತ ಮಹಾಭಾರತದ ವಿದುರನೀತಿ ಪ್ರಕರಣವನ್ನು ಪಂಡಿತ ಸಹಾಯದಿಂದ ಕನ್ನಡಕ್ಕೆ ತರ್ಜುಮೆ ಮಾಡಿ ಪ್ರಕಟಿಸಿದ್ದರು. ನನ್ನ ಜೀವಮಾನದಲ್ಲಿ ಇನಾಮಾಗಿ ನನಗೆ ಬಂದಿರುವ ಪುಸ್ತಕ ಇದೊಂದೇ. ಅದು ಈಗ್ಗೆ ಎಪ್ಪತ್ತು ವರುಷಗಳ ಹಿಂದಿನ ಮಾತು. ಆ ಪುಸ್ತಕವನ್ನೋದಿದಾಗ ನನಗೆ ತುಂಬ ಸಂತೋಷವಾದದ್ದು ಈಗ ಜ್ಞಾಪಕವಿದೆ. ರತ್ನಸಭಾಪತಿ ಮೊದಲಿಯಾರ್ ಅವರು ಇಂಥ ಗ್ರಂಥವನ್ನು ಕನ್ನಡದಲ್ಲಿ ಬರೆಯಿಸಿದ್ದು ಅವರ ಸ್ವಭಾವವನ್ನು ತೋರಿಸುತ್ತದೆ. ಅಂಥ ಮೇಲ್ಮೆ ಈಗ ನಮ್ಮ ದೇಶದಲ್ಲಿ ಉಳಿದಿದೆಯೆ?

ಚಂಚಲ್‌ರಾಯರು

ಪಿ. ಚಂಚಲ್‌ರಾಯರ ವೃತ್ತಾಂತವನ್ನು ಶೇಷಾದ್ರಿ ಅಯ್ಯರ್ ಅವರ ಪ್ರಕರಣದಲ್ಲಿ ಪ್ರಸ್ತಾಪಿಸಿದೆ. ಅವರು ಉದಾತ್ತಮನಸ್ಸಿನ ಧರ್ಮಾಭಿಮಾನಿಗಳು ಮತ್ತು ಪ್ರಜಾವತ್ಸಲರು. ಪಾಂಡಿತ್ಯ, ಲೋಕಹಿತಾಸಕ್ತಿ, ಯುಕ್ತಾಯುಕ್ತವಿವೇಕ, ಧರ್ಮಶ್ರದ್ಧೆ–ಈ ನಾಲ್ಕು ಗುಣಗಳೂ ಅವರಲ್ಲಿ ಸಮಸಮವಾಗಿ ಮಿಳಿತವಾಗಿದ್ದವು.

ಚೆಂಗೈ ಶ್ರೀನಿವಾಸಯ್ಯಂಗಾರ್ಯರು

ಚೆಂಗೈ ಶ್ರೀನಿವಾಸಯ್ಯಂಗಾರ್ಯರು ಶೇಷಾದ್ರಿ ಅಯ್ಯರ್ ಅವರ ಕಾಲದಲ್ಲಿ ಮೊದಲು ಚೀಫ್ ಸೆಕ್ರೆಟರಿಯಾಗಿಯೂ ಅನಂತರ ಕೌನ್ಸಿಲರಾಗಿಯೂ ಇದ್ದವರು. ಕಾರ್ಯನಿರ್ವಾಹದಲ್ಲಿ ಮಹಾ ದಕ್ಷರು. ಆಕಾರದಲ್ಲಿಯೂ ನೋಡಲರ್ಹವಾದ ಆಸಾಮಿ. ಮಾತುಕತೆಯಲ್ಲಿ ಒಳ್ಳೆಯ ಜಬರ್ದಾರಿ: ಇಂಗ್ಲಿಷ್ ಬರವಣಿಗೆಯಲ್ಲಿಯೂ ಹಾಗೆಯೇ.

ಅವರು ಸರಕಾರದಿಂದ ನಿವೃತ್ತರಾದ ಮೇಲೆ ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿಯ ಅಧ್ಯಕ್ಷರಾಗಿದ್ದರು. ಆ ಕಾಲದಲ್ಲಿ ಆ ಕಂಪೆನಿಯ ಪರವಾಗಿ ಅವರಿಗೂ ಸರಕಾರಕ್ಕೂ ನಡೆದಿದ್ದ ಪತ್ರವ್ಯವಹಾರವನ್ನು ನೋಡುವ ಅವಕಾಶ ನನಗೆ ದೊರೆಯಿತು. ಆ ತಕರಾರಿನ ಸಂದರ್ಭದಲ್ಲಿ ನಾನು ನನ್ನ ಪತ್ರಿಕೆಯಲ್ಲಿ ಏನೊ ಒಂದು ಟೀಕೆ ಬರೆದಿದ್ದೆ. ಬಹುಶಃ ೧೯೦೯-೧೦ರಲ್ಲಿ. ಆ ವಿಷಯ ಈಗ ಮರೆತುಹೋಗಿದೆ. ನನ್ನ ಬರವಣಿಗೆ ಶ್ರೀನಿವಾಸಯ್ಯಂಗಾರ್ಯರಿಗೆ ಒಪ್ಪಿತವಾಯಿತಂತೆ. ಅವರು ಆ ಕಂಪನಿಯ ಸೆಕ್ರೆಟರಿ ಕೋಟಿಮರಾಜು ರಾಮಸ್ವಾಮಯ್ಯನವರನ್ನು ನನ್ನಲ್ಲಿಗೆ ಕಳುಹಿಸಿ ನನ್ನನ್ನು ನೋಡಲು ಅವರು ಯಾವಾಗ ಬರಬಹುದೆಂದು ವಿಚಾರ ಮಾಡ ಹೇಳಿದ್ದರು. ನಾನು "ಅಷ್ಟು ದೊಡ್ಡವರು ನನಗಾಗಿ ಪ್ರಯಾಸ ತೆಗೆದುಕೊಳ್ಳತಕ್ಕದ್ದಲ್ಲ. ನಾನೇ ಹೋಗಿ ಅವರನ್ನು ಕಾಣುತ್ತೇನೆ" ಎಂದು ಮಾತುಕೊಟ್ಟು ಅದರಂತೆ ಅವರನ್ನು ನೋಡಲು ಹೋಗಿದ್ದೆ. ಅದಕ್ಕೆ ಮುಂಚೆ ನಾನು ಅವರನ್ನು ನೋಡಿರಲಿಲ್ಲ. ನಾನು ಅವರಲ್ಲಿಗೆ ಹೋದಾಗ ಅವರು ನನ್ನಲ್ಲಿ ಪ್ರೀತಿವಿಶ್ವಾಸಗಳಿಂದ ಮಾತನಾಡಿದ್ದು ನನಗೆ ಜ್ಞಾಪಕವಿದೆ.

ಕೆಲವು ದಿನಗಳಾದ ಮೇಲೆ ಅವರು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾಗಿದ್ದರು. ಆಗ ಅವರಿಗೂ ಸರಕಾರಕ್ಕೂ ನಡೆದಿದ್ದ ಪತ್ರವ್ಯವಹಾರವನ್ನು ನನಗೆ ತೋರಿಸಿದರು. ಆಗಿನ ರಿಜಿಸ್ಟ್ರಾರರು ಎಂ.ಎ. ನಾರಣಯ್ಯಂಗಾರ್ಯರು (ಉತ್ತರೋತ್ತರ ಶ್ರೀವಾಸಾನಂದ ಎಂಬ ಹೆಸರಿನಿಂದ ಯತ್ಯಾಶ್ರಮ ಸ್ವೀಕಾರ ಮಾಡಿದವರು). ವೈಯುಕ್ತಿಕವಾಗಿ ಶ್ರೀನಿವಾಸಯ್ಯಂಗಾರ್ಯರೂ ನಾರಣಯ್ಯಂಗಾರ್ಯರೂ ಸ್ನೇಹಿತರು: ಇಬ್ಬರೂ ಜೊತೆಯಲ್ಲಿ ಇಸ್ಪೀಟಾಡುತ್ತಿದ್ದರು. ಆದರೆ ಸರಕಾರದ ಕಾರ್ಯ ವಿಷಯದಲ್ಲಿ ಇಬ್ಬರಿಗೂ ಮುಷ್ಟಾಮುಷ್ಟಿಯಾದಾಗ ಶ್ರೀನಿವಾಸಯ್ಯಂಗಾರ್ಯರ ಜೋರನ್ನು ನೋಡಿದರೆ ನಾರಾಣಯ್ಯಂಗಾರ್ಯರು ಅವರ ನೆನಪಿಗೆ ಬಂದಂತೆಯೇ ಇಲ್ಲ. ಇಬ್ಬರೂ ಸರಿಸರಿಯಾದ ಜಟ್ಟಿಗಳು.

ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು

ಕೆ.ಆರ್. ಶ್ರೀನಿವಾಸಯ್ಯಂಗಾರ್ಯರು ಕೋಲಾರದಲ್ಲಿ ಕೆಲಕಾಲ ಸಬ್ ಡಿವಿಷನ್ ಆಫೀಸರಾಗಿದ್ದರು. ಆಗಿನಿಂದ ನನಗೆ ಅವರ ಪರಿಚಯ. ಗಣಿತಶಾಸ್ತ್ರದಲ್ಲಿ ಇವರೂ ಪ್ರವೀಣರೆಂದು ಪ್ರಸಿದ್ಧಿಯಿತ್ತು. ರೈ ॥ ಆ ॥ ವಿ.ಎಸ್. ಶ್ರೀನಿವಾಸಶಾಸ್ತ್ರಿಗಳೂ ಇವರೂ ಕುಂಭಕೋಣದಲ್ಲಿ ಸಹಾಧ್ಯಾಯಿಗಳಾಗಿದ್ದರು.

ಶ್ರೀನಿವಾಸಯ್ಯಂಗಾರ್ಯರು ಅಧಿಕಾರ ನಿರ್ವಾಹದಲ್ಲಿ ಜಾಗರೂಕರೂ ಚಾಕಚಕ್ಯತೆಯುಳ್ಳವರೂ ಆಗಿದ್ದರು. ವಿಶ್ವೇಶ್ವರಯ್ಯನವರ ಕಾಲದಲ್ಲಿ ಚೀಫ್ ಸೆಕ್ರೆಟರಿಯಾಗಿದ್ದರು. ಬ್ಯಾನರ್ಜಿಯವರ ಕಾಲದಲ್ಲಿ ಸಹಮಂತ್ರಿಗಳಾಗಿದ್ದರು. ಇವರಿಗೆ ರೆವಿನ್ಯೂ ಬಾಬಿಗೆ ಸಂಬಂಧಪಟ್ಟ ಕಾಯಿದೆ ಕಾನೂನುಗಳೂ ಆಡಳಿತದ ಕ್ರಮಗಳೂ ಆಮೂಲಾಗ್ರವಾಗಿ ತಿಳಿದಿದ್ದವು.

ಇವರು ಪರೋಪಕಾರಿಗಳೂ ಸಮರ್ಥರೂ ಆದ ಆಡಳಿತಗಾರರು.

ವಾರ್ಧಕ್ಯದಲ್ಲಿ ಅಯ್ಯಂಗಾರ್ಯರು ತಮ್ಮ ಕಾಲವನ್ನು ದಿವ್ಯಪ್ರಬಂಧಗಳ ವ್ಯಾಸಂಗಕ್ಕಾಗಿ ವಿನಿಯೋಗಿಸುತ್ತಿದ್ದರು.

ಚಂದ್ರಶೇಖರಯ್ಯರ್

ಕೆ. ಎಸ್. ಚಂದ್ರಶೇಖರಯ್ಯರ್ ಅವರೂ ಕೆ. ಆರ್. ಶ್ರೀನಿವಾಸಯ್ಯಂಗಾರ್ಯರೂ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಲ್ಲಿ ಪ್ರಥಮ ದ್ವಿತೀಯ ಸ್ಥಾನಗಳನ್ನು ಗಳಿಸಿ ಮೇಲ್ಪದವಿಗೆ ಬಂದವರು. ಚಂದ್ರಶೇಖರಯ್ಯರ್ ಅವರು ಬಿ.ಎಲ್. ಪರೀಕ್ಷೆಯಲ್ಲಿಯೂ ಮೇಲ್ತರಗತಿಯಲ್ಲಿ ಉತ್ತೀರ್ಣರಾಗಿದ್ದದ್ದರಿಂದ ಅವರು ಜುಡಿಷಲ್ ಇಲಾಖೆಯಲ್ಲಿಯೂ ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆಯುವಂತಾಯಿತು. ಚಂದ್ರಶೇಖರಯ್ಯರ್ ಅವರು ಕಾರ್ಯದಕ್ಷರು, ಪಾಲುಮಾರಿಕೆಯನ್ನರಿಯದವರು. ಮತ್ತು ಸಣ್ಣ ಸಣ್ಣ ವಿಷಯಗಳನ್ನೂ ಅಲಕ್ಷ್ಯ ಮಾಡುವವರಲ್ಲ. ಕಾನೂನು ಕಟ್ಟು ಪಾಡುಗಳ ನಿಷ್ಕರ್ಷೆಯಾದ ತಿಳಿವಳಿಕೆ ಅವರದು. ತಿಳಿವಳಿಕೆಯ ನಿಷ್ಕರ್ಷೆಯ ಜೊತೆಗೆ ಕಾರ್ಯದ ಕಟ್ಟುನಿಟ್ಟೂ ಸೇರಿಕೊಂಡಿತ್ತು. ಯಾವ ವಿಷಯದಲ್ಲಿಯೂ ಅವರು ವಿಷಯವನ್ನು ಸಡಿಲಕ್ಕೆ ಬಿಡದೆ ಬಿಗಿತದಿಂದ ಆಡಳಿತ ನಡಸಿದವರು. ಅವರ ಇಂಗ್ಲಿಷ್ ಬರವಣಿಗೆ ಚಚ್ಚೌಕವಾಗಿ ಬಿಕ್ಕಟ್ಟುಳ್ಳದ್ದಾಗಿತ್ತು. ಅವರದು ನಿರ್ದಾಕ್ಷಿಣ್ಯ ಪ್ರಕೃತಿ. ಆದರೆ ದಯೆಯಿಲ್ಲದ್ದಲ್ಲ. ಅವರ ಧರ್ಮಪತ್ನಿ ಪಾರ್ವತಮ್ಮನವರೂ ಚಂದ್ರಶೇಖರಯ್ಯರ್ ಅವರೂ ಸ್ಥಾಪನೆ ಮಾಡಿದ್ದು ಶಂಕರಪುರದಲ್ಲಿರುವ ಮಹಿಳಾ ಸೇವಾ ಸಮಾಜ. ಅವರು ಇತರ ಧರ್ಮಕಾರ್ಯಗಳನ್ನೂ ಬಹುವಾಗಿ ಮಾಡಿದ್ದಾರೆ. ಇಬ್ಬರೂ ಬಡವರುಗಳಲ್ಲಿಯೂ ಕಷ್ಟಜೀವಿಗಳಲ್ಲಿಯೂ ನೈಜವಾದ ಸಹಾನುಭೂತಿಯಿಂದ ನಡೆದರು. ಚಂದ್ರಶೇಖರಯ್ಯರ್ ಅವರಿಗೆ ಸಂಗೀತ ಸಾಹಿತ್ಯಗಳಲ್ಲಿ ಅತ್ಯಂತ ಅಭಿಮಾನ. ಇಬ್ಬರೂ ಥಿಯೊಸಾಫಿಕಲ್ ಸಮಾಜಕ್ಕೆ ಆಧಾರಸ್ತಂಭವಾಗಿದ್ದವರು. ಚಂದ್ರಶೇಖರಯ್ಯರ್ ಅವರದು ನಿಷ್ಕಲ್ಮಷವಾದ ಅಧಿಕಾರಿ ಚರಿತ್ರೆ. ಗಂಡ, ಹೆಂಡತಿ ಇಬ್ಬರೂ ಭಗವದ್ಭಕ್ತರು. ಮತ್ತು ಸಂಪ್ರದಾಯದಲ್ಲಿ ಶ್ರದ್ಧೆಯುಳ್ಳವರು.

ಚಂದ್ರಶೇಖರಯ್ಯರ್ ಅವರು ಒಳ್ಳೆಯ ಸಂಸ್ಕೃತ ವಿದ್ವಾಂಸರು. ಗಣಿತಶಾಸ್ತ್ರದಲ್ಲಿಯೂ ಹಾಗೆಯೇ. ಅವರದು ಒಟ್ಟಿನ ಮೇಲೆ ಲೆಕ್ಕಾಚಾರದ ಸ್ವಭಾವ.

ಅಬ್ದುಲ್ ರಹಮಾನ್ ಸಾಹೇಬರವರು ಡೆಪ್ಯುಟಿ ಕಮಿಷನರಾಗಿದ್ದು ಬಳಿಕ ಕೌನ್ಸಿಲರ್ ಹುದ್ದೆಗೆ ಹತ್ತಿ ಸರ್ ಕೆ. ಶೇಷಾದ್ರಿ ಅಯ್ಯರ್ರವರಿಗೆ ಸಹೋದ್ಯೋಗಿಯಾಗಿದ್ದರು. ಇವರು ನಡತೆಯಲ್ಲಿ ನಿರ್ಮಲವಾಗಿದ್ದವರೆಂದೂ ದಯಾವಂತರೆಂದೂ ಸತ್ಪುರುಷರೆಂದೂ ನಾನು

ಕೇಳಿದ್ದೇನೆ. ಅವರ ಕಾಲದಲ್ಲಿ ಅವರು ಪ್ರಜಾಜನದಲ್ಲಿಯೂ ಅಧಿಕಾರಿವರ್ಗದಲ್ಲಿಯೂ ತುಂಬ ಮನ್ನಣೆ ಪಡೆದಿದ್ದವರು.

ರಂಗಸ್ವಾಮಯ್ಯಂಗಾರ್ಯರು

ಎ. ರಂಗಸ್ವಾಮಯ್ಯಂಗಾರ್ಯರು ರಂಗಾಚಾರ್ಯರ ಕಾಲದಲ್ಲಿ ಸರಕಾರದ ಮೆಟ್ಟಲು ಹತ್ತಿದವರು. ಬಹುಕಾಲ ರೆವಿನ್ಯೂ ಕಮಿಷನರಾಗಿದ್ದರು. ಅನಂತರ ಹೈಕೋರ್ಟಿನ ಜಡ್ಜಿಯಾಗಿದ್ದರು. ಒಳ್ಳೆಯ ಮೇಧಾವಿ. ಕಾನೂನು ಕಾಯಿದೆಗಳೆಲ್ಲ ಅವರಿಗೆ ಬೆರಳ ತುದಿಯಲ್ಲಿರುತ್ತಿದ್ದವು. ಧೈರ್ಯಶಾಲಿಯೂ ಹೌದು. ಅವರಿಗೆ ಕುದುರೆ ಸವಾರಿಯ ಅಭ್ಯಾಸವಿತ್ತು.

ಸರಕಾರದಿಂದ ನಿವೃತ್ತರಾದ ಮೇಲೆ ಅವರು ಪ್ರತಿ ಶನಿವಾರವೂ ಭಜನೆ ಮಾಡುವ ಏರ್ಪಾಟನ್ನಿಟ್ಟಿದ್ದರು. ಅವರ ವಿಲ್‌ನಲ್ಲಿ ಕೆಲವು ಧರ್ಮಗಳನ್ನೂ ಮಾಡಿದ್ದರೆಂದು ಕೇಳಿದ್ದೆ.

ಬಾಲಸುಂದರಂ ಅಯ್ಯರ್

ಸಿ. ಎಸ್. ಬಾಲಸುಂದರಂ ಅಯ್ಯರ್ ಅವರು ಸಿವಿಲ್ ಸರ್ವಿಸ್ ಪರೀಕ್ಷೆಯ ದ್ವಾರಾ ಬಂದವರು. ಅವರ ಗುಣಗಳಲ್ಲಿ ನಾಲ್ಕು ನನ್ನ ಮನಸ್ಸಿಗೆ ದೊಡ್ಡವು. (೧) ವಿನಯ, (೨) ಪೂರ್ವಾಪರವಿಚಾರ, (೩) ನ್ಯಾಯ ದೃಷ್ಟಿ, (೪) ಉಪಕಾರದ ಬುದ್ಧಿ.

ಇವರು ಯಾವುದರಲ್ಲಿಯೂ ದುಡುಕಿದವರಲ್ಲ. ಯಾರಿಗೂ ಕೇಡನ್ನು ಯೋಚಿಸಿದವರಲ್ಲ. ಸರ್ವಜನಪ್ರಿಯರಾಗಿದ್ದವರು.

ವಿಷಯವಿಮರ್ಶೆಯಲ್ಲಿಯೂ ಕಾರ್ಯನಿರ್ವಾಹದಲ್ಲಿಯೂ ಚತುರರು. ವಿಶ್ವೇಶ್ವರಯ್ಯನವರು ಇವರನ್ನು ಚೀಫ್ ಸೆಕ್ರೆಟರಿ ಪದವಿಗೆ ಆರಿಸಿ ನಿಯಮಿಸಿಕೊಂಡರು. ಕಾಲಕ್ರಮದಲ್ಲಿ ಕೌನ್ಸಿಲರ್ ಆದರು.

ಇವರ ಮಂತ್ರಾಲೋಚನೆ ದುಡುಕಿಲ್ಲದೆ ಸಮಚಿತ್ತತೆಯಿಂದಲೂ ಪೂರ್ವಪರ ವಿವೇಕದಿಂದಲೂ ಬಂದದ್ದಾದ ಕಾರಣ ಅವರ ಮಾತಿನಲ್ಲಿ ದಿವಾನರುಗಳಿಗೆ ತುಂಬ ಗೌರವವಿತ್ತು. ವೈಯುಕ್ತಿಕವಾಗಿ ಅವರು ಬಹುಮಟ್ಟಿಗೆ ಎಚ್.ವಿ. ನಂಜುಂಡಯ್ಯನವರ ಶ್ರೇಣಿಗೆ ಸೇರಿದವರೆಂದು ಹೇಳಬಹುದು. ಭಾರಿ ಕುಟುಂಬವುಳ್ಳವರು, ದಯಾಳುಗಳು.

ಬಾಲಸುಂದರಂ ಅಯ್ಯರವರ ಆತ್ಮಸಂಯಮ ಅಸಾಧಾರಣವಾದದ್ದು. ಅವರ ಹಿರಿಯ ಮಗ, ನನಗೆ ಬಲು ಸ್ನೇಹಿತನಾಗಿದ್ದಾತ, ಸುಬ್ರಹ್ಮಣ್ಯಂ ಎಂಬಾತ. ಒಂದು ಶಸ್ತ್ರಚಿಕಿತ್ಸೆಯನ್ನು ಅನುಭವಿಸಬೇಕಾಗಿತ್ತು. ಡಾ ॥ ಮೈಲ್ ವಾಗನಂ (Mylvaganam) ಎಂಬ ಮಹಾ ಪ್ರವೀಣನು ಆ ಶಸ್ತ್ರಕ್ರಿಯೆಯನ್ನು ನಡಸಿದ, ವಿಕ್ಟೋರಿಯ ಆಸ್ಪತ್ರೆಯಲ್ಲಿ. ಆ ಯುವಕನು ಆಪರೇಷನ್ ಮೇಜಿನಿಂದ ಜೀವಂತನಾಗಿ ಏಳಲಿಲ್ಲ. ನಮಗೆಲ್ಲ ಅತ್ಯಂತ ದುಃಖವಾಯಿತು. ತಂದೆ ಬಾಲಸುಂದರಂ ಅಯ್ಯರ್ ಆ ವಾರ್ತೆಯನ್ನು ಕೇಳಿ ಪಟ್ಟ ನೋವು ಹೊರಕ್ಕೆ ಬಹುವಾಗಿ ಕಾಣಲಿಲ್ಲ. ಒಂದೆರಡು ಕ್ಷಣ ಸ್ತಬ್ಧರಾಗಿ ನಿಂತಿದ್ದರು. ಬಳಿಕ ಕಣ್ಣೊರಸಿಕೊಂಡು “ಇದೇ ಮನುಷ್ಯಜೀವನ” ಎಂದು ಸಹನೆ ತಂದುಕೊಳ್ಳುತ್ತ ಕರ್ತವ್ಯಗಳ ಕಡೆಗೆ ತಿರುಗಿದರು.

ಅವರಿಗೂ ನನಗೂ ಸಾರ್ವಜನಿಕ ವಿಷಯಗಳಲ್ಲಿ ತಕರಾರು ಬಂದದ್ದುಂಟು–ನಾಲ್ಕಾರು ಸಲ. ನನ್ನೊಡನೆ ಸಲಿಗೆಯಿಂದ ಮಾತನಾಡುತ್ತಿದ್ದರು. ಖಡಾಖಂಡಿತವಾಗಿ ಆಕ್ಷೇಪಣೆ

ಮಾಡುತ್ತಿದ್ದರು. ಆದರೆ ಪ್ರೀತಿ ರವೆಯಷ್ಟೂ ಕಡಮೆಯಾಗಲಿಲ್ಲ.

ಎಲ್ಲ ವಿಷಯಗಳಲ್ಲಿಯೂ ಸಭ್ಯರು. ದೊಡ್ಡಮನುಷ್ಯರು.

ನರಸಿಂಗರಾಯರು

ಡಿ. ಎಂ. ನರಸಿಂಗರಾಯರು ಬುದ್ಧಿಚಮತ್ಕಾರಗಳಲ್ಲಿ ಹೆಸರುವಾಸಿಯಾದವರು. ದಿವಾನ್ ಸರ್ ಪಿ.ಎನ್. ಕೃಷ್ಣಮೂರ್ತಿಗಳ ಕಾಲದಲ್ಲಿ ಇವರು ದಿವಾನ್ ಕಛೇರಿಯಲ್ಲಿ ರಿಜಿಸ್ಟ್ರಾರ್ ಆಗಿದ್ದರೆಂದೂ ಆಗ ವೈಸರಾಯ್ ಕರ್ಜನ್ ಮಾಡಿದ ಸಲಹೆಯಂತೆ ನರಸಿಂಗರಾಯರನ್ನು ಇಂಡಿಯ ಸರಕಾರದ ಸೆಕ್ರೆಟೇರಿಯಟ್ ಕಾರ್ಯಕ್ರಮಗಳನ್ನು ವ್ಯಾಸಂಗಮಾಡಿ ಬರಲು ಕಳುಹಿಸಿದ್ದಾಗಿತ್ತೆಂದೂ ಆಮೇಲೆ ಅವರು ಮೈಸೂರು ಸೆಕ್ರೆಟೇರಿಯಟ್‌ನಲ್ಲಿ ಕೆಲವು ಸುಧಾರಣೆಗಳನ್ನು ಮಾಡಿಸಿದರೆಂದೂ ಬೇರೆ ಕಡೆ ಹೇಳಿದೆ.

ಡಿ. ಎಂ. ನರಸಿಂಗರಾಯರ ತಂದೆ ಮಧ್ವರಾಯರು ಕೋಲಾರದ ಡೆಪ್ಯುಟಿ ಕಮಿಷನರ್ ಕಛೇರಿಯಲ್ಲಿ ಜುಡಿಷಲ್ ಹೆಡ್‌ಗುಮಾಸ್ತರಾಗಿದ್ದರಂತೆ. ನನ್ನ ತಾತಂದಿರು ಲಾಯರಾಗಿದ್ದ ಕಾರಣ ಜುಡಿಷಲ್ ಇಲಾಖೆಯಲ್ಲಿ ಅವರಿಗೆ ಆಗಬೇಕಾಗಿದ್ದ ಕೆಲಸಗಳು ಎಷ್ಟೋ ಇದ್ದವು. ಈ ಕಾರಣದಿಂದಲೂ, ಮತ್ತು ಮಧ್ವರಾಯರೂ ತನ್ನ ತಾತಂದಿರೂ ಸಮೀಪದ ಮನೆಗಳಲ್ಲಿ ವಾಸವಾಗಿದ್ದದ್ದರಿಂದಲೂ ಇಬ್ಬರಿಗೂ ಸ್ನೇಹ ಬೆಳೆಯಿತಂತೆ. ಕಾಲಕ್ರಮದಲ್ಲಿ ನನ್ನ ತಂದೆಗೂ ಡಿ.ಎಂ. ನರಸಿಂಗರಾಯರಿಗೂ ಪರಿಚಯ ಬಲಿಯಿತು. ಇಬ್ಬರೂ ಸಲಿಗೆಯಿಂದ ಮಾತನಾಡುತ್ತಿದ್ದರು. ಈ ಕಾರಣದಿಂದ ಡಿ. ಎಂ.ನರಸಿಂಗರಾಯರ ಸ್ನೇಹ ವಿಶ್ವಾಸಗಳು ನನಗೂ ದೊರೆತವು.

ಆದರೆ ಈ ವೈಯುಕ್ತಿಕ ಕಾರಣಗಳಿಗಿಂತ ದೊಡ್ಡ ಸ್ನೇಹಕಾರಣ ಡಿ. ಎಂ. ನರಸಿಂಗರಾಯರಿಗೆ ವೃತ್ತಪತ್ರಿಕೋದ್ಯೋಗದಲ್ಲಿದ್ದ ಆಸಕ್ತಿ. ಇದನ್ನು ಕುರಿತು ಮುಂದೆ ಪ್ರಸ್ತಾವ ಮಾಡುತ್ತೇನೆ.

ಠೀಕ್‌ಠಾಕ್

ಆ ಕಾಲದಲ್ಲಿ ಡಿ. ಎಂ. ನರಸಿಂಗರಾಯರು ಒಳ್ಳೆಯ ಡಿಕಾವ್ ಆದ ಆಸಾಮಿ. ಎತ್ತರವಾದ ಆಳು. ಸೊಗಸಾದ ಮೈಬಣ್ಣ. ಕಿವಿಗಳಲ್ಲಿ ಥಳಥಳಿಸುವ ವಜ್ರದ ಹತ್ತಕಡಕುಗಳು. ಉಡುಪಿನಲ್ಲಿಯೂ ಠೀಕ್‌ಠಾಕ್. ಹೀಗೆ ನೋಟಕ್ಕೆ ಪ್ರಭಾವಶಾಲಿಯಾದ ಆಳು.

ಮದರಾಸಿನ ಬಿ. ಎಲ್. ಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ತೇರ್ಗಡೆ ಪಡೆದಿದ್ದವರು ನರಸಿಂಗರಾಯರು. ಇದು ಆ ಕಾಲದಲ್ಲಿ ಮಹಾ ಮೇಧಾವಿತನದ ಗುರುತು.

ನನ್ನ ಅನುಭವದಿಂದ ಹೇಳಬಹುದಾದ ಮಾತು ಅವರು ಕಾನೂನು ಕಟ್ಟುಪಾಡುಗಳನ್ನು ಬಿಡಿಸಿ ಬಿಡಿಸಿ ಮಾತುಗಳ ಅಂತರ್ಭಾವವನ್ನು ಎತ್ತಿ ತೋರಿಸುವುದರಲ್ಲಿ ಮಹಾ ಕುಶಲರು ಎಂದು: ಲಾ ಪಾಯಿಂಟುಗಳನ್ನು ವಿಶದಪಡಿಸಿ ಸ್ಥಾಪಿಸುವರು. ಈ ಲಾ ವಾದದಲ್ಲಿ ಜಾಣತನವೂ ಚಾಕಚಕ್ಯವೂ ಎದ್ದು ಕಾಣುತ್ತಿದ್ದವು.

ಆ ಕಾಲದ ಮೈಸೂರು ರಾಜಕೀಯದಲ್ಲಿ ಕೃಷ್ಣಮೂರ್ತಿಗಳ ಪಾರ್ಟಿ, ಮಾಧವರಾಯರ ಪಾರ್ಟಿ ಎಂದು ಎರಡು ಗುಂಪುಗಳಿತ್ತಷ್ಟೆ. ಕೃಷ್ಣಮೂರ್ತಿಗಳ ದಿವಾನ್‌ಗಿರಿ ಮುಗಿದು ಮಾಧವರಾಯರು ದಿವಾನರಾದ ಕೂಡಲೆ ಡಿ.ಎಂ. ನರಸಿಂಗರಾಯರಿಗೆ ಸೆಕ್ರೆಟೇರಿಯಟ್‌ನಿಂದ ಉಚ್ಚಾಟನೆಯಾಯಿತು. ಅವರನ್ನು ಸಾಗರಕ್ಕೋ ಕೊಪ್ಪಕ್ಕೋ ಸಬ್‌ಡಿವಿಜನ್ ಆಫೀಸರಾಗಿ ವರ್ಗಾಯಿಸಿದರು. ಆಮೇಲೆ ಕೆಲವು ಕಾಲ ನರಸಿಂಗರಾಯರು ಮುನ್ಸೀಫರಾಗಿದ್ದರು: ನರಸಿಂಹರಾಜಪುರ, ಮಧುಗಿರಿ ಮುಂತಾದ ಕಡೆಗಳಲ್ಲಿ. ಮೈಸೂರಿನಲ್ಲಿ ಕೆಲವು ಕಾಲ ಸಬ್‌ಜಡ್ಜಿಯಾಗಿದ್ದರು. ಅನಂತರ, ವಿಶ್ವೇಶ್ವರಯ್ಯನವರ ಕಾಲದಲ್ಲಿ ಸರಕಾರದ ಡೆಪ್ಯುಟಿ ಸೆಕ್ರೆಟರಿಯಾಗಿ ಬೆಂಗಳೂರಿಗೆ ವಾಪಸು ಬಂದರು. ನರಸಿಂಗರಾಯರು ದಿವಾನ್ ವಿಶ್ವೇಶ್ವರಯ್ಯನವರ ಗಮನಕ್ಕೆ ಬಂದದ್ದು ನರಸಿಂಗರಾಯರ ಪತ್ರಿಕಾಲೇಖನಗಳಿಂದ ಎಂದು ಜನ ಹೇಳಿಕೊಂಡದ್ದನ್ನು ನಾನು ಕೇಳಿದ್ದೇನೆ.

ಪತ್ರಿಕಾ ಲೇಖನ

೧೯೧೧ರ ಸುಮಾರಿನಲ್ಲಿ ಮದಾರಸಿನ “ಇಂಡಿಯನ್ ಪೇಟ್ರಿಯಟ್” ಪತ್ರಿಕೆಯಲ್ಲಿಯೂ ಇತರ ಪತ್ರಿಕೆಗಳಲ್ಲಿಯೂ ಮೈಸೂರಿನ ಆಡಳಿತವನ್ನೂ ಮೈಸೂರಿನಲ್ಲಿ ನಡೆಯಬೇಕಾಗಿದ್ದ ಅಭ್ಯುದಯ ಕಾರ್ಯಗಳನ್ನೂ ಕುರಿತು ವಾರ ವಾರವೂ (ಇಂಗ್ಲಿಷಿನಲ್ಲಿ) ಲೇಖನಗಳು ಬರುತ್ತಿದ್ದವು. ಆ ಲೇಖಕರ ನಿಜವಾದ ಹೆಸರು ಪ್ರಕಟವಾಗದೆ ‘By a Mysore Patriot’ (ಒಬ್ಬ ಮೈಸೂರು ದೇಶಾಭಿಮಾನಿಯಿಂದ) ಎಂದು ನಿರ್ದೇಶವಾಗಿರುತ್ತಿತ್ತು. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗಲೂ ಈ ಲೇಖನಧಾರೆ ಬರುತ್ತಿತ್ತು. ಪತ್ರಿಕೆಯಲ್ಲಿ ಪ್ರಕಟನೆ ಮುಗಿದ ಆ ಲೇಖನಗಳು ಎರಡೋ ಮೂರೋ ಸಂಪುಟಗಳ ಪುಸ್ತಕವಾಗಿ ಪುನಃಪ್ರಕಟನೆಯಾದವು. ಆ ಪುಸ್ತಕದ ಹೆಸರು ‘Epoch-making Events in Mysore’ ಎಂದು. ಪುಸ್ತಕದ ಪ್ರತಿಯನ್ನು ಯಾರಾದರೂ ದಯವಿಟ್ಟು ಕೊಡುವುದಾದರೆ ನಾನು ಕೃತಜ್ಞನಾಗಿರೆತ್ತೇನೆ. ಆ ಪುಸ್ತಕದ ಶೀರ್ಷಿಕೆಯನ್ನು ನೂತನ ಯುಗ ಪ್ರವರ್ತಕವಾದ ಸಂಘಟನೆಗಳು ಎಂದು ಹೇಳಬಹುದು. ವಿಶ್ವೇಶ್ವರಯ್ಯನವರು ದಿವಾನರಾದದ್ದೇ ಆ ಘಟನೆ. ಇಕನಾಮಿಕ್ ಕಾನ್‌ಫರೆನ್ಸ್ ಸ್ಥಾಪನೆಯಾದದ್ದೇ ಇನ್ನೊಂದು ಘಟನೆ. ಆ ಮೂರು ಪುಸ್ತಕ ಸಂಪುಟಗಳು ಅಂದಿನ ಸರಕಾರದ ವಿದ್ಯಾಮಾನಗಳನ್ನೂ ಅದಕ್ಕಿದ್ದ ಕರ್ತವ್ಯಗಳನ್ನೂ ಅದರಲ್ಲಿದ್ದ ಲೋಪ ದುರ್ಬಲತೆಗಳನ್ನೂ ತಿಳಿಸುತ್ತದೆ. ಅದು ಚರಿತ್ರಾಕಾರನಿಗೆ ಉಪಯುಕ್ತವಾದ ಸಾಮಾಗ್ರಿ.

ಬರವಣಿಗೆಗೆ ಸಹಾಯ

ಮೇಲಣ ಲೇಖನಗಳ ಪ್ರಕಟನೆಯಲ್ಲಿ ನರಸಿಂಗರಾಯರವರಿಗೆ ಸಹಾಯವಾಗಿದ್ದವರು ಮೈಸೂರಿನ ವೆಸ್ಲಿಯನ್ ಮಿಷನ್ ಸ್ಕೂಲಿನ ಉಪಾಧ್ಯಾಯರು ಬಿ. ರಾಮೇಶ್ವರಯ್ಯನವರು. ಇವರ ಪ್ರಸ್ತಾಪವನ್ನು ಹಿಂದೆ ಮಾಡಿದೆ. ಇವರು ಸ್ವತಃ ಬರವಣಿಗೆಯ ಶಕ್ತಿಯುಳ್ಳವರು. ಸಂಸ್ಕೃತವನ್ನೂ ಅಭ್ಯಾಸ ಮಾಡಿದ್ದವರು, ಮತ್ತು ಪ್ರಜಾಭಿಮಾನಿಗಳು. ಇವರು ಡಿ.ಎಂ. ನರಸಿಂಗರಾಯರಿಗೆ ಸಹಾಯವಾಗಿದ್ದರು.

ನರಸಿಂಗರಾಯರು ಡೆಪ್ಯುಟಿ ಸೆಕ್ರೆಟರಿ ಪದವಿಯಿಂದ ಜನರಲ್ ಸೆಕ್ರೆಟರಿ ಪದವಿಗೆ ಹತ್ತಿದರು. ಹಾಗೆ ಸುಮಾರು ಒಂದು ವರ್ಷ ನಡೆದ ಮೇಲೆ ಅವರಿಗೆ ದೊಡ್ಡ ಹುದ್ದೆಯ ಅವಕಾಶ ನಾಭಾ ಸಂಸ್ಥಾನದಲ್ಲಿ ಕಾಣಿಸಿತು. ಆ ಸಂಸ್ಥಾನದ ಮಹಾರಾಜ ರಿಪುದಮನಸಿಂಗ್ ಎಂಬವರ ವಿಷಯದಲ್ಲಿ ಆಗಿನ ಇಂಡಿಯ ಸರಕಾರಕ್ಕೆ ಅಸಮಾಧಾನ ಬಂದಿತ್ತು. ಇಂಡಿಯ ಸರಕಾರಕ್ಕೂ ಮಹಾರಾಜರಿಗೂ ನಡುವೆ ಎದ್ದಿದ್ದ ತಕರಾರಿನಲ್ಲಿ ಡಿ. ಎಂ. ನರಸಿಂಗರಾಯರಂಥ ಕಾನೂನು ಶಾಸ್ತ್ರ ಪಂಡಿತರಿಂದಲೂ ಉಪಾಯಜ್ಞರಿಂದಲೂ ಪರಿಹಾರ ದೊರೆಯಬಹುದೆಂದು ಮಹಾರಾಜರಿಗೆ ತೋರಿತು. ಅವರ ಆಹ್ವಾನದಂತೆ ಡಿ. ಎಂ. ನರಸಿಂಗರಾಯರು ಮೈಸೂರು ಸರ್ವಿಸಿನಿಂದ ನಿವೃತ್ತರಾಗಿ ನಾಭಾಕ್ಕೆ ತೆರಳಿದರು. ಅಲ್ಲಿಂದ ಮುಂದಿನ ಕಥೆ ನಮ್ಮ ವಿಚಾರಕ್ಕೆ ಸೇರಿದ್ದಲ್ಲ.

೨೯

ಸರಕಾರಿ ಪ್ರೆಸ್ಸಿನ ನಿರ್ವಾಹದಕ್ಷರು

ಮೈಸೂರು ಸರಕಾರಿ ಪ್ರೆಸ್ಸಿನ ಒಳಗಡೆ ನಾನು ಮೊದಲು ಕಾಲಿಟ್ಟದ್ದು ಸುಮಾರು ೧೯೦೬ರಲ್ಲಿ. ಆಗ ಡಿ.ಬಿ. ರಾಮಚಂದ್ರ ಮೊದಲಿಯಾರರು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಗಿದ್ದರು. ಯೇಟ್ಸ್ ಎಂಬುವರು (ಅಥವಾ ಹ್ಯೂಮ್‌ರೈಟ್ ಎಂಬವರು) ಸೂಪರಿಂಟೆಂಡೆಂಟ್‌ರಾಗಿದ್ದರು.

ರಾಮಚಂದ್ರ ಮೊದಲಿಯಾರ್ ಅವರಿಗೂ ನನ್ನ ಪೂಜ್ಯ ಬಂಧುಗಳಾದ ಬಿ.ಎಸ್. ರಾಮಯ್ಯನವರಿಗೂ ತುಂಬ ಸ್ನೇಹ. ಇಬ್ಬರೂ ಅಲಸೂರಿನವರು. ನೆರೆಹೊರೆಯಲ್ಲಿದ್ದವರು. ಬಾಲ್ಯದಿಂದ ಸ್ನೇಹಿತರಾದವರು. ರಾಮಯ್ಯನವರು ೧೯೦೦ರ ಸುಮಾರಿನಲ್ಲಿ ಚಾಮರಾಜಪೇಟೆಯಲ್ಲಿ ಮನೆ ಕಟ್ಟಿಕೊಂಡು ಇದ್ದವರು. ಅವರಿಗೂ ರಾಮಚಂದ್ರ ಮೊದಲಿಯಾರ್ ಅವರಿಗೂ ಸಂಗೀತದಲ್ಲಿ ಹೆಚ್ಚಿನ ಖಯಾಲಿ. ಅವರೂ ಬಿ.ವಿ. ಲಕ್ಷ್ಮಣರಾಯರೆಂಬವರೂ ಲಂಡನ್ ಮಿಷನ್ ಸ್ಕೂಲ್ ಹೆಡ್‌ಮಾಸ್ಟರಾದ ಕೆ. ರಾಮಚಂದ್ರರಾಯರೂ ಸೇರಿ ಗಾನವಿನೋದ ಸಭಾ ಎಂಬ ಸಂಸ್ಥೆಯನ್ನು ನಡಸುತ್ತಿದ್ದರು. ಕೆ.ಎಸ್. ಚಂದ್ರಶೇಖರ ಅಯ್ಯರ್ ಅವರು ಸಂಸ್ಥೆಯ ಅಧ್ಯಕ್ಷರು. ರಾಮಚಂದ್ರ ಮೊದಲಿಯಾರರು ಕಾರ್ಯದರ್ಶಿ; ರಾಮಯ್ಯನವರು ಕೋಶಾಧಿಕಾರಿ. ಹೀಗೆ ರಾಮಯ್ಯನವರಿಗೂ ರಾಮಚಂದ್ರ ಮೊದಲಿಯಾರ್ ಅವರಿಗೂ ಸ್ನೇಹ ಬೆಳೆದಿತ್ತು. ಬೆಂಗಳೂರಿನಲ್ಲಿ ಸಂಗೀತಾದಿ ಕಲೆಗಳಿಗಾಗಿ ಹುಟ್ಟಿದ ಸಂಸ್ಥೆಗಳಲ್ಲಿ ಬಹುಶಃ ಗಾನವಿನೋದ ಸಭೆಯೇ ಮೊಟ್ಟಮೊದಲಿನದು.

ರಾಮಚಂದ್ರ ಮೊದಲಿಯಾರ್

ನಾನು ಬೆಂಗಳೂರಿಗೆ ಬಂದದ್ದು ಆ ಸುಮಾರಿನಲ್ಲಿ-ಚಾಕರಿ ಹುಡುಕುವುದಕ್ಕೋಸ್ಕರ. ರಾಮಯ್ಯನವರು ಒಂದು ಉಪಾಯವನ್ನು ಯೋಚಿಸಿದ್ದರು. ನನ್ನ ಕೈಗೆ ನಾಲ್ಕೈದು ಫೋಟೋಗಳನ್ನು ಕೊಟ್ಟು ಅದರ ಜೊತೆಯಲ್ಲಿ ಒಂದು ಕಾಗದವನ್ನು ಇರಿಸಿ ಅದನ್ನು ರಾಮಚಂದ್ರ ಮೊದಲಿಯಾರ್ರಿಗೆ ತಲಪಿಸಿ ಬರುವಂತೆ ಹೇಳಿದರು. ಮೊದಲಿಯಾರರು ಆ

ಕಾಗದವನ್ನು ನೋಡಿಕೊಂಡು ಫೋಟೋಗಳನ್ನು ಒಂದೊಂದಾಗಿ ನೋಡಿ ಮುಖಗಳನ್ನು ಗುರುತುಹಿಡಿದು "ಇದು ಸುಬ್ಬಮ್ಮನಲ್ಲವೆ?" "ಇವಳು ಸೀತಮ್ಮ" "ಇವನು ಸುಬ್ಬಣ್ಣಯ್ಯ" "ಇವಳು ಮಂಗಮ್ಮ" ಹೀಗೆ ಮನೆ ಜನವೆಲ್ಲ ತಿಳಿದವರಾಗಿ ಮಮತೆಯಿಂದ ವಿಚಾರಿಸಿದರು. ಆಮೇಲೆ,

"ರಾಮಯ್ಯನವರು ಕಾಗದ ಬರೆದಿದ್ದಾರೆ. ಯಾವುದೂ ಇಲ್ಲಿ ನಿನಗೆ ತಕ್ಕ ಚಾಕರಿ ಇಲ್ಲವಲ್ಲ?"

–ಎಂದು ವಿಷಾದ ಸೂಚಿಸಲು ಉಪಕ್ರಮಿಸಿದರು. ನಾನು "ಬಿಡಿ ಸಾರ್ ಪರವಾಗಿಲ್ಲ. ಅನ್ನ ಹಾಕುವವನು ದೇವರು"

ಎಂದು ಹೇಳಿ ವಾಪಸ್ಸು ಬಂದೆ. ಇದನ್ನು ಕೇಳಿದಾಗ ರಾಮಯ್ಯನವರ ಮನಸ್ಸಿನಲ್ಲಿ ಎರಡು ಭಾವಗಳು ಉತ್ಪನ್ನವಾದವು. ರಾಮಚಂದ್ರ ಮೊದಲಿಯಾರರಿಗೆ ಸಹಾಯ ಮಾಡುವ ಶಕ್ತಿ ಇಲ್ಲದೆ ಹೋಯಿತಲ್ಲ ಎಂಬ ಕೊರತೆಯೊಂದು; ನಾನು ಮಾತಿನಲ್ಲಿ ಅಧಿಕ ಪ್ರಸಂಗಿತನ ತೋರಿಸಿದೆನೋ ಎಂಬ ಭೀತಿಯೊಂದು.

ಅದು ಹಾಗಿರಲಿ. ಕೆಲವು ವರ್ಷಗಳಾದ ಬಳಿಕ ರಾಮಚಂದ್ರ ಮೊದಲಿಯಾರರ ಪ್ರೀತಿ ವಿಶ್ವಾಸಗಳು ನನಗೆ ದೊರೆತವು. ರಾಮಚಂದ್ರ ಮೊದಲಿಯಾರರಿಗೆ ಸಾರ್ವಜನಿಕ ಜೀವನದಲ್ಲಿ ಒಂದು ಸ್ಥಾನವಿತ್ತು. ಆ ಕಾರಣದಿಂದ ನಾನೂ ಅವರೂ ಆಗಾಗ ಸೇರಿ ಮಾತನಾಡುವ ಅವಕಾಶ ಒದಗಿತು. ಅವರು ಕೆಲವು ಕಾಲ ಮುನಿಸಿಪಲ್ ಕೌನ್ಸಿಲ್‌ನಲ್ಲಿ ಸರಕಾರದಿಂದ ನಿಯಮಿತರಾದ ಸದಸ್ಯರಾಗಿದ್ದರು. ನಾನೂ ಆಗ ಮುನಿಸಿಪಲ್ ಸದಸ್ಯನಾಗಿದ್ದೆ. ಆಗ ಕಂಡುಕೊಂಡೆ ಅವರ ಸೌಜನ್ಯವನ್ನು ಮತ್ತು ಜನಾನುರಾಗವನ್ನು.

ರಾಮಚಂದ್ರ ಮೊದಲಿಯಾರ್ ಅವರದು ಒಳ್ಳೆಯ ಕಾಂತಿಸಂಪನ್ನವಾದ ಆಕಾರ. ಸ್ವಭಾವದಲ್ಲಿ ಸೌಮ್ಯ. ನಗುನಗುತ್ತ ಮಾತನಾಡುವರು. ಮತ್ತು ಕಾರ್ಯತತ್ಪರವಾದ ದೃಷ್ಟಿಯುಳ್ಳವರು.

ಅವರು ಅನೇಕ ಸಂಸ್ಥೆ ಸಮಾಜಗಳಲ್ಲಿ ಗಣ್ಯರಾಗಿದ್ದರು. ಆಗಾಗ ಸಾರ್ವಜನಿಕ ಭಾಷಣ ಮಾಡಿದ್ದೂ ಉಂಟು. ಅವರು ಬೆಂಗಳೂರು ಮಿಥಿಕ್ ಸೊಸೈಟಿಯ ಆಶ್ರಯದಲ್ಲಿ ಭಾಷಣ ಮಾಡಿದ್ದು ನನಗೆ ಜ್ಞಾಪಕವಿದೆ. ಅದರ ವಿಷಯ ಮೈಸೂರು ದೇಶದ ಅಚ್ಚಿನ ಕಾರ್ಖಾನೆಗಳ ಚರಿತ್ರೆ. ಆ ಉಪನ್ಯಾಸವನ್ನು ಇಂಗ್ಲಿಷ್ ಭಾಷೆಯಲ್ಲಿ ಅವರು ಆಮೇಲೆ ಅಚ್ಚು

ಮಾಡಿಸಿದರು. ಆ ಚಿಕ್ಕ ಪುಸ್ತಕದಲ್ಲಿ ಲೆನ್ನರ್ಡ್, ಗ್ಯಾರೆಟ್, ರೈಸ್, ಹ್ಯೂಮ್‌ರೈಟ್ ಇದ್ದವು. ಆ ಸಣ್ಣ ಪುಸ್ತಕ ಈಗ ಎಲ್ಲಿಯಾದರೂ ದೊರೆಯುವುದಾಗಿದ್ದಲ್ಲಿ ಅದನ್ನು ಗವರ್ನ್‌ಮೆಂಟ್ ಪ್ರೆಸ್ಸಿನವರು ಪುನರ್ಮುದ್ರಣ ಮಾಡಿಸಬೇಕೆಂದು ನಾನು ಬಿನ್ನಯಿಸುತ್ತೇನೆ.

ಮುದ್ರಣ ಕಾರ್ಖಾನೆಯ ಚರಿತ್ರೆಯೆಂದರೆ ದೇಶದ ವಿದ್ಯಾಪ್ರಸಾರದ ಚರಿತ್ರೆ. ಸಾಹಿತ್ಯಾಭಿವೃದ್ಧಿಯ ಚರಿತ್ರೆ, ಜನದ ಬುದ್ಧಿವಿಕಾಸದ ಚರಿತ್ರೆ. ಹಾಗೆ ಅದು ದೇಶ ಚರಿತ್ರೆಯ ಒಂದು ದೊಡ್ಡ ಭಾಗ.

ಹ್ಯೂಮ್‌ರೈಟ್

ಮೇಲೆ ಯೇಟ್ಸ್ ಮತ್ತು ಹ್ಯೂಮ್‌ರೈಟ್–ಈ ಇಬ್ಬರ ಹೆಸರುಗಳನ್ನು ಹೇಳಿದ್ದೇನೆ. ಅವರಲ್ಲಿ ಹ್ಯೂಮ್‌ರೈಟ್ ಎಂಬವರ ವಿಷಯದಲ್ಲಿ ನನ್ನ ಜ್ಞಾಪಕ ನಿಶ್ಚಿತವಾದದ್ದಲ್ಲ. ಅರೆಕುರುಡು ನೆಪ್ಪಿನಿಂದ ಹೇಳುತ್ತೇನೆ.

ಹ್ಯೂಮ್‌ರೈಟ್ ಎಂಬಾತನಿಗೆ ಯಾವುದೋ ಮಿಲಿಟರಿ ಬಿರುದು ಇತ್ತೆಂದು ತೋರುತ್ತದೆ– ಕರ್ನಲ್ಲೋ, ಕ್ಯಾಪ್ಟನ್ನೋ, ಅಂಥದಾವದೋ ಒಂದು. ಆತ ಕೊಂಚ ಕಾಲ ಸಿಟಿ ಮ್ಯಾಜಿಸ್ಟ್ರೇಟರಾಗಿದ್ದರೆಂದು ಜ್ಞಾಪಕ. ನಾನು ಯಾವುದೋ ಒಂದು ಪತ್ರಿಕೆಯ ಸಂಪಾದಕತ್ವ ಡಿಕ್ಲರೇಷನ್ ಮಾಡುವುದಕ್ಕಾಗಿ ಕೋರ್ಟಿಗೆ ಹೋಗಿದ್ದೆ. ಆತ ಒಳ್ಳೆ ಮಿಲಿಟರಿಮೀಸೆ ತೊಟ್ಟು ದಿಟ್ಟತನದಿಂದ ಕುಳಿತಿದ್ದ. ನಾನು ಹೋಗಿದ್ದ ಕೆಲಸ ಒಂದೆರಡು ನಿಮಿಷದಲ್ಲಿ ಮುಗಿಯಿತು. ನನ್ನ ವಿಷಯದಲ್ಲಿ ಆತ ವಿನಯದಿಂದಲೇ ನಡೆದನೆಂದು ಹೇಳಬೇಕು. ಆದರೆ ಆತನ ಗುಮಾಸ್ತರುಗಳು ಆತನನ್ನು ಕಟ್ಟುನಿಟ್ಟಿನ ಮನುಷ್ಯ, ಜಬ್ರ್ದಾರಿ ಮನುಷ್ಯ–ಎಂದು ಹೇಳುತ್ತಿದ್ದರು.

ಈತನ ತರುವಾಯ ಗವರ್ನ್‌ಮೆಂಟ್ ಪ್ರೆಸ್ಸಿನ ಅಧಿಕಾರಕ್ಕೆ ಬಂದಾತ ಯೇಟ್ಸ್ ಸಾಹೇಬರು.

ಯೇಟ್ಸ್

ಯೇಟ್ಸ್ ಸಾಹೇಬರು ಜನಪ್ರಿಯರಾಗಿದ್ದವರು. ಅವರ ಆಕಾರವೂ ಮಾತುಕಥೆಯ ರೀತಿಯೂ ಸ್ನೇಹವನ್ನು ಸಂಪಾದಿಸಬಲ್ಲದ್ದಾದವು. ಅವರು ಸಾರ್ವಜನಿಕ ಭಾಷಣದಲ್ಲಿ ಪಟುವಾಗಿದ್ದರು. ಲಘುವಾದ, ನಯವಾದ ಹಾಸ್ಯ ಪ್ರವೃತ್ತಿ ಅವರಿಗೆ ನೈಜವಾಗಿತ್ತು. ಅವರು ಒಳ್ಳೆಯ ಸಾಹಿತ್ಯ ಪರಿಚಯವುಳ್ಳವರೆಂದು ತೋರುತ್ತದೆ. ಮದರಾಸ್ ಸರಕಾರದಲ್ಲಿ ವಿದ್ಯಾ ಇಲಾಖೆಯಲ್ಲಿ ಯೇಟ್ಸ್ ಎಂಬವರೊಬ್ಬರು ಮೇಲ್ದರ್ಜೆಯ ಅಧಿಕಾರಿಗಳಿದ್ದರು. ಆ ಯೇಟ್ಸ್‌ರೂ ಬೆಂಗಳೂರಿನ ಯೇಟ್ಸ್‌ರೂ ಜ್ಞಾತಿಗಳಂತೆ. ಹೀಗೆ ಯೇಟ್ಸ್‌ರು ಸುಸಂಸ್ಕೃತ ವರ್ಗಕ್ಕೆ ಸೇರಿದವರು.

ಆ ಕಾಲದಲ್ಲಿ ಬೆಂಗಳೂರಿನಲ್ಲಿ ಪಾಠಶಾಲೆಗಳ ವಾರ್ಷಿಕೋತ್ಸವ, ವಿದ್ಯಾರ್ಥಿ ಸಂಘಗಳ ವಿಶೇಷೋತ್ಸವಗಳು, ಮಹಾಜನರ ಸಮಾರಂಭಗಳು ಇಂಥ ಸಂದರ್ಭಗಳಿಗೆಲ್ಲ ಯೇಟ್ಸ್‌ರವರನ್ನು ಉಪನ್ಯಾಸ ಕೊಡಲು ಕರೆಯುವುದು ವಾಡಿಕೆಯಿತ್ತು. ಅವರ ಉಪನ್ಯಾಸಗಳು ಅತಿ ದೀರ್ಘವಾಗದೆ, ಅತಿ ಪಾಂಡಿತ್ಯದಿಂದ ಭಾರವಾಗದೆ, ಕೇಳುವವರಿಗೆ ಸಂತೋಷಕರವಾಗಿರುತ್ತಿದ್ದವು. ಒಂದು ಹಳೆಯ ಅಂಚೆಯ ಬಿಲ್ಲೆ (An old postage stamp) ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದ್ದು ನನಗೆ ಜ್ಞಾಪಕವಿದೆ. ಆ ನೆಪದಲ್ಲಿ ಪೋಸ್ಟ್ ಆಫೀಸಿನ ಚರಿತ್ರೆ, ಮುದ್ರಣಕಲೆಯ ಚರಿತ್ರೆ, ಅನಂತರ ಅಂಚೆ ಚೀಟಿ ಮಾಡಿದ ದೇಶಾಟನೆಯ ಚರಿತ್ರೆ, ಅನಂತರ ಆ ಲಕೋಟೆಯಲ್ಲಿದ್ದದ್ದು ಒಂದು ಪ್ರಣಯಪತ್ರವೆಂದು ಭಾವಿಸಿ ಲಘು ಟೀಕೆ–ಇದನ್ನೆಲ್ಲ ಹೇಳಿ ನಮ್ಮನ್ನು ನಗಿಸಿದ್ದರು. ಆ ಬಳಿಕ ಆ ಉಪನ್ಯಾಸವು ಪುಸ್ತಕರೂಪದಲ್ಲಿ ಅಚ್ಚಾಗಿತ್ತೆಂದು ನನಗೆ ಜ್ಞಾಪಕ. ಅದರ ಮುಖಪತ್ರದ ಮೇಲೆ ಒಂದು ಪೋಸ್ಟ್ ಸ್ಟಾಂಪಿನ ಚಿತ್ರವೂ ಇತ್ತು. ಆ ಪುಸ್ತಕದ ಪ್ರತಿ ಯಾರಲ್ಲಾದರೂ ಇದ್ದರೆ ಅದನ್ನು ಬೆಲೆ ಕೊಟ್ಟು ಕೊಳ್ಳಲು ನಾನು ಸಿದ್ಧನಾಗಿದ್ದೇನೆ.

ಯೇಟ್ಸ್‌ರವರೂ ಅವರ ಸಹಧರ್ಮಿಣಿಯೂ ಉದಾರಿಗಳು. ಜನರ ನಿಷ್ಠುರಗಳನ್ನು ವಿಚಾರಿಸಿ ತಮ್ಮಿಂದಾದ ಸಹಾಯ ಮಾಡುತ್ತಿದ್ದರು. ಸಹಾಯ ಮಾಡುವುದು ಸಾಧ್ಯವಿಲ್ಲದಿದ್ದಾಗ ಅವರು ತೋರಿದ ಸಹಾನುಭೂತಿಯೇ ಕೊಂಚಮಟ್ಟಿಗೆ ಕಷ್ಟನಿವಾರಕವಾಗುತ್ತಿತ್ತು.

ಕೆಲಸದಲ್ಲಿ ಯೇಟ್‌ಸ್‌ರವರು ನಿಪುಣರು. ಮುದ್ರಣಕಲೆಯಲ್ಲಿ ಅವರಿಗೆ ಬಾರದಿದ್ದ ಭಾಗ ಯಾವುದೂ ಇರಲಿಲ್ಲ. ಮತ್ತು ಆ ಕಲೆಯ ಮಹತ್ತ್ವ ಎಷ್ಟರದೆಂಬುದನ್ನು ಅವರು ಗ್ರಹಿಸಿದ್ದರು. ಜನಬೋಧೆಗೆ ಅವಶ್ಯವಾದ ಉಪಕರಣ ಇದು; ಇವನ್ನು ಚೆನ್ನಾಗಿ ಉಪಯೋಗಿಸಿದರೆ ದೇಶೋದ್ಧಾರಕ್ಕೆ ಅತಿಶಯವಾದ ಸಹಾಯವಾಗುತ್ತದೆ–ಎಂದು ಅವರು ತಿಳಿದಿದ್ದರು. ಮತ್ತು ಈ ವಿಷಯಕ್ಕೆ ಸರಕಾರ ಹೆಚ್ಚು ಸಹಾಯ ಕೊಡಬೇಕೆಂದು ಪದೇ ಪದೇ ಬೇಡುತ್ತಿದ್ದರು. ಮುದ್ರಣಕಲೆಯನ್ನು ಚೆನ್ನಾಗಿ ಕಲಿತು ನಿಪುಣರಾಗಿ ಬರುವುದಕ್ಕಾಗಿ ಕೆಲವು ಮಂದಿ ಮೈಸೂರಿಗರನ್ನು ಇಂಗ್ಲೆಂಡ್ ಮೊದಲಾದ ವಿದೇಶಗಳಿಗೆ ಕಳಿಸಬೇಕೆಂದು ಸಲಹೆ ಮಾಡಿದ್ದವರು ಯೇಟ್ಸ್‌ಸಾಹೇಬರು.

ಹಾಸ್ಯಪ್ರವೃತ್ತಿ

ಕೌನ್ಸಿಲರ್ ಎಚ್.ವಿ. ನಂಜುಂಡಯ್ಯನವರಿಗೆ ಯೇಟ್ಸ್‌ರವರಲ್ಲಿ ತುಂಬ ಗೌರವ. ಇಬ್ಬರೂ ಹಾಸ್ಯಪ್ರವೃತ್ತಿಯವರಾಗಿದ್ದದ್ದು ಇದಕ್ಕೆ ಕಾರಣವಿರಬಹುದೆಂದು ನಾನಂದುಕೊಂಡಿದ್ದೇನೆ. ಸಾಮಾನ್ಯವಾಗಿ ಯೇಟ್ಸ್ ಉಪನ್ಯಾಸ ಮಾಡುವಾಗ ನಂಜುಂಡಯ್ಯನವರು ಅಗ್ರಾಸನದಲ್ಲಿರುತ್ತಿದ್ದರು. ಒಂದು ಸಾರಿ ನಂಜುಂಡಯ್ಯನವರು ಸಭಾಪತಿಯಾಗಿದ್ದಾಗ ಯೇಟ್ಸ್‌ರವರು ಹೀಗೆ ಒಂದು ಪದ್ಯ ಹೇಳಿದರು:

Our chairman must be sunny
His words must be honey.
He must give us plenty of money.

ನಂಜುಂಡಯ್ಯನವರು ನಕ್ಕದ್ದೂ ನಕ್ಕದ್ದೇ!

ಮುದ್ರಣಕಲೆಯನ್ನು ಕಲಿಸಲು ಇಬ್ಬರನ್ನು ಆರಿಸಿ ಇಂಗ್ಲೆಂಡಿಗೆ ಕಳುಹಿಸಬೇಕೆಂದು ಯೇಟ್ಸ್ ರವರು ಮಾಡಿದ ಸಲಹೆಯನ್ನು ಎತ್ತಿಹಿಡಿದು ಮಂಜೂರು ಮಾಡಿಸಿದವರು ನಂಜುಂಡಯ್ಯನವರು. ಹಾಗೆ ತಯಾರಾಗಿ ಬಂದವರು ಬಿ. ಪುಟ್ಟಯ್ಯನವರು ಮತ್ತು ಬಿ. ಶ್ರೀನಿವಾಸಯ್ಯಂಗಾರ್ಯರು.

ಕನ್ನಡ ಅಕ್ಷರಗಳ ರೂಪ ರಚನೆಯನ್ನು ಉತ್ತಮಪಡಿಸಿಸಬೇಕೆಂಬ ಸಲಹೆಯೂ ಯೇಟ್ಸ್ ಅವರ ಕಾಲದ್ದೆಂದು ನನ್ನ ಜ್ಞಾಪಕ. ಅದಕ್ಕಾಗಿ ಒಂದು ಸಣ್ಣ ಸಮಿತಿಯನ್ನು ಸರಕಾರದವರು ನಿಯಮಿಸಿದರು. ವಿದ್ಯಾ ಇಲಾಖೆಯ ಮುಖ್ಯಸ್ಥರಾದ ಎಂ. ಶಾಮರಾಯರು ಆ ಸಮಿತಿಯಲ್ಲಿದ್ದರು. ಆ ಸಮಿತಿಯು ಅಕ್ಷರಗಳ ನಮೂನೆಯನ್ನು ಬರೆಯಿಸಿ ಆ ನಮೂನೆಯನ್ನು ನಾಲ್ಕಾರು ಮಂದಿಗೆ ಕಳುಹಿಸಿ ಅಭಿಪ್ರಾಯ ತರಿಸಿಕೊಂಡರು. ಅದರ ಫಲಿತಾಂಶ ಈಗ ಗವರ್ನ್‌ಮೆಂಟ್ ಪ್ರೆಸ್ಸಿನಲ್ಲಿ ಬಳಕೆಯಲ್ಲಿರುವ ಕನ್ನಡದ ಅಚ್ಚಿನ ಮೊಳೆ. ಇದರ ಅಂದ ಚೆಂದಗಳ ವಿಷಯದಲ್ಲಿ ಏಕಾಭಿಪ್ರಾಯವಿಲ್ಲವೆಂಬಷ್ಟನ್ನು ಹೇಳಿ ಬೇರೆ ವಿಚಾರಕ್ಕೆ ಹೊರಡುತ್ತೇನೆ.

ವೆಂಕಟವರದಯ್ಯಂಗಾರ್ಯರು

ಯೇಟ್ಸ್‌ರವರ ಹೆಸರನ್ನು ಹೇಳಿದಾಗ ಅದರೊಡನೆಯೇ ಜ್ಞಾಪಕಕ್ಕೆ ಬರುವ ಹೆಸರು ಸಿ. ವೆಂಕಟವರದಯ್ಯಂಗಾರ್ಯರದು. ವೆಂಕಟವರದಯ್ಯಂಗಾರ್ಯರು ಮುಖ್ಯ ಪ್ರೂಫ್ ಎಗ್ಸಾಮಿನರ್ ಆಗಿದ್ದರು. ಇವರು ಮಹನೀಯ ಪಂಕ್ತಿಗೆ ಸೇರಬೇಕಾದವರು. ಅವರ ಭಾಷಾಜ್ಞಾನ ಪ್ರಮಾಣವತ್ತಾದದ್ದು. ಅವರಿಗೆ ಇಂಗ್ಲಿಷಿನಲ್ಲಿ ಬರವಣಿಗೆ ಮಾಡಬೇಕಾದ ಸಂದರ್ಭ ಹೆಚ್ಚಾಗಿರಲಿಲ್ಲ. ಆದರೆ ಇದ್ದಷ್ಟು ಅವಕಾಶದಲ್ಲಿ ಅವರು ಇಂಗ್ಲಿಷ್ ಬರೆಯುತ್ತಿದ್ದದ್ದನ್ನು ನಾನು ನೋಡಿದ್ದೇನೆ. ಅದು ಸ್ವಚ್ಛವಾದ ಇಂಗ್ಲಿಷ್. ಓಜಸ್ವಿಯಾದ ಇಂಗ್ಲಿಷ್. ಅವರು ವ್ಯಾಕರಣವನ್ನೂ ಭಾಷಾಮರ್ಯಾದೆಯನ್ನೂ ವಶಪಡಿಸಿಕೊಂಡಿದ್ದರು. ವೆಂಕಟವರದಯ್ಯಂಗಾರ್ಯರು ಮೈಸೂರು ಮಹಾರಜಾ ಕಾಲೇಜಿನ ವಿದ್ಯಾರ್ಥಿ; ಭಾಭಾ ಸಾಹೇಬರ ಪಟ್ಟಶಿಷ್ಯರಲ್ಲೊಬ್ಬರು. ಕನ್ನಡದಲ್ಲಿಯೂ ಅವರಿಗೆ ಪ್ರಮಾಣಭೂತವಾದ ಜ್ಞಾನವಿತ್ತು. ಸೊಗಸಾದ ಕನ್ನಡ ಬರೆಯುತ್ತಿದ್ದರು. ಅವರು "ಹಿತವಾದಿ" ಎಂಬ ಕನ್ನಡ ಮಾಸಪತ್ರಿಕೆಯನ್ನು ನಡೆಸುತ್ತಿದ್ದರು. ಅದು ನನಗೆ ಅಚ್ಚು ಮೆಚ್ಚಾದ ಪತ್ರಿಕೆ.

ವೆಂಕಟವರದಯ್ಯಂಗಾರ್ಯರು ಸಮಾಜಸುಧಾರಕ ಪಂಥಕ್ಕೆ ಸೇರಿದವರು. ಸಮಾಜಾಭ್ಯುದಯದ ಪ್ರಶ್ನೆಗಳನ್ನು ಕುರಿತು ವಿಚಾರ ನಡಸಿ ಜನರಲ್ಲಿ ಹರಡಬೇಕೆಂಬ ಉದ್ದೇಶದಿಂದ "ದೇಶಾಭ್ಯುದಯ ಸಂಘ" (Indian Progressive Union) ಎಂಬ ಸಂಸ್ಥೆಯನ್ನು ಸ್ಥಾಪನೆ ಮಾಡಿಸಿದ್ದರು. ಅದರ ಕಾರ್ಯಾಂಗವಾಗಿ ನಡೆಯುತ್ತಿದ್ದದ್ದು "ಹಿತವಾದಿ" ಪತ್ರಿಕೆ. ಆ ಸಂಸ್ಥೆಯ ಇನ್ನೊಂದು ಕಾರ್ಯಾಂಗ ಈಗ ಬಸವನಗುಡಿಯಲ್ಲಿ ನಾಗಸಂದ್ರ ರಸ್ತೆಯಲ್ಲಿರುವ ಅಬಲಾಶ್ರಮ. ಇದು ವೆಂಕಟವರದಯ್ಯಂಗಾರ್ಯರ ಸ್ವಭಾವವನ್ನು ತೋರಿಸುತ್ತದೆ.

ಪ್ರಾಮಾಣಿಕತೆ

ವೆಂಕಟವರದಯ್ಯಂಗಾರ್ಯರು ವೈಯುಕ್ತಿಕ ಜೀವನದಲ್ಲಿ ಸರಳರು, ಕರುಣಾಳುಗಳು, ಸ್ನೇಹತತ್ಪರರು, ಎಲ್ಲಕ್ಕಿಂತ ಮೇಲಾಗಿ ಪ್ರಾಮಾಣಿಕರು.

ಅಚ್ಚಿನ ಕರಡುಗಳನ್ನು ಶೋಧಿಸಿ ಪರಿಷ್ಕಾರಪಡಿಸುವುದರಲ್ಲಿ ವೆಂಕಟವರದಯ್ಯಂಗಾರ್ಯರ ಪ್ರಾಮಾಣಿಕತೆ ಕ್ಷಣಕ್ಷಣವೂ ಎದ್ದು ಕಾಣುತ್ತಿತ್ತು. ಕರಡಿನ ಶೋಧನೆ ಕಷ್ಟದ ಕೆಲಸ. ರೇಜಿಗೆಯ ಕೆಲಸ. ಬೇಸರವುಂಟು ಮಾಡುವ ಕೆಲಸ; ಕಣ್ಣಿಗೆ ಊನ ತರುವ ಕೆಲಸ. ಈ ಕೆಲಸವನ್ನು ನಿರ್ವಹಿಸುವುದರಲ್ಲಿ ವೆಂಕಟವರದಯ್ಯಂಗಾರ್ಯರು ಅಡಿಗಡಿಗೂ ತಮ್ಮ ಅಂತಸ್ಸಾಕ್ಷಿಯನ್ನು (Conscience) ಪ್ರಯೋಗಕ್ಕೆ ತಂದು ನಿಘಂಟು ಮೊದಲಾದ ಉಪಕರಣಗಳನ್ನು ಬಳಸಿಕೊಳ್ಳುವುದರಲ್ಲಿ ಕೊಂಚವೂ ಪಾಲುಮಾರದವರಾಗಿದ್ದರು. ನಾನು ಅವರನ್ನು ಈ ಕಷ್ಟದ ಕೆಲಸದ ಅಭ್ಯಾಸಗಳಲ್ಲಿ ಆದ್ಯರು, ಆದರ್ಶಸ್ವರೂಪರು–ಎಂದು ಸರ್ವದಾ ನೆನೆಯುತ್ತೇನೆ.

ನಿವೃತ್ತಿ

ಯೇಟ್ಸ್ ಸಾಹೇಬರಿಗೆ ವೆಂಕಟವರದಯ್ಯಂಗಾರ್ಯರಲ್ಲಿ ಅತಿಶಯವಾದ ಗೌರವ ಮತ್ತು ಅಭಿಮಾನ. ವೆಂಕಟವರದಯ್ಯಂಗಾರ್ಯರು ತಮ್ಮ ಸಂಬಳದ ಉದ್ಯೋಗದ ಜೊತೆಗೆ ದೇಶದ ಸಂಪತ್ಸಮೃದ್ಧಿ ಪ್ರಯತ್ನ ಮೊದಲಾದ ಇತರ ಹವ್ಯಾಸಗಳನ್ನಿಟ್ಟು ಕೊಂಡಿದ್ದರು. ಈ ಹವ್ಯಾಸಗಳು ಬೆಳೆದು ದೊಡ್ಡದಾದ ಮೇಲೆ ವೆಂಕಟವರದಯ್ಯಂಗಾರ್ಯರು ತಾವು ಸರಕಾರಿ ಕೆಲಸದಿಂದ ನಿವೃತ್ತರಾಗಲು ಅಪ್ಪಣೆ ಬೇಡಿದರು. ಆಗ ಯೇಟ್ಸ್‌ರವರು ಬಹುವಾಗಿ ಪೇಚಾಡಿ,

"ಅಯ್ಯಾ! ಇನ್ನು ಆರು ತಿಂಗಳೋ, ಒಂದು ವರ್ಷವೋ ಇದ್ದರೆ ಪೂರ್ತಿ ಪಿಂಛನಿ ಬಂದೀತು. ನಿಮಗೆ ಅಷ್ಟು ತುರ್ತಾಗಿ ಪುರಸತ್ತು ಬೇಕಾದರೆ ಆರು ತಿಂಗಳ ರಜ ಕೊಟ್ಟೇನು. ನೀವು ಬಡವರು; ದುಡಕಬೇಡಿ" –ಎಂದು ಅಂಗಲಾಚಿದರು. ವೆಂಕಟವರದಯ್ಯಂಗಾರ್ಯರು ಪ್ರಾಮಾಣಿಕರಲ್ಲವೆ? ಸರಕಾರದ ಉಪ್ಪು ತಿಂದರೆ ಅದಕ್ಕೆ ಒಮ್ಮನಸ್ಸಿನಿಂದ ದುಡಿಯಬೇಡವೆ?

"ಈಗ ನನ್ನ ಗಮನ ಎರಡು ಕಡೆಗೆ ಚದರಿದೆ. ಇದು ನನ್ನ ಮನಸ್ಸಾಕ್ಷಿಗೆ ಒಪ್ಪಲಾರದು" ಎಂದು ಹೇಳಿ ಕೆಲಸವನ್ನು ಬಿಟ್ಟೇಬಿಟ್ಟರು.

ವೆಂಕಟವರದಯ್ಯಂಗಾರ್ಯರು ಮೈಸೂರಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ ಒಂದು ಸಂಗತಿ ನಡೆಯಿತು. ಅದು ಅವರ ಸ್ವಭಾವವನ್ನು ತೋರಿಸುತ್ತದೆ. ಅವರು ಎಫ್.ಎ. ಪರೀಕ್ಷೆಗೆ ಕುಳಿತಿದ್ದರು. ಪ್ರಶ್ನೆಪತ್ರಿಕೆಗಳನ್ನು ಹಂಚಿದ್ದಾಗಿತ್ತು. ಒಂದರ್ಧ ಘಂಟೆ ಬಿಟ್ಟು ಅಧ್ಯಕ್ಷ ಭಾಭಾ ಸಾಹೇಭರು ಪರೀಕ್ಷಾ ಭವನದಲ್ಲಿ ಕಾದು ನೋಡುತ್ತಾ ವೆಂಕಟವರದಯ್ಯಂಗಾರ್ಯರು ಕುಳಿತಿದ್ದ ಕಡೆಗೆ ಬಂದರು. ವೆಂಕಟವರದಯ್ಯಂಗಾರ್ಯರು ಪ್ರಶ್ನೆಪತ್ರಿಕೆಗಳಿಗೆ ಉತ್ತರ ಬರೆಯುವುದನ್ನು ನಿಲ್ಲಿಸಿ ಇನ್ನೇನನ್ನೋ ಬರೆಯುತ್ತಿದ್ದರು. ಭಾಭಾರವರು ಅದನ್ನು ಅನುಮಾನಿಸಿ ಕೇಳಿದರು:

ಭಾಭಾ: "ನೀನು ಬರೆಯುತ್ತಿರುವುದು ಏನು?"

ವೆಂ: "ಕಾಂಗ್ರೆಸ್ ಸೆಕ್ರೆಟರಿಗೆ ಒಂದು ಕಾಗದ. ಕಾಂಗ್ರೆಸ್ಸಿಗೆ ಸಹಾಯಬೇಕೆಂದು ಅಪೀಲು ಮಾಡಿದ್ದಾರೆ. ನಾನೂ ನನ್ನ ಸ್ನೇಹಿತರೂ ಅದಕ್ಕಾಗಿ ಓಡಾಡಿ ಹದಿನೈದಿಪ್ಪತ್ತು ರೂಪಾಯಿ

ಜೊತೆ ಮಾಡಿದ್ದೇವೆ. ಇದನ್ನು ಕಾಂಗ್ರೆಸ್ ಸೆಕ್ರೆಟರಿಗೆ ಮನಿ ಆರ್ಡರ್ ಕಳಿಸಿದ್ದಾಗಿದೆ. ಅದರ ತಪಶೀಲುಗಳನ್ನು ಈ ಕಾಗದದಲ್ಲಿ ಬರೆದು ರವಾನೆ ಮಾಡುತ್ತೇನೆ."

ಭಾಭಾ: (ಕೊಂಚ ನಕ್ಕು) "ನಿನ್ನ ಪರೀಕ್ಷೆ?"

ವೆಂ: "ಪ್ರಶ್ನಪತ್ರಿಕೆಗೆ ಉತ್ತರ ಬರೆದಿಟ್ಟಿದ್ದೇನೆ."

ಭಾಭಾರವರು ಆ ಪತ್ರಿಕೆಯನ್ನು ತೆಗೆದು ನೋಡಿ ಸಂತೋಷಪಟ್ಟು ಅದನ್ನಲ್ಲಿಯೇ ಬಿಟ್ಟರು. ವೆಂಕಟವರದಯ್ಯಂಗಾರ್ಯರು ಪ್ಯಾಸಾದರು. ಅದು ತೋರಿಸುತ್ತದೆ ಅವರು ಓದಿನಲ್ಲಿ ಹಿಂದೆ ಬೀಳಲಿಲ್ಲವೆಂದು. ಅದು ಭಾಷಾ ವಿಷಯಕ ಪತ್ರಿಕೆ. ಹೀಗೆ ಶ್ರಮಪಟ್ಟು ವಿದ್ಯೆ ಸಂಪಾದಿಸಿದ್ದರ ಜೊತೆಗೆ ದೇಶ ಸೇವಾಬುದ್ಧಿಯೂ ಅವರಲ್ಲಿ ಬೆಳೆದುಕೊಂಡಿತ್ತು.

***

ಯೇಟ್ಸ್‌ರವರು ಸರಕಾರಿ ಪ್ರೆಸ್ಸಿನ ಸೂಪರಿಂಟೆಂಡೆಂಟರಾಗಿದ್ದಾಗ ರಾಮಚಂದ್ರ ಮೊದಲಿಯಾರ್ರವರು ಅಸಿಸ್ಟೆಂಟರಾಗಿದ್ದರು. ಬಳಿಕ ಮೊದಲಿಯಾರ್ ಅವರೇ ಮುಖ್ಯ ಸೂಪರಿಂಟೆಂಡೆಂಟರಾದರು.

ಮೊದಲಿಯಾರ್ ಅವರು ವಿಚಕ್ಷಣಪರರು. ಜನದ ಜೊತೆಯಲ್ಲಿ ವ್ಯವಹಾರಕುಶಲರಾಗಿ ನಡೆಯುತ್ತಿದ್ದರು. ಅವರಿಗೆ ಕೌನ್ಸಿಲರುಗಳ, ಸರಕಾರದ ಭಾರಿ ಭಾರಿ ಅಧಿಕಾರಿಗಳ ಬಳಕೆ ಚೆನ್ನಾಗಿತ್ತು ಮತ್ತು ಸಾರ್ವಜನಿಕರಲ್ಲಿಯೂ ಕೊಂಚ ಸಂಬಂಧವಿತ್ತು. ಅವರು ಸ್ವತಃ ಒಳ್ಳೆಯವರು. ಆದದ್ದರಿಂದ ಅವರ ಆಡಳಿತ ಸುಗಮವಾಗಿ ನಡೆಯಿತು. ಅವರು ಅಧಿಕಾರದಲ್ಲಿದ್ದ ಕಾಲದಲ್ಲಿಯೇ ಪುಟ್ಟಯ್ಯನವರು ಅವರಿಗೆ ಸಹಾಯಕರಾಗಿ ನಿಯಮಿತರಾದರು. ಶ್ರೀನಿವಾಸಯ್ಯಂಗಾರರು ಮತ್ತೊಬ್ಬ ಸಹಾಯಕರಾಗಿದ್ದರು. ಅಯ್ಯಂಗಾರ್ಯರನ್ನು ಕೊಂಚ ಕಾಲದ ಮೇಲೆ ಮೈಸೂರಿನ ಬ್ರಾಂಚ್ ಪ್ರೆಸ್ಸಿಗೆ ವರ್ಗ ಮಾಡಿದ್ದಾಯಿತು. ಒಟ್ಟಿನಲ್ಲಿ ರಾಮಚಂದ್ರ ಮೊದಲಿಯಾರರ ಆಡಳಿತ ತೃಪ್ತಿಕರವಾಗಿತ್ತು.

ಪುಟ್ಟಯ್ಯನವರು

ಬಿ. ಪುಟ್ಟಯ್ಯನವರು ನನಗೆ ಸ್ನೇಹಿತರಾಗಿದ್ದವರು. ಇವರು ಬಿ.ಎ. ಪ್ಯಾಸ್ ಮಾಡಿದ ತರುವಾಯ ಕೆಲವು ದಿನಗಳ ಮೇಲೆ ಒಲ್ಕಲಿಗರ ಸಂಘ ಸ್ಥಾಪನೆಯಾಗಿ ಆ ಸಂಘದಿಂದ "ಒಕ್ಕಲಿಗರ ಪತ್ರಿಕೆ" ಎಂಬ ಕನ್ನಡ ವಾರಪತ್ರಿಕೆ ಪ್ರಾರಂಭವಾಯಿತು. ಈ ಪತ್ರಿಕೆಯ ವಾಸ್ತವ ಸಂಪಾದಕರು ಪುಟ್ಟಯ್ಯನವರು. ಆ ಪತ್ರಿಕೆ ಮೊದಮೊದಲು ಅಚ್ಚಾಗುತ್ತಿದ್ದದ್ದು "ಮೈಸೂರು ಸ್ಟ್ಯಾಂಡರ್ಡ್" ಪ್ರೆಸ್ಸಿನಲ್ಲಿ. "ಸ್ಟ್ಯಾಂಡರ್ಡ್" ಪತ್ರಿಕೆಗೆ ಜೊತೆಯಾಗಿದ್ದ "ನಡೆಗನ್ನಡಿ" ಎಂಬ ಕನ್ನಡ ವಾರಪತ್ರಿಕೆ ಮುದ್ರಣವಾಗುತ್ತಿದ್ದದ್ದೂ ಅದೇ ಸ್ಟ್ಯಾಂಡರ್ಡ್ ಪ್ರೆಸ್ಸಿನಲ್ಲಿ. ೧೯೦೭-೭ರಲ್ಲಿ ಎಂದು ನನ್ನ ಜ್ಞಾಪಕ. ಆಗ ಸ್ಟ್ಯಾಂಡರ್ಡ್ ಪ್ರೆಸ್ ಇದ್ದದ್ದು ಬೆಂಗಳೂರು ಕೋಟೆಯಲ್ಲಿ, ಟಿಪ್ಪು ಸುಲ್ತಾನರ ಅರಮನೆಯ ಪಶ್ಚಿಮದ ಕಡೆಗೆ; ಆಂಜನೇಯಸ್ವಾಮಿ ದೇವಾಲಯದ ಪೂರ್ವಕ್ಕೆ ಸಮೀಪದಲ್ಲಿದ್ದ ಸೀತಾರಾಮಮಂದಿರ ಎಂಬ ಕಟ್ಟಡದಲ್ಲಿ. ನಾನು ಪತ್ರಿಕಾವೃತ್ತಿಗೆ ಆಗತನೆ ಪ್ರವೇಶ ಮಾಡಿದ್ದೆ. "ಸ್ಟ್ಯಾಂಡರ್ಡ್" ಪತ್ರಿಕೆಗೂ "ನಡೆಗನ್ನಡಿ" ಪತ್ರಿಕೆಗೂ ಲೇಖನಗಳನ್ನು ಕೊಡುವುದಕ್ಕಾಗಿ ಅಲ್ಲಿಗೆ ಪದೇ ಪದೇ ಹೋಗುತ್ತಿದ್ದೆ. "ಸ್ಟ್ಯಾಂಡರ್ಡ್ ಪತ್ರಿಕೆಯ ಸಂಪಾದಕರಾದ ಪೂಜ್ಯ ಎಂ. ಶ್ರೀನಿವಾಸಯ್ಯಂಗಾರ್ಯರ ತಮ್ಮಂದಿರು ರಂಗಸ್ವಾಮಿ ಎಂಬವರು ನನಗೆ ತುಂಬ ಸ್ನೇಹಿತರು. ಬಹುಶಃ ನಾವಿಬ್ಬರೂ ಸಮಾನ ವಯಸ್ಕರು. ಈ ಕಾರಣದಿಂದಲೂ ನಾನು ಸ್ಟ್ಯಾಂಡರ್ಡ್ ಪ್ರೆಸ್ಸಿಗೆ ಹೆಚ್ಚಾಗಿ ಹೋಗುತ್ತಿದ್ದೆ. ಒಕ್ಕಲಿಗರ ಪತ್ರಿಕೆಯ ಕೆಲಸಕ್ಕಾಗಿ ಪುಟ್ಟಯ್ಯನವರು ಅಲ್ಲಿಗೆ ಬರುತ್ತಿದ್ದರು. ಹಾಗೆ ಪ್ರಾರಂಭವಾಯಿತು, ಅವರ ನನ್ನ ಪರಿಚಯ. ಹಾಗೆ ಪ್ರಾರಂಭವಾದದ್ದು ಸ್ನೇಹವಾಗಿ ಪಕ್ವವಾಯಿತು.

ಪುಟ್ಟಯ್ಯನವರು ಸ್ವಲ್ಪ ಮುಂಗೋಪಿಗಳು. ಮೊದಮೊದಲು ಮಾತು ಸ್ವಲ್ಪ ಕಟು. ಆಮೇಲೆ ಎಲ್ಲ ಸೌಮ್ಯವಾಗಿರುತ್ತಿತ್ತು.

ಲೆಕ್ಕಾಚಾರ

ಪುಟ್ಟಯ್ಯನವರೂ ನಾನೂ ಒಂದು ಮಿತ್ರಗೋಷ್ಠಿಗೆ ಸೇರಿದ್ದವರು. ಆ ಗೋಷ್ಠಿಗೆ ಸೇರಿದ್ದ ಇತರ ಸ್ನೇಹಿತರು ಹತ್ತು ಹೆನ್ನೆರಡು ಮಂದಿ ಇದ್ದರು. ನಮ್ಮ ಗೋಷ್ಠಿಗೆ "ಅನಾಮಧೇಯ ಗೋಷ್ಠಿ" (Non-entities) ಎಂದು ಹೆಸರಿಟ್ಟುಕೊಂಡಿದ್ದೆವು. ಈ ಗೋಷ್ಠಿಗೆ ಬಿ. ಶ್ರೀನಿವಾಸಯ್ಯಂಗಾರ್ಯರೂ ಸೇರಿದ್ದರು. ಪುಟ್ಟಯ್ಯನವರನ್ನು ಗೋಷ್ಠಿಯ ಕೋಶಾಧಿಕಾರಿಯಾಗಿ ನಿಯಮಿಸಿದ್ದೆವು. ಈ ಕೆಲಸವನ್ನು ನಿರ್ವಹಿಸುವುದರಲ್ಲಿ ಪುಟ್ಟಯ್ಯನವರು ತೋರಿಸಿದ ನಿಷ್ಕರ್ಷೆಯನ್ನೂ ಲೆಕ್ಕಾಚಾರದಲ್ಲಿ ನಿರ್ದಾಕ್ಷಿಣ್ಯವಾಗಿ ಕರಾರುವಕ್ಕಾಗಿದ್ದದ್ದನ್ನು ನಾವೆಲ್ಲ ತುಂಬ ಮೆಚ್ಚಿಕೊಂಡಿದ್ದೆವು.

ಪುಟ್ಟಯ್ಯನವರೂ ನಾನೂ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಕೆಲಸದಲ್ಲಿ ಜೊತೆಯಾಗಿದ್ದೆವು. ಆಗ ನಾವೆಲ್ಲ ಕಂಡುಕೊಂಡೆವು ಪುಟ್ಟಯ್ಯನವರು ಎಂಥ ಕಾರ್ಯಶ್ರದ್ಧೆಯುಳ್ಳವರು, ಎಂಥ ನಿಷ್ಠುರು–ಎಂಬುದನ್ನು.

ಸಾಹಿತ್ಯೋತ್ಸಾಹ

ನಿಘಂಟುವಿನ ಕಾರ್ಯಸಮಿತಿಯ ಸದಸ್ಯರೆಲ್ಲರಿಗೂ ನಕಲಿನ ಕೈಬರಹದ ಪ್ರತಿಗಳು ಮುಂಗಡವಾಗಿ ಬರುತ್ತಿದ್ದವು. ಸದಸ್ಯರು ಆ ನಕಲು ಪ್ರತಿಗಳನ್ನು ಶೋಧಿಸಿ ಗುರುತು ಮಾಡಿಕೊಂಡು ಬರಬೇಕಾಗಿತ್ತು. ಪುಟ್ಟಯ್ಯನವರು ಈ ಕೆಲಸದಲ್ಲಿ ಒಂದು ಸಲವೂ ಪಾಲುಮಾರಿದವರಲ್ಲ. ನಕಲನ್ನೆಲ್ಲ ಎಚ್ಚರಿಕೆಯಿಂದ ಓದಿ ತಮ್ಮ ಸಲಹೆಗಳನ್ನು ಗುರುತುಮಾಡಿಕೊಂಡು ತರುತಿದ್ದರು. ಆಮೇಲೆ ನಡೆಯುತ್ತಿದ್ದ ಚರ್ಚೆಗಳಲ್ಲಿ ಸಾವಧಾನವಾಗಿಯೂ ತಾಳ್ಮೆಯಿಂದಲೂ ಭಾಗವಹಿಸಿ ಇತರರು ಹೇಳಿದ ಅಭಿಪ್ರಾಯಗಳನ್ನು ಗ್ರಹಿಸಿ ಗುಣಾವಗುಣ ವಿವೇಚನೆ ಮಾಡುತ್ತಿದ್ದರು.

ಹೀಗೆ ಅವರು ಕೊಡುತ್ತಿದ್ದ ಸಹಕಾರವನ್ನು ನಿಘಂಟು ಸಮಿತಿಯ ಅಧ್ಯಕ್ಷರಾದ ಬೆಳ್ಳಾವೆ ವೆಂಕಟನಾರಣಪ್ಪನವರು ಸಂತೋಷದಿಂದ ಕೊಂಡಾಡುತ್ತಿದ್ದರು.

ಪುಟ್ಟಯ್ಯನವರಿಗೂ ನನಗೂ ಇದ್ದ ಇನ್ನೊಂದು ಸಾರ್ವಜನಿಕ ಸಂಬಂಧ ಕರ್ಣಾಟಕ ಸಾಹಿತ್ಯ ಪರಿಷತ್ತಿನದು. ಅವರು ಆ ಸಂಸ್ಥೆಯ ಕಾರ್ಯಸಮಿತಿಯಲ್ಲಿದ್ದಾಗ ನಾನು ಉಪಾಧ್ಯಕ್ಷನಾಗಿದ್ದೆ. ಆ ಕಾರ್ಯಸಮಿತಿಯ ಎಲ್ಲ ಯೋಜನೆಗಳಲ್ಲಿಯೂ ಪುಟ್ಟಯ್ಯನವರು ಪ್ರಮುಖರಾಗಿದ್ದರು. ಯಾವುದರಲ್ಲಿಯೂ ಅವರು ದುಡುಕುವವರಲ್ಲ; ಯೋಚನೆ ಮಾಡದೆ ಮಾತನಾಡುವವರಲ್ಲ. ಮಾತಿನಲ್ಲಿ ಉದ್ವೇಗವಾಗಲಿ ಆವೇಶವಾಗಲಿ ಇರುತ್ತಿರಲಿಲ್ಲ. ಯಾವುದು ಕಾರ್ಯಸಾಧ್ಯವೋ ಅದನ್ನು ಸಲಹೆ ಮಾಡುತ್ತಿದ್ದರು. ಮತ್ತು ಅಂಥ ಸಲಹೆಯನ್ನು ಇತರರು ಕೊಟ್ಟಾಗ ತಕರಾರಿಲ್ಲದೆ ಒಪ್ಪಿಕೊಳ್ಳುತ್ತಿದ್ದರು.

ಪುಟ್ಟಯ್ಯನವರಿಗೆ ಕನ್ನಡ ಭಾಷೆ ಸಾಹಿತ್ಯಗಳ ವಿಷಯದಲ್ಲಿ ನೈಜವಾದ ಉತ್ಸಾಹವಿತ್ತು. ಅವರು ಇಂಗ್ಲೆಂಡಿನಿಂದ ವಾಪಸ್ ಬಂದ ಬಳಿಕ ತಾವು ಆ ದೇಶದಲ್ಲಿ ಕಂಡ ವಿಶೇಷ ಸಂಗತಿಗಳನ್ನೂ ಅವರು ಕಲಿತ ವಿಶೇಷ ಸಂಗತಿಗಳನ್ನೂ ತಿಳಿಗನ್ನಡದಲ್ಲಿ ಬರೆದು ಸ್ವಜನಕ್ಕೆ ಅರ್ಪಿಸಿದರು. “ಅಭಿವೃದ್ಧಿ ಸಂದೇಶ” (Messages of Uplift) ಎಂದು ಆ ಗ್ರಂಥದ ಹೆಸರು.

ಸಮಾರಂಭಗಳು

ಪುಟ್ಟಯ್ಯನವರು ಇನ್ನೂ ಯಾವುಯಾವುದೋ ಸಮಾರಂಭಗಳಿಗೆ ಸೇರಿಕೊಂಡಿದ್ದರು. ಅವುಗಳಲ್ಲಿ ಫೆಲೋಷಿಪ್ ಆಫ್ ಫೈತ್ಸ್ (Fellowship of Faiths) ಎಂಬುದೊಂದು. ಹಾಗೆಂದರೆ ನಾನಾ ಮತಗಳ ಮೈತ್ರಿ ಸಂಘ. ಅವರ ಇನ್ನೊಂದು ಸಮಾರಂಭ ರೇಡಿಯಂಟ್ ಹೆಲ್ತ್‌ಕ್ಲಬ್ Radiant Health Club ಎಂದರೆ ಪ್ರಕಾಶಮಾನ ಆರೋಗ್ಯ ಸಂಘ. ಈ ಸಂಘದವರು ಸೊಪ್ಪುಸೆದೆ, ಹಸಿ ಕೋಸಂಬರಿ, ಹಣ್ಣುಗಳು ಇದನ್ನು ತಿನ್ನುವರು; ಕರೆದದ್ದೂ ಬೆಂದದ್ದೂ ಇಲ್ಲ.

ಈ ಎರಡು ಸಮಾರಂಭಗಳಲ್ಲೂ ತಿಂಡಿ ಇರುತ್ತಿದ್ದದ್ದರಿಂದಲೂ ಹಾಸ್ಯ ವಿನೋದಕ್ಕೆ ಅವಕಾಶವಿದ್ದದ್ದರಿಂದಲೂ ನಾನು ಆ ಸಂದರ್ಭಗಳಲ್ಲಿ ಪುಟ್ಟಯ್ಯನವರ ಮನೆಗೆ ಹೋಗುತ್ತಿದ್ದುದುಂಟು.

ಪುಟ್ಟಯ್ಯನವರು ಗವರ್ನ್‌ಮೆಂಟ್ ಪ್ರೆಸ್ಸಿನ ಮುಖ್ಯಾಧ್ಯಕ್ಷರಾಗುವುದಕ್ಕೆ ಹಿಂದೆ ಸ್ವಲ್ಪ ಕಾಲ ದಿವಾನರ ಪ್ರೈವೇಟ್ ಸೆಕ್ರೆಟರಿಯಾಗಿದ್ದರು. ಆಗ ದಿವಾನರಾಗಿದ್ದವರು ಸರ್.ಎ.ಅರ್. ಬ್ಯಾನರ್ಜಿಯವರು. ಆ ಕೆಲಸದ ಅನುಭವವನ್ನು ಕೊಂಚ ಕಾಲ ಪಡೆದ ಬಳಿಕ ಪುಟ್ಟಯ್ಯನವರು ಪ್ರೆಸ್ಸಿನ ಕೆಲಸವೇ ತಮ್ಮ ಮನಸ್ಸಿಗೆ ಒಪ್ಪತಕ್ಕದ್ದೆಂದು ತಮ್ಮ ಕಸಬಿಗೆ ಹಿಂದಿರುಗಿದರು.

ಅವರ ಆಡಳಿತದಲ್ಲಿ ಪ್ರೆಸ್ಸಿನ ಅನೇಕ ಇಲಾಖೆಗಳು ಬೆಳೆದು ವಿಸ್ತಾರಪಟ್ಟವು. ಕಟ್ಟಡದ ಹಿಂದುಗಡೆಯ ಕೋಣೆಗಳು, ವರಾಂಡ ಮೊದಲಾದವೆಲ್ಲ ರಿಪೇರಿಯಾಗಿ ಜಾಗ ವಿಸ್ತಾರಪಟ್ಟದ್ದು ಪುಟ್ಟಯ್ಯನವರ ಕಾಲದಲ್ಲೆಂದು ನನ್ನ ಜ್ಞಾಪಕ.

ಪುಟ್ಟಯ್ಯನವರೂ ಅವರ ಸಹಾಯಕರಾಗಿದ್ದ ಶ್ರೀನಿವಾಸಯ್ಯಂಗಾರ್ಯರೂ ಪರಸ್ಪರ ವಿಶ್ವಾಸಿಗರಾದ ಸ್ನೇಹಿತರು. ಆದದ್ದರಿಂದ ಅಧಿಕಾರನಿರ್ವಾಹದಲ್ಲಿ ಎಲ್ಲ ಸಮರಸವಾಗಿರುತ್ತಿತ್ತು.

ಪುಟ್ಟಯ್ಯನವರು ಸ್ವಾಭಾವಿಕವಾಗಿ ಸಾಧುಗಳು, ಸಾತ್ವಿಕರು, ಪ್ರಾಮಾಣಿಕರು, ಮತ್ತು ನ್ಯಾಯಶ್ರದ್ಧೆಯುಳ್ಳವರು. ಎಲ್ಲಕ್ಕಿಂತ ಹೆಚ್ಚಾಗಿ ದಯಾವಂತರು, ಕಷ್ಟ ನಿಷ್ಠುರ ಪಡುವವರಲ್ಲಿ ಸಹಾನುಭೂತಿಯುಳ್ಳವರು. ಆದದ್ದರಿಂದ ಅವರ ಆಡಳಿತ ಯಶಸ್ವಿಯಾಯಿತು.

ಶ್ರೀನಿವಾಸಯ್ಯಂಗಾರ್ಯರು

ಬಳಿಕ ಅಧಿಕಾರಕ್ಕೆ ಬಂದವರು ಬಿ.ಶ್ರೀನಿವಾಸಯ್ಯಂಗಾರ್ಯರು. ಇವರಿಗೂ ನನಗೂ ಹಿಂದೆಯೇ ಪರಿಚಯವಾಗಿತ್ತು. ಮೈಸೂರಿನಲ್ಲಿ ನಾನು ಓದಿಗೆ ಮಣ್ಣು ಹಾಕುತ್ತಿದ್ದಾಗ ಅವರು ಸೀನಿಯರ್ ಬಿ.ಎ. ತರಗತಿಯಲ್ಲಿದ್ದರು; ನಾನು ಹೈಸ್ಕೂಲಿನ ಫೋರ್ತ್‌ಫಾರ್ ಎಂಬ ಪ್ರಾರಂಭದ ತರಗತಿಯಲ್ಲಿದ್ದೆ. ಇಬ್ಬರೂ ಹಾಸ್ಟಲಿನಲ್ಲಿದ್ದದ್ದು ಪರಸ್ಪರ ಮುಖ ಪರಿಚಯಕ್ಕೆ ಕಾರಣವಾಯಿತು.

ಶ್ರೀನಿವಾಸಯ್ಯಂಗಾರ್ಯರಿಗೆ ಸಾತ್ತ್ವಿಕರೆಂದೂ ವ್ಯಾಸಂಗನಿಷ್ಠರೆಂದೂ ಆಗಲೇ ಹೆಸರಾಗಿತ್ತು. ಅವರು ಯಾವ ಕುಹಕ ಕುಚೋದ್ಯಗಳಿಗೂ ಸೇರಿದವರಲ್ಲ. ಯಾವ ಕಿತ್ತಾಟದಲ್ಲಿಯೂ ಭಾಗವಹಿಸಿದವರಲ್ಲ. ಧ್ವನಿಯೆತ್ತಿ ಮಾತನಾಡಿದವರು ಕೂಡ ಅಲ್ಲ. ತಮ್ಮ ಓದು, ತಮ್ಮ ಕರ್ತವ್ಯ–ಇಷ್ಟೇ ಅವರ ಪ್ರಪಂಚ. ಅವರಿಗೆ ಇದ್ದ ಸ್ನೇಹಿತರು ಮೂರು ನಾಲ್ಕು ಮಂದಿ ಮಾತ್ರ. ಅವರೊಡನೆಯೂ ಹೆಚ್ಚು ಸಂಪರ್ಕವಿಲ್ಲ. ಆ ದಿನಗಳಿಂದ ಕಡೆಯವರೆಗೂ ಸದ್ದುಗದ್ದಲಗಳಿಲ್ಲದೆ ವ್ರತನಿಷ್ಠೆಯಿಂದ ಜೀವನ ಸಾಗಿಸಿದವರು ಅವರು. ಅವರ ಸ್ನೇಹಿತರು ಅವರನ್ನು "ಸುಂದರಕಾಂಡದ ಶೀನಪ್ಪ" ಎಂದು ಕರೆಯುವುದು ವಾಡಿಕೆ. ಅವರು ಶ್ರೀಮದ್ರಾಮಾಯಣ ಪರಾಯಣರು. ಪ್ರತಿ ದಿನವೂ ಒಂದಿಷ್ಟು ಪಾರಾಯಣ ಮಾಡುತ್ತಿದ್ದರು. ಆಗಾಗ ರಾಮೋತ್ಸವ ನಡೆಸುತ್ತಿದ್ದರು. ಅದರಲ್ಲಿ ಯಾವ ಆಡಂಬರವೂ ಇಲ್ಲ. ಆದರೆ ಅವರು ಏನು ಮಾಡಿದರೂ ಅದರಲ್ಲಿ ತುಂಬು ಮನಸ್ಸಿಡುತ್ತಿದ್ದರು.

ಅವರಿಗೆ ಮುದ್ರಣಕಲೆಯ ಸೌಂದರ್ಯದಲ್ಲಿ ದೃಷ್ಟಿ ಹೆಚ್ಚು. ಇಂಗ್ಲೆಂಡಿನಿಂದ ಬರುವಾಗ ಅವರು ಡಿಕೆನ್ಸ್, ಥ್ಯಾಕರೆ ಮೊದಲಾದ ಪ್ರಸಿದ್ಧ ಲೇಖಕರ ಗ್ರಂಥಗಳ ಮುದ್ರಣದ ಅಕ್ಷರಸೌಂದರ್ಯ, ಅದಕ್ಕಿದ್ದ ಪುಟದ ಅಂಚುಗಳ ಸೊಗಸು, ಅಕ್ಷರಗಳ ಸಾಲು ಸಾಲಿಗೂ ನಡುವೆ ಬಿಟ್ಟಿದ್ದ ಬಿಡುವಿನ ಸೊಗಸು, ಬೈಂಡಿನ ಅಂದ–ಇದಕ್ಕೆಲ್ಲ ಅವರು ಮನಸೋತಿದ್ದರು. ಮತ್ತು ಗ್ರಂಥವ್ಯಾಸಂಗದಲ್ಲಿ ನೈಜವಾದ ಆಸಕ್ತಿಯುಳ್ಳವರು. ಅವರು ದಿನದಿನವೂ ರಾಮಾಯಣ ಭಾರತಗಳ ಜೊತೆಗೆ ಯಾವುದಾದರೊಂದು ಇಂಗ್ಲಿಷ್ ಸದ್ಗ್ರಂಥದ ಹತ್ತಿಪ್ಪತ್ತು ಪುಟಗಳನ್ನಾದರೂ ಓದುವರು.

ಈ ಸಂಗತಿಗಳು ಅವರಿಗೆ ಮುದ್ರಣಕಲೆಯ ವಿಷಯದಲ್ಲಿದ್ದ ಉತ್ಸಾಹವನ್ನು ಸೂಚಿಸುತ್ತವೆ.

ಕ್ರಮನಿಷ್ಕರ್ಷೆ

ಅವರು ಎಲ್ಲ ಕಾರ್ಯಗಳಲ್ಲಿಯೂ ಕ್ರಮನಿಷ್ಕರ್ಷೆಗಳನ್ನಿಟ್ಟುಕೊಂಡಿದ್ದವರು. ಅವರ ಆಡಳಿತದಲ್ಲಿ ಈ ಗುಣ ಎದ್ದು ಕಾಣುತ್ತಿತ್ತು. ಮಾತು ಕೊಂಚ–ಆದರೆ ನಿಷ್ಕರ್ಷೆಯಾದದ್ದು. ಯಾರೊಡನೆಯೂ ಚರ್ಚೆಯಿಲ್ಲ. ವಿಧಾಯಕವಾದಂತೆ ನಡೆಯಬೇಕಾದದ್ದು.

ಒಂದು ಘಟನೆ ಜ್ಞಾಪಕಕ್ಕೆ ಬರುತ್ತದೆ. ಶ್ರೀನಿವಾಸಯ್ಯಂಗಾರ್ಯರು ಮೈಸೂರು ಪಟ್ಟಣದಲ್ಲಿದ್ದ ಬ್ರ್ಯಾಂಚ್ ಪ್ರೆಸ್ಸಿನ ಅಧಿಕಾರದಲ್ಲಿದ್ದಾಗ ನಡೆದದ್ದು ಸಂಗತಿ.

ದಿವಾನರ ಭಾಷಣ

ಆ ಕಾಲದಲ್ಲಿ ಮೈಸೂರಿನಲ್ಲಿ ವರ್ಷವರ್ಷವೂ ನವರಾತ್ರಿಯ ಹಬ್ಬ ಮುಗಿದ ಮಾರನೆಯ ದಿನ-ಸಾಮಾನ್ಯವಾಗಿ ಏಕಾದಶಿಯ ದಿನ–ಪ್ರಜಾಪ್ರತಿನಿಧಿ ಸಭೆ ಸೇರುತ್ತಿತ್ತು. ವಿಶ್ವೇಶ್ವರಯ್ಯನವರು ದಿವಾನರಾದ ಮೇಲೆ ಒಂದು ಹೊಸ ಏರ್ಪಾಡಾಯಿತು. ದಿವಾನರು ಪ್ರಜಾಪ್ರತಿನಿಧಿ ಸಭೆಯಲ್ಲಿ ಕೊಡಬೇಕಾಗಿದ್ದ ಭಾಷಣವು ಸರಕಾರದ ಅಚ್ಚಿನ ಕಾರ್ಖಾನೆಯಲ್ಲಿ ಮುದ್ರಣವಾಗಬೇಕಾಗಿತ್ತು. ವಿಶ್ವೇಶ್ವರಯ್ಯನವರು ಈ ಭಾಷಣವನ್ನು ವಿಜಯದಶಮಿಯ ಮಧ್ಯಾಹ್ನದವರೆಗೂ ಮುಗಿಸುತ್ತಿರಲಿಲ್ಲ. ಭಾಷಣದ ಮುಕ್ಕಾಲು ಮುರವೀಸ ಪಾಲು ತಯಾರಾಗಿ ಮುದ್ರಾಕ್ಷರಗಳಲ್ಲಿ ಸಿದ್ಧವಾಗಿರುತ್ತಿತ್ತು. ಹತ್ತಿಪ್ಪತ್ತು ಪಂಕ್ತಿಗಳನ್ನು ಮಾತ್ರ ಉಳಿಸಿಕೊಂಡು ಅಚ್ಚಿನವರು ಅಷ್ಟು ಜಾಗವನ್ನು ಬಿಡುವಾಗಿ (Reserve) ಮೀಸಲಿನಲ್ಲಿಟ್ಟಿರುತ್ತಿದ್ದರು.

ಆ ಬಿಡುವುಜಾಗವನ್ನು ಭರ್ತಿ ಮಾಡುವುದು ವಿಜಯದಶಮಿಯ ಸಂಜೆ–ದಿವಾನರು ಆ ಜಾಗವನ್ನು ಭರ್ತಿಮಾಡಲು ಕಡೆಯ ಘಳಿಗೆಯವರೆಗೂ ಕಾದಿರುತ್ತಿದ್ದರು. ಇಂಡಿಯ ಸರಕಾರದಿಂದ ಮಂಜೂರಾಗಿ ಬರಬೇಕಾಗಿದ್ದ ಯಾವುದೋ ವಿಷಯ, ಶ್ರೀಮನ್ಮಹಾರಾಜರಿಂದ ಒಪ್ಪಿಕೆ ಪಡೆದು ಬರಬೇಕಾಗಿದ್ದ ಯಾವುದೋ ವಿಷಯ, ಅನಿರೀಕ್ಷಿತವಾಗಿ ಒದಗಬಹುದಾದ ಯಾವುದೋ ಮಹತ್ವದ ವಿಷಯ–ಇಂಥಾದ್ದನ್ನು ಕಡೆಯ ಘಳಿಗೆಯಲ್ಲಿ ದಿವಾನರು ಸೇರಿಸಿ ಅಚ್ಚಿಗೆ ಕಳುಹಿಸುವರು. ವಿಜಯದಶಮಿಯ ರಾತ್ರಿ ಆ ವಿಷಯವನ್ನು ಮುದ್ರಣಾಕ್ಷರದಲ್ಲಿ ಸಿದ್ಧಪಡಿಸಿ ಕೊಡಬೇಕಾದದ್ದು ಅಚ್ಚಿನವರ ಕರ್ತವ್ಯ. ಇದು ನಾಲ್ಕೈದು ವರ್ಷಗಳಿಂದ ರೂಢಿಯಲ್ಲಿತ್ತು.

ಒಂದು ಸಾರಿ–ಬಹುಶಃ ಬ್ಯಾನರ್ಜಿಯವರ ಕಾಲದಲ್ಲೋ ಏನೋ–ವಿಜಯದಶಮಿಯ ಸಂಜೆ ನಾನೂ ಇನ್ನಿಬ್ಬರು ಮಿತ್ರರು ವಾಯುಸೇವನೆಗೆಂದು ಶ್ರೀನಿವಾಸಯ್ಯಂಗಾರ್ಯರ ಮನೆಯ ಕಡೆ ಹೋದೆವು. ನಾನು ಶ್ರೀನಿವಾಸ ಅಯ್ಯಂಗಾರ್ಯರನ್ನು ನಮ್ಮ ಸಂಗಡ ಬರಲು ಕರೆದೆ. ಅವರು,

“ಅದು ಈಗ ಸಾಧ್ಯವಿಲ್ಲ. ನೀವೆಲ್ಲ ಹೋಗಿ ಬನ್ನಿ”

–ಎಂದರು. ನಾವು ಹೊರಟುಹೋದೆವು. ಸಂದರ್ಭವೇನೆಂಬುದು ಮೂರನೆಯ ದಿನ ನಮಗೆ ತಿಳಿದು ಬಂತು. ವಿಜಯದಶಮಿಯ ದಿನ ಸಂಜೆ ನಾಲ್ಕು ಘಂಟೆಗೆ ಕೆಲಸಗಾರರು ತಮ್ಮ ತಮ್ಮ ಅಂಗಿ ತೊಟ್ಟು ಹೊರಕ್ಕೆ ಹೊರಡಲು ಸಿದ್ಧರಾಗಿ ನಿಂತರು. ಶ್ರೀನಿವಾಸಯ್ಯಂಗಾರ್ಯರು,

"ಇದೇನಯ್ಯ–ಈ ಹೊತ್ತು ವಿಶೇಷ ಕೆಲಸದ ದಿನವಲ್ಲವೆ ಇಲ್ಲಿ?"

–ಎಂದು ಕೇಳಿದರು. ಕೆಲಸಗಾರರ ಮುಖಂಡ,

"ಈ ಹೊತ್ತು ಆಗೋಕಿಲ್ಲ ಸ್ವಾಮಿ. ನಾವು ಜಂಬೂಸವಾರಿ ನೋಡುವುದಕ್ಕೆ ಹೋಗಿರುತ್ತೇವೆ. ಅಲ್ಲಿಂದ ಮನೆಗೆ ಹೋಗಿ ನಾಳೆ ಬೆಳಗ್ಗೆ ಬೇಗ ಬರುತ್ತೇವೆ" ಎಂದ.

ಕಾರ್ಯನಿಷ್ಠೆ

ಶ್ರೀನಿವಾಸಯ್ಯಂಗಾರ್ಯರು ಒಂದು ಕ್ಷಣ ಯೋಚನೆ ಮಾಡಿ “ಸರಿ” ಎಂದರು. ಕೆಲಸಗಾರರು ಹೊರಟುಹೋದರು. ಶ್ರೀನಿವಾಸಯ್ಯಂಗಾರ್ಯರು ಹೆಬ್ಬಾಗಿಲು ಮುಚ್ಚಿಸಿ ತಾವೇ ಕೆಲಸದ ಅಂಗರೇಖೆಯನ್ನು (ಏಪ್ರನ್) ಧರಿಸಿ ತಮ್ಮ ಮನೆಯಲ್ಲಿದ್ದ ಒಬ್ಬ ಹುಡುಗನನ್ನೂ ಪ್ರೆಸ್ಸಿನ ಒಬ್ಬ ಆಳನ್ನೂ ಸಹಾಯಕ್ಕೆ ಕರೆದು ಕೆಲಸಕ್ಕೆ ನಿಂತರು. ನಾನು ಅವರನ್ನು ಗಾಳಿಯ ಸಂಚಾರಕ್ಕೆ ಕರೆದದ್ದು ಈ ಹೊತ್ತಿನಲ್ಲಿ. ದಿವಾನರ ಕಡೆಯಿಂದ ಬರಬೇಕಾದ ಒಂದೆರಡು ವಾಕ್ಯಖಂಡಗಳು ಬಂದಿದ್ದವು. ಶ್ರೀನಿವಾಸಯ್ಯಂಗಾರ್ಯರು ಟೈಪ್‌ಕೇಸಿನ ಮುಂದೆ ನಿಂತು ಹೊಸ ವಿಷಯವನ್ನು ತಾವೇ ಕಂಪೋಸ್ ಮಾಡಿದರು. ಪ್ರೂಫನ್ನು ತಾವೇ ತಿದ್ದಿ ಅಕ್ಷರದ ಮೊಳೆಗಳನ್ನು ತಕ್ಕಂತೆ ಜೋಡಿಸಿದರು; ಪೇಜು ಕಟ್ಟಿದರು; ಆ ಪೇಜುಗಳನ್ನು ಜೋಡಣೆಯ ಕಲ್ಲುಹಲಗೆಯ ಮೇಲಕ್ಕೆ ವರ್ಗಾಯಿಸಿ ಕಬ್ಬಿಣದ ಚೌಕಟ್ಟಿನಲ್ಲಿ (Chase) ಆ ಪುಟಗಳನ್ನು ಬಿಗಿಪಡಿಸಿ, ಮುದ್ರಣ ಯಂತ್ರದ ಫಲಕದ ಮೇಲಕ್ಕೆ ವರ್ಗಾಯಿಸಿದರು. ಅಲ್ಲಿಗೆ ಸುಮಾರು ರಾತ್ರಿ ಹನ್ನೆರಡು ಘಂಟೆಯಾಗಿತ್ತು. ಅನಂತರ ಮುದ್ರಣಯಂತ್ರದ ಬಳಿ ಹೋಗಿ ನಿಂತರು. ಯಂತ್ರ ನಡೆಯಲಾರಂಭಿಸಿತು. ಐದುನೂರು ಪ್ರತಿಗಳನ್ನು ತಾವೇ ಅಚ್ಚು ಮಾಡಿದರು.

ಈ ವೇಳೆಗೆ ಬೆಳಗಿನ ಜಾವ ನಾಲ್ಕು ಘಂಟೆ ಸುಮಾರು. ಆಮೇಲೆ ಆಗಬೇಕಾಗಿದ್ದ ಕೆಲಸ ಹಾಳೆಗಳನ್ನು ಮಡಿಸುವುದು, ಹೊಲಿಯುವುದು, ಬೈಂಡು ಕಾಗದ ಅಂಟಿಸಿ ಅಂಚುಗಳನ್ನು ಚೊಕ್ಕ ಮಾಡುವುದು. ಇದು ಬೈಂಡರುಗಳ ಕೆಲಸ. ಬೈಂಡರುಗಳು ಯಥಾಪ್ರಕಾರ ಎಂಟು ಘಂಟೆಗೆ ಬಂದರು. ಹನ್ನೊಂದು ಘಂಟೆಯ ವೇಳೆಗೆ ದಿವಾನರ ಭಾಷಣದ ಪ್ರತಿಗಳು ಎಲ್ಲಿ ಸೇರಬೇಕೋ ಅಲ್ಲಿಗೆ ಸೇರಿದ್ದವು.

ಉಪಕಾರಬುದ್ಧಿ

ಇದು ತೋರಿಸುತ್ತದೆ ನಮ್ಮ ಶೀನಪ್ಪನ ಸ್ವಭಾವವನ್ನು.

ಹೆಚ್ಚು ಹೇಳಲು ನನಗೆ ಮಾತುಬಾರದು. ನನ್ನ ಅಂತರಂಗ ಶೀನಪ್ಪನ ಒಳ್ಳೆಯತನದ ಸ್ಮರಣೆಯಿಂದ ತುಂಬಿದೆ.

೧೯೩೬ರಲ್ಲಿ ನನ್ನ ಕನ್ನಡ "ಮ್ಯಾಕ್‌ಬೆತ್" ಪುಸ್ತಕವನ್ನು ಗವರ್ನ್‌ಮೆಂಟ್ ಪ್ರೆಸ್ಸಿನಲ್ಲಿ ಅಚ್ಚು ಮಾಡಿಸಿದೆ. ಅದಕ್ಕಾಗಿ ಸರಕಾರದ ವಿಶೇಷ ಅನುಮತಿಯನ್ನು ಪಡೆದುಕೊಂಡೆ. ನಾನು ಸರಕಾರಿ ಕಾರ್ಖಾನೆಯ ಅಚ್ಚಿನಕ್ಷರವನ್ನು ಮೆಚ್ಚಿಕೊಂಡವನಲ್ಲ. ಹಾಗಿದ್ದರೂ ಸರಕಾರದ ಅಚ್ಚಿನ ಕಾರ್ಖಾನೆಗೆ ಹೋದದ್ದಕ್ಕೆ ಕಾರಣಗಳು ಎರಡು:

1. ಸಮಗ್ರ ಗ್ರಂಥವನ್ನು ಒಂದೇ ಸಾರಿ ಮೊಳೆ ಜೋಡಿಸಿ ಪ್ರೂಫ್ ಕೊಡಲು ಬೇಕಾಗುವಷ್ಟು ಹೆಚ್ಚಾಗಿ ಅಚ್ಚಿನ ಮೊಳೆ ಮತ್ತಾವ ಪ್ರೆಸ್ಸಿನಲ್ಲೂ ಆಗ್ಗೆ ಇರಲಿಲ್ಲ.
2. ಶ್ರೀನಿವಾಸಯ್ಯಂಗಾರ್ಯರ ಉಸ್ತುವಾರಿಯ ಪ್ರಯೋಜನದ ಆಸೆ. ಆ ಕೆಲಸವನ್ನು ಶ್ರೀನಿವಾಸಯ್ಯಂಗಾರ್ಯರು ಸಂತೋಷದಿಂದ ಅಂಗೀಕರಿಸಿ ಸಂತೋಷಕರವಾಗುವಂತೆ ನಿರ್ವಹಿಸಿದರು.

ಅಕ್ಷರಗಳ ರೂಪ

ಈ ಸಂದರ್ಭದಲ್ಲಿ ಸರಕಾರಿ ಪ್ರೆಸ್ಸಿನ ಕನ್ನಡ ಅಕ್ಷರಗಳ ಸ್ವರೂಪವನ್ನು ಉತ್ತಮ ಪಡಿಸಬೇಕೆಂದು ವಿನಯದಿಂದ ಸೂಚಿಸುತ್ತೇನೆ. ನನ್ನ "ಮ್ಯಾಕ್‌ಬೆತ್" ಪುಸ್ತಕದ ಮುದ್ರಿತ ಪ್ರತಿಯನ್ನು ನೋಡಿದ ಬಳಿಕ ಪ್ರಸಿದ್ಧ ಕನ್ನಡ ಸಾಹಿತಿಗಳಾದ ಪಂಜೆ ಮಂಗೇಶರಾಯರು ನನಗೆ ಕಾಗದ ಬರೆದು ಹೀಗೆಂದರು: "ನಿನ್ನ ಮುದ್ರಣಾಕ್ಷರಗಳನ್ನು ನಾನು ಓದಲಾರೆ. ನಿನ್ನ ಕೈಬರಹದ ಪ್ರತಿಯನ್ನು ಕೂಡಲೆ ನನಗೆ ಕಳುಹಿಸು."

ಅಕ್ಷರಗಳ ರೂಪವನ್ನು ಅಂದಗೊಳಿಸಬೇಕಾದದ್ದು ಮಾತ್ರವಲ್ಲದೆ ಬಗೆ ಬಗೆಯ ಅಲಂಕಾರದ ಅಕ್ಷರಗಳನ್ನೂ ಸರಕಾರ ಮಾಡಿಸಬೇಕು. ಸರಕಾರದ ಮುದ್ರಣವೆಂದ ಮಾತ್ರಕ್ಕೆ ಅದು ಒಡ್ಡೊಡ್ಡಾಗಿ ಅಡ್ಡಾದಿಡ್ಡಿಯಾಗಿರಬೇಕಾದದ್ದಿಲ್ಲ. ಈ ಮಾತು ಇಂಗ್ಲಿಷ್ ಮುದ್ರಣಕ್ಕೂ ಅನ್ವಯಿಸುತ್ತದೆ. ಬ್ರಿಟಿಷ್ ಸರಕಾರದವರು ಈಚೀಚೆಗೆ ಮಾಡುತ್ತಿರುವ ಪ್ರಕಟನೆಗಳಂತೂ ವಿಧವಿಧವಾದ ಬಣ್ಣಗಳಿಂದಲೂ ಅಕ್ಷರರೇಖೆಯ ಸೌಂದರ್ಯದಿಂದಲೂ ಕಣ್ಣಿಗೂ ಕೈಗೂ ಸೊಗಸೆನಿಸುತ್ತದೆ.

ವೆಂಕಟಸುಬ್ಬರಾಯರು

ಶ್ರೀನಿವಾಸಯ್ಯಂಗಾರ್ಯರ ಅನಂತರ ಸೂಪರಿಂಟೆಂಡೆಂಟ್ ಆದವರು ಬೆಳವಾಡಿ ವೆಂಕಟಸುಬ್ಬರಾಯರು. ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಇವರು ಮಹಾಮೇಧಾವಿ ಎನ್ನಿಸಿಕೊಂಡಿದ್ದವರು. ಇಂಗ್ಲಿಷ್ ಸಾಹಿತ್ಯದಲ್ಲಿ ಇವರಿಗೆ ಹೆಚ್ಚು ಅಭಿರುಚಿ. ಒಳ್ಳೆಯ ಇಂಗ್ಲಿಷ್ ಬರೆಯುವವರು. ನಡೆನುಡಿಗಳಲ್ಲಿ ವಿನಯಶೀಲರು, ಎಲ್ಲ ವಿಧಗಳಲ್ಲಿಯೂ ಸಭ್ಯರು.

ಇವರು ಶ್ರೀಮನ್ಮಹಾರಾಜರವರಿಗೂ, ಮಿರ್ಜಾ ಅವರಿಗೂ ಸಹಾಧ್ಯಾಯಿಯಾಗಿ ಸ್ನೇಹಿತರಾಗಿದ್ದರು. ಮಿರ್ಜಾ ಅವರು ದಿವಾನ್ ಪದವಿಗೆ ಹತ್ತಿದ ಒಂದೆರಡು ತಿಂಗಳೊಳಗಾಗಿ ತಮ್ಮ ಹಿಂದಿನ ಸ್ನೇಹಿತನನ್ನು ನೆನಸಿಕೊಂಡು ಆತ ಯಾವ ಇಲಾಖೆಯಲ್ಲಿ ಏನಾಗಿದ್ದನೆಂದು ವಿಚಾರ ಮಾಡಿದರು. ಆ ವಿಚಾರ ನಡಸಿದವರು ಅವರಿಬ್ಬರಿಗೂ ಸಹಾಧ್ಯಾಯಿಯಾಗಿದ್ದು ಆಗ ದಿವಾನರ ಪ್ರೈವೇಟ್ ಸೆಕ್ರೆಟರಿಯಗಿದ್ದ ಎಂ.ಎಸ್. ರಾಮಚಂದ್ರರಾಯರು. ವೆಂಕಟಸುಬ್ಬರಾಯರು ಆಗ ಸೆಕ್ರೆಟೇರಿಯಟ್ ಕಚೇರಿಯಲ್ಲೆಲ್ಲಿಯೋ ಒಂದು ಕಡೆ ಗುಮಾಸ್ತರಾಗಿದ್ದರೆಂದು ತಿಳಿಯಿತು. ಮಿರ್ಜಾ ಅವರು "ಆತ ಮಹಾಬುದ್ಧಿಶಾಲಿ, ವಿದ್ಯಾಸಂಪನ್ನನಾದವನು. ಪರಮ ಸಭ್ಯ; ಮಹಾರಾಜರ ಸಹಪಾಠಿಯಾಗಿದ್ದವನು. ಆತನನ್ನು ತಕ್ಕ ಜಾಗಕ್ಕೆ ತರಬೇಕು" –ಎಂದು ನಿಶ್ಚಯ ಮಾಡಿ, ವೆಂಕಟಸುಬ್ಬರಾಯರನ್ನು ಮುದ್ರಣ ಇಲಾಖೆಗೆ ವರ್ಗಾಯಿಸಿದರು. ವೆಂಕಟಸುಬ್ಬರಾಯರಿಗೆ ಈ ಕಸಬು ಕಷ್ಟವೆಂದೆನಿಸಲಿಲ್ಲ.

ವೆಂಕಟಸುಬ್ಬರಾಯರು ಸಂಭಾವಿತರು. ಅವರಿಗೆ ಕಾರ್ಯದ ಮೇಲೆ ದೃಷ್ಟಿ. ತಂಟೆ ತಕರಾರುಗಳಿಗೆ ಮನುಷ್ಯರಲ್ಲ. ಮರ್ಯಾದೆವಂತರು. ಅವರ ಆಡಳಿತ ಸುಸೂತ್ರವಾಗಿ ನಡೆಯುತ್ತಿತ್ತು.

ಅವರ ಕಾಲದಲ್ಲಿ ನನಗೆ ಸರಕಾರಿ ಪ್ರೆಸ್ಸಿನ ಸಂಪರ್ಕ ಹೆಚ್ಚು ಬೆಳೆಯಲು ಕಾರಣವೇನೂ ಇರಲಿಲ್ಲ. ಅಲ್ಲಿಂದೀಚಿನವರು ನನಗೆ ಹೊಸಬರು; ಅವರ ಕಾಲಕ್ಕೆ ನಾನು ಹೊರಚ್ಚಾದ ಮನುಷ್ಯ. ಆದರೆ ಒಂದು ಸಂತೋಷದ ಸಂಗತಿ. ಈಚೆಗೆ ಸೂಪರಿಂಟೆಂಡೆಂಟರಾದ ಶ್ರೀಮಾನ್ ಶ್ರೀರಾಮ್‌ರವರ ತೀರ್ಥರೂಪರನ್ನೂ ಅವರ ತೀರ್ಥರೂಪರನ್ನೂ ನಾನು ಬಲ್ಲವನು; ಚಾಮರಾಜಪೇಟೆಯಲ್ಲಿಯೂ ಶಂಕರಪುರದಲ್ಲಿಯೂ ಆ ಪೂಜ್ಯ

ಹಿರಿಯರೊಡನೆ ಬಳಕೆಯಿದ್ದವನು. ಅಂಥ ಉತ್ತಮಕುಲಪ್ರಸೂತರು ವಿದ್ಯೋನ್ನತರಾಗಿ ದೊಡ್ಡ ಪದವಿಗೆ ಬಂದಿರುವುದು ವೈಯುಕ್ತಿಕವಾಗಿ ನನಗೆ ಸಂತೋಷದ ವಿಷಯ.

೨೦

ನಾನು ವರಿಸಿದ ಸಂಗಾತಿ

ಕೆಲವು ವರ್ಷಗಳ ಹಿಂದೆ ಒಂದು ರಾತ್ರಿ ವಿಧಿರಾಯ ನನಗೆ ಹೇಳಿಕಳುಹಿಸಿದ.

ವಿಧಿರಾಯನ ಆಸ್ಥಾನ. ವಿಧಿ ಸಿಂಹಾಸನದ ಮೇಲೆ ಕುಳಿತಿದ್ದಾನೆ. ರೋಷಾವಿಷ್ಟನಾಗಿದ್ದಾನೆ. ಕಣ್ಣುಗುಡ್ಡೆ ಮುನ್ನುಗ್ಗಿ ಬರುವಂತಿದೆ. ಮುಖ ಕೆಂಪೇರಿದೆ. ತುಟಿ ಅದುರುತ್ತಿದೆ. ನನ್ನನ್ನು ನೋಡಿದ ಕೂಡಲೆ ದೊಡ್ಡ ಗಂಟಲು ಮಾಡಿಕೊಂಡು ಅಬ್ಬರಿಸಿದ.

ವಿಧಿ: "ಏನಯ್ಯ ಇದು ನಿನ್ನ ಪುಂಡಾಟ?"

ನಾನು: "ನಾನು ಸನ್ನಿಧಾನಕ್ಕೆ ವಿಧೇಯ."

ವಿಧಿ: "ಎಲ್ಲಿ ನಿನ್ನ ವಿಧೇಯತೆ? ಎಲ್ಲರನ್ನೂ ಅಪಹಾಸ್ಯ ಮಾಡುವುದರಲ್ಲೊ? ನಿನ್ನ ಅಪಕವಿತ್ವ ಇನ್ನು ಸಾಕು."

ನಾನು: "ಅಂಥದೇನೂ ಇಲ್ಲವಲ್ಲ?"

ವಿಧಿ: "ಇಲ್ಲವೆ? ಇದೇನು ಅಪಪ್ರಲಾಪ?

> ಸೊಗಸಾದ ಮೂಗಿಟ್ಟು
> ನೆಗಡಿಯದರೊಳಗಿಟ್ಟು।
> ಅಗಟವಿಗಟವ ಮಾಡಿದ ಬ್ರಹ್ಮನ
> ಜಿಗುಟು ಕುಂಡೆಯಲಿ ಮರ್ಮಜ್ಞ ॥

ಅಶ್ಲೀಲವಲ್ಲವೊ ಇದು?"

ನಾನು: "ಅಶ್ಲೀಲವೇನು ಸ್ವಾಮಿ? ಅಸತ್ಯವಲ್ಲ. ನನ್ನ ಅನುಭವದ ಮಾತು. ಇಂಥ ಸಂಗತಿಯನ್ನು ಎಷ್ಟೋ ಕಡೆ ನೋಡಿದ್ದೇನೆ."

ವಿಧಿ: “ಸರಿ, ಸರಿ. ನಿನಗೇನು ವಾವೆವರಸೆ ಇಲ್ಲ, ದೇವತೆಗಳನ್ನೂ ಬಿಡುವುದಿಲ್ಲ. ಇದೇನು ನಿನ್ನ ಕುಚೋದ್ಯ? (ನಗುತ್ತ–)

ಕೇಶ ಹೆಣ್ತಲೆಗೆ ಸಿರಿ
ಮೀಶೆ ಗಣ್ತುಟಿಗೆ ಸಿರಿ
ನಾಸ ತೊಡೆ ಕಂಕುಳಿಗೆ
ಲೇಸಾರ್ಗೆ ಬೊಚ್ಚು ಮರ್ಮಜ್ಞ ॥

ಇದೇನು ಅಪಸ್ಮಾರಮಯ್ಯ? ಇಂಥಾದ್ದನ್ನು ಸಭ್ಯರು ಬರೆದಾರೇನಯ್ಯ?

ಜಲಕೊಂದು ದಾರಿ ಸರಿ,
ಮಲಕೊಂದು ದಾರಿ ಸರಿ
ಕುಲವೃದ್ಧಿಯಮೃತ ಪ್ರವಾಹಕ್ಕೆ ಆ
ಕೊಳೆದಾರಿ ಸರಿಯೆ ಮರ್ಮಜ್ಞ ॥

ಥೂ, ಥೂ! ಇಂಥ ಕಶ್ಮಲ ಕವಿಯನ್ನು ಲೋಕದಿಂದ ಹೊರಕ್ಕೆ ತಳ್ಳಬೇಕು. ನೀನು ಇಲ್ಲಿದ್ದರೆ ಲೋಕವನ್ನೇ ಕೊಳಕು ಕೊಚ್ಚೆ ಮಾಡೀಯೆ!”

ನಾನು: “ಅಷ್ಟು ಅಗ್ರಹ ಮಾಡಬಾರದು ಪ್ರಭೋ. ಸೃಷ್ಟಿಯಲ್ಲಿರುವ ನ್ಯೂನತೆಗಳನ್ನು ಸೂಚಿಸಿದೆ. ಅದು ನನ್ನ ಅನುಭವಕ್ಕೆ ಬಂದದ್ದು, ಅದನ್ನು ದೇವರು ತಿದ್ದಬೇಕು. ಈ ದೀನನಲ್ಲಿ ಆಗ್ರಹ ತೋರಬಾರದು. ಕ್ಷಮೆ ನೀಡಬೇಕು.”

ವಿಧಿ: “ನಿನಗೆಂಥ ಕ್ಷಮೆ? ನೀನು ನಮ್ಮ ಲೋಕವ್ಯವಸ್ಥೆಯನ್ನು ಪರಿಹಾಸಮಾಡಿ ಜನಕ್ಕೆ ದೇವತೆಗಳಲ್ಲಿರುವ ಗೌರವವನ್ನು ಕಳೆಯುತ್ತಿದ್ದಿ. ಇದಕ್ಕಾಗಿ ದಂಡನೆ ವಿಧಿಸಿದ್ದಾಗಿದೆ. ನೀನು ಈ ಭೂಲೋಕದಿಂದ ದೂರವಾಗಿ ಒಂದು ನಿರ್ಜನ ದ್ವೀಪದಲ್ಲಿರಬೇಕಾದದ್ದು. ನಿನ್ನನ್ನು ಸಾಗಿಸಲು ಆಜ್ಞೆ ಕೊಟ್ಟದ್ದಾಗಿದೆ.”

ನಾನು (ಭೀತನಾಗಿ) “ಅಯ್ಯೋ ದೇವರೇ! ನನ್ನಲ್ಲಿ ಕನಿಕರವಿಲ್ಲವೆ? ನನ್ನನ್ನು ಕ್ಷಮಿಸಿ ಕಾಪಾಡಬೇಕು.”

ವಿಧಿ: “ಅದೆಲ್ಲ ಆಗದು.”

ನಾನು: “ಮೊರೆಯಿಟ್ಟು ಬೇಡಿಕೊಳ್ಳುತ್ತೇನೆ.”

ವಿಧಿ: “...ಬಳ್ಳೆಯದು. ಒಂದು ರಿಯಾಯಿತಿ ತೋರಿಸಿಯೇನು. ನಿನ್ನ ಜೊತೆಗೆ ಇನ್ನೊಬ್ಬನು– ಒಬ್ಬನೇ ಒಬ್ಬನನ್ನು ಕರೆದುಕೊಂಡು ಹೋಗಬಹುದು. ಆದರೆ ಆ ಇನ್ನೊಬ್ಬನು ನಾನು ಒಪ್ಪಿದವನಾಗಬೇಕು.”

ನಾನು: “ಅಪ್ಪಣೆಯಾದರೆ ನನಗೆ ಸಂಗಡಿಗನಾಗಿರಲು ಡಿ.ವಿ. ಅಯ್ಯನನ್ನು ಕರೆದುಕೊಂಡು ಹೋದೇನು.”

ವಿಧಿ: “ಆ ದಂತವಕ್ರನನ್ನೆ? ಅವನೂ ನಿನ್ನ ಹಾಗೆಯೇ ಹಾಸ್ಯಗಾರ. ಇಬ್ಬರೂ ಸೇರಿ ದೇವಲೋಕವನ್ನೆಲ್ಲ ನಗುಪಾಡು ಮಾಡುತ್ತೀರಿ.”

ನಾನು: “ಆತ ತುಂಬ ಒಳ್ಳೆಯ ಮನುಷ್ಯ.”

ವಿಧಿ: “ಅದೆಲ್ಲ ಸರಿಯಯ್ಯ. ಆ ಕುಚೋದ್ಯಕ್ಕೇನು ಮಾಡುತ್ತಿ?”

ನಾನು: “ಕನಿಕರಿಸಬೇಕು.”

ವಿಧಿ: “ನಿನ್ನ ಹಣೆಯ ಬರಹ, ಅನುಭವಿಸು, ನೀವಿಬ್ಬರೂ ಕುಹಕ ಕುಚೋದ್ಯ ಮಾಡಿಕೊಂಡು ಎಲ್ಲಾದರೂ ಇರಿ-ಒಬ್ಬರನ್ನೊಬ್ಬರು ಕೊಂದು ಹಾಕಿ, ಬೇಕಾದರೆ.”

ಡಿ.ವಿ. ಅಯ್ಯ

ಈ ಅನುಭವದ ಮೇಲೆ ಡಿ.ವಿ. ಅಯ್ಯನನ್ನು ಕುರಿತು ಒಂದು ಮಾತನ್ನು ಹೇಳತಕ್ಕದ್ದೆಂದು ನನಗನ್ನಿಸಿತು.

ಡಿ.ವಿ. ಎಂಬುವರ ಪೂರ್ತಿ ಹೆಸರು ಡಿ. ವಿಶ್ವನಾಥಯ್ಯ ಎಂದು. ಇವರು ಬೆಂಗಳೂರಿನ ಪ್ರಸಿದ್ಧ ವಕೀಲರೂ ಸಾರ್ವಜನಿಕ ಪುರುಷರೂ ಆಗಿದ್ದ ಮಲ್ಲೇಶ್ವರದ ಡಿ.ವೆಂಕಟರಾಮಯ್ಯನವರ ತಮ್ಮಂದಿರು.

ವಿಶ್ವನಾಥಯ್ಯನವರು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸಯನ್ಸ್ ಸಂಸ್ಥೆಯಲ್ಲೂ ಆಮೇಲೆ ವಿಲಾಯತಿಯಲ್ಲಿಯೂ ವಿದ್ಯುದ್ವಿಜ್ಞಾನ ವ್ಯಾಸಂಗ ಮಾಡಿ ಮೈಸೂರು

ಎಲೆಕ್ಟ್ರಿಕ್ ಇಲಾಖೆಯಲ್ಲಿ ಪದವಿಗೆ ಹತ್ತಿದ್ದರು. ಅವರು ವಯಸ್ಸಿನಲ್ಲಿ ನನಗಿಂತ ಕೊಂಚ ಹಿರಿಯರು. ಆದರೂ ನಾವಿಬ್ಬರು ಸಲುಗೆಯಿಂದ ಮಾತನಾಡುತ್ತಿದ್ದೆವು. ಆತ ನಮ್ಮ "ಅನಾಮಧೇಯ ಗೋಷ್ಠಿ" ಯ ಸದಸ್ಯರಲ್ಲೊಬ್ಬರು. ಹೀಗಾಗಿ ನಮಗಿಬ್ಬರಿಗೂ ಬಳಕೆ. ಆತ ನನ್ನನ್ನು ಆಗಾಗ ಕೇಳುವರು:

ವಿ: "ಏನಯ್ಯಾ, ನೀನು ದ್ರಾವಿಡ; ಅರವದವನು. ನಾನು ಹೊಯ್ಸಳ ಕರ್ನಾಟಕ; ಕನ್ನಡದವನು. ಆದರೆ ನಾವಿಬ್ಬರೂ ಸೇರಿದಾಗ ನಮ್ಮ ಮಾತೆಲ್ಲ ತೆಲುಗಿನಲ್ಲಿ!"

ನಾನು: "ಹೌದು ಹೌದು, ಇದು ವಿಚಿತ್ರ, ನಾನು ತಿದ್ದಿಕೊಳ್ಳಬೇಕು."

ಈ ಸಂಭಾಷಣೆಯೂ ತೆಲುಗಿನಲ್ಲಿಯೇ.

ಆತನಿಗೆ ಕೃತ್ರಿಮ ಕಪಟ ಏನೂ ಗೊತ್ತಿಲ್ಲ. ಮನಸ್ಸಿನಲ್ಲಿದ್ದಂತೆ ಮಾತನಾಡುವನು. ಇದೇ ಆತನ ತಲೆ ತಿಂದದ್ದು.

ಕೊಂಕು

ಎಲೆಕ್ಟ್ರಿಕಲ್ ಇಲಾಖೆಯ ಮುಖ್ಯಾಧಿಕಾರಿ ಫೋರ್ಬ್ಸ್ ಸಾಹೇಬರು ಒಂದು ಸಾರಿ ರಜಾ ಪಡೆದು ಅಮೇರಿಕಕ್ಕೆ ಹೋಗಿದ್ದರು. ಆಗ ಆತ ತನ್ನ ಕಾರನ್ನು ಬೆಂಗಳೂರಿನಲ್ಲಿಯೆ ಬಿಟ್ಟಿದ್ದರು, ಒಬ್ಬ ಸ್ನೇಹಿತರ ವಶದಲ್ಲಿ. ಆರೆಂಟು ತಿಂಗಳು ಕಳೆದ ಬಳಿಕ ಫೋರ್ಬ್ಸ್ ಸಾಹೇಬರು ಬೆಂಗಳೂರಿಗೆ ವಾಪಸ್ ಬರುವ ಕಾಲದಲ್ಲಿ ತಮ್ಮ ಇಲ್ಲಿಯ ಸ್ನೇಹಿತನಿಗೆ ಮುಂಚಿತವಾಗಿ ವರ್ತಮಾನ ಕೊಟ್ಟಿದ್ದರು. ತಮ್ಮ ಹಳೆಯ ಕಾರನ್ನು ಕೊಂಡುಕೊಳ್ಳಲು ಗಿರಾಕಿಯನ್ನು ಹುಡಕಬೇಕೆಂದು ಸೂಚನೆ ಮಾಡಿದ್ದರು. ಆ ಸ್ನೇಹಿತರು ನಮ್ಮ ಅಯ್ಯನ ಜೊತೆಯಲ್ಲಿ ಅದನ್ನು ಪ್ರಸ್ತಾಪಿಸಿದರು.

ಅಯ್ಯ: “ಅವರ ಕಾರು ಒಳ್ಳೆಯದು. ಅದನ್ನು ಯಾಕೆ ಮಾರುತ್ತಾರೆ?”

ಸ್ನೇ: “ಇನ್ನೂ ಒಳ್ಳೆಯ ಕಾರನ್ನು ಅಲ್ಲಿಂದ ತರುತ್ತಾರೆ?”

ಅಯ್ಯ: “ಯಾಕಪ್ಪ ಹಾಗೆ ಹಣ ದುಂದು ಮಾಡುತ್ತಾರೆ? ಅವರು ದುಂದು ಮಾಡುವವರಲ್ಲವಲ್ಲ.”

ಸ್ನೇ: “ಈ ಕಾರಿಗೆ ಹಣ ಕೊಟ್ಟಿದ್ದಾರೊ ಇಲ್ಲವೊ!”

ಅಯ್ಯ: “ಅದು ಹೇಗೋ! ಕಮಿಷನ್ ಲೆಕ್ಕ ಇರುತ್ತದೆ. ನಮ್ಮ ಇಲಾಖೆಯ ಸಾಮಾನುಗಳೆಲ್ಲ ಅಮೇರಿಕದಿಂದ ತಾನೆ ಬರುತ್ತದೆ?...”

ಈ ಸಂಭಾಷಣೆಯ ಸಾರಾಂಶ ಫೋರ್ಬ್ಸಿಗೆ ತಿಳಿಯಿತು. ಹೇಳಿದವರು ಕಥೆಗೆ ಇನ್ನಷ್ಟು ಬಣ್ಣ ಕಟ್ಟಿರಬಹುದು. ಇದರ ಫಲಿತಾಂಶ ಅಯ್ಯನಿಗೆ ಸ್ಥಾನಾಂತರವಾದದ್ದು. ಆಮೇಲೆ ರಾಜೀನಾಮೆ.

ಈ ಅಧಿಕಾರದ ಬದಲಾವಣೆಯಿಂದ ಅಯ್ಯನಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲ. ಸೊಟ್ಟ ಹಲ್ಲನ್ನು ಇನ್ನಷ್ಟು ಸೊಟ್ಟ ಮಾಡುವುದು, ಹಾಸ್ಯ ಮಾಡುವುದು, ಅಣಕಿಸುವುದು–ಎಲ್ಲ ನಡೆಯುತ್ತಿತ್ತು. ಒಂದಾನೊಂದು ಕಂಪನಿಯವರು ಅಯ್ಯನನ್ನು ಕೆಲಸಕ್ಕೆ ನೇಮಿಸಿಕೊಂಡು, ಸರಕಾರ ಕೊಡುತ್ತಿದ್ದ ಸಂಬಳವನ್ನು ಅವರೇ ಕೊಡುತ್ತಿದ್ದರು.

ನಮ್ಮ ಅಯ್ಯ ಪರಮ ಪ್ರಾಮಾಣಿಕ, ಅತ್ಯಂತ ದಯಾಳು. ನನ್ನ ಪ್ರಾಣಕ್ಕೆ ಅಪಾಯ ಒದಗಿದಾಗ ಆ ಅಪಾಯವನ್ನು ತಾನು ತೆಗೆದುಕೊಂಡು ನನ್ನನ್ನು ಉಳಿಸುತ್ತಿದ್ದ ಸ್ನೇಹಿತ. ಎಲ್ಲರ ವಿಷಯದಲ್ಲೂ ಹಾಗೆಯೇ. ತುಂಬ ಎಳೆ ಮನಸ್ಸು. ಆತನ ಸಹಾಯಸಿದ್ಧತೆಗೆ ಮಿತಿಯೇ ಇರಲಿಲ್ಲ.

ಒಂದು ಸಿದ್ಧಾಂತ

ಆತನ ನೂರಾರು ನವನವೀನ ಸಿದ್ಧಾಂತಗಳಲ್ಲಿ ಒಂದನ್ನು ಹೇಳುತ್ತೇನೆ.

ಅಯ್ಯ, ಸೂರ್ಯಮಂಡಲ ಗುಂಡಗೆ ಗೋಳಾಕಾರವಾಗಿದೆಯೆಂದು ನಿಮಗೆ ಸ್ಕೂಲು ಕಾಲೇಜುಗಳಲ್ಲಿ ಪಾಠ ಹೇಳುತ್ತಾರೆ. ಅದು ಶುದ್ಧ ಬೆಪ್ಪುತನ. ನೀವೆಲ್ಲ ಅವನ್ನು ನಂಬಿಕೊಂಡಿದ್ದೀರಿ. ಸೂರ್ಯಗ್ರಹ ಇರುವುದು ತ್ರಿಕೋಣಾಕಾರವಾಗಿ ಪಕೋಡದ ಪೊಟ್ಟಣದಂತೆ. ಆ ಪೊಟ್ಟಣದ ಮುಖ ಹೇಗಿರುತ್ತದೆ? ಗುಂಡಗಿರುತ್ತದೆ. ಆದರೆ ಅದರ ಮೈ ಮುಮ್ಮೂಲೆಯಾಗಿರುವುದಿಲ್ಲವೆ? ಆಕಾಶದಿಂದ ಈ ಪಕೋಡದ ಪೊಟ್ಟಣವನ್ನು ಭೂಮಿಯ ಕಡೆಗೆ ನೇತುಹಾಕಿದ್ದಾರೆ. ಘಂಟೆಯೊಳಗಿನ ನಾಲಗೆಯಂತೆ ಈ ಸೂರ್ಯನೆಂಬ ಪಕೋಡದ ಪೊಟ್ಟಣ ಓಲಾಡುತ್ತಿದೆ. ಮುಮ್ಮೂಲೆಯ ಮೇಲ್ಭಾಗ ಆಕಾಶದ ಮೇಲಣ ಕೊಂಡಿಗೆ ತಗುಲಿಹಾಕಿದೆ. ಅದರ ಕೆಳಭಾಗವನ್ನು ಮಾತ್ರ ನಾವು ನೋಡುತ್ತೇವೆ.

೩೧

ಕೃಷ್ಣಯ್ಯರ್ ಅವರ ಸಹಾಯಬುದ್ಧಿ

ಕೆ. ಎಸ್. ಕೃಷ್ಣಯ್ಯರ್ ಅವರು ಬಹುವರ್ಷ ಬೆಂಗಳೂರಿನ ಸಾರ್ವಜನಿಕರಲ್ಲಿ ಪ್ರಮುಖರಾಗಿದ್ದರು. ನನ್ನ ಜೀವನದಲ್ಲಿ ಅವರ ಸಂಬಂಧ ಹೆಚ್ಚಾಗಿತ್ತು. ಅವರಿಗೆ ನನ್ನ ಅಂತರಂಗದ ಕೃತಜ್ಞತೆಯನ್ನು ಸಲ್ಲಿಸುವುದು ನನಗೆ ಇಷ್ಟವಾದ ಕರ್ತವ್ಯ.

ಕೃಷ್ಣಯ್ಯರ್ ಅವರದು ಬೆಂಗಳೂರಿನಲ್ಲಿ ಹೆಸರುವಾಸಿಯಾದ ಮನೆತನ. ಅವರ ತಾತಂದಿರು ಅರವಮುನಶಿ ಕೃಷ್ಣಯ್ಯರ್ ಎಂಬುವರು. ಈ ಅರವಮುನಶಿಯವರು ಬ್ರಿಟಿಷ್ ಕಮಿಷನರುಗಳ ಕಾಲದಲ್ಲಿ ಅವರ ಸಮ್ಮುಖದಲ್ಲಿ ದ್ವಿಭಾಷಿಯಾಗಿದ್ದವರು: ಎಂದರೆ ಇಂಗ್ಲಿಷ್, ತಮಿಳು-ಎರಡರಲ್ಲಿಯೂ ಸಮರ್ಥರಾಗಿದ್ದವರು; ಕಮಿಷನರುಗಳಿಗೆ Interpreter ಆಗಿದ್ದವರು. ಅವರ ಮನೆ ಚಿಕ್ಕಪೇಟೆಯ ದಕ್ಷಿಣಪಾರ್ಶ್ವದ ಶ್ರೇಣಿಯಲ್ಲಿ ಬೇತಿಂಗ್ ಘಾಟ್ ಗಲ್ಲಿಯ ಮೂಲೆಯಿಂದ ಮೂರು-ನಾಲ್ಕು ಮನೆಗಳಾಚೆ ಪೂರ್ವಕ್ಕೆ. ಮನೆಯ ಒಳಗೆ ವಿಶಾಲವಾಗಿ ಸೊಗಸಾಗಿ ಕಟ್ಟಿದ ಕಟ್ಟಡ. ಒಳ್ಳೆಯ ಅಂಗಳ. ಕಂಬಗಳೂ ಬೋದಿಗೆಗಳೂ ಬಾಗಿಲುವಾಡಗಳೂ ಕಮಾನು ಕಂಗೋರುಗಳೂ ಆ ಕಾಲದ ಕೆಲಸಗಾರಿಕೆಯನ್ನು ಪ್ರಕಾಶಪಡಿಸುತ್ತವೆ. ಮಹಡಿಯ ಮೇಲೂ ಕೆಳಗಡೆಯೂ ನಾಲ್ಕಾರು ಕೊಠಡಿಗಳಿದ್ದವು. ಚಿಕ್ಕಪೇಟೆಯಿಂದ ಅದರ ಹಿಂದಿನ ಬೀದಿಯವರೆಗೂ ಮನೆ ಅಖಂಡವಾಗಿತ್ತು.

ಅರವಮುನಶಿಯವರಿಗೆ ಮೂವರು ಗಂಡುಮಕ್ಕಳು. ಅವರಲ್ಲಿ ಎರಡನೆಯವರು ಸುಬ್ರಹ್ಮಣ್ಯಯ್ಯರ್ ಎಂಬವರು. ಅವರ ದತ್ತುಪುತ್ರರು ಕೃಷ್ಣಯ್ಯರ್. ಕೃಷ್ಣಯ್ಯರ್ ಅವರ ಜನಕಪಿತೃ ಬಾಗೇಪಲ್ಲಿ ಅಮಲ್ದಾರರಾಗಿದ್ದ ನಾಗೇಶ್ವರ ಅಯ್ಯರ್ ಅವರು. ನಾಗೇಶ್ವರಯ್ಯರ್ ಅವರು ತುಮಕೂರು ಮೊದಲಾದ ಸ್ಥಳಗಳಲ್ಲಿಯೂ ಅಧಿಕಾರದಲ್ಲಿದ್ದವರು. ಅವರು ಬಹುಶಃ ಪೋಲೀಸ್ ಸೂಪರಿಂಟೆಂಡೆಂಟ್‌ರಾಗಿಯೂ ಇದ್ದರೆಂದು ತೋರುತ್ತದೆ.

ಈ ಕುಟುಂಬದ ಮೂಲಸ್ಥಾನ ಕಂಬೈನಲ್ಲೂರು. ಅದು ಸೇಲಂ ಜಿಲ್ಲೆಯ ಒಂದು ಹಳ್ಳಿ.

ಶ್ರೀಮಂತಿಕೆ

ಕೆ. ಎಸ್. ಕೃಷ್ಣಯ್ಯರ್ ಅವರು ಆ ಕಾಲದ ಗಣನೆಯಲ್ಲಿ ಶ್ರೀಮಂತರಾಗಿ ಹುಟ್ಟಿದವರು. ಅವರಿಗೆ ಭೂಸ್ವತ್ತು, ಚಿನ್ನ ಬೆಳ್ಳಿ, ನಗದು, ಕೆಲವು ಭಾರಿ ಕಂಪನಿಗಳಲ್ಲಿ ಷೇರುಗಳು–ಎಲ್ಲ ಪಿತ್ರಾರ್ಜಿತವಾಗಿ ಬಂದಿದ್ದವು.

ಕೃಷ್ಣಯ್ಯರ್ ಸ್ನೇಹತತ್ಪರರು. ಚಿಕ್ಕಂದಿನಿಂದ ಅನ್ಯಜನರಲ್ಲಿ ಪ್ರೀತಿವಿಶ್ವಾಸಗಳನ್ನು ತೋರಿಸಿ ಸಂಪಾದಿಸಿಕೊಂಡಿದ್ದವರು. ಅವರ ಸ್ವಭಾವವೇ ಸಾತ್ತ್ವಿಕವಾದದ್ದು. ಅವರು ತಮ್ಮ ತಾಯಿಯನ್ನು ಪದೇ ಪದೇ ಸ್ಮರಿಸಿಕೊಳ್ಳುತ್ತಿದ್ದರು. ಸೌಜನ್ಯ, ಪರಿಶುದ್ಧಿ–ಈ ಎರಡು ಗುಣಗಳೂ ತಮ್ಮ ತಾಯಿ ಪಾರ್ವತಮ್ಮನವರ ವರಪ್ರಸಾದವೆಂದು ಅವರು ಭಾವಿಸಿದ್ದರು. ನಾನು ಕೃಷ್ಣಯ್ಯರ್ ಅವರನ್ನು ಮೊದಲು ಕಾಣುವ ವೇಳೆಗೆ ಅವರು ಬಿ.ಎ. ಪ್ಯಾಸು ಮಾಡಿ ಜವಳಿ ವ್ಯಾಪಾರದಲ್ಲಿ ಪ್ರತಿಷ್ಠಿತರಾಗಿದ್ದರು. ನಾನಾದರೋ ಹಳ್ಳಿ ಮುಕ್ಕ: ಯಾವ ಕಾಲೇಜು ಮುಖವನ್ನೂ ಕಾಣದವನು. ಮತ್ತು ಜೀವನೋಪಾಯಕ್ಕಾಗಿ ಪರದಾಡುತ್ತಿದ್ದವನು. ನನಗೆ ಕೃಷ್ಣಯ್ಯರ್ ಅವರನ್ನು ಕಂಡರೆ ಆಶ್ಚರ್ಯ, ಸಂತೋಷ, ಮೆಚ್ಚಿಕೆ. “ಇವರು ವಿದ್ಯಾಪ್ರವೀಣರಾಗಿ ಐಶ್ವರ್ಯವಂತರಾಗಿ ಪ್ರಭಾವಶಾಲಿಯಾದ ಕುಟುಂಬಕ್ಕೆ ಸೇರಿದವರಾಗಿ ಸರಕಾರಿ ಉದ್ಯೋಗಕ್ಕೆ ಸೇರಲಿಲ್ಲವಲ್ಲ? ಸ್ವತಂತ್ರರಾಗಿ ನಿಂತಿದ್ದಾರಲ್ಲ?” ಇದು ನನಗೆ ಆಶ್ಚರ್ಯ.

ಕೃಷ್ಣಯ್ಯರಿಗೆ ಸ್ಪೋರ್ಟ್ಸ್– Sports –ಯುವಕರ ಆಟಪಾಟಗಳಲ್ಲಿ ಹೆಚ್ಚು ಉತ್ಸಾಹ. ಅದರಲ್ಲಿಯೂ ಈಜುವುದರಲ್ಲಿ ಅತಿಶಯವಾದ ಉತ್ಸಾಹ. ಹತ್ತಾರು ಮಂದಿ ಯುವಕರನ್ನು ಪ್ರೋತ್ಸಾಹಪಡಿಸಿ ಅವರಿಗೆ ಈಜುವುದನ್ನು ಕಲಿಸಿಕೊಟ್ಟರು. ಬೊಂಬಾಯಿಗೆ ನಾವು ಹೋಗಿದ್ದಾಗ ಜುಹು ಸಮುದ್ರತೀರದಲ್ಲಿ ಅವರೂ ಬಹುಶಃ ನಾಗೇಶ್ವರಯ್ಯರವರೂ ಈಜಿದ್ದು ನನಗೆ ಜ್ಞಾಪಕದಲ್ಲಿದೆ.

ನನಗೆ ಅವರ ಪರಿಚಯವಾದದ್ದು ಬಹುಶಃ ೧೯೦೯-೧೦ರಲ್ಲಿರಬಹುದು. ಆಗ ಕೃಷ್ಣಯ್ಯರ್ ಅವರು ಚಿಕ್ಕಪೇಟೆಯಲ್ಲಿ ತಮ್ಮ ಮನೆಯಲ್ಲಿಯೇ ಜವಳಿ ಅಂಗಡಿ ನಡಸುತ್ತಿದ್ದರಲ್ಲದೆ ಐರಿಷ್ ಪ್ರೆಸ್ ಎಂಬ ಮುದ್ರಣಸಂಸ್ಥೆಗೂ ಕೊಂಚ ಬಂಡವಾಳವನ್ನು ಸಾಲವಾಗಿ ಕೊಟ್ಟಿದ್ದರೆಂದು ನನ್ನ ಜ್ಞಾಪಕ. ಜವಳಿ ಅಂಗಡಿಯ ಸಂಬಂಧದಲ್ಲಿಯೂ ಐರಿಷ್ ಪ್ರೆಸ್ಸಿನ ಸಂಬಂಧದಲ್ಲಿಯೂ ಸೇರಿದ್ದ ಮೂವರು ನಾಲ್ವರು ಮಹನೀಯರಲ್ಲಿ ಸಿ. ಕೃಷ್ಣಮಾಚಾರ್ಯರೆಂಬವರೊಬ್ಬರು.

ಕೃಷ್ಣಮಾಚಾರ್ಯರು

ಕೃಷ್ಣಮಾಚಾರ್ಯರು ತುಂಬ ವಿಚಕ್ಷಣರು, ಜಾಣರು, ಯೋಜಕರು. ಈ ಕೃಷ್ಣಮಾಚಾರ್ಯರ ಮಕ್ಕಳೇ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರೊಫೆಸರಾಗಿದ್ದ ಸಿ.ಕೆ. ಸುಂದರಾಚಾರ್ಯರು.

ಆಗ್ಗೆ ಕೆಲವು ತಿಂಗಳ ಹಿಂದೆ ಕೃಷ್ಣಮಾಚಾರ್ಯರು ತಮ್ಮ ಮಗ ಸುಂದರಾಚಾರ್ಯನಿಗೂ ಮತ್ತು ಆತನ ತಮ್ಮ ಇನ್ನೂ ಚಿಕ್ಕ ಹುಡುಗನಿಗೂ ಇಂಗ್ಲಿಷ್ ಪಾಠ ಹೇಳುವುದಕ್ಕಾಗಿ ನನ್ನನ್ನು ಪ್ರೈವೇಟ್ ಟ್ಯೂಟರ್ ಆಗಿ ನಿಯಮಿಸಿಕೊಂಡಿದ್ದರು. ಕಾಲಕ್ರಮದಲ್ಲಿ ಅವರಿಗೂ ನನಗೂ ಇದ್ದ ಪರಿಚಯ ಬೆಳೆಯಿತು. ನನ್ನ ತಲೆಹರಟೆ ಆಗಲೇ ಉಪಕ್ರಮವಾಗಿತ್ತು. ನಾನು ಕೆಲವು ಸಂಸ್ಕೃತ ಶ್ಲೋಕಗಳನ್ನು ಇಂಗ್ಲಿಷಿಗೆ ಪದ್ಯರೂಪದಲ್ಲಿ ತರ್ಜುಮೆ ಮಾಡಿ ಐರಿಷ್ ಪ್ರೆಸ್ಸಿನಲ್ಲಿ ನೂರು ಪ್ರತಿ ಅಚ್ಚು ಮಾಡಿಸಿದ್ದೆ. ಕೃಷ್ಣಮಾಚಾರ್ಯರಿಗೆ ಇದರಿಂದ ಬಲು ಹಿಗ್ಗು.

ಕೃಷ್ಣಮಾಚಾರ್ಯರಿಗೂ ಕೃಷ್ಣಯ್ಯರ್ ಅವರಿಗೂ ನನಗೂ ಸಮಾನವಾದ ಸಂಧಿಕ್ಷೇತ್ರ ಕೆ.ಟಿ. ಅಪ್ಪಣ್ಣನವರ ಹಿಂದೂ ಕಾಫಿ ಕ್ಲಬ್. ಯಾವುದೋ ನಿಮಿತ್ತದಿಂದ ಅಪ್ಪಣ್ಣನವರು ಒಂದು ಸಾಯಂಕಾಲ ಭೋಜನಕೂಟವನ್ನು ಏರ್ಪಡಿಸಿದ್ದರು. ಅಲ್ಲಿ ತಾಂಬೂಲ ವಿನಿಯೋಗದ ಕಾಲದಲ್ಲಿ ಕೃಷ್ಣಮಾಚಾರ್ಯರು ನನ್ನ ಬರಹದ ಒಂದು ಪ್ರತಿಯನ್ನು ಕೃಷ್ಣಯ್ಯರ ಕೈಗೆ ಕೊಟ್ಟರು. ಕೃಷ್ಣಯ್ಯರ್ ಅವರು ಅದನ್ನು ತಮ್ಮ ಅಣ್ಣಂದಿರಾದ ಕೃಷ್ಣಸ್ವಾಮಿ ಅಯ್ಯರಿಗೂ ನಾರಾಯಣಯ್ಯರ್ ಮೊದಲಾದ ಸ್ನೇಹಿತರಿಗೂ ತೋರಿಸಿ ಸಂಭ್ರಮಪಟ್ಟರು. ಹೀಗೆ ಪ್ರಾರಂಭವಾದದ್ದು ಕೃಷ್ಣಯ್ಯರವರಿಗೂ ನನಗೂ ಸ್ನೇಹ.

ಆ ವೇಳೆಗೆ ನನಗೆ ಎ.ಆರ್. ನಾಗೇಶ್ವರಯ್ಯರ್ ಅವರ ಪರಿಚಯವಾಗಿರಲಿಲ್ಲ.

ವಿದ್ಯಾಭ್ಯಾಸ

ಕೃಷ್ಣಯ್ಯರು ಬಿ. ಎ. ಪ್ಯಾಸು ಮಾಡಿದ್ದು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಿಂದ. ಅವರು ವಿಶೇಷ ವ್ಯಾಸಂಗ ಮಾಡಿದ ವಿಷಯಗಳು ರಾಜ್ಯಶಾಸ್ತ್ರ (Politics), ಅರ್ಥಶಾಸ್ತ್ರ (Economics). ಈ ಎರಡೂ ನನ್ನ ವೃತ್ತಿಗೆ ಹೆಚ್ಚಾಗಿ ಸಂಬಂಧಪಟ್ಟವು. ಕೃಷ್ಣಯ್ಯರಿಗೂ ನನಗೂ ಸ್ನೇಹ ದೃಢಪಟ್ಟದ್ದಕ್ಕೆ ಇದೂ ಒಂದು ಕಾರಣವಿರಬಹುದು. ನಮ್ಮ ಮಾತುಕಥೆಗಳಲ್ಲಿ ಎರಡು ವಿಷಯಗಳೂ ಚರ್ಚೆಗೆ ಬರುತ್ತಿದ್ದವು.

ಕೃಷ್ಣಯ್ಯರು ಮದರಾಸಿನಲ್ಲಿ ಓದುತ್ತಿದ್ದಾಗ ಎ. ಆರ್. ನಾಗೇಶ್ವರಯ್ಯರ್ ಅವರೂ ಮದರಾಸಿನಲ್ಲಿ ವಿದ್ಯಾರ್ಥಿಯಾಗಿದ್ದರು. ಅವರಿಬ್ಬರೂ ಸಜಾತೀಯರಾಗಿ ಪೂರ್ವಪರಿಚಯವಿದ್ದ ಕಾರಣದಿಂದ ಅವರ ಸ್ನೇಹ ಗಾಢವಾಯಿತು.

ಕೃಷ್ಣಯ್ಯರು ಮದರಾಸಿನಲ್ಲಿ ಕಾಯಿಲೆ ಬಿದ್ದರು. ತುಂಬ ಕಾಯಿಲೆ. ಶ್ವಾಸಕೋಶದ ದುರ್ಬಲತೆಯಿಂದುಂಟಾದದ್ದು. ಆ ಕಾಯಿಲೆಯ ಸಂದರ್ಭದಲ್ಲಿ ನಾಗೇಶ್ವರಯ್ಯರ್ ಅವರು ಕೃಷ್ಣಯ್ಯರ್ ಅವರಿಗೆ ಮಾಡಿದ ಸೇವೆ ಸತ್ಕಾರಗಳನ್ನು ಕೃಷ್ಣಯ್ಯರು ಪದೇ ಪದೇ ನೆನಸಿಕೊಳ್ಳುತ್ತಿದ್ದರು. ಹಾಗೆಯೇ ಆಗ ಪಕ್ಕದಲ್ಲಿದ್ದು ಸೇವೆ ಮಾಡಿದ ಮತ್ತೊಬ್ಬ ಬಂಧುಗಳು ಸಭಾಪತಯ್ಯರ್ ಎಂಬವರು. ಇವರು ಮಧುಗಿರಿಯಲ್ಲಿ ಲಾಯರು.

ಕೃಷ್ಣಯ್ಯರ್ ಅವರ ಮುಖ್ಯ ಉದ್ಯೋಗ ಮೊದಲು ಜವಳಿ ಅಂಗಡಿ, ಅನಂತರ ಐರಿಷ್ ಪ್ರೆಸ್-ಎಂದು ಹೇಳಿದೆ. ಈ ಎರಡು ಉದ್ಯೋಗಗಳನ್ನು ನಡಸಿದ ರೀತಿಯನ್ನು ಕುರಿತು ಒಂದು ಮಾತು ಹೇಳಬಹುದು, ವ್ಯಾಪಾರದಲ್ಲಿರುವ ವಿದ್ಯಾವಂತರ ಎಚ್ಚರಿಕೆಗಾಗಿ.

ಜವಳಿ ಅಂಗಡಿ

ಜವಳಿ ಅಂಗಡಿಯನ್ನು ನಿರ್ವಾಹ ಮಾಡುತ್ತಿದ್ದವರು ನಿಜವಾಗಿ ವೀರರಾಘವಯ್ಯಂಗಾರ್ ಎಂಬುವರು. ಇವರು ಆರಾವಮುದ ಅಯ್ಯಂಗಾರ್ ಎಂಬ ಜವಳಿ ದಳ್ಳಾಳಿಯ ಭಾವಮೈದ. ವೀರರಾಘವಯ್ಯಂಗಾರ್ಯರಿಗೆ ಸಹಾಯವಾಗಿ ರಂಗಣ್ಣ (ರಂಗಸ್ವಾಮಿ ಅಯ್ಯಂಗಾರ್) ಎಂಬವರಿದ್ದರು. ಆರಾವಮುದಯ್ಯಂಗಾರ್ಯರು ಚಮತ್ಕಾರವಾಗಿ ಮಾತನಾಡುವವರು. ವ್ಯಾಪಾರದಲ್ಲಿ ಹುಷಾರಿ ಮನುಷ್ಯರು ಎಂದು ಹೆಸರು. ಅವರು ಮೇಲೆ ಹೇಳಿದ ಸಿ.ಕೃಷ್ಣಮಾಚಾರ್ಯರಿಗೆ ಗಾಢ ಸ್ನೇಹಿತರು. ಈ ಒಟ್ಟು ಗೋಷ್ಠಿ ಅಂಗಡಿಯನ್ನು ನಿರ್ವಾಹ ಮಾಡುತ್ತಿತ್ತು. ಕೃಷ್ಣಯ್ಯರಿಗೆ ಅವರಲ್ಲಿ ಸಂಪೂರ್ಣವಾದ ನಂಬಿಕೆ. ಅವರು ಹೇಳಿದ ಮಾತಿಗೆ ಮರುಪ್ರಶ್ನೆ ಕೂಡ ಹಾಕುತ್ತಿರಲಿಲ್ಲ.

ಕೃಷ್ಣಯ್ಯರಿಗೆ ಬಹುಮಂದಿ ಸ್ನೇಹಿತರು. ಬೆಳಗ್ಗೆ ಆ ಸ್ನೇಹಿತರು–ಅವರಲ್ಲಿ ನಾನೂ ಒಬ್ಬ–ಅವರ ಮನೆಯಲ್ಲಿ ಸೇರುತ್ತಿದ್ದರು. ನ್ಯೂಸ್‌ಪೇಪರ್ ಓದುವ ನೆವದಿಂದ, ರಾಜಕೀಯದ ಚರ್ಚೆ, ಮದ್ಯೆ ಮಧ್ಯೆ ಕಾಫಿ, ತಿಂಡಿ, ಬೇರೆ ಹರಟೆ. ಇದು ಹನ್ನೆರಡು ಗಂಟೆಯವರೆಗೆ. ಮಧ್ಯಾಹ್ನ ಮೂರು ಘಂಟೆಯಾದ ಮೇಲೆ ಅಲ್ಲಿಯೇ ಮತ್ತೊಂದು ಗೋಷ್ಠಿ. ನಾಲ್ಕು ಘಂಟೆಗೆ ಅಲ್ಲಿಂದ ಹೊರಟು ಸೆಂಟ್ರಲ್ ಕಾಲೇಜಿನ ಮುಂದಿನ ಬಯಲಿನಲ್ಲಿದ್ದ ಟೆನ್ನಿಸ್ ಕೋರ್ಟಿನಲ್ಲಿ ಟೆನ್ನಿಸ್ ಆಟ. ಕೃಷ್ಣಯ್ಯರವರೂ ಆ ಕಾಲದ ಫ್ಯಾಷನ್ನಿನಂತೆ ಠಾಕ್‌ಠೀಕಾಗಿ ಬಟ್ಟೆ ಹಾಕುತ್ತಿದ್ದರು. ಕೈಯಲ್ಲಿ ಟೆನ್ನಿಸ್ ಬ್ಯಾಟನ್ನು ಹಿಡಿಯುವುದೇ ಒಂದು ಷೋಕು. ಈ ಹೊತ್ತಿನ ದಿವಸದಲ್ಲಿ ಸ್ಕೂಲು ಕಾಲೇಜು ಹುಡುಗರಿಗೆ ಹೇಗೆ ಕ್ರಿಕೆಟ್ಟನ್ನು ಬಿಟ್ಟು ಮಾತಿಗೆ ಬೇರೆ ವಿಷಯವೇ ಇಲ್ಲವೋ ಹಾಗೆ ಆಗ ನಮ್ಮ ಕೃಷ್ಣಯ್ಯರ್ ಗೋಷ್ಠಿಗೆ ಟೆನ್ನಿಸ್ ಬಿಟ್ಟು ಬೇರೆ ವಿಷಯವಿಲ್ಲ. ಅವನು ಹೇಗೆ ಬಾಲುತಿರುಗಿಸುತ್ತಾನೆ, ಇವನು ಹೇಗೆ ಬ್ಯಾಟನ್ನು ಹಿಡಿದು ಕೈ ತಿರುಗಿಸುತ್ತಾನೆ, ಅವನ ಕಾಲಿನ ಹೆಜ್ಜೆ ಹೇಗೆ ತಿರುಗುತ್ತದೆ, ಇವನು ಹೇಗೆ ಹಾರಿ ಬಾಲನ್ನು ಹೊಡೆಯುತ್ತಾನೆ–ಇದೇ ಮಾತು. ಇದು ಬಿಟ್ಟರೆ ಫುಟ್‌ಬಾಲ್: ಅದರ ವಿವಿಧ ಪರಾಕ್ರಮಗಳು. ಈ ಆಟದ ಹೊತ್ತಿಗೆ ಒಂದೊಂದು ಸಾರಿ ಮೆಟ್‌ಕಾಫ್ ಪ್ರೊಫೆಸರರೂ ಬರುತ್ತಿದ್ದರು. ಸಿದ್ಧರಾಮಣ್ಣ, ಕೆ.ಟಿ. ಸುದರ್ಶನಂ, ಎಚ್.ಎಸ್. ನಾರಾಯಣರಾವ್, ಇನ್ನೂ ಅನೇಕರು ಗೋಷ್ಠಿಗೆ ಸೇರಿದ್ದರು. ಕೃಷ್ಣಯ್ಯರ್ ಅವರು ಆಟದಲ್ಲಿ ಮಹಾ ಸಮರ್ಥರೆಂದು ಯಾರೂ ಹೇಳಿದ್ದನ್ನು ನಾನು ಕೇಳಿಲ್ಲ. ಆದರೆ ಅವರು ಇಂಥ ಗೋಷ್ಠಿಗಳಿಗೆ ಕೇಂದ್ರ ಸ್ಥಾನದಲ್ಲಿದ್ದವರು. ಆದದ್ದರಿಂದ ಅವರು ಬರಲೇಬೇಕೆಂದು ಎಲ್ಲರೂ

ಒತ್ತಾಯಪಡಿಸುತ್ತಿದ್ದರು. ಎಲ್ಲರೂ "ಚಿಮ್ಮಣ್ಣಾ" "ಚಿಮ್ಮಣ್ಣಾ" ಎಂದು ಮನೆಯ ಮುದ್ದು ಹೆಸರಿನಿಂದ ಕೂಗುವರು. "ಚಿಮ್ಮಣ್ಣ" ಎಂಬುದು "ಚಿದಂಬರ" ಎಂಬ ಮಾತಿನ ರೂಪಾಂತರ. ಅವರ ತಾಯಿಗೆ ಚಿದಂಬರ ದೈವದಲ್ಲಿ ಪರಮಭಕ್ತಿ. ಆಕೆ ಚಿದಂಬರ ಎಂದು ಕೂಗುತ್ತಿದ್ದದ್ದು "ಚಿಮ್ಮಣ್ಣ" ಎಂದು ಪರಿವರ್ತನೆ ಹೊಂದಿತು.

ಅತಿಯಾದ ದಾಕ್ಷಿಣ್ಯ

ಹೀಗೆ ಆಟ ಮುಗಿಸಿಕೊಂಡು ಸಂಜೆ ಸುಮಾರು ಏಳು ಘಂಟೆಗೆ ವಾಪಸ್ ಬರುವುದು. ಬಂದು ಮನೆಯ ಮುಂದಿನ ನಡುಮನೆಗೂ ಅಂಗಡಿಗೂ ನಡುವಣ ಗೋಡೆಯಲ್ಲಿದ್ದ ಬಾಗಿಲಲ್ಲಿ ಕೃಷ್ಣಯ್ಯರು ನಿಲ್ಲುವರು. ಆಗ ವೀರರಾಘವಯ್ಯಂಗಾರ್ಯರು ಆ ದಿನದ ರೋಜು ಪುಸ್ತಕವನ್ನು (ದಿನಚರಿಯ ಪುಸ್ತಕ) ಕೃಷ್ಣಯ್ಯರ ಕೈಗೆ ಕೊಡುವರು. ಏನಾದರೂ ಒಂದು ಮಾತು ವಿವರಣೆ ಹೇಳುವರು; ಸರಕು ಇಷ್ಟು ಬಂದಿತು, ಇಷ್ಟು ವ್ಯಾಪಾರವಾಯಿತು, ಇಂಥಿಂಥವರಿಂದ ಗಿರಾಕಿ ಬಂದಿದೆ, ಇತ್ಯಾದಿಯಾಗಿ. ಕೃಷ್ಣಯ್ಯರು ನೋಡಿ "ಸರಿ" ಎನ್ನುವರು.

ಇದು ಅವರ ವ್ಯಾಪಾರದ ದಕ್ಷತೆ.

ಐರಿಷ್ ಪ್ರೆಸ್ಸಿನ ನಿರ್ವಾಹದ ರೀತಿಯೂ ಬಹುಮಟ್ಟಿಗೆ ಹೀಗೆಯೇ. ಅಲ್ಲಿ ಮ್ಯಾನೇಜರು ಒಬ್ಬರಿದ್ದರು. ಲೆಕ್ಕ ಪಕ್ಕ ಎಲ್ಲ ಮ್ಯಾನೇಜರ ಅಧೀನ. ಕೃಷ್ಣಯ್ಯರು ಬರುವರು; ಹರಟೆಗೆ ಸ್ನೇಹಿತರು ಸಿದ್ಧರಾಗಿರುವರು. ಅವರು ವಿದ್ಯಾವಂತರಾದದ್ದರಿಂದ ಅವರನ್ನು ಕಂಡು ಮಾತನಾಡಲು ಬರುವವರು ಕೆಲವರು. ಅವರು ಒಳ್ಳೆಯವರಾದದ್ದರಿಂದ ಸಾಲ ಸಿಕ್ಕೀತೆಂದು ಬರುವವರು ಕೆಲವರು.

ನಾನು ಇದನ್ನೆಲ್ಲ ಕಣ್ಣಾರೆ ಕಂಡವನು. ನಾನು ವ್ಯಾಪಾರದಲ್ಲಿ ಕೃಷ್ಣಯ್ಯರಿಗಿಂತ ಬುದ್ಧಿವಂತನೆಂದು ಒಂದು ಕ್ಷಣಮಾತ್ರವೂ ಅಂದುಕೊಂಡಿಲ್ಲ. ನಮಗಿಬ್ಬರಿಗೂ ಇದ್ದ ವ್ಯತ್ಯಾಸ ಇಷ್ಟೇ: ಅವರಿಗೆ ಹಣವಿತ್ತು, ಕಳೆದುಕೊಳ್ಳುವುದಕ್ಕೆ. ನನಗೆ ಇರಲಿಲ್ಲ, ಆದದ್ದರಿಂದ ಕಳೆದುಕೊಳ್ಳಲಿಲ್ಲ. ನಮ್ಮ ಕೃಷ್ಣಯ್ಯರು ಅವರ ಎರಡು ವ್ಯಾಪಾರದಲ್ಲೂ ಕಷ್ಟಕ್ಕೆ ಸಿಕ್ಕಿಕೊಂಡದ್ದರ ಕಾರಣವನ್ನು ನೆನಸಿಕೊಂಡರೆ ಮನಸ್ಸಿಗೆ ತುಂಬ ದುಃಖವಾಗುತ್ತದೆ. ದುಃಖದ ಜೊತೆಗೆ ಒಂದು ಅಯೋಗ್ಯತೆಯ ಭಾವನೆಯೂ ಬರುತ್ತದೆ. ಕೃಷ್ಣಯ್ಯರನ್ನು ಕಷ್ಟಕ್ಕೆ ತಂದದ್ದು ಅವರ ಒಳ್ಳೆತನ. ಹಿಂದು ಮುಂದು ನೋಡದ ಒಳ್ಳೆಯತನ; ಅವರ ದಾಕ್ಷಿಣ್ಯ– ಅವರ ಅತಿಯಾದ ದಾಕ್ಷಿಣ್ಯ. ಸಾಲಕ್ಕೆ ಬಂದವನಿಗೆ ಇಲ್ಲವೆಂದು ಹೇಳುವ ನಿರ್ದಾಕ್ಷಿಣ್ಯವಿಲ್ಲ. ಸಾಲಗಾರನು ಎದುರಿಗೆ ಬಂದಾಗ "ಬಾಕಿ ಯಾವಾಗ ಕೊಡುತ್ತಿ?" ಎಂದು ಕೇಳುವ ನಿರ್ದಾಕ್ಷಿಣ್ಯವಿಲ್ಲ. ಎಲ್ಲರಲ್ಲೂ ದಾಕ್ಷಿಣ್ಯ, ಎಲ್ಲರಿಗೂ ಕನಿಕರ, ಎಲ್ಲರಿಗೂ ರಿಯಾಯತಿ. ಹೀಗೆ ತಮ್ಮ ಉದಾರತನದಿಂದ ಕಷ್ಟಕ್ಕೆ ಸಿಕ್ಕಿಕೊಂಡವರು ನಮ್ಮ ಕೃಷ್ಣಯ್ಯರು.

ಕೆ. ಎಸ್. ಕೃಷ್ಣಯ್ಯರ್ ಅವರು ಐರಿಷ್ ಪ್ರೆಸ್ ಕಾರ್ಖಾನೆಯನ್ನು ಸ್ವಂತ ಉದ್ದೇಶದಿಂದ ಸ್ಥಾಪಿಸಿದವರಲ್ಲ. ಆ ಕಾರ್ಖಾನೆಯ ಕಥೆ ಹೀಗೆ: ಬೆಂಗಳೂರು ಕಂಟೋನ್ಮೆಂಟಿನಲ್ಲಿ ಸರ್ ಹಾಜಿ ಇಸ್ಮಾಯಿಲ್ ಸೇಟ್ ಸಾಹೇಬರ "ಇಂಗ್ಲಿಷ್ ವೇರ್‌ಹೌಸ್" ಎಂಬ ಭಾರಿ ವ್ಯಾಪಾರ ಸಂಸ್ಥೆ ಇತ್ತು. ಅಲ್ಲಿ ಗುಮಾಸ್ತರಾಗಿ, ಲೆಕ್ಕವಂದಿಗರಾಗಿ ಇದ್ದ ಇಬ್ಬರು ಎಂ. ತಿರುಮಲಯ್ಯಂಗಾರ್ಯರು ಮತ್ತು ಸಿ.ಎಸ್. ರಾಮಚಂದ್ರ ಅಯ್ಯರ್. ಅವರಿಬ್ಬರಿಗೂ ಸ್ವತಂತ್ರವಾಗಿ ಒಂದು ವ್ಯಾಪಾರ ನಡಸಬೇಕೆಂದು ಬಹು ದಿನಗಳಿಂದ ಮನಸ್ಸಿತ್ತಂತೆ. ೧೯೦೮-೯ರ ವೇಳೆಗೆ ಅವರು ಇಂಗ್ಲಿಷ್ ವೇರ್ ಹೌಸಿನಿಂದ ನಿವೃತ್ತಿ ಪಡೆದರು.

ಐರಿಷ್ ಪ್ರೆಸ್

ಆ ಇಬ್ಬರಿಗೂ ಹಿಂದೆ ಹೇಳಿದ ಕೃಷ್ಣಮಾಚಾರ್ಯರಿಗೂ ಸ್ನೇಹವಿತ್ತು. ಈ ಮೂವರೂ ಸೇರಿ ಮುದ್ರಣಸಂಸ್ಥೆಯನ್ನು ಪ್ರಾರಂಭಿಸತಕ್ಕದ್ದೆಂದು ಸಂಕಲ್ಪಿಸಿದರು. ಅದರಂತೆ ಅವರು ಒಂದು ಹಳೆಯ ಮುದ್ರಣಯಂತ್ರವನ್ನೂ ಇತರ ಸಂಬಂಧಪಟ್ಟ ಸಾಮಾಗ್ರಿಗಳನ್ನೂ ಕೊಳ್ಳಬೇಕೆಂದು ಹುಡುಕಾಡುತ್ತಿದ್ದಾಗ ಮದರಾಸಿನಲ್ಲಿದ್ದ ಐರಿಷ್ ಪ್ರೆಸ್ ಎಂಬ ಕಾರ್ಖಾನೆ ಕ್ರಯಕ್ಕೆ ದೊರೆಯಲಿರುವ ಸಂಗತಿ ತಿಳಿಯಿತು. ಅದರಂತೆ ರಾಮಚಂದ್ರಯ್ಯರ್ ಆ ಐರಿಷ್ ಪ್ರೆಸ್ಸನ್ನು ಅದರ ಹೆಸರಿನ ಸಮೇತ (ಗುಡ್‌ವಿಲ್) ಕೊಂಡುಕೊಂಡು ಬಂದರು. ಅದು ಬೆಂಗಳೂರಿನಲ್ಲಿ ಸ್ಥಾಪನೆಯಾದದ್ದು ಚಿಕ್ಕಪೇಟೆ ಅಕ್ಕಿಪೇಟೆಗಳು ಸೇರುವ ಕಡೆ-ಚಿಕ್ಕಲಾಲ್‌ಬಾಗ್ ಮೂಲೆಯ ಕಟ್ಟಡದಲ್ಲಿ.

ಆ ಕಟ್ಟಡ ಭಾರಿಯದು, ಮಹಡಿ ವಿಶಾಲವಾಗಿದ್ದದ್ದಲ್ಲದೆ ಕಟ್ಟಡದ ಹಿಂಬಾಗದಲ್ಲಿ ವಿಸ್ತಾರವಾದ ಖಾಲಿ ನಿವೇಶನವಿತ್ತು. ಅದರಲ್ಲಿ ಒಂದು ಪ್ರಶಸ್ತವಾದ ಅಶ್ವತ್ಥಕಟ್ಟೆ, ನಾಲ್ಕು ಕಡೆಯೂ ಸೋಪಾನ ಕಟ್ಟಿದ ತಿಳಿನೀರಿನ ಕೊಳ, ಗಿಡ ಮರಗಳು ಇದ್ದು ರಮ್ಯವಾಗಿತ್ತು. ಆ ಕಟ್ಟಡ ಮೈಸೂರಿನಲ್ಲಿ ಪ್ರಸಿದ್ಧವಾದ ಫೋಟಾಗ್ರಾಫರ್ ಎ.ವಿ. ವರದಾಚಾರ್ಯರ ಸ್ವತ್ತು.

ಈ ಉದ್ಯಮಕ್ಕೆ ಬೇಕಾಗಿದ್ದ ಬಂಡವಾಳವನ್ನು–ಸುಮಾರು ಮೂರರಲ್ಲೆರಡು ಭಾಗವನ್ನು ಕೆ.ಎಸ್. ಕೃಷ್ಣಯ್ಯರವರ ಜವಳಿ ಅಂಗಡಿಯ ಲೆಕ್ಕದಿಂದ ಮುಂಗಡವಾಗಿ ಕೊಟ್ಟಿತ್ತು. ಕಾಲಕ್ರಮದಲ್ಲಿ ರಾಮಚಂದ್ರಯ್ಯರು ಬಿಡಿಸಿಕೊಂಡು ಬೇರೆ ಹೋದರು. ಕೃಷ್ಣಯ್ಯರು ತಾವು ಸಾಲ ಕೊಟ್ಟಿದ್ದ ಬಂಡವಾಳಕ್ಕೆ ಪ್ರತಿಯಾಗಿ ಅಚ್ಚಿನ ಕಾರ್ಖಾನೆಯನ್ನು ತೆಗೆದುಕೊಳ್ಳಲೊಪ್ಪದಿದ್ದರೆ ಅವರ ಹಣ ಅವರಿಗೆ ವಾಪಸ್ಸು ಬರುವ ಸಂಭವವಿರಲಿಲ್ಲ. ಹೀಗೆ ಐರಿಷ್ ಪ್ರೆಸ್ಸು ಕೃಷ್ಣಯ್ಯರಿಗೆ ಬಂದದ್ದು ಬಲವಂತದ ಮಾಘಸ್ನಾನದ ರೀತಿಯಲ್ಲಿ. ಅದನ್ನು ತೆಗೆದುಕೊಂಡು ಎಂಟು ಹತ್ತು ವರ್ಷವಾದ ಮೇಲೆ ೧೯೧೯ರ ಸುಮಾರಿನಲ್ಲಿ ಕೃಷ್ಣಯ್ಯರು ಆ ಕಾರ್ಖಾನೆಯನ್ನು ಸಿದ್ದೀಕಟ್ಟೆಯಲ್ಲಿ ಗುಂಡೋಪಂತರ ಕಟ್ಟಡಕ್ಕೆ ಸಾಗಿಸಿದರು. ಬಂಡವಾಳವನ್ನು ಹೆಚ್ಚಿಸಿದರು. ಕಟ್ಟಡದ ಇಲಾಖೆಯನ್ನು ವಿಸ್ತಾರಪಡಿಸಿದರು. ಹೊಸ ಯಂತ್ರಗಳನ್ನು ತರಿಸಿದರು. ಮುದ್ರಾಕ್ಷರಗಳ ದಾಸ್ತಾನನ್ನು ಯಥೇಷ್ಟವಾಗಿ ಬೆಳಸಿದರು.

ನೂರಾರು ಒಳ್ಳೆಯ ಗ್ರಂಥಗಳು ಅಲ್ಲಿ ಮುದ್ರಿತವಾದವು. ವಿದ್ವಾನ್ ಮೋಟಗಾನ ಹಳ್ಳಿ ರಾಮಶೇಷ ಶಾಸ್ತ್ರಿಗಳ ಕನ್ನಡ ಟೀಕಾ ತಾತ್ಪರ್ಯ ಸಹಿತ ಶ್ರೀಮದ್ಭಾಗವತದ ಹನ್ನೆರಡು ಸ್ಕಂಧಗಳೂ ಅಲ್ಲಿ ಮುದ್ರಿತವಾದವು. ಆರ್. ರಘುನಾಥರಾಯರ "ನಿಯೋಗ ವಿಧಿಯ ವಿಚಾರ". "ಸನಾತನ ಧರ್ಮ ದೀಪಿಕೆ" ಮೊದಲಾದವೂ ಅಲ್ಲಿಯೇ ಅಚ್ಚಾದವು. ದೊಡ್ಡಬೆಲೆ ನಾರಾಯಣಶಾಸ್ತ್ರಿಗಳವರ "ಶಾರದಾ" ಮತ್ತು "ವಿದ್ಯಾನಂದ" ಪತ್ರಿಕೆಗಳು, ವೆಂಕಟನಾರಣಪ್ಪನವರ "ವಿಜ್ಞಾನ", ಚ. ವಾಸುದೇವಯ್ಯನವರ "ಆರ್ಯಕೀರ್ತಿ", ನನ್ನ "ರಂಗಾಚಾರ್ಲು" ಮೊದಲಾದವೆಲ್ಲ ಮುದ್ರಿತವಾದದ್ದು ಅಲ್ಲಿಯೇ. ಆ ಕಾಲಕ್ಕೆ ಕೃಷ್ಣಯ್ಯರ ಐರಿಷ್ ಪ್ರೆಸ್ ಬೆಂಗಳೂರಿನ ಅಚ್ಚಿನ ಕಾರ್ಖಾನೆಗಳಲ್ಲಿ ದೊಡ್ಡದು.

ಬೈಸಿಕಲ್ ಕಳವು

ಒಂದು ವಿಶೇಷ ಸಂಗತಿ. ಆ ಕಟ್ಟಡದಲ್ಲಿ ಅಚ್ಚಿನ ಕಾರ್ಖಾನೆಯಿದ್ದ ಭಾಗದ ಮುಂದುಗಡೆಯ ಹಾಲಿನಲ್ಲಿ ಗಿರಾಕಿಗಳು ಬಂದ ಕೂಡಲೆ ಅವರಿಗೆ ಕಾಣುವಂತೆ ಮ್ಯಾನೇಜರು ಕೂಡುತ್ತಿದ್ದರು. ಆ ಜಾಗಕ್ಕೆ ಎದುರಾಗಿ ಒಂದು ದೊಡ್ಡ ಕೋಣೆಯ ಬಾಗಿಲು. ಆ ಕೋಣೆಯಲ್ಲಿ ಮನೆಯ ಮಾಲೀಕರು ಹಳೆಯ ಸಾಮಾನುಗಳನ್ನು ಹಾಕಿಕೊಂಡಿದ್ದರು. ಆ ಕೋಣೆಯ ಬಾಗಿಲನ್ನು ತೆರೆಯಬೇಕಾದ ಆವಶ್ಯಕತೆ ಇರಲಿಲ್ಲ. ಆದದ್ದರಿಂದ ಬೈಸಿಕಲ್ಲುಗಳನ್ನು ಒರಗಿಸಿಡುತ್ತಿದ್ದರು–ಅದು ಯಾವಾಗಲೂ ಮ್ಯಾನೇಜರ ಕಣ್ಣು ಮುಂದೆ ಇರುವುದರಿಂದ ಸುರಕ್ಷಿತವೆಂದು ನಂಬಿ. ಒಂದು ದಿನ ನಾನು ಹಾಗೆ ನನ್ನ ಬೈಸಿಕಲ್ಲನ್ನು ಆ ಬಾಗಿಲಿಗೆ ಆನಿಸಿಟ್ಟಿದ್ದೆ. ಅಂದು ಬಟವಾಡೆಯ ದಿವಸ. ಕೆಲಸಗಾರರೆಲ್ಲರೂ ಮ್ಯಾನೇಜರವರ ಮೇಜಿನ ಸುತ್ತಲೂ ಗುಂಪು ಕಟ್ಟಿ ನಿಂತಿದ್ದರು.

ಇನ್ನೊಂದು ಸಂದರ್ಭ ಇಲ್ಲಿ ಹೇಳಬೇಕಾದದ್ದು ಆಗ ಅಮಾವಾಸ್ಯೆಯ ರಾತ್ರಿ ಎಂಬುದು.

ಬಟವಾಡೆಯ ಕೆಲಸ ಮುಗಿದು ಬಿಡುವಾಗುವ ವೇಳೆಗೆ ಸುಮಾರು ಎಂಟು ಘಂಟೆ. ನಾನು ಮಹಡಿಯಿಂದಿಳಿದು ಬಂದು ನಾನು ಬೈಸಿಕಲ್ಲನ್ನಿಟ್ಟಿದ್ದ ಕಡೆ ನೋಡಿದೆ. ನನ್ನ ಬೈಸಿಕಲ್ಲು ಇರಲಿಲ್ಲ. ಉಳಿದಿದ್ದ ಒಬ್ಬಿಬ್ಬರು ಕೆಲಸಗಾರರೂ ಮ್ಯಾನೇಜರೂ ಕೃಷ್ಣಯ್ಯರವರೂ ಹುಡುಕಾಡಿದರು. ಬೈಸಿಕಲ್ಲು ಸಿಕ್ಕಲಿಲ್ಲ.

ಆಗ ಪೋಲೀಸ್ ಸ್ಟೇಷನ್ನು ಕೋಟೆಯಲ್ಲಿ ಈಗ ಮೆಡಿಕಲ್ ಅಸೋಸಿಯೇಷನ್ ಕಟ್ಟಡ ಇರುವ ಕಡೆ ಇತ್ತು. ಈ ಕಟ್ಟಡದ ದಕ್ಷಿಣಕ್ಕೆ ಗವರ್ನ್‌ಮೆಂಟ್ ಬುಕ್ ಡಿಪೋ ಇತ್ತು. ಆಗ ಇಬ್ಬರು ಪೋಲೀಸ್ ಇನ್‌ಸ್ಪೆಕ್ಟರುಗಳಿದ್ದರು: ಒಬ್ಬರು ಎಂ. ಸುಬ್ಬರಾಯರು, ಇನ್ನೊಬ್ಬರು ಸಿ. ಕೃಷ್ಣರಾಯರು. ಸೂಪರಿಂಟೆಂಡೆಂಟರು ಟಿ. ತಂಬೂಚೆಟ್ಟಿಯವರು.

ತನಿಖೆ

ಆ ರಾತ್ರಿಯೇ ನಾನೂ ಕೆಲವು ಸ್ನೇಹಿತರೂ ಹೋಗಿ ಪೋಲೀಸ್ ಸ್ಟೇಷನ್ನಿನಲ್ಲಿ ಕಂಪ್ಲೇಂಟು ಕೊಟ್ಟೆವು. ಹದಿನೈದಿಪ್ಪತ್ತು ದಿವಸವಾದ ಮೇಲೆ ಪೋಲೀಸಿನವರು ನನ್ನ ಬೈಸಿಕಲ್ಲನ್ನು ಪತ್ತೆ ಮಾಡಿದರು. ಆಗಿನ ಕಾಲಕ್ಕೆ ಅದು ಫ್ಯಾಷನ್ನಿನಲ್ಲಿದ್ದ ಬೈಸಿಕಲ್–ಬಿ.ಎಸ್.ಎ. ಅದಕ್ಕೆ ಕೊಟ್ಟಿದ್ದ ಬೆಲೆ ಮೂನ್ನೂರೈವತ್ತು ರೂಪಾಯಿ. ಕಂಟೋನ್ಮೆಂಟಿನಲ್ಲಿದ್ದ ಬೆಳಗಾಂವಾಲಾ ಎಂಬಾತನ ಅಂಗಡಿಯಿಂದ ಕೊಂಡದ್ದು. ಈ ವಿವರಗಳನ್ನೂ ಬೈಸಿಕಲ್ ನಂಬರನ್ನೂ ಒಪ್ಪಿಸಿದ ಮೇಲೆ ರುಜುವಾತಾಯಿತು.

ಆ ಬೈಸಿಕಲ್ಲನ್ನು ವಾಣಿಯಂಬಾಡಿಯ ಆಚೆಗಿದ್ದ ಒಂದು ಹಳ್ಳಿಯ ಕೆರೆಯಲ್ಲಿ ಹಾಕಿದ್ದ, ಅದನ್ನು ಕದ್ದ ಆಸಾಮಿ. ಆತನ ಜನ್ಮಸ್ಥಳ ಆ ಊರು. ಆದರೆ ಕದ್ದ ಮಾಲನ್ನು ಮನೆಗೆ ತೆಗೆದುಕೊಂಡು ಹೋದರೆ ತಾಯಿ ತಂದೆಗಳು ಅದೇನೆಂದು ವಿಚಾರಿಸಿಯಾರು. ಈ ಭಯದಿಂದ ಆತ ಕೆರೆಯಲ್ಲಿ ಹಾಕಿದ್ದ –ತಾನು ಮತ್ತೆ ಬೆಂಗಳೂರಿಗೆ ಬರುವಾಗ ಅದನ್ನು ತೆಗೆದುಕೊಂಡು ಬರಬೇಕೆಂಬ ಉದ್ದೇಶದಿಂದ.

ಪೋಲೀಸಿನವರು ಮೊಕದ್ದಮೆ ಹೂಡಿದರು. ರಾಣೋಜಿರಾಯರು ಸಿಟಿ ಮ್ಯಾಜಿಸ್ಟ್ರೇಟರು. ಐರಿಷ್ ಪ್ರೆಸ್ಸಿನ ನನಗೂ ನನ್ನ ಸ್ನೇಹಿತರಿಗೂ ಕಳವಳ. ಬೈಸಿಕಲ್ ಕದ್ದಾತ ಸುಮಾರು ೨೨-೨೩ ವಯಸ್ಸಿನವನು. ಚಟುವಟಿಕೆಯಾಗಿದ್ದ. ಅವನು ಮಾಡಿದ್ದೇನೋ ತಪ್ಪು. ಆದರೆ ರಾಣೋಜಿರಾಯರ ಕೋರ್ಟಿನಲ್ಲಿ ರುಜುವಾತಾದರೆ ಅವನಿಗೆ ಎಂಟು ತಿಂಗಳೋ ವರ್ಷವೋ ಸಜಾ ಹಾಕಿಬಿಟ್ಟಾರು; ಹುಡುಗನ ಭವಿಷ್ಯವೆಲ್ಲ ಕೆಟ್ಟು ಹೋದೀತು. ಇದನ್ನು ಯೋಚನೆಮಾಡಿ ಒಂದು ಉಪಾಯ ಕಂಡುಹಿಡಿದೆವು. ಕೋರ್ಟಿನಲ್ಲಿ ಅಪರಾಧಿಯ ಪರವಾಗಿ ಬೇಲೂರು ಶ್ರೀನಿವಾಸಯ್ಯಂಗಾರ್ಯರು ವಕಾಲತ್ತು ನಡಸತಕ್ಕದ್ದು. ನನ್ನ ಪರವಾಗಿ ಮೋಕ್ಷಗುಂಡಂ ಕೃಷ್ಣಮೂರ್ತಿಯ ವಕಾಲತ್ತು.

ಸವಾಲು

ಕೋರ್ಟಿನಲ್ಲಿ ನಡೆದದ್ದು ಹೀಗೆ:

ಬೇ: "ನೀವು ಈತನನ್ನು ಎಷ್ಟು ದಿನದಿಂದ ಬಲ್ಲಿರಿ?"

ನಾನು: "ಐದಾರು ವರ್ಷದಿಂದ."

ಬೇ: "ನಿಮಗೆ ಈತನ ಪರಿಚಯ ಹೇಗಾಯಿತು?"

ನಾನು: "ಈತ ಕಂಪಾಸಿಟರು–ಮೊಳೆ ಜೋಡಿಸುವವನು. 'ಕರ್ಣಾಟಕ' ಪೇಪರಿನ ಕೆಲಸವನ್ನೂ ಆಗಾಗ ಮಾಡುತ್ತಿದ್ದ."

ಬೇ: "ಈತನ ಕೆಲಸದ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?"

ನಾನು: "ಒಳ್ಳೆಯ ಕೆಲಸಗಾರ ಸ್ವಾಮಿ, ಚೊಕ್ಕಟವಾಗಿ ಕೆಲಸಮಾಡುತ್ತಾನೆ."

ಬೇ: "ಈತ ಪ್ರೆಸ್ಸಿನಲ್ಲಿ ಇನ್ನೇನು ಕೆಲಸ ಮಾಡುತ್ತಾನೆ?"

ನಾನು: "ಪ್ರೂಫುಗಳನ್ನು ತೆಗೆಯುತ್ತಾನೆ. ಅದರಿಂದ ಇವನನ್ನು ಪುಲ್ಲರ್ (Puller) ಎಂದು ಕರೆಯುವುದುಂಟು."

ಬೇ: "ಏನು Pull ಮಾಡುತ್ತಾನೆ."

ನಾನು: "ಪ್ರೂಫುಗಳನ್ನು ಪುಲ್ ಮಾಡುತ್ತಾನೆ."

ಬೇ: "ಅದನ್ನು ಚೆನ್ನಾಗಿ ಮಾಡುತ್ತಾನೊ?"

ನಾನು: "ಹೌದು ಸ್ವಾಮಿ. ಕೊಳಕಿಲ್ಲದೆ ಚೊಕ್ಕಟವಾಗಿ ಮಾಡುತ್ತಾನೆ."

ಬೇ: ಒಳ್ಳೆಯದು, ಇವನು ಯಾವಾಗಲಾದರೂ ಕಳ್ಳತನ ಮಾಡಿದ್ದು ನಿಮಗೆ ತಿಳಿದಿದೆಯೊ?"

ನಾನು: "ಇಲ್ಲ ಸ್ವಾಮಿ. ಅಂಥ ಹುಡುಗನಲ್ಲ."

ಬೇ: "ಇರಲಿ, ಅದು ಹಾಗಿರಲಿ. ಇವನ ವಿಷಯದಲ್ಲಿ ಇನ್ನೇನಾದರೂ ದೋಷವುಂಟೊ?"

ನಾನು: "ಇಲ್ಲ ಸ್ವಾಮಿ. ಅವನಲ್ಲಿ ಯಾವ ದೋಷವನ್ನೂ ನಾನು ಕಂಡಿಲ್ಲ. ಅವನು ಒಳ್ಳೆಯವನು."

ಈ ಪ್ರಶ್ನೋತ್ತರದ ನಡುವೆ ಕೊಂಚ ಹಾಸ್ಯ, ನಗು, ರಾಣೋಜಿರಾಯರು ಬಾಯಿಗೆ ವಸ್ತ್ರ ಮುಚ್ಚಿಕೊಂಡು ಮುಸಿಮುಸಿ ನಗುತ್ತಿದ್ದರು. ಕಡೆಗೆ ಬೇಲೂರರು ಕೋರ್ಟಿಗೆ ಹೀಗೆ ವಿಜ್ಞಾಪನೆ ಮಾಡಿದರು: "ಸ್ವಾಮಿ, ಇವನು ಹುಡುಗ, ಇದುವರೆಗೆ ಅವನ ಸರ್ವೀಸ್ ರೆಕಾರ್ಡಿನಲ್ಲಿ ಯಾವ ಕಳಂಕವೂ ಇಲ್ಲ. ತಂದೆ ತಾಯಿ ಇದ್ದಾರೆ. ಅವರು ಮುದುಕರು. ಈ ಹುಡುಗನ ವಿಷಯದಲ್ಲಿ ತಾವು ಕನಿಕರ ತೋರದೆ ಹೋದರೆ ಅವನ ಜೀವನವೆಲ್ಲ ಕೆಟ್ಟು ಹೋದೀತು. ಅವನು ತಪ್ಪು ಮಾಡಿದ್ದು ನಿಜ. ಆ ಹೊತ್ತು ಅಮಾವಾಸ್ಯೆ ರಾತ್ರಿ: ಏನೋ ಬುದ್ಧಿ ಪಲ್ಲಟವಾಗಿರಬೇಕು. ಆದದ್ದರಿಂದ ಕ್ಷಮೆ ಪಡೆಯಲು ಅರ್ಹನು."

ಕೋರ್ಟು: "ಏನಪ್ಪಾ, ಕಳ್ಳತನ ರುಜುವಾತಾಗಿದೆ. ಸುಮ್ಮನೆ ಬಿಟ್ಟು ಬಿಡುವುದಕ್ಕಾಗುತ್ತದೆಯೇ? ಇನ್ನು ಮುಂದೆ ಸರಿಯಾಗಿ ನಡೆಯುವುದಾಗಿ ಮುಚ್ಚಳಿಕೆ ಬರೆದು ಕೊಟ್ಟಾನೊ?"

ಬೇ: "ಕೋರ್ಟಿನ ಅಪ್ಪಣೆಯಾದಂತೆ ಬರೆದುಕೊಡುತ್ತಾನೆ."

ಹೀಗೆ ಮುಗಿಯಿತು ಆ ಮೊಕದ್ದಮೆ.

ಕೃತಜ್ಞತೆ

ಅಲ್ಲಿಂದ ಎಂಟು ಹತ್ತು ವರ್ಷ ಕಳೆದ ಮೇಲೆ ನಾನು ಯಾವುದೋ ಮದುವೆಯ ಸಂದರ್ಭಕ್ಕೆ ಹೋಗಿ ಕಂಟೋನ್ಮೆಂಟಿನ ಕಮರ್ಷಿಯಲ್ ಸ್ಟ್ರೀಟಿನಲ್ಲಿ ಬರುತ್ತಿದ್ದಾಗ ಆ ಪುಲ್ಲರ್ ಹುಡುಗ ಯಾವುದೋ ಪಕ್ಕದ ಸಂದಿಯಿಂದ ಓಡಿ ಬಂದು ನನ್ನ ಕಾಲುಗಳನ್ನು ಹಿಡಿದುಕೊಂಡ. ತಲೆಯೆತ್ತಿ ನೋಡಿದಾಗ ಗುರುತುಹಿಡಿದೆ. ನನ್ನನ್ನು ಕರೆದುಕೊಂಡು ಹೋದ; ತಾನು ನಡಸುತ್ತಿದ್ದ ಸಣ್ಣ ಪ್ರೆಸ್ಸಿಗೆ. ಅಲ್ಲಿ ಆತನ ತಾಯಿ ಇದ್ದರು. ನನ್ನ ಕಾಲು ಮುಟ್ಟಿ ನಮಸ್ಕಾರ ಮಾಡಿ ಹೂಗಳ ರಾಶಿಯಲ್ಲಿ ನನ್ನನ್ನು ಮುಳುಗಿಸಿದರು. ತಟ್ಟೆ ತಟ್ಟೆ ಹಣ್ಣುಗಳನ್ನು ನನ್ನ ಮುಂದಿಟ್ಟರು. ನಾನು ಕೇಳಿದೆ:

ನಾನು: "ಇದೆಲ್ಲ ಏನು ರಗಳೆ?"

ಆಕೆ: "ಸ್ವಾಮಿ, ನೀವು ಆ ಹೊತ್ತು ಇವನನ್ನು ಬಿಡಿಸದೆ ಇದ್ದಿದ್ದರೆ ನಾವೆಲ್ಲ ತಲೆಯೆತ್ತಿ ಬದುಕಿರುತ್ತಿದ್ದೆವೆ?"

ಈ ಪ್ರಕರಣದಲ್ಲಿ ನಮಗೆಲ್ಲ ಒತ್ತಾಸೆಯಾಗಿದ್ದವರು ಕೃಷ್ಣಯ್ಯರ್. ಕೊಂಚ ತುಂಟಾಟ ಮಾಡುವ ಎಳೆಯರನ್ನು ಅವರು ಹೆಚ್ಚು ವಿಶ್ವಾಸದಿಂದ ನೋಡುತ್ತಿದ್ದರು. ಆದದ್ದರಿಂದಲೇ ಎಲ್ಲ ಯುವಕರೂ, ಸಾಮಾನ್ಯವಾಗಿ ಎಲ್ಲ ವಿದ್ಯಾರ್ಥಿಗಳೂ ಅವರನ್ನು ಮೆಚ್ಚಿಕೊಂಡು ಸುತ್ತುಗಟ್ಟಿರುತ್ತಿದ್ದರು.

ಕೆ. ಎಸ್. ಕೃಷ್ಣಯ್ಯರು ಪಟ್ಟ ಕಷ್ಟ ಪರೀಕ್ಷೆಗಳನ್ನು ನಾನು ಹೆಚ್ಚಾಗಿ ಹೇಳಲಾರೆ. ೧೯೨೪-೨೫ರ ಸುಮಾರಿನಲ್ಲಿ ಅವರು ಬೆಂಗಳೂರನ್ನು ಬಿಟ್ಟು ಬೊಂಬಾಯಿಗೆ ಹೋದರು.

ಅಲ್ಲಿ ಅವರಿಗೆ ಸಹಾಯವಾಗಿದ್ದ ಸ್ನೇಹಿತರು ಇಬ್ಬರು. ಅವರಲ್ಲೊಬ್ಬರು ದಲಾಲ್ ಎಂಬುವರು. ಇವರು ಮೈಸೂರಿನಲ್ಲಿ ಎಂಜಿನಿಯರಾಗಿದ್ದ ದಲಾಲ್ ಎಂಬುವರ ಮಕ್ಕಳು. ಇವರೂ ಕೃಷ್ಣಯ್ಯರೂ ಕಾಲೇಜಿನಲ್ಲಿ ಸಹಪಾಠಿಗಳಾಗಿದ್ದರು. ಅವರಿಬ್ಬರಿಗೂ ಸ್ನೇಹ ಗಾಢವಾಗಿ ಬೆಳೆದಿತ್ತು. ದಲಾಲ್‌ರವರು ಬ್ಯಾರಿಸ್ಟರಾಗಿ ಅಭಿವೃದ್ಧಿಯಲ್ಲಿದ್ದವರು. ಕೃಷ್ಣಯ್ಯರಿಗೆ ಬೊಂಬಾಯಲ್ಲಿ ಆಶ್ರಯಕೊಟ್ಟ ಇನ್ನೊಬ್ಬ ಸ್ನೇಹಿತರು ದಿವಾನ್ ಸರ್.ಕೆ. ಶೇಷಾದ್ರಯ್ಯರ ಕಿರಿಯ ಮಗ ರಾಮಸ್ವಾಮಯ್ಯರ್. ಇವರು ಎಲ್ಲ ವಿಷಯಗಳಲ್ಲಿಯೂ ದೊಡ್ಡ ಮನುಷ್ಯರು. ಉದಾರಿಗಳು, ಕನಿಕರ ತುಂಬಿದವರು. ರಾಮಸ್ವಾಮಯ್ಯರ್ ಅವರು ಔರಂಗಾಬಾದಿನಲ್ಲಿದ್ದ

ಮಿಲ್ ಕಾರ್ಖಾನೆಯೊಂದರ ಯಜಮಾನರಾಗಿದ್ದರು. ಈ ಮಹನೀಯರು ಕೃಷ್ಣಯರಿಗೆ ತಮ್ಮ ಕಾರ್ಖಾನೆಯ ಆಫೀಸಿನಲ್ಲಿ ಉದ್ಯೋಗ ಕಲ್ಪಿಸಿದರು.

ಮುಂಬೈ ಪ್ರವಾಸ

ಕೃಷ್ಣಯ್ಯರು ಬೊಂಬಾಯಿನ ಜುಹು ಪ್ರದೇಶದಲ್ಲಿದ್ದರು. ಆ ಕಾಲದಲ್ಲಿ ಶ್ರೀಮಾನ್ ಎ.ಆರ್. ನಾಗೇಶ್ವರಯ್ಯರ್ ಅವರೂ ತುಮಕೂರಿನ ಅಡ್ವೊಕೇಟ್ ಎಚ್. ವೆಂಕಟರಾಮಯ್ಯನವರೂ ನಾನೂ ಬೊಂಬಾಯಿಗೆ ಹೋಗಿದ್ದೆವು–ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ. ಆ ಪ್ರಯತ್ನಕ್ಕೆ ಬಹು ಕಡೆಗಳಿಂದ, ಗುಜರಾತಿನಿಂದ, ಮಹಾರಾಷ್ಟ್ರದಿಂದ ಪ್ರೋತ್ಸಾಹ ಬಂದಿತ್ತು. ಆ ಪ್ರಯತ್ನ ಅಂದಿನ ಮಟ್ಟಿಗೆ ಜಯಶಾಲಿಯಾಯಿತು. ಆ ನಮ್ಮ ಬೊಂಬಾಯಿ ಪ್ರವಾಸದಲ್ಲಿ ಸಂತೋಷವಾಗಿ ಭೋಜನಮಾಡಿ ಸವಿನೆನಪುಗಳಿಂದ ಕಾಲ ಕಳೆದವು. ಕಷ್ಟಬಂದರೂ ಮನಸ್ಸನ್ನು ಕೆಡಿಸಿಕೊಳ್ಳದೆ ಇರುವ ಸ್ವಭಾವ ಕೃಷ್ಣಯ್ಯರದು. ಒಂದೇ ರೀತಿಯ ಪ್ರೀತಿ, ಒಂದೇ ರೀತಿಯ ಅಭಿಮಾನ.

ನ್ಯಾಷನಲ್ ಹೈಸ್ಕೂಲ್

ಅಲ್ಲಿಂದೀಚೆಗೆ ಕೃಷ್ಣಯ್ಯರ ಸ್ನೇಹಿತರಲ್ಲೊಬ್ಬರಾದ ವಿ. ಗೋಪಾಲಸ್ವಾಮಿ ಅಯ್ಯಂಗಾರ್ಯರು ಕೃಷ್ಣಯ್ಯರನ್ನು ಬೆಂಗಳೂರಿಗೆ ಕರೆಯಿಸಿಕೊಳ್ಳಬೇಕೆಂದು ಆಲೋಚನೆ ಮಾಡಿದರು. ಗೋಪಾಲಸ್ವಾಮಿ ಅಯ್ಯಂಗಾರ್ಯರು ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರಾಗಿದ್ದರು. ಬಳಿಕ ಸೆಂಟ್ರಲ್ ಕಾಲೇಜಿನ ಗಣಿತಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಇವರು ಪರಮ ನಿಃಸ್ಪೃಹರು, ಆಚಾರಶೀಲರು, ಕಾರ್ಯದಕ್ಷರು. ಇವರು ನ್ಯಾಷನಲ್ ಎಜ್ಯುಕೇಷನ್ ಸೊಸೈಟಿಯ ಕಾರ್ಯದರ್ಶಿಯಾಗಿದ್ದವರು. ಇವರ ಪ್ರಯತ್ನದಿಂದ ಕೃಷ್ಣಯ್ಯರು ಬೆಂಗಳೂರಿಗೆ ಬಂದು ನ್ಯಾಷನಲ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದು ಜನರ ವಿಶ್ವಾಸ ಗೌರವಗಳನ್ನು ಮತ್ತೂ ಹೆಚ್ಚಾಗಿ ಗಳಿಸಿಕೊಂಡರು.

ವಯಸ್ಸು ಹೆಚ್ಚಿ ದೇಹದಲ್ಲಿ ಶಕ್ತಿ ಕುಗ್ಗಿದಾಗ ಅವರು ನ್ಯಾಷನಲ್ ಹೈಸ್ಕೂಲಿನಲ್ಲಿ ಉದ್ಯೋಗದಿಂದ ನಿವೃತ್ತರಾಗಿ ಕಲ್ಕತ್ತಾದಲ್ಲಿ ತಮ್ಮ ಮಗನ ಬಳಿ ಕಡೆಯವರೆಗೂ ಇದ್ದರು.

ಕಲ್ಕತ್ತಾದಲ್ಲಿದ್ದಾಗ ಕೃಷ್ಣಯ್ಯರ್ ಬೆಂಗಳೂರನ್ನು ಮರೆತಿರಲಿಲ್ಲ. ಇಲ್ಲಿಯ ಮಿತ್ರರೊಡನೆ ಸತತ ಪತ್ರವ್ಯವಹಾರವನ್ನಿರಿಸಿಕೊಂಡಿದ್ದರು. ವರ್ಷ ಎರಡು ವರ್ಷಕ್ಕೊಮ್ಮೆ ಅವಕಾಶ ದೊರೆತಾಗ ಬೆಂಗಳೂರಿಗೆ ಬಂದು ಹಳೆಯ ಸ್ನೇಹಿತರನ್ನು ಕಂಡು ಸಂತೋಷಪಡಿಸುತ್ತಿದ್ದರು.

ಹರಕೆ

ಗೋಖಲೆ ಸಂಸ್ಥೆಯ ವಿಷಯದಲ್ಲಿ ಅವರಿಗೆ ಅತಿಶಯವಾದ ಆಸಕ್ತಿ. ಈ ಸಂಸ್ಥೆಯ ಮೊದಲನೆಯ ಅವತಾರಗಳಲ್ಲಿ ಸೇರಿದವರಲ್ಲವೆ ಅವರು? ಇದಕ್ಕೆ ಪೀಠಿಕೆ ಕಟ್ಟಿದವರಲ್ಲಿ ಅವರೊಬ್ಬರು. ಈ ಸಂಗತಿಯನ್ನು ಬೇರೆ ಕಡೆ ಪ್ರಸ್ತಾಪಿಸಿದೆ. ೧೯೬೫ರ ಮೇ ತಿಂಗಳಲ್ಲಿ ಕೃಷ್ಣಯ್ಯರ್ ಅವರು ಗೋಖಲೆ ಸಂಸ್ಥೆಗೆ ಭೇಟಿ ಕೊಟ್ಟು ಅಲ್ಲಿಯ ಸಭಾಮಂದಿರ ಪುಸ್ತಕಭಂಡಾರ ಮೊದಲಾದ ಕಾರ್ಯಸಾಧನಗಳನ್ನು ನೋಡಿ ಸಂತೋಷಪಟ್ಟರು. ಅಲ್ಲಿ ಅವರನ್ನು ಕಾಣುವುದಕ್ಕಾಗಿ ಸ್ನೇಹಿತರು ವ್ಯವಸ್ಥೆ ಮಾಡಿದ ಸತ್ಕಾರೋಪಚಾರಗಳನ್ನು ಸ್ವೀಕರಿಸಿ ತಮ್ಮ ಸಂತೃಪ್ತಿಯನ್ನು ಸೂಚಿಸಿ ಹರಸಿದರು. ಎಲ್ಲರೂ ತುಂಬ ಸಂತೋಷಪಟ್ಟೆವು.

ಕೃಷ್ಣಯ್ಯರು ಸರಳ ಸ್ವಭಾವದವರು. ಅವರಲ್ಲಿ ಕೃತ್ರಿಮವಾಗಲಿ ಆಡಂಬರವಾಗಲಿ ಕೊಂಚವೂ ಇರಲಿಲ್ಲ. ಒಳ್ಳೆಯದೆಂಬುದರಲ್ಲಿ ನೈಜವಾದ ಪ್ರೀತಿ; ಒಳ್ಳೆಯದನ್ನು ಮಾಡಬೇಕೆಂಬ ಶ್ರದ್ಧೆ. ನಿರ್ಮಲವಾದ, ಪ್ರತಿಫಲಾಪೇಕ್ಷೆಯಿಲ್ಲದ ಒಳ್ಳೆಯತನ ಅವರದು.

“ಕ್ಷಾಮ ನಿವಾರಣೆ”

೧೯೦೮-೯ರ ಸುಮಾರಿನಲ್ಲಿ ಬೆಂಗಳೂರಿನಲ್ಲಿ ಕ್ಷಾಮ ಬಂದಿತು. ಜನ ಬಹು ಮಂದಿ ಅನ್ನೋದಕಗಳಿಗಾಗಿ ಪರದಾಡುತ್ತಿದ್ದರು. ಕ್ಷಾಮನಿವಾರಣೆಗಾಗಿ ಮಹಾಜನಪ್ರಯತ್ನ ನಡೆಯಬೇಕೆಂದು ಕೃಷ್ಣಯ್ಯರೂ ನಾನೂ ಇನ್ನು ಒಬ್ಬಿಬ್ಬರೂ ಆಲೋಚನೆ ಮಾಡಿ ಆ ತರದೂದಿನ ಬಗೆಗೆ ಮಾತನಾಡುವುದಕ್ಕಾಗಿ ಒಂದು ಸಣ್ಣ ಸಭೆ ಸೇರಿಸಿದೆವು. ಅದು ಕೃಷ್ಣಯ್ಯರ ಮನೆಯ ಮಹಡಿಯ ಮೇಲೆ. ಆ ದಿನ ಕೃಷ್ಣಯ್ಯರ ಭಾವಂದಿರಾದ ಕೆ.ಎ. ಕೃಷ್ಣಸ್ವಾಮಿ ಅಯ್ಯರವರು ಬೆಂಗಳೂರಿಗೆ ಬಂದು ಕೃಷ್ಣಯ್ಯರ ಮನೆಯಲ್ಲಿ ಇಳಿದು ಕೊಂಡಿದ್ದರು. ಕೃಷ್ಣಸ್ವಾಮಿ ಅಯ್ಯರವರು ಆ ದಿನ ನಮ್ಮ ಸಭೆಗೆ ಬಂದಿದ್ದರು. ಆಗ ಅವರು ಮದರಾಸಿನಲ್ಲಿ ಬಿ.ಎಲ್. ಪರೀಕ್ಷೆಯ ಸಮಾಪನಭಾಗದಲ್ಲಿದ್ದರು. ಮದರಾಸಿನಿಂದ ಮಧುಗಿರಿಗೆ ಹೋಗತಕ್ಕವರಾಗಿ ಮಾರ್ಗವಶಾತ್ ಬೆಂಗಳೂರಿನಲ್ಲಿ ಒಂದು ದಿನ ತಂಗಿದ್ದರು. ನನಗೆ ನಾಗೇಶ್ವರಯ್ಯರವರ ಪ್ರಥಮ ಪರಿಚಯವಾದದ್ದು ಅಲ್ಲಿ.

ಆ ದಿನ ಕ್ಷಾಮನಿವಾರಣ ಸಭೆಯ ನಮ್ಮ ಮಾತುಕಥೆ ಮುಗಿಯುವ ಹೊತ್ತಿಗೆ ಅಲ್ಲಿಗೆ ಬಂದಿದ್ದ ಕೃಷ್ಣಸ್ವಾಮಿ ಅಯ್ಯರ್‌ರವರು ನಮ್ಮನ್ನು ಕುರಿತು ನಗುತ್ತಾ ಹೇಳಿದರು:

“ಏನಪ್ಪಾ–ಹೀಗೇನೇ ಕ್ಷಾಮನಿವಾರಣೆ ಮಾಡುವುದು?” ಮಾತು ಬೆಳೆದ ಮೇಲೆ ನನ್ನ ಕಡೆ ಕೈ ತೋರಿಸಿ–

“ಮೊದಲು ನಿನಗಿರುವ ಕ್ಷಾಮವನ್ನು ನಿವಾರಣೆ ಮಾಡಿಕೊಳ್ಳಯ್ಯ. ದೇಶದ ಕ್ಷಾಮ ನಿವಾರಣೆ ನಿಮ್ಮಂಥವರ ಕೈಯಲ್ಲಾದೀತೆ? ಅದಕ್ಕೆ ಎಷ್ಟು ಹಣ ಬೇಕು! ಎಷ್ಟು ಜನ ಬೇಕು!”

ನಾನು “ಕರ್ಮಣ್ಯೇವಾಧಿಕಾರಸ್ತೇ” ವಾಕ್ಯವನ್ನು ಹೇಳಿ ವಾದದಲ್ಲಿ ಗೆದ್ದೆನೆಂದುಕೊಂಡೆ.

ಕೃಷ್ಣಸ್ವಾಮಿ ಅಯ್ಯರವರು “ಆ ವಾಕ್ಯವನ್ನು ಅರ್ಥಮಾಡಿಕೊಂಡಿದ್ದೀಯೊ?” ಎಂದರು. “ಕರ್ಮಣಿ ಎಂದರೆ ಯಾವ ಕರ್ಮ? ಕ್ಷಾಮ ನಿವಾರಣಾ ಕರ್ಮವನ್ನು ನಿನಗೆ ನಿಯಮಿಸಿದವರು ಯಾರು? ಆ ಕರ್ಮಕ್ಕೆ ನೀನು ಅಧಿಕಾರಿಯೊ?” ಹೀಗೆ ವಾದ ತೆಗೆದರು.

ನಾನು ಬುದ್ಧಿ ತಂದುಕೊಂಡೆ. ಕೃಷ್ಣಸ್ವಾಮಿ ಅಯ್ಯರಿಗೂ ನನಗೂ ಆ ಹಿಂದೆಯೇ ಪರಿಚಯವಿತ್ತು. ಆ ಕಥೆಯನ್ನು ಬೇರೆ ಕಡೆ ಹೇಳಿದ್ದೇನೆ. ಅವರು ಎಂಥ

ಪ್ರಾಮಾಣಿಕರೆಂಬುದಕ್ಕೆ ಈಗ ಹೇಳಿದ್ದು ನಿದರ್ಶನ. ತಪ್ಪನ್ನು ತಿದ್ದಬೇಕು. ಆದರೆ ಸ್ನೇಹದ ರೀತಿಯಲ್ಲಿ ಪ್ರೀತಿಯ ಧ್ವನಿಯಿಂದ ತಿದ್ದಬೇಕು. ಇದು ಅವರ ದಾರಿ. ಕೃಷ್ಣಸ್ವಾಮಿ ಅಯ್ಯರವರಿಗೆ ಕೃಷ್ಣಯ್ಯರಲ್ಲಿ ಅತ್ಯಂತ ಪ್ರೇಮ.

ಒಂದು ಅಪಘಾತ

೧೯೧೪-೧೫ರ ಸುಮಾರಿನಲ್ಲಿ ಒಂದು ವಿಶೇಷ ಸಂಗತಿ ನಡೆಯಿತು. ಕೃಷ್ಣಯ್ಯರ ಮನೆ ವಿಶಾಲವಾದದ್ದೆಂದೂ ಮೂರು ಭಾಗಗಳದ್ದೆಂದೂ ಹೇಳಿದ್ದೆನಷ್ಟೆ. ಅದರಲ್ಲಿ ಮೂರನೆಯ ಭಾಗ ಚಿಕ್ಕಪೇಟೆಗೆ ದಕ್ಷಿಣದ ಕಡೆಯ ಪ್ಯಾರಲಲ್ ರಸ್ತೆಗೆ ಸೇರಿಕೊಂಡಿತ್ತು. ಆ ಭಾಗದಲ್ಲಿ ಅಡ್ವೊಕೇಟ್ ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರು ವಾಸಮಾಡುತ್ತಿದ್ದರು. ಒಂದು ದಿನ ಸಂಜೆ ಐದು ಘಂಟೆ. ಶ್ರೀನಿವಾಸಯ್ಯಂಗಾರ್ಯರ ಭಾರ್ಯೆ ಅರಿಶಿನ ಕುಂಕುಮಕ್ಕಾಗಿ ಮಕ್ಕಳನ್ನು ಕರೆದುಕೊಂಡು ಹೋಗಿದ್ದರು. ಮನೆಯಲ್ಲಿದ್ದವರು ಶ್ರೀನಿವಾಸಯ್ಯಂಗಾರ್ಯರೊಬ್ಬರೇ. ಆಗ ಅವರಿಗೆ ತೋಚಿತು–ಅಟ್ಟದ ಮೇಲೆ ತಿಂಡಿ ಮಾಡಿಟ್ಟಿದ್ದಾಳೆ ಅದನ್ನು ಧಾರಾಳವಾಗಿ ಸೇವಿಸುವುದಕ್ಕೆ ಇದು ಸರಿಯಾದ ಕಾಲ ಎಂದು. ಈ ಯೋಚನೆ ಮಾಡಿ ಅಟ್ಟಕ್ಕೆ ಏಣಿ ಹಾಕಿ ಒಂದೆರಡು ಮೆಟ್ಟಲು ಹತ್ತಿದ. ನೆಲವೂ ವಜ್ರಗಾರೆ ಮಾಡಿ ಬಹು ನಯವಾಗಿತ್ತು. ಏಣಿ ಜಾರಿ ನಮ್ಮ ಶ್ರೀನಿವಾಸಯ್ಯಂಗಾರಿ ನೆಲಕ್ಕೆ ಬಿದ್ದ ಅಂಗಾತನಾಗಿ. ಇದರ ಶಬ್ದ ಪಕ್ಕದ ಮನೆಯವರಿಗೆ (ಎರಡನೆಯ ಭಾಗ) ಕೇಳಿಸಿ ಗಾಬರಿಪಟ್ಟು ನೋಡಿದರು. ತಲೆಯೊಡೆದು ರಕ್ತ ಬರುತ್ತಿದ್ದುದು ಕಾಣಿಸಿತು. ಅವರು ಮೊದಲನೆಯ ಭಾಗದಲ್ಲಿದ್ದ ಕೃಷ್ಣಯ್ಯರಿಗೆ ವರ್ತಮಾನ ತಿಳಿಸಿದರು. ನಾನೂ ಅಲ್ಲಿದ್ದೆ. ಎಲ್ಲರೂ ಓಡಿ ಬಂದೆವು. ಶ್ರೀನಿವಾಸಯ್ಯಂಗಾರರ ಪತ್ನಿಯನ್ನು ಕರೆಸಿದವು. ಡಾ ॥ ಗುಂಡಣ್ಣನವರಿಗೆ ಹೇಳಿಕಳುಹಿಸಿದೆವು. ಅವರು ನೋಡಿ, ಈಗಲೇ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸತಕ್ಕದ್ದು–ಎಂದರು. ಅದರಂತೆ ಮಾಡಿದೆವು. ಆಸ್ಪತ್ರೆಯಲ್ಲಿ ಸುಮಾರು ಎರಡು ತಿಂಗಳಿದ್ದ ಬಳಿಕ ಗಾಯ ವಾಸಿಯಾಗಿ ಶ್ರೀನಿವಾಸಯ್ಯಂಗಾರ್ಯರು ಮನೆಗೆ ಬಂದರು. ಆಗ ಡಾಕ್ಟರುಗಳು ಹೇಳಿದರು: “ಜೀವ ಉಳಿಯಿತು. ಆದರೆ ತಲೆಯ ಹಿಂಭಾಗದಲ್ಲಿ ಮೆದುಳಿನ ಸಮೀಪದಲ್ಲಿ ಪೆಟ್ಟಾದದ್ದರಿಂದ ಇವರಿಗೆ ಮನಸ್ಸು ಸಮಾಧಾನವಾಗುವಂತೆ ನೀವೆಲ್ಲ ನೋಡಿಕೊಳ್ಳಬೇಕು. ಆತನಿಗೆ ಯಾವುದೂ ಅತಿಯಾಗಬಾರದು. ಕೋಪ, ಚಿಂತೆ, ಸಂತೋಷ ಯಾವುದೂ ಮಿತಿ ಮೀರದಂತೆ ಯಾವಾಗಲೂ ಈತನನ್ನು ಸಮಚಿತ್ತದಲ್ಲಿಟ್ಟಿರಬೇಕು” ಎಂದು. ಶ್ರೀನಿವಾಸಯ್ಯಂಗಾರ್ಯರು ಆಸ್ಪತ್ರೆಯಲ್ಲಿದ್ದಷ್ಟು ದಿನವೂ ಆತನನ್ನ ಒಡಹುಟ್ಟಿದವನಂತೆ ಕಾಪಾಡಿದವರು ಕೃಷ್ಣಯ್ಯರ್.

ಧರ್ಮಕಾರ್ಯಗಳು

೧೯೧೬-೧೭ರ ಸುಮಾರಿನಲ್ಲಿ ನಾವು ಗೋಖಲೆ ಎಜ್ಯುಕೇಷನ್ ಲೀಗ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದೆವು. ಒಂದು ನೈಟ್ ಸ್ಕೂಲನ್ನು ಗುಡ್‌ಷೆಡ್ ರಸ್ತೆಯ ಹತ್ತಿರ ಕಾರ್ಮಿಕರ ಪ್ರಯೋಜನಕ್ಕಾಗಿ ನಡಸುತ್ತಿದ್ದೆವು. ಯುಗಾದಿ, ದೀವಳಿಗೆ ಹಬ್ಬದ ದಿನಗಳಲ್ಲಿ ಮಾಗಡಿ ರಸ್ತೆಯ ಆಸ್ಪತ್ರೆಗಳ ರೋಗಿ ಜನರಿಗೆ ಭಕ್ಷ್ಯ ಹಣ್ಣುಗಳನ್ನೂ ಬಟ್ಟೆಬರೆಗಳನ್ನೂ ಹಂಚುತ್ತಿದ್ದೆವು. ಈ ಧರ್ಮ ಕಾರ್ಯಗಳಲ್ಲಿ ಮುಖ್ಯಪಾತ್ರ ವಹಿಸುತ್ತಿದ್ದವರು ಕೃಷ್ಣಯ್ಯರ್.

ಕೃಷ್ಣಯ್ಯರಿಗೆ ಸಂಸ್ಕೃತದಲ್ಲಿ ತುಂಬ ಅಭಿಮಾನ. ವಿದ್ವಾನ್ ಶ್ರೀನಿವಾಸ ತಾತದೇಶಿಕರು, ವಿದ್ವಾನ್ ದೇವನಗೊಂದಿ ನಾರಾಯಣ ಶಾಸ್ತ್ರಿಗಳು ಮೊದಲಾದ ಪಂಡಿತರನ್ನು ಪ್ರೋತ್ಸಾಹಿಸುತ್ತಿದ್ದರು. ಅವರಲ್ಲಿ ಕಾವ್ಯಪಾಠ ಶಾಸ್ತ್ರಪಾಠ ಮಾಡಿಕೊಳ್ಳಬೇಕೆಂದು ಆಶೆ, ಆದರೆ ಅವರಿಗಿದ್ದ ಉದ್ಯೋಗಬಾಹುಳ್ಯದಲ್ಲಿ ಪಾಠಕ್ಕೆ ಕಾಲ ಸಿಕ್ಕಲಿಲ್ಲ. ನಾನು ಈ ಹೊತ್ತು ಬಳಸುತ್ತಿರುವ ಕಾಲಿದಾಸನ ಶಾಕುಂತಲ ನಾಟಕದ ಪುಸ್ತಕ ಕೃಷ್ಣಯ್ಯರು ನನಗೆ ಕೊಟ್ಟದ್ದು. ಅವರು ಬಿ.ಎ. ತರಗತಿಯಲ್ಲಿ ಅದನ್ನು ವ್ಯಾಸಂಗ ಮಾಡಿದ್ದರಂತೆ.

ಕೃಷ್ಣಯ್ಯರೂ ಅವರ ಸ್ನೇಹಿತರು ಕೆಲವರೂ ಸೇರಿ ಸನ್ಮಿತ್ರ ಮಂಡಲಿ ಎಂಬ ಸಂಘವೊಂದನ್ನು ಸ್ಥಾಪಿಸಿಕೊಂಡಿದ್ದರು. ಆ ಮಂಡಲಿಯು ಒಂದು ಗ್ರಂಥ ಭಂಡಾರವನ್ನು ಸೇರಿಸಿತ್ತಂತೆ. ಅದಕ್ಕೆ ಸೇರಿದ ಒಂದೆರಡು ಪುಸ್ತಕಗಳು ನನ್ನ ಕೈಗೆ ಬಂದು ಈಗ ಅವು ಗೋಖಲೆ ಸಂಸ್ಥೆಯ ಗ್ರಂಥಭಂಡಾರದಲ್ಲಿವೆ: ದಾದಾಭಾಯಿ ನವರೋಜಿ, ರಮೇಶ ಚಂದ್ರದತ್, ಸರ್ ವಿಲಿಯಂ ಡಿಗ್ಬಿ ಮೊದಲಾದವರ ಗ್ರಂಥಗಳೆಂದು ಜ್ಞಾಪಕ.

ಕೃಷ್ಣಯ್ಯರವರು ಕರುಣಾಳು, ಅವರ ಮನೆಯಲ್ಲಿ ಹತ್ತಾರು ಮಂದಿ ಅನ್ನ ತಿಂದು ಬೆಳೆದರು. ಹತ್ತಾರು ಮಂದಿ ವಿದ್ಯಾರ್ಥಿಗಳಿಗೆ ಕೃಷ್ಣಯ್ಯರು ವಸತಿ ಸಹಾಯ, ವಸ್ತ್ರ ಸಹಾಯ, ದ್ರವ್ಯ ಸಹಾಯಗಳನ್ನು ಕೊಟ್ಟರು. ಅವರಲ್ಲಿಗೆ ಸಹಾಯಾರ್ಥಿಯಾಗಿ ಬಂದವನು ನಿರಾಶನಾಗಿ ಹಿಂತಿರುಗಿದ್ದೇ ಇಲ್ಲ.

ನಡತೆಯಲ್ಲಿ ಕೃಷ್ಣಯ್ಯರು ಪರಿಶುದ್ಧರು. ಯಾವ ವಿಧವಾದ ಕೊಳಕೂ ಸೋಂಕಿದವರಲ್ಲ.

೨೨

ಚಿಕಿತ್ಸಾ ಸಂಗ್ರಹ

ವೈದ್ಯವಿಜ್ಞಾನಕ್ಕೆ ಸಂಬಂಧಪಟ್ಟ ಗ್ರಂಥಗಳನ್ನೂ ಲೇಖನಗಳನ್ನೂ ಬರೆಯುವವರು ತಮ್ಮ ಸಿದ್ಧಾಂತಗಳಿಗೆ ಆಧಾರವಾಗಿ ಒಬ್ಬಾನೊಬ್ಬ ರೋಗಿಯ ಕಾಯಿಲೆ ಆರಂಭವಾದದ್ದು ಹೇಗೆ, ಉಲ್ಬಣವಾದದ್ದು ಹೇಗೆ, ಒಂದಾನೊಂದು ಔಷಧವನ್ನು ಸೇವಿಸಿದ್ದರಿಂದ ಕಾಯಿಲೆ ಹೇಗೆ ಮಂಗಮಾಯ–ಇತ್ಯಾದಿ ವಿವರಗಳನ್ನು ನಿರುಪಿಸುತ್ತಾರೆಂದು ಕೇಳಿದ್ದೇನೆ. ನಾನು ಕಾಯಿಲೆಗಳನ್ನು ಅಷ್ಟಿಷ್ಟು ಅನುಭವಿಸಿರುವವನು; ವೈದ್ಯ ವಿಜ್ಞಾನದ ಪ್ರಗತಿಯಲ್ಲಿ ನನಗೆ ಆಸಕ್ತಿಯುಂಟು. ಮುಂದಿನ 'ಫಾರ್ಮಕೋಪಿಯ' ಎಂದರೆ ಚಿಕಿತ್ಸಾ ಸಂಗ್ರಹ ಗ್ರಂಥಗಳನ್ನು ಬರೆಯುವವರಿಗೆ ಸಹಾಯವಾಗಲಿ ಎಂಬ ದೃಷ್ಟಿಯಿಂದ ನನಗೆ ತಿಳಿದ ಕೆಲವು 'ಕೇಸ್ ಹಿಸ್ಟರಿ' ಗಳನ್ನು ದಾಖಲೆ ಮಾಡುವುದು ಇಲ್ಲಿ ನನ್ನ ಉದ್ದೇಶ. ಸದ್ಯಕ್ಕೆ ಎರಡು ಕಾಯಿಲೆಗಳನ್ನು ಪ್ರಸ್ತಾವಿಸಬೇಕೆಂದಿದ್ದೇನೆ: (೧) ಹಸಿವು; (೨) ಅಜೀರ್ಣ. ಕೆಲವರು ಪ್ರಸಿದ್ಧ ಪುರುಷರೂ, ಪ್ರಸಿದ್ಧರಲ್ಲದ ಒಬ್ಬಿಬ್ಬರೂ ಈ ಕಾಯಲೆಗಳಿಗೆ ಹೇಗೆ ಪರಿಹಾರ ಕಂಡುಕೊಂಡಿದ್ದರೆಂಬುದನ್ನು ನೋಡೋಣ.

ಮೈಸೂರು ಸಂಸ್ಥಾನದ ದಿವಾನರುಗಳಲ್ಲಿ ಕೆಲವರ ಭೋಜನ ಪರಿಶವಣೆಗಳನ್ನು ಕುರಿತು ನಾನು ಕೇಳಿರುವ ಕಥೆಗಳಲ್ಲಿ ಕೆಲವನ್ನು ಹೇಳುತ್ತೇನೆ.

ಶೇಷಾದ್ರಿ ಅಯ್ಯರ್

ಸರ್. ಕೆ. ಶೇಷಾದ್ರಿ ಅಯ್ಯರ್ರವರು ಒಳ್ಳೆಯ ಊಟಗಾರರು. ಪ್ರತಿದಿವಸ ಅವರ ಭೋಜನದಲ್ಲಿ ತರಕಾರಿಗಳೂ, ಭಕ್ಷ್ಯ ಭೋಜ್ಯಗಳೂ ನಾಲ್ಕಾರು ಬಗೆಯವು ಇರುತ್ತಿದ್ದವಂತೆ. ಆರು ತಿಂಗಳಿಗೆ ಒಂದು ಸಾರಿಯೋ ಇನ್ನೊಂದೋ ಅವರಿಗೆ ಅಜೀರ್ಣದ ಶಂಕೆಯುಂಟಾದರೆ ಆಗ ಅವರು ಮಾಡಿಕೊಳ್ಳುತ್ತಿದ್ದ ಔಷಧದ ರೀತಿ ಹೀಗೆ: ಸೊಗಸಾದ ಚಿರೋಟಿ ಮಾಡಿಸುವುದು. ಒಂದಡಿ ಮಧ್ಯರೇಖೆಯುಳ್ಳ ದೊಡ್ಡ ಬೆಳ್ಳಿಯ ಡಬರಿಯಲ್ಲಿ ಅಂಗೈ ದಪ್ಪ ಸಕ್ಕರೆ ಹರಡಿಸುವುದು. ಅದರ ಮೇಲೊಂದು ಚಿರೋಟಿ. ಮತ್ತೊಂದು ಪದರ ಸಕ್ಕರೆ. ಇನ್ನೊಂದು ಚಿರೋಟಿ, ಮತ್ತೆ ಸಕ್ಕರೆ, ಮತ್ತೆ ಚಿರೋಟಿ. ಹೀಗೆ ಮೂರು ಪದರವಾದ

ಬಳಿಕ ಒಂದು ಹಿಡಿ ಮೆಗ್ನೀಸಿಯಂ ಸಲ್ಫೇಟ್ ಎಂಬ ಭೇದಿಯುಪ್ಪು. ಮತ್ತೆ ಅದರ ಮೇಲೆ ಚಿರೋಟಿ ಸಕ್ಕರೆ ಪದರಗಳು–ಡಬರಿ ಭರ್ತಿಯಾಗುವಂತೆ.

ಇಷ್ಟರ ಮೇಲೆ ಬಿಸಿಬಿಸಿ ಕಾಯಿಸಿದ ಹಾಲು ಸುರಿಯುವುದಂತೆ. ಹಾಲು ಸುರಿಯುತ್ತಿದ್ದಂತೆ ಫೋರ್ಕ್ (Fork) ಮುಳ್ಳುಚಮಚಗಳನ್ನು ಇಬ್ಬರು ಹಿಡಿದುಕೊಂಡು ಮೇಲಿನಿಂದ ಕೆಳಗಿನವರೆಗೂ ತಿವಿದು ತಿರುವಿಹಾಕುವುದು. ಹೀಗೆ ಆ ಭಕ್ಷ್ಯ ಮೆತ್ತಗಾಗಿ ಅರ್ಧಪಾನಕ ಸ್ಥಿತಿಗೆ ಬಂದಾಗ ಶೇಷಾದ್ರಿ ಅಯ್ಯರವರು ಅಷ್ಟನ್ನು ಸೇವಿಸಿದ ಬಳಿಕ ಆ ಹೊತ್ತು ಉಪವಾಸವಿರುವುದು.

ಮಾರನೆಯ ದಿನದಿಂದ ಯಥಾಪ್ರಕಾರ.

ಟಿ. ಮಾಧವರಾವ್

ರಾಜಾ ಸರ್ ಟಿ. ಮಾಧವರಾಯರ ತಿಂಡಿಪೋತತನ ಇದಕ್ಕಿಂತ ಪ್ರಸಿದ್ಧವಾದದ್ದು. ಅವರ ಆಫೀಸ್ ಕೋಣೆಗೆ ಸೇರಿಕೊಂಡತಿದ್ದ ಹಿಂಭಾಗದ ಕೋಣೆಯಲ್ಲಿ ನಾಲ್ಕೈದು ಕುಂಪಟಿಗಳಲ್ಲಿ ಬೆಂಕಿಯನ್ನು ಸಿದ್ಧ ಮಾಡಿಟ್ಟುಕೊಂಡು ಅಡಿಗೆಯವರಿರುತ್ತಿದ್ದರು. ಸುತ್ತಲೂ ಮಂಚಿಕೆಗಳ ಮೇಲೆ ಬಾಂಡಲೆಗಳು, ತುಪ್ಪದ ಡಬ್ಬಗಳು, ವಿಧವಿಧವಾದ ಕಲಸಿದ ಹಿಟ್ಟು, ಚಕ್ಕಲಿ ಹಿಟ್ಟು, ಲಾಡು ಹಿಟ್ಟು–ಹೀಗೆ ವಿಧವಿಧವಾದ ಹಿಟ್ಟುಗಳನ್ನೂ, ಕೊತ್ತಂಬರಿ ಮೊದಲಾದ ಸಾಂಬರ್ ದ್ರವ್ಯಗಳನ್ನೂ ಸಿದ್ಧಪಡಿಸಿ ಇಟ್ಟಿರುತ್ತಿದ್ದರು.

ಸರ್. ಟಿ. ಮಾಧವರಾಯರು ಆಫೀಸ್ ರೂಮಿನಲ್ಲಿ ಕುಳಿತು ತಾವೇ ಏನೋ ಬರೆಯುತ್ತಿರುವವರು ಅಥವಾ ತಾವು ಹೇಳಿ ಗುಮಾಸ್ತನ ಕೈಯಿಂದ ಬರೆಯಿಸುತ್ತಿರುವವರು. ಪಕ್ಕದ ಕೋಣೆಯಿಂದ ಅವರಿಗೆ ತಿಂಡಿ ತಂದುಕೊಡುತ್ತಿರುವವರು. ಮಸಾಲಾ ಅಡಿಗೆಯವರು ದೋಸೆ ತಂದುಕೊಟ್ಟರು ಎಂದಿಟ್ಟುಕೊಳ್ಳೋಣ. ಮಾಧವರಾಯರು ಒಂದು ಚೂರನ್ನು ಬಾಯಿಗೆ ಹಾಕಿಕೊಂಡೋ ಹಾಕಿಕೊಳ್ಳುವುದಕ್ಕೆ ಮುಂಚೆಯೋ,

“ಏನೋ? ಪಕೋಡ ಇಲ್ಲವೇನು?” –ಎನ್ನುವರು. ಮರುಕ್ಷಣದಲ್ಲಿಯೇ ಬಿಸಿಬಿಸಿ ಪಕೋಡ ಅವರ ಮುಂದೆ ಬರುವುದು. ಆಮೇಲೆ,

“ಎಷ್ಟು ದಿನವಾಯಿತೋ ‘ಫೀವರ್’ ತಿಂದು?”

–ಎನ್ನುವರು. ಉತ್ತರಕ್ಷಣದಲ್ಲಿಯೇ ‘ಫೀವರ್’ ಸಿದ್ಧ. ಹಾಗೆ ಅವರು ಕೇಳಿದ ತಿಂಡಿ ತತ್‌ಕ್ಷಣ ಬಾರದಿದ್ದರೆ ಅಡಿಗೆಯವನಿಗೆ ಎತ್ತಂಗಡಿ.

ಹೀಗೆ ಅವರು ಮನೆಯಲ್ಲಿದ್ದಷ್ಟು ಹೊತ್ತೂ ಏನಾದರೊಂದು ತಿನ್ನುತ್ತಲೇ ಇದ್ದರಂತೆ. ಅವರು ಹಾಗೆ ತಿನ್ನುತ್ತಿದ್ದದ್ದರಿಂದಲೇ ಅವರಿಗೆ ಅಂಥ ಅದ್ಭುತವಾದ ಮೇಧಾಶಕ್ತಿ! –ಎಂದು ಕೆಲಮಂದಿಯ ವಾದ.

ಸರ್. ಎ. ಶೇಷಯ್ಯಶಾಸ್ತ್ರಿಗಳವರೂ ಭೋಜನಕ್ಕೆ ಎತ್ತಿದ ಕೈ. ಇವರು ಪುದುಕೋಟೆ ಸಂಸ್ಥಾನದ ದಿವಾನರಾಗಿದ್ದು ಹೆಸರುವಾಸಿಯಾಗಿದ್ದರು. ಮಹಾಮೇಧಾವಿಗಳು. ಒಳ್ಳೆಯ ಸಂಸ್ಕೃತ ವಿದ್ವಾಂಸರು. ಇವರು ಸ್ಥೂಲಕಾಯರು. ಮೈ ಬಹು ಸ್ಥೂಲ. ಏಳುವುದು,

ಕೂಡುವುದು, ಓಡಾಡುವುದು, ಬಹುಶ್ರಮ. ಅವರು ಭೋಜನಕ್ಕಾಗಿ ಮಾಡಿಕೊಂಡಿದ್ದ ಏರ್ಪಾಟು ಕೇಳಲು ಚೆನ್ನಾಗಿದೆ.

ಕೋರ್ಟುಗಳಲ್ಲಿರುವಂಥ ಒಂದು ಅರ್ಧಚಂದ್ರಾಕಾರದ ಮೇಜಿನ ಮಧ್ಯದ ಬಿಡುವಿನಲ್ಲಿ ಅವರು ಕೊಡುತ್ತಿದ್ದರು–ಪದ್ಮಾಸನ ಹಾಕಿಕೊಂಡು ನೆಲದಮೇಲೆ ಕೂಡುತ್ತಿದ್ದರು. ಎದೆಯ ಎತ್ತರಕ್ಕೆ ಸರಿಯಾಗಿ ಆ ಮೇಜು. ಅವರ ಬೃಹತ್ಕುಕ್ಷಿಯ ಗಾತ್ರಕ್ಕೆ ಅನುವಾಗಿ ಮೇಜಿನ ಮಧ್ಯದ ಬಿಡುತಿ. ಆ ಮೇಜಿನ ಮೇಲೆ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೂ ಬಾಳೆಯೆಲೆಗಳು. ನಾನಾ ಬಗೆಯ ಶಾಕಪಾಕ ಭಕ್ಷ್ಯಗಳು. ಅವರು ಎಲ್ಲಿ ಕೈ ಇಟ್ಟರೆ ಅಲ್ಲಿ ಒಂದು ಭಕ್ಷ್ಯ. ಬಗ್ಗಬೇಕಾದ ಪ್ರಯಾಸವಿಲ್ಲ. (ಸಾಧ್ಯವೂ ಇಲ್ಲ.) ಕೈಯಿಟ್ಟಕಡೆ ಭಕ್ಷ್ಯ. ಹೀಗೆ ಸಾವಕಾಶವಾಗಿ ಭೋಜನ ಮಾಡಿದವರು ಸರ್.ಎ. ಶೇಷಯ್ಯಶಾಸ್ತ್ರಿಗಳು.

ಆನಂದರಾಯರು

ಟಿ. ಆನಂದರಾಯರು ಭೋಜನದಲ್ಲಿ ತಂದೆ ಮಾಧವರಾಯರಂತಲ್ಲದೆ ಸಾಮಾನ್ಯರಂತಿದ್ದರೂ ಬಂಧುಮಿತ್ರರಿಗೆ ಭೋಜನ ಮಾಡಿಸುವುದರಲ್ಲಿ ಯಶೋವಂತರಾಗಿದ್ದರು. ಅತಿಥಿಪೂಜೆಯಲ್ಲಿ ಪ್ರಶಸ್ತರಾದ ಇನ್ನೊಬ್ಬರು ಎಳಂದೂರಿನ ಶ್ರೀಮಂತರಾದ ನರಸಿಂಗರಾವ್ ಪೂರ್ಣಯ್ಯನವರು. ನರಸಿಂಗರಾಯರೂ, ಆನಂದರಾಯರೂ ಭೋಜನಪಂಕ್ತಿಗಳ ಮೇಲ್ವಿಚಾರಣೆಗಾಗಿ ಇಬ್ಬರಿಬ್ಬರನ್ನು ನಿಯಮಿಸಿಕೊಂಡಿದ್ದರು. ಆ ಇಬ್ಬರು ಪಾಲಘಾಟ್ ಅಯ್ಯರ್ಗಳು. ಅವರು ಶುಭ್ರವಾದ ಬಟ್ಟೆಯುಟ್ಟು, ಕಿವಿಯಲ್ಲಿ ಹತ್ತುಕಡಕನ್ನೂ ಕೈಯಲ್ಲಿ ಉಂಗುರವನ್ನೂ ತೊಟ್ಟು, ಹಣೆಯ ಮೇಲೆ ವಿಭೂತಿಯಿಟ್ಟು ಅಂಗವಸ್ತ್ರವನ್ನು ಭುಜದ ಮೇಲೆ ಧರಿಸಿ, ಉಟ್ಟಿದ್ದ ದಟ್ಟಿಗಳನ್ನು ಮೊಳಕಾಲಿನಿಂದ ಕೊಂಚ ಮೇಲಕ್ಕೆ ಕಟ್ಟಿ ಪಂಕ್ತಿಗಳ ಎರಡು ಕೊನೆಗಳಲ್ಲಿ ಇಲ್ಲೊಬ್ಬ ಅಲ್ಲೊಬ್ಬ ನಿಲ್ಲುವರು; ಕೈಯಲ್ಲಿ ಬೀಸಣಿಗೆ ಹಿಡಿದು ಬೀಸುವ ಶಾಸ್ತ್ರ ಮಾಡುವರು. ಅವರ ಮುಖ್ಯ ಕರ್ತವ್ಯವೇನೆಂದರೆ ಸಾಲಿನ ಕೊನೆಯಲ್ಲಿ ನಿಂತು ಯಾವ ಯಾವ ಅತಿಥಿಯ ಎಲೆಯಲ್ಲಿ ಯಾವ ಯಾವ ಪದಾರ್ಥ ಮುಗಿದುಹೋಗಿದೆ, ಯಾವ ಯಾವ ಪದಾರ್ಥದಲ್ಲಿ ಹೆಚ್ಚು ರುಚಿ ಕಾಣುತ್ತಿದ್ದಾನೆ–ಎಂಬುದನ್ನು ತಾವು ಮಾತನಾಡದೆ ಕಣ್ಣಿಂದಲೇ ಕಂಡುಕೊಳ್ಳಬೇಕು. ಹಾಗೆ ಕಂಡು ಅಲ್ಲಿಗೆ ಬೇಕಾದ ಸಾಮಾನನ್ನು ತಮ್ಮ ಕೈಸನ್ನೆಯಿಂದ ಬಡಿಸುವವರಿಗೆ ತಿಳಿಸಿ ಆ ಪದಾರ್ಥ ಎಲೆಗೆ ಸೇರುವಂತೆ ನೋಡಿಕೊಳ್ಳಬೇಕು. “ಇದು ಬೇಕು” ಎಂದು ಯಾರೂ ಕೇಳುವ ಹಾಗಿರಬಾರದು. ಮೇಲ್ವಿಚಾರಕರು ಅತಿಥಿಗಳನ್ನು ಭೋಜನಾರಂಭಕ್ಕೆ ಮೊದಲೇ ಕಂಡು ಕೈಮುಗಿದು ಬೇಡಿಕೊಳ್ಳುವರು:

“ನಿಮಗೆ ಏನು ಬೇಕಾದರೂ ದಯವಿಟ್ಟು ಅದನ್ನು ಬಾಯಿಂದ ಕೇಳಬೇಡಿ. ನಮ್ಮ ಕಡೆ ನೋಡಿದರೆ ಸಾಕು. ನೀವು ಪಲ್ಯ ಮಜ್ಜಿಗೆಪಳದ್ಯ–ಎಂದೇನಾದರೂ ಒಂದು ಸಾರಿ ಕೇಳಿದ್ದು ನಮ್ಮ ಯಜಮಾನರ ಕಿವಿಗೆ ಬಿದ್ದರೆ ನಮಗೆ ಎಂಟಾಣೆ ಜುಲ್ಮಾನೆ ಹಾಕುತ್ತಾರೆ. ನಾವು ಸಿದ್ಧರಾಗಿದ್ದೇವೆ ನಿಮ್ಮ ಸೇವೆ ಮಾಡಲು.”

ಆನಂದರಾಯರು ಮಾಡಿಸುತ್ತಿದ್ದ ಊಟವೂ ಭರ್ಜರಿ. ನರಸಿಂಗರಯರದೂ ಅಷ್ಟೇ. ನಾಲ್ಕು ವಿಧದ ಸಾರುಗಳು, ಎರಡು ವಿಧದ ಹುಳಿ, ಎರಡು ವಿಧದ ತೊವ್ವೆ, ಕರಿದದ್ದು, ಹುರಿದದ್ದು, ಸಿಹಿ, ಹುಳಿ, ಖಾರ, ಸಪ್ಪೆ–ಹೀಗೆ. ಭೋಜನ ಇಬ್ಬರು ಆತಿಥೇಯರ

ಮನೆಗಳಲ್ಲೂ ಸಮಸ್ತ ರುಚಿವಂತರಿಗೂ–ಹಲ್ಲಿದ್ದವರಿಗೂ, ಹಲ್ಲಿಲ್ಲದವರಿಗೂ ಸಹ–ತೃಪ್ತಿಪ್ರದವಾಗಿರುತ್ತಿತ್ತು.

ಗದಗಿನ ಪ್ರವಾಸ

ಕೆಲವು ವರ್ಷಗಳ ಹಿಂದೆ ನಾವು ಏಳೆಂಟು ಜನ ಪ್ರವಾಸದಲ್ಲಿದ್ದೆವು. ಮಾರ್ಗವಶಾತ್ ಗದಗಿಗೆ ಹೋದೆವು. ಅಲ್ಲಿಯಾರ ಮನೆಯಲ್ಲಿಯೋ ಇಳಿದುಕೊಂಡಿದ್ದೆವು: ಹೆಸರು ಮರೆತುಹೋಗಿದೆ. ಅಲ್ಲಿ ನಾವು ಊಟ ಮಾಡಬೇಕಾಗಿರಲಿಲ್ಲ. ನಮ್ಮ ಮುಖಂಡರಾದ ವೆಂಕಟನಾರಣಪ್ಪನವರು ಸ್ವಯಂಪಾಕದವರು, ಮಡಿ. ಮಿಕ್ಕವರಿಗೆ ಹುಯಿಲಗೋಳ ನಾರಯಣರಾಯರು ಮೊದಲಾದ ಸ್ನೇಹಿತರ ಮನೆಗಳಲ್ಲಿ ಔತಣ. ನಾವು ಆ ಊರು ತಲಪಿದ್ದು ಒಂದು ಸೋಮವಾರ ಸಂಜೆ ಎಂದಿಟ್ಟುಕೊಳ್ಳೋಣ. ಅಲ್ಲಿಂದ ಹೊರಟದ್ದು ಬುಧವಾರ ಬೆಳಗ್ಗೆ. ನಾವು ಅಲ್ಲಿದ್ದಾಗ ಆ ಮನೆಯವರಿಂದ ಪಾತ್ರೆ, ನೀರು ಮೊದಲಾದ ಸೌಕರ್ಯಗಳು ಯಥೇಷ್ಟವಾಗಿರುತ್ತಿದ್ದವು. ಆ ಉಪಕಾರಕ್ಕಾಗಿ ನಾವು ಅವರಿಗೆ ಏನಾದರೂ ಪ್ರತಿಫಲ ಕೊಡಬೇಕೆಂದು ವೆಂಕಟನಾರಣಪ್ಪನವರ ಹಟ. ಆದರೆ ಆ ಮನೆಯವರು ಹಣ ತೆಗೆದುಕೊಳ್ಳುವವರಲ್ಲ. ಕಡೆಗೆ ಯೋಚನೆ ಮಾಡಿ ಐದು ರೂಪಾಯಿ ನೋಟೊಂದನ್ನು ಅಲ್ಲಿ 'ಮರೆತು' ಬರತಕ್ಕದ್ದೆಂದು ನಿಶ್ಚಯಿಸಿ ಹಾಗೆ ನಡಸಿದೆವು. ಮನಸ್ಸು ಸಮಾಧಾನವಾಗಿತ್ತು. ಬೆಂಗಳೂರಿಗೆ ಬಂದ ನಾಲ್ಕೈದು ದಿವಸಗಳೊಳಗಾಗಿ ಆ ಐದು ರೂಪಾಯಿ ನಮಗೇ ವಾಪಸ್ ಬಂತು: "ನೀವು ಯಾರೋ ಇದನ್ನು ಮರೆತಂತೆ ತೋರುತ್ತದೆ. ಈ ಹಣ ನಮ್ಮದಲ್ಲ. ನೀವೇ ಹಿಂದಕ್ಕೆ ತೆಗೆದುಕೊಳ್ಳತಕ್ಕದ್ದು" –ಎಂದು ಮನಿ ಆರ್ಡರ್ ಕೂಪನ್ನಿನಲ್ಲಿ ಬರೆದಿತ್ತು. ವೆಂಕಟನಾರಣಪ್ಪನವರು ನಗುತ್ತಾ "ಏನಪ್ಪಾ, ಹೀಗೂ ಉಂಟೆ!" –ಎಂದರು. ಒಂದೆರಡು ದಿನ ಹೀಗೆ ಯೋಚನೆ ಮಾಡಿ ಆಮೇಲೆ ಅವರಿಗೆ ಪುನಃ ಬರೆದದ್ದಾಯಿತು. "ಈ ಹಣವನ್ನು ಹಿಂದಕ್ಕೆ ತೆಗೆದುಕೊಳ್ಳಲಾಗುವುದಿಲ್ಲ. ಹೇಗಾದರೂ ದಯವಿಟ್ಟು ನೀವೇ ವಿನಿಯೋಗಿಸಬೇಕು. ದೇವಸ್ಥಾನಕ್ಕೆ ಕೊಡಬಹುದು" –ಹೀಗೆಂದು. ಅನಂತರ ಏನಾಯಿತೋ ಗೊತ್ತಿಲ್ಲ.

ಋಣವಿಮೋಚನೆ

ಈಗ ನಾನು ಹೇಳಹೊರಡುವುದು ಈಗ್ಗೆ ಸುಮಾರು ೭೦ ವರ್ಷದ ಹಿಂದಿನ ಮಾತು. ಆಗ ನಮ್ಮ ಜನಕ್ಕೆ ಹೊಟೇಲಿನ ವಾಡಿಕೆ ಇರಲಿಲ್ಲ. ಬೆಂಗಳೂರು ವಿನಾ ಸಣ್ಣ ಊರುಗಳಲ್ಲಿ ಹೊಟೇಲ್ ಎಂಬ ಸಂಸ್ಥೆಯೇ ಇರಲಿಲ್ಲ. ಹೊಟೇಲನ್ನು ನಡಸುವುದೂ ಹೊಟೇಲಿನಲ್ಲಿ ಊಟ ಮಾಟಮಾಡುವುದೂ ಬ್ರಾಹ್ಮಣನಿಗೆ ಅಕಾರ್ಯವೆಂಬ ಭಾವನೆ ಸಾಮಾನ್ಯವಾಗಿತ್ತು.

ಆ ಕಾಲದಲ್ಲಿ ಯಾವುದಾದರೂ ಕೋರ್ಟು ಕಚೇರಿ ಕಾರ್ಯದ ನಿಮಿತ್ತದಿಂದ ಜನ ಬೆಂಗಳೂರು ಕೋಲಾರ ಮುಂತಾದ ಡಿಸ್ಟ್ರಿಕ್ಟುಗಳ ಮುಖ್ಯ ಪಟ್ಟಣಗಳಿಗೆ ಹೋಗಲೇ ಬೇಕಾದಾಗ, ಒಂದು ಉಪಾಯ ಮಾಡುತ್ತಿದ್ದರು. ತಮಗೆ ಗೊತ್ತಿದ್ದ ಒಬ್ಬಾನೊಬ್ಬ ಬಂಧು ಅಥವಾ ಇಷ್ಟರ ಮನೆಯಲ್ಲಿ ಇಳಿದುಕೊಳ್ಳುವುದು. ಆದರೆ ಅವರಿಗೆ ದುಡ್ಡು ಕೊಡತಕ್ಕದ್ದಲ್ಲ. ಅವರು ದುಡ್ಡು ತೆಗೆದುಕೊಳ್ಳತಕ್ಕವರೂ ಅಲ್ಲ. ಅನ್ನವಿಕ್ರಯವು ನಿಷಿದ್ಧ ವ್ಯಾಪಾರ. ಆದರೆ ಬಿಟ್ಟಿ ಊಟ ಮಾಡತಕ್ಕದ್ದಲ್ಲ. ಒಂದು ದೃಷ್ಟಿಯಿಂದ ಅದು ಋಣ. ಆ ಹೊರೆಯನ್ನೂ ಹೊತ್ತುಕೊಳ್ಳಬಾರದು. ಇದಕ್ಕೆ ಉಪಾಯವೇನೆಂದರೆ, ಊಟಕ್ಕೆ ಹೋದವರು ಸ್ನಾನಕ್ಕಾಗಿ ಹೋದಾಗ ಬಚ್ಚಲುಮನೆಯಲ್ಲಿಯೋ ಊಟದ ಮಣೆಯಕೆಳಗಡೆಯೋ ನಸ್ಯದ ಪಟ್ಟಿಯನ್ನು ಮರೆತುಬಿಡುವುದು; ಅದರಲ್ಲಿ ನಾಲ್ಕಾಣೆ ಎಂಟಾಣೆ ನಾಣ್ಯಗಳನ್ನು ಬಿಟ್ಟಿರುವುದು. ಮನೆಯ ಸ್ವಂತಕರ್ತರು ಅವನ್ನು ತೆಗೆದುಕೊಂಡು ಮಾತನಾಡದಿದ್ದರೆ ಒಳಗೊಳಗೇ ಸಂತೋಷ. ಅವರು ಆ ಪ್ರಸ್ತಾವವನ್ನೆತ್ತಿದರೆ ಊಟಮಾಡಿದವರು–

“ಓಹೋ–ಮರತೇಹೋಗಿದ್ದೆ. ಹಾಗೇನು? ಒಳ್ಳೆಯದಾಯಿತು” –ಎಂದು ಜವಾಬು ಹೇಳುವುದು. ಆಮೇಲೆಯೂ ಮನೆಯವರು ಅದು ಕೂಡದೆಂದು ಹಟ ಮಾಡಿದರೆ ಒಪ್ಪಿಕೊಂಡು, ಪೇಟೆಗೆ ಹೋಗಿ ಒಂದಷ್ಟು ಸೌತೇಕಾಯನ್ನೋ, ನಿಂಬೇಹಣ್ಣನ್ನೋ ತಂದು ಸುರಿದು,

“ಇದು ನಮ್ಮ ಊರಿನಿಂದ ಬಂದದ್ದು, ನಾನು ಕೊಂಡದ್ದಲ್ಲ. ಆದದ್ದರಿಂದ ನೀವು ಇದಕ್ಕೆ ಏನನ್ನೂ ಕೊಡಬಾರದು” –ಎಂದು ಹೇಳುವುದು.

ಹೀಗೆ ಆ ಕಾಲದ ಜನ ಊಟದ ಹಂಗನ್ನು ತೀರಿಸಿಕೊಳ್ಳುತ್ತಿದ್ದರು.

ನಂಜುಂಡಪ್ಪನ ಹೊಟೇಲು

ಇಂಥ ಕಾಲದಲ್ಲಿ–ಸುಮಾರು ೧೯೦೦ರಲ್ಲಿ ಮುಳುಬಾಗಲಿನಲ್ಲಿ ಹೋಟೇಲು ಇರಲಿಲ್ಲ. ಆಗ ಪ್ರಾರಂಭವಾಯಿತು ಆ ಊರಿನಲ್ಲಿ, ನವನಾಗರಿಕತೆಯ ಈ ಸಂಸ್ಥೆ. ಅದನ್ನು ಪ್ರಾರಂಭ ಮಾಡಿದಾತ ನಂಜುಂಡಯ್ಯನೆಂಬ ಬಡಗನಾಡು ಬ್ರಾಹ್ಮಣ. ಆತ ಆ ಊರಿನ ಸಮೀಪದ ಮೂಗಾಂಡಹಳ್ಳಿ ಪ್ರಾಂತದವ ಎಂದು ನನ್ನ ಜ್ಞಾಪಕ.

ಆತ ತನ್ನ ಸಹಾಯಕ್ಕಾಗಿ ಒಬ್ಬ ಹೆಂಗಸನ್ನೂ ಕರೆದುಕೊಂಡು ಬಂದಿದ್ದನೆಂದು ಜನ ಹೇಳಿಕೊಳ್ಳುತ್ತಿದ್ದರು.

ನಂಜುಂಡಪ್ಪನ ಹೊಟೇಲು ನಮ್ಮ ಬೀದಿಯ ಹಿಂದಿನ ಬೀದಿಯಲ್ಲಿ ಕೊಪ್ಪರದವರ ಸತ್ರದ ಮುಂದುಗಡೆಗೆ ಸಮೀಪವಾಗಿ-ನರ್ತಕ ಶಿಖಾಮಣಿ ಸೀತಮ್ಮ ಎಂಬಾಕೆಯ ಮನೆಯ ಪಕ್ಕದಲ್ಲಿ ಇತ್ತು. ಗಿರಾಕಿಗಳು ಅಷ್ಟೇನೂ ಹೆಚ್ಚಾಗಿರಲಿಲ್ಲ. ಮೊದಮೊದಲು ಎರಡು ಹೊತ್ತಿನ ಊಟದ ವ್ಯವಸ್ಥೆ ಮಾತ್ರ ಇತ್ತು. ಕ್ರಮೇಣ ಫಲಾಹಾರ ಸಾಮಾನುಗಳೂ ಬಂದವು.

ಆಗ್ಗೆ ನಾನು ಬಹುಶಃ ಕನ್ನಡ ಮೂರು–ನಾಲ್ಕನೆಯ ತರಗತಿಯಲ್ಲಿ ವಿದ್ಯಾರ್ಥಿಯಾಗಿದ್ದೆ. ನನ್ನ ಮನೆಯಲ್ಲಿ ವಿಧವಿಧವಾದ ತಿಂಡಿ ಪದಾರ್ಥಗಳು ದಿನಾಗಲೂ ಯಥೇಷ್ಟವಾಗಿ ಆಗುತ್ತಿದ್ದದ್ದರಿಂದಲೂ, ಮೇಲ್ಖರ್ಚಿಗಾಗಿ ನನ್ನ ಹಿರಿಯರಾರೂ ನನಗೆ ಕಾಸುಕೊಡುತ್ತಿರಲಿಲ್ಲವಾದದ್ದರಿಂದಲೂ, ನನಗೆ ನಂಜುಂಡಪ್ಪನ ಫಲಾಹಾರದ ಸಂತೋಷ ಸಿಕ್ಕಲಿಲ್ಲ. ಆದರೆ ನನಗೆ ಸಹಪಾಠಿಯೂ, ಸ್ನೇಹಿತನೂ ಆಗಿದ್ದ ವೆಂಕಟರಾಯ ಎಂಬಾತ ನನ್ನ ವಯಸ್ಸಿನವನು ಅಥವಾ ಒಂದೆರಡು ವರ್ಷ ದೊಡ್ಡವನು–ನಮ್ಮ ಮನೆಯಲ್ಲಿದ್ದ.

ವೆಂಕಟರಾಯನ ಅಪಥ್ಯ

ಈ ವೆಂಕಟರಾಯನ ವಿಷಯ ಹೇಳಬೇಕಾದದ್ದು. ಈತ ಮುಳಬಾಗಲಿನ ಸಮೀಪದ ಒಂದು ಹಳ್ಳಿಯವನು. ಈತನ ತಂದೆ ಸಂಜೀವಪ್ಪನವರು ನನ್ನ ತಾತನ ಕಕ್ಷಿಗಾರರು. (ಇದನ್ನು ಬೇರೆ ಕಡೆ ಪ್ರಸ್ತಾಪಿಸಿದ್ದೇನೆ,) ಸಂಜೀವಯ್ಯನವರ ಮನೆಗೂ ನಮ್ಮ ಮನೆಗೂ ಅತ್ಯಂತ ಗಾಢವಾದ ಸ್ನೇಹವಿತ್ತು. ಸಂಜೀವಯ್ಯನವರ ಹಿರಿಯ ಮಗ ವೆಂಕಟೇಶಯ್ಯ. ವೆಂಕಟೇಶಯ್ಯ ನನ್ನ ತಂದೆಗೆ ಅತ್ಯಂತ ಸ್ನೇಹಿತರು. ಕಿರಿಯ ಮಗ ನಮ್ಮ ವೆಂಕಟರಾಯ. ಈ ಹುಡುಗನನ್ನು ವಿದ್ಯಾಭ್ಯಾಸಕ್ಕಾಗಿ ನಮ್ಮ ಮನೆಯಲ್ಲಿ ಬಿಟ್ಟಿದ್ದರು. ಸಂಜೀವಯ್ಯನವರಾಗಲಿ, ವೆಂಕಟೇಶಯ್ಯನವರಾಗಲಿ ಹದಿನೈದಿಪ್ಪತ್ತು ದಿನಕ್ಕೊಮ್ಮೆ ಮುಳಬಾಗಲಿಗೆ ಬಂದಾಗ ವೆಂಕಟರಾಯನನ್ನು ನೋಡಿ ವಿಚಾರಿಸಿಕೊಂಡು, ಅವನ ಕೈಗೆ ಅರ್ಧಾಣೆ, ಒಂದಾಣೆ ಕೊಟ್ಟು ಪ್ರೋತ್ಸಾಹದ ಮಾತನ್ನಾಡಿ ಹೋಗುತ್ತಿದ್ದರು. ಹೀಗೆ ವೆಂಕಟರಾಯನ ಕೈಯಲ್ಲಿ ಕೊಂಚ ಪುಡಿಕಾಸು ಓಡಾಡುತ್ತಿತ್ತು.

ಒಂದು ದಿನ ವೆಂಕಟರಾಯನಿಗೆ ಹೊಟ್ಟೆ ನೋವಾಯಿತಂತೆ. ಅದನ್ನು ನನ್ನ ಅಜ್ಜಿ ಮುದುಕಿಯ ಸಂಗಡ ಹೇಳಿಕೊಂಡ. ಆಕೆಗೆ ಹಳೆಯ ಕಾಲದ ಗಿಡ ಮೂಲಿಕೆಗಳ ಔಷಧಗೊತ್ತಿತ್ತು. ಆದರೆ ಆಕೆ ಕೇಳಿದಳು:

"ಏನು ಅಪಥ್ಯ?"

ವೆಂಕಟರಾಯ ಬಾಯಿ ಬಿಡಲಿಲ್ಲ. ಅಂದು ರಾತ್ರಿ ಪುನಃ ಹೊಟ್ಟೆನೋವು ಬಂತು. ಆಗ ನನ್ನ ಸೋದರಮಾವ ಅವನನ್ನು ಕುರಿತು,

"ಗಟ್ಟಿಯಾಗಿ ಮುಲುಗಬೇಡ ಔಷಧ ಹಾಕಿಬಿಡುತ್ತಾರೆ" –ಎಂದ. ವೆಂಕಟರಾಯನು ಔಷಧ ಕುಡಿಯಲು ಹೆದರಿದ್ದ. ಆದರೆ ನೋವು. ಏನು ಮಾಡುವುದು? ಬೋರಲು ಮಲಗಿಕೊಂಡು ಕಿಬ್ಬೊಟ್ಟೆಯನ್ನು ನೆಲಕ್ಕೆ ಅದುಮಿಕೊಳ್ಳುವಂತೆ ನನ್ನ ಮಾವ ಅವನಿಗೆ ಉಪದೇಶ ಮಾಡಿದ. ವೆಂಕಟರಾಯ ಹಾಗೆ ಮಡಿದ. ಅಪಾನವಾಯು. ನಾನಾ ವಿಧ ಶಬ್ದಪರಂಪರೆ. ಇದು ರಾತ್ರಿಯೆಲ್ಲ ನಡೆಯಿತು. ಕೊಂಚ ನಿಲ್ಲುವುದು; ಹತ್ತು ನಿಮಿಷವಾದ ಮೇಲೆ ಮತ್ತೆ ಢರ್ ಭರ್ ಝುಂಕಾರಗಳು. ಮನೆಮಕ್ಕಳಿಗೆ ನಿದ್ರೆಯಿಲ್ಲ. ಎಲ್ಲರಿಗೂ ನಗು. ವೆಂಕಟರಾಯನಿಗೆ ನೋವಿನ ಜೊತೆಗೆ ಅವಮಾನ.

ಮಾರನೆಯ ದಿನ ನೋವು ಇನ್ನೂ ಜೋರಾಯಿತು. ವೆಂಕಟರಾಯ ಅಳುವುದಕ್ಕಾರಂಭಿಸಿದ. ಬಗ್ಗಿ ಕುರಿ ಕೋಣಗಳಂತೆ ಮುಂಗೈಗಳನ್ನು ನೆಲದ ಮೇಲೆ ಊರಿಕೊಂಡು ಅತ್ತ.

ಗುಟ್ಟು ಬಯಲಾಯಿತು

ಆಗ ನಮ್ಮ ಅಜ್ಜಿ ಅಲ್ಲಿ ಬಂದು,

“ಎಲಾ ವೆಂಕಟರಾಯ. ಈಗಲಾದರೂ ಹೇಳಪ್ಪ. ಏನಾದರೂ ಮಾಡಿಯೇನು” – ಅಂಗಲಾಚಿದಳು. ವೆಂಕಟರಾಯನಿಗೆ ಬಿಗುಮಾನ. ಅಷ್ಟು ಹೊತ್ತಿಗೆ ನನ್ನ ತಂದೆ ಮನೆಗೆ ಬಂದರು; ಸಂದರ್ಭವನ್ನು ನೋಡಿ ಘಾಟರಿಸಿದರು. ವೆಂಕಟರಾಯ ಹೆದರಿದ. ಆಮೇಲೆ ಹೇಳಿದ (ತೆಲುಗಿನಲ್ಲಿ):

“ಮೊನ್ನೆ ನಮ್ಮಣ್ಣ ಬಂದಿದ್ದಾಗ ಕಾಸುಕೊಟ್ಟು, ‘ಏನಾದರೂ ತೆಗೆದುಕೋ’ –ಎಂದ. ನಾನು ನಂಜುಂಡಯ್ಯನ ಅಂಗಡಿಗೆ ಹೋಗಿ ಇದೆರಡು, ಅದೆರಡು (‘ಇವಿರೆಂಡು. ಅವಿರೆಂಡು’) ಬಾಯಲ್ಲಿ ಹಾಕಿಕೊಂಡೆ. ಅವನ ಮನೆ ಹಾಳಾಗ....”

ಎಲ್ಲರೂ ನಗುತ್ತಿದ್ದರು. ಯಾರೋ ಕೇಳಿದರು:

“ರೆಂಡು ಅಂಟೆ? (ಎರಡು ಅಂದರೆ?)

“ರೆಂಡು ಪಕೋಡಲು, ರೆಂಡು ಬೋಂಡಾಲು, ರವಂತ ಕಾರಾಶೇವ” (ಎರಡು ಪಕೋಡ, ಎರಡು ಬೋಂಡಾ, ಒಂದಷ್ಟು ಕಾರಾಶೇವೆ.)

ಎಲ್ಲರೂ ನಕ್ಕರು. ನನ್ನ ತಂದೆ ಮಾತ್ರ ನಗಲಿಲ್ಲ. ದೇವರ ಮನೆಯಿಂದ ಉದ್ಧರಣೆ ತಂದು ಅದರ ಕಾಲನ್ನು ವೆಂಕಟರಾಯನ ಬಾಯಲ್ಲಿಟ್ಟು ಹಲ್ಲುಗಳನ್ನಗಲಿಸಿದರು. ವೆಂಕಟರಾಯ ಅಷ್ಟು ಗಟ್ಟಿಯಾಗಿ ಹಲ್ಲುಗಳನ್ನು ಸೇರಿಸಿಕೊಂಡಿದ್ದ–ಔಷಧಕ್ಕೆ ಬಾಯಿ ಬಿಡದೆ. ಹಲ್ಲುಗಳನ್ನು ಹಿಗ್ಗಿದ ಮೇಲೆ ನಮ್ಮ ಅಜ್ಜಿ ಔಷಧಿ ತಂದರು. ಅದು ಕಡಲೆ ಹುಳಿಯಂತೆ.

ಕಡಲೆ ಹುಳಿ

ಕಡಲೆ ಹುಳಿ ಎಂದರೆ ಅದೊಂದು ಪಾಕವಸ್ತುವಲ್ಲ. ಕಡಲೆಗಿಡದ ಪೈರು, ಇನ್ನೂ ಹೊಲದಲ್ಲಿರುವಾಗ ಅದರ ಮೇಲೆ ಒಂದು ತೆಳ್ಳನೆಯ, ಬೆಳ್ಳನೆಯ ಬಟ್ಟೆಯನ್ನು ಹಾಸುತ್ತಾರೆ. ರಾತ್ರಿ ಹಿಮ ಆ ಬಟ್ಟೆಯ ಮೇಲೆ ಬೀಳುತ್ತದೆ. ಹೀಗೆ ಅದರ ಒಂದು ಕಡೆ ಚಂದ್ರರಸವೂ ಇನ್ನೊಂದು ಕಡೆ ಎಳೆಯ ಕಡಲೆಕಾಳಿನ ಸಾರವೂ ಎರಡೂ ಬೆರೆತುಕೊಂಡು ಒಂದು ದ್ರವ್ಯವಾಗುತ್ತದೆ. ಬೆಳಗ್ಗೆ ಬಟ್ಟೆಯನ್ನು ತೆಗೆದು ಒಂದು ಬಟ್ಟಲಿನೊಳಕ್ಕೆ ಹಿಂಡಿಕೊಳ್ಳುತ್ತಾರೆ. ಅದಕ್ಕೆ ಸೈಂಧವ ಲವಣ ಮೊದಲಾದ ಔಷಧ ವಸ್ತುಗಳನ್ನು ಸೇರಿಸುತ್ತಾರೆ. ಹೀಗೆ ತಯಾರಾದದ್ದನ್ನು ಶೀಸೆಗಳಲ್ಲಿ ಎತ್ತಿಟ್ಟುಕೊಳ್ಳುತ್ತಾರೆ. ಇದು ಕಡಲೆ ಹುಳಿ. ಅಜೀರ್ಣ ವ್ಯಾಧಿಗಳಿಗೆ ರಾಮಬಾಣ.

ಈ ಬಾಣವನ್ನು ನಮ್ಮ ರಾಯನ ಹೊಟ್ಟೆಯ ಮೇಲೆ ಪ್ರಯೋಗ ಮಾಡಿದ್ದಾಯಿತು. ಆಮೇಲೆ ಇನ್ನೊಂದು ಸ್ವಾರಸ್ಯ. ಇದನ್ನು ಪೂರ್ವಾಷಾಢ–ಉತ್ತರಾಷಾಢಗಳೆಂದು ಭಾವಿಸಬಹುದು. ಹಾಗೆಂದರೆ ವಾಂತಿ ಭೇದಿ.

ಇಷ್ಟಾದ ಮೇಲೆ ವೆಂಕಟರಾಯನ ನೋವು ನಿಂತಿತು.

ನಾಲ್ಕೈದು ದಿನ ಕಳೆದ ಮೇಲೆ ಆತನ ಹಿರಿಯರು ಬಂದು ಆತನನ್ನು ಕರೆದುಕೊಂಡು ಹೋದರು.

ಅನಂತರ ಪುಂಗನೂರಿನ ಪ್ರಸಿದ್ಧರಾದ ಉಮಾ ಪಂಡಿತರು ಒಂದು ತಿಂಗಳು ವೆಂಕಟರಾಯನನ್ನು ಪಥ್ಯದಲ್ಲಿಟ್ಟು ಆರೋಗ್ಯವನ್ನು ಹಿಂತಿರುಗಿಸಿದರು.

೨೨

ಸರಳತೆಯ ಸೊಗಸು

ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡನಂತೆ. ಸರಳ ಸ್ವಭಾವದವರಿಗೆ ಒಂದಷ್ಟು ದಿಢೀರ್ ಶ್ರೀಮಂತಿಕೆಯೋ ಯಾವುದೋ ಉನ್ನತ ಅಧಿಕಾರವೋ ಬಂದಾಗ ಅವರ ಸ್ವಭಾವದಲ್ಲಿ ಮಾರ್ಪಾಟಾಗುವುದು ಅಪರೂಪವಲ್ಲ. ಮುಂಚೆ ಸ್ನೇಹಿತರೂ ಸಮಾನಸ್ಕಂಧರೂ ಆಗಿದ್ದವರಲ್ಲಿ ಇದ್ದಕ್ಕಿದ್ದಂತೆ ಸಲಿಗೆ ಕಡಮೆಯಾಗುತ್ತದೆ: ಮುಂಚೆ ಯಾರನ್ನು ನೋಡಿದರೆ ಮುಖ ಉಲ್ಲಸಿತವಾಗುತ್ತಿತ್ತೋ ಅವರನ್ನು ಕಂಡರೆ ಈಗ ಮಾತು ಸಲೀಸಾಗಿ ಹೊರಡದು; ಭ್ರುಕುಟಿ ಮೇಲೇರುತ್ತದೆ. ಅಧಿಕಾರಿಗಳ, ನವಶ್ರೀಮಂತರ ವರ್ತನೆಯನ್ನು ಒಂದು ಪ್ರಾಚೀನ ಶ್ಲೋಕ ಹೀಗೆ ವರ್ಣಿಸಿದೆ:

> ಆಲಿಂಗಿತಾಃ ಪರೈರ್ಯಾನ್ತಿ
> ಪ್ರಸ್ಖಲ್ತನಿ ಸಮೇ ಪಥಿ ।
> ಅವ್ಯಕ್ತಾನಿ ಚ ಭಾಷನ್ತೇ
> ಧನಿನೋ ಮದ್ಯಪಾ ಇವ ॥

ಎಡಗಡೆಯೊಬ್ಬರು, ಬಲಗಡೆಯೊಬ್ಬರು ಅವರನ್ನು ಹಿಡಿದುಕೊಂಡು ನಡಸಬೇಕು. ಮಟ್ಟಸವಾದ ನೆಲದ ಮೇಲೆ ನಡೆಯುವಾಗಲೇ ಅವರು ಎಡವುತ್ತಾರೆ. ಅಸ್ಫುಟವಾಗಿ ಅರ್ಧರ್ಧ ಮಾತನಾಡುತ್ತಾರೆ. ಇಂಥ ಧನಿಕರಿಗೂ ಹೆಂಡ ಕುಡಿದವರಿಗೂ ವ್ಯತ್ಯಾಸವೇನು?

‘ಅಮಂಗಲ’

ತೆಲುಗಿನಲ್ಲಿ ಸುಮತಿಶತಕಕಾರನು ಇದೇ ಮಾತನ್ನು ಹೇಳಿದ್ದಾನೆ:

> ಅಧರಮು ಕದಲಿಯು ಕದಲಕ ।
> ಮಧುರಮುಲಗು ಭಾಷಲುಡುಗಿ ಮೌನವ್ರತುಂಡೌ– ।

ನಧಿಕಾರರೋಗಪೂರಿತ ।
ಬಧಿರಾಂಧಕ ಶವಮು ಜೂಡ ಬಾಪಮು ಸುಮತೀ ॥

ಕೆಳದುಟಿ ಕದಲಿಯೂ ಕದಲದಂತೆ ಕಾಣುತ್ತದೆ; ಮಧುರವಾದ ಸಂಭಾಷಣೆಯೆಲ್ಲ ಉಡುಗಿಹೋಗುತ್ತದೆ: ಮೌನವ್ರತಧಾರಣೆಮಾಡುತ್ತಾರೆ. ಇಂಥ 'ಅಧಿಕಾರರೋಗಪೂರಿತ'ರನ್ನು ನೋಡಿದರೆ ಶವವನ್ನು ನೋಡಿದಂತೆ ಅಮಂಗಲವಂತೆ.

ಆದರೆ ಎಲ್ಲರೂ ಹೀಗಿರುವುದಿಲ್ಲ. ಯಾವುದೇ ಪದವಿ ಬಂದರೂ ತಮ್ಮ ನೈಜವನ್ನುಳಿಸಿಕೊಳ್ಳುವ ವಿವೇಕಿಗಳೂ ಇರುತ್ತಾರೆ. ಕೌನ್ಸಿಲರಾಗಿದ್ದ ಸರ್ ಎಂ. ಎನ್. ಕೃಷ್ಣರಾಯರು ದಿವಾನರಾಗಿ ನೇಮಿತರಾದ ಕೆಲವು ದಿನಗಳ ಮೇಲೆ ನಾನೊಮ್ಮೆ "ಈಗ ಜವಾಬ್ದಾರಿ ಹೆಚ್ಚಿರಬಹುದು..." ಎಂದದ್ದಕ್ಕೆ ಅವರು "ಏನೂ ವ್ಯತ್ಯಾಸ ಕಾಣೆನಪ್ಪ!" ಎಂದರು. ದಿವಾನರಾದ ಮೇಲೆ ಪರಿಚಿತರೊಬ್ಬರ ಮನೆಗೆ ಹೋದಾಗ ಚಾಪೆ ಹಾಸಲೂ ಅವಕಾಶ ಕೊಡದೆ ನೆಲದ ಮೇಲೇ ಪದ್ಮಾಸನ ಹಾಕಿ ಕುಳಿತು ಲೋಕಾಭಿರಾಮ ಮಾತನಾಡಲಾರಂಭಿಸಿದರು. ತಮ್ಮ ನೂತನ ಪದವಿ ಅವರ ಮೇಲೆ ಯಾವ ವಿಧವಾದ ಪರಿಣಾಮವನ್ನೂ ಮಾಡಿದಂತಿರಲಿಲ್ಲ. ಇದೇ ಜಾತಿಯ ಇಬ್ಬರು ಮಹನೀಯರನ್ನು ಸ್ಮರಿಸುವುದು ಈ ಪ್ರಬಂಧದ ಉದ್ದೇಶ.

***

ಹಾಡ್ಯ ದಾಸಪ್ಪನವರು ಈಗ ಬದುಕಿದ್ದಿದ್ದರೆ ಅವರಿಗೆ ನೂರು ವರ್ಷಕ್ಕೂ ಹೆಚ್ಚು ವಯಸ್ಸಾಗಿರುತ್ತಿತ್ತು. ಅವರು ಅಸಿಸ್ಟೆಂಟ್ ಕಮಿಷನರಾಗಿದ್ದು ನಂಜನಗೂಡಿನಲ್ಲಿ ನದಿಯಲ್ಲಿ ಸ್ನಾನಕ್ಕೆ ಹೋಗಿ ಒಂದು ಆಕಸ್ಮಿಕದಿಂದ ಅವಸಾನ ಹೊಂದಿದರೆಂದು ನನ್ನ ಜ್ಞಾಪಕ.

ಅವರ ತಂದೆ ಹಾಡ್ಯದ ಸೀತಾರಾಮಯ್ಯನವರು ಅನೇಕ ಸ್ಥಳಗಳಲ್ಲಿ ಅಮಲ್ದಾರರಾಗಿದ್ದರು.

ದಾಸಪ್ಪನವರ ಕುಟುಂಬ ಕಮಲಮ್ಮ ದಾಸಪ್ಪನವರು ಬೆಂಗಳೂರು ಕೃಷ್ಣರಾಜೇಂದ್ರ ರಸ್ತೆಯಲ್ಲಿರುವ ಮಹಿಳಾ ಸಮಾಜದ ಮುಖ್ಯ ಕಾರ್ಯಕರ್ತೆಯಾಗಿ ಪ್ರಸಿದ್ಧರಾದವರು.

ದಾಸಪ್ಪನವರು ಕೋಲಾರದಲ್ಲಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾಗಿದ್ದರು- ಸುಮಾರು ೧೯೦೦-೧೯೦೨ರಲ್ಲಿ. ಆಗ ನಾನು ಕೋಲಾರದ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದೆ. ದಾಸಪ್ಪನವರ ಮನೆ ಕೋಟೆಯಲ್ಲಿ, ಹೈಸ್ಕೂಲಿನಿಂದ

ಫರ್ಲಾಂಗಿನೊಳಗೇ ಇತ್ತು. ನಾನು ಸಹಾಯ ಬೇಡಬೇಕೆಂದು ದಾಸಪ್ಪನವರನ್ನು ಹೋಗಿ ಕಂಡೆ. ಅವರು ತಿಂಗಳಿಗೆ ಎರಡು ರೂಪಾಯಿನಂತೆ ಕೊಡುವುದಾಗಿ ಭರವಸೆ ಕೊಟ್ಟಿದ್ದರ ಜೊತೆಗೆ, ತಾವು ಓದು ಮುಗಿಸಿದ್ದ 'ಸ್ಟ್ರ್ಯಾಂಡ್ ಮ್ಯಾಗಜೀನ್' (Strand Magazine) ಎಂಬ ಪತ್ರಿಕೆಯನ್ನೂ ಕೊಡುವುದಾಗಿ ಹೇಳಿದರು. ಅವರ ಮಾತಿನ ರೀತಿ, ನಡತೆ, ವಿನಯ, ಸೌಮ್ಯ, ಸ್ನೇಹಗಳು ನನಗೆ ಮೆಚ್ಚಿಕೆಯಾದವು.

ಪ್ರಬಂಧ ರಚನೆ

ದಾಸಪ್ಪನವರು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದವರು. ಅವರು ಅಲ್ಲಿಯ ವೆಸ್ಲಿಯನ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ರೆವರೆಂಡ್ ಸಾಡೆ ಎಂಬಾತ ಮುಖ್ಯೋಪಾಧ್ಯಾಯನಾಗಿದ್ದ. ಆತ ಒಂದು ದಿನ ಟೆನಿಸನ್ ಕವಿಯ ಯಾವುದೋ ಪದ್ಯಗಳನ್ನು ಪಾಠ ಹೇಳಿ ಅದನ್ನು ಕುರಿತು ಒಂದು ಪ್ರಬಂಧ ಬರೆಯತಕ್ಕದ್ದೆಂದು ತನ್ನ ವಿದ್ಯಾರ್ಥಿಗಳಿಗೆ ನಿಯಮಿಸಿದನಂತೆ. ಅದರಂತೆ ಮಾರನೆಯ ದಿನ ವಿದ್ಯಾರ್ಥಿಗಳು ತಮ್ಮ ಪ್ರಬಂಧಗಳನ್ನು ತಂದು ಒಪ್ಪಿಸಿದರು.

ಇದಾದ ಒಂದೆರಡು ದಿವಸಗಳ ಮೇಲೆ ಸಾಡೆ ಸಾಹೇಬರು ಕ್ಲಾಸಿಗೆ ಬಂದು ಕುಳಿತು,

“ನಾನು ನಿಮ್ಮ ಪ್ರಬಂಧಗಳನ್ನೆಲ್ಲ ಓದಿ ನೋಡಿದೆ. ಅವುಗಳಲ್ಲೆಲ್ಲ ದಾಸಪ್ಪ ಬರೆದ ಪ್ರಬಂಧ ಉತ್ತಮವಾಗಿದೆ. ಅದೇ ಮೊದಲನೆಯದು. ಶೈಲಿಯಲ್ಲಿಯೂ ಗುಣದಲ್ಲಿಯೂ ಅದೇ ಮೊದಲನೆಯದು...”

–ಹೀಗೆ ಪ್ರಶಂಸೆಮಾಡಿ ತಾನು ದಾಸಪ್ಪನವರ ಪ್ರಬಂಧವನ್ನು “ಮದರಾಸ್ ಮೈಲ್” ಪತ್ರಿಕೆಯ ಸಂಪಾದಕರಿಗೆ ಕಳುಹಿಸಿರುವುದಾಗಿ ಹೇಳಿದ.

ಆ ವಾರದೊಳಗಾಗಿ “ಮೈಲ್” ಸಂಪಾದಕರು ಆ ಪ್ರಬಂಧವು ಬಹು ಸುಂದರವಾಗಿದೆಯೆಂದು ಒಪ್ಪಿಕೊಂಡು ಅದನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಪಡಿಸಿದರಂತೆ. ಇಂಥಾದ್ದು ದಾಸಪ್ಪನವರಿಗೆ ಇಂಗ್ಲಿಷ್ ಭಾಷೆ ಸಾಹಿತ್ಯಗಳಲ್ಲಿದ್ದ ಸಾಮರ್ಥ್ಯ.

ಕಾಲೇಜಿನ ಓದು ಮುಗಿದ ಮೇಲೆ ಅವರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಕುಳಿತು ಪ್ರಥಮಸ್ಥಾನದಲ್ಲಿ ಉತ್ತೀರ್ಣರಾದರು. ಅದರಿಂದಲೇ ಅವರಿಗೆ ಅಸಿಸ್ಟೆಂಟ್ ಕಮಿಷನರ್ ಪದವಿ. ಇದು ನಡೆದದ್ದು ಬಹುಶಃ ಸರ್. ಕೆ. ಶೆಷಾದ್ರಿ ಅಯ್ಯರ್ ಅವರ ಕಾಲದಲ್ಲಿ.

ಸುಬ್ಬರಾಯರು

ಈಗ ಹಾಡ್ಯದ ದಾಸಪ್ಪನವರ ಆಪ್ತ ಸ್ನೇಹಿತರೊಬ್ಬರನ್ನು ಕುರಿತು ಹೇಳಬೇಕು. ಆ ಸ್ನೇಹಿತರು ಡಾ ॥ ಆರ್. ಸುಬ್ಬರಾಯರೆಂಬವರು. ಇವರು ಚೀಫ್ ಸೆಕ್ರೆಟರಿಯಾಗಿದ್ದ ಆರ್. ರಂಗರಾಯರ ಅಣ್ಣಂದಿರು. ಸುಬ್ಬರಾಯರೂ ದಾಸಪ್ಪನವರೂ ಕೆಲವು ಕಾಲ ಮದರಾಸಿನಲ್ಲಿದ್ದರು. ಹೇಗೋ ಅವರಿಬ್ಬರಲ್ಲಿ ಸ್ನೇಹ ಗಾಢವಾಗಿ ಬೆಳೆಯಿತು.

ಈಗ ಕಥೆ.

ದಾಸಪ್ಪನವರು ಕೋಲಾರದಲ್ಲಿದ್ದಾಗ ಅವರ ತಂದೆ ಸೀತಾರಾಮಯ್ಯನವರೂ ಕೆಲಸದಿಂದ ನಿವೃತ್ತರಾಗಿ ಮಗನ ಜೊತೆಯಲ್ಲಿದ್ದರು. ದಾಸಪ್ಪನವರು ಚಿಕ್ಕವಯಸ್ಸಿನವರಾದದ್ದರಿಂದಲೂ ಅವರಿಗೆ ರೆವೆನ್ಯು ಮೊದಲಾದ ಸರಕಾರೀ ಇಲಾಖೆಗಳ ಅನುಭವವಿಲ್ಲದ್ದರಿಂದಲೂ ಅವರಿಗೆ ಕೆಲಸ ಹೇಳಿಕೊಡುವ ಉದ್ದೇಶದಿಂದ ಸೀತಾರಾಮಯ್ಯನವರು ಮಗನ ಜೊತೆಯಲ್ಲಿ ಇದ್ದರು. ಆ ಉದ್ದೇಶಕ್ಕಿಂತ ಮೇಲಾದದ್ದು ಪುತ್ರವಾತ್ಸಲ್ಯ.

ಹೀಗಿದ್ದಾಗ ಸುಬ್ಬರಾಯರು ತಮ್ಮ ಸ್ನೇಹಿತನನ್ನು ನೋಡಬೇಕೆಂದು ಕೋಲಾರಕ್ಕೆ ಬಂದರು. ಸುಬ್ಬರಾಯರು ಆಗ ಶ್ರೀನಿವಾಸಪುರ ತಾಲ್ಲೂಕಿನ ಅಮಲ್ದಾರರಾಗಿದ್ದರು.

ಸುಬ್ಬರಾಯರು ಕೋಲಾರದಲ್ಲಿ ದಾಸಪ್ಪನವರಿದ್ದ ಮನೆಗೆ ಹೋಗಿ ಅಲ್ಲಿ ದಾಸಪ್ಪನವರು ಕುಳಿತಿದ್ದ ಕೋಣೆಯ ಮುಂದೆ ನಿಂತು ಕೂಗಿದರು. ದಾಸಪ್ಪನವರು ಗ್ರಂಥ ವ್ಯಾಸಂಗದಲ್ಲಿ ಮಗ್ನರಾಗಿದ್ದ ಕಾರಣ ಅವರಿಗೆ ಕೇಳಿಸಲಿಲ್ಲ. ಒಂದೆರಡು ನಿಮಿಷ ಸುಬ್ಬರಾಯರು ಕಾದುನೋಡಿ ಬಾಗಿಲ ಮೇಲೆ ತಮ್ಮ ಕೈಯಲ್ಲಿದ್ದ ಬೆತ್ತದಿಂದ ಧಡಧಡ ಬಡಿದರು. ಈ ಸದ್ದು ಸೀತಾರಾಮಯ್ಯನವರ ಕಿವಿಗೆ ಬಿತ್ತು. ಅವರು “ಯಾರೋ ಅದು?” ಎಂದು ಗಟ್ಟಿಯಾಗಿ ಕೂಗಿದರು. ಇದನ್ನು ದಾಸಪ್ಪನವರು ಕೇಳಿ ಬಾಗಿಲು ತೆಗೆದು ಸುಬ್ಬರಾಯರನ್ನು ಒಳಕ್ಕೆ ಕರೆದುಕೊಂಡು ಬಾಗಿಲು ಮುಚ್ಚಿಕೊಂಡರು. ಅಲ್ಲಿ ಸ್ನೇಹಿತರಿಬ್ಬರೂ ಮಾತನಾಡಿಕೊಂಡರು. “ಇಲ್ಲಿ ನಮಗೆ ಅನುಕೂಲವಿಲ್ಲ. ಯಜಮಾನರ ಮೇಲ್ವಿಚಾರಣೆ ಬಿರುಸಾಗಿದೆ. ನಮಗೆ ಇಷ್ಟಬಂದಂತೆ ನಡೆದುಕೊಳ್ಳಲು ನಮಗೆ ಇಲ್ಲಿ ಅವಕಾಶವಿಲ್ಲ.

ಸಂಜೆಗೆ ಇಬ್ಬರೂ ಎಲ್ಲಿಯಾದರೂ ಹೋಗಿ ನಿರಾತಂಕವಾಗಿರೋಣ.” ಇದು ಆ ಮಾತುಕಥೆಯ ಸಾರಾಂಶ.

‘ನಿರಾತಂಕ’

ಅಂದು ಸಂಜೆ ಆರು ಘಂಟೆಯ ವೇಳೆಗೆ ಇಬ್ಬರೂ ಸೇರಿ ಮನೆಯಿಂದ ಹೊರಕ್ಕೆ ಹೊರಟರು. ಸೀತಾರಾಮಯ್ಯನವರು ಇವರು ಹೊರಟದ್ದರ ಸುಳಿವು ಕಂಡುಕೊಂಡು ಅವರ ಹಿಂದೆಯೇ ದೂರದಲ್ಲಿ ಅವರಿಗೆ ಕಾಣಿಸದಂತೆ ಅವರನ್ನು ಹಿಂಬಾಲಿಸಬೇಕೆಂದು ಒಬ್ಬ ಆಳನ್ನು ಗೊತ್ತುಮಾಡಿದರು. ಹಾಗೆ ಆಳು ಗೋಪ್ಯವಾಗಿ ಹಿಂಬಾಲಿಸಿದ.

ಸ್ನೇಹಿತರಿಬ್ಬರೂ ಕೋಲಾರದ ದೊಡ್ಡ ಕೆರೆಕಟ್ಟೆಯ ಆಚೆ ಕೊಂಚ ದೂರದಲ್ಲಿ ಒಂದು ಜಾಗಕ್ಕೆ ಹೋದರು. ಅವರು ನಡೆಯುತ್ತಿದ್ದಾಗಲೇ ಪ್ರಾರಂಭವಾಯಿತು: ಸುಬ್ಬರಾಯ ಕಣ್ಣು ತಿರುಗಿಸುವುದು, ದಾಸಪ್ಪ ನಾಲಗೆ ಚಾಚುವುದು. ಸುಬ್ಬರಾಯ ಇನ್ನೊಂದು ಮುಖಚೇಷ್ಟೆಯನ್ನು ಮಾಡುವುದು, ದಾಸಪ್ಪ ಅದರ ಅನುಕರಣ ಮಾಡುವುದು.

ಹೀಗೆ ದಾರಿಯುದ್ದಕ್ಕೂ ಕಪಿಚೇಷ್ಟೆ, ಅಂಗವಿಕಾರ ಇದನ್ನು ದೂರದಿಂದ ನೋಡುತ್ತಿದ್ದ ಆಳಿಗೆ ಆಶ್ಚರ್ಯ: ಏನು, ನಮ್ಮ ಸಾಹೇಬರು ಹೀಗಾಡುತ್ತಾರೆ!–ಎಂದು.

ಶಂಖವಾದ್ಯ

ಇನ್ನೆರಡು ಗಜ ಮುಂದೆ ಸಾಗಿ ಇಬ್ಬರೂ ಒಂದೆಡೆ ಕುಳಿತರು. ಅಲ್ಲಿ ಸುಬ್ಬರಾಯರು ಕೊಂಚವಾಗಿ “ಲಬೋ ಲಬೋ” ಎಂದು ಶಂಖವಾದ್ಯವನ್ನಾರಂಭಿಸಿದರು. ಉತ್ತರ ದಾಸಪ್ಪನವರದು: “ಲಬೋ ಲಬೋ ಲಬೋ.”

ಹೀಗೆ ಐದಾರು ಸಲ ಸವಾಲ್ ಜವಾಬುಗಳು ನಡೆದ ಬಳಿಕ ಜೊತೆಯಲ್ಲಿ ಬಂದಿದ್ದ ಆಳಿಗೆ ಭಯವಾಯಿತು. ಅವನು ಓಡಿಹೋಗಿ ಸಂಗತಿಯನ್ನು ಹಿಂದುಗಡೆ ಬರುತ್ತಿದ್ದ ಸೀತಾರಾಮಯ್ಯನವರಿಗೆ ತಿಳಿಸಿದ. ಅವರು ಗಾಬರಿ ಬಿದ್ದು ರಂಗಸ್ಥಳಕ್ಕೆ ಅವಸರವಸರವಾಗಿ ಬಂದರು. “ಲಬೋ ಲಬೋ” ಒಂದೇ ಮಂತ್ರ: ಇಬ್ಬರೂ ಹುಚ್ಚುಹುಚ್ಚಾಗಿ ಮುಖವಿಕಾರ ಮಾಡಿಕೊಂಡು ವಿಕಾರಸ್ವರದಿಂದ ಅರಚಿಕೊಳ್ಳುತ್ತಿದ್ದರು. ಸೀತಾರಾಮಯ್ಯನವರು ಎದುರಿಗೆ ಬಂದು ನಿಂತರೂ ಒಂದೆರಡು ಕ್ಷಣ ಅವರಿಗೆ ಕಾಣಿಸಲೇ ಇಲ್ಲ. ಅವರು ಕಣ್ಣಿಗೆ ಕಾಣಿಸಿದ ಕೂಡಲೇ ಇಬ್ಬರೂ ನಾಚಿಕೆಯ ಮುಖ ಮಾಡಿಕೊಂಡು ಶಂಖವಾದ್ಯ ನಿಲ್ಲಿಸಿದರು.

ವೈದ್ಯಪರೀಕ್ಷೆ

ಸೀತಾರಾಮಯ್ಯನವರು ಆ ರಾತ್ರಿಯನ್ನು ನಿದ್ದೆಯಿಲ್ಲದೆ ಕಳೆದು ಮಾರನೆಯ ದಿನ ಬೆಳಗ್ಗೆ ಕೋಲಾರದಲ್ಲಿದ್ದ ಡಾ ॥ ಪೊನ್ನುಸ್ವಾಮಿ ಪಿಳ್ಳೆಯವರಲ್ಲಿ ತಮ್ಮ ಕಳವಳವನ್ನು ತೋಡಿಕೊಂಡರು. ಡಾ ॥ ಪೊನ್ನುಸ್ವಾಮಿ ಪಿಳ್ಳೆಯವರು ಬೆಂಗಳೂರಿನಲ್ಲಿ ಪ್ರಸಿದ್ಧರಾಗಿದ್ದ ಡಾ ॥ ಅಂಬೂಪಿಳ್ಳೆಯವರ ಮಾವಂದಿರು. ಡಾಕ್ಟರು ದಾಸಪ್ಪನವರನ್ನೂ ಸುಬ್ಬರಾಯರನ್ನೂ ಪರೀಕ್ಷೆಮಾಡಿದರು: ನಾಡೀ ಪರೀಕ್ಷೆ ಇತ್ಯಾದಿ. ಯಾವ ವ್ಯಾಧಿಯ ಇರುವಿಕೆಯೂ ತೋರಲಿಲ್ಲ. ತಮಗೆ ನೋವು ಏನೂ ಇಲ್ಲವೆಂದು ಇಬ್ಬರು ಯುವಕರೂ ಹೇಳಿದರು.

ಪ್ರಶ್ನೆ: “ಹಸಿವಾಗುತ್ತದೆಯೆ?”

ಉತ್ತರ: “ಏನಾದರೂ ತಿಂಡಿ ಕೊಟ್ಟರೆ ಉತ್ತರ ತೋರಿಸುತ್ತೇವೆ.”

ಡಾಕ್ಟರು ಕಡೆಗೆ ಹೇಳಿದರು: “ಇವರಿಬ್ಬರೂ ಆರೋಗ್ಯದಲ್ಲಿದ್ದಾರೆ. ಆದರೆ ಹುಡುಗಾಟಕ್ಕೇನು ಮಾಡುವುದು?”

ಸೀತಾರಾಮಯ್ಯನವರಿಗೆ ತೃಪ್ತಿಯಾಗಲಿಲ್ಲ. ಆ ದಿನವೆಲ್ಲ ಅವರಿಗೆ ಒಳಗೊಳಗೇ ಅಳುಕು. ಅಂದು ರಾತ್ರಿಯೂ ನಿದ್ದೆಗೆಟ್ಟು ತಮ್ಮ ಮಗನೂ ಅವನ ಸ್ನೇಹಿತನೂ ಚೆನ್ನಾಗಿ ನಿದ್ದೆ ಮಾಡುತ್ತಾರೆಯೆ ಎಂದು ಕಾದುನೋಡಿ ಆಮೇಲೆ ಸಮಾಧಾನ ತಂದುಕೊಂಡರು.

ಇದು ಸ್ನೇಹದ ತಮಾಷೆ.

ಸುಬ್ಬರಾಯರ ತಮ್ಮ ಶ್ರೀ ರಂಗರಾಯರವರೆಂದು ಆಗಲೇ ಹೇಳಿದ್ದೇನೆ. ರಂಗರಾಯರ ತಮ್ಮ ಜಗನ್ನಾಥರಾಯರು. ಈತ ನನ್ನ ಸಹಾಧ್ಯಾಯಿ. ಕೋಲಾರದ ಹೈಸ್ಕೂಲಿನಲ್ಲಿ ಮ್ಯಾತಮ್ಯಾಟಿಕ್ಸ್‌ನಲ್ಲಿಯೂ ಇಂಗ್ಲಿಷಿನಲ್ಲಿಯೂ ಜಗನ್ನಾಥರಾಯರು ಪ್ರತಿಭಾವಂತರಾಗಿದ್ದರು.

ಆನಂದವು ಆತ್ಮದ ಸ್ವಭಾವವಂತೆ. ಅದನ್ನು ಅದುಮಿಡುವುದು ಗುಣವೂ ಅಲ್ಲ; ಪ್ರಕಾಶಪಡಿಸುವುದು ದೋಷವೂ ಅಲ್ಲ.

೨೪

ಜಿಹ್ವಾನಂದ

ಕನ್ನಡ ಸಾಹಿತ್ಯ ಪರಿಷತ್ತಿನ ಆಲೋಚನೆಯಂತೆ ಒಂದು ಪ್ರಚಾರಕ ಸಮಿತಿ ಸಂಚಾರ ಹೊರಟಿತ್ತು. ಚಿತ್ರದುರ್ಗ ಪ್ರಾಂತದ ಕಡೆ ಹೊರಟ ಒಂದು ಗುಂಪಿನ ಕಥೆ ಹೇಳುತ್ತೇನೆ.

ಶ್ರೀಮಾನ್ ನಿಟ್ಟೂರು ಶ್ರೀನಿವಾಸರಾಯರು ಅದಕ್ಕೆ ನಾಯಕರು. ಪಾಣ್ಯಂ ಶ್ರೀನಿವಾಸರಾಯರು, ವಿ. ಸೀತಾರಾಮಯ್ಯನವರು, ಕೆ.ವಿ. ರಾಘವಾಚಾರ್ಯರು, ನಾನು ಇನ್ನು ಕೆಲವರು.

ಚಳ್ಳಕೆರೆ ತಾಲೂಕಿನ ಮುಷ್ಟೂರು ಎಂಬುದು ನಮ್ಮ ಕಾರ್ಯರಂಗ.

ಆಯಾಸ ಪರಿಹಾರ

ಅಂದು ಸಂಜೆ ಸುಮಾರು ಐದುವರೆ ಆರು ಘಂಟೆಯ ವೇಳೆಗೆ ನಾವು ಮುಷ್ಟೂರನ್ನು ತಲಪಿದೆವು. ಅಲ್ಲಿ ಶ್ರೀ ನಾಗಲಿಂಗಸ್ವಾಮಿಗಳೆಂಬ ವೀರಶೈವ ಮಠಾಧ್ಯಕ್ಷರು ಸ್ವಾಗತ ಸಮಿತಿಗೆ ಮುಖಂಡರಾಗಿದ್ದರು. ಕುಶಲಪ್ರಶ್ನೆಗಳಾದ ಮೇಲೆ ನಮಗೆ ಲಘುವಾದ ಉಪಾಹಾರವಾಯಿತು. ಅದನ್ನು ಏರ್ಪಾಟು ಮಾಡಲು ಮಿತ್ರರಾದ ಕೆಲವರು ಸ್ಕೂಲ್ ಮೇಷ್ಟರುಗಳು ಸೇರಿಕೊಂಡಿದ್ದರು. ಅವರ ಜೊತೆಗೆ ನಮ್ಮ ನಿಟ್ಟೂರು ಶ್ರೀನಿವಾಸರಾಯರ ಸ್ನೇಹಿತರಾದ ಕೆಲಮಂದಿ ಇತರರೂ ಸೇರಿದ್ದರು. ಈ ಮಿತ್ರವರ್ಗದ ಆದರೋತ್ಸಾಹಗಳ ಫಲಿತಾಂಶ: ಘಮಘಮಿಸುವ ತುಪ್ಪದಲ್ಲಿ ಮಾಡಿದ್ದ ಸಜ್ಜಿಗೆ, ಉಪ್ಪಿಟ್ಟು, ಬೋಂಡ, ಎರಡು ಮೂರು ಬಗೆಯ ಬಾಳೆಹಣ್ಣುಗಳು, ಇನ್ನೇನೇನೋ ತಿಂಡಿಗಳು, ಸೊಗಸಾದ ಕಾಫಿ– ಕೇಳಿದಷ್ಟು. ನಮ್ಮ ಪಾರ್ಟಿ ಪ್ರಯಾಣಮಾಡಿ ಆಯಾಸ ಪಟ್ಟಿದ್ದದ್ದರಿಂದ ಈ ಎಲ್ಲ ಫಲಾಹಾರ ಸಾಮಾಗ್ರಿಗೂ ನ್ಯಾಯ ಸಂದಿತು. ಹಸಿವಿನ ಜೊತೆಗೆ ಕೃತಜ್ಞತೆಯೂ ಸೇರಿತ್ತು. ಉಪಾಧ್ಯಾಯರುಗಳೂ ದೊಡ್ಡ ಮನುಷ್ಯರು. ಅವರು ಬಡಿಸಬಂದದ್ದನ್ನು ಬೇಡವೆನ್ನುವುದು ಮರ್ಯಾದೆಯೆ? ಹೀಗೆ ತರ್ಕಮಾಡಿಕೊಂಡು ನಾವು ಪ್ರತಿಯೊಬ್ಬರೂ (ನಾಯಕ ಶ್ರೀ ನಿಟ್ಟೂರು ಶ್ರೀನಿವಾಸರಾಯರ ವಿನಾ) ಕಂಠಪೂರ್ತಿ ಸೇವಿಸಿದೆವು.

ಅನಂತರ ಉಪಾನ್ಯಾಸ ಸಮಯ. ಇದಕ್ಕಾಗಿ ಸೇರಿದ್ದಾರೆ ಜನ. ಕೆಲವರು ಕುಸ್ತಿ ಕಸರತ್ತುಗಳನ್ನು ಪ್ರದರ್ಶನ ಮಾಡಿದರು. ಆಗ ಶ್ರೀ ನಾಗಲಿಂಗ ಸ್ವಾಮಿಗಳು:

"ಪೂರ್ವಾಶ್ರಮದಲ್ಲಿ ನಾವೂ ಹೀಗೆ ಮಾಡುತ್ತಿದ್ದೆವು" –ಎಂದು ವಿವರಿಸಿದರು. ಆ ಗೋಷ್ಠಿಯಲ್ಲಿ ಬೀಡಿ ಸಿಗರೇಟುಗಳ ವಾಸನೆಯೂ ಢಂಡಿಯಾಗಿತ್ತು.

‘ಬೇಡವೆನ್ನುವುದು ಹೇಗೆ?’

ಉಪನ್ಯಾಸಾನಂತರ ಭೋಜನಪ್ರಸ್ತಾವ. ಅದು ಬಂದಾಗ ನಾನು, ನಮ್ಮ ಪಿ. ಶ್ರೀನಿವಾಸರಾಯರು, ನಿಟ್ಟೂರು ಶ್ರೀನಿವಾಸರಾಯರು ಈ ಮೂವರು ಮಾತ್ರ ಪ್ರತಿ ಹೇಳಲಿಲ್ಲ. ಸೀತಾರಾಮಯ್ಯ, ರಾಘವಾಚಾರ್ ಮೊದಲಾದವರು ಬಿಲ್‌ಕುಲ್ ಆಗುವುದಿಲ್ಲವೆಂದು ಆಗ್ರಹಮಾಡಿ ಊಟ ಬೇಡವೆಂದರು. “ನಮಗೆ ಹೊಟ್ಟೆ ಬಿರಿದುಹೋಗುತ್ತಿದೆ. ಅಷ್ಟೊಂದು ಫಲಾಹಾರವಾದ ಮೇಲೆ ಊಟವೆಂದರೇನು?” – ಎಂದೆಲ್ಲ ಸಕಾರಣವಾಗಿ ಕೂಗಾಡಿದರು. ನಾನೂ ಪಿ. ಶ್ರೀನಿವಾಸರಾಯರೂ ಪ್ರತಿ ಹೇಳಿದೆವು: “ನೀವು ಹೇಳುವುದು ಸಕಾರಣವಾಗಿದ್ದರೂ ಒಪ್ಪತಕ್ಕದ್ದಲ್ಲ. ಅತಿಥಿಗಳಾಗಿ ಬಂದವರು ನಾವು. ನಮ್ಮನ್ನು ಇಲ್ಲಿಗೆ ಬರಮಾಡಿಕೊಂಡಿರುವವರು ನಾವು ಊಟ ಮಾಡದಿದ್ದರೆ ಏನಂದುಕೊಂಡಾರು? ಮರ್ಯಾದೆಗಾದರೂ ಊಟ ಮಾಡಬೇಡವೆ? ನಿಮಗೆ ಹೊಟ್ಟೆ ಅಷ್ಟು ಭಾರವಾಗಿದ್ದರೆ ಎಲೆಯ ಮುಂದೆ ಕುಳಿತು ಊಟದ ಶಾಸ್ತ್ರ ಮಾಡಿ ಮುಗಿಸಬಹುದಲ್ಲ? ನೋಟಕ್ಕೆ ಊಟವಾಗಲಿ.”

ಹೀಗೆ ಪುಸಲಾಯಿಸಿದೆವು. ನಮ್ಮ ಸ್ನೇಹಿತರು ಗೊಣಗುತ್ತ ನಮ್ಮ ಪಂಕ್ತಿಯಲ್ಲಿ ಕುಳಿತರು. ಬಿಸಿಬಿಸಿ ಅನ್ನ, ಸೀಗುಂಬಳ ಅವರೆಯ ಕಾಳು ಸೇರಿದ ಹುಳಿ, ಕೊಬ್ಬರಿ ಚಟ್ನಿ, ಪಲ್ಯ ಇತ್ಯಾದಿ–ಇದು ಆ ಹೊತ್ತಿನ ತರತೀಪು. ಪಾಣ್ಯಂ ಶೀನಣ್ಣನೂ ನಾನೂ ಚಟ್ನಿಯಲ್ಲಿ ಕಲಸಿ–

“ಆಹಾ! ಏನು ಸೊಗಸು!”

ಎನ್ನುತ್ತ ನಾಲ್ಕೈದು ಕವಳಗಳನ್ನು ಸಾಧಿಸಿ ಬಳಿಕ ಹುಳಿಯಲ್ಲಿ ಅನ್ನ ಕಲಸಿದೆವು. ತುಪ್ಪ ಬಂತು. ಅದೇನು ಹದವೊ! ಮತ್ತೊಂದು ಸಾರಿ ಹುಳಿಯಲ್ಲಿ ಅನ್ನ ಕಲಸಿದ್ದಾಯಿತು. ‘ಭೇಷ್ ಭೇಷ್’ ಎನ್ನುತ್ತ ಆ ರುಚಿಯನ್ನು ಹೊಗಳುತ್ತಿದ್ದೆವು. ನಮ್ಮಿಬ್ಬರಲ್ಲಿ ಯಾರೋ ಒಬ್ಬರು ಸೀತಾರಾಮಯ್ಯ, ರಾಘವಾಚಾರ್ಯರಿಗೆ ಬಲವಂತಮಾಡ ಹೊರಟೆವು. ಇನ್ನೊಬ್ಬರು “ನಿಮ್ಮಷ್ಟಕ್ಕೆ ನೀವು ಊಟಮಾಡಿ. ಮಾತು ಬೇಡ” ಎಂದರು.

ನಾವು ಮೂರನೆಯ ಸಾರಿ ಹುಳಿಗೆ ಸಿದ್ಧರಾದೆವು. ರುಚಿರುಚಿಯಾಗಿ ನಾವು ಮೆಲ್ಲುತ್ತಿದ್ದದ್ದನ್ನು ನೋಡಿದ ಸೀತಾರಾಮಯ್ಯ, ರಾಘವಾಚಾರ್ಯರು ತಮ್ಮ ತಮ್ಮ ಎಲೆಗಳಂಚಿನಲ್ಲಿ ನಂಜಿಕೊಳ್ಳುವುದಕ್ಕಾಗಿ ಬಡಿಸಿದ್ದ ಅರೆಸೌಟು ಹುಳಿಯನ್ನು ನಾಲಗೆಯ

ಮೇಲಿಟ್ಟುಕೊಂಡು ನೋಡಿದರು. ನಮಗಾಗಿ ಮೂರನೆಯ ಸಾರಿ ಹುಳಿ ಬಂದಾಗ ಅವರು ಬಡಿಸುವಾತನನ್ನು ಕರೆದು–

"ಇಲ್ಲಿಯೂ ಸ್ವಲ್ಪ"

–ಎಂದು ಕೇಳಿದರು. ಮರ್ಮಜ್ಞನಾದ ಆ ಬಡಿಸುವಾತ ಒಬ್ಬೊಬ್ಬರ ಎಲೆಗೂ ಧಾರಾಳವಾಗಿ ಮೂರು ನಾಲ್ಕು ಸೌಟು ಹುಳಿಯನ್ನು ಹಾಕಿದ. ಬೇಡವೆಂದರೂ ಪುನಃ ಪುನಃ ಬಡಿಸಿಕೊಂಡು ನಮ್ಮಂತೆಯೇ ಭೋಜನ ಮಾಡಿದರು ನಮ್ಮ ಸ್ನೇಹಿತರು.

ನಮಗೆ ಒಳಗೊಳಗೇ ಹಿಗ್ಗು–ಬೇಡವೆಂದರೂ ದಾರಿಗೆ ಬಂದರಲ್ಲ ಎಂದು. ಊಟ ತೀರಿದ ಮೇಲೆ ಕೈತೊಳೆದುಕೊಂಡು ಬರುತ್ತಿದ್ದಾಗ ಒಬ್ಬ ಮೇಷ್ಟರು ಆಚೆಕಡೆಗೆ ಕೈತೋರಿಸಿ–

"ದೇಶೋವಿಶಾಲವಾಗಿದೆ!"

ಎಂದರು. ಸೀತಾರಾಮಯ್ಯ, ರಾಘವಾಚಾರ್ಯರು ಮೊದಲಾದವರು ಆ ವಿಶಾಲವಾದ ಬಯಲಿಗೆ ಹೋಗಿ ಬರುತ್ತ,

"ಅಬ್ಬಬ್ಬ! ಹೊಟ್ಟೆಯಲ್ಲಿ ಜಡ್ಡು ಕಟ್ಟಿದ್ದದ್ದು ಕಳೆದು ಸುಖವಾಯಿತು. ಅದೆಲ್ಲ ಆ ತುಪ್ಪದ ಪ್ರಭಾವ"

–ಎಂದರು. ಸೀಗುಂಬಳಕ್ಕೂ ಅವರೆಕಾಳಿಗೂ ಅದನ್ನು ಪಾಕ ಮಾಡಿದವರ ಹದಕ್ಕೂ ಬರಬೇಕಾಗಿತ್ತು ಕೀರ್ತಿ. ಅದು ತಪ್ಪಿಹೋಯಿತು.

***

ನಾನು ಕೇಳಿದ ಒಂದು ಕಥೆ:

ಹೇಮಾ ಹನುಮಂತಯ್ಯನವರು (ಅಥವಾ ಕೂರಗಾಯಲ ವೆಂಕಟಸುಬ್ಬಯ್ಯನವರು) ಮಾಮಲೆದಾರರಾಗಿದ್ದಾಗ ಒಂದು ವಿಶೇಷ ಸಂದರ್ಭ. ಆ ಮಾಮಲೆದಾರರು ದೈವ ಭಕ್ತರು. ವಿಶೇಷವಾಗಿ ಮಹಾಲಕ್ಷ್ಮಿಯ ಭಕ್ತರು. ಶ್ರಾವಣಮಾಸದಲ್ಲಿ ವರಲಕ್ಷ್ಮೀವ್ರತ ಬಂದಾಗ ಅದನ್ನು ಬಹು ವಿಜೃಂಭಣೆಯಿಂದ ನಡಸುವರು. ತಾಲೂಕಿನ ಎಲ್ಲ ಕಡೆಗಳಿಂದಲೂ ತರಕಾರಿ, ತುಪ್ಪ ಬರುತ್ತಿದ್ದವು.

ಉಪಚಾರ

ಮಾಮಲೇದಾರರು ಹನುಮಂತಯ್ಯನವರೆಂದು ಇಟ್ಟುಕೊಳ್ಳೋಣ. ಊರಿನ ಎಲ್ಲ ಜಾತಿಯ ಗಣ್ಯಜನರೂ ಆ ದಿನ ರಾತ್ರಿ ಸಂತರ್ಪಣೆ ನಡಸುವರು. ಹೀಗೆ ಒಂದು ಸಾರಿ ನಡೆದಾಗ ವೈಶ್ಯರ ಸಮಾರಾಧನೆ ಆಗುತ್ತಿದ್ದ ಜಾಗದಲ್ಲಿ ಸುಮಾರು ೯ ಘಂಟೆಯ ವೇಳೆಗೆ ಮಾಮಲೇದಾರರ ಸವಾರಿ ಚಿತ್ತೈಸಿತು, ಬಂದಿದ್ದ ಅತಿಥಿಗಳನ್ನು ವಿಚಾರಿಸಿ ಮರ್ಯಾದೆ ಮಾಡುವುದಕ್ಕಾಗಿ. ಆಗ ಒಂದೊಂದು ಪಂಕ್ತಿಯಲ್ಲಿಯೂ ಒಬ್ಬೊಬ್ಬ ಅತಿಥಿಗೂ ಆಳುದ್ದದ ಬಾಳೆಯೆಲೆ ಹಾಸಿ ಭಕ್ಷ್ಯಗಳನ್ನು ಬಡಿಸಿತ್ತು. ನಾಲ್ಕು ತರಹ ಪಲ್ಯಗಳು, ಒಂದು ಹುಳಿ, ಒಂದು ಮಜ್ಜಿಗೆಪಳಿದ್ಯ, ಒಂದು ಕೂಟು, ಒಂದು ಪಚ್ಚಡಿ–ಇವುಗಳ ಜೊತೆಗೆ ಕೋಸುಂಬರಿ, ಗೊಜ್ಜು, ತಿಳಿಸಾರು ಮೊದಲಾದವು. ಆಮೇಲೆ ಹೋಳಿಗೆ, ಚಿರೋಟಿ, ಲಾಡು, ಹುಯ್ಗಡುಬು, ವಗೈರೆ; ಹಪ್ಪಳ ಸಂಡಿಗೆಗಳು. ಹನುಮಂತಯ್ಯನವರು ಎಲೆ ಎಲೆಯ ಮುಂದೆಯೂ ನಿಂತು ವಿಚಾರಿಸಿಕೊಳ್ಳುವರು. ಸಾವಕಾಶವಾಗಿ ಭೋಜನ ನಡೆಯಬೇಕೆಂದು ಉಪಚಾರ ಹೇಳುವರು. ಭಕ್ಷ್ಯಗಳನ್ನು ಬಲವಂತಮಾಡಿ ಹಾಕಿಸುವರು.

ಹೀಗೆ ಸಂತರ್ಪಣೆ ನಡೆಯುತ್ತಿದ್ದಾಗ ವೈಶ್ಯಪಂಕ್ತಿಯಲ್ಲಿ ನಂಬೂರಿಸಂಜೀವಯ್ಯ ಶೆಟ್ಟಿ ಎಂಬುವರಿದ್ದರು. ಇವರು ಮಹಾಗಣ್ಯರು.ಊರಿನ ವರ್ತಕರಲ್ಲೆಲ್ಲ ಪ್ರಮುಖರು, ಸಾಹುಕಾರರು. ಇವರ ಎಲೆಯ ಮುಂದೆ ಮಾಮಲೇದಾರರು ನಿಂತು ಮಾತನಾಡುತ್ತಿದ್ದಾಗ ಅಡಿಗೆಯವರು ಇಡ್ಲಿಗಳನ್ನು ಬಡಿಸುತ್ತಿದ್ದರು. ಮಾಮಲೇದಾರರು ಶಿಫಾರಸು ಮಾಡಿದ ಪ್ರಕಾರ ಅಡಿಗೆಯವರು ಸಂಜೀವಯ್ಯನವರ ಎಲೆಯಲ್ಲಿ ಹದಿನೈದಿಪ್ಪತ್ತು ಇಡ್ಲಿಗಳನ್ನು ರಾಶಿ ಹಾಕಿದರು.

ಸಂಜೀವಯ್ಯನವರು ನಿಟ್ಟುಸಿರು ಬಿಟ್ಟರು. ಮಾಮಲೇದಾರರು ಕೇಳಿದರು (ತೆಲುಗಿನಲ್ಲಿ):

ಮಾ: "ಏನು ಸಂಜೀವಯ್ಯ? ಇದೆಷ್ಟಿದೆ ಮಹಾ? ಸಾವಕಾಶವಾಗಿ ಭೋಜನವಾಗಬೇಕು. ಅವಸರವೇನೂ ಇಲ್ಲ."

ವ್ರತಸಾಧನೆ

ಸಂ: (ನಗುತ್ತಾ–ತೆಲುಗಿನಲ್ಲಿಯೇ) "ದೇವರೂ, ನಾನು ಒಂದು ಆಜನ್ಮ ವ್ರತ ಈ ಹೊತ್ತಿನವರೆಗೂ ನಡಸಿಕೊಂಡು ಬಂದಿದ್ದೆ. ಇಂದು ಅದು ಮುಗಿದು ಹೋಯಿತು. ಅದು ಏನೆಂದರೆ ಊಟದ ಎಲೆಯಲ್ಲಿ ಬಿಸಾಡಬಾರದು–ಎಂದು. ಆ ವ್ರತಕ್ಕೆ ಈ ಹೊತ್ತು ವಿಘ್ನಕ್ಕೆ ಹೆದರಿ ವ್ರತ ಬಿಡಲಾರೆ. ಒಂದು ಹುಕುಂ ಆಗಬೇಕು. ಏನೆಂದರೆ ಶೇಕದಾರ ಗುಂಡಪ್ಪನವರ ಮನೆಯಿಂದ ದೊಡ್ಡ ದೀಪಸ್ತಂಭಗಳನ್ನು ಇಲ್ಲಿಗೆ ತರಿಸತಕ್ಕದ್ದು. ಅವುಗಳಲ್ಲಿ ಒಂದೊಂದು ದೀಪಕ್ಕೆ ಒಂದೊಂದು ಪಡಿ ಎಣ್ಣೆ, ಒಂದೊಂದು ದೀಪದ ಮೂತಿಗೆ ಒಂದೊಂದು ಕಕ್ಕಡ ಹಿಡಿಯುತ್ತದೆ. ನೀವು ದಯಮಾಡಿ ನಾಲ್ಕು ಪಡಿ ಎಣ್ಣೆ, ಎಂಟು ಕಕ್ಕಡಗಳು, ಎರಡು ಕೊಡ ನೀರು, ಎರಡು ತಂಬಿಗೆ, ನನಗೆ ಹಿಂದೆ ಒರಗಿಕೊಳ್ಳಲು ಒಂದು ಒರಗುದಿಂಬು, ಎರಡು ಪಕ್ಕಗಳಿಗೂ ಸಣ್ಣ ಸಣ್ಣ ದಿಂಬುಗಳು. ಇಬ್ಬರು ಆಳುಗಳು–ಇಷ್ಟನ್ನು ಒದಗಿಸಬೇಕು. ನನ್ನ ಕೈಲಾದಷ್ಟು ನೋಡಿಕೊಳ್ಳುತ್ತೇನೆ. ತೂಕಡಿಕೆ ಬಂದರೆ ಇಲ್ಲಿಯೇ ಒರಗಿಕೊಳ್ಳುತ್ತೇನೆ. ಹಾಗೆ ಮಾಡದೆ ಇದ್ದಾಗ ಮೆಲ್ಲುತ್ತಿರುವುದು. ದೇವರು ಮಾಡಿಸಿದ ಹಾಗಾಗಲಿ. ನಾನು ಸತ್ತರೂ ವ್ರತವನ್ನು ಬಿಡುವುದಿಲ್ಲ. ವ್ರತ ನನ್ನನ್ನು ಬಿಟ್ಟರೆ ಉಪಾಯವಿಲ್ಲ. ಅದು ದೇವರ ಚಿತ್ತ."

ಈ ಉತ್ತರವನ್ನು ಸಂಜೀವಯ್ಯ ಹೇಳಿದ ಮೇಲೆ ಅದರ ಅರ್ಥ ಎಲ್ಲರ ಮನಸ್ಸಿಗೂ ಹೊಳೆದು, ಇನ್ನು ಮುಂದೆ ಅಂಥ ಉಪಚಾರ ತಕ್ಕದ್ದಲ್ಲವೆಂದು ತಿಳಿದುಕೊಂಡರಂತೆ. ಸಂಜೀವಯ್ಯನವರು ಹಾಗೂ ಹೀಗೂ ಮಾಡಿ ಕಾಲು ರಾಶಿಯನ್ನು ಮುಗಿಸಿದ ಮೇಲೆ ಕೊಂಚ ಕಣ್ಣು ಮುಚ್ಚಿದಾಗ ಆಳುಗಳು ಉಳಿದಿದ್ದ ಇಡ್ಲಿ ಭಕ್ಷಗಳನ್ನು ನಾಯಿಗಳಿಗೆ ಸಮರ್ಪಿಸಿ ಎಲೆಯನ್ನು ಖಾಲಿ ಮಾಡಿಟ್ಟರಂತೆ.

೨೫

ಹೃದಯಸೌಂದರ್ಯ: ಒಂದು ಮಧುರ ಸ್ಮೃತಿ

ಬಹುಶಃ ೧೯೨೦-೨೧ ಇರಬಹುದು. ಬೆಂಗಳೂರು ಹೊಸ ತರಗುಪೇಟೆ ಪೂರ್ವದಿಕ್ಕಿನ ಮಂಡಿ ಅಂಗಡಿ ಸಾಲು: ವಿಕ್ಟೋರಿಯ ಆಸ್ಪತ್ರೆಯ ಪಶ್ಚಿಮ ಕಾಂಪೌಂಡ್ ಗೋಡೆಯ ಎದುರಾಗಿ ಮಂಡಿ ಅಂಗಡಿಗಳ ಪೈಕಿ ಮೂರನೆಯದೋ ನಾಲ್ಕನೆಯದೋ ದಿವಂಗತ ಧರ್ಮಪ್ರವರ್ತಕ ಡಿ.ಅಪ್ಪೂರಾಯರ ಮಕ್ಕಳು ಡಿ. ಶ್ರೀನಿವಾಸರಾಯರಿಗೆ ಸೇರಿದ್ದು. ಆ ಕಟ್ಟಡದಲ್ಲಿ ಇದ್ದದ್ದು ನವರತ್ನ ಅಂಡ್ ಕಂಪನಿ ಅವರ ಮುದ್ರಣಾಲಯ. ಅಲ್ಲಿ ಆಗ ನಾನು ನಡಸುತ್ತಿದ್ದ 'ದಿ ಕರ್ನಾಟಕ' (The Karnataka) ಎಂಬ ಇಂಗ್ಲಿಷ್ ಪತ್ರಿಕೆ ಅಚ್ಚಾಗುತ್ತಿತ್ತು. ಅದು ಪತ್ರಿಕೆಯ ಕಡೆಯ ದಿನಗಳೆಂದು ಜ್ಞಾಪಕ.

ಶಾಸ್ತ್ರಿಗಳ ವಾದ

ಆ ಕಾಲದಲ್ಲಿ ನಾನು ಅಲ್ಲಿ ಪ್ರತಿದಿನವೂ ಸಂಜೆ ೪ ಘಂಟೆಯಿಂದ ಅಂಗಡಿಯ ಮುಂದುಗಡೆಯಿದ್ದ ಸಣ್ಣ ಬಯಲು ಜಾಗದಲ್ಲಿ ಕುಳಿತು ಪ್ರೂಫ್ ತಿದ್ದುವುದು, ಬರೆಯುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದೆ. ಅಲ್ಲಿಗೆ ಒಂದೊಂದು ಸಾರಿ ಸ್ನೇಹಿತರು ಬಂದು ಹರಟೆಗೋಷ್ಠಿಗೆ ಸೇರುತ್ತಿದ್ದರು. ಅವರಲ್ಲೊಬ್ಬರು ವೀರಕೇಸರಿ ಸೀತಾರಾಮಶಾಸ್ತ್ರಿಗಳವರು. ಶಾಸ್ತ್ರಿಗಳವರಿಗೂ ನನಗೂ ತುಂಬ ಬಳಕೆ. ನಾವಿಬ್ಬರೂ ಶಂಕರಮಠದಲ್ಲಿ ಸಹಾಧ್ಯಾಯಿಗಳಾಗಿದ್ದೆವು. ಆ ಕಾಲದಲ್ಲಿ ನಾನು ಚಡಾವಿನ ಆಕಾರದ ಪಾದರಕ್ಷೆಗಳನ್ನು ಹಾಕಿಕೊಳ್ಳುತ್ತಿದ್ದೆ. ಶಾಸ್ತ್ರಿಗಳು ನನ್ನ ಚಡಾವುಗಳ ಕಡೆ ಕೈ ತೋರಿಸಿ, "ನಿಮ್ಮ ಗಾಂಧಿ ಹೇಳೋದು ಎಲ್ಲಾ ಸರಿ ಸ್ವಾಮಿ! ಆದರೆ ಇವರಿಗೆ ಬಗ್ಗಬೇಕು ಎನ್ನುತ್ತಾರಲ್ಲಾ. ಅದಕ್ಕೆ ನಾನು ತಯಾರಿಲ್ಲ" ಎಂದು ವಾದ ಎಬ್ಬಿಸುವರು. ನಾನು "ಅವರೂ ಬಗ್ಗೋದಿಲ್ಲ; ನೀವೂ ಬಗ್ಗೋದಿಲ್ಲ ಅಂತೀರಿ. ಫೈಸಲ್ ಆಗುವುದು ಹೇಗೆ?" ಎಂದು ಕೇಳಿದ್ದಕ್ಕೆ ಶಾಸ್ತ್ರಿಗಳು, "ಅವರೂ ನಿಂತುಕೊಂಡಿರಲಿ. ನಾವೂ ನಿಂತೇ ಅವರಿಗೆ ಸಲ್ಲಬೇಕಾದದ್ದನ್ನು ಸಲ್ಲಿಸುತ್ತವೆ" ಎಂದು ಜವಾಬು ಹೇಳುವರು. ಹಾಸ್ಯದಲ್ಲಿ ನಮ್ಮ ವಾದ ಮುಗಿಯುತ್ತಿತ್ತು.

ಈ ವಾದದಲ್ಲಿ "ನಾವು ಎಂದರೆ ಹಿಂದೂಗಳು. "ಅವರು" ಎಂದರೆ ಮುಸಲ್ಮಾನರು. ಅದು ಖಿಲಾಫತ್ ಚಳವಳಿಯ ಕಾಲ. ಮಹಮ್ಮದ್ ಆಲಿ, ಶೌಕತ್ ಆಲಿ ಎಂಬ ಸಹೋದರರು ಮುಸಲ್ಮಾನರ ಪ್ರತಿನಿಧಿಗಳು. ಮಿಕ್ಕದ್ದನ್ನು ವಾಚಕರು ಊಹಿಸಿಕೊಂಡಾರು.

ನಾನು ಇಲ್ಲಿ ಹೇಳಹೊರಟ ವಿಷಯಕ್ಕೆ ಈಗ ಬರುತ್ತೇನೆ. ನಾನು ಹೋಗುತ್ತಿದ್ದ ಅಚ್ಚಿನ ಕಾರ್ಖಾನೆಯ ಎರಡು ಪಕ್ಕಗಳಲ್ಲಿಯೂ ಮಂಡಿ ಅಂಗಡಿಗಳ ಹಿಂಭಾಗದ ಸಾಲು, ಎಲ್ಲ ವರಾಂಡ (ಕೈಸಾಲೆ)ಗಳು. ಅವು ಖಾಲಿ ಇದ್ದುವು. ಆದದ್ದರಿಂದ ಮಂಡಿಗಳಲ್ಲಿ ಕೆಲಸ ಮಾಡುವ ಆಳುಗಳಿಗೆ ಅದು ವಾಸಸ್ಥಾನ. ಅವರವರ ಮಂಡಿಗೆ ಆ ಆಳುಗಳು ಕಾವಲು. ಆ ಆಳುಗಳಿಗೆ ಆಯಾ ಮಂಡಿಯ ಖಾಲಿ ಜಾಗವೇ ಮನೆ.

ಒಂದು ದಿನ ಇಂಥಾ ಮಂಡಿಯ ಹಿಂಬಾಗದ ವರಾಂಡದಲ್ಲಿ ನನ್ನ ಕಣ್ಣಿಗೊಂದು ಸಂದರ್ಭ ಕಾಣಿಸಿತು. ಯಾರೋ ಒಬ್ಬ ಹೆಂಗಸು, ಆ ವರಾಂಡದಲ್ಲಿ ನಿಂತಿದ್ದಳು. ಆಕೆಯ ಎದುರಿಗೆ ಮೈಗೆ ಅಂಟಿಕೊಳ್ಳುವಂತೆ ಒಬ್ಬ ಮುಸಲ್ಮಾನ್ ಮನುಷ್ಯ ನಿಂತಿದ್ದ. ಅವರಿಬ್ಬರಿಗೂ ಏನೋ ಜಗಳವೆಂದು ತೋರಿತು. ಆಕೆಯ ತುಟಿಯಿಂದ ರಕ್ತ ಬರುತ್ತಿತ್ತು. ಆಕೆ ಅತ್ತು ಕೂಗಿಕೊಳ್ಳುತ್ತಿದ್ದಳು. ಇದನ್ನು ಕಂಡು ನಾನು ಅಲ್ಲಿ ಏನೋ ಪ್ರಾಣಾಪಾಯವಾದೀತೆಂದು ಭಯಪಟ್ಟೆ. ಆಗ ಕೋಟೆಯಲ್ಲಿದ್ದ ಪೊಲೀಸ್ ಸ್ಟೇಷನ್ನಿಗೆ ಹೋಗಿ ಹೇಳಿದೆ.

ಪೊಲೀಸ್ ಇನ್‌ಸ್ಪೆಕ್ಟರಾಗಿದ್ದವರು ಕೃಷ್ಣರಾಯರು, ಸುಬ್ಬರಾಯರು ಎಂಬಿಬ್ಬರು. ಸೂಪರಿಂಟೆಂಡೆಂಟರು ಟಿ. ತಂಬೂಚೆಟ್ಟಿಯವರು. ಈ ಮೂವರೂ ನನಗೆ ತಿಳಿದಿದ್ದವರು. ಒಳ್ಳೆಯ ಮನುಷ್ಯರು. ನನಗೆ ಸ್ನೇಹಿತರು. ಅವರ ಪೈಕಿ ಕೃಷ್ಣರಾಯರು ಒಬ್ಬ ತಕ್ಕ ಮಟ್ಟಿಗೆ ವಯಸ್ಸಾಗಿದ್ದ ಕಾನ್‌ಸ್ಟೇಬಲನ್ನು ನನ್ನೊಡನೆ ಕಳುಹಿಸಿದರು. ಆ ಕಾನ್‌ಸ್ಟೇಬಲ್ಲು ಬಂದು ವಿದ್ಯಮಾನವನ್ನು ನೋಡಿ ಕೊಂಚ ಕೊಂಚ ನಗುತ್ತಾ ನನ್ನನ್ನೇ ಆಕ್ಷೇಪಿಸಿದ. "ನಿಮಗೇಕೆ ಸ್ವಾಮಿ ಈ ತಂಟೆ? ನಿಮ್ಮ ಪಾಡಿಗೆ ನೀವು ಹೋಗಿ, ಏನೂ ಆಗುವುದಿಲ್ಲ, ಇಂಥಾದ್ದು ಸಾಮಾನ್ಯ" ಎಂದ. ಕೃಷ್ಣರಾಯರೂ ಸುಬ್ಬರಾಯರೂ ನನ್ನನ್ನು ಆಮೇಲೆ ನೋಡಿದಾಗಲೆಲ್ಲಾ ನಗುತ್ತಿದ್ದರು–ನಾನು ಅಂಜುಬುರಕ ಎಂದು. ಕೃಷ್ಣರಾಯರೆಂಬವರು ಕಾಲಾನುಕಾಲಕ್ಕೆ ನ್ಯಾಪತಿ ಮಾಧವರಾಯರ ಕೈಕೆಳಗೆ ಎಫಿಷೆನ್ಸಿ ಆಡಿಟ್ (Efficiency Audit) ಇಲಾಖೆಯಲ್ಲಿ ಅಸಿಸ್ಟೆಂಟರಾಗಿದ್ದರು.

ಈಗ ಮುಖ್ಯ ವಿಷಯ.

ಪ್ರೆಸ್ಸಿನ ಪಕ್ಕದ ಮಂಡಿಯ ಹಿಂದುಗಡೆಯ ವರಾಂಡದಲ್ಲಿ ಆ ಮಂಡಿಗೆ ಸೇರಿದ ಒಬ್ಬ ಮುದುಕ, ಒಬ್ಬ ಮುದುಕಿ ವಾಸಮಾಡುತ್ತಿದ್ದರು. ಆ ಮುದುಕಿ ಆ ಮಂಡಿಯಲ್ಲಿ ಕಸಗುಡಿಸುವವಳು. ಆ ಮುದುಕ ತುಂಬ ವಯಸ್ಸಾಗಿದ್ದದ್ದರಿಂದಲೊ ಏನೋ, ಯಾವಾಗಲೂ ಮಲಗಿರುತ್ತಿದ್ದ. ಆ ಹೆಂಗಸು ತಾನು ಬೆಳಗ್ಗೆ ಕೆಲಸ ಮಾಡುವಾಗ ಸಿಕ್ಕಿದ ಕೊಂಚ ಕೊಳೆತ ಈರುಳ್ಳಿ, ಹುಳಿತ ಆಲೂಗಡ್ಡೆ, ಕರಟು ಬದನೆಕಾಯಿ–ಇವುಗಳನ್ನು ಸಂಗ್ರಹ ಮಾಡುತ್ತಿದ್ದಳು.

ಮಧ್ಯಾಹ್ನ ಆಕೆ ಆ ಈರುಳ್ಳಿ ಆಲೂಗೆಡ್ಡೆಗಳ ಕೊಳಕು ಹುಳುಕಲು ಭಾಗಗಳನ್ನೆಲ್ಲ ತೆಗೆದುಹಾಕಿ ಸರಿಯಾಗಿದ್ದ ಭಾಗಗಳನ್ನೆಲ್ಲ ಹಾಕಿ ಅಡಿಗೆ ಮಾಡುತ್ತಿದ್ದಳು. ಪದಾರ್ಥಗಳು ಬೇಯುತ್ತ ಬೇಯುತ್ತ ಘಮಲೆದ್ದು ಬೀದಿಯೆಲ್ಲ ವ್ಯಾಪಿಸುವುದು. ನನ್ನ ಮೂಗಿಗೂ ತಗಲುವುದು.

ದಿನಚರಿ

ಇದಾದ ಮೇಲೆ ಸ್ನಾನ. ಅವರಿಗೆ ಇದ್ದದ್ದು ಎರಡು ಮೂರು ಮಡಕೆಗಳು. ಒಂದು ಹಿಟ್ಟು ಬೇಯಿಸುವುದಕ್ಕೆ, ಇನ್ನೊಂದು ಅಂಬಲಿ ಕಾಯಿಸುವುದಕ್ಕೆ. ಇನ್ನೊಂದು ಕುಡಿಯುವ ನೀರಿಟ್ಟುಕೊಳ್ಳುವುದಕ್ಕೆ. ಒಂದು ದೊಡ್ಡ ಮಣ್ಣು ಗಡಿಗೆ ಬೇರೆ: ಸ್ನಾನಕ್ಕೆ ನೀರು ಕಾಯಿಸುವುದಕ್ಕಾಗಿ. ಆ ಹೆಂಗಸು ತಾನು ಸಂಪಾದಿಸಿದ್ದ ಕಸಕಡ್ಡಿಗಳನ್ನು ಉರಿಹಾಕಿ ಈ ದೊಡ್ಡ ಗಡಿಗೆ (ಕಡಾಯಿ)ಯೊಳಗೆ ನೀರು ಕಾಯಿಸುವಳು. ಆ ಬಿಸಿನೀರನ್ನು ಗಂಡನಿಗೆ ಸ್ನಾನ ಮಾಡಿಸುವಳು, ಅದೂ ಸಾವಕಾಶವಾಗಿ. ಆತನ ಮೈ ಹುಣ್ಣಾಗಿ ಕರಟು ಕಟ್ಟಿದ್ದ ಕಡೆಯೆಲ್ಲಾ ಮೆತ್ತಗೆ ಕೈಸವರುತ್ತಾ ಅವನ ನೋವೂ ಆಯಾಸವೂ ಪರಿಹಾರವಾಗುವಂತೆ ಬಿಸಿನೀರು ಹಾಕುವಳು. ಅವನು ಆ ಸಂತೋಷದಲ್ಲಿ ನಗುಮುಖದಿಂದ ಸ್ನಾನ ಮಾಡಿಸಿಕೊಳ್ಳುವನು. 'ಹಾಯ್' ಎಂದು ಮಧ್ಯೇ ಮಧ್ಯೇ ಉದ್ಗಾರ ಮಾಡುವನು. ಸ್ನಾನವಾದ ಬಳಿಕ ಅವರ ಕೊಳೆಯ ಬಟ್ಟೆಯಿಂದಲೇ ಮೈ ಒರಸಿಕೊಳ್ಳುವನು, ಒರಸಿಸಿಕೊಳ್ಳುವನು. ಇದೆಲ್ಲ ಬಯಲಿನಲ್ಲಿ ಆದದ್ದರಿಂದ ನನ್ನ ಕಣ್ಣಿಗೆ ಕಾಣಿಸುತ್ತಿತ್ತು.

ಭೋಜನಾನಂದ

ಬಳಿಕ ಆಕೆ ಒಂದು ಊಟದೆಲೆಯನ್ನು ಹಾಕಿ ಅದರ ನಡುವೆ ಬಿಸಿಬಿಸಿ ರಾಗಿ ಹಿಟ್ಟಿನ ಮುದ್ದೆಯನ್ನು ಇರಿಸುವಳು. ತಂಬಿಗೆ ಗಾತ್ರದ ದೊಡ್ಡ ಮುದ್ದೆ. ಅದರಲ್ಲಿಯೇ ಬಟ್ಟಲಿನಂತೆ ಕೈಯಿಂದ ಕೊರೆಯುವಳು–ಕಟ್ಟೆ ಕಟ್ಟಿದ ಕೊಳದಂತೆ. ಅದರ ನಡುವೆ ತಾನು ಕಾಯಿಸಿದ್ದ ಅಂಬಲಿಯನ್ನು ಹಾಕುವಳು. ಮುದುಕನು ಹಿಟ್ಟಿನ ಸ್ವಲ್ಪವನ್ನು ತೆಗೆದು ತುಂಡು ಮಾಡಿ ಅಂಬಲಿಯಲ್ಲಿ ಅದ್ದಿ ಬಾಯಲ್ಲಿಟ್ಟುಕೊಂಡು ಚಪ್ಪರಿಸಿ ನುಂಗುವನು. ನಗುವನು. ಒಂದೊಂದು ಮಾತನಾಡುವನು. ಆಕೆಯೂ ಮಾತನಾಡುವಳು. ಈ ಊಟ ಅರ್ಧ ಘಂಟೆ ನಡೆಯುವುದು. ಇದನ್ನು ಸಾಕ್ಷಿಯಂತೆ ನೋಡುವುದು ನನಗೊಂದು ಸಂತೋಷ.

ಸಂಜೆ ಸಂಜೆಯೂ ತಪ್ಪದೆ ನಾನು ಇದನ್ನು ಬಹು ಕುತೂಹಲದಿಂದ ನೋಡುತ್ತಿದ್ದೆ. ಅದೊಂದು ಆನಂದಾನುಭಾವ.

ಆನಂದೋ ಬ್ರಹ್ಮೇತಿ ವ್ಯಜಾನಾತ್ ।
ಆನಂದಾದ್ಧ್ಯೇವ ಖಲ್ವಿಮಾನಿ
ಭೂತಾನಿ ಜಾಯನ್ತೇ ।
ಆನಂದೇನ ಜಾತಾನಿ ಜೀವನ್ತಿ ।
ಆನಂದಂ ಪ್ರಯಂತ್ಯಭಿಸಂವಿಶನ್ತಿ ।

(ತೈತ್ತಿರೀಯೋಪನಿಷತ್ತು)

ಆನಂದವೇ ಬ್ರಹ್ಮವೆಂದು ನೀನರಿಯೆಯ್ಯೆ।
ಆನಂದದಿಂದ ಪುಟ್ಟಿಹುದೆಲ್ಲಮಲ್ತೇ ।
ಆನಂದದಿಂದ ಪುಟ್ಟಿದೆಲ್ಲಮುಂ ಬಾಳುಗುಂ ।
ಆನಂದವನೆ ಕುರಿತು ಪೋಗುತಲಿ ಪುಗುಗುಂ ॥

ಪ್ರೀತಿಯೇ ಸೌಂದರ್ಯ

ಆನಂದಕ್ಕೆ ಕಾರಣವಾದದ್ದು ಇಲ್ಲಿ ಪ್ರೀತಿ. ಅನ್ಯೋನ್ಯ ಪ್ರೀತಿ ಆ ಮುದುಕ ಮುದುಕಿಯರ ಬಡತನವನ್ನು ಮರೆಯಿಸಿತ್ತು. ಅವರಿಗೆ ಆಗ ಲಾಟರಿಯಿಂದಲೋ ಬೇರೆಲ್ಲಿಂದಲೋ ಹಣ ಬಂದಿದ್ದಿದ್ದರೆ ಅದರಿಂದ ಅವರಿಗೆ ಆಗ–ಆ ವಯಸ್ಸಿನಲ್ಲಿ–ಏನು ತಾನೆ ಪ್ರಯೋಜನವಾಗುತ್ತಿತ್ತು? ಹಣ ಪ್ರಯೋಜನಕ್ಕೆ ಬಾರದ ವಯಸ್ಸು ಅದು. ಅದಕ್ಕಿಂತ ಹೆಚ್ಚಾಗಿ, ಪ್ರೀತಿ ಅವರ ಮುಪ್ಪನ್ನು ಮರೆಯಿಸಿ ಯೌವನವನ್ನು ತಂದು ಕೊಟ್ಟಿತ್ತು. ಇನ್ನೂ ಹೆಚ್ಚಾಗಿ, ಪ್ರೀತಿಯು ಅವರ ನೊಂದ ಬಡಕಲು ಕೊಯಕಲು ಮೈಗಳಲ್ಲಿ ಅವರ ಪಾಲಿಗೆ ಸೌಂದರ್ಯದರ್ಶನ ಮಾಡಿಸಿತು. ಪ್ರೀತಿಯೇ ಸೌಂದರ್ಯ; ಪ್ರೀತಿ ಸಾಲದೆಹೋದಲ್ಲಿ ಆಭರಣ ಅಲಂಕಾರ ಐಶ್ವರ್ಯಗಳು ಬರಿಯ ಭಾರ. ಪ್ರೀತಿಯೇ ಸೌಂದರ್ಯ; ಪ್ರೀತಿಯೇ ಐಶ್ವರ್ಯ. ಪ್ರೀತಿಯೆಂದರೆ ಹೃದಯವಿಕಾಸ.